ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–27

ಶಾಂತಿಪರ್ವ – ಆಪದ್ಧರ್ಮಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೨೭

ಶಾಂತಿಪರ್ವ - ಆಪದ್ಧರ್ಮ ಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಡಾ॥ ಸಿ.ಎಚ್. ಶ್ರೀನಿವಾಸಮೂರ್ತಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಶಾಂತಿಪರ್ವ - ಆಪದ್ಧರ್ಮಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಶಾಂತಿಪರ್ವ - ಆಪದ್ಧರ್ಮ ಪರ್ವ - ಭಾಗ ೨೭

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-31-0

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XX + 348 = 368
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ಡಾ॥ ಸಿ.ಎಚ್. ಶ್ರೀನಿವಾಸಮೂರ್ತಿ ಆಚಾರ್ಯ ಮೈಸೂರು.
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.



ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ವುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

ಭೀಷ್ಮರು ಉಪದೇಶಿಸಿದ ರಾಜರಿಗೆ ಸಂಬಂಧಿಸಿದ ವಿಸ್ತಾರವಾದ ರಾಜನೀತಿಗಳು ಆಪದ್ಧರ್ಮ ಪರ್ವದಲ್ಲಿ ಪ್ರತಿಪಾದಿತವಾಗಿವೆ. ರಾಜನಾದವನು ಪ್ರಜೆಗಳ, ಸಜ್ಜನರ ಹಿತಕ್ಕಾಗಿ ಸಂಪತ್ತನ್ನು ಸಂಗ್ರಹಿಸಿ ಅವರ ಧರ್ಮಾನುಷ್ಠಾನಗಳಿಗೆ ಸಹಕಾರವನ್ನು ನೀಡಬೇಕು. ಶ್ರೀಮಂತರಿಂದ ಹಣವನ್ನು ವಸೂಲಿ ಮಾಡಿ ಸಜ್ಜನರ ಧರ್ಮ ಕಾರ್ಯಗಳಿಗೆ ನೀಡಬೇಕಾದುದು ರಾಜನ ಕರ್ತವ್ಯವಾಗಿದೆ. ಒಂದು ವೇಳೆ ಶ್ರೀಮಂತರು ರಾಜನಿಗೆ ತಾವಾಗಿಯೇ ಧನವನ್ನು ನೀಡದಿದ್ದಲ್ಲಿ ಸಹೋದರನ ಸಂಪತ್ತನ್ನು ಸ್ವೀಕರಿಸುವಂತೆ ರಾಜನು ಅವರ ಸಂಪತ್ತನ್ನು ತೆಗೆದುಕೊಂಡು ಧರ್ಮಶೀಲರಿಗೆ ವಿನಿಯೋಗಿಸಬೇಕು ಎನ್ನುತ್ತಾರೆ ಭೀಷ್ಮರು. ರಾಜನಾದವನು ಸಜ್ಜನರಿಗೆ, ಸನ್ನಡತೆ ಉಳ್ಳವರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಡುವುದೇ ಅವನ ಪ್ರಧಾನ ಕರ್ತವ್ಯವಾಗಿದೆ. ಸಮಸ್ತ ಜಗತ್ತಿನ ಭಗವಂತನ ಸೃಷ್ಟಿಯು ಸಜ್ಜನರಿಗಾಗಿಯೇ ಹೊರತು ದುಷ್ಟರಿಗಾಗಿ ಯಾವುದೇ ವಿಧವಾದ ಈ ಸೃಷ್ಟಿಯ ವೈಭವಗಳನ್ನು ಭಗವಂತನು ನಿರ್ಮಾಣ ಮಾಡಿರುವುದಿಲ್ಲ. ಹಾಗಾಗಿ ಭಗವಂತನ ನಂಬಿಕೆಯನ್ನು ತಾಳದೇ ಇರುವ ಧರ್ಮ, ಸತ್ಯಗಳಲ್ಲಿ ಆಸಕ್ತಿ ಇಲ್ಲದೆ ಇರುವ ಅಸಜ್ಜನರಿಗೆ ಭಗವಂತನು ನಿರ್ಮಾಣ ಮಾಡಿದ ಯಾವ ಸೃಷ್ಟಿಯ ಫಲಗಳನ್ನು ಹೊಂದುವ ಅಧಿಕಾರವು ಇರುವುದಿಲ್ಲ. ನಾಸ್ತಿಕನಾಗಿ ಧರ್ಮಭ್ರಷ್ಟನಾಗಿ ಹಣವನ್ನು ಸಂಪಾದಿಸಿ ಪ್ರಜೆಗಳ ಹಿತಚಿಂತನೆ ಮಾಡದೆ ಇರುವ ವ್ಯಕ್ತಿಗಳಿಂದ ರಾಜನಾದವನು ಬಲಾತ್ಕರಿಸಿ, ಅವನನ್ನು ದಂಡಿಸಿ ಆ ಸಂಪತ್ತನ್ನು ಧರ್ಮಮಾರ್ಗಗಳಲ್ಲಿ ನಡೆಯುವವರಿಗೆ ನೀಡುವುದರಿಂದ ಯಾವ ಪಾಪವೂ ಬರುವುದಿಲ್ಲ ಎಂದು ಭೀಷ್ಮರು ಧರ್ಮರಾಜನಿಗೆ ಬೋಧಿಸಿದ್ದಾರೆ. ರಾಜನ ಪ್ರಧಾನ ಧರ್ಮವೇ ಇದು. ಸಜ್ಜನರಿಗೆ, ಸನ್ನೀತಿಗಳಿಗೆ, ಧರ್ಮಾಚರಣೆ ಮಾಡುವವರಿಗೆ ಪ್ರೋತ್ಸಾಹವನ್ನು, ಸಹಕಾರವನ್ನು ನೀಡುತ್ತಾ ಈ ಪುಣ್ಯಭೂಮಿಯಲ್ಲಿ ಸದ್ಧರ್ಮ ಕರ್ಮಗಳು ಎಂದೂ ನಿಲ್ಲದಂತೆ ಧರ್ಮಾಭಿವೃದ್ಧಿಯನ್ನು ಮಾಡುವುದೇ ರಾಜನ ಸ್ವಧರ್ಮ ಎನಿಸಿದೆ. ಇದೇ ಅವನು ಮಾಡುವ ದೇವರ ಪೂಜೆ. ಈ ಸಮರ್ಪಣಾ ಭಾವ ಇದ್ದವನೇ ಉತ್ತಮ ರಾಜ ಎನಿಸಿಕೊಳ್ಳುತ್ತಾನೆ. ಇಂತಹ ಭೀಷ್ಮರ ಉಪದೇಶಗಳನ್ನು

ಆಧುನಿಕ ಪ್ರಜಾಪ್ರಭುತ್ವದ ಆಡಳಿತವನ್ನು ತುಲನೆ ಮಾಡಿ ನೋಡಿದಾಗ ತುಂಬಾ ದೊಡ್ಡ ಅಂತರವು, ಧರ್ಮಕ್ಕೆ ಆಗುತ್ತಿರುವ ಹಾನಿಯು ನಮಗೆ ತೋರದಿರಲಾರದು. ಧರ್ಮವನ್ನು ವಿರೋಧಿಸುವುದೇ ಇಂದು ಪ್ರಜಾ ನಾಯಕರ ಸ್ವಧರ್ಮವೆನಿಸಿದೆ. ದೇವಸ್ಥಾನಗಳು, ಪುರೋಹಿತರು, ಬ್ರಾಹ್ಮಣರು ಎಂಬ ಶಬ್ದಗಳು ಪ್ರಜಾ ನಾಯಕರಿಗೆ ವಿರೋಧ ಮಾಡಬೇಕೆಂಬ ಭಾವನೆಯನ್ನು ಹುಟ್ಟಿಸುತ್ತಿವೆ. ಯಾವ ವೇದಗಳು ಭಗವಂತನನ್ನು ಕೊಂಡಾಡುತ್ತಿವೆಯೋ ಅಂತಹ ಭಗವಂತನಿಂದ ಸೃಷ್ಟವಾದ ಈ ಪ್ರಪಂಚದಲ್ಲಿ ಭಗವಂತ, ವೇದಗಳು, ಧರ್ಮಗಳು ಇವುಗಳನ್ನು ನಂಬುವವರಿಗೆ ಮಾತ್ರ ಬದುಕುವ ಅರ್ಹತೆಗಳು. ದೇವರ ಈ ಸೃಷ್ಟಿಯ ವೈಭವವನ್ನು ಪಡೆಯಲು ಅಧಿಕಾರ. ಈ ನಂಬಿಕೆ ಇಲ್ಲದೆ ಇದ್ದವರಿಗೆ ಒಂದು ಕಣವನ್ನೂ ಸಂಗ್ರಹಿಸಲು ಅಧಿಕಾರ ಇರುವುದಿಲ್ಲ. ಅವರನ್ನು ದಸ್ಯುಗಳಂತೆ ನಿಗ್ರಹಿಸಬೇಕು ಎಂದು ಮಹಾಭಾರತದಲ್ಲಿ ಧರ್ಮವಿರೋಧಿಗಳನ್ನು ಬಲವಾಗಿ ಖಂಡಿಸಲಾಗಿದೆ. ಆದರೆ ಇವರ ವಿರುದ್ಧ ಧ್ವನಿ ಎತ್ತುವ ಶಕ್ತಿಯೇ ಧರ್ಮಸ್ಥಾಪಕರಿಗೆ ಅಡಗಿ ಹೋಗುತ್ತಿರುವುದು ಕಲಿಯುಗದ ವಿಪರ್ಯಾಸವೆನ್ನಬೇಕೋ ಅಥವಾ ಭಗವತ್ಸಂಕಲ್ಪ ಎಂದು ಚಿಂತಿಸುತ್ತಾ ಕೈಚೆಲ್ಲಿ ಕುಳಿತುಕೊಳ್ಳಬೇಕೋ ತಿಳಿಯದಾಗಿದೆ. ಆದರೂ ಇಂತಹ ಮಹಾಭಾರತ ಸತ್ಯ ಸಂಗತಿಗಳನ್ನು ನಮ್ಮ ಮುಂದಿನ ಯುವ ಪೀಳಿಗೆಗೆ ನಾವು ತಿಳಿಸಿದಲ್ಲಿ ಬಾಲ್ಯದಿಂದಲೇ ಅವರಿಗೆ ಧರ್ಮಶ್ರದ್ಧೆಯು ಹುಟ್ಟಿ ಎಷ್ಟೋ ಕಾಲ ಧರ್ಮವು ಸ್ವಲ್ಪ ಪ್ರಮಾಣದಲ್ಲಿ ಆದರೂ ಸ್ಥಾಯಿಯಾಗಿ ನಿಲ್ಲಬಹುದು ಎಂಬ ಅಭಿಪ್ರಾಯದಿಂದ ಇತಿಹಾಸವನ್ನು ಪುನಃ ಪುನಃ ಅವಲೋಕಿಸುವುದು, ಅನುವಾದಿಸುವುದು, ಪ್ರಚಾರ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಮಹಾಭಾರತದ ಸಮಗ್ರ ಕನ್ನಡಾನುವಾದದ ಮಹತ್ಕಾರ್ಯವನ್ನು ನಾವು ಕೈಗೆತ್ತಿಕೊಂಡಾಗ ಅನೇಕ ಸಜ್ಜನ ವಿದ್ವಾಂಸರು ಈ ಯೋಜನೆಯಲ್ಲಿ ಕೈಜೋಡಿಸಿ ಸಂಶೋಧನೆ, ಅನುವಾದ, ವಿಮರ್ಶೆ ಮುಂತಾದ ಮಹತ್ಕಾರ್ಯದಲ್ಲಿ ಸಹಕರಿಸಿರುತ್ತಾರೆ. ಆಪದ್ಧರ್ಮಪರ್ವವನ್ನು ಅತ್ಯಂತ ಸರಳವಾಗಿ, ವಿವರಣೆಗಳೊಂದಿಗೆ ಅನುವಾದ ಮಾಡಿಕೊಟ್ಟ ಮೈಸೂರಿನ ವಿದ್ವಾಂಸರು, ವಿಮರ್ಶಕರೂ ಆದ ಡಾ|| ಸಿ.ಎಚ್. ಶ್ರೀನಿವಾಸಮೂರ್ತಿ ಇವರನ್ನು ವಿಶೇಷವಾಗಿ ಅಭಿನಂದಿಸುತ್ತೇವೆ. ಇವರಿಂದ ಭಗವಂತನು ವಿಶೇಷವಾದ ಜ್ಞಾನಸೇವೆಯನ್ನು ನಿರಂತರ ಸ್ವೀಕರಿಸುತ್ತಿರಲಿ ಎಂದು ಆಶಿಸುತ್ತೇವೆ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಪ್ರಕಾಶಕರ ನುಡಿ

ಶಾಂತಿಪರ್ವದ ಎರಡನೆಯ ಉಪಪರ್ವವೆನಿಸಿದ ಆಪದ್ಧರ್ಮ ಪರ್ವದಲ್ಲಿ ರಾಜರಿಗೆ ಸಂಬಂಧಿಸಿದ ಅನೇಕ ಆಪದ್ಧರ್ಮಗಳನ್ನು ನಿರೂಪಿಸಿದ್ದಾರೆ. ರಾಜನು ಪ್ರಜಾರಕ್ಷಣೆಯ ಹೊಣೆಗಾರಿಕೆಯಲ್ಲಿದ್ದಾಗ ಆದಿದೈವಿಕವಾಗಿ ಒದಗುವ ಆಪತ್ತುಗಳನ್ನು ಹೇಗೆ ಎದುರಿಸಬೇಕು ಎನ್ನಲು ಅನೇಕ ಯುಕ್ತಿಗಳನ್ನು ರಾಜನೀತಿಗಳಿಗೆ ಸಂಬಂಧಪಟ್ಟ ಉಪಾಯಗಳನ್ನು, ಮಾರ್ಜಾರ, ಮೂಷಕ, ಉಪಾಖ್ಯಾನಗಳ ಮೂಲಕ, ಪೂಜನೀಯ, ಬ್ರಹ್ಮದತ್ತರ ಕಥೆಗಳ ಮೂಲಕ ವಿಷದವಾಗಿ ನಿರೂಪಿಸಿದ್ದಾರೆ. ಬ್ರಹ್ಮಹತ್ಯಾದಿ ಅಪರಾಧಗಳಿಗೆ ವಿಹಿತವಾದ ಪ್ರಾಯಶ್ಚಿತ್ತಗಳ್ಯಾವುದು ಎಂಬ ವಿವರಣೆಯೂ ವಿಸ್ತಾರವಾಗಿ ನಿರೂಪಿಸಿದ್ದಾರೆ. ಕಾಮ-ಕ್ರೋಧ-ಲೋಭ ಇತ್ಯಾದಿ ದುರ್ಗುಣಗಳು ಮನುಷ್ಯನಿಗೆ ಹೇಗೆ ಅನರ್ಥಕ್ಕೆ ಕಾರಣವಾಗುತ್ತದೆ ಎನ್ನುವುದರ ಜೊತೆಗೆ ದಮ, ತಪ, ಸತ್ಯ - ಈ ಸದ್ಗುಣಗಳ ನಿರೂಪಣೆಯೂ ಮೂಡಿಬಂದಿರುತ್ತದೆ. ಪ್ರಧಾನವಾಗಿ ಈ ಪರ್ವದಲ್ಲಿ ವಿಸ್ತಾರವಾಗಿ ಪುರುಷಾರ್ಥ ಮೀಮಾಂಸೆಯು ನಡೆದಿದೆ. ಪಾಂಡವರಲ್ಲಿ ಕಾಮ-ಅರ್ಥ-ಧರ್ಮ-ಮೋಕ್ಷ ಇವುಗಳಲ್ಲಿ ಯಾವುದು ಶ್ರೇಷ್ಠ ಎಂಬ ಜಿಜ್ಞಾಸೆಗೆ ಭೀಮಸೇನನು ಕಾಮವೇ ಶ್ರೇಷ್ಠ ಎಂದು ನಿರೂಪಿಸುತ್ತಾನೆ. ಎಲ್ಲ ವಿಷಯದಲ್ಲಿಯೂ ಇಚ್ಛೆಯು ಉತ್ಪನ್ನವಾದಾಗಲೇ ಕರ್ಮಗಳಲ್ಲಿ ಪ್ರವೃತ್ತಿ ಉಂಟಾಗುತ್ತದೆ. ಸತ್ಸಂಕಲ್ಪಗಳೇ ಉಂಟಾಗದಿದ್ದಲ್ಲಿ ಯಾವುದೇ ವಿಷಯದಲ್ಲಿ ಪ್ರವೃತ್ತಿ ಉಂಟಾಗುವುದಿಲ್ಲ, ಆದ್ದರಿಂದ ಧರ್ಮಸಂಪಾದನೆಯಲ್ಲಾಗಲೀ, ಅರ್ಥ-ಮೋಕ್ಷಗಳ ಸಂಪಾದನೆಯಲ್ಲಾಗಲೀ ಕಾಮವೇ ಮುಖ್ಯಕಾರಣವಾದುದು. ಆದ್ದರಿಂದ ಕಾಮವೇ ಶ್ರೇಷ್ಠ ಎಂದು ಪ್ರತಿಯೊಬ್ಬರ ವಿಹಿತಧರ್ಮಾನುಷ್ಠಾನಕ್ಕೆ ಯೋಗ್ಯವದುದು ಸತ್ಕಾಮನೆಗಳು ಎಂಬ ಅರ್ಥದಲ್ಲಿ ಭೀಮನು ವಿಸ್ತಾರವಾಗಿ ಸತ್ಕಾಮದ ಮಹತ್ವವನ್ನು ಪ್ರತಿಪಾದಿಸಿದ್ದಾನೆ. ಈ ಉಪಪರ್ವದ ಕೊನೆಯಲ್ಲಿ ಸನ್ಮಿತ್ರರು ಯಾರು? ದ್ರೋಹಿಗಳು ಯಾರು? ಇವುಗಳಿಗೆ ಸಂಬಂಧಪಟ್ಟ ರೋಚಕವಾದ ಉಪಾಖ್ಯಾನಗಳನ್ನು ತಿಳಿಸುತ್ತಾ ಬದುಕಿಗೆ ಉತ್ತಮವಾದ ಮಾರ್ಗದರ್ಶನವನ್ನೇ ಭೀಷ್ಮರು ಮಾಡಿರುತ್ತಾರೆ.

ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಪರಮಾನುಗ್ರಹದಿಂದ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು

ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು. ಆ ನಿಟ್ಟಿನಲ್ಲಿ ಈಗ ಉದ್ಯೋಗಪರ್ವದ ಭಾಗವನ್ನು ಅರ್ಥಸಹಿತ ಮೂರು ಸಂಪುಟಗಳಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ ಮುದ್ರಣವು ಅವರೇ ಹುಟ್ಟುಹಾಕಿದ ತತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. ಅದು ಕೂಡ ಶ್ರೀಪಾದರ ದ್ವಿತೀಯ ಶ್ರೀಕೃಷ್ಣಪೂಜಾ ಪರ್ಯಾಯದ ಶುಭಾವಸರದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಯೋಗವೇ ಸರಿ. ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಅದ್ಭುತವಾದ ಶ್ರೀಮಹಾಭಾರತ ಶುದ್ಧಪಾಠದ ಮುದ್ರಣಕಾರ್ಯಕ್ಕೆ ಪೂರ್ಣವಾಗಿ ಆರ್ಥಿಕ ನೆರವನ್ನು ನೀಡಿರುವುದು ನಮ್ಮ ಘನವೆತ್ತ ಕರ್ನಾಟಕ ಸರ್ಕಾರ. ಹಿಂದಿನ ಕಾಲದಲ್ಲಿ ರಾಜಾಶ್ರಯ ಇತ್ತು. ಈಗಲೂ ಇಂತಹ ಚಾರಿತ್ರಾತ್ಮಕ ಕಾರ್ಯದಲ್ಲಿ ನಮಗೆ ಸರ್ಕಾರದ ಆಶ್ರಯ ದೊರಕಿದೆ. ಸರ್ಕಾರದ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಪದಾಧಿಕಾರಿಗಳಿಗೆ ನಮ್ಮ ಸಂಸ್ಥೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಇಂತಹ ಶ್ರೇಷ್ಠವಾದ ನೀತಿ ಬೋಧಕವಾದ ಉಪದೇಶಗಳಿಂದ ಕೂಡಿದ ಆಪದ್ಧರ್ಮವು ಅಧ್ಯಾಯಗಳ ಸಂಖ್ಯೆಯಲ್ಲಿ ಅಲ್ಪವಾಗಿದ್ದರೂ ತಾತ್ವಿಕ ವಿಚಾರಗಳ ನಿರೂಪಣೆಯಲ್ಲಿ ಮಹತ್ವಪೂರ್ಣವಾದುದಾಗಿದೆ. ಇದರ ಸುಂದರವಾದ ಕನ್ನಡಾನುವಾದವನ್ನು ವಿವರಣೆ, ವಿಮರ್ಶೆಗಳ ಜೊತೆಗೆ ನಡೆಸಿಕೊಟ್ಟ ಪ್ರಸಿದ್ಧ ವಿದ್ವಾಂಸರೂ, ಸಂಶೋಧಕರೂ ಆದ ಮೈಸೂರಿನ ಡಾ॥ ಸಿ.ಎಚ್. ಶ್ರೀನಿವಾಸಮೂರ್ತಿ, ಇವರನ್ನು ತತ್ವಸಂಶೋಧನಾ ಸಂಸತ್ ವತಿಯಿಂದ ವಿಶೇಷವಾಗಿ ಕೃತಜ್ಞತಾ ಪೂರ್ವಕವಾಗಿ ಅಭಿನಂದಿಸುತ್ತೇವೆ.

ಶ್ರೀಮಹಾಭಾರತ ಶುದ್ಧಪಾಠದ ಸಮಗ್ರ ಕಾರ್ಯನಿರ್ವಾಹಕರಾದ ಡಾ॥ ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾ ವಿದ್ವನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಶ್ರೀಮಹಾಭಾರತದ ಮುದ್ರಣದ ಬೃಹತ್ ಯೋಜನೆಯಲ್ಲಿ ಈ ಇಳಿ ವಯಸ್ಸಿನಲ್ಲಿಯೂ ನಮ್ಮ ಜೊತೆಗೇ ಇದ್ದುಕೊಂಡು ಸಂಪೂರ್ಣ ಸಹಕಾರವನ್ನು ನೀಡುತ್ತಿರುವ ಶ್ರೀಯುತ ರಘುಪತಿ ತಂತ್ರಿ ಇವರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಮೂಲ ಸಂಸ್ಕೃತ ಶ್ಲೋಕಗಳನ್ನು ದೋಷರಹಿತವಾಗಿ ಕನ್ನಡಕ್ಕೆ ಲಿಪ್ಯಂತರವನ್ನು ಮಾಡಿಕೊಟ್ಟು ಹಾಗೂ ಪುಟ ಸಂಯೋಜನೆಯನ್ನು ಮಾಡಿದ ಶ್ರೀಯುತ ಶರತ್‌ಚಂದ್ರ ಎಂ., ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಅವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು. ಹಾಗೆಯೇ ತಿದ್ದುಪಡಿಯಲ್ಲಿ ಸಹಕಾರ ಮಾಡಿಕೊಟ್ಟಿರುವ ಶ್ರೀಯುತ ಶ್ರೀವತ್ಸ ಆಚಾರ್ಯ (ಸಿದ್ಧಾಂತಿ) ಇವರಿಗೂ ಧನ್ಯವಾದಗಳು. ಹಾಗೆಯೇ ನಮಗೆ ಬೇಕಾದ ಕ್ಲಪ್ತ ಸಮಯದಲ್ಲಿ ಸುಂದರವಾಗಿ ಮುದ್ರಣವನ್ನು ಮಾಡಿಕೊಟ್ಟಿರುವ ಪವನ್ ಪ್ರಿಂಟರ್ಸ್‌ನ ಮಂಜುನಾಥ್‌ರವರಿಗೂ ನಮ್ಮ ಸಂಸ್ಥೆಯ ಪರವಾಗಿ ವಿಶೇಷ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ. ಈ ಕಾರ್ಯದಲ್ಲಿ ಶ್ರಮಿಸಿದ ಸಂಶೋಧನ ಮಂದಿರದ ಎಲ್ಲಾ ಕಾರ್ಯಕಾರಿಣಿ ವರ್ಗಕ್ಕೂ ಈ ಮೂಲಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಮೋಕ್ಷಧರ್ಮಪರ್ವದ ಅಧ್ಯಯನವನ್ನು ಮಾಡಿ ತನ್ಮೂಲಕ ಸಾಧನೆ ಮಾರ್ಗವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಭಗವಂತನನ್ನು ಒಲಿಸಿಕೊಳ್ಳುವುದರ ಬಗ್ಗೆ ಅವನ ಸಂಕಲ್ಪಕ್ಕೆ ಅನುಗುಣವಾಗಿ ಅವನ ಪ್ರೇರಣೆಯಂತೆ ಎಲ್ಲರೂ ಕೈ ಜೋಡಿಸುವ ಮೂಲಕ ಶ್ರೀಕೃಷ್ಣನ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ ಎಂದು ಅಪೇಕ್ಷಿಸುತ್ತಿದ್ದೇನೆ.

ಪ್ರಕಾಶಕರು

ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್

ನಿರ್ದೇಶಕರು, ತತ್ತ್ವಸಂಶೋಧನಸಂಸತ್,

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಆಪದ್ಧರ್ಮಪರ್ವ ಸಾರ

ಈ ಪರ್ವದಲ್ಲಿ ಮುವತ್ತೊಂಬತ್ತು ಅಧ್ಯಾಯಗಳಿವೆ. ಹದಿನೈದು ನೂರಕ್ಕಿಂತ ಹೆಚ್ಚು ಶ್ಲೋಕಗಳಿವೆ.

ಆಪತ್ ಸ್ಥಿತಿಗೆ ಒಳಗಾದ ರಾಜನು ಆ ಸ್ಥಿತಿಯನ್ನು ಹೇಗೆ ದಾಟಬೇಕು? ಎಂದು ಯುಧಿಷ್ಠಿರನು ಭೀಷ್ಮರನ್ನು ಕೇಳುತ್ತಾನೆ.

ಆತ್ಮರಕ್ಷಣೆಗಾಗಿ ಎಲ್ಲ ಪ್ರಯತ್ನಗಳನ್ನು ಮಾಡಬೇಕು. ಅದಕ್ಕಾಗಿ ಎಲ್ಲ ಸಂಪತ್ತನ್ನೂ ತ್ಯಜಿಸಬೇಕು. ಬದುಕಿ ಉಳಿದವರು ಅವುಗಳನ್ನು ಪುನಃ ಸಂಪಾದಿಸಬಹುದು. ತನ್ನ ಪ್ರಜೆಗಳು ಮತ್ತು ಸೈನ್ಯ ತನ್ನಲ್ಲಿ ಪ್ರೀತಿ ಹೊಂದಿರುವಂತೆ ನಡೆದುಕೊಳ್ಳಬೇಕು.

ಅನುರಕ್ತೇನ ಪುಷ್ಟೇನ ಹೃಷ್ಟೇನ ಜಗತೀಪತೇ ।
ಅಲ್ಪೇನಾಪಿ ಹಿ ಸೈನ್ಯೇನ ಭೂಮಿಂ ಜಯತಿ ಭೂಮಿಪಃ ॥ (೧-೧೧)

ಬಾಹ್ಯಶತ್ರುವು ಧರ್ಮನಿಷ್ಠನಾಗಿದ್ದರೆ ಅವನ ಜೊತೆ ಸಂಧಾನವನ್ನು ಮಾಡಿಕೊಳ್ಳಬೇಕು. ಧರ್ಮನಿಷ್ಠನಲ್ಲದಿದ್ದರೆ ಅವನ ಮೇಲೆ ಯುದ್ಧವನ್ನು ಮಾಡಬೇಕು ಎಂದು ಭೀಷ್ಮರು ಉಪದೇಶಿಸುತ್ತಾರೆ.

(1) ಬ್ರಹ್ಮನಿಷ್ಠರಿಗೆ (ಬ್ರಹ್ಮಜ್ಞಾನಕ್ಕಾಗಿ ನಿರಂತರ ಪ್ರಯತ್ನಿಸುವವರಿಗೆ) ಆಪತ್ ಉಂಟಾದಾಗ ರಾಜನು ಅವರನ್ನು ಹೇಗೆ ರಕ್ಷಿಸಬೇಕು? ಇದು ಯುಧಿಷ್ಠಿರನ ಪ್ರಶ್ನೆ. ಹೇಗಾದರೂ ಪ್ರಜೆಗಳಿಂದ ಧನವನ್ನು ಪಡೆದು ಬ್ರಹ್ಮನಿಷ್ಠರನ್ನು ರಕ್ಷಿಸಬೇಕು ಎಂದು ಉತ್ತರಿಸುತ್ತಾ ಭೀಷ್ಮರು ಬ್ರಹ್ಮನಿಷ್ಠರ ಪ್ರಭಾವವನ್ನು ಹೇಳುತ್ತಾರೆ.

ನ ಚಾರ್ಷಾತ್ ಸದೃಶಂ ಕಿಂಚಿತ್ ಪ್ರಮಾಣಂ ದೃಶ್ಯತೇ ಕ್ವಚಿತ್ ।
(೨.೧೭೦)

ವೇದದ ದರ್ಶನವು ಯಾರಿಗೆ ಆಗುವುದೋ ಅವರು ಋಷಿ. ಕೆಲವು ಸಾಧಕರಿಗೆ ಧರ್ಮದ ದರ್ಶನವೂ ಆಗುತ್ತದೆ. ನೋಡಿ ಹೇಳುವವರ ಮಾತುಗಳು ಶುದ್ಧ

ಪ್ರಮಾಣಗಳು. ಆದ್ದರಿಂದ ಋಷಿಗಳ ಮಾತುಗಳಲ್ಲಿ ಬಿರುಕು ಇಲ್ಲದ ಪ್ರಾಮಾಣ್ಯವು ಇರುತ್ತದೆ.

(2) ಆನ್ವೀಕ್ಷಿಕೀ, ತ್ರಯೀ, ವಾರ್ತಾ ಮತ್ತು ದಂಡನೀತಿ– ಈ ನಾಲ್ಕು ಧರ್ಮದ ಗುಣಗಳು. (ಆನ್ವೀಕ್ಷಿಕೀ= ತರ್ಕ ಮತ್ತು ಆತ್ಮವಿದ್ಯೆ. ತ್ರಯೀ= ವೇದಗಳು ಮತ್ತು ಶುದ್ಧವಾದ ಬುದ್ಧಿಬಲ. ವಾರ್ತಾ= ವೃತ್ತಿ ಮತ್ತು ವಾಣಿಜ್ಯ, ದಂಡನೀತಿ= ನ್ಯಾಯ ವ್ಯವಸ್ಥೆ ಮತ್ತು ನ್ಯಾಯಶಾಸ್ತ್ರ). ಈ ಗುಣಗಳಿಂದ ಸಂಪನ್ನವಾದ ಧರ್ಮವನ್ನು ತಿಳಿದವನು ಧರ್ಮಜ್ಞ. ಇಂತಹ ಧರ್ಮದ ಜ್ಞಾನದ ಸಂಪಾದನೆಯು ಬಹಳ ಕಷ್ಟ.

ಹರೇರಿವ (ಅಹೇರಿವ) ಹಿ ಧರ್ಮಸ್ಯ ಪದಂ ದುಃಖಂ ಗವೇಷಿತುಮ್ । (೨.೨೦)

(ಹರಿಯ ಸ್ವರೂಪದ ಅನ್ವೇಷಣೆಯು ಬಹಳ ಕಷ್ಟ. ಹಾವಿನ ಹೆಜ್ಜೆಯ ಅನ್ವೇಷಣೆಯೂ ಬಹಳ ಕಷ್ಟ. ಅಂತೆಯೇ ಧರ್ಮದ ಸ್ವರೂಪದ ಅನ್ವೇಷಣೆಯೂ ಬಹಳ ಕಷ್ಟ).

* * * *

1. ರಾಜನು ಮಧ್ಯಮ ಮಾರ್ಗವನ್ನು ಅನುಸರಿಸಿ ರಾಜ್ಯನಿಧಿಯನ್ನು ಸಂಗ್ರಹಿಸಬೇಕು. ಪೂರ್ಣಪರಿಶುದ್ಧ ಕ್ರಮ ಮತ್ತು ಕ್ರೌರ್ಯಗಳು ಸರಿಯಲ್ಲ.

ನ ಕೋಶಃ ಶುದ್ಧಶೌಚೇನ ನ ನೃಶಂಸೇನ ಜಾತುಚಿತ್ ।
ಮಧ್ಯಮಂ ಪದಮಾಸ್ಥಾಯ ಕೋಶಸಂಗ್ರಹಣಂ ಚರೇತ್ ॥ (೩-೩)

* * * *

2. ರಾಜ್ಯದ ಸುಸ್ಥಿತಿಗೆ ಬಲವು ಅತ್ಯವಶ್ಯಕ.

ಸರ್ವಂ ಬಲವತೋ ವಶೇ – (೪.೩)

''ಬಾಹ್ವೋರ್ಬಲಾತ್ ಜ್ಞಾನಬಲಾಚ್ಚ ರಕ್ಷ್ಯೋಽನ್ಯಥಾ ನಾಶಮುಪೈತಿ ಧರ್ಮಃ'' ಎಂದು ಶ್ರೀಮಧ್ವಾಚಾರ್ಯರು ತಮ್ಮ 'ಮಹಾಭಾರತ ತಾತ್ಪರ್ಯನಿರ್ಣಯ' ದಲ್ಲಿ ಪಾಂಡುರಾಜನ ಅಭಿಪ್ರಾಯವನ್ನು ಹೇಳಿದ್ದಾರೆ.

* * * *

ಶಾಸ್ತ್ರಮರ್ಯಾದೆ ಮತ್ತು ಲೋಕ ಮರ್ಯಾದೆಯನ್ನು ಅನುಸರಿಸುತ್ತಿದ್ದ ಕಾಪವ್ಯ ಎಂಬ ದಸ್ಯುವು ಸದ್ಗತಿಯನ್ನು ಹೊಂದಿದನು. ಕರ್ತವ್ಯ-ಅಕರ್ತವ್ಯಗಳ ನಿಯಮವು ಮರ್ಯಾದೆ. ಈ ನಿಯಮವನ್ನು ಯಾವ ಸಂದರ್ಭದಲ್ಲೂ ಉಲ್ಲಂಘಿಸಬಾರದು.

ಪ್ರತ್ಯುತ್ಪನ್ನಮತಿಯು (ಸಮಸ್ಯೆಯು ಎದುರಾದಾಗ ಪರಿಹಾರವನ್ನು ಕಾಣಬಲ್ಲವನು) ಮತ್ತು ದೀರ್ಘದರ್ಶಿಯು (ಮುಂದೆ ಆಗುವುದನ್ನು ಮೊದಲೇ ತಿಳಿಯಬಲ್ಲವನು) ಆಪತ್ತನ್ನು ದಾಟುತ್ತಾರೆ. ದೀರ್ಘಸೂತ್ರಿಯು (ಕೆಲಸವನ್ನು ಮುಂದೂಡುವವನು) ದಾಟಲಾರ. ಇದನ್ನು ರೋಚಕವಾಗಿ ತಿಳಿಸುವ ಕಥೆಯು ಆರನೆಯ ಅಧ್ಯಾಯದಲ್ಲಿ ಇದೆ.

* * * *

ಎಂಟನೆಯ ಅಧ್ಯಾಯದಲ್ಲಿ ಬೆಕ್ಕು-ಇಲಿಗಳ ಕಥೆ. 'ಅವಶ್ಯಕತೆಗೆ ಅನುಗುಣವಾಗಿ ಶತ್ರುವಿನ ಜೊತೆ ಸಂಧಾನವನ್ನು ಮಾಡಿಕೊಳ್ಳಬೇಕು; ಮಿತ್ರನ ಜೊತೆ ವಿರಸವನ್ನು ಮಾಡಿಕೊಳ್ಳಬೇಕು. ಇಲಿ ಮತ್ತು ಬೆಕ್ಕುಗಳು ಪರಸ್ಪರ ಅವಲಂಬನೆಯಿಂದ ಆಪತ್ತಿನಿಂದ ಪಾರಾದವು. 8.207.

* * * *

ಒಂಬತ್ತನೆಯ ಅಧ್ಯಾಯದಲ್ಲಿ ಪೂಜನೀ-ಬ್ರಹ್ಮದತ್ತರ ಸಂವಾದ. ಇಲ್ಲಿ ತಿಳಿಯಲೇ ಬೇಕಾದ ನಾನಾ ವಿಷಯಗಳು ಇವೆ. ಇಲ್ಲಿ ಈ ಶ್ಲೋಕಗಳು ಇವೆ.

ಸಾ ಭಾರ್ಯಾ ಯಾ ಪ್ರಿಯಂ ಬ್ರೂತೇ ಸ ಪುತ್ರೋ ಯತ್ರ ನಿರ್ವೃತಿಃ ।
ತನ್ಮಿತ್ರಂ ಯತ್ರ ವಿಶ್ವಾಸಃ ಸ ದೇಶೋ ಯತ್ರ ಜೀವ್ಯತೇ ॥ ೯.೯೫

ಯತ್ರ ನಾಸ್ತಿ ಬಲಾತ್ಕಾರಃ ಸ ರಾಜಾ ತೀವ್ರಶಾಸನಃ ॥ ೯.೯೬

ರಾಜಾ ಮೂಲಂ ತ್ರಿವರ್ಗಸ್ಯ ಅಪ್ರಮತ್ತೋಽನುಪಾಲಯನ್ ॥ ೯.೯೮

ಬಲಿಷಡ್ಭಾಗಮುದ್ಧೃತ್ಯ ಬಲಿಂ ತಮುಪಯೋಜಯೇತ್ ।
ನ ರಕ್ಷತಿ ಪ್ರಜಾಃ ಸಮ್ಯಗ್ಯಃ ಸ ಪಾರ್ಥಿವತಸ್ಕರಃ ॥ ೯. ೯೯

* * * *

ಹತ್ತನೆಯ ಅಧ್ಯಾಯದಲ್ಲಿ ರಾಜನು ಆಪತ್‌ಕಾಲದಲ್ಲಿ ನಿರ್ದಯನಾಗಿ ವರ್ತಿಸಬೇಕು ಎಂದು ತಿಳಿಸುವುದಕ್ಕಾಗಿ ಶತ್ರುಂತಪ ಎಂಬ ರಾಜನಿಗೆ ಭರದ್ವಾಜ ಮುನಿಗಳು ತಿಳಿಸಿದ ಆಪದ್ಧರ್ಮದ ವಿವರಣೆ. ಇಲ್ಲಿ ಈ ಶ್ಲೋಕವಿದೆ.

ಗೃಧ್ರದೃಷ್ಟಿರ್ಬಕಾಲೀನಃ ಸಚೇಷ್ಟಃ ಸಿಂಹವಿಕ್ರಮಃ ।
ಅನುದ್ವಿಗ್ನಃ ಕಾಕಶಂಕೀ ಭುಜಂಗಚರಿತಂ ಚರೇತ್ ॥ ೧೦.೬೨

(ಹದ್ದಿಗೆ ದೂರದೃಷ್ಟಿ, ಬಕಪಕ್ಷಿ ಪರರಿಗೆ ಗೊತ್ತಾಗದಂತೆ ಆಕ್ರಮಿಸುತ್ತದೆ. ಕ್ರಿಯಾಶೀಲವಾದ ಸಿಂಹದ ವಿಕ್ರಮಕ್ಕೆ ಪರಾಜಯವಿಲ್ಲ. ಕಾಗೆಯು ಇಂಗಿತಜ್ಞ. ಸರ್ಪವು ಪರರ ಮನೆಯನ್ನು ಅನಿರೀಕ್ಷಿತವಾಗಿ ಪ್ರವೇಶಿಸುತ್ತದೆ).

ಹನ್ನೊಂದನೆಯ ಅಧ್ಯಾಯದಲ್ಲಿ ತಿನ್ನಬಾರದ ಆಹಾರವನ್ನು ತಿಂದಾದರೂ ಜೀವನವನ್ನು ಉಳಿಸಿಕೊಳ್ಳಬೇಕು ಎಂದು ಬೋಧಿಸುವ ವಿಶ್ವಾಮಿತ್ರ-ಶ್ವಪಚರ ಸಂವಾದ.

* * * *

ಹದಿಮೂರರಿಂದ ಹದಿನೆಂಟನೆಯ ಅಧ್ಯಾಯದವರೆಗೆ ಪರೋಪಕಾರದ ಪರಮ ಔನ್ನತ್ಯವನ್ನು, ಅದರಿಂದ ಆಗುವ ಮಹಾಫಲಲಾಭವನ್ನು ವರ್ಣಿಸುವ ಕಪೋತ-ಕಪೋತೀ ಕಥಾ. ಈ ಕಥೆಯಲ್ಲಿ ಕಪೋತ-ಕಪೋತಿಯರ ಧರ್ಮನಿಷ್ಠೆಯನ್ನು ನೋಡಿದ ಕ್ರೂರ ವ್ಯಾಧನಿಗೆ ಪಶ್ಚಾತ್ತಾಪ, ಧರ್ಮಮಾರ್ಗದಲ್ಲಿ ಪ್ರವೃತ್ತಿ, ಅವನು ಮಾಡಿಕೊಂಡ ಆತ್ಮನಿರೀಕ್ಷಣೆ, ಉಪವಾಸದಿಂದ ಶರೀರ ಶೋಷಣೆ, ಕಾಡ್ಗಿಚ್ಚಿನಲ್ಲಿ ಶರೀರತ್ಯಾಗ, ಸ್ವರ್ಗ ಪ್ರಾಪ್ತಿ- ಈ ವಿಷಯಗಳು ಇವೆ. ಈ ಕಥೆಯು 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಪ್ರಾಜ್ಞ ಅಭಿಪ್ರಾಯಕ್ಕೆ ನಿದರ್ಶನ.

* * * *

ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಬಾಲಕನ ಶವವನ್ನು ಸ್ಮಶಾನಕ್ಕೆ ಒಯ್ದಿದ್ದ ಬಂಧುಗಳನ್ನು ಕುರಿತು ಸ್ವಾರ್ಥಪ್ರೇರಿತರಾದ ಹದ್ದು-ನರಿಗಳ ಮಾತುಗಳು. ಅಲ್ಲಿ ನಡೆದ ಅದ್ಭುತ.

* * * *

ಮುಂದಿನ ಅಧ್ಯಾಯಗಳಲ್ಲಿ ಸತ್ಸಂಗದ ಅವಶ್ಯಕತೆಯ, ದಮ-ಸತ್ಯ ಮೊದಲಾದ ಗುಣಗಳ, ಬೇರೆ ಬೇರೆ ಪಾಪಗಳಿಗೆ ಪ್ರಾಯಶ್ಚಿತ್ತಗಳ ವರ್ಣನೆಗಳು ಇವೆ.

* * * *

ಮೂವತ್ತೈದನೆಯ ಅಧ್ಯಾಯದಲ್ಲಿ ಅರ್ಜುನನು ಮಾಡಿದ ಅರ್ಥದ ಪ್ರಾಧಾನ್ಯದ, ನಕುಲ-ಸಹದೇವರು ಮಾಡಿದ 'ಧರ್ಮ'ದ ಪ್ರಾಧಾನ್ಯದ ಮತ್ತು ಭೀಮಸೇನನು ಮಾಡಿದ 'ಕಾಮ'ದ ಪ್ರಾಧಾನ್ಯದ ವಿವರಣೆಯು ಇದೆ. ಕೊನೆಯಲ್ಲಿ ಯುಧಿಷ್ಠಿರನು ಮಾಡಿದ 'ಮೋಕ್ಷ'ದ ಪ್ರಾಧಾನ್ಯದ ವಿವರಣೆಯು ಇದೆ.

* * * *

ಮೂವತ್ತೇಳನೆಯ ಅಧ್ಯಾಯದಲ್ಲಿ ಗೌತಮ ಎಂಬ ಬ್ರಾಹ್ಮಣನ ಭ್ರಷ್ಟತನದ ಮತ್ತು ಕೃತಘ್ನತೆಯ ವಿವರಣೆಯ ಮೂಲಕ **'ಕೃತಘ್ನೇ ನಾಸ್ತಿ ನಿಷ್ಕೃತಿಃ'** ಎಂಬ ತತ್ವದ ಬೋಧನೆಯು ಇದೆ.

* * * *

'ಆಪದ್ಧರ್ಮಪರ್ವದ ಕನ್ನಡ ಅನುವಾದವನ್ನು ಮಾಡಲು ಅವಕಾಶ ಕೊಟ್ಟು ಅನುಗ್ರಹಿಸಿರುವ ಪಲಿಮಾರು ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಭಕ್ತಿಪೂರ್ವಕ ಪ್ರಣಾಮಗಳು.

ಅನೇಕ ರೀತಿಗಳಿಂದ ಸಹಕರಿಸಿದ ಪಂಡಿತ ಬೆ.ನಾ. ವಿಜಯೀಂದ್ರಾಚಾರ್ಯರಿಗೆ ವಂದನೆಗಳು.

ಶ್ರೀಪಾದ ಆಜ್ಞಾಧಾರಕ

– ಸಿ.ಎಚ್. ಶ್ರೀನಿವಾಸಮೂರ್ತಿ

* * * * *

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೨೭

ಶಾಂತಿಪರ್ವ - ಆಪದ್ಧರ್ಮಪರ್ವ

ಪುಟ ಸಂ.

1. ಆಪತ್‌ಕಾಲದಲ್ಲಿ (1)ಶತ್ರುರಾಜನು ಧಾರ್ಮಿಕನಾಗಿದ್ದರೆ ಅವನ ಜೊತೆ ಸಂಧಾನವನ್ನು ಮಾಡಿಕೊಳ್ಳಬೇಕು (2) ಮೌಲ್ಯಗಳಿಗೆ ಬೆಲೆಕೊಡದವನಾಗಿದ್ದರೆ ಭೂಮಿ-ಸಂಪತ್ತುಗಳನ್ನು ತಾತ್ಕಾಲಿಕವಾಗಿ ಬಿಟ್ಟುಕೊಡಬೇಕು. ಕಾಲಾಂತರದಲ್ಲಿ ಪುನಃ ವಶಕ್ಕೆ ಪಡೆಯಬೇಕು (3) ಹೇಗಾದರೂ ಮಾಡಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು. 1

2. ಬ್ರಾಹ್ಮಣರ=ಬ್ರಹ್ಮನಿಷ್ಠರ ಮಹತ್ವ. ರಾಜನಿಗೆ ಇರಬೇಕಾದ ಮನೋಧರ್ಮ. ಧರ್ಮದ ಅರಿವು ದುರ್ಲಭ. ಧರ್ಮಾನುಷ್ಠಾನವನ್ನು ಮಾಡುತ್ತ, ಮಾಡುತ್ತ ಧರ್ಮದ ಸ್ವರೂಪವನ್ನು ತಿಳಿಯಬೇಕು. 5

3. ರಾಜನು ಕೋಶವನ್ನು ಬೆಳೆಸುವ ವಿಧಾನ. ಧನವೃದ್ಧಿಯಿಲ್ಲದ ರಾಜನು ದುರ್ಬಲ. ದಸ್ಯುಗಳ ಸಹವಾಸವನ್ನು ಮಾಡಬಾರದು. ಸಜ್ಜನದಸ್ಯುಗಳ ರೀತಿ. 10

4. ಧರ್ಮದಿಂದ ಅರ್ಥವನ್ನು ಸಾಧಿಸಬೇಕು. ಧರ್ಮ-ಅಧರ್ಮಗಳ ಫಲಗಳು ಕಾಲಾಂತರದಲ್ಲಿ ಲಭಿಸುತ್ತವೆ. ಬಲವು ಧರ್ಮದ ತಳಪಾಯ. 15

5. ಲೋಕ ಮರ್ಯಾದೆಯನ್ನು ಪಾಲಿಸುವ ದಸ್ಯುಗಳಿಗೆ ಸದ್ಗತಿಯಾಗುತ್ತದೆ. ಕಾಪವ್ಯ ಚರಿತ್ರೆ. 19

6. ರಾಜ್ಯನಿಧಿಯನ್ನು ಬೆಳೆಸಲು ಅನುಸರಿಸಬೇಕಾದ ನಿಯಮಗಳು. 24

7. ಮುಂದೆ ಬರಬಹುದಾದ ಆಪತ್‌ಅನ್ನು ತಡೆಯುವ ವಿಧಾನ. ಮತ್ಸ್ಯೋಪಾಖ್ಯಾನ. 26

8. ಯುಧಿಷ್ಠಿರನ ಪ್ರಶ್ನೆಗಳು. ಭೀಷ್ಮರ ಉತ್ತರಗಳು. ತನಗೆ ಲಾಭವಾಗುವಂತೆ ಶತ್ರುಗಳ ಜೊತೆ ಸಂಧಾನವನ್ನು ಮಾಡಿಕೊಳ್ಳಬೇಕು. ಬೆಕ್ಕು-ಇಲಿಗಳ ಕಥೆ. 32

9. ಅವಿಶ್ವಾಸದಿಂದ ಉದ್ಭವಿಸುವ ಸಮಸ್ಯೆಗಳು. ಪೂಜನೀ-ಬ್ರಹ್ಮದತ್ತ ಸಂವಾದ. ಸ್ವಹಿತವೇ ಮುಖ್ಯ-ಒಳ್ಳೆಯ ರಾಜನ ರೀತಿ. ಕೆಟ್ಟರಾಜನ ರೀತಿ. 74

10. ಆಪತ್‌ಕಾಲದಲ್ಲಿ ರಾಜನು ನಿರ್ದಯನಾಗಿ ವರ್ತಿಸಬೇಕು. ಇದನ್ನು ಸಮರ್ಥಿಸುವ-ವಿವರಿಸುವ ಶತ್ರುಂತಪ-ಭರದ್ವಾಜ ಸಂವಾದ. ಈ ನೀತಿಯಲ್ಲಿರುವ ದೋಷ ಕಥನ. ಅನಿವಾರ್ಯವಾದಾಗ ಇದನ್ನು ಪ್ರಯೋಗಿಸಬೇಕು. 98

11. ಮೌಲ್ಯಗಳು ನಶಿಸಿದಾಗ, ವ್ಯವಸ್ಥೆಗಳು ಕುಸಿದಾಗ, ಬದುಕು ದುರ್ಭರವಾದಾಗ ಇತಿಹಾಸ ಮತ್ತು ಧರ್ಮಸೂಕ್ಷ್ಮಗಳನ್ನು ತಿಳಿದು ಜೀವಿಸಬೇಕು. ವಿಶ್ವಾಮಿತ್ರ-ಶ್ವಪಚ ಸಂವಾದ. 114

12. ಕೇವಲ ಪುಸ್ತಕಗಳ ಅಧ್ಯಯನದಿಂದ ಧರ್ಮದ ಅರಿವು ಆಗುವುದಿಲ್ಲ. ಈ ಅಧ್ಯಯನದ ಜೊತೆ ಉತ್ತಮ ವಿವೇಚನೆಯೂ ಬೇಕು. ರಾಜನು ಅವಶ್ಯಕತೆಗೆ ಅನುಗುಣವಾಗಿ ಉಗ್ರನೂ, ಮೃದುವೂ ಆಗಿರಬೇಕು. ಸತ್ಕುಲಜನ್ಮ ಮತ್ತು ಶ್ರೇಷ್ಠ ಸಾಧನೆಗಳು- ಇವೆರಡೂ ಇರುವವರು ಮಂತ್ರಿಗಳಾಗಲು ಅರ್ಹರು. 136

13. ಶರಣಾಗತರ ರಕ್ಷಣೆಯನ್ನು ಮಾಡಿದವರಿಗೆ ಲಭಿಸುವ ಫಲದ ಬಗ್ಗೆ ಯುಧಿಷ್ಠಿರನ ಪ್ರಶ್ನೆ. ಕಾಡಿನಲ್ಲಿ ಮಳೆಯ ಹೊಡೆತಕ್ಕೆ ನಲುಗಿದ ಬೇಟೆಗಾರ. 145

14. ಕಪೋತ-ಕಪೋತೀ ದಂಪತಿಗಳು. ಕಪೋತಿಗೆ ಬೇಡನ ಬಲೆಯಲ್ಲಿ ಬಂಧನ. ಅದನ್ನು ನೋಡಿದ ಕಪೋತಕ್ಕೆ 'ಶರಣಾಗತ ರಕ್ಷಣೆಯು ಧರ್ಮ. ಇದನ್ನು ನಿಷ್ಠೆಯಿಂದ ಪಾಲಿಸು' ಎಂದು ಕಪೋತಿಯ ಸಲಹೆ. ಕಪೋತನಿಂದ ಬೇಡನಿಗೆ ಉಪಚಾರ-ಆತ್ಮಾರ್ಪಣೆ. 151

15. ಕಪೋತದ ಆತ್ಮಾರ್ಪಣೆಯನ್ನು ನೋಡಿ ಬೇಟೆಗಾರನ ಮನಃಪರಿವರ್ತನೆ. ಧರ್ಮಸಾಧನೆಗೆ ಪ್ರವೃತ್ತಿ. 159

16. ಪತಿಯನ್ನು ಕಳೆದುಕೊಂಡ ಕಪೋತಿಯ ಶೋಕ. ಅಗ್ನಿಪ್ರವೇಶ. ಕಪೋತ-ಕಪೋತಿಗಳ ಸ್ವರ್ಗಾರೋಹಣ. 161

17. ವ್ಯಾಧನಿಗೆ ವಿಮಾನದಲ್ಲಿದ್ದ ಕಪೋತ-ಕಪೋತಿಯರ ದರ್ಶನ. ಸದ್ಗತಿಗಾಗಿ ವ್ಯಾಧನ ಮಹಾಪ್ರಸ್ಥಾನ. ದಾವಾಗ್ನಿಯಲ್ಲಿ ಶರೀರತ್ಯಾಗ. ಸ್ವರ್ಗಗಮನ. 164

18. ಜನಮೇಜಯನಿಗೆ ಆಕಸ್ಮಿಕವಾಗಿ ಸಂಭವಿಸಿದ ಬ್ರಹ್ಮಹತ್ಯಾ ಪಾಪ. ಪ್ರಾಯಶ್ಚಿತ್ತಕ್ಕಾಗಿ ಪ್ರಯತ್ನ. ಶೌನಕರ ಗದರಿಕೆ. 168

19. ಜನಮೇಜಯನಿಂದ ಶೌನಕರ ತೆಗಳಿಕೆಯ ಅಂಗೀಕಾರ. ದಯೆ ತೋರಲು ಪ್ರಾರ್ಥನೆ. ಬ್ರಹ್ಮನಿಷ್ಠರಿಗೆ ದ್ರೋಹ ಮಾಡದಿರಲು ಉಪದೇಶ. ಉಪದೇಶದ ಅಂಗೀಕಾರ. 172

20. ಬ್ರಹ್ಮಹತ್ಯಾ ಪಾಪದಿಂದ ಬಿಡುಗಡೆಯ ದಾರಿಯ ಉಪದೇಶ. 177

21. ಬಾಲಕನ ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿದ್ದ ಬಂಧುಜನಗಳಿಗೆ ಹದ್ದು-ನರಿಗಳ ವಿರುದ್ಧ ಮಾತುಗಳು ಕೊನೆಗೆ ರುದ್ರದೇವರ ಆಗಮನ. ಬಾಲಕನ ಪುನರುಜ್ಜೀವನ. 186

22. ಹಿಮಾಲಯದಲ್ಲಿ ಅತಿ ದೊಡ್ಡ ಬೂರುಗದ ಮರ. ನಾರದರಿಂದ ಅದರ ವರ್ಣನೆ. ಮರದ ಮೇಲೆ ವಾಯುದೇವನ ಪ್ರೀತಿಯ ವರ್ಣನೆ. ಮರದಿಂದ ನಿರಾಕರಣೆ. ವಾಯುವಿಗಿಂತ ತಾನೇ ಹೆಚ್ಚು ಬಲಶಾಲಿ ಎಂದು ಆತ್ಮಶ್ಲಾಘನೆ. ನಾರದರಿಂದ ಮರದ ಧೋರಣೆ ಸರಿಯಲ್ಲ ಎಂದು ಕಥನ. 210

23. ನಾರದರಿಂದ ವಾಯುದೇವನಿಗೆ ಶಾಲ್ಮಲಿಯ ಗರ್ವದ ಬಗ್ಗೆ ವರದಿ. ವಾಯುದೇವ-ಶಾಲ್ಮಲಿಯ ವಾಗ್ವಾದ. ಶಾಲ್ಮಲಿಯ ಜಂಭದ ಮಾತುಗಳು. ವಿವೇಕವಿಲ್ಲದ ವರ್ತನೆ ಸರಿಯಲ್ಲ ಎಂದು ಭೀಷ್ಮರ ಉಪದೇಶ. 218

24. ಲೋಭವು ಪಾಪದ ಮೂಲ. ಲೋಭಿಗಳಲ್ಲಿರುವ ದುರ್ಗುಣಗಳು. ಶಿಷ್ಟರು ಮತ್ತು ಅವರಲ್ಲಿರುವ ಸದ್ಗುಣಗಳು. ಶಿಷ್ಟರನ್ನು ಅನುಸರಿಸಬೇಕು. 225

25. ಲೋಭದಿಂದ ಅಜ್ಞಾನವು ಮತ್ತು ಅಜ್ಞಾನದಿಂದ ಲೋಭವು ಹೆಚ್ಚುತ್ತದೆ. ಇವೆರಡರಿಂದ ರಾಗ, ದ್ವೇಷ, ಕ್ರೋಧ ಮೊದಲಾದ ಹಾನಿಕರ ಸ್ಥಿತಿಗಳು ಏರ್ಪಡುತ್ತವೆ. ಲೋಭವನ್ನು ತ್ಯಜಿಸಿದವರಿಗೆ ಸದ್ಗತಿಯಾಗುತ್ತದೆ. 233

26. ದಮದ ಮಹತ್ವ. 236

27. ದೊಡ್ಡ ಗುರಿಯನ್ನು ತಲುಪಲು ಮಹಾಪ್ರಯತ್ನವನ್ನು ಮಾಡಬೇಕು. ತಪಸ್ಸಿನಿಂದ ಮಹಾಪಾಪಗಳನ್ನು ಪರಿಹರಿಸಿಕೊಳ್ಳಬಹುದು. ಉಪವಾಸವು ಶ್ರೇಷ್ಠ ತಪಸ್ಸು. 244

28. ಸತ್ಯದ ಲಕ್ಷಣ. ಸತ್ಯದ ನಾನಾ ಪ್ರಕಾರಗಳು. 248

29. ಕ್ರೋಧ ಮೊದಲಾದ ದೋಷಗಳು 254

30. ವಕ್ರ-ಕಠೋರ ಸ್ವಭಾವದ ಜನರು 258

31. ಯಜ್ಞವಿಧಿ. ಯಜ್ಞ ಮಾಡುವವರಿಗಾಗಿ ರಾಜನ ಕರ್ತವ್ಯ. ದಕ್ಷಿಣೆ-ದಾನ. ಪಾಪಗಳಿಂದ ಉಂಟಾಗುವ ದುಸ್ಥಿತಿಗಳು. ನಾನಾ ಪ್ರಾಯಶ್ಚಿತ್ತಗಳು. 261

32. ಖಡ್ಗದ ಉತ್ಪತ್ತಿ, ಅದರ ಉಪಯೋಗ ಮೊದಲಾದ ವಿಷಯಗಳನ್ನು ತಿಳಿಸಬೇಕೆಂದು ನಕುಲನ ಪ್ರಾರ್ಥನೆ. ಭೀಷ್ಮರಿಂದ ಪ್ರಾಸ್ತಾವಿಕವಾಗಿ

ಪ್ರಪಂಚ ಸೃಷ್ಟಿಯ ಕಥನ. ಹಿಮಾಲಯದ ಒಂದು ರಮಣೀಯ ಸ್ಥಳದಲ್ಲಿ ಬ್ರಹ್ಮದೇವರು ನಡೆಸಿದ ಯಜ್ಞ. ಆ ಸಂದರ್ಭದಲ್ಲಿ ಉದ್ಭವಿಸಿದ ಮಹಾಭೂತ. ಖಡ್ಗವಾಗಿ ಅದರ ಪರಿವರ್ತನೆ. ಬ್ರಹ್ಮದೇವರಿಂದ ರುದ್ರದೇವರಿಗೆ ಆ ಖಡ್ಗದ ಪ್ರದಾನ. ಅವರಿಂದ ಅದರಿಂದ ಅಧರ್ಮನಿಗ್ರಹ. ಖಡ್ಗದ ಪರಂಪರೆ. 280

33. ಧರ್ಮ-ಅರ್ಥ-ಕಾಮ-ಮೋಕ್ಷಗಳ ಬಗ್ಗೆ ಅಭಿಪ್ರಾಯ ಕಥನ. 298

34. ಸಂಧಾನಕ್ಕೆ ಅರ್ಹರ ಮತ್ತು ಅನರ್ಹರ ವಿವರಣೆ. ಧನದ ಆಸೆಯಿಂದ ಬಂಧನವನ್ನು ವಿವರಿಸುವ ಬ್ರಾಹ್ಮಣನ ಕಥೆ. 310

35. ಗ್ರಾಮದಿಂದ ಗೌತಮನ ನಿರ್ಗಮನ. ವರ್ತಕರ ಗುಂಪಿನೊಂದಿಗೆ ಗಮನ. ಅಪಘಾತ. ಏಕಾಕಿಯಾಗಿ ಅಲೆದಾಟ. ಯಾವುದೋ ರಮಣೀಯ ಕಾಡಿಗೆ ಪ್ರವೇಶ. ಅಲ್ಲಿ ನಡೆದ ಅದ್ಭುತ. 321

36. 'ರಾಜಧರ್ಮ'ನಿಂದ ಗೌತಮನಿಗೆ ಸತ್ಕಾರ. 'ವಿರೂಪಾಕ್ಷ' ಎಂಬ ರಾಜನ ಬಳಿ ಹೋಗಲು ಸಲಹೆ. ಗೌತಮನ ಗಮನ. 326

37. ವಿರೂಪಾಕ್ಷನು ಮಾಡಿದ ಬ್ರಾಹ್ಮಣ ಸತ್ಕಾರ. ಗೌತಮನಿಗೆ ವಿಪುಲ ಧನಕನಕಗಳ ದಾನ, ಅವುಗಳ ಜೊತೆ ಹೊರಟ ಗೌತಮನಿಂದ ಅದೇ ಮರದ ಬಳಿ ಆಗಮನ. ಬಕ ಪಕ್ಷಿಯಿಂದ ಉಪಚಾರ. ಗೌತಮನಿಗೆ ಆ ಹಕ್ಕಿಯನ್ನು ಕೊಲ್ಲುವ ಆಲೋಚನೆ. 331

38. ಗೌತಮನಿಂದ 'ರಾಜಧರ್ಮ' (ಬಕಪಕ್ಷಿ)ನ ಹತ್ಯೆ. ವಿರೂಪಾಕ್ಷನ ಮಗ ಮತ್ತು ಸೇವಕರಿಂದ ಗೌತಮನ ಬಂಧನ, ಹತ್ಯೆ. 338

39. 'ರಾಜಧರ್ಮ'ನ ದೇಹಕ್ಕೆ ಸಂಸ್ಕಾರ. ದೇಹದ ಮೇಲೆ ಸುರಭಿಯ ಬಾಯಿಯ ನೊರೆಯ ಪತನ. ದೇವೇಂದ್ರನ ಆಗಮನ. ರಾಜಧರ್ಮನ ಪುನರುಜ್ಜೀವನ. ಅವನ ಶಾಪ ವೃತ್ತಾಂತ. ಗೌತಮನ ಪುನರುಜ್ಜೀವನ. ಅವನ ನರಕಗಮನ. ಕೃತಘ್ನನಿಗೆ ಪ್ರಾಯಶ್ಚಿತ್ತವಿಲ್ಲ. 343

★ ★ ★ ★ ★

॥ ಶ್ರೀಃ ॥

ಮಹಾಭಾರತ - ಶಾಂತಿಪರ್ವ

ಆಪದ್ಧರ್ಮಪರ್ವ

ಒಂದನೆಯ ಅಧ್ಯಾಯ

ಆಪತ್‌ಕಾಲದಲ್ಲಿ (೧)ಶತ್ರುರಾಜನು ಧಾರ್ಮಿಕನಾಗಿದ್ದರೆ ಅವನ ಜೊತೆ ಸಂಧಾನವನ್ನು ಮಾಡಿಕೊಳ್ಳಬೇಕು (೨) ಮೌಲ್ಯಗಳಿಗೆ ಬೆಲೆಕೊಡದವನಾಗಿದ್ದರೆ ಭೂಮಿ-ಸಂಪತ್ತುಗಳನ್ನು ತಾತ್ಕಾಲಿಕವಾಗಿ ಬಿಟ್ಟುಕೊಡಬೇಕು. ಕಾಲಾಂತರದಲ್ಲಿ ಪುನಃ ವಶಕ್ಕೆ ಪಡೆಯಬೇಕು (೩) ಹೇಗಾದರೂ ಮಾಡಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು.

ಯುಧಿಷ್ಠಿರಃ

ಕ್ಷೀಣಸ್ಯ ದೀರ್ಘಸೂತ್ರಸ್ಯ ಸಾನುಕ್ರೋಶಸ್ಯ ಬಂಧುಷು ।
ವಿರಕ್ತಪೌರರಾಷ್ಟ್ರಸ್ಯ ನಿರ್ದ್ರವ್ಯನಿಚಯಸ್ಯ ಚ ॥೧॥

ಪರಿಶಂಕಿತಮುಖ್ಯಸ್ಯ ಸ್ರುತಮಂತ್ರಸ್ಯ ಭಾರತ ।
ಅಸಂಭಾವಿತಮಿತ್ರಸ್ಯ ಭಿನ್ನಾಮಾತ್ಯಸ್ಯ ಸರ್ವಶಃ ॥೨॥

ಪರಚಕ್ರಾಭಿಯಾತಸ್ಯ ದುರ್ಬಲಸ್ಯ ಬಲೀಯಸಾ ।
ಆಪನ್ನಚೇತಸೋ ಬ್ರೂಹಿ ಕಿಂ ಕಾರ್ಯಮವಶಿಷ್ಯತೇ ॥೩॥

ಯಾರು ಮಾನಸಿಕನಾಗಿ ಕುಸಿದಿರುವನೋ, ಆಲಸನೋ, ಬಂಧುಗಳ ನಾಶದ ಭಯದಿಂದ ಯುದ್ಧ ಮಾಡಲು ಬಯಸುವುದಿಲ್ಲವೋ, ಪ್ರಜಾನುರಾಗ ರಹಿತನೋ,ಆವಶ್ಯಕ ವಸ್ತುಗಳ ಸಂಗ್ರಹವಿಲ್ಲದವನೋ, ಯಾರ ಪ್ರಧಾನ ಅಧಿಕಾರ ವರ್ಗದವರ ನಿಷ್ಠೆಯು ಸಂಶಯಾಸ್ಪದವಾಗಿದೆಯೋ, ಗುಪ್ತಸಮಾಲೋಚನೆಗಳು ಸೋರಿ ಹೋಗಿವೆಯೋ, ಯಾರಿಗೆ ಸಂಭಾವಿತರಾದ ಮಿತ್ರರಿಲ್ಲವೋ, ಯಾರ ಮಂತ್ರಿಗಳನ್ನು ಶತ್ರುಗಳು ಭೇದಿಸಿರುವರೋ (ಯಾರ ಮಂತ್ರಿಗಳು ಶತ್ರುಗಳಿಗೆ ಅನುಕೂಲರಾಗಿರುವರೋ) ಯಾರು ಶತ್ರುಗಳ ಆಕ್ರಮಣಕ್ಕೆ ಒಳಗಾಗಿದ್ದಾನೋ, ಬಲಶಾಲಿ ಶತ್ರುಗಳಿಂದ ಆಪತ್ತಿಗೆ ಒಳಗಾಗಿರುವನೋ ಅಂತಹ ರಾಜನು ಏನು ಮಾಡಬೇಕು?

ಭೀಷ್ಮಃ

ಬಾಹ್ಯಾರ್ಥೇ ವಿಜಿಗೀಷುಃ ಸ್ಯಾದ್ ಧರ್ಮಾರ್ಥಕುಶಲಃ ಶುಚಿಃ ।
ಜವೇನ ಸಂಧಿಂ ಕುರ್ವೀತ ಪೂರ್ವಂ ಪೂರ್ವಂ ವಿಮೋಕ್ಷಯನ್ ॥೪॥

ಧರ್ಮದ ಅನುಷ್ಠಾನವನ್ನು ಕೌಶಲದಿಂದ (ಪ್ರಯೋಜನಕರವಾದ ವಿವೇಚನೆಯಿಂದ) ಮಾಡುವ ಶುಚಿ ವರ್ತನೆಯ ರಾಜನು, ಪರದೇಶದ ರಾಜನು ಹೊರ ಪ್ರಪಂಚಕ್ಕೆ ಸೇರಿದ ಧನ-ಕನಕ ಮೊದಲಾದವುಗಳನ್ನು ಗೆಲ್ಲುವ ಇಚ್ಛೆಯಿಂದ ಆಕ್ರಮಣವನ್ನು ಮಾಡಿದ್ದರೆ, ಅವನ ಜೊತೆ ಕೂಡಲೇ ಸಂಧಿಯನ್ನು ಮಾಡಿಕೊಳ್ಳಬೇಕು. ಅವನು ಹಿಂದೆ ಆಕ್ರಮಿಸಿಕೊಂಡ ಭೂಮಿ-ಸಂಪತ್ತುಗಳನ್ನು ಸಾಮೋಪಾಯದಿಂದ ಬಿಡಿಸಿಕೊಳ್ಳಬೇಕು.

ಅಧರ್ಮವಿಜಿಗೀಷುಶ್ಚೇದ್ ಬಲವಾನ್ ಪಾಪನಿಶ್ಚಯಃ ।
ಆತ್ಮನಃ ಸನ್ನಿರೋಧೇನ ಸಂಧಿಂ ತೇನಾಭಿಯೋಜಯೇತ್ ॥೫॥

ಪರರಾಜನು ಅಧರ್ಮದಿಂದ ಜಯಗಳಿಸುವ ಇಚ್ಛೆವುಳ್ಳವನೂ, ಬಲಶಾಲಿಯೂ, ಕೆಟ್ಟ ನಿಶ್ಚಯದವನೂ ಆಗಿದ್ದರೆ ಬಹಳ ಸಂಯಮದಿಂದ ಅವನ ಜೊತೆ ಸಂಧಿಯನ್ನು ಮಾಡಿಕೊಳ್ಳಬೇಕು.

ಅಥಾಸ್ಯ ರಾಜಧಾನೀಂ ಚ ತರೇದನ್ಯೇನ ವಾಪದಮ್ ।
ತದ್ಭಾವಭಾವೇ ದ್ರವ್ಯಾಣಿ ಜೀವನ್ ಪುನರುಪಾರ್ಜಯೇತ್ ॥೬॥

ಅಥವಾ ಈ ಶತ್ರುರಾಜನಿಗೆ ರಾಜಧಾನಿಯಲ್ಲದ ಸ್ಥಳಗಳನ್ನು ಬಿಟ್ಟುಕೊಡಬೇಕು. ಬೇರೆ ಯಾವುದೇ ಕ್ರಮದಿಂದಲಾದರೂ ಆಪತ್ತನ್ನು ದಾಟಬೇಕು. ತಾನು ರಾಜ ಎಂಬ ಭಾವದಿಂದ ಬದುಕಿದವನು ಸಂಪತ್ತನ್ನು ಪುನಃ ಸಂಪಾದಿಸಬಹುದು.

ಯಾಸ್ತು ಕೋಶಬಲತ್ಯಾಗಾಚ್ಚಕ್ಯಾಸ್ತರಿತುಮಾಪದಃ ।
ಕಸ್ತತ್ರಾಧಿಕಮಾತ್ಮಾನಂ ಸಂತ್ಯಜೇದರ್ಥಧರ್ಮವಿತ್ ॥೭॥

ಕೋಶ-ಸೈನ್ಯಗಳ ಪರಿತ್ಯಾಗದಿಂದ ಯಾವ ಆಪತ್ತುಗಳನ್ನು ದಾಟಬಹುದೋ ಆ ಆಪತ್ತುಗಳನ್ನು ದಾಟಲು ಕೋಶ-ಸೈನ್ಯಗಳಿಗಿಂತ ಅಧಿಕ ಮೌಲ್ಯದ ತನ್ನ ಶರೀರವನ್ನೇ, ಅರ್ಥ-ಧರ್ಮಗಳ ಅರಿವಿರುವ, ಯಾರು ತಾನೇ ತ್ಯಜಿಸುವನು?

ಅಪರಾಧಾಜ್ಜುಗುಪ್ಸೇತ ಕಃ ಸಂಪನ್ನಧನೋ ಧನಮ್ ।
ನ ತ್ವೇವಾತ್ಮಾ ಪ್ರದಾತವ್ಯಃ ಶಕ್ಯೇ ಸತಿ ಕಥಂಚನ ॥೮॥

ಸಮೃದ್ಧ ಧನವಂತನಾದ ಯಾರು ತಾನೇ ಅಪರಾಧವನ್ನು= ಶರೀರತ್ಯಾಗವನ್ನು ಮಾಡಿ ಧನವನ್ನು ರಕ್ಷಿಸಲು ಬಯಸುತ್ತಾನೆ? ಹೇಗಾದರೂ ಶರೀರವನ್ನು ರಕ್ಷಿಸಿಕೊಳ್ಳಲು ಅವಕಾಶವಿರುವಾಗ ಶರೀರವನ್ನು ತ್ಯಜಿಸಲೇಬಾರದು.

ಯುಧಿಷ್ಠಿರಃ

ಆಭ್ಯಂತರೇ ಪ್ರಕುಪಿತೇ ಬಾಹ್ಯೇ ಚೋಪನಿಪೀಡಿತೇ ।
ಕ್ಷೀಣೇ ಕೋಶೇ ಸ್ರುತೇ ಮಂತ್ರೇ ಕಿಂ ಕಾರ್ಯಮವಶಿಷ್ಯತೇ ॥೯॥

ಯುಧಿಷ್ಠಿರ– ನಮ್ಮ ಜನರೇ ವಿರೋಧಿಗಳಾದಾಗ, ದುರ್ಗ-ರಾಷ್ಟ್ರ ಮೊದಲಾದವುಗಳು ಉಪದ್ರವಗಳಿಗೆ ಒಳಗಾದಾಗ, ಬೊಕ್ಕಸವು ಕ್ಷೀಣಿಸಿರುವಾಗ, ರಾಜ ರಹಸ್ಯಗಳು ಬಹಿರಂಗವಾದಾಗ ಏನು ಮಾಡಬೇಕು?

ಭೀಷ್ಮಃ

ಕ್ಷಿಪ್ರಂ ವಾ ಸಂಧಿಕಾಮಃ ಸ್ಯಾತ್ ಕ್ಷಿಪ್ರಂ ವಾ ತೀಕ್ಷ್ಣವಿಕ್ರಮಃ ।
ಯದಾಪನಯನಂ ಕ್ಷಿಪ್ರಮೇತಾವತ್ ಸಾಂಪರಾಯಿಕಮ್ ॥೧೦॥

ಭೀಷ್ಮ– ಬೇಗನೆ ಸಂಧಿಗೆ ಮನಸ್ಸು ಮಾಡಬೇಕು ಅಥವಾ ಬೇಗನೇ ತೀಕ್ಷ್ಣ ಪರಾಕ್ರಮದಿಂದ ಗೆಲ್ಲಬೇಕು. ಇದರಿಂದ ಬೇಗನೆ ಶತ್ರುವಿನ ಉಚ್ಚಾಟನವಾಗುತ್ತದೆ. ಇದಷ್ಟು ಪರಲೋಕದಲ್ಲಿ ಹಿತಕರವಾದ ಕ್ರಮಗಳು.

ಅನುರಕ್ತೇನ ಪುಷ್ಟೇನ ಹೃಷ್ಟೇನ ಜಗತೀಪತೇ ।
ಅಲ್ಪೇನಾಪಿ ಹಿ ಸೈನ್ಯೇನ ಮಹೀಂ ಜಯತಿ ಪಾರ್ಥಿವಃ ॥೧೧॥

ರಾಜನೇ! ರಾಜನ ಮೇಲೆ ಅನುರಾಗವುಳ್ಳ, ಪುಷ್ಟರಾದ, ಸಂತುಷ್ಟರಾದ ಅಲ್ಪಸಂಖ್ಯೆಯ ಸೇನಾಬಲದಿಂದಲೇ ರಾಜನು ಭೂಮಂಡಲವನ್ನು ಗೆಲ್ಲಬಲ್ಲನು.

ಹತೋ ವಾ ದಿವಮಾರೋಹೇದ್ ವಿಜಯೀ ಕ್ಷಿತಿಮಾವಸೇತ್ ।
ಯುದ್ಧೇ ತು ಸಂತ್ಯಜನ್ ಪ್ರಾಣಾನ್ ಶಕ್ರಸ್ಯೈತಿ ಸಲೋಕತಾಮ್ ॥೧೨॥

ಯುದ್ಧದಲ್ಲಿ ಹತನಾದರೆ ಸ್ವರ್ಗಕ್ಕೆ ಹೋಗುತ್ತಾನೆ; ಗೆದ್ದರೆ ಭೂಮಂಡಲದ ಒಡೆಯನಾಗುತ್ತಾನೆ. ಯುದ್ಧದಲ್ಲಿ ಪ್ರಾಣವನ್ನು ಕೊಟ್ಟವನು ಇಂದ್ರನ ಲೋಕವನ್ನು ಹೊಂದುತ್ತಾನೆ.

ಸರ್ವಲೋಕಾಗಮಂ ಕೃತ್ವಾ ಮೃದುತ್ವಂ ಗಂತುಮೇವ ಚ ।
ವಿಶ್ವಾಸಾದ್ ವಿನಯಂ ಕುರ್ಯಾದ್ ಸಜಲಾದ್ವಾಪ್ಯುಪಾನಹಮ್ ॥೧೩॥

ಶತ್ರುರಾಜನನ್ನು ಮೃದುವಾಗಿಸಲು ಎಲ್ಲ ಪ್ರಾಜ್ಞರಿಗೆ ಸಮ್ಮತವಾದ ಉಪಾಯಗಳನ್ನು ಮಾಡಿ, ನಂಬಿಕೆಯನ್ನು ಹುಟ್ಟಿಸಿ ವಿನಯದಿಂದ ನಡೆದುಕೊಳ್ಳಬೇಕು. ನೀರು, ಎಣ್ಣೆ ಮೊದಲಾದವುಗಳಿಂದ ಪಾದರಕ್ಷೆಯನ್ನು ಮೃದುವಾಗಿಸುವಂತೆ.

ಅಪವಿಕ್ರಮಿಷುಃ ಕ್ಷಿಪ್ರಂ ಯಥಾಕಾಮಂ ತು ಸಾಂತ್ವಯನ್ ।
ವಿಲಂಘಯಿತ್ವಾ ಮಿತ್ರೇಣ ತತಃ ಸ್ವಯಮುಪಕ್ರಮೇತ್ ॥೧೪॥

ಪಲಾಯನ ಮಾಡಲು ಬಯಸುವವನು ತನ್ನ ಸೈನಿಕರನ್ನು ಮತ್ತು ಶತ್ರುಪಕ್ಷದ ಸೇನಾಧಿಕಾರಿಗಳನ್ನೂ ಸಾಮೋಪಾಯದಿಂದ ಪ್ರಸನ್ನಗೊಳಿಸಿ ಪಲಾಯನವನ್ನು ಮಾಡಬೇಕು. ಅನಂತರ ಎಲ್ಲ ಅನುಕೂಲಗಳನ್ನು ಮಾಡಿಕೊಂಡು ತಾನೇ ಆಕ್ರಮಿಸಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಆಪದ್ಧರ್ಮಪರ್ವದಲ್ಲಿ
ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಎರಡನೆಯ ಅಧ್ಯಾಯ

ಬ್ರಾಹ್ಮಣರ=ಬ್ರಹ್ಮನಿಷ್ಠರ ಮಹತ್ವ. ರಾಜನಿಗೆ ಇರಬೇಕಾದ ಮನೋಧರ್ಮ. ಧರ್ಮದ ಅರಿವು ದುರ್ಲಭ. ಧರ್ಮಾನುಷ್ಠಾನವನ್ನು ಮಾಡುತ್ತ, ಮಾಡುತ್ತ ಧರ್ಮದ ಸ್ವರೂಪವನ್ನು ತಿಳಿಯಬೇಕು.

ಯುಧಿಷ್ಠಿರಃ

ಹೀನೇ ಪರಮಕೇ ಧರ್ಮೇ ಸರ್ವಲೋಕಾತಿಲಂಘಿನಿ ।
ಸರ್ವಸ್ಮಿನ್ ದಸ್ಯುಸಾದ್ಭೂತೇ ಪೃಥಿವ್ಯಾಮುಪಜೀವನೇ ॥೧॥

ಕೇನಸ್ವಿತ್ ಬ್ರಾಹ್ಮಣೋ ಜೀವೇಜ್ಜಘನ್ಯೇ ಕಾಲ ಆಗತೇ ।
ಅಸಂತ್ಯಜನ್ ಪುತ್ರಪೌತ್ರಾನನುಕ್ರೋಶಾತ್ ಪಿತಾಮಹ ॥೨॥

ಯುಧಿಷ್ಠಿರ– ಪಿತಾಮಹನೇ! ಬ್ರಹ್ಮನಿಷ್ಠರ, ಸಜ್ಜನರ ರಕ್ಷಣೆ ರಾಜನ ಪರಮಧರ್ಮ. ಈ ಪರಮಧರ್ಮದ ಪಾಲನೆಗೆ ಭಂಗವುಂಟಾದಾಗ, ಎಲ್ಲ ಜನರೂ ನಿಯಮಗಳ ಉಲ್ಲಂಘನೆಯನ್ನು ಮಾಡುತ್ತಿರುವಾಗ, ಭೂಮಿಯಲ್ಲಿರುವ ಜೀವನೋಪಾಯಗಳೆಲ್ಲವೂ ಲೂಟಿಕೋರರ ವಶವಾದಾಗ, ಧರ್ಮ-ನೀತಿಗಳು ಕುಸಿದು ಹೋದ ಕಾಲವು ಬಂದಾಗ, ದಯಾಳುಗಳು, ಬ್ರಹ್ಮನಿಷ್ಠರು ತಮ್ಮ ಮಕ್ಕಳು, ಮೊಮ್ಮಕ್ಕಳು ಮೊದಲಾದ ಪರಿವಾರವನ್ನು ಬಿಡದೆ ಹೇಗೆ ಬದುಕಬೇಕು?

ಭೀಷ್ಮಃ

ವಿಜ್ಞಾನಬಲಮಾಸ್ಥಾಯ ಜೀವಿತವ್ಯಂ ತಥಾಗತೇ ।
ಸರ್ವಂ ಸಾಧ್ವರ್ಥಮೇವೇದಮಸಾಧ್ವರ್ಥಂ ನ ಕಿಂಚನ ॥೩॥

ಭೀಷ್ಮ– ಅಂತಹ ಕಾಲವು ಬಂದಾಗ ವಿದ್ಯೆಯ ಬಲವನ್ನು ಅವಲಂಬಿಸಿ ಜೀವನವನ್ನು ನಿರ್ವಹಿಸಬೇಕು. ಈ ಜಗತ್ತಿನಲ್ಲಿರುವ ಎಲ್ಲವೂ ಸಜ್ಜನರಿಗಾಗಿಯೇ. ಕೆಟ್ಟವರಿಗೆ ಏನೂ ಇಲ್ಲ.

ಅಸಾಧುಭ್ಯೋ ನಿರಾದಾಯ ಸಾಧುಭ್ಯೋ ಯಃ ಪ್ರಯಚ್ಛತಿ ।
ಆತ್ಮಾನಂ ಸಂಕ್ರಮಂ ಕೃತ್ವಾ ಕೃತ್ಸ್ನಧರ್ಮವಿದೇವ ಸಃ ॥೪॥

ಸರ್ವವ್ಯಾಪಿಯಾದ ಪರಮಾತ್ಮನನ್ನು ಚಿಂತಿಸುತ್ತಾ, ಸರ್ವರ ಪೋಷಣೆಯು ಸರ್ವವ್ಯಾಪಿಯಾದ ಹರಿಯ ಪೂಜೆಯೆಂದು ತಿಳಿದು, ದುಷ್ಪರಿಂದ ಸಂಪತ್ತನ್ನು ವಶಪಡಿಸಿಕೊಂಡು ಸಜ್ಜನರಿಗೆ ಕೊಡಬೇಕು. ಇದೇ ಎಲ್ಲ ಧರ್ಮಗಳ ಜ್ಞಾನದ ಫಲ.

ಆರೋಪೇಣಾತ್ಮನಾ ರಾಜನ್ ರಾಜ್ಯೇ ಸ್ಥಿತಿಮಕೋಪಯನ್ ।
ಅದತ್ತಮಪ್ಯಾದದೀತ ಭ್ರಾತೃವಿತ್ತಂ ಮಮೇತಿ ವಾ ॥೫॥

ಸಾಧಕರು ಸರ್ವಕರ್ಮಗಳನ್ನು ಪರಮಾತ್ಮನಿಗೆ ಸಮರ್ಪಿಸುತ್ತಾರೆ. ರಾಜನು ಈ ಸಮರ್ಪಣ ಭಾವದಿಂದ, ರಾಜ್ಯದ ಸ್ಥಿತಿಯು ಹದಗೆಡದಂತೆ, ಧನಿಕರು ತಾವಾಗಿಯೇ ಕೊಡದಿದ್ದರೂ ತನ್ನ ಸೋದರರ ಹಣ ಎಂಬಂತೆ ಅವರ ಧನವನ್ನು ಪಡೆದುಕೊಳ್ಳಬೇಕು.

ವಿಜ್ಞಾನಬಲಪೂತೋ ಯೋ ವರ್ತತೇ ನಿಂದಿತೇಷ್ವಪಿ ।
ವೃತ್ತವಿಜ್ಞಾನವಾನ್ ಧೀರಃ ಕಸ್ತಂ ಕಿಂ ವಕ್ತುಮರ್ಹತಿ ॥೬॥

(ವಿವೇಚನೆಯನ್ನು ಪ್ರಚೋದಿಸುವ ಜ್ಞಾನವು ಬಲ. ಈ ಬಲವು ನಿರ್ಧಾರಗಳನ್ನು ಶುದ್ಧವಾಗಿಸುತ್ತದೆ. ಇಂತಹ ಜ್ಞಾನದ ಬಲದಿಂದ ನಿರ್ಧಾರಗಳನ್ನು ಮಾಡುವವನು ವಿಜ್ಞಾನಬಲಪೂತ). ವಿಜ್ಞಾನ ಬಲಪೂತನಾದ ರಾಜನು ನಿಂದಿತ (ನೀತಿ ಸಮ್ಮತವಲ್ಲದ) ಕೆಲಸಗಳನ್ನು ಮಾಡಿದರೂ, ಸದಾಚಾರಗಳ ಅರಿವು ಇರುವ ಯಾವ ವಿವೇಕಿಯು (ಧೀರಃ), ಆ ರಾಜನನ್ನು ನಿಂದಿಸಿಯಾನು?

ಯೇಷಾಂ ಬಹುಕೃತಾ ಬುದ್ಧಿರ್ನೈಷಾಮನ್ಯಾಭಿರೋಚತೇ ।
ತೇಜಸಾಭಿಪ್ರವರ್ಧಂತೇ ಬಲವಂತೋ ಯುಧಿಷ್ಠಿರ ॥೭॥

ಗುಣಪೂರ್ಣನಾದ (ಆದ್ದರಿಂದಲೇ 'ಬಹು'ಆದ) ಹರಿಯಲ್ಲೇ (ಹರಿಯ ಆರಾಧನೆಯಲ್ಲೇ) ಯಾರಿಗೆ ಮನಸ್ಸು ಇದೆಯೋ ಅವರಿಗೆ ಗುಣ ವಿರೋಧಿಯಾದ ಕೆಲಸಗಳು ರುಚಿಸುವುದಿಲ್ಲ. ಯುಧಿಷ್ಠಿರ! ಬಲಶಾಲಿಗಳು (ಜ್ಞಾನದ ಬಲವಿರುವವರು) ಜ್ಞಾನದ ತೇಜಸ್ಸಿನಿಂದಲೇ ಬೆಳೆಯುತ್ತಾರೆ.

ಯದೇವ ಪ್ರಕೃತಂ ಶಾಸ್ತ್ರ ಅವಿಶೇಷೇಣ ವರ್ತತೇ ।
ತದೇವ ಮಧ್ಯಾಃ ಸೇವಂತೇ ಮೇಧಾವೀ ಚಾಪ್ಯಥೋತ್ತರಮ್ ॥೮॥

ಶಾಸ್ತ್ರದಲ್ಲಿ (ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ ಮೊದಲಾದ ಶಾಸ್ತ್ರ-ವಚನಗಳಲ್ಲಿ) ಯಾವುದು ಸಾಮಾನ್ಯವಾಗಿ (ಮೇಲುನೋಟಕ್ಕೆ) ಗೋಚರಿಸುವುದೋ ಅದನ್ನೇ ಮಧ್ಯಮ ಮಟ್ಟದ ಸಾಧಕರು ಸಾಧಿಸುತ್ತಾರೆ. ಮೇಧಾವಿಗಳು (ಶಾಸ್ತ್ರ ಮಾರ್ಗದಲ್ಲಿ ಅಭಿರುಚಿಯನ್ನು ಹುಟ್ಟಿಸುವುದಕ್ಕಾಗಿ ಶ್ರುತಿವಚನಗಳು ಅಶಾಶ್ವತ ಫಲಗಳನ್ನು ಹೇಳುತ್ತವೆ ಎಂದು ತಿಳಿದವರು) ಅದಕ್ಕಿಂತ ಉತ್ಕೃಷ್ಟವಾದ ಮೋಕ್ಷವನ್ನು ಸಾಧಿಸಲು ಪ್ರವೃತ್ತಿಶೀಲರಾಗುತ್ತಾರೆ.

ಋತ್ವಿಕ್ಪುರೋಹಿತಾಚಾರ್ಯಾನ್ ಸತ್ಕೃತೈರಭಿಪೂಜಿತಾನ್ ।
ನ ಬ್ರಾಹ್ಮಣಾನ್ಯಾತಯೇತ ದೋಷಾನ್ ಪ್ರಾಪ್ನೋತಿ ಯಾತಯನ್ ॥೯॥

ತಮ್ಮ ಸತ್ಕರ್ಮಗಳಿಂದ ಮಾನ್ಯರಾದ ಋತ್ವಿಜರು, ಪುರೋಹಿತರು, ಆಚಾರ್ಯರೂ ಆದ ಬ್ರಹ್ಮನಿಷ್ಠರಿಗೆ ತೊಂದರೆಯನ್ನುಂಟು ಮಾಡಬಾರದು. ತೊಂದರೆಯನ್ನುಂಟು ಮಾಡುವವನು ಅನಿಷ್ಟ ಪರಿಣಾಮಗಳನ್ನು ಹೊಂದುತ್ತಾನೆ.

ಏತತ್ ಪ್ರಮಾಣಂ ಲೋಕಸ್ಯ ಚಕ್ಷುರೇತತ್ ಸನಾತನಮ್ ।
ತತ್ಪ್ರಮಾಣೇನಾವಗಾಹೇತ ತೇನ ತತ್ ಸಾಧ್ವಸಾಧು ವಾ ॥೧೦॥

ಈ ಬ್ರಹ್ಮನಿಷ್ಠಕುಲವು ಜನಗಳಿಗೆ ಮಾರ್ಗದರ್ಶಕ. ಇದು ಸನಾತನ ಕಣ್ಣು. ಆದ್ದರಿಂದ ಈ ಮಾರ್ಗದರ್ಶಕರ ಸಹಾಯದಿಂದಲೇ ಸರಿ ಯಾವುದು, ತಪ್ಪು ಯಾವುದು ಎಂದು ನಿರ್ಣಯಿಸಬೇಕು.

ಬಹೂನಿ ಗ್ರಾಮವಾಸ್ತವ್ಯಾ ರೋಷಾದ್ ಬ್ರೂಯುಃ ಪರಸ್ಪರಮ್ ।
ನ ತೇಷಾಂ ವಚನಾದ್ ರಾಜಾ ಸತ್ಕುರ್ಯಾದ್ ಯಾತಯೇತ ವಾ ॥

ಗ್ರಾಮ ವಾಸಿಗಳಾದ ಜನರು ಪರಸ್ಪರ ರೋಷದಿಂದ ಬಹುವಿಧವಾಗಿ ದೂರುವರು. ಅವರ ಮಾತುಗಳನ್ನು ಆಧರಿಸಿ ರಾಜನು ಯಾರನ್ನೂ ಸತ್ಕರಿಸಬಾರದು, ಯಾರನ್ನೂ ದಂಡಿಸಬಾರದು.

ನ ವಾಚ್ಯಃ ಪರಿವಾದೋ ವೈ ನ ಶ್ರೋತವ್ಯಃ ಕಥಂಚನ ।
ಕರ್ಣಾವೇವ ಪಿಧಾತವ್ಯೌ ಪ್ರಸ್ಥೇಯಂ ವಾ ತತೋಽನ್ಯತಃ ॥೧೨॥

ನಿಂದನೆಯನ್ನು ಮಾಡಬಾರದು; ನಿಂದನೆಯನ್ನು ಕೇಳಬಾರದು; ಕಿವಿಗಳನ್ನು ಮುಚ್ಚಿಕೊಳ್ಳಬೇಕು; ಅಥವಾ ಅಲ್ಲಿಂದ ಹೊರಟುಹೋಗಬೇಕು.

ನ ವೈ ಸತಾಂ ವೃತ್ತಮೇತತ್ ಕರಿಷ್ಯದ್ ಯೋಪಿ ಪೈಶುನಮ್ ।
ಗುಣಾನಾಮೇವ ವಕ್ತಾರಃ ಸಂತಃ ಸತ್ಸು ಯುಧಿಷ್ಠಿರ ॥೧೩॥

ಚಾಡಿ ಹೇಳುವುದು ಸಜ್ಜನರ ನಡವಳಿಕೆ ಅಲ್ಲ. ಯುಧಿಷ್ಠಿರ! ಸಜ್ಜನರು ಸಜ್ಜನರ ಗುಣಗಳನ್ನೇ ಹೇಳುತ್ತಾರೆ.

ಯಥಾ ಸುಮಧುರೌ ದಮ್ಯೌ ಸುಧಾಂ ವಾ ಸಾಧುವಾಹಿನೀಮ್ ।
ಧುರಮುದ್ಯಮ್ಯ ವಹತಸ್ತಥಾ ವರ್ತೇತ ವೈ ನೃಪಃ ॥೧೪॥

ಲಕ್ಷಣಸಂಪನ್ನವಾಗಿರುವ, ನಿಯಂತ್ರಣಕ್ಕೆ ಒಳಪಡುವ ಎರಡು ಎತ್ತುಗಳು ಅಮೃತದಂತಿರುವ ಹರಿಯುತ್ತಿರುವ ನೀರನ್ನು ನೋಡಿದರೂ (ಅದರ ಕಡೆಗೆ ಹೋಗುವ) ಪ್ರವೃತ್ತಿಯನ್ನು ನಿಯಂತ್ರಿಸಿಕೊಂಡು ಭಾರವನ್ನು ಹೊರತ್ತವೆಯೋ ಹಾಗೆ ರಾಜನು ನಡೆದುಕೊಳ್ಳಬೇಕು.

ಯಥಾ ಯಥಾಸ್ಯ ವಹತಃ ಸಹಾಯಾಃ ಸ್ಯುಸ್ತಥಾಪರೇ ।
ಆಚಾರಮೇವ ಮನ್ಯಂತೇ ಗರೀಯೋ ಧರ್ಮಲಕ್ಷಣಮ್ ॥೧೫॥

ರಾಜ್ಯಭಾರವನ್ನು ಹೊತ್ತ ತನಗೆ ಇತರರು ಸಹಾಯಕರಾಗುವಂತೆ ರಾಜನು ನಡೆದುಕೊಳ್ಳಬೇಕು. ಈ ನಡವಳಿಕೆಯೇ ಶ್ರೇಷ್ಠಧರ್ಮ ಎಂದು ಪ್ರಾಜ್ಞರು ಭಾವಿಸುತ್ತಾರೆ.

ಅಪರೇ ನೈವಮಿಚ್ಛಂತಿ ಯೇ ಶಂಖಲಿಖಿತಪ್ರಿಯಾಃ ।
ಅರ್ಥೇ ಕ್ಷೀಣೇಽಥವಾ ಲುಬ್ಧಾಃ ತೇ ಬ್ರೂಯುರ್ವಾಕ್ಯಮೀದೃಶಮ್ ॥

ಶಂಖ ಮತ್ತು ಲಿಖಿತರನ್ನು ಮೆಚ್ಚುವವರು ಇದನ್ನು (೯ನೆಯ ಮತ್ತು ೧೫ನೆಯ ಶ್ಲೋಕಗಳಲ್ಲಿರುವ ಅಭಿಪ್ರಾಯವನ್ನು) ಒಪ್ಪುವುದಿಲ್ಲ. ಸಂಪತ್ತು ಕಡಿಮೆಯಾದಾಗ ಅಥವಾ ಲೋಭದಿಂದ ಹೀಗೆ (೯ನೆಯ ಮತ್ತು ೧೫ನೆಯ ಶ್ಲೋಕಗಳಲ್ಲಿ ಹೇಳಿದಂತೆ) ಹೇಳುತ್ತಾರೆ (ಎಂದು ಶಂಖ-ಲಿಖಿತರ ಅನುಯಾಯಿಗಳ ಅಭಿಪ್ರಾಯ).

ಆರ್ಷಮಪ್ಯತ್ರ ಪಶ್ಯಂತಿ ವಿಕರ್ಮಸ್ಥಸ್ಯ ಪಾತನಮ್ ।
ನ ಚಾರ್ಷಾತ್ ಸದೃಶಂ ಕಿಂಚಿತ್ ಪ್ರಮಾಣಂ ವಿದ್ಯತೇ ಕ್ವಚಿತ್ ॥೧೭॥

ಶಾಸ್ತ್ರವಿರುದ್ಧ ಕೆಲಸಗಳನ್ನು ಮಾಡುವವನನ್ನು ದಂಡನೆಗೆ ಒಳಪಡಿಸಬೇಕು. ಇದು ಋಷಿಗಳಿಗೆ ಸಮ್ಮತ. ಯಾವುದೇ ವಿಷಯದಲ್ಲಿ ಋಷಿಗಳು ನೋಡಿರುವ ವೇದಕ್ಕೆ ಸದೃಶವಾದ ಬೇರೆ ಯಾವ ಪ್ರಮಾಣವೂ ಇಲ್ಲ.(1)

ದೇವಾ ಅಪಿ ವಿಕರ್ಮಸ್ಥಂ ಯಾತಯಂತಿ ನರಾಧಮಮ್ ।
ವ್ಯಾಜೇನ ವಿಂದನ್ವಿತ್ತಂ ಹಿ ಧರ್ಮಾತ್ತು ಪರಿಹೀಯತೇ ॥೧೮॥

ವಿರುದ್ಧ ಕರ್ಮಗಳನ್ನು ಮಾಡಿದ ನರಾಧಮನನ್ನು ದೇವತೆಗಳು ಕೆಳಗೆ ಬೀಳಿಸುತ್ತಾರೆ. ಆಪತ್ತಿನಲ್ಲಿ ಇಲ್ಲದಿದ್ದರೂ ಆಪತ್ತಿನ ನೆಪದಿಂದ ಧನಸಂಗ್ರಹವನ್ನು ಮಾಡುವವನು ಧರ್ಮಭ್ರಷ್ಟ.

ಸರ್ವತಃ ಸತ್ಕೃತಃ ಸದ್ಭಿರ್ಭೂತಿಪ್ರಭವಕಾರಣೈಃ ।
ಹೃದಯೇನಾಭ್ಯನುಜ್ಞಾತೋ ಯೋ ಧರ್ಮಸ್ತಸ್ಯ ವಸ್ಯತೇ ॥೧೯॥

ಶ್ರೇಯಸ್ಸುಗಳ ಪ್ರಾಪ್ತಿಗೆ ಕಾರಣರಾದ ಸಜ್ಜನರಿಂದ ಎಲ್ಲ ರೀತಿಗಳಿಂದಲೂ ಯಾವ ಆಚರಣೆಗಳು ಆದರಿಸಲ್ಪಟ್ಟಿವೆಯೋ, ಅಂತರಾತ್ಮಕ್ಕೆ ಒಪ್ಪಿಗೆಯಾಗಿವೆಯೋ ಆ ಆಚರಣೆಗಳು ಧರ್ಮ. ಎಲ್ಲರೂ ಆ ಧರ್ಮಕ್ಕಾಗಿ ಪ್ರವೃತ್ತಿಶೀಲರಾಗುತ್ತಾರೆ.

ಯಶ್ಚತುರ್ಗುಣಸಂಪನ್ನೋ ಧರ್ಮವೇದಸ್ಯ ಮರ್ಮವಿತ್ ।
ಹರೇರಿವ ಹಿ ಧರ್ಮಸ್ಯ ಪದಂ ದುಃಖಂ ಗವೇಷಿತುಮ್ ॥೨೦॥

ಯಾರು ಯಜನ-ಯಾಜನ-ಅಧ್ಯಯನ-ಅಧ್ಯಾಪನ - ಈ ನಾಲ್ಕು ಗುಣಗಳನ್ನು ತನ್ನಲ್ಲಿ ಸಾಧಿಸಿಕೊಂಡಿರುವನೋ ಅವನಿಗೆ ಧರ್ಮಶಾಸ್ತ್ರದ ಮರ್ಮವು ತಿಳಿದಿರುತ್ತದೆ. ಹರಿಯ ಸ್ವರೂಪವನ್ನು ತಿಳಿಯುವುದು ಬಹಳ ಕಷ್ಟ. ಅಂತೆಯೇ ಧರ್ಮದ ಸ್ವರೂಪವನ್ನು ತಿಳಿಯುವುದು ಬಹಳ ಕಷ್ಟ.(2)

ಟಿಪ್ಪಣಿ– (1) 16ನೇ ಶ್ಲೋಕದ 'ತೇ ಬ್ರೂಯುರ್ವಾಕ್ಯಮೀದೃಶಮ್' - ಈ ವಾಕ್ಯಕ್ಕೆ ಲಕ್ಷಾಲಂಕಾರದಲ್ಲಿ ವ್ಯಾಖ್ಯಾನವಿದೆ. ಈ ವ್ಯಾಖ್ಯಾನಕ್ಕೆ ಹೊಂದುವ ಪೂರ್ವಶ್ಲೋಕವು ಈಗ ಸಿಗುತ್ತಿರುವ ಮಹಾಭಾರತ ಪುಸ್ತಕಗಳಲ್ಲಿ ಇಲ್ಲ. 17ನೇ ಶ್ಲೋಕದ ಲಕ್ಷಾಲಂಕಾರ ವ್ಯಾಖ್ಯಾನವೂ ಉಪಲಬ್ಧ ಶ್ಲೋಕಗಳಿಗೆ ಹೊಂದುವುದಿಲ್ಲ.

(2) ಈ ಶ್ಲೋಕದ ಕೆಳಗೆ ಮುದ್ರಿತವಾಗಿರುವ ಲಕ್ಷಾಲಂಕಾರ ವಾಕ್ಯದ ಅಭಿಪ್ರಾಯವು ಅಸ್ಪಷ್ಟ.

ಯಥಾ ಮೃಗಸ್ಯ ವಿದ್ಧಸ್ಯ ಮೃಗವ್ಯಾಧಃ ಪದಂ ನಯೇತ್ ।
ಕಕ್ಷೇ ರುಧಿರಪಾತೇನ ತಥಾ ಧರ್ಮಪದಂ ನಯೇತ್ ॥೨೧॥

ವ್ಯಾಧನು ತನ್ನಿಂದ ಹೊಡೆಯಲ್ಪಟ್ಟ ಮೃಗದ ದಾರಿಯನ್ನು ಕಾಡಿನಲ್ಲಿ ಬಿದ್ದಿರುವ ರಕ್ತದಿಂದ ತಿಳಿಯುತ್ತಾನೆ. ಹಾಗೆಯೇ ಧರ್ಮಾನುಷ್ಠಾನವನ್ನು ಮಾಡುತ್ತಾ ಮಾಡುತ್ತಾ ಧರ್ಮದ ಮಾರ್ಗವನ್ನು ತಿಳಿಯಬೇಕು.

ಏವಂ ಸದ್ಭಿರ್ವಿನೀತೇನ ಪಥಾ ಗಂತವ್ಯಮಚ್ಯುತ ।
ರಾಜರ್ಷೀಣಾಂ ವೃತ್ತಮೇತದವಗಚ್ಛ ಯುಧಿಷ್ಠಿರ ॥೨೨॥

ಚ್ಯುತಿರಹಿತನಾದ ಯುಧಿಷ್ಠಿರ! ಹೀಗೆ (ಈ ಅಧ್ಯಾಯದಲ್ಲಿ ವಿವರಿಸಿದಂತೆ) ಸಜ್ಜನರು ತಿಳಿಸಿದ ದಾರಿಯಲ್ಲಿ ಹೋಗಬೇಕು (ಪೂರ್ವ) ರಾಜರ್ಷಿಗಳ ಈ ನಡವಳಿಕೆಯನ್ನು ನೀನು ತಿಳಿ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಆಪದ್ಧರ್ಮಪರ್ವದಲ್ಲಿ
ಎರಡನೆಯ ಅಧ್ಯಾಯವು ಮುಗಿಯಿತು.

★ ★ ★ ★

ಮೂರನೆಯ ಅಧ್ಯಾಯ

ರಾಜನು ಕೋಶವನ್ನು ಬೆಳೆಸುವ ವಿಧಾನ. ಧನವೃದ್ಧಿಯಿಲ್ಲದ ರಾಜನು ದುರ್ಬಲ. ದಸ್ಯುಗಳ ಸಹವಾಸವನ್ನು ಮಾಡಬಾರದು. ಸಜ್ಜನದಸ್ಯುಗಳ ರೀತಿ.

ಭೀಷ್ಮಃ

ಸ್ವರಾಷ್ಟ್ರಾತ್ ಪರರಾಷ್ಟ್ರಾಚ್ಚ ಕೋಶಂ ಸಂಜನಯೇನ್ನೃಪಃ ।
ಕೋಶಾದ್ಧಿ ಧರ್ಮಃ ಕೌಂತೇಯ ರಾಜ್ಯಮೂಲಂ ಪ್ರವರ್ತತೇ ॥೧॥

ಭೀಷ್ಮ- ರಾಜನು ತನ್ನ ರಾಷ್ಟ್ರದಿಂದ ಮತ್ತು ಪರರಾಷ್ಟ್ರಗಳಿಂದ ತನ್ನ ಬೊಕ್ಕಸವನ್ನು ಬೆಳೆಸಬೇಕು. ಕುಂತೀಸುತ! ರಾಜ್ಯನಿಧಿಯಿಂದಲೇ ಧರ್ಮ ಮತ್ತು ರಾಜ್ಯದ ಬೇರುಗಳು ಸುಸ್ಥಿತಿಯಲ್ಲಿ ಇರುತ್ತವೆ.

ತಸ್ಮಾತ್ ಸಂಜನಯೇತ್ ಕೋಶಂ ಸಂಹೃತ್ಯ ಪರಿಪಾಲಯೇತ್ ।
ಪರಿಪಾಲ್ಯಾನುಗೃಹ್ಣೀಯಾದೇಷ ಧರ್ಮಃ ಸನಾತನಃ ॥೨॥

ಆದ್ದರಿಂದ ಕೋಶವನ್ನು ಬೆಳೆಸಬೇಕು. ಸಂಗ್ರಹಿಸಿದ ಧನವನ್ನು ರಕ್ಷಿಸಬೇಕು. ರಕ್ಷಿಸಿ ಅನುಕೂಲವಾಗುವಂತೆ ಉಪಯೋಗಿಸಬೇಕು. ಇದು ಸನಾತನ ಧರ್ಮ (ಮೌಲ್ಯ).

ನ ಕೋಶಃ ಶುದ್ಧಶೌಚೇನ ನ ನೃಶಂಸೇನ ಜಾಯತೇ ।
ಪದಂ ಮಧ್ಯಮಮಾಸ್ಥಾಯ ಕೋಶಸಂಗ್ರಹಣಂ ಚರೇತ್ ॥೩॥

ಅತಿಶುದ್ಧವಾದ ನಡವಳಿಕೆಗಳಿಂದ ಕೋಶವು ಬೆಳೆಯುವುದಿಲ್ಲ. ಕ್ರೂರ ನಡವಳಿಕೆಗಳಿಂದಲೂ ಬೆಳೆಯುವುದಿಲ್ಲ. ಮಧ್ಯಮಾರ್ಗವನ್ನು ಅವಲಂಬಿಸಿ ಕೋಶ-ಸಂಗ್ರಹವನ್ನು ಮಾಡಬೇಕು.

ಅಬಲಸ್ಯ ಕುತಃ ಕೋಶೋ ಹ್ಯಕೋಶಸ್ಯ ಕುತೋ ಬಲಮ್ ।
ಅಬಲಸ್ಯ ಕುತೋ ರಾಜ್ಯಮರಾಜ್ಞಃ ಶ್ರೀಃ ಕುತೋ ಭವೇತ್ ॥೪॥

ಬಲಹೀನನಿಗೆ ಕೋಶವು (ಧನವೃದ್ಧಿಯು) ಹೇಗೆ ತಾನೇ ಆದೀತು? ಕೋಶಹೀನನಿಗೆ ಬಲವು ಹೇಗೆ ತಾನೇ ಬಂದೀತು? ಬಲಹೀನನಿಗೆ ರಾಜ ಪದವಿಯು ಹೇಗೆ ಲಭಿಸೀತು? ರಾಜನಲ್ಲದವನಿಗೆ ಸಂಪತ್ತು ಹೇಗೆ ತಾನೆ ಒಲಿದೀತು?

ಉಚ್ಚೈರ್ವೃತ್ತೇಃ ಶ್ರಿಯೋ ಹಾನಿರ್ಯಥೈವ ಮರಣಂ ತಥಾ ।
ತಸ್ಮಾತ್ ಕೋಶಂ ಬಲಂ ಮಿತ್ರಾಣ್ಯಥ ರಾಜಾ ವಿವರ್ಧಯೇತ್ ॥೫॥

ಉನ್ನತ ಪದವಿಯಲ್ಲಿ ಇದ್ದವನಿಗೆ ಅಥವಾ ಶ್ರೀಮಂತಿಕೆಯ ಜೀವನವನ್ನು ಮಾಡಿದವನಿಗೆ ಸಂಪತ್ತಿನ ನಾಶವು ಮರಣಕ್ಕೆ ಸಮಾನ. ಆದ್ದರಿಂದ ರಾಜನು, ಬೊಕ್ಕಸವನ್ನು, ಸೇನಾಬಲವನ್ನು, ಪ್ರಜಾಬಲವನ್ನು ಮತ್ತು ಮಿತ್ರರನ್ನು ಬೆಳೆಸಬೇಕು.

ಹೀನಕೋಶಂ ಹಿ ರಾಜಾನಮವಜಾನಂತಿ ಮಾನವಾಃ ।
ನ ಚಾಸ್ಯಾಲ್ಪೇನ ತುಷ್ಯಂತಿ ಕಾರ್ಯಮಭ್ಯುತ್ಸಹಂತಿ ಚ ॥೬॥

ಖಾಲಿ ಬೊಕ್ಕಸದ ರಾಜನ ಬಗ್ಗೆ ಜನರು ಅನಾದರದಿಂದ ವರ್ತಿಸುತ್ತಾರೆ. ಅವನು ಕೊಡುವ ಅಲ್ಪವೇತನ- ಅನುದಾನಗಳಿಂದ ತುಷ್ಟರಾಗುವುದಿಲ್ಲ. ಅವನ ಕೆಲಸಗಳನ್ನು ಮಾಡಲು ಉತ್ಸಾಹವನ್ನು ತೋರುವುದಿಲ್ಲ.

ಶ್ರಿಯೋ ಹಿ ಕಾರಣಾದ್ ರಾಜಾ ಸತ್ಕ್ರಿಯಾಂ ಲಭತೇ ಪರಾಮ್ ।
ಸಾಸ್ಯ ಗೂಹತಿ ಪಾಪಾನಿ ವಾಸೋ ಗುಹ್ಯಮಿವ ಸ್ತ್ರಿಯಾಃ ॥೭॥

ರಾಜನು ವಿಪುಲ ಐಶ್ವರ್ಯವನ್ನು ಹೊಂದಿದ್ದರೆ ಮಾತ್ರ ದೊಡ್ಡ ಗೌರವ-ಆದರಗಳನ್ನು ಪಡೆಯುತ್ತಾನೆ. ಐಶ್ವರ್ಯವು ಇವನ ಪಾಪಕಾರ್ಯಗಳನ್ನು ಮುಚ್ಚುತ್ತದೆ. ವಸ್ತ್ರವು ಗುಪ್ತಾಂಗಗಳನ್ನು ಮುಚ್ಚುವಂತೆ.

ಋದ್ಧಿಮಸ್ಯಾನುವರ್ತಂತೇ ಪುರಾ ವಿಪ್ರಕೃತಾ ಜನಾಃ ।
ಶಾಲಾವೃಕಾ ಇವಾಜಸ್ರಂ ಜಿಘಾಂಸೂನಿವ ವಿಂದತಿ ।
ಈದೃಶಸ್ಯ ಕುತೋ ರಾಜ್ಞಃ ಸುಖಂ ಭರತಸತ್ತಮ ॥೮॥

ಹಿಂದೆ (ರಾಜನಿಂದ) ಹಾನಿಗೆ ಅಥವಾ ಅಪಕಾರಕ್ಕೆ ಒಳಗಾಗಿದ್ದ ಜನರು ರಾಜನ ಸಂಪತ್ತನ್ನು ನೋಡಿ ಅವನನ್ನು ಅನುಸರಿಸುತ್ತಾರೆ. ನರಿಯು ಯಾವಾಗಲೂ ತನ್ನನ್ನು ಕೊಲ್ಲಲು ಬಯಸಿರುವ ವ್ಯಕ್ತಿಯನ್ನು (ಅವನನ್ನು ಕಪಟದಿಂದ ಕೊಲ್ಲಲು) ಆಶ್ರಯಿಸುತ್ತದೆ. ಭರತಕುಲಶ್ರೇಷ್ಠನೇ! ಇಂತಹ ರಾಜನಿಗೆ ಸುಖ ಎಲ್ಲಿಂದ?

ಉದ್ಯಚ್ಛೇದೇವ ನ ಗ್ಲಾಯೇದುದ್ಯಮೋ ಹ್ಯೇವ ಪೌರುಷಮ್ ।
ಅಪ್ಯಪರ್ವಣಿ ಭಜ್ಯೇತ ನ ನಮೇತೇಹ ಕಸ್ಯಚಿತ್ ॥೯॥

ವಿರೋಧಿಗಳ ಮೇಲೆ ಆಕ್ರಮಣವನ್ನೇ ಮಾಡಬೇಕು (ಕುಗ್ಗಬಾರದು). ಆಕ್ರಮಣಶೀಲತೆಯೇ ಪೌರುಷ. ಒಣಗಿದ ಕಾಷ್ಠವು ಗಿಣ್ಣು ಇಲ್ಲದ ಕಡೆಯೂ ಮುರಿದು ಹೋಗುತ್ತದೆ, ಬಗ್ಗುವುದಿಲ್ಲ. ಅಂತೆಯೇ ಯಾರಿಗೂ ಬಗ್ಗಬಾರದು.

ಅಪ್ಯರಣ್ಯಂ ಸಮಾಶ್ರಿತ್ಯ ಚರೇದ್ ಮೃಗಗಣೈಃ ಸಹ ।
ನ ತ್ವೇವೋದ್ಧತಮರ್ಯಾದೈರ್ದಸ್ಯುಭಿಃ ಸಹಿತಶ್ಚರೇತ್ ।
ದಸ್ಯೂನಾಂ ಸುಲಭಾ ಸೇನಾ ರೌದ್ರಕರ್ಮಸು ಭಾರತ ॥೧೦॥

ಅರಣ್ಯಕ್ಕೆ ಹೋಗಿ ಪ್ರಾಣಿಗಳ ಜೊತೆ ಸಂಚರಿಸಬಹುದು. ನಿಯಮ-ರೀತಿ-ನೀತಿಗಳನ್ನು ಮೀರಿದ ದಸ್ಯುಗಳ (ದಸ್ಯುಗಳಂತಹ ಮಂತ್ರಿಗಳ) ಜೊತೆ ವ್ಯವಹರಿಸಬಾರದು. ದಸ್ಯುಗಳಿಗೆ (ದಸ್ಯುಗಳಂತಹ ಮಂತ್ರಿಗಳಿಗೆ) ಭಯಂಕರ ಕೆಲಸಗಳನ್ನು ಮಾಡಲು ಸೇನೆಯು ಸುಲಭವಾಗಿ ಲಭಿಸುತ್ತದೆ. ಅಥವಾ ರೌದ್ರ ಕರ್ಮಗಳನ್ನು ಮಾಡಲು ದಸ್ಯುಗಳ ಸೇನೆಯು ಸುಲಭವಾಗಿ ಸಿಗುತ್ತದೆ.

ಏಕಾಂತೇನ ಹ್ಯಮರ್ಯಾದಾತ್ ಸರ್ವೋಽಪ್ಯುದ್ವಿಜತೇ ಜನಃ ।
ದಸ್ಯವೋಽಪ್ಯುಪಶಕಂತೇ ನಿರನುಕ್ರೋಶಕಾರಿಣಃ ॥೧೧॥

ನಿಯಮ, ರೀತಿ-ನೀತಿಗಳನ್ನು ಸಂಪೂರ್ಣವಾಗಿ ಮೀರಿದವರನ್ನು ಕಂಡರೆ ಎಲ್ಲರೂ ಹೆದರುತ್ತಾರೆ. ನಿರ್ದಯವಾಗಿ ವರ್ತಿಸುವ ದಸ್ಯುಗಳೂ ಇವರಿಗೆ ಹೆದರುತ್ತಾರೆ.

ಸ್ಥಾಪಯೇದೇವ ಮರ್ಯಾದಾಂ ಜನಚಿತ್ತಪ್ರಸಾದಿನೀಮ್ ।
ಅಲ್ಪಾಪ್ಯಥೇಹ ಮರ್ಯಾದಾ ಲೋಕೇ ಭವತಿ ಪೂಜಿತಾ ॥೧೨॥

ಜನಗಳ ಮನಸ್ಸಿಗೆ ಪ್ರಸನ್ನತೆಯನ್ನುಂಟು ಮಾಡುವ ವ್ಯವಸ್ಥೆಯನ್ನು (ಇತಿ-ಮಿತಿಗಳನ್ನು) ಸ್ಥಾಪಿಸಲೇಬೇಕು. ಸ್ವಲ್ಪ ಕಟ್ಟುಪಾಡು ಕೂಡ ಲೋಕದಲ್ಲಿ ಮಾನ್ಯವಾಗುತ್ತದೆ.

ನಾಯಂ ಲೋಕೋಽಸ್ತಿ ನ ಪರ ಇತಿ ವ್ಯವಸಿತೋ ಜನಃ ।
ನಾಲಂ ಗಂತುಂ ಚ ವಿಶ್ವಾಸಂ ನಾಸ್ತಿಕೇ ಭಯಶಂಕಿತೈಃ ॥೧೩॥

ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ ಎಂದು ನಿಶ್ಚಯಿಸಿರುವ ಜನರೂ ಇದ್ದಾರೆ. ನಾಸ್ತಿಕ್ಯದ ವಿಷಯದಲ್ಲಿ ಭಯ ಮತ್ತು ಸಂಶಯಗಳನ್ನು ಹೊಂದಿದವರು ನಾಸ್ತಿಕಜನರ ಬಗ್ಗೆ ವಿಶ್ವಾಸವನ್ನು ತಾಳುವುದು ಯುಕ್ತವಲ್ಲ.

ಯಥಾ ಸದ್ಭಿಃ ಪರಾದಾನಮಹಿಂಸಾ ದಸ್ಯುಭಿಸ್ತಥಾ ।
ಅನುರಜ್ಯಂತಿ ಭೂತಾನಿ ಸಮರ್ಯಾದೇಷು ದಸ್ಯುಷು ॥೧೪॥

(೧) ಸಜ್ಜನ ದಸ್ಯುಗಳು ಪರವಿತ್ತಾಪಹಾರವನ್ನು ಮಾಡುತ್ತಾರೆ; ಅದರಲ್ಲಿ ಹಿಂಸೆಯು ಇರುವುದಿಲ್ಲ. (೨) ಸದ್ಗುಣವಂತರಾದ, ಹಿಂಸೆ ಮಾಡದ ದಸ್ಯುಗಳಿಂದ ಪರವಿತ್ತಾಪಹರಣವು ಆಗುತ್ತದೆ. ಇದು ಹೇಗೆ ಎಂದು ಹೇಳುತ್ತೇನೆ- (ಶ್ರೀವಾದಿರಾಜರು ತಮ್ಮ ಲಕ್ಷಾಲಂಕಾರ ವ್ಯಾಖ್ಯಾನದಲ್ಲಿ ಈ ಅರ್ಥವನ್ನು ಹೇಳಿದ್ದಾರೆ). ಲೋಕವ್ಯವಸ್ಥೆಯನ್ನು ಮೀರದ ದಸ್ಯುಗಳ ಮೇಲೆ ಪ್ರಜೆಗಳು ಅನುರಾಗವನ್ನು ಹೊಂದಿರುತ್ತಾರೆ.

ಅಯುದ್ಧಮನಸಾಂ ಬಂಧೋ ದಾರಾಮರ್ಶಃ ಕೃತಘ್ನತಾ ।
ಬ್ರಹ್ಮವಿತ್ತಸ್ಯ ಚಾದಾನಂ ನಿಃಶೇಷಕರಣಂ ತಥಾ ॥೧೫॥

ಸ್ತ್ರಿಯಾಂ ಮೋಹಃ ಪಥಿ ಸ್ಥಾನಂ ದಸ್ಯುಷ್ವೇತದ್ ವಿಗರ್ಹಿತಮ್ ।
ಸ ಏಷ ಏವ ಭವತಿ ದಸ್ಯುರೇತಾನಿ ವರ್ಜಯನ್ ॥೧೬॥

ಯುದ್ಧಮಾಡಲಾಗದವರ ಮೇಲೆ ನಿರ್ಬಂಧ, ಪರಪತ್ನಿಯರ ಮೇಲೆ ಬಲಾತ್ಕಾರ, ಕೃತಘ್ನತೆ, ಬ್ರಾಹ್ಮಣವಿತ್ತದ ಅಪಹಾರ, ಸರ್ವಸ್ವ ಅಪಹಾರ, ಸ್ತ್ರೀ ಅಪಹಾರ, ಅವಳ ದಾರಿಗೆ ಅಡ್ಡನಿಲ್ಲುವುದು- ಇವುಗಳನ್ನು ದಸ್ಯುಗಳೇ ನಿಂದಿಸಿದ್ದಾರೆ. ಇವುಗಳನ್ನು ಮಾಡಬಾರದು ಎಂದು ಅವರೇ ನಿರ್ಧರಿಸಿದ್ದಾರೆ. ಇವುಗಳನ್ನು ಮಾಡದವನು ಸಜ್ಜನ ದಸ್ಯು.

ಅಭಿಸಂದಧತೇ ಯೇ ನ ವಿನಾಶಾಯಾಸ್ಯ ಭಾರತ ।
ನಶೇಷಮೇವೋಪಲಭ್ಯ ನ ಕುರ್ವಂತೀತಿ ನಿಶ್ಚಯಃ ॥೧೭॥

ಯಾವ ದರೋಡೆಕೋರರು ಇವನ (ದರೋಡೆಗೆ ಒಳಗಾಗುವವನ) ವಿನಾಶವನ್ನು ಬಯಸುವುದಿಲ್ಲವೋ ಅವರು ಏನೂ ಉಳಿಯದಂತೆ ಅಪಹರಿಸುವುದಿಲ್ಲ. ಇದು ನಿಶ್ಚಯ.

ತಸ್ಮಾತ್ ಸಶೇಷಂ ಕರ್ತವ್ಯಂ ಸ್ವಾಧೀನಮಪಿ ದಸ್ಯುಭಿಃ ।
ನ ಬಲಸ್ಥೋಽಹಮಸ್ಮೀತಿ ನೃಶಂಸಾನಿ ಸಮಾಚರೇತ್ ॥೧೮॥

ಆದ್ದರಿಂದ ದಸ್ಯುಗಳು ಎಲ್ಲವನ್ನೂ ಅಪಹರಿಸುವ ಅವಕಾಶವನು ಹೊಂದಿದ್ದರೂ ಸ್ವಲ್ಪ ಉಳಿಸಿಯೇ ಅಪಹರಿಸಬೇಕು. 'ಬಲಶಾಲಿಯಾಗಿದ್ದೇನೆ' ಎಂಬ ಭಾವನೆಯಿಂದ ಕ್ರೂರಕರ್ಮಗಳನ್ನು ಮಾಡಬಾರದು.

ಸಶೇಷಕಾರಿಣಸ್ತಾತ ಶೇಷಂ ಪಶ್ಯಂತಿ ಸರ್ವತಃ ।
ನಿಃಶೇಷಕಾರಿಣೋ ನಿತ್ಯಮಶೇಷಕರಣಾದ್ ಭಯಮ್ ॥೧೯॥

ಸ್ವಲ್ಪ ಉಳಿಸಿ ಅಪಹಾರ ಮಾಡುವ ಚೋರನ ಸಂಪತ್ತು ಸ್ವಲ್ಪ ಉಳಿಯುತ್ತದೆ. ಇದನ್ನು ಎಲ್ಲ ಕಡೆ ಜನರು ನೋಡಿದ್ದಾರೆ. ಏನೂ ಉಳಿಸದೆ ಅಪಹಾರ ಮಾಡುವ ಚೋರನ ಸಂಪತ್ತು ನಿಶ್ಶೇಷವಾಗಿ ನಾಶವಾಗುವ ಭಯವಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂರನೆಯ ಅಧ್ಯಾಯವು ಮುಗಿಯಿತು.

ನಾಲ್ಕನೆಯ ಅಧ್ಯಾಯ

ಧರ್ಮದಿಂದ ಅರ್ಥವನ್ನು ಸಾಧಿಸಬೇಕು. ಧರ್ಮ-ಅಧರ್ಮಗಳ ಫಲಗಳು ಕಾಲಾಂತರದಲ್ಲಿ ಲಭಿಸುತ್ತವೆ. ಬಲವು ಧರ್ಮದ ತಳಪಾಯ.

ಭೀಷ್ಮಃ

ಅತ್ರ ಕಾಮಂದವಚನಂ ಕೀರ್ತಯಂತಿ ಪುರಾವಿದಃ ।
ಪ್ರತ್ಯಕ್ಷಾವೇವ ಧರ್ಮಾರ್ಥೌ ಕ್ಷತ್ರಿಯಸ್ಯ ವಿಜಾನತಃ ।
ತತ್ರ ನ ವ್ಯವಧಾತವ್ಯಂ ಪರೋಕ್ಷಾ ಧರ್ಮಯಾಪನಾ ॥೧॥

ಪ್ರಾಚೀನ ವಿಷಯಗಳನ್ನು ತಿಳಿದವರು ಕಾಮಂದ ಋಷಿಯ ವಚನಗಳನ್ನು ಹೇಳುತ್ತಾರೆ. ಪ್ರಾಜ್ಞನಾದ ಕ್ಷತ್ರಿಯನಿಗೆ ಧರ್ಮ-ಅರ್ಥಗಳು ಸ್ಪಷ್ಟವಾಗಿಯೇ ತಿಳಿಯುತ್ತವೆ. (ಧರ್ಮ=ಸಾರ್ಥಕ ಬದುಕಿಗೆ ಅನುಕೂಲವಾಗುವ ಮತ್ತು ಸರ್ವಹಿತಕರವಾದ ಮೌಲ್ಯಗಳು. ಅರ್ಥ-ಧರ್ಮಾನುಗುಣವಾದ ಬಹುವಿಧ ಸಂಪತ್ತು). ಅವೆರಡರ ಬಗ್ಗೆ= ಧರ್ಮ-ಅರ್ಥಗಳನ್ನು ಸಾಧಿಸುವ ಕ್ರಮಗಳನ್ನು ಕೈಗೊಳ್ಳುವ ವಿಷಯದಲ್ಲಿ ವಿಳಂಬ ಮಾಡಬಾರದು. ಧರ್ಮಾಚರಣೆಯನ್ನು ಮುಂದೆ ಹಾಕುವುದರ ಪರಿಣಾಮವು ಕೂಡಲೇ ಗೋಚರವಾಗುವುದಿಲ್ಲ.

ಅಧರ್ಮೋ ಧರ್ಮ ಇತ್ಯೇತದ್ಯಥಾ ವೃಕ್ಷಫಲಂ ತಥಾ ।
ಧರ್ಮಾಧರ್ಮಫಲೇ ಜಾತು ನ ದದರ್ಶೇಹ ಕಶ್ಚನ ॥೨॥

ಧರ್ಮ ಮತ್ತು ಅಧರ್ಮ - ಇವೆರಡರ ಫಲವು ಮರದ ಹಣ್ಣಿನಂತೆ. ಮರವು ಬೆಳೆದ ಬಹಳ ಕಾಲಾನಂತರ ಅದರಲ್ಲಿ ಫಲವು ಹುಟ್ಟುತ್ತದೆ. ಧರ್ಮದ ಮತ್ತು ಅಧರ್ಮದ ಫಲಗಳನ್ನು ಯಾವ ಕಾಲದಲ್ಲೂ, ಯಾರೂ ನೋಡಿಲ್ಲ.

ಬುಭೂಷೇದ್ ಬಲಮೇವೇಹ ಸರ್ವಂ ಬಲವತೋ ವಶೇ ।
ಶ್ರಿಯಂ ಬಲಮಮಾತ್ಯಾಂಶ್ಚ ಬಲವಾನಿಹ ವಿಂದತಿ ॥೩॥

ಸುಸ್ಥಿತಿಯಲ್ಲಿ ಇರಲು ಬಯಸುವವನು ಬಲವನ್ನು (ಅರ್ಥಬಲ, ಬಾಹುಬಲ ಮತ್ತು ಪ್ರಜಾಬಲ) ಸಾಧಿಸಬೇಕು. ಎಲ್ಲವೂ ಬಲಶಾಲಿಯ ವಶವಾಗುತ್ತದೆ. ಬಲಶಾಲಿಯಾದವನು ಸಂಪತ್ತನ್ನು, ಸೈನ್ಯಬಲವನ್ನು ಮತ್ತು ಸಮರ್ಥಮಂತ್ರಿಗಳನ್ನೂ ಹೊಂದುತ್ತಾನೆ.

ಯೋ ಹ್ಯನಾಢ್ಯಃ ಸ ಪತಿತಸ್ತದುಚ್ಛಿಷ್ಟಂ ಯದಲ್ಪಕಮ್ ।
ಬಹ್ವಪಥ್ಯಂ ಬಲವತಿ ನ ಕಿಂಚಿತ್ಕುರುತೇ ಭಯಾತ್ ॥೪॥

ಯಾರಿಗೆ ಸಮೃದ್ಧಿಯು ಇಲ್ಲವೋ ಅವನು ಪತಿತ (ಪತಿತನಂತೆ). ಯಾವುದು ಅಲ್ಪವೋ ಅದು ಉಚ್ಛಿಷ್ಟ (ಉಚ್ಛಿಷ್ಟದಂತೆ). ಬಲಶಾಲಿ ವ್ಯಕ್ತಿಯಲ್ಲಿ ಬಹಳ ದೋಷಗಳಿರುತ್ತವೆ. ಆದರೆ ಭಯದಿಂದ ಯಾರೂ ಏನೂ ಮಾಡುವುದಿಲ್ಲ.

ಉಭೌ ಸತ್ಯಾಧಿಕಾರೌ ತೌ ತ್ರಾಯೇತೇ ಮಹತೋ ಭಯಾತ್ ।
ಅತಿ ಧರ್ಮಾದ್ ಬಲಂ ಮನ್ಯೇ ಬಲಾದ್ಧರ್ಮಃ ಪ್ರವರ್ತತೇ ॥೫॥

ಸತ್ಯದ ಶಕ್ತಿಯನ್ನು ಹೊಂದಿರುವ (ಸತ್ಯದ ತಳದಿಯ ಮೇಲೆ ನಿಂತಿರುವ) ಅವೆರಡು (ಬಲ ಮತ್ತು ಧರ್ಮಗಳು) ದೊಡ್ಡ ಭಯದಿಂದ ರಕ್ಷಿಸುತ್ತವೆ. ಧರ್ಮಕ್ಕಿಂತ ಬಲವು ದೊಡ್ಡದು. ಬಲದಿಂದ ಧರ್ಮವು ಮುನ್ನಡೆಯುತ್ತದೆ ಮತ್ತು ಪ್ರಕೃಷ್ಟವಾಗಿ ಇರುತ್ತದೆ.

ಬಲೇ ಪ್ರತಿಷ್ಠಿತೋ ಧರ್ಮೋ ಧರಣ್ಯಾಮಿವ ಜಂಗಮಃ ।
ಧೂಮೋ ವಾಯೋರಿವ ವಶಂ ಬಲಂ ಧರ್ಮೋಽನುವರ್ತತೇ ॥೬॥

ಧರ್ಮವು ಬಲದ ಆಸರೆಯಲ್ಲಿ ಸುಸ್ಥಿತಿಯಲ್ಲಿರುತ್ತದೆ. ಜಂಗಮವು (ಚಲನಶೀಲ ಪದಾರ್ಥವು) ಭೂಮಿಯ ಮೇಲೆ ಹೇಗೆ ಹಾಗೆ. ಹೊಗೆಯು ಗಾಳಿಗೆ ವಶವಾಗಿರುವಂತೆ ಧರ್ಮವು ಬಲದ ಅನುಯಾಯಿ.

ಅನೀಶ್ವರೋ ಬಲಂ ಧರ್ಮೋ ದ್ರುಮಂ ವಲ್ಲೀವ ಸಂಶ್ರಿತಾ ।
ವಶ್ಯೋ ಬಲವತಾಂ ಧರ್ಮಃ ಸುಖಂ ಭೋಗವತಾಮಿವ ।
ನಾಸ್ಯಸಾಧ್ಯಂ ಬಲವತಾಂ ಸರ್ವಂ ಬಲವತಾಂ ಶುಚಿ ॥೭॥

ಸ್ವಯಂ ಅಸಮರ್ಥವಾದ ಧರ್ಮವು ಬಲವನ್ನು ಅವಲಂಬಿಸಿದೆ. ಬಳ್ಳಿಯು ಮರವನ್ನು ಆಶ್ರಯಿಸಿರುವಂತೆ ಧರ್ಮವು ಬಲಶಾಲಿಗಳಿಗೆ ವಶವಾಗಿರುತ್ತದೆ. ಸುಖವು ಭೋಗವಸ್ತುಗಳನ್ನು ಸಮೃದ್ಧವಾಗಿ ಹೊಂದಿದವರಿಗೆ ವಶವಾಗಿರುವಂತೆ. ಬಲಶಾಲಿಗಳು ಸಾಧಿಸಲಾಗದ ಯಾವ ವಿಷಯವೂ ಇಲ್ಲ. ಬಲಶಾಲಿಗಳಿಗೆ ಸೇರಿದ ಎಲ್ಲವೂ ಶುದ್ಧ.

ದುರಾಚಾರಃ ಕ್ಷೀಣಬಲಃ ಪರಿಮಾಣಂ ನಿಯಚ್ಛತಿ ।
ಅಥ ತಸ್ಮಾದುದ್ವಿಜತೇ ಸರ್ವೋ ಲೋಕೋ ವೃಕಾದಿವ ॥೮॥

ಕೆಟ್ಟ ನಡತೆಯ ಬಲಹೀನ ರಾಜನು ತನ್ನ ಮತ್ತು ತನ್ನ ದೇಶದ ಬೆಲೆಯನ್ನು (ಗೌರವ- ಮಹತ್ವಗಳನ್ನು) ಕಡಿಮೆ ಮಾಡುತ್ತಾನೆ. ಅಂತಹ ರಾಜನಿಂದ ಜನಗಳು ಉದ್ವೇಗಕ್ಕೆ ಒಳಗಾಗುತ್ತಾರೆ. ತೋಳದ ಉಪಸ್ಥಿತಿಯಿಂದ ಹೇಗೆ ಹಾಗೆ.

ಅಪಧ್ವಸ್ತೋ ಹ್ಯವಮತೋ ದುಃಖಂ ಜೀವತಿ ಜೀವಿತಮ್ ।
ಜೀವಿತಂ ಯದವಕ್ಷಿಪ್ತಂ ಯಚ್ಚೈವ ಮರಣಂ ತಥಾ ॥೯॥

ಐಶ್ವರ್ಯಭ್ರಷ್ಟನಾದವನು ಮತ್ತು ಅವಗಣನೆಗೆ ಒಳಗಾದವನು ದುಃಖಮಯವಾದ ಬದುಕನ್ನು ಸಾಗಿಸುತ್ತಾನೆ. ಅವಗಣನೆಗೆ ಒಳಗಾದ ಜೀವನವು ಮರಣದಂತೆ.

ಯದೇನಮಾಹುಃ ಪಾಪೇನ ಚಾರಿತ್ರೇಣ ವಿವಕ್ಷಿತಮ್ ।
ಸ ಭೃಶಂ ತಪ್ಯತೇಽನೇನ ವಾಕ್‌ಶಲ್ಯೇನ ಪರಿಕ್ಷತಃ ॥೧೦॥

ಇಂತಹ ರಾಜನನ್ನು 'ಕೆಟ್ಟ ನಡತೆಗಳಿಂದ ಹಾಳಾದವನು' ಎಂದು ಹೇಳುತ್ತಾರೆ. ಆಗ ಆ ರಾಜನು ಈ ಮಾತಿನ ಶಲ್ಯದಿಂದ ಘಾಸಿಗೊಂಡು ಬಹಳ ಪರಿತಪಿಸುತ್ತಾನೆ.

ಅತ್ರೈತದಾಹುರಾಚಾರ್ಯಾಃ ಪಾಪಸ್ಯ ಪರಿಮೋಕ್ಷಣೇ ।
ತ್ರಯೀಂ ವಿದ್ಯಾಂ ನಿಷೇವೇತ ತಥೋಪಾಸೀತ ಸ ದ್ವಿಜಾನ್ ॥೧೧॥

ಇಂತಹ ಸ್ಥಿತಿಯಲ್ಲಿರುವವನ ಬಗ್ಗೆ ಆಚಾರ್ಯರುಗಳು (ಶಾಸ್ತ್ರೋಕ್ತ ಪರಿಹಾರವನ್ನು ಬಲ್ಲವರು) ಹೀಗೆ ಹೇಳುತ್ತಾರೆ : ಪಾಪ ಪರಿಹಾರಕ್ಕಾಗಿ ವೇದವಿದ್ಯೆಯನ್ನು ಅವಲಂಬಿಸಬೇಕು. ಬ್ರಹ್ಮಜ್ಞಾನಿಗಳ ಸೇವೆಯನ್ನು ಮಾಡಬೇಕು.

ಪ್ರಸಾದಯೇನ್ಮಧುರಯಾ ವಾಚಾಪ್ಯಥ ಚ ಕರ್ಮಣಾ ।
ಮಹಾಮನಾಶ್ಚೈವ ಭವೇದ್ ವಿವಹೇಚ್ಚ ಮಹಾಕುಲೇ ॥೧೨॥

ಮಧುರವಾದ ಮಾತುಗಳಿಂದ ಮತ್ತು ಕೃತಿಗಳಿಂದ ಸಂತೋಷಪಡಿಸಬೇಕು. ಉದಾರ ಮನಸ್ಸಿನವನು ಆಗಬೇಕು. ಮಹಾಕುಲದಲ್ಲಿ ಜನಿಸಿದ ಕನ್ಯೆಯನ್ನು ಮದುವೆಯಾಗಬೇಕು.

ಇತ್ಯಸ್ತೀತಿ ವದೇದೇವ ಪರೇಷಾಂ ಕೀರ್ತಯನ್ ಗುಣಾನ್ ।
ಜಪೇದುದಕಶೀಲಃ ಸ್ಯಾತ್ ಪೇಶಲೋ ನಾತಿಜಲ್ಪನಃ ॥೧೩॥

ಪರಲೋಕವು ಇದೆ ಎಂದೇ ಹೇಳಬೇಕು. ಪರರ ಗುಣಗಳನ್ನು ಹೇಳಬೇಕು. ಸ್ನಾನ ಮಾಡಿ ಮಂತ್ರಗಳನ್ನು ಜಪಿಸಬೇಕು. ಮೃದುವೂ, ಮಿತಭಾಷಿಯೂ ಆಗಿರಬೇಕು.

ಬ್ರಹ್ಮ ಕ್ಷತ್ರಂ ಸಂಪ್ರವಿಶೇದ್ ಬಹು ಕೃತ್ವಾ ಸುದುಷ್ಕೃತಮ್ ।
ಉಚ್ಯಮಾನೋಽಪಿ ಲೋಕೇನ ಬಹು ತತ್ತದಚಿಂತಯನ್ ॥೧೪॥

ಬಹಳ ದುಷ್ಕರ್ಮಗಳನ್ನು ಮಾಡಿದ ಕ್ಷತ್ರಿಯನು ಅದರ ಪರಿಹಾರಕ್ಕಾಗಿ ಬ್ರಹ್ಮಜ್ಞಾನಿಗಳನ್ನು ಆಶ್ರಯಿಸಬೇಕು (ಲಕ್ಷಾಲಂಕಾರದ ಪ್ರಕಾರ ಹೀಗೆ ಅರ್ಥ). ಜನರು ಬಹಳ ನಿಂದನೆಯ ಮಾತುಗಳನ್ನು ಆಡಿದರೂ ಅವುಗಳ ಬಗ್ಗೆ ಚಿಂತಿಸಬಾರದು.

ಅಪಾಪೋ ಹ್ಯೇವಮಾಚಾರಃ ಕ್ಷಿಪ್ರಂ ಬಹುಮತೋ ಭವೇತ್ ।
ಸುಖಂ ವಿತ್ತಂ ಚ ಭುಂಜೀತ ವೃತ್ತೇನೈತೇನ ಗೋಪಯನ್ ।
ಲೋಕೇ ಚ ಲಭತೇ ಪೂಜಾಂ ಪರತ್ರ ಚ ಮಹತ್ಫಲಮ್ ॥೧೫॥

ಹೀಗೆ ನಡೆದುಕೊಳ್ಳುವ ರಾಜನು ಬೇಗನೆ ಪಾಪಗಳಿಂದ ಬಿಡುಗಡೆ ಪಡೆದು ಎಲ್ಲರ ಆದರಕ್ಕೆ ಪಾತ್ರನಾಗುತ್ತಾನೆ. ಈ ನಡವಳಿಕೆಯಿಂದ ತನ್ನನ್ನು ರಕ್ಷಿಸಿಕೊಂಡು ಸುಖವನ್ನು ಅನುಭವಿಸುವನು. ವಿಪುಲ ಸಂಪತ್ತನ್ನೂ ಪಡೆಯುತ್ತಾನೆ. ಲೋಕದಲ್ಲಿ ಗೌರವಕ್ಕೆ ಪಾತ್ರನಾಗುತ್ತಾನೆ. ಪರಲೋಕದಲ್ಲೂ ಮಹಾಫಲವನ್ನು ನಡೆಯುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ನಾಲ್ಕನೆಯ ಅಧ್ಯಾಯವು ಮುಗಿಯಿತು.

★ ★ ★ ★

ಐದನೆಯ ಅಧ್ಯಾಯ

ಲೋಕ ಮರ್ಯಾದೆಯನ್ನು ಪಾಲಿಸುವ ದಸ್ಯುಗಳಿಗೆ
ಸದ್ಗತಿಯಾಗುತ್ತದೆ. ಕಾಪವ್ಯ ಚರಿತ್ರೆ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಯಥಾ ದಸ್ಯುಃ ಸಮರ್ಯಾದಃ ಪ್ರೇತ್ಯಭಾವೇ ನ ನಶ್ಯತಿ ॥೧॥

ಈ ವಿಷಯದಲ್ಲಿ=ದಸ್ಯುವು ಲೋಕಮರ್ಯಾದೆಯನ್ನು ಪಾಲಿಸಿದರೆ ಅವನಿಗೆ ಮರಣಾನಂತರ ದುರ್ಗತಿಯಾಗುವುದಿಲ್ಲ ಎಂಬ ವಿಷಯದಲ್ಲಿ ಪುರಾತನ ಇತಿಹಾಸವನ್ನು ಉದಾಹರಿಸುತ್ತಾರೆ.

ಪ್ರಹರ್ತಾ ಮತಿಮಾನ್ ಶೂರಃ ಶ್ರುತವಾನನೃಶಂಸವಾನ್ ।
ರಕ್ಷನ್ಕ್ಷಯಿಣಂ ಧರ್ಮಂ ಬ್ರಹ್ಮಣ್ಯೋ ಗುರುಪೂಜಕಃ ॥೨॥

ನಿಷಾದ್ಯಾಂ ಕ್ಷತ್ರಿಯಾಜ್ಜಾತಃ ಕ್ಷತ್ರಧರ್ಮಾನುಪಾಲಕಃ ।
ಕಾಪವ್ಯೋ ನಾಮ ನೈಷಾದಿರ್ದಸ್ಯುತ್ವಾತ್ ಸಿದ್ಧಿಮಾಪ್ತವಾನ್ ॥೩॥

ಮಹಾಕುಶಲನೂ, ವಿವೇಕಿಯೂ, ಶೂರನೂ, ಕ್ರೌರ್ಯರಹಿತನೂ, ಧರ್ಮರಕ್ಷಕನೂ, ಬ್ರಾಹ್ಮಣರಲ್ಲಿ ಗೌರವವಿದ್ದವನೂ, ಹಿರಿಯರನ್ನೂ ಆದರಿಸುವವನೂ, ಕ್ಷತ್ರಿಯನಿಂದ ನಿಷಾದ ಸ್ತ್ರೀಯಲ್ಲಿ ಹುಟ್ಟಿದವನೂ, ಕ್ಷತ್ರಿಯ ಧರ್ಮನಿಷ್ಠನೂ ಆಗಿದ್ದ ಕಾಪವ್ಯ ಎಂಬ ಬೇಡನು ದಸ್ಯು ಜೀವನದಿಂದಲೇ ಸಿದ್ಧಿಯನ್ನು ಪಡೆದನು.

ಅರಣ್ಯೇ ಸಾಯಂ ಪೂರ್ವಾಹ್ಣೇ ಮೃಗಯೂಥಪ್ರಕೋಪಿತಾ ।
ವಿಧಿಜ್ಞೋ ಮೃಗಜಾತೀನಾಂ ನಿಪಾತಾನಾಂ ಚ ಕೋವಿದಃ ॥೪॥

ಸರ್ವಕಾನನದೇಶಜ್ಞಃ ಪಾರಿಯಾತ್ರಚರಃ ಸದಾ ।
ಧರ್ಮಜ್ಞಃ ಸರ್ವಭೂತಾನಾಮಮೋಘೇಷುರ್ದೃಢಾಯುಧಃ ॥೫॥

ಅವನು ಸಾಯಂಕಾಲ- ಪ್ರಾತಃಕಾಲಗಳಲ್ಲಿ ಪ್ರಾಣಿಗಳ ಬೇಟೆಯಾಡುತ್ತಿದ್ದನು. ಪ್ರಾಣಿ ಸಮೂಹದ ರೀತಿಗಳನ್ನು ತಿಳಿದಿದ್ದನು. ಅವುಗಳ ಪತನವನ್ನು ತಿಳಿದಿದ್ದನು. ಎಲ್ಲ ಅರಣ್ಯಪ್ರದೇಶಗಳ ಪರಿಚಯವು ಅವನಿಗೆ ಇತ್ತು. ಪಾರಿಯಾತ್ರ ಎಂಬ

ಪರ್ವತದಲ್ಲಿ ಸಂಚರಿಸುತ್ತಿದ್ದವನು. ಎಲ್ಲ ಪ್ರಾಣಿಗಳ ಸ್ವಭಾವಗಳನ್ನು ತಿಳಿದಿದ್ದನು. ಅವನ ಬಾಣಗಳು ಗುರಿತಪ್ಪುತ್ತಿರಲಿಲ್ಲ. ದೃಢವಾದ ಆಯುಧಗಳನ್ನು ಹೊಂದಿದ್ದನು.

ಅಪ್ಯನೇಕಶತಾಃ ಸೇನಾ ಏಕ ಏವ ಜಿಗಾಯ ಸಃ ।
ಸ ವೃದ್ಧಾವಂಧಪಿತರೌ ಮಹಾರಣ್ಯೇಽಭ್ಯಪೂಜಯತ್ ॥೬॥

ಮಧುಮಾಂಸೈರ್ಮೂಲಫಲೈರನ್ನೈರುಚ್ಚಾವಚೈರಪಿ ।
ಸತೃತ್ಯ ಭೋಜಯಾಮಾಸ ಸಮ್ಯಕ್ಪರಿಚಚಾರ ಚ ॥೭॥

ನೂರಾರು ಸಂಖ್ಯೆಯ ಸೇನೆಯನ್ನು ಒಬ್ಬನೇ ಜಯಿಸುತ್ತಿದ್ದನು. ವೃದ್ಧರೂ, ಅಂಧರೂ ಆಗಿದ್ದ ತಾಯಿಗಳನ್ನು ಆದರದಿಂದ ಪೋಷಿಸುತ್ತಿದ್ದನು. ಮಧು, ಮಾಂಸ, ಮೂಲ, ಫಲ , ನಾನಾ ವಿಧವಾದ ಅನ್ನ-ಇವುಗಳಿಂದ ಅವರಿಗೆ ಭೋಜನ ಮಾಡಿಸುತ್ತಿದ್ದನು. ಅವರ ಸೇವೆಯನ್ನು ಚೆನ್ನಾಗಿ ಮಾಡುತ್ತಿದ್ದನು.

ಆರಣ್ಯಕಾನ್ ಪ್ರವ್ರಜಿತಾನ್ ಬ್ರಾಹ್ಮಣಾನ್ ಪರಿಪಾಲಯನ್ ।
ಅಪಿ ತೇಭ್ಯೋ ಮೃಗಾನ್ ಹತ್ವಾ ನಿನಾಯ ಚ ಮಹಾವನೇ ॥೮॥

ವಾನಪ್ರಸ್ಥಮತ್ತು ಸಂನ್ಯಾಸಿ ಬ್ರಾಹ್ಮಣರನ್ನು ರಕ್ಷಿಸುತ್ತಾ , ಅವರಿಗಾಗಿ ಮೃಗಗಳನ್ನು ಕೊಂದು ಅರ್ಪಿಸುತ್ತಿದ್ದನು.

ಯೇ ಸ್ಮ ನ ಪ್ರತಿಗೃಹ್ಣಂತಿ ದಸ್ಯುಭೋಜನಶಂಕಯಾ ।
ತೇಷಾಮಾಸಾದ್ಯ ಗೇಹೇಷು ಕಾಲ್ಯ ಏವ ಸ ಗಚ್ಛತಿ ॥೯॥

ದರೋಡೆಕೋರನಿಂದ ಲಭಿಸಿದ ಆಹಾರವನ್ನೂ ತಿನ್ನಬಾರದು ಎಂಬ ವ್ರತವಿದ್ದವರಿಗೆ ಫಲ-ಮೂಲ ಮೊದಲಾದವುಗಳನ್ನು ಪ್ರಾತಃಕಾಲದಲ್ಲೇ ಬೇರೆಯವರ ಮೂಲಕ ತಲುಪಿಸುತ್ತಿದ್ದನು.

ತಂ ಬಹೂನಿ ಸಹಸ್ರಾಣಿ ಗ್ರಾಮಣೇತ್ವೇನ ವವ್ರಿರೇ ।
ನಿರ್ಮರ್ಯಾದಾನಿ ದಸ್ಯೂನಾಂ ನಿರನುಕ್ರೋಶಕಾರಿಣಾಮ್ ॥೧೦॥

ಲೋಕಮರ್ಯಾದೆಯನ್ನು (ವ್ಯವಸ್ಥೆಯನ್ನು) ಮೀರಿದ, ನಿರ್ದಯವಾಗಿ ನಡೆದುಕೊಳ್ಳುತ್ತಿದ್ದ ಸಾವಿರಾರು ದಸ್ಯುಗಳು ಈ ಕಾಪವ್ಯನನ್ನು ತಮ್ಮ ಗ್ರಾಮನಾಯಕನನ್ನಾಗಿ ಆರಿಸಿದ್ದನು.

ದಸ್ಯವಃ

ಮುಹೂರ್ತದೇಶಕಾಲಜ್ಞ ಪ್ರಾಜ್ಞ ಶೀಲದೃಢಾಯುಧ ।
ಗ್ರಾಮಣೀರ್ಭವ ನೋ ಮುಖ್ಯಃ ಸರ್ವೇಷಾಮೇವ ಸಮ್ಮತಃ ॥೧೧॥

ನೀನು ಮುಹೂರ್ತ, ದೇಶ-ಕಾಲಗಳನ್ನು ತಿಳಿದಿರುವ ಪ್ರಾಜ್ಞ, ಶೂರ, ನಿಯಮಗಳನ್ನು ತಪ್ಪದೆ ಪಾಲಿಸುವವನು, ನಮ್ಮಗೆಲ್ಲರಿಗೂ ನೀನು ಸಮ್ಮತ. ನೀನು ಮುಖ್ಯಗ್ರಾಮಾಧಿಪತಿಯಾಗು.

ಯಥಾ ಯಥಾ ವಕ್ಷ್ಯಸಿ ನಃ ಕರಿಷ್ಯಾಮಸ್ತಥಾ ತಥಾ ।
ಪಾಲಯಾಸ್ಮಾನ್ ಯಥಾನ್ಯಾಯಂ ಯಥಾ ಮಾತಾ ಯಥಾ ಪಿತಾ ॥

ನೀನು ಹೇಗೆ ಹೇಳುತ್ತೀಯೋ ಹಾಗೆ ನಡೆಯುತ್ತೇವೆ. ತಂದೆ-ತಾಯಿಯರು ಪಾಲಿಸುವಂತೆ ನಮ್ಮನ್ನು ನ್ಯಾಯಾನುಗುಣವಾಗಿ ಪಾಲಿಸು.

ಕಾಪವ್ಯಃ

ಮಾ ವಧೀಸ್ತ್ವಂ ಸ್ತ್ರಿಯಂ ಭೀರುಂ ಮಾ ಶಿಶುಂ ಮಾ ತಪಸ್ವಿನಮ್ ।
ನಾಯುಧ್ಯಮಾನೋ ಹಂತವ್ಯೋ ನ ಚ ಗ್ರಾಹ್ಯಾ ಬಲಾತ್ ಸ್ತ್ರಿಯಃ ॥

ನೀವು ಸ್ತ್ರೀಯರನ್ನು ಕೊಲ್ಲಬಾರದು, ಹೆದರಿಕೆಯ ಸ್ವಭಾವದವರನ್ನು ಕೊಲ್ಲಬಾರದು, ಶಿಶುವನ್ನು ಕೊಲ್ಲಬಾರದು. ತಪಸ್ವಿಗಳನ್ನು ಕೊಲ್ಲಬಾರದು. ನಿಮ್ಮೊಡನೆ ಯುದ್ಧ ಮಾಡದವನನ್ನು ಕೊಲ್ಲಬಾರದು. ಸ್ತ್ರೀಯರನ್ನು ಬಲಾತ್ಕಾರವಾಗಿ ಅಪಹರಿಸಬಾರದು.

ಸರ್ವಥಾ ಸ್ತ್ರೀ ನ ಹಂತವ್ಯಾ ಸರ್ವಸತ್ತ್ವೇಷು ಯುಧ್ಯತಾ ।
ನಿತ್ಯಂ ಗೋಬ್ರಾಹ್ಮಣೇ ಸ್ವಸ್ತಿ ಯೋದ್ಧವ್ಯಂ ಚ ತದರ್ಥತಃ ॥೧೪॥

ಸಕಲ ಪ್ರಾಣಿವರ್ಗದ ಸ್ತ್ರೀಯನ್ನು ಕೊಲ್ಲಬಾರದು. ಗೋವುಗಳಿಗೆ-ಬ್ರಾಹ್ಮಣರಿಗೆ ಹಿತವಾಗುವಂತೆ ನಡೆದುಕೊಳ್ಳಬೇಕು. ಅವರ ರಕ್ಷಣೆಗಾಗಿ ಯುದ್ಧ ಮಾಡಬೇಕು.

ಸಸ್ಯಂ ಚ ನಾಪಹಂತವ್ಯಂ ಸೀರವಿಘ್ನಂ ಚ ಮಾ ಕೃಥಾಃ ।
ಪೂಜ್ಯಂತೇ ಯತ್ರ ದೇವಾಶ್ಚ ಪಿತರೋತಿಥಯಸ್ತಥಾ ॥೧೫॥

ಹೊಲಗಳಲ್ಲಿ ಬೆಳೆದಿರುವ ಪೈರನ್ನು ನಾಶಮಾಡಬಾರದು. ಕೃಷಿಗೆ ವಿಘ್ನವನ್ನು ಮಾಡಬೇಡಿ. ಎಲ್ಲಿ ದೇವತೆಗಳ, ಪಿತೃಗಳ, ಅತಿಥಿಗಳ ಪೂಜೆಯು ನಡೆಯುತ್ತಿರುತ್ತದೋ ಅಲ್ಲಿ ವಿಘ್ನಗಳನ್ನು ಮಾಡಬಾರದು.

ಸರ್ವಭೂತೇಷ್ವಪಿ ಚ ವೈ ಬ್ರಾಹ್ಮಣೋ ಮೋಕ್ಷಮರ್ಹತಿ ।
ಕಾರ್ಯಾ ಚಾಪಚಿತಿಸ್ತೇಷಾಂ ಸರ್ವಸ್ವೇನಾಪಿ ಯಾ ಭವೇತ್ ॥೧೬॥

ದಸ್ಯುಗಳು ಅಪಹರಿಸುವ ಪ್ರಾಣಿಸಮುದಾಯದಲ್ಲಿ ಬ್ರಾಹ್ಮಣನು ಬಿಡುಗಡೆಗೆ ಅರ್ಹ. ಅವರ ಸೇವೆಯನ್ನು ಮಾಡಬೇಕು. ಸರ್ವಸ್ವವನ್ನೂ ಕೊಟ್ಟು ಬ್ರಾಹ್ಮಣರನ್ನು ಸತ್ಕರಿಸಬೇಕು.

ಯಸ್ಯ ಹ್ಯೇತೇ ಸಂಪ್ರದುಷ್ಟಾ ಮಂತ್ರಯಂತಿ ಪರಾಭವಮ್ ।
ನ ತಸ್ಯ ತ್ರಿಷು ಲೋಕೇಷು ತ್ರಾತಾ ಭವತಿ ಕಶ್ಚನ ॥೧೭॥

ಬ್ರಾಹ್ಮಣರು ಯಾರ ಮೇಲೆ ಕೋಪಗೊಳ್ಳುತ್ತಾರೋ, ಯಾರಿಗೆ ಪರಾಭವವಾಗಲಿ ಎಂದು ಭಾವಿಸುತ್ತಾರೋ, ಅವರನ್ನು ಮೂರು ಲೋಕಗಳಲ್ಲಿ ಯಾರೂ ರಕ್ಷಿಸಲಾರರು.

ಯೋ ಬ್ರಾಹ್ಮಣಾನ್ ಪರಿಭವೇದ್ ವಿನಾಶಂ ವಾಪಿ ರೋಚಯೇತ್ ।
ಸೂರ್ಯೋದಯ ಇವಾವಶ್ಯಂ ಧ್ರುವಂ ತಸ್ಯ ಪರಾಭವಃ ॥೧೮॥

ಯಾರು ಬ್ರಾಹ್ಮಣನನ್ನು ಅವಮಾನಿಸುವನೋ, ಅವನ ವಿನಾಶವನ್ನು ಬಯಸುವನೋ ಅವನ ಪರಾಭವವು ಸೂರ್ಯೋದಯದಷ್ಟು ನಿಶ್ಚಯ.

ಇಹೈವ ಫಲಮಾಸೀನಃ ಪ್ರತ್ಯಾಕಾಂಕ್ಷೇತ ಶಕ್ತಿತಃ ।
ಯೇ ಯೇ ನೋ ನ ಪ್ರದಾಸ್ಯಂತಿ ತಾಂಸ್ತಾನ್ ಸೇನಾಭಿಯಾಸ್ಯತಿ ॥೧೯॥

ಇಲ್ಲೇ ಇದ್ದು ದಾರಿಹೋಕರ ಶಕ್ತಿಗನುಗುಣವಾಗಿ ಅವರಿಂದ ಪಡೆಯಬೇಕು. ಯಾರು ಕೂಡುವುದಿಲ್ಲವೋ ಅವರನ್ನು ದಸ್ಯು ಸೇನೆಯು ಆಕ್ರಮಿಸುತ್ತದೆ.

ಶಿಷ್ಟ್ಯರ್ಥಂ ವಿಹಿತೋ ದಂಡೋ ನ ವಧಾರ್ಥಂ ವಿನಿಶ್ಚಯಃ ।
ಯೇ ಚ ಶಿಷ್ಟಾನ್ ಪ್ರಬಾಧಂತೇ ಧರ್ಮಸ್ತೇಷಾಂ ವಧಃ ಸ್ಮೃತಃ ॥೨೦॥

ಅನುಶಾಸನವೇ ಶಿಕ್ಷೆಯನ್ನು ಕೊಡುವುದರ ಉದ್ದೇಶ. ವಧೆಯು ಶಿಕ್ಷೆಯ ಉದ್ದೇಶವಲ್ಲ. ಇದು ನಿಶ್ಚಯ. ಯಾರು ಸಜ್ಜನರನ್ನು ಪೀಡಿಸುತ್ತಾರೋ ಅವರ ವಧೆಯು ಧರ್ಮ.

ಯೇ ಹಿ ರಾಷ್ಟ್ರೋಪರೋಧೇನ ವೃದ್ಧಿಂ ಕುರ್ವಂತಿ ಕೇಚನ ।
ತದೇವ ತೇನು ಮೀಯಂತೇ ಕುಣಪಂ ಕೃಮಯೋ ಯಥಾ ॥೨೧॥

ಯಾರು ರಾಷ್ಟ್ರಕ್ಕೆ ತೊಂದರೆ ಮಾಡಿ ತಮ್ಮ ವೃದ್ಧಿಯನ್ನು ಮಾಡಿಕೊಳ್ಳುತ್ತಾರೋ ಅವರು ಬೇಗನೇ ನಾಶವಾಗುತ್ತಾರೆ. ಹೆಣಕ್ಕೆ ಮುತ್ತಿದ ಕ್ರಿಮಿಗಳಂತೆ.

ಯೇ ಪುನರ್ಧರ್ಮಶಾಸ್ತ್ರೇಣ ವರ್ತೇರನ್ನಿಹ ದಸ್ಯವಃ ।
ಅಪ್ಯದಸ್ಯವೋ ಭೂತ್ವಾ ಕ್ಷಿಪ್ರಂ ಸಿದ್ಧಿಮವಾಪ್ನುಯುಃ ॥೨೨॥

ಯಾವ ದಸ್ಯುಗಳು ಈ ಜೀವನದಲ್ಲಿ ಧರ್ಮದ ವಿಧಿಯಂತೆ ಇರುತ್ತಾರೋ ಅವರು ಮುಂದಿನ ಜನ್ಮದಲ್ಲಿ ಸಜ್ಜನರಾಗಿ ಬೇಗನೆ ಸಿದ್ಧಿಯನ್ನು ಹೊಂದುವರು.

ಭೀಷ್ಮಃ

ತತ್ ಸರ್ವಮುಪಚಕ್ರುಸ್ತೇ ಕಾಪವ್ಯಸ್ಯಾನುಶಾಸನಮ್ ।
ವೃತ್ತಿಂ ಚ ಲೇಭಿರೇ ಸರ್ವೇ ಪಾಪೇಭ್ಯಶ್ಚಾಪ್ಯುಪಾರಮನ್ ॥೨೩॥

ಆ ದಸ್ಯುಗಳು ಕಾಪವ್ಯನ ಅನುಶಾಸನವನ್ನು ಉತ್ತಮವಾಗಿ ಅನುಸರಿಸಿದರು. ಅವರೆಲ್ಲರೂ ಜೀವನ ಸೌಲಭ್ಯವನ್ನು ಹೊಂದಿದರು. ಪಾಪಕೃತ್ಯಗಳನ್ನೂ ನಿಲ್ಲಿಸಿದರು.

ಕಾಪವ್ಯಃ ಕರ್ಮಣಾ ತೇನ ಮಹತೀಂ ಸಿದ್ಧಿಮಾಪ್ತವಾನ್ ।
ಸಾಧೂನಾಮಾಚರನ್ ಕ್ಷೇಮಂ ದಸ್ಯೂನ್ ಪಾಪಾನ್ನಿವರ್ತಯನ್ ॥೨೪॥

ಕಾಪವ್ಯನು ತನ್ನ ಉತ್ಕೃಷ್ಟ ಕೆಲಸಗಳಿಂದ, ಸಾಧುಜನಗಳಿಗೆ ಕ್ಷೇಮವನ್ನು ಉಂಟು ಮಾಡುತ್ತಾ, ದಸ್ಯುಗಳನ್ನು ಕೆಟ್ಟ ಕೆಲಸಗಳಿಂದ ವಿಮುಖರನ್ನಾಗಿಸುತ್ತಾ ದೊಡ್ಡ ಸಿದ್ಧಿಯನ್ನು ಹೊಂದಿದನು.

ಇದಂ ಕಾಪವ್ಯಚರಿತಂ ಯೋ ನಿತ್ಯ ಅನುಕೀರ್ತಯೇತ್ ।
ನಾರಣ್ಯೇಭ್ಯಃ ಸ ಭೂತೇಭ್ಯೋ ಭಯಮಾರ್ಛೇತ್ ಕದಾಚನ ॥೨೫॥

ಭಯಂ ತಸ್ಯ ನ ಮತ್ಸ್ಯೇಭ್ಯೋ ನಾಮತ್ಸ್ಯೇಭ್ಯಃ ಕಥಂಚನ ।
ಅಸತೋ ನಾಸತೋ ರಾಜನ್ ಸ ಹ್ಯರಣ್ಯೇಷು ಗೋಪಿತಾ ॥೨೬॥

ಈ ಕಾಪವ್ಯಚರಿತ್ರೆಯನ್ನು ಯಾರು ಪ್ರತಿದಿನ ನಿತ್ಯ ಕರ್ಮದ ಕಾಲದಲ್ಲಿ ಹೇಳುತ್ತಾರೋ ಅವರು ವನ್ಯಜೀವಿಗಳಿಂದ ಎಂದೂ ಭಯವನ್ನು ಹೊಂದುವುದಿಲ್ಲ. ಅವನಿಗೆ ಮನುಷ್ಯರಿಂದ ಭಯವುಂಟಾಗುವುದಿಲ್ಲ. ದೈವದಿಂದಲೂ ಭಯವುಂಟಾಗುವುದಿಲ್ಲ. ಅವನು ದಸ್ಯುಗಳ ಮತ್ತು ಋಷಿಗಳ ರಕ್ಷಕನಾಗುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಐದನೆಯ ಅಧ್ಯಾಯವು ಮುಗಿಯಿತು.

★ ★ ★ ★

ಆರನೆಯ ಅಧ್ಯಾಯ

ರಾಜ್ಯನಿಧಿಯನ್ನು ಬೆಳೆಸಲು ಅನುಸರಿಸಬೇಕಾದ ನಿಯಮಗಳು.

ಭೀಷ್ಮಃ

ಅತ್ರ ಗಾಥಾ ಬ್ರಹ್ಮಗೀತಾಃ ಕೀರ್ತಯಂತಿ ಪುರಾವಿದಃ ।
ಯೇನ ಮಾರ್ಗೇಣ ರಾಜಾನಃ ಕೋಶಂ ಸಂಜನಯಂತಿ ಚ ॥೧॥

ರಾಜರು ಯಾವ ಮಾರ್ಗದಿಂದ ಬೊಕ್ಕಸವನ್ನು ಬೆಳೆಸುತ್ತಾರೋ ಆ ಬಗ್ಗೆ ಪೂರ್ವಜ್ಞಾನಿಗಳು ಬ್ರಹ್ಮನು ಹಾಡಿದ ಹಾಡುಗಳನ್ನು ಹೇಳುತ್ತಾರೆ.

ನ ಧನಂ ಯಜ್ಞಶೀಲಾನಾಂ ಹಾರ್ಯಂ ದೇವಸ್ವಮೇವ ತತ್ ।
ದಸ್ಯೂನಾಂ ನಿಷ್ಕೃಯಾಣಾಂ ಚ ಕ್ಷತ್ರಿಯೋ ಹರ್ತುಮರ್ಹತಿ ॥೨॥

ಯಜ್ಞವನ್ನು ನಿಷ್ಠೆಯಿಂದ ಆಚರಿಸುವವರ ಧನವನ್ನು ಅಪಹರಿಸಬಾರದು. ಆ ಧನ ದೇವಸ್ವ. ದಸ್ಯುಗಳ ಮತ್ತು ಕರ್ಮಭ್ರಷ್ಟರ ಧನವನ್ನು ಕ್ಷತ್ರಿಯನು ಅಪಹರಿಸಬೇಕು.

ಇಮಾಃ ಪ್ರಜಾಃ ಕ್ಷತ್ರಿಯಾಣಾಂ ರಕ್ಷ್ಯಾಶ್ಚಾದ್ಯಾಶ್ಚ ಭಾರತ ।
ಧನಂ ಹಿ ಕ್ಷತ್ರಿಯಸ್ಯೇಹ ದ್ವಿತೀಯಸ್ಯ ನ ವಿದ್ಯತೇ ॥೩॥

ಕ್ಷತ್ರಿಯರು ಪ್ರಜೆಗಳನ್ನು ರಕ್ಷಿಸಬೇಕು. ಅವರಿಂದಲೇ ತನಗೆ ಬೇಕಾದ ಧನ ಇತ್ಯಾದಿಗಳನ್ನು ಪಡೆದುಕೊಳ್ಳಬೇಕು. ಎಲ್ಲರ ಧನವೂ ಕ್ಷತ್ರಿಯನಿಗೇ ಸೇರಿದ್ದು. ಬೇರೆಯವರಿಗೆ ಹಣದ ಮೇಲೆ ಯಜಮಾನಿಕೆ ಇಲ್ಲ.

ತದಸ್ಯ ಸ್ಯಾದ್ ಬಲಾರ್ಥಂ ವಾ ಧನಂ ಯಜ್ಞಾರ್ಥಮೇವ ವಾ ।
ಅಭೋಜ್ಯಾ ಹ್ಯೋಷಧೀಶ್ಚಿತ್ತ್ವಾ ಭೋಗ್ಯಾ ಏವ ಪಚಂತ್ಯುತ ॥೪॥

ರಾಜನ ಧನವು ಸೈನ್ಯಕ್ಕೆ ಮತ್ತು ಯಜ್ಞಗಳಿಗೆ ವಿನಿಯೋಗವಾಗಬೇಕು. ಪೈರಿನ ತಿನ್ನಲಾಗದ ಭಾಗವನ್ನು ಕತ್ತರಿಸಿ ತಿನ್ನಲು ಯೋಗ್ಯವಾದ ಭಾಗವನ್ನು ಬೇಯಿಸುತ್ತಾರೆ.

ಯೋ ವೈ ನ ದೇವಾನ್ನ ಪಿತೄನ್ನ ಮರ್ತ್ಯಾನ್‌ಹವಿಷಾರ್ಚತಿ ।
ಅನಂತಿಕಾಂ ತಾಂ ಧನಿತಾಮಾಹುರ್ವೇದವಿದೋ ಜನಾಃ ॥೫॥

ಯಾರು ಹವಿಸ್ಸಿನಿಂದ ದೇವತೆಗಳನ್ನು ಆರಾಧಿಸುವುದಿಲ್ಲವೋ, ಪಿತೃಗಳನ್ನು ಆರಾಧಿಸುವುದಿಲ್ಲವೋ, ಮನುಷ್ಯರನ್ನು ಆರಾಧಿಸುವುದಿಲ್ಲವೋ, ಅಂತಹ ಧನವನ್ನು ಹತ್ತಿರವಿಲ್ಲದ (ಉಪಯೋಗಕ್ಕೆ ಬಾರದ) ಧನ ಎಂದು ವೇದಜ್ಞರು ಹೇಳುತ್ತಾರೆ.

ಹರೇತ್ ತದ್ಧ್ರವಿಣಂ ರಾಜನ್‌ಧಾರ್ಮಿಕಃ ಪೃಥಿವೀಪತಿಃ ।
ನ ಹಿ ನ ಪ್ರೀಣಯೇಲ್ಲೋಕಾನ್ನ ಲೋಕೋ ಗರ್ಹತೇ ನೃಪಮ್ ॥೬॥

ಆ ಹಣವನ್ನು ಧಾರ್ಮಿಕನಾದ ರಾಜನು ತನ್ನ ವಶಕ್ಕೆ ತೆಗೆದುಕೊಳ್ಳಬೇಕು. ಇದರಿಂದ ಜನರಿಗೆ ಸಂತೋಷವಾಗುತ್ತದೆ. ಜನರು ರಾಜನನ್ನು ನಿಂದಿಸುವುದಿಲ್ಲ.

ಅಸಾಧುಭ್ಯೋ ನಿರಾದಾಯ ಸಾಧುಭ್ಯೋ ಯಃ ಪ್ರಯಚ್ಛತಿ ।
ಆತ್ಮಾನಂ ಸಂಕ್ರಮಂ ಕೃತ್ವಾ ಮಧ್ಯೇ ಧರ್ಮವಿದೇವ ಸಃ ॥೭॥

ರಾಜನು ಅಸಾಧುಜನಗಳ ಮತ್ತು ಸಾಧುಜನಗಳ ಮಧ್ಯೆ ಸೇತುವೆಯಾಗಬೇಕು. ಅಸಾಧುಜನರ ಸಂಪತ್ತನ್ನು ವಶಪಡಿಸಿಕೊಂಡು ಸಾಧುಜನರಿಗೆ ಕೊಡಬೇಕು. ಹೀಗೆ ಮಾಡುವಾಗ ತಾನು ಪರಮಾತ್ಮನ ಸೇವೆಯನ್ನೇ ಮಾಡುತ್ತಿದ್ದೇನೆ ಎಂದು ಭಾವಿಸಬೇಕು. ಹೀಗೆ ಮಾಡುವವನು ಧರ್ಮವನ್ನು ಸರಿಯಾಗಿ ತಿಳಿದಿದ್ದಾನೆ ಎಂದು ಅರ್ಥ.

ಅದ್ಭಿಸ್ತು ಜಂತವೋ ಯದ್ವತ್ ಶ್ರುತ್ವಾ ವಾಚೋ ಯಥಾ ತಥಾ ।
ಅನಿಚ್ಛತಃ ಸಮ್ಭವಂತಿ ತಥಾ ಯಜ್ಞಃ ಪ್ರಜಾಯತೇ ॥೮॥

ಮಳೆಗಾಲದಲ್ಲಿ ನೀರಿನಿಂದ ಜಂತುಗಳು ಹುಟ್ಟುವಂತೆ, ಮಾತಾಡಬೇಕೆಂದು ಬಯಸದೆ, ಬಾಲಕನಿಗೆ ಬೇರೆಯವರು ಆಡುತ್ತಿರುವ ಮಾತುಗಳನ್ನು ಕೇಳುತ್ತಾ ಮಾತನಾಡಲು ಬರುವಂತೆ, ಯಜ್ಞಗಳು ಅನಿರೀಕ್ಷಿತವಾಗಿ ಈಶ್ವರೇಚ್ಛೆಯಂತೆ ಸಂಭವಿಸುತ್ತವೆ.

ಯಥೈವ ದಂಶಮಶಕಂ ಯಥಾ ಕೀಟಪಿಪೀಲಿಕಮ್ ।
ಸೈವ ವೃತ್ತಿರಯಜ್ಞೇಷು ತಥಾ ಧರ್ಮೋ ವಿಧೀಯತೇ ॥೯॥

ಸೊಳ್ಳೆ-ನೊಣಗಳ ಬಗ್ಗೆ ಹೇಗೋ, ಕೀಟ-ಇರುವೆಗಳ ಬಗ್ಗೆ ಹೇಗೋ ಹಾಗೆ ಯಜ್ಞ ವಿರೋಧಿಗಳ ವಿಷಯದಲ್ಲಿ ನಡೆದುಕೊಳ್ಳುವುದು ಧರ್ಮ-ಸರಿಯಾದ ನಡವಳಿಕೆ ಎಂದು ಪ್ರಾಜ್ಞರ ವಿಧಿಯು ಇದೆ.

ಯಥಾ ಹ್ಯಕಸ್ಮಾದ್ಭವತಿ ಭೂಮೌ ಪಾಂಸುತೃಣೋಲಪಮ್ ।
ತಥೈವೇಹ ಭವೇದ್ಧರ್ಮಃ ಸೂಕ್ಷ್ಮಃ ಸೂಕ್ಷ್ಮತರೋಽಪಿ ಚ ॥೧೦॥

ಭೂಮಿಯಲ್ಲಿ ಧೂಳು, ಹುಲ್ಲು ಮತ್ತು ಹರಡಿಕೊಳ್ಳುವ ನಯವಾದ ಬಳ್ಳಿಗಳು ಯಾರ ಪ್ರಯತ್ನವಿಲ್ಲದೆ ಸಂಭವಿಸುತ್ತವೆ. ಹಾಗೆಯೇ ಜೀವನದಲ್ಲಿ ಧರ್ಮವು ನಮಗೆ ತಿಳಿಯದೆ ಸೂಕ್ಷ್ಮವಾಗುತ್ತದೆ. ಸೂಕ್ಷ್ಮತರವೂ (ಸೂಕ್ಷ್ಮಕ್ಕಿಂತ ಹೆಚ್ಚು ಸೂಕ್ಷ್ಮವು) ಆಗುತ್ತದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಆರನೆಯ ಅಧ್ಯಾಯವು ಮುಗಿಯಿತು.

★ ★ ★ ★

ಏಳನೆಯ ಅಧ್ಯಾಯ

ಮುಂದೆ ಬರಬಹುದಾದ ಆಪತ್‌ಅನ್ನು ತಡೆಯುವ ವಿಧಾನ. ಮತ್ಸ್ಯೋಪಾಖ್ಯಾನ.

ಭೀಷ್ಮಃ

ಅನಾಗತವಿಧಾತಾ ಚ ಪ್ರತ್ಯುತ್ಪನ್ನಮತಿಶ್ಚ ಯಃ ।
ದ್ವಾವೇತೌ ಸುಖಮೇಧೇತೇ ದೀರ್ಘಸೂತ್ರೀ ವಿನಶ್ಯತಿ ॥೧॥

ಮುಂದೆ ಆಗಬಹುದಾದ ಅಪಾಯಗಳಿಗೆ ಮೊದಲೇ ಪರಿಹಾರವನ್ನು ಕಂಡುಕೊಳ್ಳುವವನು (ಅನಾಗತವಿಧಾತಾ) ಮತ್ತು ಒದಗಿ ಬಂದ ಅಪಾಯಕ್ಕೆ ಕೂಡಲೇ ಪರಿಹಾರವನ್ನು ಕಂಡುಕೊಳ್ಳುವವನು (ಪ್ರತ್ಯುತ್ಪನ್ನಮತಿ) - ಇವರಿಬ್ಬರು ಸುಖವಾಗಿ ಅಭಿವೃದ್ಧಿಯನ್ನು ಹೊಂದುತ್ತಾರೆ. ಮಾಡಬೇಕಾದ ಕೆಲಸವನ್ನು ಮುಂದೆ ಹಾಕುವವನು= ವಿಳಂಬ ಮಾಡುವವನು (ದೀರ್ಘಸೂತ್ರೀ) ಅಪಾಯಗಳಿಗೆ ಒಳಗಾಗುತ್ತಾನೆ.

ಅತ್ರೈವ ಚೇದಮವ್ಯಗ್ರಃ ಶೃಣ್ವಾಖ್ಯಾನಮನುತ್ತಮಮ್ ।
ದೀರ್ಘಸೂತ್ರಂ ಸಮಾಶ್ರಿತ್ಯ ಕಾರ್ಯಾಕಾರ್ಯವಿನಿಶ್ಚಯೇ ॥೨॥

ಕರ್ತವ್ಯ-ಅಕರ್ತವ್ಯಗಳ ಬಗ್ಗೆ ವಿಳಂಬ ಪ್ರವೃತ್ತಿ ಇದ್ದವನ (ದೀರ್ಘಸೂತ್ರಿ ಆಗಿದ್ದವನ) ಕಥೆಯನ್ನು ಹೇಳುತ್ತೇನೆ. ಏಕಾಗ್ರತೆಯಿಂದ ಕೇಳು.

ನಾತಿಗಾಧೇ ಜಲಸ್ಥಾನೇ ಸುಹೃದಃ ಕುಶಲಾಸ್ತ್ರಯಃ ।
ಪ್ರಭೂತಮತ್ಸ್ಯೇ ಕೌಂತೇಯ ಬಭೂವುಃ ಸಹಚಾರಿಣಃ ॥೩॥

ಅತಿ ಆಳವಲ್ಲದ, ಬಹಳ ಮೀನುಗಳಿದ್ದ ಜಲಾಶಯವೊಂದರಲ್ಲಿ, ಸ್ನೇಹಿತರಾಗಿದ್ದ ಮೂರು ಕುಶಲಮೀನುಗಳು ಸಹಚಾರಿಗಳಾಗಿದ್ದವು.

ಅತ್ರೈಕಃ ಪ್ರಾಪ್ತಕಾಲಜ್ಞೋ ದೀರ್ಘದರ್ಶೀ ತಥಾಪರಃ ।
ದೀರ್ಘಸೂತ್ರಶ್ಚ ತತ್ರೈಕಸ್ತ್ರಯಾಣಾಂ ಜಲಚಾರಿಣಾಮ್ ॥೪॥

ಆ ಮೂರು ಜಲಚರರಲ್ಲಿ ಒಬ್ಬನು ಅಪಾಯವು ಒದಗಿ ಬಂದಾಗ ಕೂಡಲೇ ಪರಿಹಾರವನ್ನು ಕಂಡುಕೊಳ್ಳಬಲ್ಲವನು (ಪ್ರಾಪ್ತಕಾಲಜ್ಞ ಅಥವಾ ಪ್ರತ್ಯುತ್ಪನ್ನಮತಿ). ಇನ್ನೊಬ್ಬನು ಮುಂದೆ ಆಗಬಹುದಾದ ಅಪಾಯಗಳಿಗೆ ಮೊದಲೇ ಪರಿಹಾರವನ್ನು ಕಂಡುಕೊಳ್ಳುವವನು (ದೀರ್ಘದರ್ಶೀ). ಮತ್ತೊಬ್ಬನು ದೀರ್ಘಸೂತ್ರಿ .

ಕದಾಚಿತ್ತಜ್ಜಲಸ್ಥಾನಂ ಮತ್ಸ್ಯಬಂಧಾಃ ಸಮಂತತಃ ।
ನಿಃಸ್ರಾವಯಾಮಾಸುರಥೋ ನಿಮ್ನೇಷು ವಿವಿಧೈರ್ಮುಖೈಃ ॥೫॥

ಒಮ್ಮೆ ಮೀನು ಹಿಡಿಯುವವರು ಆ ಜಲಾಶಯದ ಎಲ್ಲ ಭಾಗಗಳಲ್ಲಿದ್ದ ಬೇರೆ ಬೇರೆ ತೂಬುಗಳಿಂದ ನೀರನ್ನು ಹೊರಗೆ ಹರಿಸಿದರು.

ಪ್ರಕ್ಷೀಯಮಾಣಂ ತಂ ಬುದ್ಧ್ವಾ ಜಲಸ್ಥಾನಂ ಭಯಾಗಮೇ ।
ಅಬ್ರವೀದ್ ದೀರ್ಘದರ್ಶೀ ತು ತಾವುಭೌ ಸುಹೃದೌ ತದಾ ॥೬॥

ಜಲಾಶಯದ ನೀರು ಕಡಿಮೆಯಾಗುತ್ತಿರುವುದನ್ನು ತಿಳಿದ ದೀರ್ಘದರ್ಶಿ ಮೀನು ತಮಗೆ ಭಯವು ಬಂದಾಗ ಇಬ್ಬರು ಸ್ನೇಹಿತರಿಗೆ ಹೇಳಿತು.

ಇಯಮಾಪತ್ ಸಮುತ್ಪನ್ನಾ ಸರ್ವೇಷಾಂ ಸಲಿಲೌಕಸಾಮ್ ।
ಶೀಘ್ರಮನ್ಯತ್ರ ಗಚ್ಛಾಮಃ ಪಂಥಾ ಯಾವನ್ನ ದುಷ್ಯತಿ ॥೭॥

ಎಲ್ಲ ಜಲನಿವಾಸಿಗಳಿಗೆ ಆಪತ್ತು ಬಂದಿದೆ. ಜಲಮಾರ್ಗವು ನಾಶವಾಗುವ ಮೊದಲೇ, ಬೇಗನೆ ಬೇರೆ ಕಡೆ ಹೊರಟು ಹೋಗೋಣ.

ಅನಾಗತಮನರ್ಥಂ ಹಿ ಸುನಯೈರ್ಯಃ ಪ್ರಬಾಧತೇ ।
ನ ಸ ಸಂಶಯಮಾಪ್ನೋತಿ ರೋಚತಾಂ ವಾಂ ವ್ರಜಾಮಹೇ ॥೮॥

ಮುಂದೆ ಬರುವ ಅನರ್ಥವನ್ನು ಸರಿಯಾದ ಉಪಾಯಗಳಿಂದ ಯಾರು ಪರಿಹರಿಸುವವನೋ ಅವನು ಗೊಂದಲಗಳಿಗೆ ಒಳಗಾಗುವುದಿಲ್ಲ.ಇಲ್ಲಿಂದ ಹೊರಟು ಹೋಗೋಣ. ನಿಮಗೆ ಸಮ್ಮತವೇ?

ದೀರ್ಘಸೂತ್ರಸ್ತು ಯಸ್ತತ್ರ ಸೋಽಬ್ರವೀತ್ ಸಮ್ಯಗುಚ್ಯತೇ ।
ನ ತು ಕಾರ್ಯಾ ತ್ವರಾ ಯಾವದಿತಿ ಮೇ ನಿಶ್ಚಿತಾ ಮತಿಃ ॥೯॥

ದೀರ್ಘಸೂತ್ರಿಯು ಹೇಳಿತು. 'ನೀನು ಸರಿಯಾಗಿ ಹೇಳಿರುವಿ'. 'ಆದರೆ ತುರ್ತಾಗಿ ನಿರ್ಗಮಿಸುವ ಅವಶ್ಯಕತೆ ಇಲ್ಲ'. ಇದು ನನ್ನ ದೃಢ ಅಭಿಪ್ರಾಯ ಎಂದು ಹೇಳಿತು.

ಅಥ ಸಂಪ್ರತಿಪತ್ತಿಜ್ಞಃ ಪ್ರಾಬ್ರವೀದ್ದೀರ್ಘದರ್ಶಿನಮ್ ।
ಪ್ರಾಪ್ತೇ ಕಾಲೇ ನ ಮೇ ಕಿಂಚಿನ್ನ್ಯಾಯತಃ ಪರಿಹಾಸ್ಯತೇ ॥೧೦॥

ವರ್ತಮಾನವನ್ನು ಸರಿಯಾಗಿ ನಿರ್ವಹಿಸುವ ಪ್ರತ್ಯುತ್ಪನ್ನಮತಿಯು ದೀರ್ಘದರ್ಶಿಗೆ ಹೇಳಿತು. ಕಾಲವು ಬಂದಾಗ ನ್ಯಾಯವಾದ ಯಾವುದನ್ನೂ ನಾನು ಬಿಡುವುದಿಲ್ಲ.

ಏವಮುಕ್ತೋ ನಿರಾಕ್ರಾಮದ್ ದೀರ್ಘದರ್ಶೀ ಮಹಾಮತಿಃ ।
ಜಗಾಮ ಸ್ರೋತಸ್ಯೇಕೇನ ಗಂಭೀರಸಲಿಲಾಶಯಮ್ ॥೧೧॥

ಹೀಗೆ ಹೇಳಲ್ಪಟ್ಟ, ಮಹಾಮತಿಯಾದ ದೀರ್ಘದರ್ಶಿಯು ನೀರಿನ ಒಂದು ಹರಿವಿನ ಮೂಲಕ ಆಳವಾದ ಜಲಾಶಯಕ್ಕೆ ಹೋಗಿ ಸೇರಿತು.

ತತಃ ಪ್ರಸ್ರುತತೋಯಂ ತಂ ಸಮೀಕ್ಷ್ಯ ಸಲಿಲಾಶಯಮ್ ।
ಬಬಂಧುರ್ವಿವಿಧೈರ್ಯೋಗೈರ್ಮತ್ಸ್ಯಾನ್ಮತ್ಸ್ಯೋಪಜೀವಿನಃ ॥೧೨॥

ಅನಂತರ ನೀರು ಹೊರಗೆ ಹರಿದುಹೋಗಿ ಖಾಲಿಯಾದ ಜಲಾಶಯವನ್ನು ನೋಡಿ ಆ ಬೆಸ್ತರು (ಜೀವನಕ್ಕಾಗಿ ಮೀನುಗಳನ್ನು ಅವಲಂಬಿಸಿದವರು) ನಾನಾ ಸಾಧನಗಳಿಂದ ಆ ಮೀನುಗಳನ್ನು ಕಟ್ಟಿದರು.

ವಿಲೋಡ್ಯಮಾನೇ ತಸ್ಮಿಂಸ್ತು ಸ್ರುತತೋಯೇ ಜಲಾಶಯೇ ।
ಅಗಚ್ಛದ್ಗ್ರಹಣಂ ತತ್ರ ದೀರ್ಘಸೂತ್ರಃ ಸಹಾಪರೈಃ ॥೧೩॥

ಆ ಖಾಲಿ ಜಲಾಶಯವನ್ನು ಬೆಸ್ತರು ಲೂಟಿಗೈಯ್ಯುತ್ತಿದ್ದಾಗ ದೀರ್ಘಸೂತ್ರಿಯ ಬೇರೆ ಮೀನುಗಳೊಂದಿಗೆ ಬಂಧನಕ್ಕೆ ಒಳಗಾಯಿತು.

ಉಕ್ಷಣಂ ಕ್ರಿಯಮಾಣಂಚ ಮತ್ಸ್ಯಾನಾಂ ವೀಕ್ಷ್ಯ ರಶ್ಮಿಭಿಃ ।
ಪ್ರವಿಶ್ಯಾಂತರಮನ್ಯೇಷಾಮಗ್ರಸತ್ ಪ್ರತಿಪತ್ತಿಮಾನ್ ॥೧೪॥

(ಮೀನುಗಳನ್ನು) ಕಟ್ಟುವ ದಾರವನ್ನು ಮೀನುಗಳ ಮೇಲೆ ಹಾಕುತ್ತಿರುವುದನ್ನು ನೋಡಿದ ಪ್ರತ್ಯುತ್ಪನ್ನಮತಿಯು ಬೇರೆ ಮೀನುಗಳ ಮಧ್ಯೆ ಸೇರಿ ಕಟ್ಟುದಾರವನ್ನು ತನ್ನ ಬಾಯೊಳಗೆ ಸೇರಿಸಿತು.

ಗ್ರಸ್ತಮೇವ ತು ತದ್ ದಾನಮಗೃಹೀತ್ವಾ ಸುಪ್ತ ಏವ ಸಃ ।
ಸರ್ವಾನೇವ ತು ತಾಂಸ್ತತ್ರ ತೇ ವಿದುರ್ಗ್ರಥಿತಾ ಇತಿ ॥೧೫॥

ಬಾಯಲ್ಲಿ ಸೇರಿಸಿಕೊಂಡಿದ್ದ ಆ ಕಟ್ಟು ದಾರವನ್ನು ಹಾಗೆಯೇ ಇಟ್ಟುಕೊಂಡಿತ್ತು. ಬೆಸ್ತರು ತಾವು ಎಲ್ಲ ಮೀನುಗಳನ್ನು ಹಿಡಿದಿದ್ದೇವೆ ಎಂದು ತಿಳಿದರು.

ತತಃ ಪ್ರಕ್ಷಾಲ್ಯಮಾನೇಷು ಮತ್ಸ್ಯೇಷು ವಿಮಲೇ ಜಲೇ ।
ತ್ಯಕ್ತ್ವಾ ರಜ್ಜುಂ ವಿಮುಕ್ತೋಽಭೂಚ್ಛೀಘ್ರಂ ಸಂಪ್ರತಿಪತ್ತಿಮಾನ್ ॥೧೬॥

ಅನಂತರ ಬೆಸ್ತರು ಮೀನುಗಳನ್ನು ಶುದ್ಧ ನೀರಿನಲ್ಲಿ ತೊಳೆಯುತ್ತಿರುವಾಗ ಪ್ರತ್ಯುತ್ಪನ್ನಮತಿಯು ಕಟ್ಟುದಾರವನ್ನು ತ್ಯಜಿಸಿ ನೀರೊಳಗೆ ಸೇರಿ ಬಿಡುಗಡೆಯನ್ನು ಹೊಂದಿತು.

ದೀರ್ಘಸೂತ್ರಸ್ತು ಮಂದಾತ್ಮಾ ಹೀನಬುದ್ಧಿರಚೇತನಃ ।
ಮರಣಂ ಪ್ರಾಪ್ತವಾನ್ಮೂಢೋ ಯಥೈವೋಪಹತೇಂದ್ರಿಯಃ ॥೧೭॥

ಸೋಮಾರಿಯೂ, ಹೀನಬುದ್ಧಿಯೂ, ಜಡವೂ ಆದ ದೀರ್ಘಸೂತ್ರಿಯು, ಇಂದ್ರಿಯಶಕ್ತಿಯನ್ನು ಕಳೆದುಕೊಂಡ ಮೂಢನಂತೆ ಮರಣಹೊಂದಿದನು.

ಏವಂ ಪ್ರಾಪ್ತತಮಂ ಕಾಲಂ ಯೋ ಮೋಹಾನ್ನಾವಬುಧ್ಯತೇ ।
ಸ ವಿನಶ್ಯತಿ ವೈ ಕ್ಷಿಪ್ರಂ ದೀರ್ಘಸೂತ್ರೋ ಯಥಾ ಝಷಃ ॥೧೮॥

ಹೀಗೆ ಒದಗಿ ಬಂದ (ಆಪತ್) ಕಾಲವನ್ನು ಯಾರು ಮೋಹಪರವಶನಾಗಿ ತಿಳಿದುಕೊಳ್ಳುವುದಿಲ್ಲವೋ ಅವನು ದೀರ್ಘಸೂತ್ರಿ ಮೀನಿನಂತೆ ನಾಶವಾಗುತ್ತಾನೆ.

ಆದೌ ನ ಕುರುತೇ ಶ್ರೇಯಃ ಕುಶಲೋಽಸ್ಮೀತಿ ಯಃ ಪುಮಾನ್ ।
ಸ ತು ಸಂಶಯಮಾಪ್ನೋತಿ ಯಥಾ ಸಂಪ್ರತಿಪತ್ತಿಮಾನ್ ॥೧೯॥

ಯಾವ ಮನುಷ್ಯನು 'ನನಗೆ ಎಲ್ಲಗೊತ್ತಿದೆ' ಎಂಬ ಭಾವದಿಂದ ಆರಂಭದಲ್ಲೇ ಒಳಿತನ್ನು ಮಾಡಿಕೊಳ್ಳುವುದಿಲ್ಲವೋ ಅವನು ಪ್ರಾಣಾಪಾಯಕ್ಕೆ ಒಳಗಾಗುತ್ತಾನೆ. ಪ್ರತ್ಯುತ್ಪನ್ನಮತಿ ಮೀನಿನಂತೆ.

ಅನಾಗತವಿಧಾನಂ ತು ಯೋ ನರಃ ಕುರುತೇ ಕ್ಷಮಮ್ ।
ಶ್ರೇಯಃ ಪ್ರಾಪ್ನೋತಿ ಸೋಽತ್ಯರ್ಥಂ ದೀರ್ಘದರ್ಶೀ ಯಥಾ ಹ್ಯಸೌ ॥

ಮುಂದೆ ಸಂಭವಿಸಬಹುದಾದ ಅನರ್ಥಗಳಿಗೆ ಸರಿಯಾದ ಪರಿಹಾರವನ್ನು ಯಾರು ಮಾಡುತ್ತಾರೋ ಅವರು ಬಹಳ ಶ್ರೇಯಸ್ಸನ್ನು ಹೊಂದುತ್ತಾರೆ. ಈ ದೀರ್ಘದರ್ಶಿಯಂತೆ.

ಕಲಾಃ ಕಾಷ್ಠಾ ಮುಹೂರ್ತಾಶ್ಚ ದಿನಾ ನಾಡ್ಯಃ ಕ್ಷಣಾ ಲವಾಃ ।
ಪಕ್ಷಾ ಮಾಸಾಶ್ಚ ಋತವಃ ಕಾಲಃ ಸಂವತ್ಸರಾಣಿ ಚ ॥೨೧॥

ಪೃಥಿವೀ ದೇಶ ಇತ್ಯುಕ್ತಃ ಸ ಚ ಕಾಲೋಽನುಭಿದ್ಯತೇ ।
ಅಭಿಪ್ರೇತಾರ್ಥಸಿದ್ಧ್ಯರ್ಥಂ ನ್ಯಾಯತೋ ಯಚ್ಚ ತತ್ತಥಾ ॥೨೨॥

ಕಲಾ, ಕಾಷ್ಠ, ಮುಹೂರ್ತ, ಹಗಲು, ರಾತ್ರಿ, ಕ್ಷಣ, ಲವ, ಪಕ್ಷ, ಮಾಸ, ಋತು, ಸಂವತ್ಸರ- ಇವುಗಳು ಕಾಲ. ಪೃಥಿವಿಯು ದೇಶ. ಇಷ್ಟಾರ್ಥ ಸಿದ್ಧಿಗಾಗಿ ಕಾಲದಲ್ಲಿ ಎರಡು ವಿಧವು ಗುರುತಿಸಲ್ಪಟ್ಟಿದೆ. (೧) ನ್ಯಾಯಕಾಲ (೨) ಅನ್ಯಾಯಕಾಲ (ಗ್ರಹ, ನಕ್ಷತ್ರ, ತಿಥಿ, ಕರಣಗಳ ಸ್ಥಿತಿಯಿಂದ ಅನುಕೂಲವಾದ ಕಾಲ ನ್ಯಾಯಕಾಲ, ಪ್ರತಿಕೂಲವಾದ ಕಾಲ ಅನ್ಯಾಯಕಾಲ).

ಏತೌ ಧರ್ಮಾರ್ಥಶಾಸ್ತ್ರೇಷು ಮೋಕ್ಷಶಾಸ್ತ್ರೇಷು ಚರ್ಷಿಭಿಃ ।
ಪ್ರಧಾನಾವಿತಿ ನಿರ್ದಿಷ್ಟೌ ಕಾಮೇಶಾಭಿಮತೌ ನೃಣಾಮ್ ॥೨೩॥

ಇವೆರಡು= ಕಾಲ ಮತ್ತು ದೇಶಗಳು- ಪ್ರಧಾನ ಎಂದು ಧರ್ಮಶಾಸ್ತ್ರಗಳಲ್ಲಿ, ಅರ್ಥಶಾಸ್ತ್ರಗಳಲ್ಲಿ, ಮೋಕ್ಷಶಾಸ್ತ್ರಗಳಲ್ಲಿಮತ್ತು ಕಾಮಶಾಸ್ತ್ರಗಳಲ್ಲಿಹೇಳಲ್ಪಟ್ಟಿವೆ. ಇದನ್ನು ಜನರೂ ಒಪ್ಪಿದ್ದಾರೆ.

ಪರೀಕ್ಷ್ಯಕಾರೀ ಯುಕ್ತಸ್ತು ಸಮ್ಯಕ್ಸಮುಪಪಾದಯೇತ್ ।
ದೇಶಕಾಲಾವಭಿಪ್ರೇತೌ ತಾಭ್ಯಾಂ ಫಲಮವಾಪ್ನುಯಾತ್ ॥೨೪॥

ಪರೀಕ್ಷಿಸಿ ಕಾರ್ಯಗಳನ್ನು ಕೈಗೊಳ್ಳುವ, ಯೋಗವಂತನು ತನಗೆ ಅನುಕೂಲವಾದ ದೇಶ-ಕಾಲಗಳನ್ನು ಚೆನ್ನಾಗಿ ಪರಿಶೀಲಿಸಿ ಉಪಪಾದಿಸಬೇಕು. ಹೀಗೆ ಆರಿಸಿದ ದೇಶ-ಕಾಲಗಳಿಂದ ಒಳ್ಳೆಯ ಫಲವನ್ನು ಪಡೆಯುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಏಳನೆಯ ಅಧ್ಯಾಯವು ಮುಗಿಯಿತು.

★ ★ ★ ★

ಎಂಟನೆಯ ಅಧ್ಯಾಯ

ಯುಧಿಷ್ಠಿರನ ಪ್ರಶ್ನೆಗಳು. ಭೀಷ್ಮರ ಉತ್ತರಗಳು. ತನಗೆ ಲಾಭವಾಗುವಂತೆ ಶತ್ರುಗಳ ಜೊತೆ ಸಂಧಾನವನ್ನು ಮಾಡಿಕೊಳ್ಳಬೇಕು. ಬೆಕ್ಕು-ಇಲಿಗಳ ಕಥೆ.

ಯುಧಿಷ್ಠಿರಃ

ಸರ್ವತ್ರ ಬುದ್ಧಿಃ ಕಥಿತಾ ಶ್ರೇಷ್ಠಾ ತೇ ಭರತರ್ಷಭ ।
ಅನಾಗತಾ ತಥೋತ್ಪನ್ನಾ ದೀರ್ಘಸೂತ್ರಾ ವಿನಾಶಿನೀ ॥೧॥

ಯುಧಿಷ್ಠಿರ– ಭರತಕುಲಶ್ರೇಷ್ಠ! ಎಲ್ಲ ದೇಶ-ಕಾಲಗಳಿಗೆ ಅನ್ವಯಿಸುವ, ಶ್ರೇಷ್ಠವಾದ ಅನಾಗತ (ಅಪಾಯವು ಸಂಭವಿಸುವ ಮೊದಲೇ ಪರಿಹಾರವನ್ನು ತಂದುಕೊಳ್ಳುವ) ಬುದ್ಧಿಯು ಮತ್ತು ಪ್ರತ್ಯುತ್ಪನ್ನಮತಿಯು ನಿನ್ನಿಂದ ಹೇಳಲ್ಪಟ್ಟಿತು. ವಿನಾಶಕಾರಿಯಾದ ದೀರ್ಘಸೂತ್ರ (ಮಾಡಬೇಕಾದ ಕೆಲಸವನ್ನು ಮುಂದೆಹಾಕುವ) ಬುದ್ಧಿಯೂ ನಿನ್ನಿಂದ ವಿವರಿಸಲ್ಪಟ್ಟಿತು.

ತದಿಚ್ಛಾಮಿ ಪರಾಂ ಬುದ್ಧಿ ಶ್ರೋತುಂ ಭರತಸತ್ತಮ ।
ಯಥಾ ರಾಜಾ ನ ಮುಹ್ಯೇತ ಶತ್ರುಭಿಃ ಪರಿವಾರಿತಃ ॥೨॥

ಭರತಕುಲಶ್ರೇಷ್ಠ! ಶತ್ರುಗಳು ಸುತ್ತುವರಿದಾಗ ರಾಜನು ಮೋಹಕ್ಕೆ (ಏನು ಮಾಡಬೇಕೆಂದು ತಿಳಿಯದ ಸ್ಥಿತಿಗೆ ಅಥವಾ ವಿಕಲ್ಪಸ್ಥಿತಿಗೆ) ಒಳಗಾಗದಂತಹ ಉತ್ಕೃಷ್ಟ ಬುದ್ಧಿಯನ್ನು= ವಿಚಾರವನ್ನು ನಿಮ್ಮಿಂದ ಕೇಳಲು ಬಯಸುತ್ತೇನೆ.

ಧರ್ಮಾರ್ಥಕುಶಲ ಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಪೃಚ್ಛಾಮಿ ತ್ವಾ ಕುರುಶ್ರೇಷ್ಠ ತನ್ಮೇ ವ್ಯಾಖ್ಯಾತುಮರ್ಹಸಿ ॥೩॥

ಧರ್ಮಾರ್ಥಕುಶಲ! ಪ್ರಾಜ್ಞ! ಸರ್ವಶಾಸ್ತ್ರವಿಶಾರದ! ಕುರುಶ್ರೇಷ್ಠ! ನಿಮ್ಮನ್ನು ಪ್ರಾರ್ಥಿಸುತ್ತಿದ್ದೇನೆ. ದಯವಿಟ್ಟುನನಗಾಗಿ ವಿವರಿಸಿರಿ.

ಶತ್ರುಭಿರ್ಬಹುಭಿರ್ಗ್ರಸ್ತೋ ಯಥಾ ವರ್ತೇತ ಪಾರ್ಥಿವಃ ।
ಏತದಿಚ್ಛಾಮ್ಯಹಂ ಶ್ರೋತುಂ ಸರ್ವಮೇವ ಯಥಾವಿಧಿ ॥೪॥

ಶತ್ರುಗಳಿಂದ ಆಕ್ರಮಿಸಲ್ಪಟ್ಟ ರಾಜನ ವರ್ತನೆಯು ಹೇಗೆ ಇರಬೇಕು? ಈ ಬಗ್ಗೆ ಎಲ್ಲವನ್ನೂ ಕಾರ್ಯಸಾಧುವಾಗುವಂತೆ ನಿಮ್ಮಿಂದ ಕೇಳಲು ಬಯಸುತ್ತೇನೆ.

ವಿಷಮಸ್ಥಂ ಹಿ ರಾಜಾನಂ ಶತ್ರವಃ ಪರಿಪಂಥಿನಃ ।
ಬಹವೋಽಪ್ಯೇಕಮುದ್ಧರ್ತುಂ ಯತಂತೇ ಪೂರ್ವತಾಪಿತಾಃ ॥೫॥

ವಿಷಮ ಪರಿಸ್ಥಿತಿಯಲ್ಲಿರುವ ಏಕಾಕಿಯಾದ ರಾಜನನ್ನು ಕೂಡ, ಅವನಿಂದ ಹಿಂದೆ ತಾಪಕ್ಕೆ ಒಳಗಾದ ಬಹಳ ಶತ್ರುಗಳು ಒಗ್ಗಟ್ಟಾಗಿ ಉಚ್ಚಾಟಿಸಲು ಪ್ರಯತ್ನಿಸುತ್ತಾರೆ.

ಸರ್ವತಃ ಪ್ರಾರ್ಥ್ಯಮಾನೇನ ದುರ್ಬಲೇನ ಮಹಾಬಲೈಃ ।
ಏಕೇನೈವಾಸಹಾಯೇನ ಶಕ್ಯಂ ಸ್ಥಾತುಂ ಕಥಂ ಭವೇತ್ ॥೬॥

ದುರ್ಬಲನೂ, ಏಕಾಕಿಯೂ, ಸಹಾಯರಹಿತನೂ ಆದವನನ್ನು ಮಹಾಬಲಶಾಲಿಗಳು ಎಲ್ಲರೀತಿಯಿಂದಲೂ ನುಂಗಲು ಬಯಸುತ್ತಿರುವಾಗ ಸ್ಥಿರವಾಗಿ ನಿಲ್ಲುವುದು ಹೇಗೆ?

ಕಥಂ ಮಿತ್ರಮರಿಂ ಚೈವ ವಿನ್ದೇತ ಭರತರ್ಷಭ ।
ಚೇಷ್ಟಿತವ್ಯಂ ಕಥಂ ಚಾತ್ರ ಶತ್ರೋರ್ಮಿತ್ರಸ್ಯ ಚಾಂತರೇ ॥೭॥

ಭರತಕುಲಶ್ರೇಷ್ಠನೇ! ಮಿತ್ರರನ್ನು ಹೇಗೆ ಸಂಪಾದಿಸಬೇಕು? ಶತ್ರುವನ್ನು ಹೇಗೆ ತನ್ನ ವಶಕ್ಕೆ ಪಡೆಯಬೇಕು. ಶತ್ರು-ಮಿತ್ರನ ಮಧ್ಯೆ ಹೇಗೆ ವ್ಯವಹರಿಸಬೇಕು?

ಅಜಾತರಕ್ಷಣೋ ರಾಜನ್ನಮಿತ್ರೇ ಮಿತ್ರತಾಂ ಗತೇ ।
ಕಥಂ ನು ಪುರುಷಃ ಕುರ್ಯಾತ್ಕಿಂ ವಾ ಕೃತ್ವಾ ಸುಖೀ ಭವೇತ್ ॥೮॥

ಮಿತ್ರನಾಗಿದ್ದವನು ಶತ್ರುವಾದಾಗ ರಕ್ಷಣೆಯ ವ್ಯವಸ್ಥೆಯಿಲ್ಲದ ಪುರುಷನು ಹೇಗೆ ನಡೆದುಕೊಳ್ಳಬೇಕು? ಏನು ಮಾಡಿದರೆ ಸುಖಿಯಾಗಬಹುದು?

ವಿಗ್ರಹಂ ಕೇನ ವಾ ಕುರ್ಯಾತ್ ಸಂಧಿಂ ವಾ ಕೇನ ಯೋಜಯೇತ್ ।
ಕಥಂ ವಾ ಶತ್ರುಮಧ್ಯಸ್ಥೋ ವರ್ತೇತಾಬಲವಾನಿತಿ ॥೯॥

ಯಾರ ಜತೆ ಕಲಹವನ್ನು ಮಾಡಬೇಕು? ಯಾರ ಜತೆ ಸಂಧಾನವನ್ನು ಮಾಡಿಕೊಳ್ಳಬೇಕು? ಬಲಹೀನನು ಶತ್ರುಗಳ ಮಧ್ಯೆ ಹೇಗೆ ವರ್ತಿಸಬೇಕು?

ಏತದ್ವೈ ಸರ್ವಕೃತ್ಯಾನಾಂ ಪರಂ ಕೃತ್ಯಂ ಪರಂತಪ ।
ನೈತಸ್ಯ ಕಶ್ಚಿದ್ ವಕ್ತಾಸ್ತಿ ಶ್ರೋತಾ ಚಾಪಿ ಸುದುರ್ಲಭಃ ॥೧೦॥

ಋತೇ ಶಾಂತನವಾದ್ ಭೀಷ್ಮಾತ್ ಸತ್ಯಸಂಧಾಜ್ಜಿತೇಂದ್ರಿಯಾತ್ ।
ತದನಿಷ್ಟ ಮಹಾಬಾಹೋ ಸರ್ವಮೇತದ್ ವದಸ್ವ ಮೇ ॥೧೧॥

ಶತ್ರುಗಳನ್ನು ಸುಡುವವನೇ! ಇದು= ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರ ಕಥನವು ಬೇರೆ ಎಲ್ಲ ಕರ್ತವ್ಯಗಳಿಗಿಂತ ಶ್ರೇಷ್ಠ. ಸತ್ಯಸಂಧನೂ, ಜಿತೇಂದ್ರಿಯನೂ ಆದ ಶಂತನುಪುತ್ರ ಭೀಷ್ಮನನ್ನು ಬಿಟ್ಟು ಬೇರೆ ಯಾರೂ ಇವುಗಳ ಬಗ್ಗೆ ಸರಿಯಾಗಿ ಹೇಳುವವರು ಇಲ್ಲ. ಕೇಳಿಸಿಕೊಳ್ಳುವವರೂ ಬಹಳ ದುರ್ಲಭ. ಆದ್ದರಿಂದ ಮಹಾಬಾಹು ಭೀಷ್ಮರೇ! ದಯವಿಟ್ಟು ಈ ವಿಷಯಗಳನ್ನು ವಿಮರ್ಶಿಸಿ ನನಗೆ ಹೇಳಿ.

ಭೀಷ್ಮಃ

ತ್ವದ್ಯುಕ್ತೋಽಯಮನುಪ್ರಶ್ನೋ ಯುಧಿಷ್ಠಿರ ಗುಣೋದಯಃ ।
ಶೃಣು ಮೇ ಪುತ್ರ ಕಾರ್ತ್ಸ್ನ್ಯೇನ ಗುಹ್ಯಮಾಪತ್ಸು ಭಾರತ ॥೧೨॥

ಭೀಷ್ಮ- ಯುಧಿಷ್ಠಿರ! ನಿನ್ನ ಅನುಪ್ರಶ್ನೆಯು= ಹಿಂದೆ ನಾನು ಹೇಳಿದ ವಿಚಾರಗಳನ್ನು ಅನುಸರಿಸಿ ಕೇಳಿರುವ ಪ್ರಶ್ನೆಯು- ಯುಕ್ತವಾಗಿದೆ. ಅಭ್ಯುದಯಕ್ಕೆ ಅನುಕೂಲವಾಗಿದೆ. ಪುತ್ರ! ಭರತಕುಲ ಸಂಜಾತ! ಆಪತ್ಕಾಲದಲ್ಲಿ ಮಾಡಬೇಕಾದ ರಹಸ್ಯಗಳನ್ನು ಹೇಳುತ್ತೇನೆ. ಸರಿಯಾಗಿ ಕೇಳು.

ಅಮಿತ್ರೋ ಮಿತ್ರತಾಂ ಯಾತಿ ಮಿತ್ರಂ ಚಾಪಿ ಪ್ರದುಷ್ಯತಿ ।
ಸಾಮರ್ಥ್ಯಯೋಗಾತ್ ಕಾರ್ಯಾಣಾಂ ತದ್ಗತ್ಯಾ ಹಿ ಸದಾ ಗತಿಃ ॥೧೩॥

ಒಬ್ಬನ ಸಾಮರ್ಥ್ಯಕ್ಕೆ ಅನುಗುಣವಾಗಿ ಶತ್ರುಗಳು ಮಿತ್ರರಾಗುತ್ತಾರೆ. ಮಿತ್ರರು ಶತ್ರುಗಳಾಗುತ್ತಾರೆ. ಸಾಮರ್ಥ್ಯದ ಗತಿಗೆ (ಏರಿಳಿತಕ್ಕೆ) ತಕ್ಕಂತೆ ಕಾರ್ಯಗಳ ಗತಿಯು ಇರುತ್ತದೆ.

ತಸ್ಮಾದ್ ವಿಶ್ವಸಿತವ್ಯಂ ಚ ವಿಗ್ರಹಂ ಚ ಸಮಾಚರೇತ್ ।
ದೇಶಂ ಕಾಲಂ ಚ ವಿಜ್ಞಾಯ ಕಾರ್ಯಾಕಾರ್ಯವಿನಿಶ್ಚಯೇ ॥೧೪॥

ಆದ್ದರಿಂದ ಕಾರ್ಯ-ಅಕಾರ್ಯಗಳ ನಿಶ್ಚಯವಿದ್ದಾಗ ದೇಶ-ಕಾಲಗಳನ್ನು ತಿಳಿದು ವಿಶ್ವಾಸವನ್ನು ತೋರಬೇಕು. ಕಲಹವನ್ನು ಮಾಡಬೇಕು.

ಸಂಧಾತವ್ಯಂ ಬುಧೈರ್ನಿತ್ಯಂ ವ್ಯವಸ್ಯಂ ಚ ಹಿತಾರ್ಥಿಭಿಃ ।
ಅಮಿತ್ರೈರಪಿ ಸಂಧೇಯಂ ಪ್ರಾಣಾ ರಕ್ಷ್ಯಾಶ್ಚ ಭಾರತ ॥೧೫॥

ತಿಳಿದವರ (ಲೋಕಹಿತವನ್ನು ಬಲ್ಲವರ) ಜೊತೆ, ಹಿತೈಷಿಗಳ ಜೊತೆ ತಪ್ಪದೇ ಸಂಧಾನವನ್ನು ಮಾಡಿಕೊಳ್ಳಬೇಕು. ಭರತಕುಲಸಂಜಾತ! ಶತ್ರುಗಳ ಜೊತೆಯೂ ಸಂಧಾನ ಮಾಡಿಕೊಳ್ಳಬೇಕು. ಪ್ರಾಣಗಳನ್ನು ರಕ್ಷಿಸಬೇಕು.

ಯೋ ಹ್ಯಮಿತ್ರೈರ್ನರೋ ನಿತ್ಯಂ ನ ಸಂದಧ್ಯಾದಪಂಡಿತಃ ।
ನ ಸೋಽರ್ಥಮಾಪ್ನುಯಾತ್ ಕಿಂಚಿತ್ ಫಲಾನ್ಯಪಿ ಚ ಭಾರತ ॥೧೬ ।

ಯಾವ ನರನು ಶತ್ರುಗಳ ಜೊತೆ ಸಂಧಾನ ಮಾಡಿಕೊಳ್ಳುವುದಿಲ್ಲವೋ ಅವನು ದಡ್ಡ. ಭಾರತ! ಅವನು ಸಂಪತ್ತನ್ನು ಹೊಂದುವುದಿಲ್ಲ. ಬೇರೆ ಯಾವುದೇ ಫಲಗಳನ್ನು ಪಡೆಯಲಾರ.

ಯಸ್ತ್ವಮಿತ್ರೇಣ ಸಂಧತ್ತೇ ಮಿತ್ರೇಣ ಚ ವಿರುಧ್ಯತೇ ।
ಅರ್ಥಯುಕ್ತಿಂ ಸಮಾಲೋಕ್ಯ ಸುಮಹದ್ ವಿಂದತೇ ಫಲಮ್ ॥೧೭॥

ಯಾರು ತನಗೆ ಆಗುವ ಲಾಭವನ್ನು ಗಮನಿಸಿ ಶತ್ರುಗಳ ಜೊತೆ ಸಂಧಾನವನ್ನು ಮಾಡಿಕೊಳ್ಳುವನೋ, ಮಿತ್ರರನ್ನು ವಿರೋಧಿಸುವನೋ ಅವನು ಭಾರಿ ಫಲವನ್ನು ಹೊಂದುತ್ತಾನೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಮಾರ್ಜಾರಸ್ಯ ಚ ಸಂವಾದಂ ನ್ಯಗ್ರೋಧೇ ಮೂಷಕಸ್ಯ ಚ ॥೧೮॥

ಈ ವಿಷಯದಲ್ಲಿ ಪೂರ್ವಕಥೆಯೊಂದನ್ನು ಹೇಳುತ್ತಾರೆ. ಈ ಕಥೆ ಆಲದಮರದಲ್ಲಿ ಬೆಕ್ಕು- ಇಲಿಗಳ ಸಂವಾದ.

ವನೇ ಮಹತಿ ಕಸ್ಮಿಂಶ್ಚಿನ್ನ್ಯಗ್ರೋಧಃ ಸುಮಹಾನಭೂತ್ ।
ಲತಾಜಾಲಪರಿಚ್ಛನ್ನೋ ನಾನಾದ್ವಿಜಗಣಾಯುತಃ ॥೧೯॥

ಒಂದು ದೊಡ್ಡವನದಲ್ಲಿ ದೊಡ್ಡ ಆಲದ ಮರವಿತ್ತು. ನಾನಾ ಬಳ್ಳಿಗಳು ಅದಕ್ಕೆ ಹಬ್ಬಿದ್ದವು. ನಾನಾ ಹಕ್ಕಿಗಳು ಅಲ್ಲಿ ವಾಸಿಸುತ್ತಿದ್ದವು.

ಸ್ಕಂಧವಾನ್ ಮೇಘಸಂಕಾಶಃ ಶೀತಚ್ಛಾಯೋ ಮನೋರಮಃ ।
ವೈತಂತ್ಯಮಭಿತೋ ಜಾತಸ್ತರುರ್ವ್ಯಾಲಮೃಗಾಕುಲಃ ॥೨೦॥

ದೊಡ್ಡ ದೊಡ್ಡ ರೆಂಬೆಗಳನ್ನು ಹೊಂದಿದ್ದ ಆ ಮರವು ದೊಡ್ಡ ಮೋಡದಂತೆ ಇತ್ತು. ಅದರ ನೆರಳು ತಂಪಾಗಿ ಮನೋಹರವಾಗಿತ್ತು. ಸರ್ಪಗಳ, ಮೃಗಗಳ ದಟ್ಟಣೆ (ಸಾಂದ್ರತೆ) ಯನ್ನು ಹೊಂದಿದ್ದ ಆ ಮರವು ವೈತಂತ್ಯ ಎಂಬ ಸ್ಥಳದ ಸಮೀಪದಲ್ಲಿ ಬೆಳೆದಿತ್ತು.

ತಸ್ಯ ಮೂಲಂ ಸಮಾಶ್ರಿತ್ಯ ಕೃತ್ವಾ ಶತಮುಖಂ ಬಿಲಮ್ ।
ವಸತಿ ಸ್ಮ ಮಹಾಪ್ರಾಜ್ಞಃ ಪಲಿತೋ ನಾಮ ಮೂಷಕಃ ॥೨೧॥

ಮಹಾಪ್ರಾಜ್ಞನಾದ ಪಲಿತ ಎಂಬ ಇಲಿಯು ಆ ಮರದ ಬುಡದಲ್ಲಿ ನೂರು ದ್ವಾರಗಳ ಬಿಲವನ್ನು ಮಾಡಿಕೊಂಡು ವಾಸಿಸುತ್ತಿತ್ತು.

ಶಾಖಾಶ್ಚ ತಸ್ಯ ಸಂಶ್ರಿತ್ಯ ವಸತಿ ಸ್ಮ ಸುಖಂ ತದಾ ।
ಲೋಮಶೋ ನಾಮ ಮಾರ್ಜಾರಃ ಪಕ್ಷಿಸತ್ತ್ವವಸಾದಕಃ ॥೨೨॥

ಪಕ್ಷಿಗಳ ಪ್ರಾಣಹರಣವನ್ನು ಮಾಡುತ್ತಿದ್ದ ಲೋಮಶ ಎಂಬ ಬೆಕ್ಕು ಆ ಮರದ ಕೊಂಬೆಗಳನ್ನು ಆಶ್ರಯಿಸಿ ಸುಖವಾಗಿ ವಾಸಿಸುತ್ತಿತ್ತು.

ತತ್ರ ಚಾಗತ್ಯ ಚಂಡಾಲೋ ವೈತಂತ್ಯಕೃತಕೇತನಃ ।
ಅಯೋಜಯತ್ತಮುನ್ಮಾಥಂ ನಿತ್ಯಮಸ್ತಂ ಗತೇ ರವೌ ॥೨೩॥

ವೈತಂತ್ಯ ಎಂಬ ಸ್ಥಳದಲ್ಲಿ ವಸತಿಯನ್ನು ಮಾಡಿಕೊಂಡಿದ್ದ ಚಂಡಾಲನೊಬ್ಬನು ಪ್ರತಿದಿನ ಸೂರ್ಯಾಸ್ತದ ಅನಂತರ ಅಲ್ಲಿಗೆ ಬಂದು ಬಲೆಯನ್ನು ಹಾಕುತ್ತಿದ್ದನು.

ತತ್ರ ಸ್ನಾಯುಮಯಾನ್ ಪಾಶಾನ್ ಯಥಾವತ್ ಸನ್ನಿಧಾಯ ಸಃ ।
ಗೃಹಂ ಗತ್ವಾ ಸುಖಂ ಶೇತೇ ಪ್ರಭಾತಾಮೇತಿ ಶರ್ವರೀಮ್ ॥೨೪॥

(ಪ್ರಾಣಿಗಳ) ನರಗಳಿಂದ ಮಾಡಿದ್ದ ಹಗ್ಗಗಳನ್ನು ರಾತ್ರಿಯಲ್ಲಿ ಅಲ್ಲಿ ಸರಿಯಾಗಿ ಇಟ್ಟು ಮನೆಗೆ ಹೋಗಿ ಸುಖವಾಗಿ ಮಲಗುತ್ತಿದ್ದನು. ಮುಂಜಾನೆ ಅಲ್ಲಿಗೆ ಹೋಗುತ್ತಿದ್ದನು.

ತತ್ರ ಸ್ಮ ನಿತ್ಯಂ ಬಧ್ಯಂತೇ ನಕ್ತಂ ಬಹುವಿಧಾ ಮೃಗಾಃ ।
ಕದಾಚಿತ್ತತ್ರ ಮಾರ್ಜಾರಸ್ತ್ವಪ್ರಮತ್ತೋಽಪ್ಯಬಧ್ಯತ ॥೨೫॥

ಅಲ್ಲಿ ಪ್ರತಿದಿನ ರಾತ್ರಿಕಾಲದಲ್ಲಿ ಬಹುವಿಧ ಪ್ರಾಣಿಗಳು ಬಂಧನಕ್ಕೆ ಒಳಗಾಗುತ್ತಿದ್ದವು. ಅಲ್ಲಿ ಎಚ್ಚರದಿಂದ ಇರುತ್ತಿದ್ದ ಬೆಕ್ಕು ಕೂಡ ಒಮ್ಮೆ ಬಂಧನಕ್ಕೊಳಗಾಯಿತು.

ತಸ್ಮಿನ್ ಬದ್ಧೇ ಮಹಾಪ್ರಾಜ್ಞಃ ಶತ್ರೌ ನಿತ್ಯಾತತಾಯಿನಿ ।
ತಂ ಕಾಲಂ ಪಲಿತೋ ಜ್ಞಾತ್ವಾ ವಿಚಚಾರ ಸುನಿರ್ಭಯಃ ॥೨೬॥

ಶತ್ರುವೂ, ಸದಾ ಆತತಾಯಿಯೂ (ಕ್ರೂರ ವಿಧಾನಗಳಿಂದ ಹಾನಿ ಮಾಡುವವನು) ಆಗಿದ್ದ ಆ ಬೆಕ್ಕು ಬಂಧನಕ್ಕೆ ಒಳಗಾದಾಗ, ಇದನ್ನು ತಿಳಿದನು. ಮಹಾಪ್ರಾಜ್ಞನಾದ ಪಲಿತ (ಇಲಿಯು) ಏನೂ ಭಯವಿಲ್ಲದೆ ಸಂಚರಿಸಿತು.

ತೇನಾನುಚರತಾ ತಸ್ಮಿನ್ ವನೇ ವಿಶ್ವಸ್ತಚಾರಿಣಾ ।
ಭಕ್ಷಂ ವಿಚರಮಾಣೇನ ನಚಿರಾದ್ದೃಷ್ಟಮಾಮಿಷಮ್ ॥೨೭॥

ಆ ವನದಲ್ಲಿ ಭಯವಿಲ್ಲದೆ ಸಂಚರಿಸುತ್ತಿದ್ದ, ಆಹಾರವನ್ನು ಹುಡುಕುತ್ತಿದ್ದ ಆ ಇಲಿಗೆ ಮಾಂಸದ ತುಂಡು ಕಾಣಿಸಿತು.

ಸ ತಮುನ್ಮಾಥಮಾರುಹ್ಯ ತದಾಮಿಷಮಭಕ್ಷಯತ್ ।
ತಸ್ಯೋಪರಿ ಸಪತ್ನಸ್ಯ ಬದ್ಧಸ್ಯ ಮನಸಾ ಹಸನ್ ॥೨೮॥

ಇಲಿಯು ಆ ಬಲೆಯನ್ನು ಏರಿ, ಅಲ್ಲಿ ಬಂಧನದಲ್ಲಿದ್ದ ತನ್ನ ವೈರಿಯಾದ ಬೆಕ್ಕನ್ನು ಮನಸ್ಸಿನಲ್ಲಿ ಅಣಕಿಸುತ್ತಾ ಆ ಮಾಂಸವನ್ನು ತಿಂದಿತು.

ಆಮಿಷೇ ತು ಪ್ರಸಕ್ತಃ ಸ ಕದಾಚಿದವಲೋಕಯನ್ ।
ಅಪಶ್ಯದಪರಂ ಘೋರಮಾತ್ಮನಃ ಶತ್ರುಮಾಗತಮ್ ॥೨೯॥

ಮಾಂಸದಲ್ಲಿ ನಿರತವಾಗಿದ್ದ ಆ ಇಲ್ಲಿ ಒಂದು ಸಲ ಬೇರೆ ಕಡೆ ನೋಡಿದಾಗ ಬರುತ್ತಿರುವ ತನ್ನ ಇನ್ನೊಬ್ಬ ಘೋರಶತ್ರುವನ್ನು ನೋಡಿತು.

ಶರಪ್ರಸೂನಸಂಕಾಶಂ ಮಹೀವಿವರಶಾಯಿನಮ್ ।
ನಕುಲಂ ಹರಿಕಂ ನಾಮ ಚಪಲಂ ತಾಮ್ರಲೋಚನಮ್ ॥೩೦॥

ಆ ಶತ್ರು ಶರ ಎಂಬ ಹುಲ್ಲಿನ ಹೂವಿನಂತಿದ್ದ, ಭೂಮಿಯ ಬಿಲದಲ್ಲಿ ವಾಸ ಮಾಡುವ, ಕೆಂಪು ಕಣ್ಣಿನ, ಚಪಲ ಸ್ವಭಾವದ ಹರಿಕ ಎಂಬ ಹೆಸರಿನ ಮುಂಗಸಿ.

ತೇನ ಮೂಷಕಗಂಧೇನ ತ್ವರಮಾಣಮುಪಾಗತಮ್ ।
ಭಕ್ಷಾರ್ಥಂ ಲೇಲಿಹದ್ ವಕ್ತ್ರಂ ಭೂಮಾವೂರ್ಧ್ವಮುಖಂ ಸ್ಥಿತಮ್ ॥೩೧॥

ಇಲಿಯ ವಾಸನೆಯಿಂದ ತ್ವರೆಯಿಂದ ಬಂದು ನಿಂತಿರುವ, ತಿನ್ನುವುದಕ್ಕಾಗಿ ಬಾಯನ್ನು ಆಡಿಸುತ್ತಿರುವ, ಮುಖವನ್ನು ಮೇಲೆತ್ತಿ ನೆಲದ ಮೇಲೆ ನಿಂತಿರುವ (ಮುಂಗಸಿಯನ್ನು ಇಲಿಯು ನೋಡಿತು).

ಶಾಖಾಗತಮರಿಂ ಚಾನ್ಯಮಪಶ್ಯತ್ ಕೋಟರಾಲಯಮ್ ।
ಉಲೂಕಂ ಚಂದ್ರಕಂ ನಾಮ ತೀಕ್ಷ್ಣತುಂಡಂ ಕ್ಷಪಾಚರಮ್ ॥೩೨॥

ಆಲದ ಮರದ ಪೊಟರೆಯಲ್ಲಿ ವಾಸಿಸುವ, ಆಗ ಮರದ ಕೊಂಬೆಯ ಮೇಲೆ ಕುಳಿತಿದ್ದ, ರಾತ್ರಿ ಸಂಚಾರಿಯಾದ, ತೀಕ್ಷ್ಣಕೊಕ್ಕಿನ ಇನ್ನೊಂದು ಶತ್ರುವನ್ನು (ಇಲಿಯು) ನೋಡಿತು. ಆ ಶತ್ರು ಚಂದ್ರಕ ಎಂಬ ಹೆಸರಿನ ಗೂಬೆ.

ಗತಸ್ಯ ವಿಷಯಂ ತಸ್ಯ ನಕುಲೋಲೂಕಯೋಸ್ತದಾ ।
ಅಥಾಸ್ಯಾಸೀದಿಯಂ ಚಿಂತಾ ತತ್ ಪ್ರಾಪ್ಯ ಸುಮಹದ್ಭಯಮ್ ॥೩೩॥

ಮುಂಗಸಿ ಮತ್ತು ಗೂಬೆಗಳ ಕಣ್ಣಿಗೆ ಬಿದ್ದಿರುವ, ಭಾರಿ ಭಯಕ್ಕೊಳಗಾದ ಆ ಇಲಿಗೆ ಆಗ ಮುಂದೆ ವಿವರಿಸಲ್ಪಡುವ ಆಲೋಚನೆಯು ಉಂಟಾಯಿತು.

ಆಪದ್ಯಸ್ಯಾಂ ಸುಕಷ್ಟಾಯಾಂ ಮರಣೇ ಸಮುಪಸ್ಥಿತೇ ।
ಸಮಂತಾದ್ಭಯ ಉತ್ಪನ್ನೇ ಕಥಂ ಕಾರ್ಯಂ ಹಿತೈಷಿಣಾ ॥೩೪॥

ಬಹಳ ಕಷ್ಟದ ಈ ಆಪತ್‌ಸ್ಥಿತಿಯಲ್ಲಿ, ಮರಣವೇ ಎದುರಾದಾಗ, ಎಲ್ಲ ಕಡೆಯಿಂದಲು ಭಯವೇ ಹುಟ್ಟಿದಾಗ ಹಿತವನ್ನು ಬಯಸುವವನು ಏನು ಮಾಡಬೇಕು?

ಸ ತಥಾ ಸರ್ವತೋ ರುದ್ಧಃ ಸರ್ವತ್ರ ಸಮದರ್ಶನಃ ।
ಅಭವದ್ ಭಯಸಂತಪ್ತಶ್ಚಕ್ರೇ ಚೇಮಾಂ ಪರಾಂ ಗತಿಮ್ ॥೩೫॥

ಹಾಗೆ ಎಲ್ಲ ಕಡೆಯಿಂದಲೂ ನಿರೋಧಕ್ಕೆ ಒಳಗಾದ, ಎಲ್ಲ ಕಡೆಯೂ ಒಂದೇ ತರಹದ ಸ್ಥಿತಿಯನ್ನು ಕಾಣುತ್ತಿದ್ದ, ಭಯ ಸಂತಪ್ತವಾದ ಆ ಇಲಿಯು ಈ (ಮುಂದೆ ಹೇಳುವ) ಪರಮಚಿಂತನೆಯನ್ನು ಮಾಡಿತು.

ಆಪನ್ನಾಶಾಯ ಭೂಯಿಷ್ಠಂ ಶಂಕನೀಯಂ ಚ ಜೀವಿತಮ್ ।
ಸಮಂತಸಂಶಯಾ ಚೇಯಮಸ್ಮಾನಾಪದುಪಸ್ಥಿತಾ ॥೩೬॥

ಪುಷ್ಕಲಿ ಭೋಜನವು ಒದಗಿ ಬಂದಾಗ ನನಗೆ ಬದುಕೇ ಸಂಶಯಾಸ್ಪದವಾಗಿದೆ. ಎಲ್ಲ ಕಡೆಯಿಂದಲೂ ಪ್ರಾಣಸಂಶಯವನ್ನೇ ಉಂಟುಮಾಡುತ್ತಿರುವ ಈ ಆಪತ್ತು ನನಗೆ ಒದಗಿ ಬಂದಿದೆ.

ಗತಂ ಹಿ ಸಹಸಾ ಭೂಮಿಂ ನಕುಲೋ ಮಾಂ ಸಮಾಪ್ನುಯಾತ್ ।
ಉಲೂಕಶ್ಚೇಹ ತಿಷ್ಠಂತಂ ಮಾರ್ಜಾರಃ ಪಾಶಸಂಕ್ಷಯಾತ್ ॥೩೭॥

ನಾನು ಕೂಡಲೇ ಭೂಮಿಗೆ ಹೋದರೆ ಮುಂಗಸಿಯು ನನ್ನನ್ನು ಹಿಡಿಯುತ್ತದೆ. ಇಲ್ಲೇ ಇದ್ದರೆ ಗೂಬೆಯು ನನ್ನನ್ನು ಹಿಡಿಯುತ್ತದೆ. ಬಲೆಯ ಪಾಶಗಳನ್ನು ಕತ್ತರಿಸಿ ಒಳಗೆ ಹೋದರೆ ಬೆಕ್ಕು ನನ್ನನ್ನು ಹಿಡಿಯುತ್ತದೆ.

ನ ತ್ವೇವಾಸ್ಮದ್ವಿಧಃ ಪ್ರಾಜ್ಞಃ ಸಮ್ಮೋಹಂ ಗಂತುಮರ್ಹತಿ ।
ಕರಿಷ್ಯೇ ಜೀವಿತೇ ಯತ್ನಂ ಯಾವದುಚ್ಛ್ವಾಸನಿಗ್ರಹಮ್ ॥೩೮॥

ನನ್ನಂತಹ ಪ್ರಾಜ್ಞನು ಸಮ್ಮೋಹಕ್ಕೆ ಒಳಗಾಗಬಾರದು. ಉಸಿರಿನ ನಿಗ್ರಹವಾಗುವವರೆಗೂ ಬದುಕಿ ಉಳಿಯಲು ಪ್ರಯತ್ನಿಸುತ್ತೇನೆ.

ನ ಹಿ ಬುದ್ಧ್ಯಾನ್ವಿತಾಃ ಪ್ರಾಜ್ಞಾ ನೀತಿಶಾಸ್ತ್ರವಿಶಾರದಾಃ ।
ಸಂಭ್ರಮಂತ್ಯಾಪದಂ ಪ್ರಾಪ್ಯ ಮಹತೋಽರ್ಥಾನವಾಪ್ಯ ಚ ॥೩೯॥

ಬುದ್ಧಿವಂತರಾದ ಪ್ರಾಜ್ಞರು, ನೀತಿಶಾಸ್ತ್ರವಿಶಾರದರು ಆಪತ್ತಿಗೆ ಒಳಗಾದಾಗ ಮತ್ತು ಭಾರಿ ಸಂಪತ್ತನ್ನು ಹೊಂದಿದಾಗ ಗಡಿಬಿಡಿಗೆ ಒಳಗಾಗುವುದಿಲ್ಲ.

ನ ತ್ವನ್ಯಾಮಿಹ ಮಾರ್ಜಾರಾದ್ ಗತಿಂ ಪಶ್ಯಾಮಿ ಸಾಂಪ್ರತಮ್ ।
ವಿಷಮಸ್ಥೋ ಹ್ಯಯಂ ಜಂತುಃ ಕೃತ್ಯಂ ಚಾಸ್ಯ ಮಹನ್ಮಯಾ ॥೪೦॥

ಈಗ ನನಗೆ ಈ ಬೆಕ್ಕೇ ಗತಿ. ಬೇರೆ ಯಾವ ಗತಿಯೂ ಕಾಣುವುದಿಲ್ಲ. ಈ ಪ್ರಾಣಿಯೂ (ಬೆಕ್ಕು) ವಿಷಮಸ್ಥಿತಿಗೆ ಒಳಗಾಗಿದ. ನನ್ನಿಂದ ಈ ಪ್ರಾಣಿಗೆ ಬಹಳ ಪ್ರಯೋಜನವಿದೆ.

ಜೀವಿತಾರ್ಥೀ ಕೃತಸ್ತ್ವದ್ಯ ಪ್ರಾರ್ಥಿತಃ ಶತ್ರುಭಿಸ್ತ್ರಿಭಿಃ ।
ತಸ್ಮಾದಿಮಮಹಂ ಶತ್ರುಂ ಮಾರ್ಜಾರಂ ಸಂಶ್ರಯಾಮಿ ವೈ ॥೪೧॥

ಮೂರು ಶತ್ರುಗಳು ಈಗ ನನ್ನನ್ನು ಬಯಸುತ್ತಿದ್ದಾರೆ. ನಾನು ಬದುಕಲು ಬಯಸುತ್ತಿದ್ದೇನೆ. ಆದ್ದರಿಂದ ನಾನು ಈ ಶತ್ರು ಬೆಕ್ಕನ್ನೇ ಅವಲಂಬಿಸುತ್ತೇನೆ.

ಕ್ಷತ್ರವಿದ್ಯಾಂ ಸಮಾಶ್ರಿತ್ಯ ಹಿತಮಸ್ಯೋಪಧಾರಯೇ ।
ಯೇನೇಮಂ ಶತ್ರುಸಂಘಾತಂ ಅರಿಪೂರ್ವೇಣ ವಂಚಯೇ ॥೪೨॥

ಘಾಸಿಗೆ ಒಳಗಾದವರನ್ನು ರಕ್ಷಿಸುವವನು ಕ್ಷತ್ರ, ಅವನ ಕೌಶಲವು ಕ್ಷತ್ರವಿದ್ಯೆ. ಈಗ ಕ್ಷತ್ರವಿದ್ಯೆಯನ್ನು ಬಳಸಿ ಇವನಿಗೆ (ಬೆಕ್ಕಿಗೆ) ಹಿತವನ್ನು ಮಾಡುತ್ತೇನೆ. ಈ ಪ್ರಥಮ ಶತ್ರುವಿನ ಸಹಾಯದಿಂದ ಶತ್ರುಸಮೂಹವನ್ನು ವಂಚಿಸುತ್ತೇನೆ.

ಅಯಮತ್ಯಂತಶತ್ರುರ್ಮೇ ವೈಷಮ್ಯಂ ಪರಮಂ ಗತಃ ।
ಮೂಢೋ ಗ್ರಾಹಯಿತುಂ ಸ್ವಾರ್ಥಂ ಸಂಗತ್ಯಾ ಯದಿ ಶಕ್ಯತೇ ॥೪೩॥

ಈ ಬೆಕ್ಕು ನನ್ನ ಮಹಾಶತ್ರು, ಇವನು ಬಹಳ ವಿಷಮಸ್ಥಿತಿಯಲ್ಲಿ ಇದ್ದಾನೆ. ಬಹಳ ಮೂಢ. ಇವನ ಜೊತೆ ಸೇರಿ ನನ್ನ ಕೆಲಸವನ್ನು ಸಾಧಿಸಲು ಶಕ್ಯವೇ ಎಂದು ನೋಡುತ್ತೇನೆ.

ಕದಾಚಿದ್ವ್ಯಸನಂ ಪ್ರಾಪ್ಯ ಸಂಧಿಂ ಕುರ್ಯಾನ್ಮಯಾ ಸಹ ।
ಬಲಿನಾ ಸನ್ನಿವಿಷ್ಟಸ್ಯ ಶತ್ರೋರಪಿ ಪರಿಗ್ರಹಃ ।
ಕಾರ್ಯ ಇತ್ಯಾಹುರಾಚಾರ್ಯಾ ವಿಷಮೇ ಜೀವಿತಾರ್ಥಿನಾ ॥೪೪॥

ಬೆಕ್ಕೂ ಕಷ್ಟಕ್ಕೆ ಒಳಗಾಗಿರುವುದರಿಂದ ನನ್ನ ಜೊತೆ ಸಂಧಿಯನ್ನು ಮಾಡಿಕೊಳ್ಳಬಹುದು. ಕಷ್ಟಕಾಲದಲ್ಲಿ ಪ್ರಾಣವನ್ನು ಉಳಿಸಿಕೊಳ್ಳಲು ಬಯಸುವವನು,

ತಾನು ಬಲಶಾಲಿಯೇ ಆಗಿದ್ದರೂ, ಹತ್ತಿರ ಇರುವ ಶತ್ರುವಿನ ಜೊತೆ ಸಂಧಿಯನ್ನು ಮಾಡಿಕೊಳ್ಳಬೇಕು ಎಂದು ಬಲ್ಲವರು ಹೇಳುತ್ತಾರೆ.

ಮೂಢೋ ಹಿ ಪಂಡಿತಃ ಶತ್ರುರ್ನ ಹಿ ಮಿತ್ರಮಪಂಡಿತಃ ।
ಮಮ ಹ್ಯಮಿತ್ರೇ ಮಾರ್ಜಾರೇ ಜೀವಿತಂ ಸಂಪ್ರತಿಷ್ಠಿತಮ್ ॥೪೫॥

ಮೋಹಕ್ಕೆ ಒಳಗಾದ ಪಂಡಿತ ಶತ್ರುವು ಹೆಚ್ಚು ಅನುಕೂಲ. ಪಂಡಿತನಲ್ಲದ ಮಿತ್ರನು (ಅನುಕೂಲ) ಅಲ್ಲ. ನನ್ನ ಉಳಿವು ಶತ್ರುವಾದ ಬೆಕ್ಕನ್ನು ಅವಲಂಬಿಸಿದೆ.

ಹಂತೈನಂ ಸಂಪ್ರವಕ್ಷ್ಯಾಮಿ ಹೇತುಮಾತ್ಮಾಭಿರಕ್ಷಣೇ ।
ಅಪೀದಾನೀಮಯಂ ಶತ್ರುಃ ಸಂಗತ್ಯಾ ಪಂಡಿತೋ ಭವೇತ್ ॥೪೬॥

ಹಾ! ಆತ್ಮರಕ್ಷಣೆಗಾಗಿ ಒಂದು ಯುಕ್ತಿಯನ್ನು ಇವನಿಗೆ ಹೇಳುತ್ತೇನೆ. ಈ ಶತ್ರುವು, ಈಗ ಸಂಗತಿಯಿಂದಾಗಿ ಇಬ್ಬರ ಕಾರ್ಯಸಿದ್ಧಿಯೂ ಆಗುವುದರಿಂದ, ಪಂಡಿತನಾಗ ಬಹುದು= ಅರ್ಥಮಾಡಿಕೊಳ್ಳಬಹುದು.

ತತೋಽರ್ಥಗತಿತತ್ತ್ವಜ್ಞಃ ಸಂಧಿವಿಗ್ರಹಕಾಲವಿತ್ ।
ಸಾಂತ್ವಪೂರ್ವಮಿದಂ ವಾಕ್ಯಂ ಮಾರ್ಜಾರಂ ಮೂಷಕೋಽಬ್ರವೀತ್ ॥

ಅನಂತರ ಕಾರ್ಯಸಿದ್ಧಿಯ ಮರ್ಮವನ್ನು ತಿಳಿದಿದ್ದ, ಸಂಧಿಕಾಲ ಮತ್ತು ವಿಗ್ರಹಕಾಲವನ್ನು ತಿಳಿದಿದ್ದ (ಯಾವಾಗ ಸಂಧಾನವನ್ನು ಮಾಡಿಕೊಳ್ಳಬೇಕು, ಯಾವಾಗ ಕಲಹ ಮಾಡಬೇಕು ಎಂದು ತಿಳಿದಿದ್ದ) ಇಲಿಯು ಮನವೊಲಿಸುವ ರೀತಿಯಲ್ಲಿ ಬೆಕ್ಕಿಗೆ ಹೇಳಿತು.

ಸೌಹೃದೇನಾಭಿಭಾಷೇ ತ್ವಾ ಕಚ್ಚಿನ್ಮಾರ್ಜಾರ ಜೀವಸಿ ।
ಜೀವಿತಂ ಹಿ ತವೇಚ್ಛಾಮಿ ಶ್ರೇಯಃ ಸಾಧಾರಣಂ ಹಿ ನೌ ॥೪೮॥

ಬೆಕ್ಕೆ! ಸ್ನೇಹದಿಂದ ನಿನ್ನೊಡನೆ ಮಾತನಾಡುತ್ತಿದ್ದೇನೆ. ಬದುಕಿರುವಿ ತಾನೆ? ನಿನ್ನ ಪ್ರಾಣ ಉಳಿಯಬೇಕು ಎಂದು ನನ್ನ ಇಚ್ಛೆ. ಪ್ರಾಣದ ಉಳಿವು ನಮ್ಮಿಬ್ಬರಿಗೂ ಸಮಾನವಾದ ಶ್ರೇಯಸ್ಸು ಅಲ್ಲವೇ?

ನ ತೇ ಸೌಮ್ಯ ವಿಷತ್ತವ್ಯಂ ಜೀವಿಷ್ಯಸಿ ಯಥಾ ಪುರಾ ।
ಅಹಂ ತ್ವಾಮುದ್ಧರಿಷ್ಯಾಮಿ ಪ್ರಾಣಾನ್ ಜಹ್ಯಾಂ ಹಿ ತೇ ಕೃತೇ ॥೪೯॥

ಸೌಮ್ಯ! ನೀನು ವಿಷಾದಿಸಬೇಡ, ನೀನು ಇಷ್ಟು ದಿನ ಹೇಗೋ ಹಾಗೆ ಮುಂದೆಯೂ ಜೀವಿಸುವಿ. ನಾನು ನಿನ್ನನ್ನು ಉದ್ಧರಿಸುತ್ತೇನೆ. ನಿನಗಾಗಿ ಪ್ರಾಣಗಳನ್ನೇ ತ್ಯಜಿಸುವೆನು.

ಅಸ್ತಿ ಕಶ್ಚಿದುಪಾಯೋಽತ್ರ ಪುಷ್ಕಲಃ ಪ್ರತಿಭಾತಿ ಮಾಮ್ ।
ಯೇನ ಶಕ್ಯಸ್ತ್ವಯಾ ಮೋಕ್ಷಃ ಪ್ರಾಪ್ತುಂ ಶ್ರೇಯೋ ಯಥಾ ಮಯಾ ॥

ಒಂದು ಪುಷ್ಕಲ ಉಪಾಯವು ನನಗೆ ತೋರುತ್ತಿದೆ. ಆ ಉಪಾಯದಿಂದ ನೀನು (ಈ ಬಲೆಯಿಂದ) ಬಿಡುಗಡೆಯನ್ನು ಹೊಂದಬಹುದು. ನಾನೂ ಶ್ರೇಯಸ್ ಅನ್ನು ಹೊಂದಬಹುದು.

ಮಯಾ ಹ್ಯುಪಾಯೋ ದೃಷ್ಟೋಽಯಂ ವಿಚಾರ್ಯ ಮತಿಮಾತ್ಮನಃ ।
ಆತ್ಮಾರ್ಥಂ ಚ ತ್ವದರ್ಥಂ ಚ ಶ್ರೇಯಃ ಸಾಧಾರಣಂ ಹಿ ನೌ ॥೫೧॥

ನಾನು ಸರಿಯಾಗಿ ವಿಮರ್ಶಿಸಿ ಈ ಉಪಾಯವನ್ನು ಕಂಡುಕೊಂಡಿದ್ದೇನೆ. ಈ ಉಪಾಯದಿಂದ ನನಗೂ ಶ್ರೇಯಸ್ ಆಗುತ್ತದೆ. ನಿನಗೂ ಶ್ರೇಯಸ್ ಆಗುತ್ತದೆ.

ಇದಂ ಹಿ ನಕುಲೋಲೂಕಂ ಪಾಪಬುದ್ಧ್ಯಾಭಿತಃ ಸ್ಥಿತಮ್ ।
ನ ಧರ್ಷಯತಿ ಮಾರ್ಜಾರ ತೇನ ಮೇ ಸ್ವಸ್ತಿ ಸಾಂಪ್ರತಮ್ ॥೫೨॥

ಬೆಕ್ಕೆ! ದುಷ್ಟಬುದ್ಧಿಯ ಈ ಮುಂಗುಸಿ ಮತ್ತು ಗೂಬೆಗಳು ಹತ್ತಿರವೇ ಇವೆ. ಆದರೂ ಇನ್ನೂ ನನ್ನನ್ನು ಆಕ್ರಮಿಸಿಲ್ಲ. ಆದ್ದರಿಂದ ಈಗ ನಾನು ಕ್ಷೇಮದಿಂದಿದ್ದೇನೆ.

ಕೂಜಂಶ್ಚಪಲನೇತ್ರೋಽಯಂ ಕೌಶಿಕೋ ಮಾಂ ನಿರೀಕ್ಷತೇ ।
ನಗಶಾಖಾಗ್ರಗಃ ಪಾಪಸ್ತಸ್ಯಾಹಂ ಭೃಶಮುದ್ವಿಜೇ ॥೫೩॥

ಮರದ ರೆಂಬೆಯ ತುದಿಯಲ್ಲಿರುವ, ಚಂಚಲಕಣ್ಣಿನ, ಪಾಪಿ ಗೂಬೆಯು ಕೂಗುತ್ತ ನನ್ನನ್ನು ನೋಡುತ್ತಿದೆ. ಆದ್ದರಿಂದ ನಾನು ಬಹಳ ಉದ್ವಿಗ್ನನಾಗಿದ್ದೇನೆ.

ಸತಾಂ ಸಾಪ್ತಪದಂ ಸಖ್ಯಂ ಸವಾಸೋ ಮೇಽಸಿ ಪಂಡಿತಃ ।
ಸಾಂವಾಸ್ಯಕಂ ಕರಿಷ್ಯಾಮಿ ನಾಸ್ತಿ ತೇ ಮೃತ್ಯುತೋ ಭಯಮ್ ॥೫೪॥

ಸಜ್ಜನರು ಏಳು ಹೆಜ್ಜೆ ಜೊತೆಗೆ ನಡೆದರೆ ಅವರು ಮಿತ್ರರಾಗುತ್ತಾರೆ. ಪಂಡಿತನಾದ ನೀನು ನನ್ನ ಸಹವಾಸಿಯಾಗಿರುವಿ. ಸಹವಾಸಿಯ ಕರ್ತವ್ಯವನ್ನು ಮಾಡುತ್ತೇನೆ. ನಿನಗೆ ಸಾವಿನ ಭಯವಿಲ್ಲ.

ನ ಹಿ ಶಕ್ನೋಷಿ ಮಾರ್ಜಾರ ಪಾಶಂ ಛೇತ್ತುಂ ವಿನಾ ಮಯಾ ।
ಅಹಂ ಛೇತ್ಸ್ಯಾಮಿ ತೇ ಪಾಶಂ ಯದಿ ಮಾಂ ತ್ವಂ ನ ಹಿಂಸಸಿ ॥೫೫॥

ನನ್ನ ಸಹಾಯವಿಲ್ಲದೆ ನೀನು ಬಲೆಯ ಪಾಶವನ್ನು ಕತ್ತರಿಸಲಾರೆ. ನೀನು ನನ್ನನ್ನು ಹಿಂಸಿಸದಿದ್ದರೆ ನಾನು ನಿನ್ನ ಪಾಶವನ್ನು ಕತ್ತರಿಸುತ್ತೇನೆ.

ತ್ವಮಾಶ್ರಿತೋ ನಗಸ್ಯಾಗ್ರಂ ಮೂಲಂ ತ್ವಹಮುಪಾಶ್ರಿತಃ ।
ಚಿರೋಷಿತಾವಿಹಾವಾಂ ವೈ ವೃಕ್ಷೇಽಸ್ಮಿನ್ ವಿದಿತಂ ಹಿ ತೇ ॥೫೬॥

ನೀನು ಮರೆದ ತುದಿಯಲ್ಲಿ ವಾಸಿಸುವಿ. ನಾನು ಮರದ ಮೂಲವನ್ನು ಆಶ್ರಯಿಸಿದ್ದೇನೆ. ಇಲ್ಲಿ ನಾವು ಬಹಳ ಕಾಲದಿಂದ ವಾಸಿಸುತ್ತಿದ್ದೇವೆ. ನಿನಗೆ ತಿಳಿದೇ ಇದೆ.

ಯಸ್ಮಿನ್ನಾಶ್ವಸತೇ ಕಶ್ಚಿದ್ಯಶ್ಚ ನಾಶ್ವಸತೇ ಕ್ವಚಿತ್ ।
ನ ತೌ ಧೀರಾಃ ಪ್ರಶಂಸಂತಿ ನಿತ್ಯಮುದ್ವಿಗ್ನಚೇತಸೌ ॥೫೭॥

ಯಾರು ಒಬ್ಬನಲ್ಲಿ ನಂಬಿಕೆ ಇಡುವುದಿಲ್ಲವೋ, ಯಾರು ಒಬ್ಬನಿಗೆ ಭರವಸೆಯನ್ನು ಕೊಡುವುದಿಲ್ಲವೋ, ಆದ್ದರಿಂದ ಯಾವಾಗಲೂ ಉದ್ವಿಗ್ನ ಮನಸ್ಸಿನ ಅವರಿಬ್ಬರನ್ನು ಪ್ರಾಜ್ಞರು ಮೆಚ್ಚುವುದಿಲ್ಲ.

ತಸ್ಮಾದ್ ವಿವರ್ಧತಾಂ ಪ್ರೀತಿಃ ಸತ್ಯಾ ಸಂಗತಿರಸ್ತು ನೌ ।
ಕಾಲಾತೀತಮಪಾರ್ಥಂ ಹಿ ನ ಪ್ರಶಂಸಂತಿ ಪಂಡಿತಾಃ ॥೫೮॥

ಆದ್ದರಿಂದ ನಮ್ಮಿಬ್ಬರಲ್ಲಿ ಪ್ರೀತಿಯು ಬೆಳೆಯಲಿ. ನಮ್ಮಿಬ್ಬರ ಸಂಬಂಧವು ಸತ್ಯವಾಗಲಿ (ಪ್ರಯೋಜನಕರವಾಗಲಿ). ಕಾಲಬಾಧಿತವಾದ, ಅರ್ಥಹೀನ ವಿಚಾರಗಳನ್ನು - ನಡವಳಿಕೆಗಳನ್ನು ಪಂಡಿತರು ಮೆಚ್ಚುವುದಿಲ್ಲ.

ಅರ್ಥಯುಕ್ತಿಮಿಮಾಂ ತಾವದ್ಯಥಾಭೂತಾಂ ನಿಶಾಮಯ ।
ತವ ಜೀವಿತಮಿಚ್ಛನ್ ವೈ ತ್ವಂ ಮಮೇಚ್ಛಸಿ ಜೀವಿತಮ್ ॥೫೯॥

ನಾನು ನಿನ್ನ ಉಳಿವನ್ನು ಬಯಸುತ್ತಿದ್ದೇನೆ. ನೀನು ನನ್ನ ಉಳಿವನ್ನು ಬಯಸುವುದಾದರೆ ಸರಿಯಾಗಿರುವ ಪ್ರಯೋಜನಕಾರಿಯಾದ ಈ ಯುಕ್ತಿಯನ್ನು ನೋಡು.

ಕಶ್ಚಿತ್ ತರತಿ ಕಾಷ್ಠೇನ ಸುಗಂಭೀರಾಂ ಮಹಾನದೀಮ್ ।
ಸ ತಾರಯತಿ ತತ್ ಕಾಷ್ಠಂ ಸ ಚ ಕಾಷ್ಠೇನ ತಾರ್ಯತೇ ॥೬೦॥

ಒಬ್ಬನು ದಿಮ್ಮಿಯ ಸಹಾಯದಿಂದ ಬಹಳ ಆಳವಾದ ನದಿಯನ್ನು ದಾಟುತ್ತಾನೆ. ಅವನು ಕಾಷ್ಠವನ್ನು (ದಿಮ್ಮಿಯನ್ನು) ದಾಟಿಸುತ್ತಾನೆ. ಕಾಷ್ಠವು ಅವನನ್ನು ದಾಟಿಸುತ್ತದೆ.

ಈದೃಶೋ ನೌ ಸಮಾಯೋಗೋ ಭವಿಷ್ಯತಿ ಸುನಿಸ್ತರಃ ।
ಅಹಂ ತ್ವಾಂ ತಾರಯಿಷ್ಯಾಮಿ ತ್ವಂ ಚ ಮಾಂ ತಾರಯಿಷ್ಯಸಿ ॥೬೧॥

ಈ ವಿಧವಾದ ನಮ್ಮಿಬ್ಬರ ಸಮಾಯೋಗವು ಆಪತ್ತನ್ನು ದಾಟುವ ಒಳ್ಳೆಯ ಸಾಧನವಾಗುತ್ತದೆ. ನಾನು ನಿನ್ನನ್ನು ದಾಟಿಸುತ್ತೇನೆ. ನೀನು ನನ್ನನ್ನು ದಾಟಿಸುವಿ.

ಏವಮುಕ್ತ್ವಾ ತು ಪಲಿತಸ್ತದರ್ಥಮುಭಯೋರ್ಹಿತಮ್ ।
ಹೇತುಮದ್ ಗ್ರಹಣೀಯಂ ಚ ಕಾಲಾಕಾಂಕ್ಷೀ ವ್ಯಪೈಕ್ಷತ ॥೬೨॥

ಪಲಿತನು (ಇಲಿಯು) ಇಬ್ಬರಿಗೂ ಹಿತಕರವಾದ, ಯುಕ್ತಿಯುಕ್ತವಾದ, ಸ್ವೀಕರಿಸಲು ಯೋಗ್ಯವಾದ ವಿಚಾರವನ್ನು ಹೇಳಿ ಬೆಕ್ಕಿನ ಕಡೆ ನೋಡಿತು.

ಅಥ ಸುವ್ಯಾಹೃತಂ ತಸ್ಯ ಶ್ರುತ್ವಾ ಶತ್ರುರ್ವಿಚಕ್ಷಣಃ ।
ಹೇತುಮದ್ ಗ್ರಹಣೀಯಾರ್ಥಂ ಮಾರ್ಜಾರೋ ವಾಕ್ಯಮಬ್ರವೀತ್ ॥

ಆ ಇಲಿಯ ಯುಕ್ತಿಯುಕ್ತವಾದ, ಸ್ವೀಕಾರಾರ್ಹವಾದ, ಒಳ್ಳೆಯ ಮಾತುಗಳನ್ನು ಕೇಳಿ ವಿಚಕ್ಷಣನಾದ ಶತ್ರುವಾದ ಬೆಕ್ಕು ಮಾತನಾಡಿತು.

ಬುದ್ಧಿಮಾನ್ ವಾಕ್ಯಸಂಪನ್ನಸ್ತದಾವ್ಯಮನುವರ್ಣಯನ್ ।
ತಾಮವಸ್ಥಾಮವೇಕ್ಷ್ಯಾಂತ್ಯಾಂ ಸಾಮ್ನೈವ ಪ್ರತ್ಯಪೂಜಯತ್ ॥೬೪॥

ಬುದ್ಧಿವಂತನು, ವಾಕ್ಯ ಕುಶಲನೂ ಆದ ಬೆಕ್ಕು ತನ್ನ ಆಗಿನ ಸ್ಥಿತಿಯನ್ನು ಅರಿತು, ಆ ಇಲಿಯ ಮಾತುಗಳನ್ನು ವರ್ಣಿಸುತ್ತಾ, ಸಮಾಧಾನದಿಂದ ಆದರಿಸಿತು.

ತತಸ್ತೀಕ್ಷ್ಣಾಗ್ರದಶನೋ ವೈಡೂರ್ಯಮಣಿಲೋಚನಃ ।
ಮೂಷಕಂ ಮಂದಮುದ್ವೀಕ್ಷ್ಯ ಮಾರ್ಜಾರೋ ಲೋಮಶೋಬ್ರವೀತ್ ॥

ಅನಂತರ ತೀಕ್ಷ್ಣ ತುದಿಗಳ ಹಲ್ಲಿರುವ, ವೈಡೂರ್ಯಮಣಿಯಂತೆ ಹೊಳೆಯುವ ಕಣ್ಣಿರುವ ಲೋಮಶ ಎಂಬ ಹೆಸರಿನ ಬೆಕ್ಕು ಇಲಿಯನ್ನು ಸ್ವಲ್ಪವೇ ನೋಡುತ್ತಾ ಹೇಳಿತು.

ನಂದಾಮಿ ಸೌಮ್ಯ ಭದ್ರಂ ತೇ ಯೋ ಮಾಂ ಜೀವಂತಮಿಚ್ಛಸಿ ।
ಶ್ರೇಯಶ್ಚ ಯದಿ ಜಾನೀಷೇ ಕ್ರಿಯತಾಂ ಮಾ ವಿಚಾರಯ ॥೬೬॥

ಸೌಮ್ಯ ! ನಾನು ಬದುಕಿ ಉಳಿಯಬೇಕೆಂದು ಬಯಸುತ್ತಿರುವ ನಿನಗೆ ಒಳ್ಳೆಯದಾಗಲಿ. ಬಹಳ ಸಂತೋಷವಾಗುತ್ತಿದೆ. ನಿನಗೆ ತಿಳಿದಿರುವ ಶ್ರೇಯಸ್ಕರವಾದ ಕೆಲಸವನ್ನು ಮಾಡು. ಸಂದೇಹಿಸಬೇಡ.

ಅಹಂ ಹಿ ದೃಢಮಾಪನ್ನಸ್ತ್ವಮಾಪನ್ನತರೋ ಮಯಾ ।
ದ್ವಯೋರಾಪನ್ನಯೋಃ ಸಂಧಿಃ ಕ್ರಿಯತಾಂ ಮಾ ವಿಚಾರಯ ॥೬೭॥

ನಾನು ಪರಿಹರಿಸಲು ಕಷ್ಟವಾದ ಆಪತ್ತಿಗೆ ಒಳಗಾಗಿದ್ದೇನೆ. ನೀನು ಇನ್ನೂ ಹೆಚ್ಚಿನ ಆಪತ್ತಿಗೆ ಒಳಗಾಗಿರುವಿ. ಆಪತ್ತಿಗೆ ಒಳಗಾದ ಇಬ್ಬರಿಗೆ ಸಂಧಾನವಾಗಲಿ. ಸಂದೇಹಿಸಬೇಡ.

ವಿಧತ್ಸ್ವ ಪ್ರಾಪ್ತಕಾಲಂ ಯತ್ ಕಾರ್ಯಂ ಸಿಧ್ಯತು ಚಾವಯೋಃ ।
ಮಯಿ ಕೃಚ್ಛ್ರಾದ್ ವಿನಿರ್ಮುಕ್ತೇ ನ ವಿನಂಕ್ಷ್ಯತಿ ತೇ ಕೃತಮ್ ॥೬೮॥

ಈಗ ಮಾಡಬೇಕಾದದ್ದನ್ನು ಮಾಡು. ನಮ್ಮಿಬ್ಬರ ಕಾರ್ಯವೂ ಕೂಡಿಬರಲಿ. ನಾನು ಕಷ್ಟದಿಂದ ಬಿಡುಗಡೆಯಾದ ಮೇಲೆ ಕೃತಘ್ನನಾಗುವುದಿಲ್ಲ.

ನ್ಯಸ್ತಮಾನೋಽಸ್ಮಿ ಭಕ್ತೋಽಸ್ಮಿ ಶಿಷ್ಯಸ್ತ್ವದ್ಧಿತಕೃತ್ತಥಾ ।
ನಿದೇಶವಶವರ್ತೀ ಚ ಭವಂತಂ ಶರಣಂ ಗತಃ ॥೬೯॥

ನಾನು ದುರಭಿಮಾನವನ್ನು ತ್ಯಜಿಸಿದ್ದೇನೆ. ನಿನ್ನ ಭಕ್ತನೂ, ಶಿಷ್ಯನೂ ಮತ್ತು ನಿನಗೆ ಹಿತಕಾರಿಯೂ ಆಗಿದ್ದೇನೆ. ನಿನ್ನ ಆದೇಶಕ್ಕೆ ವಶವಾಗಿದ್ದೇನೆ. ನಿನಗೆ ಶರಣಾಗತನಾಗಿದ್ದೇನೆ.

ಇತ್ಯೇವಮುಕ್ತಃ ಪಲಿತೋ ಮಾರ್ಜಾರಂ ವಶಮಾಗತಮ್ ।
ವಾಕ್ಯಂ ಹಿತಮುವಾಚೇದಮಭಿನೀತಾರ್ಥಮರ್ಥವತ್ ॥೭೦॥

ಹೀಗೆ ಹೇಳಲ್ಪಟ್ಟ ಪಲಿತನು ತನಗೆ ವಶವಾದ ಬೆಕ್ಕಿಗೆ ಅರ್ಥವತ್ತಾದ ಹಿತವಾದ ಮಾತನ್ನು ಹೇಳಿತು.

ಉದಾರಂ ಯದ್ಭವಾನಾಹ ನೈತಚ್ಚಿತ್ರಂ ಭವದ್ವಿಧೇ ।
ವಿದಿತೋ ಯಸ್ತು ಮಾರ್ಗೋ ಮೇ ಹಿತಾರ್ಥಂ ಶೃಣು ತಂ ಮಮ ॥

ನೀನು ಉದಾರವಾಗಿ ಮಾತನಾಡಿರುವಿ. ನಿನ್ನಂತಹವರಿಗೆ ಇದು ಆಶ್ಚರ್ಯಕರವಲ್ಲ. ನಿನ್ನ ಹಿತಕ್ಕಾಗಿ ನಾನು ಅರಿತಿರುವ ಉಪಾಯವನ್ನು ಕುರಿತು ಹೇಳುತ್ತೇನೆ, ಕೇಳು.

ಅಹಂ ಚಾನುಪ್ರವೇಕ್ಷ್ಯಾಮಿ ನಕುಲಾನ್ಮೇ ಮಹದ್ಭಯಮ್ ।
ತ್ರಾಯಸ್ವ ಮಾಂ ಮಾ ವಧೀಶ್ಚ ಶಕ್ತೋಽಸ್ಮಿ ತವ ಮೋಕ್ಷಣೇ ॥೭೨॥

ನನಗೆ ಮುಂಗಸಿಯಿಂದ ಬಹಳ ಭಯವಾಗುತ್ತಿದೆ. ನಿನ್ನನ್ನೇ ಅನುಸರಿಸಿ (ಬಲೆಯ) ಒಳಗೆ ಬರುತ್ತೇನೆ. ನನ್ನನ್ನು ರಕ್ಷಿಸು. ನನ್ನನ್ನು ಕೊಲ್ಲಬೇಡ. ನಿನ್ನನ್ನು (ಬಲೆಯಿಂದ) ಬಿಡಿಸುವ ಶಕ್ತಿಯು ನನಗೆ ಇದೆ.

ಉಲೂಕಾಚ್ಚೈವ ಮಾಂ ರಕ್ಷ ಕ್ಷುದ್ರಃ ಪ್ರಾರ್ಥಯತೇ ಹಿ ಮಾಮ್ ।
ಅಹಂ ಛೇತ್ಸ್ಯಾಮಿ ತೇ ಪಾಶಾನ್ ಸಖೇ ಸತ್ಯೇನ ತೇ ಶಪೇ ॥೭೩॥

ಗೂಬೆಯಿಂದಲೂ ನನ್ನನ್ನು ಪಾರು ಮಾಡು. ಆ ಕ್ಷುದ್ರನು ನನ್ನನ್ನು ಬಯಸುತ್ತಿದ್ದಾನೆ. ಗೆಳೆಯ! ನಾನು ನಿನ್ನ ಪಾಶಗಳನ್ನು ಕತ್ತರಿಸುತ್ತೇನೆ. ಸತ್ಯದ ಮೇಲೆ ಆಣೆ ಮಾಡುತ್ತೇನೆ.

ತದ್ವಚಃ ಸಂಗತಂ ಶ್ರುತ್ವಾ ಲೋಮಶೋ ಯುಕ್ತಮರ್ಥವತ್ ।
ಹರ್ಷಾದುದ್ವೀಕ್ಷ್ಯ ಪಲಿತಂ ಸ್ವಾಗತೇನಾಭ್ಯಪೂಜಯತ್ ॥೭೪॥

ಲೋಮಶನು (ಬೆಕ್ಕು) ಸಮಯೋಚಿತವಾದ, ಯುಕ್ತವಾದ, ಅರ್ಥವತ್ತಾದ ಆ ಮಾತುಗಳನ್ನು ಕೇಳಿ ಸಂತೋಷದಿಂದ ನೋಡುತ್ತಾ ಪಲಿತನನ್ನು ಸ್ವಾಗತಿಸಿ ಸತ್ಕರಿಸಿತು.

ಸ ತಂ ಸಂಪೂಜ್ಯ ಪಲಿತಂ ಮಾರ್ಜಾರಃ ಸೌಹೃದೇ ಸ್ಥಿತಃ ।
ಸುವಿಚಿಂತ್ಯಾಬ್ರವೀದ್ಧೀರಃ ಪ್ರೀತಸ್ತ್ವರಿತ ಏವ ಹಿ ॥೭೫॥

ಸುಹೃದ್‌ಭಾವದಲ್ಲಿ ಇದ್ದ ಆ ಧೀರ ಬೆಕ್ಕು ಪ್ರೀತನಾಗಿ ಆ ಪಲಿತನನ್ನು ಆದರಿಸಿ ತುರ್ತು ಮನಸ್ಥಿತಿಯಲ್ಲಿ ಬಹಳ ಆಲೋಚಿಸಿ ಹೇಳಿತು.

ಕ್ಷಿಪ್ರಮಾಗಚ್ಛ ಭದ್ರಂ ತೇ ತ್ವಂ ಮೇ ಪ್ರಾಣಸಮಃ ಸಖಾ ।
ತವ ಪ್ರಾಜ್ಞ ಪ್ರಸಾದಾದ್ಧಿ ಕ್ಷಿಪ್ರಂ ಪ್ರಾಪ್ಸ್ಯಾಮಿ ಜೀವಿತಮ್ ॥೭೬॥

ಬೇಗ ಬಾ. ನಿನಗೆ ಒಳ್ಳೆಯದಾಗಲಿ. ನೀನು ನನ್ನ ಪ್ರಾಣಸಮನಾದ ಮಿತ್ರ. ಪ್ರಾಜ್ಞ! ನಿನ್ನ ಅನುಗ್ರಹದಿಂದ ನಾನು ಬೇಗನೆ ನನ್ನ ಜೀವವನ್ನು ಪಡೆಯುತ್ತೇನೆ.

ಯದ್ಯದೇವಂಗತೇನಾದ್ಯ ವಾಕ್ಯಂ ಕರ್ತುಂ ಮಯಾ ತವ ।
ತದಾಜ್ಞಾಪಯ ಕರ್ತಾಹಂ ಸಂಧಿರೇವಾಸ್ತು ನೌ ಸಖೇ ॥೭೭॥

ಈ ಸ್ಥಿತಿಯಲ್ಲಿರುವ ನನ್ನಿಂದ ನಿನಗಾಗಿ ಏನೇನನ್ನು ಮಾಡಲು ಶಕ್ಯವೋ ಅದನ್ನು ಆಜ್ಞೆ ಮಾಡು. ನಾನು ಮಾಡುತ್ತೇನೆ. ಗೆಳೆಯ! ನಮ್ಮಿಬ್ಬರಿಗೆ ಸಂಧಾನವು ತಪ್ಪದೆ ಇರಲಿ.

ಅಸ್ಮಾತ್ ತೇ ಸಂಶಯಾನ್ಮುಕ್ತಃ ಸಮಿತ್ರಗಣಬಾಂಧವಃ ।
ಸರ್ವಕಾರ್ಯಾಣಿ ಕರ್ತಾಹಂ ಪ್ರಿಯಾಣಿ ಚ ಹಿತಾನಿ ಚ ॥೭೮॥

ಈ ಪ್ರಾಣಸಂಶಯದಿಂದ ಬಿಡುಗಡೆ ಹೊಂದಿದ ನಂತರ ನಾನು ನನ್ನ ಎಲ್ಲ ಮಿತ್ರ-ಬಂಧು ಸಹಿತನಾಗಿ ನಿನಗೆ ಪ್ರಿಯವಾದ, ಹಿತವಾದ ಎಲ್ಲ ಕಾರ್ಯಗಳನ್ನು ಮಾಡುತ್ತೇನೆ.

ಮುಕ್ತಶ್ಚ ವ್ಯಸನಾದಸ್ಮಾತ್ ಸೌಮ್ಯಾಹಮಪಿ ನಾಮ ತೇ ।
ಪ್ರೀತಿಮುತ್ಪಾದಯೇಯಂ ಚ ಪ್ರತಿಕರ್ತುಂ ಚ ಶಕ್ನುಯಾಮ್ ॥೭೯॥

ಸೌಮ್ಯ ! ಈ ವ್ಯಸನದಿಂದ ಮುಕ್ತನಾಗಿ ನಾನು ನಿನಗೆ ಸಂತೋಷವನ್ನು ಉಂಟು ಮಾಡುವೆನು. ಪ್ರತ್ಯುಪಕಾರ ಮಾಡಲು ಶಕ್ತನಾಗುವೆನು.

ಗ್ರಾಹಯಿತ್ವಾ ತು ತಂ ಸ್ವಾರ್ಥಂ ಮಾರ್ಜಾರಂ ಮೂಷಕಸ್ತದಾ ।
ಪ್ರವಿವೇಶ ಸುವಿಸ್ರಬ್ಧಃ ಸಮ್ಯಗರ್ಥಾಂಶ್ಚಚಾರ ಹ ॥೮೦॥

ಇಲಿಯು ಬೆಕ್ಕಿಗೆ ತನ್ನ ಅಭಿಪ್ರಾಯವನ್ನು ಚೆನ್ನಾಗಿ ಅರ್ಥಮಾಡಿಸಿ ಸರಿಯಾದ ನಂಬಿಕೆಯನ್ನು ಹೊಂದಿ ಬಲೆಯನ್ನು ಪ್ರವೇಶಿಸಿತು.

ಏವಮಾಶ್ವಾಸಿತೋ ವಿದ್ವಾನ್ ಮಾರ್ಜಾರೇಣ ಸ ಮೂಷಕಃ ।
ಮಾರ್ಜಾರೋರಸಿ ವಿಸ್ರಬ್ಧಃ ಸುಷ್ವಾಪ ಪಿತೃಮಾತೃವತ್ ॥೮೧॥

ಬೆಕ್ಕಿನಿಂದ ಹೀಗೆ ಆಶ್ವಾಸನೆಯನ್ನು ಪಡದ ಇಲಿಯು ವಿಶ್ವಾಸದಿಂದ ಬೆಕ್ಕಿನ ಎದೆಯಲ್ಲಿ, ತಂದೆ-ತಾಯಿಗಳ ಎದೆಯಲ್ಲಿ ಮಲಗುವಂತೆ, ಮಲಗಿತು.

ಲೀನಂ ತು ತಸ್ಯ ಗಾತ್ರೇಷು ಮಾರ್ಜಾರಸ್ಯಾಥ ಮೂಷಕಮ್ ।
ತೌ ದೃಷ್ಟ್ವಾ ನಕುಲೋಲೂಕೌ ನಿರಾಶೌ ಜಗ್ಮತುರ್ಗೃಹಾನ್ ॥೮೨॥

ಆ ಬೆಕ್ಕಿನ ಶರೀರದಲ್ಲಿ ಅಡಗಿದ ಆ ಇಲಿಯನ್ನು ನೋಡಿ ಆ ಮುಂಗಸಿ ಮತ್ತು ಗೂಬೆಗಳು ನಿರಾಶರಾಗಿ ಮನೆಗೆ ಹೋದವು.

ಲೀನಸ್ತು ತಸ್ಯ ಗಾತ್ರೇಷು ಪಲಿತೋ ದೇಶಕಾಲವಿತ್ ।
ಚಿಚ್ಛೇದ ಪಾಶಾನ್ನೃಪತೇ ಕಾಲಾಕಾಂಕ್ಷೀ ಶನೈಃ ಶನೈಃ ॥೮೩॥

ರಾಜನೇ! ಆ ಬೆಕ್ಕಿನ ಶರೀರದಲ್ಲಿ ಅಡಗಿದ, ದೇಶ-ಕಾಲಗಳ ಅರಿವಿರುವ ಪಲಿತವು (ಇಲಿಯು) ಕಾಲದ ನಿರೀಕ್ಷೆಮಾಡುತ್ತಾ ಪಾಶಗಳನ್ನು ಅತಿ ನಿಧಾನವಾಗಿ ಕತ್ತರಿಸಲು ತೊಡಗಿದನು.

ಅಥ ಬಂಧಪರಿಕ್ಲಿಷ್ಟೋ ಮಾರ್ಜಾರೋ ವೀಕ್ಷ್ಯ ಮೂಷಕಮ್ ।
ಛಿಂದಂತಂ ವೈ ತದಾ ಪಾಶಾನತ್ವರಂತಂ ತ್ವರಾನ್ವಿತಃ ॥೮೪॥

ಬಂಧನದ ಕ್ಲೇಶಕ್ಕೆ ಒಳಗಾಗಿದ್ದ, ಪಾಶಚ್ಛೇದವು ಕೂಡಲೇ ಆಗಬೇಕೆಂದು ಬಯಸುತ್ತಿದ್ದ ಬೆಕ್ಕು ಪಾಶಗಳನ್ನು ಅತಿ ನಿಧಾನವಾಗಿ ಕತ್ತರಿಸುತ್ತಿದ್ದ ಇಲಿಯನ್ನು ನೋಡಿ,

ತಮತ್ವರಂತಂ ಪಲಿತಂ ಪಾಶಾನಾಂ ಛೇದನೇ ತದಾ ।
ಸಂಚೋದಯಿತುಮಾರೇಭೇ ಮಾರ್ಜಾರೋ ಮೂಷಕಂ ತದಾ ॥೮೫॥

ಪಾಶಗಳ ಛೇದನವನ್ನು ತ್ವರೆಯಿಲ್ಲದೆ ಮಾಡುತ್ತಿದ್ದ ಇಲಿಯನ್ನು ಬೆಕ್ಕು ಪ್ರಚೋದಿಸಲು ಆರಂಭಿಸಿತು.

ಕಿಂ ಸೌಮ್ಯ ನಾಭಿತ್ವರಸೇ ಕಿಂ ಕೃತಾರ್ಥೋ೭ವಮನ್ಯಸೇ ।
ಛಿಂಧಿ ಪಾಶಾನಮಿತ್ರಘ್ನ ಪುರಾ ಶ್ವಪಚ ಏತಿ ಸಃ ॥೮೬॥

ಸೌಮ್ಯ! ಏಕೆ ತ್ವರೆ ಮಾಡುತ್ತಿಲ್ಲ? ಕೃತಾರ್ಥನಾದ ನಂತರ ಏಕೆ ಅವಗಣನೆ ಮಾಡುವಿ. ಮಿತ್ರನಿಗೆ ಹಾನಿ ಮಾಡದವನೇ! ಆ ಶ್ವಪಚನು ಬರುವ ಮೊದಲು ಪಾಶಗಳನ್ನು ಕತ್ತರಿಸು.

ಇತ್ಯುಕ್ತಸ್ತ್ವರತಾ ತೇನ ಮತಿಮಾನ್ ಪಲಿತೋ೭ಬ್ರವೀತ್ ।
ಮಾರ್ಜಾರಮಕೃತಪ್ರಜ್ಞಂ ವಶ್ಯಮಾತ್ಮಹಿತಂ ವಚಃ ॥೮೭॥

ಅವಸರ ಪಡಿಸುತ್ತಿದ್ದ ಆ ಬೆಕ್ಕಿನಿಂದ ಹೀಗೆ ಹೇಳಲ್ಪಟ್ಟ, ಮತಿಮಂತನಾದ ಪಲಿತನು ತನಗೆ ವಶನಾಗಿರುವ, ಸರಿಯಾದ ಶಿಕ್ಷಣವಿಲ್ಲದ ಬೆಕ್ಕಿಗೆ ತನಗೆ ಅನುಕೂಲವಾದ ಮಾತನ್ನು ಹೇಳಿದನು.

ತೂಷ್ಣೀಂ ಭವ ನ ತೇ ಸೌಮ್ಯ ತ್ವರಾ ಕಾರ್ಯಾ ನ ಸಂಭ್ರಮಃ ।
ವಯಮೇವಾತ್ರ ಕಾಲಜ್ಞಾ ನ ಕಾಲಃ ಪರಿಹಾಸ್ಯತೇ ॥೮೮॥

ಸೌಮ್ಯ! ಸುಮ್ಮನಿರು. ಅವಸರ ಮಾಡಬೇಡ. ಗಡಿಬಿಡಿ ಮಾಡಬೇಡ. ನನಗೆ ಕಾಲದ ಅರಿವಿದೆ. ಕಾಲವನ್ನು ಮೀರುವುದಿಲ್ಲ.

ಅಕಾಲೇ ಕೃತ್ಯಮಾರಬ್ಧಂ ಕರ್ತುರ್ನಾರ್ಥಾಯ ಕಲ್ಪತೇ ।
ತದೇವ ಕಾಲ ಆರಬ್ಧಂ ಮಹತೇರ್ಥಾಯ ಕಲ್ಪತೇ ॥೮೯॥

ಅಕಾಲದಲ್ಲಿ ಆರಂಭಿಸಲ್ಪಡುವ ಕೆಲಸವು ಫಲಪ್ರದವಾಗುವುದಿಲ್ಲ. ಸರಿಯಾದ ಕಾಲದಲ್ಲಿ ಆರಂಭಿಸಲ್ಪಡುವ ಕೆಲಸವು ಭಾರಿ ಫಲವನ್ನು ಕೊಡುತ್ತದೆ.

ಅಕಾಲೇ ಮಿತ್ರ ಮುಕ್ತೌ ಮೇ ತತ ಏವ ಭಯಂ ಭವೇತ್ ।
ತಸ್ಮಾತ್ ಕಾಲಂ ಪ್ರತೀಕ್ಷಸ್ವ ಕಿಮಿತಿ ತ್ವರಸೇ ಸಖೇ ॥೯೦॥

ನನಗೆ ಅಕಾಲದಲ್ಲಿ ಬಿಡುಗಡೆಯಾದರೆ, ಅಕಾಲದಲ್ಲಿ ಬಿಡುಗಡೆಯಿಂದಲೇ ಹಾನಿಯಾಗುವ ಭಯವಿದೆ. ಆದ್ದರಿಂದ ಸರಿಯಾದ ಕಾಲಕ್ಕೆ ಕಾಯಬೇಕು. ಗೆಳೆಯ! ಏಕೆ ತ್ವರೆ ಮಾಡುವಿ?

ಯಾವತ್ ಪಶ್ಯಾಮಿ ಚಂಡಾಲಮಾಯಾಂತಂ ಶಸ್ತ್ರಪಾಣಿನಮ್ ।
ತತಶ್ಛೇತ್ಸ್ಯಾಮಿ ತೇ ಪಾಶಂ ಪ್ರಾಪ್ತೇ ಸಾಧಾರಣೇ ಭಯೇ ॥೯೦॥

ಶಸ್ತ್ರಪಾಣಿಯಾಗಿ ನಮ್ಮ ಕಡೆಗೆ ಬರುತ್ತಿರುವ ಚಂಡಾಲನು ನನಗೆ ಕಾಣಿಸಿದ ಕೂಡಲೆ, ಇಬ್ಬರಿಗೂ ಸಾವಿನ ಭಯವು ಉಂಟಾದಾಗ ನಿನ್ನ ಪಾಶಗಳನ್ನು ಕತ್ತರಿಸುತ್ತೇನೆ.

ತಸ್ಮಿನ್ ಕಾಲೇ ಪ್ರಮುಕ್ತಸ್ತ್ವಂ ತರುಮೇವಾಧಿರೋಹಸಿ ।
ನ ಹಿ ತೇ ಜೀವಿತಾದನ್ಯತ್ ಕಿಂಚಿತ್ಕೃತ್ಯಂ ಭವಿಷ್ಯತಿ ॥೯೨॥

ಆಗ ಬಿಡುಗಡೆ ಹೊಂದುವ ನೀನು ಮರವನ್ನು ಕೊಡಲೇ ಏರುವಿ. ಆಗ ನಿನಗೆ ಪ್ರಾಣ ಉಳಿಸಿಕೊಳ್ಳುವ ಕೆಲಸವನ್ನು ಬಿಟ್ಟು ಬೇರೆ ಯಾವ ಕೆಲಸವೂ ಮನಸ್ಸಿನಲ್ಲಿ ಮೂಡುವುದಿಲ್ಲ.

ತತೋ ಭವತ್ಯತಿಕ್ರಾಂತೇ ತ್ರಸ್ತೇ ಭೀತೇ ಚ ಲೋಮಶ ।
ಅಹಂ ಬಿಲಂ ಪ್ರವೇಕ್ಷ್ಯಾಮಿ ಭವಾನ್ ಶಾಖಾಂ ಗಮಿಷ್ಯತಿ ॥೯೩॥

ಏವಮುಕ್ತಸ್ತು ಮಾರ್ಜಾರೋ ಮೂಷಕೇಣಾತ್ಮನೋ ಹಿತಮ್ ।
ವಚನಂ ವಾಕ್ಯತತ್ತ್ವಜ್ಞೋ ಜೀವಿತಾರ್ಥೀ ಮಹಾಮತಿಃ ॥೯೪॥

ಲೋಮಶ! ಆ ಚಂಡಾಲನಿಂದಾಗಿ ತೀವ್ರ ಭಯಕ್ಕೆ ಒಳಗಾದ ನೀನು ಇಲ್ಲಿಂದ ಹೊರಟು ಹೋದಾಗ ನಾನು ಬಿಲವನ್ನು ಪ್ರವೇಶಿಸುತ್ತೇನೆ. ನೀನು ಮರದ ಕೊಂಬೆಯ ಮೇಲೆ ಹೋಗುವಿ. ಹೀಗೆ ಇಲಿಯು ತನಗೆ ಅನುಕೂಲವಾದ ಮಾತನ್ನು ಬೆಕ್ಕಿಗೆ ಹೇಳಿದಾಗ ಪ್ರಾಣ ಉಳಿಸಿಕೊಳ್ಳಲು ಬಯಸುತ್ತಿರುವ, ಮಾತಿನ ತತ್ವವನ್ನು ತಿಳಿದ, ಮಹಾಮತಿಯಾದ,

ಅಥಾತ್ಮಕೃತ್ಯತ್ವರಿತಃ ಸಮ್ಯಕ್ಪ್ರಶ್ರಯಮಾಚರನ್ ।
ಉವಾಚ ಲೋಮಶೋ ವಾಕ್ಯಂ ಮೂಷಕಂ ಚಿರಕಾರಿಣಮ್ ॥೯೫॥

ತನ್ನ ಕೆಲಸವು ಬೇಗ ಆಗಬೇಕೆಂದು ಬಯಸುತ್ತಿರುವ ಲೋಮಶನು ವಿನಯವನ್ನು ತೋರಿಸುತ್ತಾ , ವಿಲಂಬ ಮಾಡುತ್ತಿರುವ ಇಲಿಗೆ ಹೇಳಿತು.

ನ ಹ್ಯೇವಂ ಮಿತ್ರಕಾರ್ಯಾಣಿ ಪ್ರೀತ್ಯಾ ಕುರ್ವಂತಿ ಸಾಧವಃ ।
ಯಥಾ ತ್ವಂ ಮೋಕ್ಷಿತಃ ಕೃಚ್ಛ್ರಾತ್ ತ್ವರಮಾಣೇನ ವೈ ಮಯಾ ॥೯೬॥

ತಥೈವ ತ್ವರಮಾಣೇನ ತ್ವಯಾ ಕಾರ್ಯಂ ಹಿತಂ ಮಮ ।
ಯತ್ನಂ ಕುರು ಮಹಾಪ್ರಾಜ್ಞ ಯಥಾ ಸ್ವಸ್ಯಾವಯೋರ್ಭವೇತ್ ॥೯೭॥

ಹೀಗಲ್ಲ. ಸಜ್ಜನರು ಮಿತ್ರನಿಗೆ ಬೇಕಾದ ಕೆಲಸಗಳನ್ನು ಪ್ರೀತಿಯಿಂದ ಮಾಡುತ್ತಾರೆ. ನಾನು ನಿನ್ನನ್ನು ಶೀಘ್ರವಾಗಿ ಕಷ್ಟದಿಂದ ಪಾರು ಮಾಡಿದ್ದೇನೆ. ಅದರಂತೆ ನೀನೂ ಕೂಡ ತಡಮಾಡದೆ, ವೇಗದಿಂದ ನನಗೆ ಹಿತವನ್ನು ಮಾಡಬೇಕು. ಮಹಾಪ್ರಾಜ್ಞ! ನಮ್ಮಿಬ್ಬರಿಗೂ ಒಳ್ಳೆಯದಾಗುವಂತೆ ಕಾರ್ಯೋನ್ಮುಖನಾಗು.

ಅಥ ವಾ ಪೂರ್ವವೈರಂ ತ್ವಂ ಸ್ಮರನ್ ಕಾಲಂ ವಿಕರ್ಷಸಿ ।
ಪಶ್ಯ ದುಷ್ಕೃತಕರ್ಮತ್ವಂ ವ್ಯಕ್ತಮಾಯುಃಕ್ಷಯೋ ಮಮ ॥೯೮॥

ಅಥವಾ ನಾನು ನಿನ್ನ ಮೇಲೆ (ಇಲಿಗಳ ಮೇಲೆ) ಹಿಂದೆ ತೋರಿಸಿದ ವೈರವನ್ನು ನೆನೆಯುತ್ತಾ ಕಾಲ ಕಳೆಯುತ್ತಿರುವಿ. ನೋಡು! ನೀನು ನಿನ್ನ ಕೆಲಸವನ್ನು ಕೆಟ್ಟದಾಗಿ ಮಾಡುತ್ತಿರುವಿ. ನಿಜವಾಗಿ ನನಗೆ ಮರಣವಾಗುತ್ತದೆ.

ಯಚ್ಚ ಕಿಂಚಿನ್ಮಯಾಜ್ಞಾನಾತ್ ಪುರಸ್ತಾದ್ ವಿಪ್ರಿಯಂ ಕೃತಮ್ ।
ನ ತನ್ಮನಸಿ ಕರ್ತವ್ಯಂ ಕ್ಷಾಮಯೇ ತ್ವಾಂ ಪ್ರಸೀದ ಮೇ ॥೯೯॥

ನಾನು ಹಿಂದೆ ಅಜ್ಞಾನದಿಂದ ಮಾಡಿರುವ ಅಪ್ರಿಯ ಕೆಲಸಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಡ. ನಾನು ಕ್ಷಮೆ ಬೇಡುತ್ತೇನೆ. ದಯವಿಟ್ಟು ನನ್ನ ಮೇಲೆ ಪ್ರಸನ್ನನಾಗು.

ತಮೇವಂವಾದಿನಂ ಪ್ರಾಜ್ಞಃ ಶಾಸ್ತ್ರವಿದ್ ಬುದ್ಧಿಸಮ್ಮತಃ ।
ಉವಾಚೇದಂ ವಚಃ ಶ್ರೇಷ್ಠಂ ಮಾರ್ಜಾರಂ ಮೂಷಕಸ್ತದಾ ॥೧೦೦॥

ಹೀಗೆ ಹೇಳಿದ ಬೆಕ್ಕಿಗೆ ಪ್ರಾಜ್ಞನೂ, ಶಾಸ್ತ್ರವನ್ನು ಅರಿತವನೂ, ನಿಶ್ಚಯ ಉಳ್ಳವನೂ ಆದ ಇಲಿಯು ಮುಂದಿನ ಮಾತುಗಳನ್ನು ಹೇಳಿತು.

ಶ್ರುತಂ ಮೇ ತವ ಮಾರ್ಜಾರ ಸ್ವಮರ್ಥಂ ಪರಿಗೃಹ್ಣತಃ ।
ಮಮಾಪಿ ತ್ವಂ ವಿಜಾನೀಹಿ ಸ್ವಮರ್ಥಂ ಪರಿಗೃಹ್ಣತಃ ॥೧೦೧॥

ಬೆಕ್ಕೆ! ನಿನ್ನ ಹಿತವನ್ನೇ ಪರಿಗ್ರಹಿಸಿರುವ ನಿನ್ನ ಮಾತನ್ನು ಕೇಳಿದೆ. ನನ್ನ ಹಿತವನ್ನೇ ಪರಿಗ್ರಹಿಸಿರುವ ನನ್ನ ಮಾತುಗಳನ್ನು ಅರಿ.

ಯನ್ಮಿತ್ರಂ ಭೂತವತ್ ಸಾರ್ಯಂ ಯನ್ಮಿತ್ರಂ ಭಯಸಂಹಿತಮ್ ।
ಅಲಕ್ಷಿತಂ ತತಃ ಕಾರ್ಯಂ ಪಾಣೇಃ ಸರ್ಪಮುಖಾದಿವ ॥೧೦೨॥

ಯಾವ ಮಿತ್ರನನ್ನು ಭೂತವನ್ನು ಅನುಸರಿಸುವಂತೆ ಅನುಸರಿಸಬೇಕೋ, (ಭಯದಿಂದಲೇ ಅನುಸರಿಸಬೇಕೋ), ಯಾವ ಮಿತ್ರನು ಭಯಗ್ರಸ್ತನೋ, ಆ ಮಿತ್ರನಿಂದ ಕಾರ್ಯವು ಆಗುವುದೋ, ಇಲ್ಲವೋ ತಿಳಿಯುವುದಿಲ್ಲ. ಹಾವಾಡಿಗನ ಕೈ ಸರ್ಪದಿಂದ ಸುರಕ್ಷಿತವಾಗುವುದೋ, ಇಲ್ಲವೋ ಎಂದು ತಿಳಿಯದಂತೆ.

ಕೃತ್ವಾ ಬಲವತಾ ಸಂಧಿಮಾತ್ಮಾನಂ ಯೋ ನ ರಕ್ಷತಿ ।
ಅಪಥ್ಯಮಿವ ತದುಕ್ತಂ ತಸ್ಯಾನರ್ಥಾಯ ಕಲ್ಪತೇ ॥೧೦೩॥

ಬಲಶಾಲಿಯ ಜೊತೆ ಸಂಧಾನವನ್ನು ಮಾಡಿಕೊಂಡವನು ತನ್ನ ರಕ್ಷಣೆಯನ್ನು ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಆ ಸಂಧಾನವು ಅನರ್ಥಕಾರಿಯೇ. ತಿನ್ನಲ್ಪಟ್ಟ ಅಪಥ್ಯ ಆಹಾರದಂತೆ.

ನ ಕಶ್ಚಿತ್ ಕಸ್ಯಚಿನ್ಮಿತ್ರಂ ನ ಕಶ್ಚಿತ್ ಕಸ್ಯಚಿದ್ ರಿಪುಃ ।
ಅರ್ಥೈರರ್ಥಾ ನಿಬಧ್ಯಂತೇ ಗಜೈರ್ವನಗಜಾ ಇವ ॥೧೦೪॥

ಯಾರೂ ಯಾರಿಗೂ ಮಿತ್ರನಲ್ಲ. ಯಾರು ಯಾರಿಗೂ ಶತ್ರುವಲ್ಲ. ಒಬ್ಬರ ಪ್ರಯೋಜನದಿಂದಲೇ ಮತ್ತೊಬ್ಬರ ಪ್ರಯೋಜನವು ಹಾನಿಗೆ ಒಳಗಾಗುತ್ತದೆ. ಪಳಗಿದ ಆನೆಗಳಿಂದಲೇ ಕಾಡಾನೆಗಳು ಬಂಧಿಸಲ್ಪಡುತ್ತವೆ.

ನ ಹಿ ಕಶ್ಚಿತ್ಕೃತೇ ಕಾರ್ಯೇ ಕರ್ತಾರಂ ಸಮವೇಕ್ಷತೇ ।
ತಸ್ಮಾತ್ ಸರ್ವಾಣಿ ಕಾರ್ಯಾಣಿ ಸಾವಶೇಷಾಣಿ ಕಾರಯೇತ್ ॥೧೦೫॥

ತಮ್ಮ ಕೆಲಸವು ಆದನಂತರ ಕೆಲಸ ಮಾಡಿದವನನ್ನು ಯಾರೂ ನೋಡುವುದಿಲ್ಲ. ಆದ್ದರಿಂದ ಎಲ್ಲ ಕೆಲಸಗಳನ್ನು ಸಶೇಷವಾಗಿಯೇ ಮಾಡಬೇಕು.

ತಸ್ಮಿನ್ ಕಾಲೇಪಿ ಚ ಭವಾನ್ ದಿವಾಕೀರ್ತಿಭಯಾನ್ವಿತಃ ।
ಮಮ ನ ಗ್ರಹಣೇ ಶಕ್ತಃ ಪಲಾಯನಪರಾಯಣಃ ॥೧೦೬॥

ದಿವಾಕೀರ್ತಿಯ (ಬಲೆಹಾಕಿದವನ ಹೆಸರು) ಭಯಕ್ಕೊಳಗಾಗುವ ನೀನು ಆ ಸಮಯದಲ್ಲಿ (ದಿವಾಕೀರ್ತಿಯು ಬರುತ್ತಿರುವ ಸಮಯದಲ್ಲಿ) ಪಲಾಯನದಲ್ಲೇ ಮನಸ್ಸಿಟ್ಟಿರುವಿ, ನನ್ನನ್ನು ಹಿಡಿಯಲು ಶಕ್ತನಾಗುವುದಿಲ್ಲ.

ಛಿನ್ನಂ ತು ತಂತುಬಾಹುಲ್ಯಂ ತಂತುರೇಕೋऽವಶೇಷಿತಃ ।
ಛೇತ್ಸ್ಯಾಮ್ಯಹಂ ತದಪ್ಯಾಶು ನಿರ್ವ್ಯತೋ ಭವ ಲೋಮಶ ॥೧೦೭॥

ಬಹಳ ದಾರಗಳನ್ನು ಈಗಾಗಲೇ ಕತ್ತರಿಸಿದ್ದೇನೆ. ಒಂದು ದಾರ ಉಳಿದಿದೆ. ಅದನ್ನೂ ಶೀಘ್ರವಾಗಿ ಕತ್ತರಿಸುತ್ತೇನೆ. ಲೋಮಶ! ಸಂತೋಷದಿಂದ ಇರು.

ತಯೋಃ ಸಂವದತೋರೇವಂ ತಥೈವಾಪನ್ನಯೋರ್ದ್ವಯೋಃ ।
ಕ್ಷಯಂ ಜಗಾಮ ಸಾ ರಾತ್ರಿರ್ಲೋಮಶಂ ಚಾವಿಶದ್ ಭಯಮ್ ॥

ಅವರಿಬ್ಬರೂ ಹೀಗೆ ಸಂವಾದವನ್ನು ಮಾಡುತ್ತಿರುವಾಗ, ಇಬ್ಬರೂ ಆಪತ್ತಿಗೆ ಒಳಗಾಗಿರುವಾಗ, ರಾತ್ರಿಯು ಕಳೆಯಿತು. ಲೋಮಶನಿಗೆ ಭಯವು ಹೆಚ್ಚಾಯಿತು.

ತತಃ ಪ್ರಭಾತಸಮಯೇ ವಿಕೃತಃ ಕೃಷ್ಣಪಿಂಗಲಃ ।
ಸ್ಥೂಲಸ್ಫಿಗ್ವಿಕಚೋ ರೂಕ್ಷಃ ಶ್ವಚಕ್ರಪರಿವಾರಿತಃ ॥೧೦೯॥

ಶಂಕುಕರ್ಣೋ ಮಹಾವಕ್ತ್ರಃ ಪಲಿತೋ ಘೋರದರ್ಶನಃ ।
ಪರ್ಯಾನ್ ಸ ಹ ಚಂಡಾಲಃ ಶಸ್ತ್ರಪಾಣಿರದೃಶ್ಯತ ॥೧೧೦॥

ಅನಂತರ ಬೆಳಗಾಗುವ ಸಮಯದಲ್ಲಿ ಕಪ್ಪು-ಕಂದು ಬಣ್ಣದ, ವಿಕಾರವಾಗಿದ್ದ, ದಪ್ಪ ಅಂಡಿನ, ಕೆದರಿದ ಕೂದಲಿನ, ಉಗ್ರವಾಗಿದ್ದ, ಲಾಳಗಳಂತಿದ್ದ ಕಿವಿಯ, ನೆರೆ ಕೂದಲಿನ, ಅಗಲ ಮುಖದ, ಘೋರವಾಗಿ ಕಾಣಿಸುತ್ತಿದ್ದ, ಅಡ್ಡ-ದಿಡ್ಡಿಯಾಗಿ ಬರುತ್ತಿದ್ದ ಕೈಯಲ್ಲಿ ಶಸ್ತ್ರವನ್ನು ಹಿಡಿದಿದ್ದ ಚಂಡಾಲನು ಕಾಣಿಸಿಕೊಂಡನು.

ತಂ ದೃಷ್ಟ್ವಾ ಯಮದೂತಾಭಂ ಮಾರ್ಜಾರಃ ತ್ರಸ್ತಚೇತನಃ ।
ಉವಾಚ ಪಲಿತಂ ಭೀತಃ ಕಿಮಿದಾನೀಂ ಕರಿಷ್ಯಸಿ ॥೧೧೧॥

ಯಮದೂತನಂತಿದ್ದ ಆ ಬೇಡನನ್ನು ನೋಡಿ ಹೆದರಿದ ಬೆಕ್ಕು 'ಈಗ ಏನು ಮಾಡುವಿ' ಎಂದು ಪಲಿತ (ಇಲಿ)ಗೆ ಹೇಳಿತು.

ಅಥ ಚಾಪಿ ಸುಸಂತ್ರಸ್ತೌ ತಂ ದೃಷ್ಟ್ವಾ ಘೋರದರ್ಶನಮ್ ।
ಕ್ಷಣೇನ ನಕುಲೋಲೂಕೌ ನೈರಾಶ್ಯಂ ಜಗ್ಮತುಸ್ತದಾ ॥೧೧೨॥

ಘೋರವಾಗಿ ಕಾಣಿಸುತ್ತಿದ್ದ ಅವನನ್ನು ನೋಡಿ ಬಹಳ ಹೆದರಿದ ಮುಂಗಸಿ ಮತ್ತು ಗೂಬೆಗಳು ಆ ಕ್ಷಣದಲ್ಲೇ ನಿರಾಶೆಯನ್ನು ಹೊಂದಿದವು.

ಬಲಿನೌ ಮತಿಮಂತೌ ಚ ಸಂಘಾತಂ ಚಾಪ್ಯುಪಾಗತೌ ।
ಅಶಕ್ತೌ ಸುನಯಾತ್ ತಸ್ಮಾತ್ ಸಂಪ್ರಧರ್ಷಯಿತುಂ ಬಲಾತ್ ॥೧೧೩॥

ಬಲಶಾಲಿಗಳೂ, ಬುದ್ಧಿವಂತರೂ ಆಗಿದ್ದ, ಒಗ್ಗಟ್ಟನ್ನೂ ಹೊಂದಿದ್ದ ಮುಂಗಸಿ ಮತ್ತು ಗೂಬೆಗಳು ಆ ಇಲಿಯ ಸರಿಯಾದ ಉಪಾಯದಿಂದಾಗಿ (ಇಲಿ ಮತ್ತು ಬೆಕ್ಕುಗಳನ್ನು) ಬಲದಿಂದ ಆಕ್ರಮಿಸಲು ಸಮರ್ಥವಾಗಲಿಲ್ಲ.

ಕಾರ್ಯಾರ್ಥಂ ಕೃತಸಂಧೀ ತೌ ದೃಷ್ಟ್ವಾ ಮಾರ್ಜಾರಮೂಷಕೌ ।
ಉಲೂಕನಕುಲೌ ತೂರ್ಣಂ ಜಗ್ಮತುಃ ಸ್ವಂ ಸ್ವಮಾಲಯಮ್ ॥೧೧೪॥

ಕಾರ್ಯಸಾಧನೆಗಾಗಿ ಸಂಧಾನ ಮಾಡಿಕೊಂಡಿದ್ದ ಆ ಬೆಕ್ಕು-ಇಲಿಗಳನ್ನು ನೋಡಿ ಗೂಬೆ ಮತ್ತು ಮುಂಗಸಿಗಳು ಬೇಗ ತಮ್ಮ ತಮ್ಮ ವಾಸಸ್ಥಾನಕ್ಕೆ ಹೊರಟು ಹೋದವು.

ತತಶ್ಚಿಚ್ಛೇದ ತಂ ತಂತುಂ ಮಾರ್ಜಾರಸ್ಯ ಸ ಮೂಷಕಃ ।
ವಿಪ್ರಮುಕ್ತೋಥ ಮಾರ್ಜಾರಸ್ತಮೇವಾಭ್ಯಪತದ್ದ್ರುಮಮ್ ॥೧೧೫॥

ಅನಂತರ ಇಲಿಯು ಬೆಕ್ಕಿನ ಬಲೆಯ ಆ ಒಂದು ದಾರವನ್ನು ಕತ್ತರಿಸಿತು. ಬಿಡುಗಡೆ ಹೊಂದಿದ ಬೆಕ್ಕು ಆ ಮರದ ಕಡೆ ಓಡಿತು.

ಸ ಚ ತಸ್ಮಾದ್ ಭಯಾನ್ಮುಕ್ತೋ ಮುಕ್ತೋ ಘೋರೇಣ ಶತ್ರುಣಾ ।
ಬಿಲಂ ವಿವೇಶ ಪಲಿತಃ ಶಾಖಾಂ ಭೇಜೇ ಚ ಲೋಮಶಃ ॥೧೧೬॥

ಆ ಇಲಿ ಪಲಿತನೂ ಆ ಬೆಕ್ಕಿನ ಭಯದಿಂದ ಮುಕ್ತನಾಗಿ, ಆ ಘೋರ ಶತ್ರು ಮುಂಗಸಿಯಿಂದಲೂ ಮುಕ್ತನಾಗಿ ಬಿಲವನ್ನು ಹೊಕ್ಕಿತು. ಲೋಮಶನೂ (ಬೆಕ್ಕು) ಮರದ ಕೊಂಬೆಯನ್ನು ಏರಿದನು.

ಉನ್ಮಾಥಮಪ್ಯಥಾದಾಯ ಚಂಡಾಲೋ ವೀಕ್ಷ್ಯ ಸರ್ವಶಃ ।
ವಿಹತಾಶಃ ಕ್ಷಣೇನಾಥ ತಸ್ಮಾದ್ದೇಶಾದಪಾಕ್ರಮತ್ ।
ಜಗಾಮ ಚ ಸ್ವಭವನಂ ಚಂಡಾಲೋ ಭರತರ್ಷಭ ॥೧೧೭॥

ಚಂಡಾಲನು ಬಲೆಯನ್ನು ಹಿಡಿದು ಎಲ್ಲ ಕಡೆ ನೋಡಿದನು. ಏನೂ ಸಿಗದೆ ನಿರಾಶನಾಗಿ ಅಲ್ಲಿಂದ ಹೊರಟುಹೋದನು.

ತತಸ್ತಸ್ಮಾದ್ ಭಯಾನ್ಮುಕ್ತೋ ದುರ್ಲಭಂ ಪ್ರಾಪ್ಯ ಜೀವಿತಮ್ ।
ಬಿಲಸ್ಥಂ ಪಾದಪಾಗ್ರಸ್ಥಃ ಪಲಿತಂ ಲೋಮಶೋಬ್ರವೀತ್ ॥೧೧೮॥

ಅನಂತರ ದುರ್ಲಭವಾದ ಪ್ರಾಣವನ್ನು ಉಳಿಸಿಕೊಂಡ, ಆ ಭಯದಿಂದ ಮುಕ್ತನಾದ, ಮರದ ತುದಿಯಲ್ಲಿನೆಲೆಯೂರಿದ ಲೋಮಶನು ಬಿಲದಲ್ಲಿದ್ದ ಪಲಿತನಿಗೆ ಹೇಳಿತು.

ಅಕೃತ್ವಾ ಸಂವಿದಂ ಕಾಂಚಿತ್ ಸಹಸಾಹಮುಪಪ್ಲುತಃ ।
ಕೃತಜ್ಞಂ ಕೃತಕಲ್ಯಾಣಂ ಕಚ್ಚಿನ್ಮಾಂ ನಾಭಿಶಂಕಸೇ ॥೧೧೯॥

ಭಯಪೀಡಿತನಾಗಿದ್ದ ನಾನು ಯಾವ ಮಾತನ್ನು ಆಡದೆ ಕೂಡಲೇ ಹಾರಿಹೋದೆನು. ನಾನು ಕೃತಜ್ಞ. ನಿನಗೆ ಒಳ್ಳೆಯದನ್ನು ಮಾಡಿದ್ದೇನೆ. ಇಂತಹ ನನ್ನ ಬಗ್ಗೆ ಸಂದೇಹವಿಲ್ಲ ತಾನೆ?

ಗತ್ವಾ ಚ ಮಮ ವಿಶ್ವಾಸಂ ದತ್ತ್ವಾ ಚ ಮಮ ಜೀವಿತಮ್ ।
ಮಿತ್ರೋಪಭೋಗಸಮಯೇ ಕಿಂ ತ್ವಂ ನೈವೋಪಸರ್ಪಸಿ ॥೧೨೦॥

ನೀನು ನನ್ನ ಮೇಲೆ ವಿಶ್ವಾಸವಿಟ್ಟು ನನಗೆ ಪ್ರಾಣದಾನವನ್ನು ಮಾಡಿರುವಿ. ಮಿತ್ರ! ಈಗ ಸುಖವಾಗಿರುವ ಸಮಯದಲ್ಲಿ ಏಕೆ ನನ್ನ ಬಳಿ ಬರುವುದಿಲ್ಲ?

ಕೃತ್ವಾ ಹಿ ಪೂರ್ವಂ ಮಿತ್ರಾಣಿ ಯಃ ಪಶ್ಚಾನ್ನಾನುತಿಷ್ಠತಿ ।
ನ ಸ ಮಿತ್ರಾಣಿ ಲಭತೇ ಕೃಚ್ಛ್ರಾಸ್ವಾಪತ್ಸು ದುರ್ಮತಿಃ ॥೧೨೧॥

ಮೊದಲು ಮೈತ್ರಿಯನ್ನು ಮಾಡಿಕೊಂಡು ಅನಂತರ ಮಿತ್ರಧರ್ಮವನ್ನು ಅನುಸರಿಸದವನು ದುರ್ಮತಿ. ಇಂತಹವನು ಬಹಳ ಕಷ್ಟವಾದ ಆಪತ್ಕಾಲಗಳಲ್ಲಿ ಮಿತ್ರರನ್ನು ಪಡೆಯಲಾರ.

ತತ್ಕೃತೋಽಹಂ ತ್ವಯಾ ಮಿತ್ರಂ ಸಾಮರ್ಥ್ಯಾದಾತ್ಮನಃ ಸಖೇ ।
ಸ ಮಾಂ ಮಿತ್ರತ್ವಮಾಪನ್ನಮುಪಭೋಕ್ತುಂ ತ್ವಮರ್ಹಸಿ ॥೧೨೨॥

ಗೆಳೆಯ! ನೀನು ನಿನ್ನ ಸಾಮರ್ಥ್ಯದಿಂದ ನನ್ನನ್ನು ನಿನ್ನ ಮಿತ್ರನಾಗಿಸಿರುವಿ. ನೀನು ದಯವಿಟ್ಟು ಮಿತ್ರನಾಗಿರುವ ನನ್ನ ಜೊತೆ ಊಟಮಾಡು.

ಯಾನಿ ಮೇ ಸಂತಿ ಮಿತ್ರಾಣಿ ಯೇ ಚ ಮೇ ಸಂತಿ ಬಾಂಧವಾಃ ।
ಸರ್ವೇ ತ್ವಾಂ ಪೂಜಯಿಷ್ಯಂತಿ ಶಿಷ್ಯಾ ಗುರುಮಿವ ಪ್ರಿಯಮ್ ॥೧೨೩॥

ನನ್ನ ಮಿತ್ರರು, ಬಾಂಧವರು ಎಲ್ಲರೂ ನಿನ್ನನ್ನು ಪೂಜಿಸುತ್ತಾರೆ. ಶಿಷ್ಯರು ಪ್ರಿಯಗುರುವನ್ನು ಪೂಜಿಸುವಂತೆ.

ಅಹಂ ಚ ಪೂಜಯಿಷ್ಯೇ ತ್ವಾಂ ಸಮಿತ್ರಗಣಬಾಂಧವಮ್ ।
ಜೀವಿತಸ್ಯ ಪ್ರದಾತಾರಂ ಕೃತಜ್ಞಃ ಕೋ ನ ಪೂಜಯೇತ್ ॥೧೨೪॥

ನಾನೂ ನಿನ್ನನ್ನು, ನಿನ್ನ ಮಿತ್ರರನ್ನೂ, ಬಾಂಧವರನ್ನೂ ಸತ್ಕರಿಸುವೆ. ಕೃತಜ್ಞನಾದ ಯಾರು ತಾನೆ ಪ್ರಾಣ ಉಳಿಸಿದವರನ್ನು ಸತ್ಕರಿಸುವುದಿಲ್ಲ?

ಈಶ್ವರೋ ಮೇ ಭವಾನಸ್ತು ಶರೀರಸ್ಯ ಗೃಹಸ್ಯ ಚ ।
ಅರ್ಥಾನಾಂ ಚೈವ ಸರ್ವೇಷಾಮನುಶಾಸ್ತಾ ಚ ಮೇ ಭವ ॥೧೨೫॥

ನೀನು ನನ್ನ ಶರೀರ, ಮನೆ, ಸಕಲ ಸಂಪತ್ತು- ಇವೆಲ್ಲವುಗಳ ಒಡೆಯನಾಗು. ನನಗೂ ಶಾಸಕನಾಗು.

ಅಮಾತ್ಯೋ ಮೇ ಭವ ಪ್ರಾಜ್ಞ ಪಿತೇವ ಹಿ ಪ್ರಶಾಧಿ ಮಾಮ್ ।
ನ ತೇಸ್ತಿ ಭಯಮಸ್ಮತ್ತೋ ಜೀವಿತೇನಾತ್ಮನಃ ಶಪೇ ॥೧೨೬॥

ಪ್ರಾಜ್ಞ! ನೀನು ನನಗೆ ಮಂತ್ರಿಯಾಗು. ತಂದೆಯಂತೆ ನನಗೆ ಅನುಶಾಸನವನ್ನು ಮಾಡು. ನನ್ನಿಂದ ನಿನಗೆ ಭಯವಿಲ್ಲ. ನನ್ನ ಪ್ರಾಣದ ಮೇಲೆ ಆಣೆ.

ಬುದ್ಧ್ಯಾ ತ್ವಮುಶನಾಃ ಸಾಕ್ಷಾದ್ ಬಲೇ ತ್ವದ್ಧಿಕೃತಾ ವಯಮ್ ।
ತ್ವನ್ಮಂತ್ರಬಲಯುಕ್ತೋ ಹಿ ವಿಂದೇತ ಜಯಮೇವ ಹ ॥೧೨೭॥

ನೀನು ಬುದ್ಧಿಶಕ್ತಿಯಲ್ಲಿ ಶುಕ್ರಾಚಾರ್ಯನೇ, ನಾನು ಬಲದಿಂದ ಅಧಿಕ. ನಿನ್ನ ಆಲೋಚನೆಯ ಸಹಾಯವನ್ನು ಪಡೆದವನು ನಿಶ್ಚಯವಾಗಿ ಜಯಶಾಲಿಯಾಗುತ್ತಾನೆ.

ಏವಮುಕ್ತಃ ಪರಂ ಸಾಂತ್ವಂ ಮಾರ್ಜಾರೇಣ ಸ ಮೂಷಕಃ ।
ಉವಾಚ ಪರಮಾರ್ಥಜ್ಞಃ ಶ್ಲಕ್ಷ್ಣಮಾತ್ಮಹಿತಂ ವಚಃ ॥೧೨೮॥

ಹೀಗೆ ಬೆಕ್ಕು ಉತ್ತಮ ಮಟ್ಟದ ಸಾಮೋಪಾಯದ ಮಾತುಗಳನ್ನು ಹೇಳಿದ ನಂತರ ಪರಮಾರ್ಥವನ್ನು ತಿಳಿದ ಇಲಿಯು ತನಗೆ ಹಿತಕರವಾದ ಮೃದುವಾದ ಮಾತುಗಳನ್ನು ಹೇಳಿತು.

ಯದ್ಭವಾನಾಹ ತತ್ ಸರ್ವಂ ಮಯಾ ತೇ ಲೋಮಶ ಶ್ರುತಮ್ ।
ಮಮಾಪಿ ತಾವದ್ ಬ್ರುವತಃ ಶೃಣು ಯತ್ ಪ್ರತಿಭಾತಿ ಮಾಮ್ ॥

ಲೋಮಶ! ನೀನು ಹೇಳಿದ ಮಾತುಗಳೆಲ್ಲವನ್ನೂ ನಾನು ಕೇಳಿದ್ದೇನೆ. ನನಗೆ ತೋರುವಂತೆ ಹೇಳುತ್ತೇನೆ. ದಯವಿಟ್ಟು ಕೇಳು.

ವೇದಿತವ್ಯಾನಿ ಮಿತ್ರಾಣಿ ಬೋದ್ಧವ್ಯಾಶ್ಚಾಪಿ ಶತ್ರವಃ ।
ಏತತ್ ಸುಸೂಕ್ಷ್ಮಂ ಲೋಕೇಽಸ್ಮಿನ್ ದೃಶ್ಯತೇ ಪ್ರಾಜ್ಞಸಮ್ಮತಮ್ ॥೧೩೦॥

ಮಿತ್ರರು ಯಾರು, ಶತ್ರುಗಳು ಯಾರು ಎಂದು ತಿಳಿದುಕೊಳ್ಳಬೇಕು. ಈ ಲೋಕದಲ್ಲಿ ಇದು ಬಹಳ ಸೂಕ್ಷ್ಮ ವಿಷಯ. ಇದು ಪ್ರಾಜ್ಞಸಮ್ಮತ.

ಶತ್ರುರೂಪಾಶ್ಚ ಸುಹೃದೋ ಮಿತ್ರರೂಪಾಶ್ಚ ಶತ್ರವಃ ।
ಸಾಂತ್ವಿತಾಸ್ತೇ ನ ಬುಧ್ಯಂತೇ ರಾಗಲೋಭವಶಂ ಗತಾಃ ॥೧೩೧॥

ಒಳ್ಳೆಯ ಹೃದಯದವರು ಶತ್ರುಗಳಂತೆ ಇರುತ್ತಾರೆ. ಶತ್ರುಗಳು ಮಿತ್ರರಂತೆ ಇರುತ್ತಾರೆ. ಸಾಮೋಪಾಯದ ಮಾತುಗಳ ಪ್ರಭಾವಕ್ಕೆ ಒಳಗಾದವರು, ಆಸೆ-ಲೋಭಗಳಿಗೆ ಒಳಗಾಗಿ ಇದನ್ನು ತಿಳಿಯಲು ಅಸಮರ್ಥರಾಗುತ್ತಾರೆ.

ನಾಸ್ತಿ ಜಾತ್ಯಾ ರಿಪುರ್ನಾಮ ಮಿತ್ರಂ ನಾಮ ನ ವಿದ್ಯತೇ ।
ಸಾಮರ್ಥ್ಯಯೋಗಾಜ್ಜಾಯಂತೇ ಮಿತ್ರಾಣಿ ರಿಪವಸ್ತಥಾ ॥೧೩೨॥

ಹುಟ್ಟಿನಿಂದ ಯಾರೂ ಶತ್ರುವೂ ಅಲ್ಲ, ಮಿತ್ರನೂ ಅಲ್ಲ. ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಮಿತ್ರರಾಗುತ್ತಾರೆ. ಶತ್ರುಗಳಾಗುತ್ತಾರೆ.

ಯೋ ಯಸ್ಮಿನ್ ಜೀವತಿ ಸ್ವಾರ್ಥಂ ಪಶ್ಯೇತ್ ಪೀಡಾಂ ನ ಜೀವತಿ ।
ಸ ತಸ್ಯ ತಾವನ್ಮಿತ್ರಂ ಸ್ಯಾದ್ ವ್ಯಾಪನ್ನಃ ಸ್ಯಾದ್ ವಿಪರ್ಯಯೇ ॥೧೩೩॥

ಒಬ್ಬ ವ್ಯಕ್ತಿಯು ಬದುಕಿದ್ದರೆ ತನಗೆ ಅನುಕೂಲ ಎಂದು ಯಾರು ಕಾಣುತ್ತಾನೋ, ಬದುಕಿರದಿದ್ದರೆ ತನಗೆ ತೊಂದರೆ ಎಂದು ಕಾಣುತ್ತಾನೋ ಅವನು ಆ ವ್ಯಕ್ತಿಗೆ ಮಿತ್ರನಾಗುತ್ತಾನೆ. ಮೈತ್ರಿಯನ್ನು ಮಾಡಿಕೊಳ್ಳದಿದ್ದರೆ ವಿಪತ್ತಿಗೆ ಒಳಗಾಗುತ್ತಾನೆ.

ನಾಸ್ತಿ ಮೈತ್ರೀ ಸ್ಥಿರಾ ನಾಮ ನ ಚ ಧ್ರುವಮಸೌಹೃದಮ್ ।
ಅರ್ಥಯುಕ್ತ್ಯಾ ಹಿ ಜಾಯಂತೇ ಮಿತ್ರಾಣಿ ರಿಪವಸ್ತಥಾ ॥೧೩೪॥

ಸ್ಥಿರವಾದ ಮೈತ್ರಿಯೂ ಇಲ್ಲ, ಸ್ಥಿರವಾದ ಶತ್ರುತ್ವವೂ ಇಲ್ಲ. ಪ್ರಯೋಜನಕ್ಕೆ ತಕ್ಕಂತೆ ಮಿತ್ರರಾಗುತ್ತಾರೆ. ಹಾಗೆಯೇ ಶತ್ರುಗಳಾಗುತ್ತಾರೆ.

ಮಿತ್ರಂ ಚ ಶತ್ರುತಾಮೇತಿ ಕಸ್ಮಿಂಶ್ಚಿತ್ ಕಾಲಪರ್ಯಯೇ ।
ಶತ್ರುಶ್ಚ ಮಿತ್ರತಾಮೇತಿ ಸ್ವಾರ್ಥೋ ಹಿ ಬಲವತ್ತರಃ ॥೧೩೫॥

ಯಾವುದೋ ಕಾಲಗತಿಯಲ್ಲಿ ಮಿತ್ರನು ಶತ್ರುವಾಗಿ ಬಿಡುತ್ತಾನೆ. ಶತ್ರುವು ಮಿತ್ರನಾಗಿ ಬಿಡುತ್ತಾನೆ. ಸ್ವಾರ್ಥವೇ ಹೆಚ್ಚು ಬಲಶಾಲಿ.

ಯೋ ವಿಶ್ವಸಿತಿ ಮಿತ್ರೇಷು ನ ಚಾಶ್ವಸಿತಿ ಶತ್ರುಷು ।
ಅರ್ಥಯುಕ್ತಿಮವಿಜ್ಞಾಯ ಚಲಿತಂ ತಸ್ಯ ಜೀವಿತಮ್ ॥೧೩೬॥

ಯಾರು ಮಿತ್ರರಲ್ಲಿ ವಿಶ್ವಾಸವಿಡುವುದಿಲ್ಲವೋ, ಸ್ವಹಿತ ಸಾಧನೆಯು ಹೇಗೆ ಆಗುತ್ತದೆ ಎಂದು ವಿಮರ್ಶಿಸದೆ ಶತ್ರುಗಳಲ್ಲಿ ವಿಶ್ವಾಸವಿಡುವನೋ ಅವನ ಜೀವನವು ಅಸ್ಥಿರವಾಗುತ್ತದೆ ಅಥವಾ ನಾಶವಾಗುತ್ತದೆ.

ಅರ್ಥಯುಕ್ತಿಮವಿಜ್ಞಾಯ ಯಃ ಶುಭೇ ಕುರುತೇ ಮತಿಮ್ ।
ಮಿತ್ರೇ ವಾ ಯದಿ ವಾ ಶತ್ರೌ ತಸ್ಯಾಪಿ ಚಲಿತಾ ಮತಿಃ ॥೧೩೭॥

ಸ್ವಹಿತ ಸಾಧನೆಯು ಹೇಗೆ ಆಗುತ್ತದೆ ಎಂದು ತಿಳಿದುಕೊಳ್ಳದೆ, ಸ್ವಹಿತವನ್ನು ಬಯಸಿ ಮಿತ್ರನ ಅಥವಾ ಶತ್ರುವಿನ ಅಭಿಪ್ರಾಯಗಳಿಗೆ ಯಾರು ಬೆಲೆಕೊಡುವನೋ ಅವನ ಬುದ್ಧಿಯೂ ಅಸ್ಥಿರವೇ.

ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇಽಪಿ ನ ವಿಶ್ವಸೇತ್ ।
ವಿಶ್ವಾಸಾದ್ಭಯಮುತ್ಪನ್ನಂ ಮೂಲಾನ್ಯಪಿ ನಿಕೃಂತತಿ ॥೧೩೮॥

ವಿಶ್ವಾಸರಹಿತನನ್ನು ನಂಬಬಾರದು. ವಿಶ್ವಾಸವಿರುವವನನ್ನೂ ನಂಬಬಾರದು. ವಿಶ್ವಾಸವಿಟ್ಟ ಕಾರಣದಿಂದ ಉಂಟಾಗುವ ಭಯವು (ತೊಂದರೆಯು) ಬದುಕಿನ ಬೇರುಗಳನ್ನೇ ಕತ್ತರಿಸುತ್ತದೆ.

ಅರ್ಥಯುಕ್ತಾ ಹಿ ದೃಶ್ಯಂತೇ ಪಿತಾ ಮಾತಾ ಸುತಾಸ್ತಥಾ ।
ಮಾತುಲಾ ಭಾಗಿನೇಯಾಶ್ಚ ತಥಾ ಸಂಬಂಧಿಬಾಂಧವಾಃ ॥೧೩೯॥

ತಂದೆ, ತಾಯಿ, ಮಕ್ಕಳು, ಸೋದರಮಾವ, ಸೋದರಿಯ ಮಕ್ಕಳು, ಸಂಬಂಧಿಗಳು, ಬಾಂಧವರು- ಇವರೆಲ್ಲರನ್ನು ಸ್ವಹಿತಕ್ಕೆ ಅನುಗುಣವಾಗಿಯೇ ಕಾಣುತ್ತೇವೆ.

ಪುತ್ರಂ ಹಿ ಮಾತಾಪಿತರೌ ತ್ಯಜತಃ ಪತಿತಂ ಪ್ರಿಯಮ್ ।
ಲೋಕೋ ರಕ್ಷತಿ ಚಾತ್ಮಾನಂ ಪಶ್ಯ ಸ್ವಾರ್ಥಸ್ಯ ಸಾರತಾಮ್ ॥೧೪೦॥

ತಂದೆ-ತಾಯಿಗಳು ಪತಿತನಾದ ಪ್ರಿಯಪುತ್ರನನ್ನೂ ತ್ಯಜಿಸುತ್ತಾರೆ. ಜನರು ತಮ್ಮ ರಕ್ಷಣೆಗೆ ಪ್ರಾಶಸ್ತ್ಯವನ್ನು ಕೊಡುತ್ತಾರೆ. ನೋಡು ಸ್ವಾರ್ಥದ ಶಕ್ತಿಯನ್ನು.

ತಂ ಮನ್ಯೇ ನಿಕೃತಿಪ್ರಜ್ಞಂ ಯೋ ಮೋಕ್ಷಂ ಪ್ರತ್ಯನಂತರಮ್ ।
ಕೃತ್ಯಂ ಮೃಗಯಸೇ ಕರ್ತುಂ ಸುಖೋಪಾಯಮಸಂಶಯಮ್ ॥೧೪೧॥

ಬಿಡುಗಡೆಯಾದ ನಂತರವೂ ನಿನ್ನ ಸುಖಕ್ಕೆ ಅನುಕೂಲವಾಗುವ (ಇಲಿಯನ್ನು ತಿನ್ನುವ) ಕೆಲಸವನ್ನು ಮಾಡಲು ಬಯಸುತ್ತಿರುವಿ. ಇಂತಹ ನಿನ್ನನ್ನು ವಂಚನೆಯಲ್ಲಿ ಮನಸ್ಸನ್ನು ಇಟ್ಟವನು ಎಂದು ತಿಳಿಯುತ್ತೇನೆ. ಈ ವಿಷಯದಲ್ಲಿ ಸಂಶಯವಿಲ್ಲ.

ಅಸ್ಮಿನ್ನಿಲಯ ಏವ ತ್ವಂ ನ್ಯಗ್ರೋಧಾದವತಾರಿತಃ ।
ಪೂರ್ವಂ ನಿವಿಷ್ಟ ಉತ್ಥಾನಂ ಚಪಲತ್ವಾನ್ನ ಬುದ್ಧವಾನ್ ॥೧೪೨॥

ಇದೇ ನಿಲಯದಲ್ಲಿ ಇದ್ದ ನೀನು (ಬೇಡನು ಇಟ್ಟಿದ್ದ ಮಾಂಸವನ್ನು ನೋಡಿ) ಆಲದ ಮರದಿಂದ ಇಳಿಯುವ ಪ್ರಲೋಭನೆಗೆ ಒಳಗಾಗಿ, ನಿನ್ನ ಚಪಲ ಸ್ವಭಾವದಿಂದ ಬಲೆಯಲ್ಲಿ ಸಿಕ್ಕಿದೆ. ಅನಂತರ ಹೊರಗೆ ಹೋಗುವ ರೀತಿಯನ್ನು ತಿಳಿಯಲಿಲ್ಲ.

ಆತ್ಮನಶ್ಚಪಲೇ ನಾಸ್ತಿ ಕುತೋನ್ಯೇಷಾಂ ಭವಿಷ್ಯತಿ ।
ತಸ್ಮಾತ್ ಸರ್ವಾಣಿ ಕಾರ್ಯಾಣಿ ಚಪಲೋ ಹಂತ್ಯಸಂಶಯಮ್ ॥

ಚಪಲ ಸ್ವಭಾವದವನಿಗೆ ಸ್ವಹಿತದ ಪರಿವೆಯೇ ಇಲ್ಲ. ಬೇರೆಯವರ ಹಿತದ ಕಾಳಜಿಯು ಹೇಗೆ ತಾನೆ ಇರುತ್ತದೆ. ಆದ್ದರಿಂದ ಚಪಲಚಿತ್ತದವನು ಎಲ್ಲ ಕೆಲಸದಲ್ಲೂ ಸೋಲುತ್ತಾನೆ. ಸಂಶಯವಿಲ್ಲ.

ಬ್ರವೀಷಿ ಮಧುರಂ ಯಚ್ಚ ಪ್ರಿಯೋ ಮೇ ಹ ಭವಾನಿತಿ ।
ತನ್ಮಿಥ್ಯಾ ಕಾರಣಂ ಸರ್ವಂ ವಿಸ್ತರೇಣಾಪಿ ಮೇ ಶೃಣು ॥೧೪೪॥

'ನೀನು ನನಗೆ ಪ್ರಿಯ' ಎಂದು ಮಧುರವಚನವನ್ನು ಹೇಳುತ್ತಿರುವಿ. ಅದು ಸುಳ್ಳು. ಕಾರಣವನ್ನು ವಿವರವಾಗಿ ಹೇಳುತ್ತೇನೆ. ಎಲ್ಲವನ್ನೂ ಕೇಳು.

ಕಾರಣಾತ್ ಪ್ರಿಯತಾಮೇತಿ ದ್ವೇಷ್ಯೋ ಭವತಿ ಕಾರಣಾತ್ ।
ಅರ್ಥಾರ್ಥೀ ಜೀವಲೋಕೋಯಂ ನ ಕಶ್ಚಿತ್ ಕಸ್ಯಚಿತ್ ಪ್ರಿಯಃ ॥

ಏನಾದರೊಂದು ಕಾರಣದಿಂದಲೇ ಪ್ರಿಯನಾಗುತ್ತಾನೆ. ಏನಾದರೊಂದು ಕಾರಣದಿಂದಲೇ ದ್ವೇಷಾರ್ಹನೂ ಆಗುತ್ತಾನೆ. ಈ ಜೀವಲೋಕವು ಸ್ವಪ್ರಯೋಜನವನ್ನೇ ಬಯಸುತ್ತದೆ. ಯಾರೂ ಯಾರಿಗೂ ಪ್ರಿಯನಲ್ಲ.

ಸಖ್ಯಂ ಸೋದರಯೋರ್ಭ್ರಾತ್ರೋರ್ದಂಪತ್ಯೋರ್ವಾ ಪರಸ್ಪರಮ್ ।
ಕಸ್ಯಚಿನ್ನಾಭಿಜಾನಾಮಿ ಪ್ರೀತಿಂ ನಿಷ್ಕಾರಣಾಮಿಹ ॥೧೪೬॥

ಒಡಹುಟ್ಟಿದ ಸೋದರರಲ್ಲಿ, ದಂಪತಿಗಳಲ್ಲಿ ಪರಸ್ಪರ ಸಖ್ಯವು ಇರುತ್ತದೆ. ಈ ಲೋಕದಲ್ಲಿ ಯಾರಿಗೂ ಯಾರಲ್ಲೂ ನಿಷ್ಕಾರಣ ಪ್ರೀತಿಯು ಇರುವುದನ್ನು ನಾನು ಗಮನಿಸಿಲ್ಲ.

ಯದ್ಯಪಿ ಭ್ರಾತರಃ ಕ್ರುದ್ಧಾ ಭಾರ್ಯಾ ವಾ ಕಾರಣಾಂತರೇ ।
ಸ್ವಭಾವತಸ್ತೇ ಪ್ರೀಯಂತೇ ನೇತರಃ ಪ್ರೀಯತೇ ಜನಃ ॥೧೪೭॥

ಯಾವುದೋ ಕಾರಣದಿಂದ ಕೋಪಗೊಂಡ ಸೋದರರು ಅಥವಾ ಪತ್ನೀ ಸ್ವಭಾವತಃ ಪ್ರೀತಿಯುಳ್ಳವರಾಗಿರುತ್ತಾರೆ. ಬೇರೆ ಯಾರೂ ಸ್ವಭಾವತಃ ಪ್ರೀತಿಯುಳ್ಳವರಲ್ಲ.

ಪ್ರಿಯೋ ಭವತಿ ದಾನೇನ ಪ್ರಿಯವಾದೇನ ಚಾಪರಃ ।
ಮಂತ್ರಹೋಮಜಪೈರನ್ಯಃ ಕಾರ್ಯಾರ್ಥಂ ಪ್ರೀಯತೇ ಜನಃ ॥೧೪೮॥

ಒಬ್ಬನು ದಾನದಿಂದ ಪ್ರಿಯನಾಗುತ್ತಾನೆ. ಮತ್ತೊಬ್ಬನು ಪ್ರಿಯ ಮಾತುಗಳಿಂದ ಪ್ರಿಯನಾಗುತ್ತಾನೆ. ಇನ್ನೊಬ್ಬನು ತನ್ನ ಕೆಲಸಕ್ಕಾಗಿ ಮಾಡಿದ ಮಂತ್ರ, ಹೋಮ, ಜಪಗಳಿಂದ ಪ್ರಿಯನಾಗುತ್ತಾನೆ.

ಉತ್ಪನ್ನಾ ಕಾರಣಾತ್ಪ್ರೀತಿರಾಸೀನ್ನೌ ಕಾರಣಾಂತರೇ ।
ಪ್ರಧ್ವಸ್ತೇ ಕಾರಣಸ್ಥಾನೇ ಸಾ ಪ್ರೀತಿರ್ವಿನಿವರ್ತತೇ ॥೧೪೯॥

ಯಾವುದೋ ಪ್ರಯೋಜನಕ್ಕಾಗಿ ನಮ್ಮಿಬ್ಬರಲ್ಲಿ ಪ್ರೀತಿಯು ಹುಟ್ಟಿತ್ತು. ಆ ಪ್ರಯೋಜನವು ನೆರವೇರಿದ ನಂತರ ಆ ಪ್ರೀತಿಯು ಇಲ್ಲವಾಗುತ್ತದೆ.

ಕಿಂ ನು ತತ್ ಕಾರಣಂ ಮನ್ಯೇ ಯೇನಾಹಂ ಭವತಃ ಪ್ರಿಯಃ ।
ಅನ್ಯತ್ರಾಭ್ಯವಹಾರಾರ್ಥಾತ್ತತ್ರಾಪಿ ಚ ಬುಧಾ ವಯಮ್ ॥೧೫೦॥

ನಾನು ನಿನಗೆ ಪ್ರಿಯನಾಗಲು, ನನ್ನನ್ನು ತಿನ್ನುವ ಉದ್ದೇಶವನ್ನು ಬಿಟ್ಟು ಬೇರೆ ಯಾವ ಕಾರಣವನ್ನು ತಿಳಿಯಲಿ? ಆ ವಿಷಯದಲ್ಲೂ ನಾನು ಬುದ್ಧಿವಂತನೇ.

ಕಾಲೋ ಹೇತುಂ ವಿಕುರುತೇ ಸ್ವಾರ್ಥಸ್ತಮನುವರ್ತತೇ ।
ಸ್ವಾರ್ಥಂ ಪ್ರಾಜ್ಞೋಽಭಿಜಾನಾತಿ ಪ್ರಾಜ್ಞಂ ಲೋಕೋಽನುವರ್ತತೇ ॥

ಕಾಲವು ಕಾರಣವನ್ನು ಬದಲಾಯಿಸುತ್ತದೆ. ಸ್ವಾರ್ಥವು ಕಾರಣವನ್ನು ಅನುಸರಿಸುತ್ತದೆ (ಸ್ವಾರ್ಥಕ್ಕೆ ಅನುಗುಣವಾಗಿ ಕಾರಣವು ಏರ್ಪಡುತ್ತದೆ). (ಆಗ ಪ್ರಾಣವನ್ನು ಉಳಿಸಿಕೊಳ್ಳುವುದು ಸ್ವಾರ್ಥ. ಈಗ ಇಲಿಯ ಭಕ್ಷಣವು ಸ್ವಾರ್ಥ. ಆಗ ಸ್ವಾರ್ಥಕ್ಕಾಗಿ ಸಂಧಾನ, ತಾಳ್ಮೆ, ಈಗ ಸ್ವಾರ್ಥಕ್ಕಾಗಿ ಪ್ರೀತಿಯ ಆಹ್ವಾನ). ಪ್ರಾಜ್ಞನು ಸ್ವಾರ್ಥವನ್ನು ತಿಳಿಯುತ್ತಾನೆ. ಲೋಕವು ಪ್ರಾಜ್ಞನನ್ನು ಅನುಸರಿಸುತ್ತದೆ.

ನ ತ್ವೀದೃಶಂ ತ್ವಯಾ ವಾಚ್ಯಂ ವಿದುಷಿ ಸ್ವಾರ್ಥಪಂಡಿತೇ ।
ಅಕಾಲೇಽವಿಷಮಸ್ಥಸ್ಯ ಸ್ವಾರ್ಥಹೇತುರಯಂ ತವ ॥೧೫೨॥

ತಿಳಿದವನೂ, ಸ್ವಾರ್ಥಪಂಡಿತನೂ ಆದ ನನ್ನನ್ನು ಕುರಿತು ಅಕಾಲದಲ್ಲಿ (ಅವಶ್ಯಕತೆಯು ಇಲ್ಲದಿರುವಾಗ) ನೀನು ಹೀಗೆ ಹೇಳಬಾರದು. ವಿಷಮಸ್ಥಿತಿಯಲ್ಲಿ ಇಲ್ಲದ ನಿನ್ನ ಈ ವ್ಯವಹಾರವು ಸ್ವಾರ್ಥಸಾಧನೆಗಾಗಿಯೇ.

ತಸ್ಮಾನ್ನಾಹಂ ಚಲೇ ಸ್ವಾರ್ಥಾತ್ ಸುಕೃತಃ ಸಂಧಿವಿಗ್ರಹೇ ।
ಅಭ್ರಾಣಾಮಿವ ರೂಪಾಣಿ ವಿಕುರ್ವಂತಿ ಕ್ಷಣೇ ಕ್ಷಣೇ ॥೧೫೩॥

ಆದ್ದರಿಂದ ಸಂಧಿ ಮತ್ತು ವಿಗ್ರಹಗಳಲ್ಲಿ ಕುಶಲನಾದ ನಾನು ಸ್ವಾರ್ಥತ್ಯಾಗವನ್ನು ಮಾಡುವುದಿಲ್ಲ. ನಮ್ಮ ರೂಪಗಳು=ನಿಲುವುಗಳು ಪ್ರತಿಕ್ಷಣ ಬದಲಾವಣೆಯನ್ನು ಹೊಂದುತ್ತವೆ. ಮೋಡಗಳ ಆಕಾರಗಳಂತೆ.

ಅದ್ಯೈವ ಹಿ ರಿಪುರ್ಭೂತ್ವಾ ಪುನರದ್ಯೈವ ಸೌಹೃದಮ್ ।
ಪುನಶ್ಚ ರಿಪುರದ್ಯೈವ ಯುಕ್ತೀನಾಂ ಪಶ್ಯ ಚಾಪಲಮ್ ॥೧೫೪॥

ಈ ದಿನವೇ ಶತ್ರುವಾಗಿದ್ದಿ. ಈ ದಿನವೇ ಸೌಹಾರ್ದವೂ ಉಂಟಾಗಿತ್ತು. ಮತ್ತೆ ಈ ದಿನವ ಶತ್ರು. ಯುಕ್ತಿಗಳ (ಕಾರಣಗಳ) ಅಸ್ಥಿರತೆಯನ್ನು ನೋಡು.

ಆಸೀತ್ ತಾವತ್ ತು ಮೈತ್ರೀ ನೌ ಯಾವದ್ಧೇತುರಭೂತ್ ಪುರಾ ।
ಸಾ ಗತಾ ಸಹ ತೇನೈವ ಕಾಲಯುಕ್ತೇನ ಹೇತುನಾ ॥೧೫೫॥

ಸ್ವಲ್ಪ ಹಿಂದೆ ನಮ್ಮಿಬ್ಬರ ಮೈತ್ರಿಗೆ ಕಾರಣವಿತ್ತು. ಮೈತ್ರಿಯೂ ಇತ್ತು. ಕಾಲಕ್ಕೆ (ಕಾಲದ ಅವಶ್ಯಕತೆಗೆ) ಸೀಮಿತವಾಗಿದ್ದ ಆ ಕಾರಣವು (ಮುಂಗಸಿ ಮತ್ತು ಗೂಬೆಗಳ ನಿರ್ಗಮನದಿಂದ ಮತ್ತು ಬಲೆಯ ಛೇದದಿಂದ) ಇಲ್ಲವಾಯಿತು. ಕಾರಣದ ನಿವೃತ್ತಿಯ ಜೊತೆಗೆ ಮೈತ್ರಿಯೂ ಹೋಯಿತು.

ತ್ವಂ ಹಿ ಮೇಽತ್ಯಂತತಃ ಶತ್ರುಃ ಸಾಮರ್ಥ್ಯಾನ್ಮಿತ್ರತಾಂ ಗತಃ ।
ತತ್ಕೃತ್ಯಮಭಿನಿರ್ವೃತ್ತಂ ಪ್ರಕೃತಿಃ ಶತ್ರುತಾಂ ಗತಾ ॥೧೫೬॥

ನೀನು ನನ್ನ ಅತ್ಯಂತ ಶತ್ರು. (ನಿನ್ನನ್ನು ಆಪತ್ತಿನಿಂದ ಪಾರು ಮಾಡುವ) ನನ್ನ ಸಾಮರ್ಥ್ಯದಿಂದಾಗಿ ಮಿತ್ರನಾಗಿದ್ದಿ. ನಿನ್ನ ಕೆಲಸವು ಆಯಿತು. ಈಗ ನಿನ್ನ ಸ್ವಭಾವವು ಶತ್ರುತ್ವದ ಕಡೆಗೆ ಸಾಗಿದೆ.

ಸೋಽಹಮೇವಂ ಪ್ರಣೀತಾನಿ ಜ್ಞಾತ್ವಾ ಶಾಸ್ತ್ರಾಣಿ ತತ್ತ್ವತಃ ।
ಪ್ರವಿಶೇಯಂ ಕಥಂ ಪಾಶಂ ತ್ವತ್ಕೃತಂ ತದ್ ವದಸ್ವ ಮೇ ॥೧೫೭॥

(ಪೂರ್ವಸೂರಿಗಳಿಂದ) ರಚಿತವಾದ ಶಾಸ್ತ್ರಗಳನ್ನು ಸರಿಯಾಗಿ ತಿಳಿದಿರುವ ಈ ನಾನು ನೀನು ರಚಿಸಿರುವ ಬಲೆಗೆ ಹೇಗೆ ತಾನೆ ಪ್ರವೇಶಿಸಿಯೇನು? ನೀನೇ ಹೇಳು.

ತ್ವದ್ವೀರ್ಯೇಣ ವಿಮುಕ್ತೋಽಹಂ ಮದ್ವೀರ್ಯೇಣ ತಥಾ ಭವಾನ್ ।
ಅನ್ಯೋನ್ಯಾನುಗ್ರಹೇ ವೃತ್ತೇ ನಾಸ್ತಿ ಭೂಯಃ ಸಮಾಗಮಃ ॥೧೫೮॥

ನಿನ್ನ ಬಲದಿಂದ (ಅನಿವಾರ್ಯವಾದ ನಿನ್ನ ತಾಳ್ಮೆಯಿಂದ) ನಾನು ಬಿಡುಗಡೆಯನ್ನು ಹೊಂದಿದೆನು. ನನ್ನ ಬಲದಿಂದ ನೀನು ಬಿಡುಗಡೆಯನ್ನು ಹೊಂದಿದಿ. ಪರಸ್ಪರ ಉಪಕಾರವು ಆದನಂತರ ಮತ್ತೆ ಸಮಾಗಮವಿಲ್ಲ.

ತ್ವಂ ಹಿ ಸೌಮ್ಯ ಕೃತಾರ್ಥೋಽದ್ಯ ನಿರ್ವೃತ್ತಾರ್ಥಾಸ್ತಥಾ ವಯಮ್ ।
ನ ತೇಽಸ್ಯನ್ಯನ್ಮಯಾ ಕೃತ್ಯಂ ಕಿಂಚಿದನ್ಯತ್ರ ಭಕ್ಷಣಾತ್ ॥೧೫೯॥

ಸೌಮ್ಯ ! ಈಗ ನೀನು ಕೃತಾರ್ಥ. ನಾನೂ ಕೃತಾರ್ಥ. ನನ್ನನ್ನು ತಿನ್ನುವುದನ್ನು ಬಿಟ್ಟು ಬೇರೆ ಏನೂ ನನ್ನಿಂದ ನಿನಗೆ ಆಗಬೇಕಿಲ್ಲ.

ಅಹಮನ್ನಂ ಭವಾನ್ ಭೋಕ್ತಾ ದುರ್ಬಲೋಹಂ ಭವಾನ್ ಬಲೀ ।
ನಾವಯೋರ್ವಿದ್ಯತೇ ಸಂಧಿರ್ನಿಯುಕ್ತೇ ವಿಷಮೇ ಬಲೇ ॥೧೬೦॥

ನಾನು ಆಹಾರ. ನೀನು ತಿನ್ನುವವನು. ನಾನು ದುರ್ಬಲ. ನೀನು ಬಲಶಾಲಿ. ವಿಷಮ ಬಲವು (ನಮ್ಮಲ್ಲಿ ವಿಧಿಯಿಂದ) ನಿಯುಕ್ತವಾಗಿರುವಾಗ ನಮ್ಮಿಬ್ಬರಲ್ಲಿ ಸಂಧಿಯು ಇಲ್ಲವೇ ಇಲ್ಲ.

ಸಮ್ಮನ್ಯೇಽಹಂ ತವ ಪ್ರಜ್ಞಾಂ ಯನ್ಮೋಕ್ಷಾತ್ ಪ್ರತ್ಯನಂತರಮ್ ।
ಭಕ್ಷ್ಯಂ ಮೃಗಯಸೇ ನೂನಂ ಸುಖೋಪಾಯಮಸಂಶಯಮ್ ॥೧೬೧॥

ನನಗೆ ನಿನ್ನ ಬುದ್ಧಿಯು ಗೊತ್ತು. ಬಿಡುಗಡೆಯ ನಂತರ ಸುಲಭ ಉಪಾಯದಿಂದ (ನನ್ನನ್ನು) ಆಹಾರವಾಗಿ ಪಡೆಯಲು ಹೊಂಚು ಹಾಕುತ್ತಿರುವಿ. ಸಂಶಯವೇ ಇಲ್ಲ.

ಭಕ್ಷ್ಯಾರ್ಥಮೇವ ಬದ್ಧಸ್ತ್ವಂ ಸ ಮುಕ್ತಃ ಪ್ರಸೃತಃ ಕ್ಷುಧಾ ।
ಶಾಸ್ತ್ರಜ್ಞಮಭಿಸಂಧಾಯ ನೂನಂ ಭಕ್ಷಯಿತಾದ್ಯ ಮಾಮ್ ।
ಶಸ್ತ್ರಜ್ಞಾಂ ಮತಿಮಾಸ್ಥಾಯ ಪ್ರಾತರಾಶಮಿಹೇಚ್ಛಸಿ ॥೧೬೨॥

(ಬೇಡನ) ಆಹಾರಕ್ಕಾಗಿಯೇ ನೀನು (ಬಲೆಯಲ್ಲಿ) ಬದ್ಧನಾಗಿದ್ದಿ. ಬಿಡುಗಡೆ ಹೊಂದಿದ ನಿನಗೆ ಬಹಳ ಹಸಿವು. ನಾನು ಶಾಸ್ತ್ರಜ್ಞ ಎಂದು ತಿಳಿದಿರುವಿ. (ಆದ್ದರಿಂದ

ಕೃತಜ್ಞತೆ, ಸೌಹಾರ್ದ ಮೊದಲಾದ ಮಾತುಗಳಿಗೆ ನಾನು ಸ್ಪಂದಿಸುತ್ತೇನೆ ಎಂಬ) ಕುಯುಕ್ತಿಯಿಂದ ನೀನು ಇಂದು ನನ್ನನ್ನು ತಿಂದೇಬಿಡುವಿ. ಸಂಶಯವಿಲ್ಲ. (ನನ್ನ ಶಾಸ್ತ್ರಾಧ್ಯಯನದಿಂದ ಹುಟ್ಟಿದ ಚಿಂತನೆಯನ್ನು ಅವಲಂಬಿಸಿ ನನ್ನನ್ನು ನಿನ್ನ ಬೆಳಗಿನ ಆಹಾರವಾಗಿಸಲು ಬಯಸಿರುವಿ- ಲಕ್ಷಾಲಂಕಾರ).

ಜಾನಾಮಿ ಕ್ಷುಧಿತಂ ಹಿ ತ್ವಾಮಾಹಾರಸಮಯಶ್ಚ ತೇ ।
ಸ ತ್ವಂ ಮಾಮಭಿಸಂಧಾಯ ಭಕ್ಷ್ಯಂ ಮೃಗಯಸೇ ಪುನಃ ॥೧೬೩॥

ನನಗೆ ಗೊತ್ತು , ನಿನಗೆ ಹಸಿವು ಆಗಿದೆ. ಈಗ ನಿನ್ನ ಆಹಾರದ ಸಮಯ. ನೀನು ಕುಯುಕ್ತಿಯನ್ನು ಹೂಡಿ ನನ್ನನ್ನು ಆಹಾರವಾಗಿಸಿಕೊಳ್ಳಲು ಬಯಸುತ್ತಿರುವಿ.

ಯಚ್ಚಾಪಿ ಪುತ್ರದಾರಂ ಸ್ವಂ ತತ್ ಸನ್ನಿಸೃಜಸೇ ಮಯಿ ।
ಶುಶ್ರೂಷಾಂ ನಾಮ ಮೇ ಕರ್ತುಂ ಸಖೇ ಮಮ ನ ತತ್ಕ್ಷಮಮ್ ॥

ನಿನ್ನ ಮಕ್ಕಳನ್ನು, ಪತ್ನಿಯನ್ನು ನನ್ನ ಶುಶ್ರೂಷೆ ಮಾಡುವುದಕ್ಕೆ ನಿಯೋಜಿಸುವುದಾಗಿ ಹೇಳುತ್ತಿರುವಿ. ಗೆಳೆಯ! ನನಗೆ ಇದು ಸರ್ವಥಾ ಯುಕ್ತವಾಗಿ ಕಾಣುವುದಿಲ್ಲ.

ತ್ವಯಾ ಮಾಂ ಸಹಿತಂ ದೃಷ್ಟ್ವಾ ಪ್ರಿಯಾ ಭಾರ್ಯಾ ಸುತಾಶ್ಚ ಯೇ ।
ಕಸ್ಮಾನ್ನಾಂ ತೇ ನ ಖಾದೇಯುರ್ಹೃಷ್ಟಾಃ ಪ್ರಣಯಿನಸ್ತ್ವಯಿ ॥೧೬೫॥

ನಿನ್ನ ಜೊತೆಗಿರುವ ನನ್ನನ್ನು ನೋಡಿ ನಿನ್ನ ಪ್ರೀತಿಗೆ ಪಾತ್ರರಾದ ನಿನ್ನ ಹೆಂಡತಿ, ಮಕ್ಕಳು ಸಂತೋಷದಿಂದ ನನ್ನನ್ನು ತಿನ್ನುವುದಿಲ್ಲವೇ?

ನಾಹಂ ತ್ವಯಾ ಸಮೇಷ್ಯಾಮಿ ವೃತ್ತೋ ಹೇತುಃ ಸಮಾಗಮೇ ।
ಶಿವಂ ಧ್ಯಾಯಸ್ವ ಮೇಽತ್ರಸ್ಥಃ ಸುಕೃತಂ ಸ್ಮರ್ಯತೇ ಯದಿ ॥೧೬೬॥

ನಾನು ನಿನ್ನ ಜೊತೆ ಸೇರುವುದಿಲ್ಲ. ನಮ್ಮ ಸಮಾಗಮಕ್ಕೆ ಕಾರಣವು ಇತ್ತು (ಈಗ ಇಲ್ಲ). ನನ್ನ ಒಳ್ಳೆಯ ಕೆಲಸವನ್ನು ನೆನೆಯುವುದೇ ಆದರೆ ನನ್ನ ಶ್ರೇಯಸ್ಸನ್ನು ಚಿಂತಿಸು.

ಶತ್ರೋರನ್ನಾದ್ಯಭೂತಃ ಸನ್ ಕ್ಲಿಷ್ಟಸ್ಯ ಕ್ಷುಧಿತಸ್ಯ ಚ ।
ಭಕ್ಷ್ಯಂ ಮೃಗಯಮಾಣಸ್ಯ ಕಃ ಪ್ರಾಜ್ಞೋ ವಿಷಯಂ ವ್ರಜೇತ್ ॥೧೬೭॥

ಕ್ಲೇಶಕ್ಕೆ ಒಳಗಾಗಿರುವ, ಹಸಿದಿರುವ, ಆಹಾರವನ್ನು ಹುಡುಕುತ್ತಿರುವ ಶತ್ರುವಿಗೆ ಆಹಾರವಾಗಿ ಯಾವ ಪ್ರಾಜ್ಞನು ತಾನೇ ಅವನ ಬಳಿ ಹೋದಾನು?

ಸ್ವಸ್ತಿ ತೇಽಸ್ತು ಗಮಿಷ್ಯಾಮಿ ದೂರಾದಪಿ ತವೋದ್ವಿಜೇ ।
ನಾಹಂ ತ್ವಯಾ ಸಮೇಷ್ಯಾಮಿ ನಿರ್ವ್ಯತೋ ಭವ ಲೋಮಶ ॥೧೬೮॥

ನಿನಗೆ ಒಳ್ಳೆಯದಾಗಲಿ ಹೋಗುತ್ತೇನೆ. ನೀನು ದೂರದಲ್ಲಿದ್ದರೂ ನನಗೆ ಉದ್ವೇಗವಾಗುತ್ತದೆ. ಲೋಮಶ! ನಾನು ನಿನ್ನ ಜೊತೆ ಸೇರುವುದಿಲ್ಲ, ಸಂತೋಷದಿಂದಿರು.

ಬಲವತ್ಸನ್ನಿಕರ್ಷೋ ಹಿ ನ ಕದಾಚಿತ್ ಪ್ರಶಸ್ಯತೇ ।
ಪ್ರಶಾಂತಾದಪಿ ಮೇ ಪ್ರಾಜ್ಞ ಭೇತವ್ಯಂ ಬಲಿನಃ ಸದಾ ॥೧೬೯॥

ಬಲಶಾಲಿಗಳ ಸಾಮೀಪ್ಯವು ಎಂದೂ ಹಿತವಲ್ಲ. ಪ್ರಾಜ್ಞ! ಪ್ರಶಾಂತರಾದ ಬಲಶಾಲಿಗಳಿಗೂ ನಾನು ಸದಾ ಹೆದರುತ್ತೇನೆ.

ಯದಿ ತ್ವರ್ಥೇನ ಮೇ ಕಾರ್ಯಂ ಬ್ರೂಹಿ ಕಿಂ ಕರವಾಣಿ ತೇ ।
ಕಾಮಂ ಸರ್ವಂ ಪ್ರದಾಸ್ಯಾಮಿ ನ ತ್ವಾತ್ಮಾನಂ ಕದಾಚನ ॥೧೭೦॥

ನನ್ನ ಸಂಪತ್ತಿನಿಂದ ನಿನಗೆ ಏನಾದರೂ ಆಗಬೇಕಿದ್ದರೆ ಹೇಳು. ಏನು ಮಾಡಬೇಕು. ಎಲ್ಲವನ್ನೂ ಉದಾರವಾಗಿ ಕೊಡುತ್ತೇನೆ. ಯಾವುದೇ ಸಮಯದಲ್ಲೂ ಆತ್ಮಾರ್ಪಣೆಯನ್ನು ಮಾಡುವುದಿಲ್ಲ.

ಆತ್ಮಾರ್ಥೇ ಸಂತತಿಸ್ತ್ಯಾಜ್ಯಾ ರಾಜ್ಯಂ ರತ್ನಂ ಧನಂ ತಥಾ ।
ಅಪಿ ಸರ್ವಸ್ವಮುತ್ಸೃಜ್ಯ ರಕ್ಷೇದಾತ್ಮಾನಮಾತ್ಮನಾ ॥೧೭೧॥

ತನ್ನ ರಕ್ಷಣೆಗಾಗಿ ಸಂತತಿಯನ್ನು ತ್ಯಜಿಸಬೇಕು. ರಾಜ್ಯವನ್ನೂ, ರತ್ನಗಳನ್ನೂ, ಧನವನ್ನೂ ತ್ಯಜಿಸಬೇಕು. ಎಲ್ಲವನ್ನೂ ಬಿಟ್ಟು ತಾನೇ ತನ್ನನ್ನು ರಕ್ಷಿಸಿಕೊಳ್ಳಬೇಕು.

ಐಶ್ವರ್ಯಧನರತ್ನಾನಾಂ ಪ್ರತ್ಯಮಿತ್ರೇಽಪಿ ತಿಷ್ಠತಾಮ್ ।
ದೃಷ್ಟ್ವಾ ಹಿ ಪುನರಾವೃತ್ತಿರ್ದೇವತಾಮಿತಿ ನಃ ಶ್ರುತಮ್ ॥೧೭೨॥

ಬದುಕಿ ಉಳಿದರೆ ಶತ್ರುವಶವಾಗಿದ್ದ ಐಶ್ವರ್ಯ, ರತ್ನಗಳು ಪುನಃ ವಶಕ್ಕೆ ಬರುತ್ತವೆ. ಈ ಪುನರಾವೃತ್ತಿಯನ್ನು ನಾನು ನೋಡಿದ್ದೇನೆ, ಕೇಳಿದ್ದೇನೆ.

ನ ತ್ವಾತ್ಮನಃ ಸಂಪ್ರದಾನಂ ಧನರತ್ನವದಿಷ್ಯತೇ ।
ಆತ್ಮಾ ತು ಸರ್ವತೋ ರಕ್ಷ್ಯೋ ದಾರೈರಪಿ ಧನೈರಪಿ ॥೧೭೩॥

ಧನ, ರತ್ನಗಳನ್ನು ದಾನ ಮಾಡುವಂತೆ ತನ್ನನ್ನೇ ದಾನ ಮಾಡಬಾರದು. ಹೆಂಡತಿ, ಮಕ್ಕಳನ್ನೂ ಕೂಡ ತನ್ನ ರಕ್ಷಣೆಗಾಗಿ ಬಳಸಿಕೊಳ್ಳಬೇಕು.

ಆತ್ಮರಕ್ಷಿತತಂತ್ರಾಣಾಂ ಸುಪರೀಕ್ಷಿತಕಾರಿಣಾಮ್ ।
ಆಪದೋ ನೋಪಪದ್ಯಂತೇ ಪುರುಷಾಣಾಂ ಸ್ವದೋಷಜಾಃ ॥೧೭೪॥

ಆತ್ಮರಕ್ಷಣೆಯ ತಂತ್ರಗಳನ್ನು ತಿಳಿದಿರುವ, ಚೆನ್ನಾಗಿ ಪರೀಕ್ಷಿಸಿ ಕಾರ್ಯಗಳನು ಮಾಡುವ ಪುರುಷರಿಗೆ ಅವರದೇ ತಪ್ಪಿನಿಂದ ಆಪತ್ತುಗಳು ಸಂಭವಿಸುವುದಿಲ್ಲ.

ಶತ್ರೂನ್ ಸಮ್ಯಗ್ ವಿಜಾನಂತಿ ದುರ್ಬಲಾ ಯೇ ಬಲೀಯಸಃ ।
ತೇಷಾಂ ನ ಚಾಲ್ಯತೇ ಬುದ್ಧಿರಾತ್ಮಾರ್ಥಂ ಕೃತನಿಶ್ಚಯಾ ॥೧೭೫॥

ಯಾವ ದುರ್ಬಲರು ತಮಗಿಂತ ಹೆಚ್ಚು ಬಲಶಾಲಿಗಳಾದ ಶತ್ರುಗಳನ್ನು ಸರಿಯಾಗಿ ತಿಳಿದಿರುತ್ತಾರೋ, ಅಂತಹವರ ಸುಶಿಕ್ಷಿತ ನಿಶ್ಚಯವಿರುವ ಬುದ್ಧಿಯು ದಾರಿ ತಪ್ಪುವುದಿಲ್ಲ.

ಇತ್ಯಭಿವ್ಯಕ್ತಮೇವಾಸೌ ಪಲಿತೇನಾವಭರ್ತ್ಸಿತಃ ।
ಮಾರ್ಜಾರೋ ವ್ರೀಡಿತೋ ಭೂತ್ವಾ ಮೂಷಕಂ ವಾಕ್ಯಮಬ್ರವೀತ್ ॥

ಹೀಗೆ ಬಹಳ ಸ್ಪಷ್ಟವಾಗಿ ಪಲಿತನಿಂದ ತೆಗಳಲ್ಪಟ್ಟ ಬೆಕ್ಕು ನಾಚಿಕೆಗೊಂಡು ಇಲಿಗೆ ಹೇಳಿತು.

ಸಮ್ಮನ್ಯೇಽಹಂ ತವ ಪ್ರಜ್ಞಾಂ ಯಸ್ತ್ವಂ ಮಮ ಹಿತೇ ರತಃ ।
ಉಕ್ತವಾನರ್ಥತತ್ತ್ವೇನ ಮಯಾ ಸಂಭಿನ್ನದರ್ಶನಃ ॥೧೭೭॥

ನನ್ನ ಹಿತಚಿಂತಕನಾದ, ನನ್ನ ವಿಚಾರಗಳಿಗೆ ಹೊಂದುವ ವಿಚಾರಗಳನ್ನು ಹೊಂದಿರುವ ನೀನು ನಡವಳಿಕೆಯ ತತ್ವಗಳನ್ನು ಹೇಳಿರುವಿ. ನಿನ್ನ ಪ್ರಜ್ಞೆಗೆ ನನ್ನ ಸಹಮತಿಯಿದೆ.

ನ ತು ಮಾಮನ್ಯಥಾ ಸಾಧೋ ತ್ವಂ ವಿಜ್ಞಾತುಮಿಹಾರ್ಹಸಿ ।
ಪ್ರಾಣಪ್ರದಾನಜಂ ತತ್ತೋ ಮಮ ಸೌಹೃದಮಾಗತಮ್ ॥೧೭೮॥

ಸಾಧುವೇ! ನನ್ನನ್ನು ದಯವಿಟ್ಟು ಅನ್ಯಥಾ ಭಾವಿಸಬೇಡ. ನೀನು ಮಾಡಿದ ಪ್ರಾಣಪ್ರದಾನದಿಂದ ನನಗೆ ಈ ಸೌಹಾರ್ದವು ಹುಟ್ಟಿದೆ.

ಧರ್ಮಜ್ಞೋಽಸ್ಮಿ ಗುಣಜ್ಞೋಽಸ್ಮಿ ಕೃತಜ್ಞೋಽಸ್ಮಿ ವಿಶೇಷತಃ ।
ಮಿತ್ರೇಷು ವತ್ಸಲಶ್ಚಾಸ್ಮಿ ತದ್ವಿಧೇಷು ವಿಶೇಷತಃ ॥೧೭೯॥

ನಾನು ಧರ್ಮಜ್ಞ. ಗುಣಜ್ಞ. ವಿಶೇಷವಾಗಿ ಕೃತಜ್ಞನಾಗಿದ್ದೇನೆ. ನಿನ್ನಂತಹ ಮಿತ್ರರ ಮೇಲೆ ವಿಶೇಷ ವಾತ್ಸಲ್ಯವುಳ್ಳವನಾಗಿದ್ದೇನೆ.

ತನ್ಮಾಮೇವಂಗತೇ ಸಾಧೋ ನ ಯಾವಯಿತುಮರ್ಹಸಿ ।
ತ್ವಯಾ ಹಿ ಯಾವ್ಯಮಾನೋಹಂ ಪ್ರಾಣಾನ್ ಜಹ್ಯಾಂ ಸಬಾಂಧವಃ ॥

ಸಾಧುವೇ! ಹೀಗಿರುವಾಗ ದಯವಿಟ್ಟು ನನ್ನನ್ನು ನಿಂದಿಸಬೇಡ. ನಿನ್ನಿಂದ ನಿಂದೆಗೊಳಗಾದರೆ ನಾನು ನನ್ನ ಬಾಂಧವರೊಡನೆ ಪ್ರಾಣತ್ಯಾಗವನ್ನೇ ಮಾಡುವೆ.

ಧಿಕ್‌ಶಬ್ದೋ ಹಿ ಬುಧೈರ್ದತ್ತೋ ಮದ್ವಿಧೇಷು ಮನಸ್ವಿಷು ।
ಮರಣಂ ಧರ್ಮತತ್ತ್ವಜ್ಞ ನ ಮಾಂ ಶಂಕಿತುಮರ್ಹಸಿ ॥೧೮೦॥

ನನ್ನಂತಹ ಪ್ರಶಸ್ತ ಮನಸ್ಸಿನವರಿಗೆ (ಬೇರೆಯವರಿಂದ ಆಗುವ) ಧಿಕ್ಕಾರವು ಮರಣವೇ. ಇದನ್ನು ಜ್ಞಾನಿಗಳು ತಿಳಿದಿದ್ದಾರೆ. ಧರ್ಮತತ್ವವನ್ನು ತಿಳಿದವನೆ! ದಯವಿಟ್ಟು ನನ್ನ ಬಗ್ಗೆ ಸಂದೇಹಪಡಬೇಡ.

ಇತಿ ಸಂಸ್ತೂಯಮಾನೋ ಹಿ ಮಾರ್ಜಾರೇಣ ಸ ಮೂಷಕಃ ।
ಮನಸಾ ಭಾವಗಂಭೀರಂ ಮಾರ್ಜಾರಂ ವಾಕ್ಯಮಬ್ರವೀತ್ ॥೧೮೧॥

ಬೆಕ್ಕಿನಿಂದ ಹೀಗೆ ಸ್ತುತಿಸಲ್ಪಟ್ಟ ಇಲಿಯು ಬೆಕ್ಕಿಗೆ ಗಂಭೀರಭಾವದ ಮಾತುಗಳನು ಹೇಳಿತು.

ಸಾಧುರ್ಭವಾನ್ ಶ್ರುತಾಧ್ಯೋಽಸ್ಮಿ ಪ್ರೀಯೇ ಚ ನ ಚ ವಿಶ್ವಸೇ ।
ಸಂಸ್ತವೈರ್ವಾ ಧನೌಘೈರ್ವಾ ನಾಹಂ ಶಕ್ಯಃ ಪುನಸ್ತ್ವಯಾ ॥೧೮೨॥

ನೀನು ಸಾಧು. ನಿನ್ನ ಅಭಿಪ್ರಾಯಗಳನ್ನು ಕೇಳಿದ್ದೇನೆ. ಸಂತೋಷಿಸುತ್ತೇನೆ. ಆದರೆ ನಿನ್ನನ್ನು ನಂಬುವುದಿಲ್ಲ. ಪ್ರಶಂಸೆಗಳಿಂದ ಅಥವಾ ಧನರಾಶಿಯಿಂದ ನೀನು ನನ್ನನ್ನು ಪುನಃ ವಶಪಡಿಸಿಕೊಳ್ಳಲಾರೆ.

ನ ಹ್ಯಮಿತ್ರವಶಂ ಯಾಂತಿ ಪ್ರಾಜ್ಞಾ ನಿಷ್ಕಾರಣಂ ಸಖೇ ।
ಅಸ್ಮಿನ್ನರ್ಥೇ ಸಮಾಧೇಯೇ ನಿಬೋಧೋಶನಸಾ ಕೃತೇ ॥೧೮೪॥

ಗೆಳೆಯ! ಪ್ರಾಜ್ಞರು ಕಾರಣವಿಲ್ಲದೆ ಶತ್ರುಗಳಿಗೆ ವಶರಾಗುವುದಿಲ್ಲ. ಇದೇ ವಿಷಯದಲ್ಲಿ ಶುಕ್ರಾಚಾರ್ಯರಿಂದ ರಚಿತವಾದ ಎರಡು ಶ್ಲೋಕಗಳಿವೆ. ಅವುಗಳನ್ನು ತಿಳಿಯಬೇಕು (ಸರಿಯಾಗಿ ಮನಸ್ಸಿನಲ್ಲಿ ಧರಿಸಬೇಕು- ಲಕ್ಷಾಲಂಕಾರ).

ಶತ್ರುಸಾಧಾರಣೇ ಕೃತ್ಯೇ ಕೃತ್ವಾ ಸಂಧಿಂ ಬಲೀಯಸಾ ।
ಸಮಾಹಿತಶ್ಚರೇದ್ ಯುಕ್ತ್ಯಾ ಕೃತಾರ್ಥಶ್ಚ ನ ವಿಶ್ವಸೇತ್ ॥೧೮೫॥

ಶತ್ರು ಮತ್ತು ತಾನು- ಇಬ್ಬರಿಗೂ ಆಗಬೇಕಾದ ಕೆಲಸಕ್ಕಾಗಿ ಬಲಶಾಲಿಯಾದ ಶತ್ರುವಿನ ಜೊತೆ ಸಂಧಾನವನ್ನು ಮಾಡಿಕೊಂಡು ಉಪಾಯದಿಂದ, ಪೂರ್ಣ ಎಚ್ಚರದಿಂದ ನಡೆದುಕೊಳ್ಳಬೇಕು.ಕೆಲಸವು ಆದ ಮೇಲೆ ನಂಬಬಾರದು.

ತಸ್ಮಾತ್ ಸರ್ವಾಸ್ವವಸ್ಥಾಸು ರಕ್ಷೇಜ್ಜೀವಿತಮಾತ್ಮನಃ ।
ದ್ರವ್ಯಾಣಿ ಸಂತತಿಶ್ಚೈವ ಸರ್ವಂ ಭವತಿ ಜೀವತಃ ॥೧೮೬॥

ಆದ್ದರಿಂದ ಎಲ್ಲ ಅವಸ್ಥೆಗಳಲ್ಲಿ ತನ್ನ ಪ್ರಾಣವನ್ನು ರಕ್ಷಿಸಿಕೊಳ್ಳಬೇಕು. ಬದುಕಿ ಉಳಿದವನಿಗೆ ಸಂಪತ್ತು , ಸಂತತಿ ಮೊದಲಾದ ಎಲ್ಲವೂ ಒದಗಿ ಬರುತ್ತವೆ.

ಸಂಕ್ಷೇಪೋ ನೀತಿಶಾಸ್ತ್ರಾಣಾಮವಿಶ್ವಾಸಃ ಪರೋ ಮತಃ ।
ನೃಷು ತಸ್ಮಾದವಿಶ್ವಾಸಃ ಪುಷ್ಕಲಂ ಹಿತಮಾತ್ಮನಃ ॥೧೮೭॥

'ಪರಮ ಅವಿಶ್ವಾಸ' - ಇದು ನೀತಿಶಾಸ್ತ್ರಗಳ ಸಾರ. ಆದ್ದರಿಂದ ಜನರ ಮೇಲೆ ಅವಿಶ್ವಾಸವು ಅತ್ಯಂತ ಹಿತಕರ.

ವಧ್ಯಂತೇ ನ ಹ್ಯವಿಶ್ವಾಸಾಃ ಶತ್ರುಭಿರ್ದುರ್ಬಲಾ ಅಪಿ ।
ವಿಶ್ವಸ್ತಾಸ್ತ್ವ ಶು ವಧ್ಯಂತೇ ಬಲವಂತೋಽಪಿ ದುರ್ಬಲೈಃ ॥೧೮೮॥

ನಂಬದ ದುರ್ಬಲರೂ ಶತ್ರುಗಳಿಂದ ಹತರಾಗುವುದಿಲ್ಲ. ನಂಬುವ ಬಲಶಾಲಿಗಳೂ ದುರ್ಬಲರಿಂದ ಹತರಾಗುತ್ತಾರೆ.

ತ್ವದ್ವಿಧೇಭ್ಯೋ ಮಯಾ ಹ್ಯಾತ್ಮಾ ರಕ್ಷ್ಯೋ ಮಾರ್ಜಾರ ಸರ್ವದಾ ।
ರಕ್ಷ ತ್ವಮಪಿ ಚಾತ್ಮಾನಂ ಚಂಡಾಲಾಜ್ಜಾತಿಕಿಲ್ಬಿಷಾತ್ ॥೧೮೯॥

ಬೆಕ್ಕೆ! ನಾನು ನನ್ನನ್ನು ನಿನ್ನಂತಹವರಿಂದ ಯಾವಾಗಲೂ ರಕ್ಷಿಸಿಕೊಳ್ಳಬೇಕು. ನೀನೂ ಕೂಡ ಹುಟ್ಟಿನಿಂದಲೇ ಕೆಟ್ಟವನಾದ ಚಂಡಾಲನಿಂದ ನಿನ್ನನ್ನು ರಕ್ಷಿಸಿಕೊಳ್ಳಬೇಕು.

ಸ ತಸ್ಯ ಬ್ರುವತಸ್ತ್ವೇವಂ ಸಂತ್ರಾಸಾಜ್ಜಾತಸಾಧ್ವಸಃ ।
ಕಥಾಂ ಹಿತ್ವಾ ಜವೇನಾಶು ಮಾರ್ಜಾರಃ ಪ್ರಯಯೌ ತತಃ ॥೧೯೦॥

ಇಲಿಯು ಹೀಗೆ ಹೇಳುತ್ತಿರುವಾಗಲೇ ಭಯಂಕರವಾದ ಚಂಡಾಲನ ಭಯಕ್ಕೊಳಗಾಗಿ ಬೆಕ್ಕು ಸಂವಾದವನ್ನು ಬಿಟ್ಟು ಅಲ್ಲಿಂದ ಹೊರಟು ಹೋಯಿತು.

ತತಃ ಶಾಸ್ತ್ರಾರ್ಥತತ್ತ್ವಜ್ಞೋ ಬುದ್ಧಿಸಾಮರ್ಥ್ಯಮಾತ್ಮನಃ ।
ವಿಶ್ರಾವ್ಯ ಪಲಿತಃ ಪ್ರಾಜ್ಞೋ ಬಿಲಮನ್ಯಜ್ಜಗಾಮ ಹ ॥೧೯೧॥

ತನ್ನ ಬುದ್ಧಿಸಾಮರ್ಥ್ಯವನ್ನು ಶ್ರವಣ ಮಾಡಿಸಿದ, ಶಾಸ್ತ್ರಸಾರವನ್ನು ತಿಳಿದ, ಪ್ರಾಜ್ಞನಾದ ಆ ಪಲಿತನು ಅನಂತರ ಬೇರೆ ಬಿಲಕ್ಕೆ ಹೋಯಿತು.

ಏವಂ ಪ್ರಜ್ಞಾವತಾ ಬುದ್ಧ್ಯಾ ದುರ್ಬಲೇನ ಮಹಾಬಲಾಃ ।
ಏಕೇನ ಬಹವೋಽಮಿತ್ರಾಃ ಪಲಿತೇನಾಭಿಸಂಧಿತಾಃ ॥೧೯೨॥

ದುರ್ಬಲನಾದ, ಆದರೆ ಪ್ರಜ್ಞಾವಂತನಾದ ಏಕಾಕಿಯಾದ ಆ ಪಲಿತನಿಂದ ಮಹಾ ಬಲಶಾಲಿಗಳಾದ ಬಹಳ ಶತ್ರುಗಳು ಹೀಗೆ ವಂಚಿಸಲ್ಪಟ್ಟರು.

ಅರಿಣಾಪಿ ಸಮರ್ಥೇನ ಸಂಧಿಂ ಕುರ್ವೀತ ಪಂಡಿತಃ ।
ಮೂಷಕಶ್ಚ ಬಿಡಾಲಶ್ಚ ಮುಕ್ತಾವನ್ಯೋನ್ಯಸಂಶ್ರಯಾತ್ ॥೧೯೩॥

ಪಂಡಿತನು (ವ್ಯವಹಾರ ಕುಶಲನು) ಸಮರ್ಥನಾದ ಶತ್ರುವಿನ ಜೊತೆಯೂ ಸಂಧಾನ ಮಾಡಿಕೊಳ್ಳಬೇಕು. ಇಲಿ ಮತ್ತು ಬೆಕ್ಕು ಪರಸ್ಪರ ಅವಲಂಬನೆಯಿಂದ ಬಿಡುಗಡೆಯನ್ನು ಹೊಂದಿದರು.

ಇತ್ಯೇಷ ಕ್ಷತ್ರಧರ್ಮಸ್ಯ ಮಯಾ ಮಾರ್ಗೋ೭ನುದರ್ಶಿತಃ ।
ವಿಸ್ತರೇಣ ಮಹೀಪಾಲ ಸಂಕ್ಷೇಪೇಣ ಪುನಃ ಶೃಣು ॥೧೯೪॥

ರಾಜನೇ! ನಾನು ಹೀಗೆ ವಿವರವಾಗಿ ಕ್ಷತ್ರಿಯ ಧರ್ಮದ ಮಾರ್ಗವನ್ನು ತೋರಿಸಿದ್ದೇನೆ. ಮತ್ತೆ ಸಂಕ್ಷೇಪವಾಗಿ ಹೇಳುತ್ತೇನೆ, ಕೇಳು.

ಅನ್ಯೋನ್ಯಂ ಕೃತವಂತೌ ತೌ ಚಕ್ರತುಃ ಪ್ರೀತಿಮುತ್ತಮಾಮ್ ।
ಅನ್ಯೋನ್ಯಮಭಿಸಂಧಾತುಮಭೂಚ್ಚೈವ ತಯೋರ್ಮತಿಃ ॥೧೯೫॥

ಪರಸ್ಪರ ಉಪಕಾರವನ್ನು ಮಾಡಿದ ಅವರು ಪರಸ್ಪರ ಬಹಳ ಪ್ರೀತಿಯನ್ನು ತೋರಿಸಿದರು. ಅವರಿಬ್ಬರಿಗೂ ಪರಸ್ಪರ ವಂಚಿಸುವ ಬುದ್ಧಿಯೇ ಇತ್ತು.

ತತ್ರ ಪ್ರಾಜ್ಞೋ೭ಭಿಸಂಧತ್ತೇ ಸಮ್ಯಗ್‌ಬುದ್ಧಿಬಲಾಶ್ರಯಾತ್ ।
ಅಭಿಸಂಧೀಯತೇ ಪ್ರಾಜ್ಞಃ ಪ್ರಮಾದಾದಪಿ ಚಾಬುಧೈಃ ॥೧೯೬॥

ಅಂತಹ ಸಂದರ್ಭಗಳಲ್ಲಿ ಪ್ರಾಜ್ಞನು ಸರಿಯಾದ ಬುದ್ಧಿ ಬಲದಿಂದ ವಂಚಿಸುತ್ತಾನೆ. ಪ್ರಾಜ್ಞನೂ ಕೂಡ ಪ್ರಮಾದದಿಂದ (ಅಜಾಗರೂಕತೆಯಿಂದ) ಅಜ್ಞಾನಿಗಳಿಂದ ವಂಚನೆಗೆ ಒಳಗಾಗುತ್ತಾನೆ.

ತಸ್ಮಾದಭೀತವದ್ಭೀತೋ ವಿಶ್ವಸ್ತವದವಿಶ್ವಸನ್ ।
ನ ಹ್ಯಪ್ರಮತ್ತಶ್ಚಲತಿ ಚಲಿತೋ ವಾ ವಿನಶ್ಯತಿ ॥೧೯೭॥

ಆದ್ದರಿಂದ ಹೆದರಿದವನು ಹೆದರದವನಂತೆ, ವಿಶ್ವಾಸವಿಲ್ಲದವನು ವಿಶ್ವಾಸವಿರುವವನಂತೆ ಜಾಗರೂಕನಾಗಿ ವ್ಯವಹರಿಸಬೇಕು. ಜಾಗರೂಕನು ದಾರಿತಪ್ಪುವುದಿಲ್ಲ. ಅಜಾಗರೂಕನಾಗಿ ದಾರಿತಪ್ಪಿದರೆ ನಾಶವಾಗುತ್ತಾನೆ.

ಕಾಲೇನ ರಿಪುಣಾ ಸಂಧಿಃ ಕಾಲೇ ಮಿತ್ರೇಣ ವಿಗ್ರಹಃ ।
ಕಾರ್ಯ ಇತ್ಯೇವ ತತ್ತ್ವಜ್ಞಾಃ ಪ್ರಾಹುರ್ನಿತ್ಯಂ ಯುಧಿಷ್ಠಿರ ॥೧೯೮॥

ಯುಧಿಷ್ಠಿರ! ಅವಶ್ಯಕತೆ ಇರುವ ಕಾಲದಲ್ಲಿ (ಕಾಲಾನುಗುಣವಾಗಿ) ಶತ್ರುವಿನ ಜೊತೆ ಸಂಧಿಯನ್ನು ಮಾಡಿಕೊಳ್ಳಬೇಕು. ಕಾಲಾನುಗುಣವಾಗಿ ಮಿತ್ರನ ಜೊತೆ ಜಗಳವನ್ನು ಮಾಡಬೇಕು. ಇದು ಬದಲಾಗದ ಸತ್ಯ. ಹೀಗೆ ತತ್ವವನ್ನು ತಿಳಿದ ಪ್ರಾಜ್ಞರು ಹೇಳುತ್ತಾರೆ.

ಏವಂ ಮತ್ವಾ ಮಹಾರಾಜ ಶಾಸ್ತ್ರಾರ್ಥಮಭಿಗಮ್ಯ ಚ ।
ಅಭಿಯುಕ್ತೋಽಪ್ರಮತ್ತಶ್ಚ ಪ್ರಾಗ್ಭಯಾದ್ ಭೀತವಚ್ಚರೇತ್ ॥೧೯೯॥

ಮಹಾರಾಜ! ಹೀಗೆ ತಿಳಿದು, ಶಾಸ್ತ್ರಾರ್ಥವನ್ನು ವಿಮರ್ಶಿಸಿ, ಉದ್ಯೋಗಶೀಲನಾಗಿ, ಜಾಗರೂಕನಾಗಿ ಭಯದ ಪ್ರಸಂಗವು ಹುಟ್ಟುವ ಮೊದಲೇ ಭೀತನಂತೆ ವರ್ತಿಸಬೇಕು.

ಭೀತವತ್ ಸಂವಿಧಿಃ ಕಾರ್ಯಃ ಪ್ರತಿಸಂಧಿಸ್ತಥೈವ ಚ ।
ಭಯಾದುತ್ಪದ್ಯತೇ ಬುದ್ಧಿರಪ್ರಮತ್ತಾಭಿಯೋಗಜಾ ॥೨೦೦॥

ಹೆದರಿದವನಂತೆ ವ್ಯವಸ್ಥೆಗಳನ್ನು (ಯೋಜನೆಗಳನ್ನು) ಮಾಡಬೇಕು. ಹಾಗೆಯೇ ಕಾರ್ಯಾಚರಣೆಯಿಂದ ವಿರಮಿಸಬೇಕು. ಭಯದಿಂದ ಜಾಗರೂಕತೆ ಇರುವ, ಉದ್ಯೋಗಶೀಲವಾದ ಬುದ್ಧಿಯು ಹುಟ್ಟುತ್ತದೆ.

ನ ಭಯಂ ಜಾಯತೇ ರಾಜನ್ ಭೀತಸ್ಯಾನಾಗತಂ ಭಯಮ್ ।
ಅಭೀತಸ್ಯ ತು ವಿಸ್ರಂಭಾತ್ ಸುಮಹಜ್ಜಾಯತೇ ಭಯಮ್ ॥೨೦೧॥

ರಾಜನೇ! ಹೆದರಿದವನಿಗೆ (ಆದ್ದರಿಂದಲೇ ಜಾಗರೂಕನಾಗಿರುವವನಿಗೆ) ತೊಂದರೆಯಾಗುವುದಿಲ್ಲ. ಅವನಿಗೆ ಭವಿಷ್ಯದಲ್ಲೂ ತೊಂದರೆಯಾಗುವುದಿಲ್ಲ. ಹೆದರಿಕೆ ಇಲ್ಲದವನಿಗೆ (ಅಜಾಗರೂಕನಿಗೆ) ಅಸಮಂಜಸ ಆತ್ಮವಿಶ್ವಾಸದಿಂದ ಬಹಳ ದೊಡ್ಡ ತೊಂದರೆಯೇ ಆಗುತ್ತದೆ.

ನ ಭೀರುರಿತಿ ಚಾತ್ಯಂತಂ ಮಂತ್ರೋ ದೇಯಃ ಕಥಂಚನ ।
ಅವಿಜ್ಞಾನಾದ್ಧಿ ವಿಜ್ಞಾತೇ ಗಚ್ಛೇದಾಸ್ಪದದರ್ಶಿಷು ॥೨೦೨॥

ಯಾರು ಪ್ರಸ್ತುತ ವಿಚಾರಗಳ ಸರಿಯಾದ ಜ್ಞಾನವಿಲ್ಲದಿದ್ದರೂ, ಅಜಾಗರೂಕನಾಗಿ ನಡೆದುಕೊಳ್ಳುವನೋ ಅವನಿಗೆ ಸಲಹೆಗಳನ್ನು ಕೊಡಬಾರದು. ಪ್ರಸ್ತುತ ವಿಚಾರಗಳ ಸರಿಯಾದ ಜ್ಞಾನವಿರುವವನು ಮಾರ್ಗದರ್ಶಕರ ಬಳಿ ತಾನೇ ಹೋಗುತ್ತಾನೆ.

ತಸ್ಮಾದಭೀತವದ್ಭೀತೋ ವಿಶ್ವಸ್ತವದವಿಶ್ವಸನ್ ।
ಕಾರ್ಯಾಣಾಂ ಗುರುತಾಂ ಬುದ್ಧ್ವಾ ನಾನ್ಯತಃ ಕಿಂಚಿದಾಚರೇತ್ ॥

ಆದ್ದರಿಂದ ಕಾರ್ಯಗಳ ತೂಕವನ್ನು ಅರಿತು ಹೆದರಿದವನು ಹೆದರದವನಂತೆ, ನಂಬಿಕೆಯಿಲ್ಲದವನು ನಂಬಿಕೆ ಇರುವವನಂತೆ ವರ್ತಿಸಬೇಕು. ಇದಕ್ಕಿಂತ ಭಿನ್ನವಾಗಿ ಏನನ್ನೂ ಮಾಡಬಾರದು.

ಏವಮೇತನ್ಮಯಾ ಪ್ರೋಕ್ತಮಿತಿಹಾಸಂ ಯುಧಿಷ್ಠಿರ ।
ಶ್ರುತ್ವಾ ತ್ವಂ ಸುಹೃದಾಂ ಮಧ್ಯೇ ಯಥಾವತ್ ಸಮುಪಾಚರ ॥೨೦೪॥

ಯುಧಿಷ್ಠಿರ! ಹೀಗೆ ನಿನಗೆ ಇತಿಹಾಸವನ್ನು ಹೇಳಿದ್ದೇನೆ. ಕೇಳಿರುವ ನೀನು ನಿನ್ನ ಮಿತ್ರರ ಮಧ್ಯೆ ಸರಿಯಾಗಿ ವರ್ತಿಸು.

ಉಪಲಭ್ಯ ಮತಿಂ ಚಾಗ್ರ್ಯಾಮರಿಮಿತ್ರಾಂತರಂ ತಥಾ ।
ಸಂಧಿವಿಗ್ರಹಕಾಲಂ ಚ ಮೋಕ್ಷೋಪಾಯಂ ತಥಾಪದಿ ॥೨೦೫॥

ಸರಿಯಾದ ಮತ್ತು ಸೂಕ್ಷ್ಮವಾದ ಮತಿಯನ್ನು ಸಂಪಾದಿಸಿ ಶತ್ರು ಮತ್ತು ಮಿತ್ರರ ಅಂತರವನ್ನು ಗ್ರಹಿಸಿ, ಸಂಧಾನ ಮತ್ತು ವಿರಸಗಳ ಕಾಲವನ್ನು ಮತ್ತು ಆಪತ್ತಿನಿಂದ ಪಾರಾಗುವ ಉಪಾಯಗಳನ್ನೂ ತಿಳಿದುಕೊ.

ಶತ್ರುಸಾಧಾರಣೇ ಕೃತ್ಯೇ ಕೃತ್ವಾ ಸಂಧಿಂ ಬಲೀಯಸಾ ।
ಸಮಾಗಮಂ ಚರೇದ್ ಯುಕ್ತ್ಯಾ ಕೃತಾರ್ಥೋ ನ ಚ ವಿಶ್ವಸೇತ್ ॥೨೦೬॥

ತನಗೂ ಮತ್ತು ಶತ್ರುವಿಗೂ ಆಗಬೇಕಾದಾಗ ಕೆಲಸವಿದ್ದಾಗ ಬಲಶಾಲಿಯಾದ ಶತ್ರುವಿನ ಜೊತೆ ಸಂಧಾನವನ್ನು ಮಾಡಿಕೊಂಡು ಯುಕ್ತಿಯಿಂದ ಸಹಕಾರವನ್ನು ಮಾಡಬೇಕು. ಕೆಲಸವಾದನಂತರ ವಿಶ್ವಾಸವಿಡಬಾರದು.

ಅವಿರುದ್ಧಾಂ ತ್ರಿವರ್ಗೇಣ ನೀತಿಮೇತಾಂ ಯುಧಿಷ್ಠಿರ ।
ಅಭ್ಯುತ್ತಿಷ್ಠ ಶ್ರುತಾದಸ್ಮಾದ್ ಭೂಯಸ್ತ್ವಂ ರಂಜಯನ್ ಪ್ರಜಾಃ ॥೨೦೭॥

ಯುಧಿಷ್ಠಿರ! ತ್ರಿವರ್ಗ (ಧರ್ಮ-ಅರ್ಥ-ಕಾಮ) ವಿರುದ್ಧವಲ್ಲದ ಈ ನೀತಿಯನ್ನು ನೀನು ಆಶ್ರಯಿಸು. ನಮ್ಮಿಂದ ಕಲಿತ ಈ ನೀತಿಯಿಂದ ಪ್ರಜಾರಂಜನೆಯನ್ನು ಮಾಡುತ್ತಾ ಅಭ್ಯುದಯವನ್ನು ಹೊಂದು.

ಬ್ರಾಹ್ಮಣೈಶ್ಚಾಪಿ ತೇ ಸಾರ್ಧಂ ಯಾತ್ರಾ ಭವತು ಪಾಂಡವ ।
ಬ್ರಾಹ್ಮಣಾ ಹಿ ಪರಂ ಶ್ರೇಯೋ ದಿವಿ ಚೇಹ ಚ ಭಾರತ ॥೨೦೮॥

ಪಾಂಡುಪುತ್ರ! ಬ್ರಹ್ಮಜ್ಞಾನಿಗಳೊಂದಿಗೆ ನೀನು ಸಾಗಬೇಕು. ಭಾರತ! ಬ್ರಹ್ಮಜ್ಞಾನಿಗಳು ಇಹದಲ್ಲೂ, ಪರದಲ್ಲೂ ಶ್ರೇಯಸ್ಸಿಗೆ ಕಾರಣರು.

ಏತೇ ಧರ್ಮಸ್ಯ ವೇತ್ತಾರಃ ಕೃತಜ್ಞಾಃ ಸತತಂ ಪ್ರಭೋ ।
ಪೂಜಿತಾಃ ಶುಭಕರ್ಮಾಣಃ ಪೂಜಯೇತ್ ತಾನ್ ನರಾಧಿಪ ॥೨೦೯॥

ಪ್ರಭು! ಇವರು ಧರ್ಮವನ್ನು ತಿಳಿದವರು. ಸದಾ ಕೃತಜ್ಞರು. ಪೂಜಿತರು. ಶುಭ ಕರ್ಮಗಳನ್ನು ಮಾಡುವವರು. ರಾಜನೇ! ಅವರನ್ನು ಗೌರವಿಸಬೇಕು.

ರಾಜ್ಯಂ ಶ್ರೇಯಃ ಪರಂ ರಾಜನ್ ಯಶಃ ಕೀರ್ತಿಂ ಚ ಲಪ್ಸ್ಯಸೇ ।
ಕುಲಸ್ಯ ಸಂತತಿಂ ಚೈವ ಯಥಾನ್ಯಾಯಂ ಯಥಾಕ್ರಮಮ್ ॥೨೧೦॥

ರಾಜನೇ! ನ್ಯಾಯಕ್ಕನುಗುಣವಾಗಿ, ಕ್ರಮವಾಗಿ ರಾಜ್ಯವನ್ನೂ, ಪರಮ ಶ್ರೇಯಸ್ಸನ್ನೂ, ಯಶಸ್ಸನ್ನೂ, ಕೀರ್ತಿಯನ್ನೂ ಕುಲಕ್ಕೆ ಅವಿಚ್ಛೇದವನ್ನೂ ಪಡೆಯುವಿ.

ದ್ವಯೋರಿಮಂ ಭಾರತ ಸಂಧಿವಿಗ್ರಹಂ
ಸುಭಾಷಿತಂ ಬುದ್ಧಿವಿಶೇಷಕಾರಿತಮ್ ।
ತಥಾನ್ವವೇಕ್ಷ್ಯ ಕ್ಷಿತಿಪೇನ ಸರ್ವದಾ
ನಿಷೇವಿತವ್ಯಂ ನೃಪ ಶತ್ರುಮಂಡಲೇ ॥೨೧೧॥

ಭರತಕುಲಸಂಜಾತ! ಬೆಕ್ಕು-ಇಲಿಗಳೆರಡರ ಈ ಸಂಧಿ-ವಿಗ್ರಹದ ಕಥೆಯು ವಿಶೇಷವಾದ ಪ್ರಜ್ಞೆಯನ್ನು ಉಂಟುಮಾಡುವ ಸುಭಾಷಿತ. ರಾಜನೇ! ಈ ಕಥೆಯ ಬೋಧನೆಗೆ (ಸಂದೇಶಕ್ಕೆ) ಅನುಗುಣವಾಗಿ ಸರಿಯಾದ ಪರಿಶೀಲನೆಯಿಂದ ರಾಜನು ತನ್ನ ಶತ್ರುಗಳೊಡನೆ ವ್ಯವಹರಿಸಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಎಂಟನೆಯ ಅಧ್ಯಾಯವು ಮುಗಿಯಿತು.

★ ★ ★ ★ ★

ಒಂಭತ್ತನೆಯ ಅಧ್ಯಾಯ

ಅವಿಶ್ವಾಸದಿಂದ ಉದ್ಭವಿಸುವ ಸಮಸ್ಯೆಗಳು. ಪೂಜನೀ-ಬ್ರಹ್ಮದತ್ತ ಸಂವಾದ. ಸ್ವಹಿತವೇ ಮುಖ್ಯ-ಒಳ್ಳೆಯ ರಾಜನ ರೀತಿ. ಕೆಟ್ಟರಾಜನ ರೀತಿ.

ಯುಧಿಷ್ಠಿರಃ

ಉಕ್ತೋ ಮಂತ್ರೋ ಮಹಾಬಾಹೋ ನ ವಿಶ್ವಾಸೋಽಸ್ತಿ ಶತ್ರುಷು ।
ಕಥಂ ಹಿ ರಾಜಾ ವರ್ತೇತ ಯದಿ ಸರ್ವತ್ರ ನಾಶ್ವಸೇತ್ ॥೧॥

ವಿಶ್ವಾಸಾದ್ಧಿ ಪರಂ ರಾಜ್ಞೋ ರಾಜನ್ನುತ್ಪದ್ಯತೇ ಭಯಮ್ ।
ಕಥಂ ವೈ ನಾಶ್ವಸನ್ ರಾಜಾ ಶತ್ರೂನ್ ಜಯತಿ ಪಾರ್ಥಿವ ॥೨॥

ಏತನ್ಮೇ ಸಂಶಯಂ ಛಿಂಧಿ ಮನೋ ಮೇ ಸಂಪ್ರಮುಹ್ಯತಿ ।
ಅವಿಶ್ವಾಸಕಥಾಮೇತಾಮುಪಶ್ರುತ್ಯ ಪಿತಾಮಹ ॥೩॥

ಮಹಾಬಾಹು ಭೀಷ್ಮರೇ! ಶತ್ರುಗಳಲ್ಲಿ ವಿಶ್ವಾಸವಿರುವುದಿಲ್ಲ ಎಂಬ ರಹಸ್ಯವನ್ನು ಹೇಳಿದ್ದೀರಿ. ಯಾರಲ್ಲೂ ವಿಶ್ವಾಸವಿಡದಿದ್ದರೆ ರಾಜನು ಹೇಗೆ ತನ್ನ ಕೆಲಸಗಳನ್ನು ಮಾಡಿಯಾನು?

'ರಾಜನೆ! ವಿಶ್ವಾಸವಿಡುವುದರಿಂದ ರಾಜನಿಗೆ ಆತಂಕಸ್ಥಿತಿಯೇ ಉಂಟಾಗುತ್ತದೆ' ಎಂದು ಹೇಳಿದ್ದೀರಿ. ವಿಶ್ವಾಸವಿಡದೆ ರಾಜನು ಹೇಗೆ ತಾನೆ ಶತ್ರುಗಳನ್ನು ಗೆಲ್ಲುತ್ತಾನೆ?

ಪಿತಾಮಹ! ನನ್ನ ಈ ಸಂಶಯವನ್ನು ಪರಿಹರಿಸಿ. ನೀವು ಹೇಳಿದ ಅವಿಶ್ವಾಸದ ಅವಶ್ಯಕತೆಯನ್ನು ಕೇಳಿ ನನ್ನ ಮನಸ್ಸು ಬಹಳ ಮೋಹಕ್ಕೆ ಒಳಗಾಗಿದೆ.

ಭೀಷ್ಮಃ

ಶೃಣು ಕೌಂತೇಯ ಯೋ ವೃತ್ತೋ ಬ್ರಹ್ಮದತ್ತನಿವೇಶನೇ ।
ಪೂಜನ್ಯಾ ಸಹ ಸಂವಾದೋ ಬ್ರಹ್ಮದತ್ತಸ್ಯ ಪಾರ್ಥಿವ ॥೪॥

ಕುಂತೀಪುತ್ರ! ಬ್ರಹ್ಮದತ್ತನ ಮನೆಯಲ್ಲಿ ನಡೆದ ಬ್ರಹ್ಮದತ್ತ ಮತ್ತು ಪೂಜನೀ ಇವರ ಸಂವಾದವನ್ನು ಹೇಳುತ್ತೇನೆ, ಕೇಳು.

ಕಾಂಪಿಲ್ಯೇ ಬ್ರಹ್ಮದತ್ತಸ್ಯ ಅಂತಃಪುರನಿವಾಸಿನೀ ।
ಪೂಜನೀ ನಾಮ ಶಕುನೀ ದೀರ್ಘಕಾಲಂ ಸಹೋಷಿತಾ ॥೫॥

ಕಾಂಪಿಲ್ಯ ಎಂಬ ನಗರದಲ್ಲಿ ಬ್ರಹ್ಮದತ್ತನ ಅಂತಃಪುರದಲ್ಲಿ ಪೂಜನಿ ಎಬ ಹಕ್ಕಿಯು (ಗುಬ್ಬಚ್ಚಿ) ವಾಸಿಸುತ್ತಿತ್ತು.

ರುತಜ್ಞಾ ಸರ್ವಭೂತಾನಾಂ ಯಥಾ ವೈ ಜೀವಜೀವಕಃ ।
ಸರ್ವಜ್ಞಾ ಸರ್ವಧರ್ಮಜ್ಞಾ ತಿರ್ಯಗ್ಯೋನಿಗತಾಪಿ ಸಾ ॥೬॥

ಈ ಹಕ್ಕಿಯು ಚಕೋರಹಕ್ಕಿಯಂತೆ ಎಲ್ಲ ಪ್ರಾಣಿಗಳ ಧ್ವನಿಗಳ ಅರ್ಥವನ್ನು ತಿಳಿದಿತ್ತು. ಸಾಮಾನ್ಯ ಪಶುಜಾತಿಯಲ್ಲಿ ಹುಟ್ಟಿದ್ದರೂ ಆ ಹಕ್ಕಿಯು ಎಲ್ಲ ವಿಷಯಗಳನ್ನೂ ತಿಳಿದಿತ್ತು. ಸರ್ವಧರ್ಮಗಳನ್ನೂ ತಿಳಿದಿತ್ತು.

ಅಭಿಪ್ರಜಾತಾ ಸಾ ತತ್ರ ಪುತ್ರಮೇಕಂ ಸುವರ್ಚಸಮ್ ।
ಸಮಕಾಲಂ ಚ ರಾಜ್ಞೋಽಪಿ ದೇವ್ಯಾಃ ಪುತ್ರೋ ವ್ಯಜಾಯತ ॥೭॥

ಆ ಹಕ್ಕಿಯು ರಾಜನ ಅಂತಃಪುರದಲ್ಲೇ ಬಹಳ ತೇಜಸ್ವಿಯಾದ ಹಕ್ಕಿಗೆ ಜನ್ಮ ನೀಡಿತು. ಅದೇ ಸಮಯದಲ್ಲಿ ಮಹಾರಾಣಿಗೆ ಮಗನ ಜನ್ಮವಾಯಿತು.

ಸಮುದ್ರತೀರಂ ಗತ್ವಾ ಸಾ ತ್ವಾಜಹಾರ ಫಲದ್ವಯಮ್ ।
ಪುಷ್ಟ್ಯರ್ಥಂ ಚ ಸ್ವಪುತ್ರಸ್ಯ ರಾಜಪುತ್ರಸ್ಯ ಚೈವ ಹ ॥೮॥

ಆ ಹಕ್ಕಿಯು ತನ್ನ ಪುತ್ರನ ಮತ್ತು ರಾಜಕುಮಾರನ ಪೋಷಣೆಗಾಗಿ ಸಮುದ್ರ ತೀರಕ್ಕೆ ಹೋಗಿ ಎರಡು ಫಲಗಳನ್ನು ತರುತ್ತಿತ್ತು.

ಫಲಮೇಕಂ ಸುತಾಯಾದಾದ್ರಾಜಪುತ್ರಾಯ ಚಾಪರಮ್ ।
ಅಮೃತಾಸ್ವಾದಸದೃಶಂ ಬಲತೇಜೋವಿವರ್ಧನಮ್ ॥೯॥

ಒಂದು ಫಲವನ್ನು ತನ್ನ ಮಗನಿಗೂ, ಇನ್ನೊಂದನ್ನು ರಾಜಕುಮಾರನಿಗೂ ಕೊಡುತ್ತಿತ್ತು. ಫಲವು ಅಮೃತಕ್ಕೆ ಸಮಾನ. ಬ್ರಹ್ಮತೇಜಸ್ಸಿನ ವೃದ್ಧಿಕರ.

ತತ್ಪ್ರಾಗಚ್ಛತ್ ಪರಾಂ ವೃದ್ಧಿ ರಾಜಪುತ್ರಃ ಫಲಾಶನಾತ್ ।
ಧಾತ್ರ್ಯಾ ಹಸ್ತಗತಶ್ಚಾಪಿ ತೇನಾಕ್ರೀಡತ ಪಕ್ಷಿಣಾ ॥೧೦॥

ರಾಜಕುಮಾರನು ಫಲದ ಸೇವನೆಯಿಂದ ಬಹಳ ಒಳ್ಳೆಯ ವೃದ್ಧಿಯನ್ನು ಹೊಂದಿದನು. ದಾದಿಯ ಕೈಯಲ್ಲಿದ್ದರೂ ಆ ಹುಡುಗನು ಆ ಪಕ್ಷಿಯ ಜೊತೆ ಆಡುತ್ತಿದ್ದನು.

ಶೂನ್ಯೇ ತು ತಮುಪಾದಾಯ ಪಕ್ಷಿಣಂ ಸಮಜಾತಕಮ್ ।
ಹತ್ವಾ ತತಃ ಸ ರಾಜೇಂದ್ರ ಧಾತ್ರ್ಯಾ ಹಸ್ತಮುಪಾಗಮತ್ ॥೧೧॥

ರಾಜಕುಮಾರನು ತನ್ನ ಜೊತೆಯೇ ಹುಟ್ಟಿದ್ದ ಆ ಹಕ್ಕಿಯನ್ನು ನಿರ್ಜನ ಸ್ಥಳಕ್ಕೆ ಒಯ್ದು ಕೊಂದುಬಿಟ್ಟನು. ಅನಂತರ ದಾದಿಯ ಕೈ ಸೇರಿದನು.

ಅಥ ಸಾ ಶಕುನೀ ರಾಜನ್ನಾಗಮತ್ ಫಲಹಾರಿಕಾ ।
ಅಪಶ್ಯನ್ನಿಹತಂ ಪುತ್ರಂ ತೇನ ಬಾಲೇನ ಭೂತಲೇ ॥೧೨॥

ಬಾಷ್ಪಪೂರ್ಣಮುಖೀ ದೀನಾ ದೃಷ್ಟ್ವಾ ಸಾ ತು ಹತಂ ಸುತಮ್ ।
ಪೂಜನೀ ದುಃಖಿಸಂತಪ್ತಾ ರುದತೀ ವಾಕ್ಯಮಬ್ರವೀತ್ ॥೧೩॥

ರಾಜನೆ! ಆ ಹಕ್ಕಿಯು ಎಂದಿನಂತೆ ಫಲವನ್ನು ತಂದಿತು. ಆ ಹುಡುಗನಿಂದ ಹತವಾಗಿ ಬಿದ್ದಿರುವ ತನ್ನ ಮಗನನ್ನು ನೋಡಿತು. ಸತ್ತು ಬಿದ್ದಿರುವ ಮಗನನ್ನು ನೋಡಿ ದುಃಖಸಂತಪ್ತಳಾದ, ಅಶ್ರುಧಾರೆಯನ್ನು ಹರಿಸುತ್ತಿರುವ ಆ ಪೂಜನಿಯು ಅಳುತ್ತಾ ಹೇಳಿತು.

ಕ್ಷತ್ರಿಯೇ ಸಂಗತಂ ನಾಸ್ತಿ ನ ಪ್ರೀತಿರ್ನ ಚ ಸೌಹೃದಮ್ ।
ಕಾರಣೇ ಸಂಭಜಂತೀಹ ಕೃತಾರ್ಥಾಃ ಸಂತ್ಯಜಂತಿ ಚ ॥೧೪॥

ಕ್ಷತ್ರಿಯರಿಗೆ ಹೊಂದಾಣಿಕೆಯಿಲ್ಲ, ಪ್ರೀತಿ ಇಲ್ಲ, ಸೌಹಾರ್ದವಿಲ್ಲ. ತಮಗೆ ಪ್ರಯೋಜನವಾಗುವುದಿದ್ದರೆ ಸೇರುತ್ತಾರೆ, ಕೆಲಸ ಮಾಡುತ್ತಾರೆ. ತಮ್ಮ ಕೆಲಸವಾದ ಮೇಲೆ ತ್ಯಜಿಸುತ್ತಾರೆ.

ಕ್ಷತ್ರಿಯೇಷು ನ ವಿಶ್ವಾಸಃ ಕಾರ್ಯಃ ಸರ್ವೋಪಘಾತಿಷು ।
ಅಪಕೃತ್ಯಾಪಿ ಸತತಂ ಸಾಂತ್ವಯಂತಿ ನಿರರ್ಥಕಮ್ ॥೧೫॥

ಸರ್ವರಿಗೂ ಹಾನಿಮಾಡುವ ಕ್ಷತ್ರಿಯರ ಮೇಲೆ ವಿಶ್ವಾಸವಿಡಬಾರದು. ಪದೇ ಪದೇ ಅಪಕಾರ ಮಾಡುತ್ತಾರೆ. ಅರ್ಥಹೀನವಾಗಿ ಸಮಾಧಾನದ ಮಾತುಗಳನ್ನು ಹೇಳುತ್ತಾರೆ.

ಅಹಮಸ್ಯ ಕರೋಮ್ಯದ್ಯ ಸದೃಶೀಂ ವೈರಯಾತನಾಮ್ ।
ಕೃತಘ್ನಸ್ಯ ನೃಶಂಸಸ್ಯ ಭೃಶಂ ವಿಶ್ವಾಸಘಾತಿನಃ ॥೧೬॥

ನಾನು ಕೃತಘ್ನನೂ, ಕ್ರೂರನೂ, ವಿಶ್ವಾಸಘಾತಕನೂ ಆದ ಇವನಿಗೆ ಅವನ ಪಾಪಕೃತ್ಯಕ್ಕೆ ಸದೃಶವಾದ ಯಾತನೆಯನ್ನು ಉಂಟುಮಾಡುತ್ತೇನೆ.

ಸಹಸಂಜಾತವೃದ್ಧಸ್ಯ ತಥೈವ ಸಹಭೋಜಿನಃ ।
ಶರಣಾಗತಸ್ಯ ಚ ವಧಸ್ತ್ರಿವಿಧಂ ಹ್ಯಸ್ಯ ಕಿಲ್ಬಿಷಮ್ ॥೧೭॥

ಈ ರಾಜಕುಮಾರನು ಮೂರು ವಿಧ ಪಾಪಗಳನ್ನು ಮಾಡಿದ್ದಾನೆ. (೧) ಜೊತೆಯಲ್ಲೇ ಹುಟ್ಟಿ ಬೆಳೆದವನ ವಧೆ. (೨) ಜೊತೆಯಲ್ಲಿ ಆಹಾರವನ್ನು ಸೇವಿಸುತ್ತಿದ್ದವನ ವಧೆ. (೩) ಶರಣಾಗತನ ವಧೆ.

ಇತ್ಯುಕ್ತ್ವಾ ಚರಣಾಭ್ಯಾಂ ತು ನೇತ್ರೇ ನೃಪಸುತಸ್ಯ ಸಾ ।
ಭಿತ್ತ್ವಾ ಸ್ವಸ್ಥಾ ತತ ಇದಂ ಪೂಜನೀ ವಾಕ್ಯಮಬ್ರವೀತ್ ॥೧೮॥

ಹೀಗೆ ಹೇಳಿಕೊಂಡ ಪೂಜನಿಯು ತನ್ನ ಕಾಲುಗಳಿಂದ ಆ ರಾಜಕುಮಾರನ ಕಣ್ಣುಗಳನ್ನು ಭೇದಿಸಿತು. ಅನಂತರ ಸ್ವಸ್ಥಳಾಗಿ ಹೇಳಿತು.

ಇಚ್ಛಯೇಹ ಕೃತಂ ಪಾಪಮ್ ಇಚ್ಛಯ್ಯೈವೋಪಸರ್ಪತಿ ।
ಕೃತಪ್ರತಿಕೃತಂ ತೇಷಾಂ ನ ನಶ್ಯತಿ ಶುಭಾಶುಭಮ್ ॥೧೯॥

ಇಚ್ಛೆಯಿಂದ ಪಾಪ ಮಾಡಿದವರಿಗೆ ಅದರ ಫಲವು ಕೂಡಲೇ ಲಭಿಸುತ್ತದೆ. ಇತರರು ಮಾಡಿದ ಪುಣ್ಯ ಅಥವಾ ಪಾಪಕೃತ್ಯಕ್ಕೆ ಪ್ರತಿಯಾಗಿ ಮಾಡಲ್ಪಟ್ಟ ಶುಭ-ಅಶುಭಗಳು ನಾಶವಾಗುವುದಿಲ್ಲ= ಮನಸ್ಸಿನಿಂದ ಮರೆಯಾಗುವುದಿಲ್ಲ. ಉಪಕೃತರು ಅಥವಾ ಅಪಕೃತರು ಉಪಕಾರವನ್ನು ಅಥವಾ ಅಪಕಾರವನ್ನು ಮರೆಯುವುದಿಲ್ಲ.

ಪಾಪಕರ್ಮಕೃತಂ ಕಿಂಚಿನ್ನ ತಸ್ಮಿನ್ ಯದಿ ವಿದ್ಯತೇ ।
ನಿಪಾತ್ಯತೇಽಸ್ಯ ಪುತ್ರೇಷು ನ ಚೇತ್ ಪೌತ್ರೇಷು ನಪ್ತೃಷು ॥೨೦॥

ಪಾಪ ಮಾಡಿದವನಿಗೆ ಅದರ ಫಲವು ಉಂಟಾಗದಿದ್ದರೆ, ಅವನ ಮಕ್ಕಳಿಗೆ, ಮೊಮ್ಮಕ್ಕಳಿಗೆ, ಮರಿಮಕ್ಕಳಿಗೆ ಅದರ ಪರಿಣಾಮವು ಉಂಟಾಗುತ್ತದೆ.

ಬ್ರಹ್ಮದತ್ತಃ ಸುತಂ ದೃಷ್ಟ್ವಾ ಪೂಜನ್ಯಾ ಹೃತಲೋಚನಮ್ ।
ಕೃತಪ್ರತಿಕೃತಂ ಮತ್ವಾ ಪೂಜನೀಮಿದಮಬ್ರವೀತ್ ॥೨೧॥

ಬ್ರಹ್ಮದತ್ತನು ಪೂಜನಿಯಿಂದ ಕಿತ್ತಲ್ಪಟ್ಟ ಕಣ್ಣುಳ್ಳ ಮಗನನ್ನು ನೋಡಿ, ಅಪಕಾರಕ್ಕೆ ಪ್ರತೀಕಾರ ಎಂದು ಭಾವಿಸಿ ಪೂಜನಿಗೆ ಹೇಳಿದನು.

ಬ್ರಹ್ಮದತ್ತಃ

ಅಸ್ತಿ ವೈ ಕೃತಮಸ್ಮಾಭಿರಸ್ತಿ ಪ್ರತಿಕೃತಂ ತ್ವಯಾ ।
ಉಭಯಂ ತತ್ ಸಮೀಭೂತಂ ವಸ ಪೂಜನಿ ಮಾ ಗಮಃ ॥೨೨॥

ನಾವು ಅಪಕಾರ ಮಾಡಿದ್ದೆವು. ನೀನು ಪ್ರತೀಕಾರವನ್ನು ಮಾಡಿರುವಿ. ಅವೆರಡು ಸಮವಾದವು. (ಒಂದರಿಂದ ಇನ್ನೊಂದು ರದ್ದಾಯಿತು). ಪೂಜನಿ! ಇಲ್ಲೇ ವಾಸಿಸು. ಹೋಗಬೇಡ.

ಪೂಜನೀ

ಸಕೃತ್ ಕೃತಾಪರಾಧಸ್ಯ ತತ್ರೈವ ಪರಿಲಂಬತಃ ।
ನ ತದ್ ಬುಧಾಃ ಪ್ರಶಂಸಂತಿ ಶ್ರೇಯಸ್ತತ್ರಾಪಸರ್ಪಣಮ್ ॥೨೩॥

ಒಮ್ಮೆ ಅಪಕಾರಕ್ಕೆ ಒಳಗಾದವನು ಅಲ್ಲಿಗೆ ಜೋತು ಬೀಳುವುದನ್ನು ಪ್ರಾಜ್ಞರು ಮೆಚ್ಚುವುದಿಲ್ಲ. ಅಲ್ಲಿಂದ ಹೊರಟು ಹೋಗುವುದೇ ಒಳ್ಳೆಯದು.

ಸಾಂತ್ವೇ ಪ್ರಯುಕ್ತೇ ನೃಪತೇ ಕೃತವೈರೇ ನ ವಿಶ್ವಸೇತ್ ।
ಕ್ಷಿಪ್ರಂ ಪ್ರಬಧ್ಯತೇ ಮೂಢೋ ನ ಹಿ ವೈರಂ ಪ್ರಶಾಮ್ಯತಿ ॥೨೪॥

ರಾಜನೇ! ವೈರವನ್ನು ತೋರಿಸಿದವನ ಮೇಲೆ ಸಮಾಧಾನ ಪಡಿಸುವ ಮಾತುಗಳನ್ನಾಡಿದಾಗ, ಅವನನ್ನು= ಸಮಾಧಾನ ಹೇಳಿದವನನ್ನು ನಂಬಬಾರದು. ನಂಬುವವನು ಮೂಢ. ಅವನು ಪುನಃ ಬೇಗನೇ ಬಂಧನಕ್ಕೋ, ಹತ್ಯೆಗೋ ಒಳಗಾಗುತ್ತಾನೆ. ವೈರವು ಎಂದೂ ಶಮನವಾಗುವುದಿಲ್ಲ.

ಅನ್ಯೋನ್ಯಂ ಕೃತವೈರಾಣಾಂ ಪುತ್ರಪೌತ್ರಂ ನಿಗಚ್ಛತಿ ।
ಪುತ್ರೇ ಪೌತ್ರೇ ವಿನಿರ್ಮಾಯ ಪರಲೋಕಂ ನಿಗಚ್ಛತಿ ॥೨೫॥

ಪರಸ್ಪರ ವೈರವನ್ನು ಸಾಧಿಸುವವರ ಮಕ್ಕಳು- ಮೊಮ್ಮಕ್ಕಳು ನಾಶವಾಗುತ್ತಾರೆ. ಮಕ್ಕಳು, ಮೊಮ್ಮಕ್ಕಳು ನಾಶವಾದರೆ ಪರಲೋಕವು ನಾಶವಾಗುತ್ತದೆ (ಸದ್ಗತಿಯು ಆಗುವುದಿಲ್ಲ).

ಸರ್ವೇಷಾಂ ಕೃತವೈರಾಣಾಮವಿಶ್ವಾಸಃ ಸುಖಾವಹಃ ।
ಏಕಾಂತತೋ ನ ವಿಶ್ವಾಸಃ ಕಾರ್ಯೋ ವಿಶ್ವಾಸಘಾತಕಃ ॥೨೬॥

ವೈರಕ್ಕೆ ಒಳಗಾದವರು ವೈರವನ್ನು ತೋರಿಸಿದವನನ್ನು ನಂಬಬಾರದು. ಅವಿಶ್ವಾಸವೇ ಸುಖಕರ. ವಿಶ್ವಾಸಘಾತಕರ ಮೇಲೆ ಪೂರ್ಣವಿಶ್ವಾಸವನ್ನು ಇಡಲೇಬಾರದು.

ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇಽಪಿ ನ ವಿಶ್ವಸೇತ್ ।
ಕಾಮಂ ವಿಶ್ವಾಸಯೇದನ್ಯಾನ್ ಪರೇಷಾಂ ತು ನ ವಿಶ್ವಸೇತ್ ॥೨೭॥

ವಿಶ್ವಾಸವಿಲ್ಲದವನ ಮೇಲೆ ವಿಶ್ವಾಸವಿಡಬಾರದು. ವಿಶ್ವಾಸವಿರುವವನನ್ನೂ (ಪೂರ್ಣವಾಗಿ) ನಂಬಬಾರದು. ಬೇರೆಯವರು ತನ್ನನ್ನು ನಂಬುವಂತೆ ಮಾಡಬೇಕು. ತಾನು ಬೇರೆಯವರನ್ನು ನಂಬಬಾರದು.

ಮಾತಾ ಪಿತಾ ಬಾಂಧವಾನಾಂ ವರಿಷ್ಠೌ
ಭಾರ್ಯಾ ಜರಾ ಬೀಜಮಾತ್ರಂ ತು ಪುತ್ರಃ ।
ಭ್ರಾತಾ ಶತ್ರುಃ ಕ್ಲಿನ್ನಪಾಣಿರ್ವಯಸ್ಯ
ಆತ್ಮಾ ಹ್ಯೇಕಃ ಸುಖದುಃಖಸ್ಯ ವೇತ್ತಾ ॥೨೮॥

ಬಂಧುವರ್ಗದಲ್ಲಿ ತಂದೆ-ತಾಯಿಯರು ವರಿಷ್ಠರು, ಹೆಂಡತಿಯು ಶರೀರವನ್ನು ಮುಪ್ಪಾಗಿಸುವವಳು. ಮಗನು ಕೇವಲ ಸಂತತಿಯನ್ನು ಮುಂದುವರಿಸುವ ಬೀಜ. ಸೋದರನು ಶತ್ರುವೇ. ಮಿತ್ರನು ಯಾವಾಗಲೂ ಸತ್ಕಾರ ಉಪಕಾರಗಳನ್ನು ಬಯಸುವವನು. ಸುಖ-ದುಃಖಗಳನ್ನು ಅನುಭವಿಸುವವನು ತಾನೊಬ್ಬನೇ.

ಅನ್ಯೋನ್ಯಕೃತವೈರಾಣಾಂ ನ ಸಂಧಿರುಪಪದ್ಯತೇ ।
ಸ ಚ ಹೇತುರತಿಕ್ರಾಂತೋ ಯದರ್ಥಮಹಮಾವಸಮ್ ॥೨೯॥

ಪರಸ್ಪರ ವೈರವನ್ನು ಸಾಧಿಸಿದವರ ನಡುವೆ ಸಂಧಾನವು ಸರಿಯಲ್ಲ. ನಾನು ಇಲ್ಲಿ ಯಾವ ಕಾರಣದಿಂದ ವಾಸ ಮಾಡುತ್ತಿದ್ದೆನೋ ಆ ಕಾರಣವು ಈಗ ಇಲ್ಲ.

ಪೂಜಿತಸ್ಯಾರ್ಥಮಾನಾಭ್ಯಾಂ ಜಂತೋಃ ಪೂರ್ವಾಪಕಾರಿಣಃ ।
ಹೃದಯಂ ತವ ವಿಶ್ವಸ್ತಂ ಕರ್ಮ ತ್ರಾಸಯತೇ ಬಲಾತ್ ॥೩೦॥

ಅರ್ಥ (ಹಕ್ಕಿಯು ಕೊಡುತ್ತಿದ್ದ ಹಣ್ಣು) ಮತ್ತು ಮಾನ (ಹಕ್ಕಿಯು ರಾಜನಿಗೆ ತೋರಿಸಿದ ಪ್ರೀತಿ) ಗಳಿಂದ ಆದರಿಸಲ್ಪಟ್ಟ, ಆದರೂ ಮೊದಲು ಅಪಕಾರ ಮಾಡಿದ ಪ್ರಾಣಿಯಾದ ನಿನ್ನಲ್ಲೇ ವಿಶ್ವಾಸವಿದ್ದೀತು. ಆದರೆ ನಾನು ಮಾಡಿದ ಕರ್ಮವು (ನಿನ್ನ ಪುತ್ರನ ಕಣ್ಣಿನ ನಾಶವು) ನನಗೆ ಭಯವುಂಟು ಮಾಡುತ್ತಿದೆ.

ಪೂರ್ವಂ ಸಮ್ಮಾನನಾ ಯತ್ರ ಪಶ್ಚಾಚ್ಚೈವ ವಿಮಾನನಾ ।
ಜಹ್ಯಾತ್ತಂ ಸತ್ತ್ವವಾನ್ ವಾಸಂ ಸಮ್ಮಾನಿತವಿಮಾನಿತಃ ॥೩೧॥

ಎಲ್ಲಿ ಮೊದಲು ಸತ್ಕಾರ, ಅನಂತರ ಅಪಕಾರಗಳು ಆಗುತ್ತವೋ ಆ ಸ್ಥಳವನ್ನು ಮಾನ-ಅಪಮಾನಗಳಿಗೆ ಒಳಗಾದ, ಪ್ರಶಸ್ತ ಮನಸ್ಸಿನ ವ್ಯಕ್ತಿಯು ತ್ಯಜಿಸಬೇಕು.

ಉಷಿತಾಸ್ಮಿ ತವಾಗಾರೇ ದೀರ್ಘಕಾಲಮಹಿಂಸಿತಾ ।
ತದಿದಂ ವೈರಮುತ್ಪನ್ನಂ ಸುಖಮಾಸ್ಸ್ವ ವ್ರಜಾಮ್ಯಹಮ್ ॥೩೨॥

ನಿನ್ನ ಮನೆಯಲ್ಲಿ ಏನೂ ತೊಂದರೆಯಿಲ್ಲದೆ ದೀರ್ಘಕಾಲ ವಾಸಿಸಿದ್ದೇನೆ. ಈಗ ವೈರವು ಹುಟ್ಟಿದೆ. ನಾನು ಹೋಗುತ್ತೇನೆ. ಸುಖವಾಗಿರು.

ಬ್ರಹ್ಮದತ್ತಃ

ಯತ್ಕೃತೇ ಪ್ರತಿಕುರ್ಯಾದ್ವೈ ನ ಸ ತತ್ಕಾಪರಾಧ್ನುಯಾತ್ ।
ಅನೃಣಸ್ತೇನ ಭವತಿ ವಸ ಪೂಜನಿ ಮಾ ಗಮಃ ॥೩೩॥

ಅಪಕಾರಕ್ಕೆ ಪ್ರತೀಕಾರ ಮಾಡುವವನು ಅಪರಾಧಿಯಲ್ಲ. ಪ್ರತೀಕಾರದಿಂದ ಮೊದಲು ಅಪಕಾರ ಮಾಡಿದವನು ಋಣಮುಕ್ತನಾಗುತ್ತಾನೆ. ಪೂಜನಿ! ಇಲ್ಲೇ ವಾಸಿಸು. ಹೋಗಬೇಡ.

ಪೂಜನೀ

ನ ಕೃತಸ್ಯ ನ ಕರ್ತುಶ್ಚ ಸಖ್ಯಂ ಸಂಧೀಯತೇ ಪುನಃ ।
ಹೃದಯಂ ತತ್ರ ಜಾನಾತಿ ಕರ್ತುಶ್ಚೈವ ಕೃತಸ್ಯ ಚ ॥೩೪॥

ಅಪಕಾರಕ್ಕೆ ಒಳಗಾದವನ ಮತ್ತು ಅಪಕಾರ ಮಾಡಿದವನ ನಡುವೆ ಪುನಃ ಸಂಧಾನವು ಆಗುವುದಿಲ್ಲ. ಅಪಕಾರ ಮಾಡಿದವನ ಮತ್ತು ಅಪಕಾರಕ್ಕೆ ಒಳಗಾದವನ ಹೃದಯವು ಇದನ್ನು ತಿಳಿದಿದೆ.

ಬ್ರಹ್ಮದತ್ತಃ

ಕೃತಸ್ಯ ಚೈವ ಕರ್ತುಶ್ಚ ಸಖ್ಯಂ ಸಂಧೀಯತೇ ಪುನಃ ।
ವೈರಸ್ಯೋಪಶಮೋ ದೃಷ್ಟಃ ಪಾಪಂ ನೋಪಾಶ್ನುತೇ ಪುನಃ ॥೩೫॥

ಅಪಕಾರಕ್ಕೆ ಒಳಗಾದವನ ಮತ್ತು ಅಪಕಾರ ಮಾಡಿದವನ ನಡುವೆ ಪುನಃ ಸಂಧಾನವು ಆಗಬಹುದು. ವೈರದ ಉಪಶಮನವಾಗಿರುವ ನಿದರ್ಶನವಿದೆ. ಅಂತಹವನು ಪುನಃ ಪಾಪವನ್ನು ಮಾಡುವುದಿಲ್ಲ.

ಪೂಜನೀ

ನಾಸ್ತಿ ಚೈವಮತಿಕ್ರಾಂತಂ ನಾಸ್ತಿಕೋಽಸ್ಮೀತಿ ನಾಶ್ವಸೇತ್ ।
ವಿಶ್ವಾಸಾದ್ ಬಧ್ಯತೇ ಬಾಲಸ್ತಸ್ಮಾಚ್ಛ್ರೇಯೋ ಹ್ಯದರ್ಶನಮ್ ॥೩೬॥

ಹೀಗೆ ಪ್ರಿಯವಾಕ್ಯವನ್ನು ಹೇಳಿದರೂ ಅಪರಾಧದ ಪರಿಹಾರವಾಗುವುದಿಲ್ಲ. ನಾಸ್ತಿಕ=ನಿರಪರಾಧಿ ಆಗಿದ್ದೇನೆ ಎಂದು ನಾನು ನಿನ್ನನ್ನು ನಂಬಬಾರದು, ಮುಗ್ಧ ಮನಸ್ಸಿನವರು ವಿಶ್ವಾಸವಿಟ್ಟು ಬಂಧನಕ್ಕೆ ಒಳಗಾಗುತ್ತಾರೆ. ಹಾಗೆ ಆಗುವುದಕ್ಕಿಂತ ಕಾಣಿಸಿಕೊಳ್ಳದಿರುವುದೇ ಒಳ್ಳೆಯದು.

ತರಸಾ ಯೇ ನ ಶಕ್ಯಂತೇ ಶಸ್ತ್ರೈಃ ಸುನಿಶಿತೈರಪಿ ।
ಸಾಮ್ನಾ ತೇ ವಿನಿಗೃಹ್ಯಂತೇ ಗಜಾ ಇವ ಕರೇಣುಭಿಃ ॥೩೭॥

ಬಹಳ ಹರಿತ ಶಸ್ತ್ರಗಳಿಂದ ವೇಗದಿಂದ ಯಾರನ್ನು ನಿಗ್ರಹಿಸಲು ಆಗುವುದಿಲ್ಲವೋ ಅಂತಹವರನ್ನು ಸಾಮೋಪಾಯದಿಂದ ನಿಗ್ರಹಿಸುತ್ತಾರೆ. ಕಾಡಾನೆಗಳನ್ನು ಹೆಣ್ಣು ಆನೆಗಳನ್ನು ಬಳಸಿ ನಿಗ್ರಹಿಸುವಂತೆ.

ಬ್ರಹ್ಮದತ್ತಃ

ಸಂವಾಸಾಜ್ಜಾಯತೇ ಸ್ನೇಹೋ ಜೀವಿತಾಂತಕರೇಷ್ವಪಿ ।
ಅನ್ಯೋನ್ಯಸ್ಯ ಚ ವಿಶ್ವಾಸಃ ಶ್ವಾನಶ್ವಪಚಯೋರಪಿ ॥೩೮॥

ಸಹವಾಸವನ್ನು ಮಾಡುವುದರಿಂದ ಪ್ರಾಣಕಂಟಕರ ಮೇಲೂ ಸ್ನೇಹವು ಹುಟ್ಟುತ್ತದೆ. ನಾಯಿ ಮತ್ತು ಶ್ವಪಚರಿಗೆ ಇರುವ ಪರಸ್ಪರ ವಿಶ್ವಾಸವು ನಿದರ್ಶನ.

ಅನ್ಯೋನ್ಯಕೃತವೈರಾಣಾಂ ಸಂವಾಸಾನ್ಮೃದುತಾಂ ಗತಮ್ ।
ನಾವತಿಷ್ಠತಿ ತದ್ವೈರಂ ಪುಷ್ಕರಸ್ಥಮಿವೋದಕಮ್ ॥೩೯॥

ಪರಸ್ಪರ ವೈರಿಗಳಾಗಿರುವವರಲ್ಲೂ ಸಹವಾಸದಿಂದ, ವೈರವು ಮೃದುವಾಗುತ್ತದೆ. ಮೃದುವಾದ ವೈರವೂ ಕ್ರಮೇಣ ಇಲ್ಲವಾಗುತ್ತದೆ. ಪದ್ಮಪತ್ರದ ಮೇಲಿನ ನೀರಿನಂತೆ. (ಕಮಲದ ಎಲೆಯ ಮೇಲಿನ ನೀರಿನ ಹನಿ ನಿಲ್ಲುವುದಿಲ್ಲ. ಬಿದ್ದುಹೋಗುತ್ತದೆ. ಆದರೆ ಮೃದುವಾದ ವೈರವು ಅಳಿಯುವುದಿಲ್ಲ. ಮುಂದುವರಿಯುತ್ತದೆ-ಲಕ್ಷಾಲಂಕಾರ).

ಪೂಜನೀ

ವೈರಂ ಪಂಚಸಮುತ್ಥಾನಂ ತಚ್ಚ ಬುಧ್ಯಂತಿ ಪಂಡಿತಾಃ ।
ಸ್ವಕೃತಂ ವಾಸ್ತುಜಂ ವಾಗ್ಜಂ ಸ್ತ್ರೀಸಪತ್ನಾಪರಾಧಜಮ್ ॥೪೦॥

ವೈರದ ಉತ್ಥಾನದ ಮೂಲ ಐದು. (೧) ಸ್ವಭಾವ (ಉದಾ : ಹಸು-ಹುಲಿ, (೨) ಮನೆ, ಮನೆಯ ಭೂಮಿ (೩) ಮಾತು (ಉದಾ : ದ್ರೋಣ- ದ್ರುಪದ), (೪) ವೈರಿ (೫) ಅಪರಾಧ - ಇದು ಪಂಡಿತರಿಗೆ ತಿಳಿಯುತ್ತದೆ.

ತತ್ರ ದಾತಾ ನಿಹಂತವ್ಯಃ ಕ್ಷತ್ರಿಯೇಣ ವಿಶೇಷತಃ ।
ಪ್ರಕಾಶಂ ವಾಪ್ರಕಾಶಂ ವಾ ಬುದ್ಧ್ವಾ ದೇಶಬಲಾದಿಕಮ್ ॥೪೧॥

ಉಪಕಾರ ಮಾಡಿದವನ ದೇಶ-ಬಲ ಇತ್ಯಾದಿಗಳನು ತಿಳಿದು, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಉಪಕಾರ ಮಾಡಿದವನಿಗೆ ಅಪಕಾರವನ್ನು ಮಾಡಬಹುದು. ಕ್ಷತ್ರಿಯನಿಗೆ ಈ ಮಾತು ವಿಶೇಷವಾಗಿ ಅನ್ವಯಿಸುತ್ತದೆ. (ಶ್ಲೋಕದಲ್ಲಿ 'ನ ಹಂತವ್ಯಃ' ಎಂಬ ಪಾಠವೂ ಇದೆ. ಅಪಕಾರವನ್ನು ಮಾಡಬಾರದು ಎಂದು ಅರ್ಥ).

ಕೃತಪಾಪಸ್ಯ ವಿಶ್ವಾಸಃ ಕಾರ್ಯಸ್ತ್ವಿಹ ಸುಹೃದ್ಯಪಿ ।
ಛನ್ನಂ ಸಂತಿಷ್ಠತೇ ವೈರಂ ಗೂಢೋಽಗ್ನಿರಿವ ದಾರುಷು ॥೪೨॥

ವೈರವನ್ನು ತೋರಿಸಿದವನ ಮೇಲೆ, ಅವನು ಮಿತ್ರನೇ ಆಗಿದ್ದರೂ, ವಿಶ್ವಾಸವಿಡಬಾರದು. ಕಟ್ಟಿಗೆಗಳಲ್ಲಿ ಅಗ್ನಿಯು ಗೂಢವಾಗಿರುವಂತೆ ವೈರವು (ವೈರಕಾರಿಗಳಲ್ಲಿ) ಗೂಢವಾಗಿರುತ್ತದೆ.

ನ ವಿತ್ತೇನ ನ ಪಾರುಷ್ಯೈರ್ನ ಸಾನ್ತ್ವೇನ ನ ಚ ಶ್ರುತೈಃ ।
ವೈರಾಗ್ನಿಃ ಶಾಮ್ಯತೇ ರಾಜನ್ನೌರ್ವಾಗ್ನಿರಿವ ಸಾಗರೇ ॥೪೩॥

ರಾಜನೇ! ವೈರಾಗ್ನಿಯನ್ನು ಧನದಿಂದ ಶಮನಗೊಳಿಸಲಾಗುವುದಿಲ್ಲ. ಕಠಿಣ ಕ್ರಮಗಳಿಂದಲೂ ಆಗುವುದಿಲ್ಲ. ಸಾಮೋಪಾಯದಿಂದಲೂ ಆಗುವುದಿಲ್ಲ. ವಿದ್ಯೆಯಿಂದಲೂ ಆಗುವುದಿಲ್ಲ. ಸಾಗರದಲ್ಲಿರುವ ವಡವಾಗ್ನಿಯನ್ನು ಹೇಗೆ ಯಾವುದೇ ತಂತ್ರಗಳಿಂದ ಶಮನಗೊಳಿಸಲಾಗುವುದಿಲ್ಲವೋ ಹಾಗೆ.

ನ ಹಿ ವೈರಾಗ್ನಿರುದ್ಭೂತಃ ಕರ್ಮ ವಾಪ್ಯಪರಾಧಜಮ್ ।
ಶಾಮ್ಯತ್ಯದಗ್ಧ್ವಾ ನೃಪತೇ ವಿನಾ ಹ್ಯೇಕತರಕ್ಷಯಾತ್ ॥೪೪॥

ರಾಜನೇ! ಹುಟ್ಟಿದ ವೈರಾಗ್ನಿಯು ಸಂಬಂಧಿಸಿದ ವ್ಯಕ್ತಿಯನ್ನು ಸುಡದೆ ಆರುವುದಿಲ್ಲ. ಅಪರಾಧದಿಂದ ಹುಟ್ಟಿದ ಕರ್ಮವು (ಪ್ರತೀಕಾರವು) ಇಬ್ಬರಲ್ಲಿ ಒಬ್ಬನ ನಾಶವಾಗದೆ ಕೊನೆಯಾಗುವುದಿಲ್ಲ.

ಸತ್ಕೃತಸ್ಯಾರ್ಥಮಾನಾಭ್ಯಾಂ ಸ್ಯಾತ್ತು ಪೂರ್ವಾಪಕಾರಿಣಃ ।
ನೈವ ಶಾಂತಿರ್ನ ವಿಶ್ವಾಸಃ ಕರ್ಮ ತ್ರಾಸಯತೇ ಬಲಾತ್ ॥೪೫॥

ಹಿಂದೆ ಅಪಕಾರ ಮಾಡಿದವನನ್ನು ಅಪಕೃತನು ಧನ-ಮಾನಗಳಿಂದ ಸತ್ಕರಿಸಿದರೂ, ಅವನ ಬಗ್ಗೆ (ಮೊದಲು ಅಪಕಾರ ಮಾಡಿದವನ ವಿಷಯದಲ್ಲಿ) ಕ್ರೋಧ-ಭಯಗಳು ಶಾಂತವಾಗುವುದಿಲ್ಲ. ವಿಶ್ವಾಸವು ಹುಟ್ಟುವುದಿಲ್ಲ. ಕರ್ಮವು (ಅಪಕಾರವು) ಬಲವಾಗಿ ಹೆದರಿಸುತ್ತದೆ.

ನೈವಾಪಕಾರೇ ಕಸ್ಮಿಂಶ್ಚಿದಹಂ ತ್ವಯಿ ತಥಾ ಭವಾನ್ ।
ವಿಶ್ವಾಸಾದುಷಿತಾ ಪೂರ್ವಂ ನೇದಾನೀಂ ವಿಶ್ವಸಾಮ್ಯಹಮ್ ॥೪೬॥

ಇಲ್ಲಿಯವರೆಗೆ ನಾನು ನಿನಗೆ ಅಥವಾ ನೀನು ನನಗೆ ಅಪಕಾರ ಮಾಡಿಯೂ ವಿಶ್ವಾಸದಿಂದ ಇಲ್ಲಿ ವಾಸ ಮಾಡಿಲ್ಲ. (ಅಪಕಾರ ಮಾಡದೆ ವಿಶ್ವಾಸದಿಂದ ಇದ್ದೇವೆ). ಈಗ ನಾನು ನಿನ್ನನ್ನು ನಂಬುವುದಿಲ್ಲ.

ಬ್ರಹ್ಮದತ್ತಃ

ಕಾಲೇನ ಕ್ರಿಯತೇ ಕಾರ್ಯಂ ತಥೈವ ವಿವಿಧಾಃ ಕ್ರಿಯಾಃ ।
ಕಾಲೇನೈವ ಪ್ರವರ್ತಂತೇ ಕಃ ಕಸ್ಯೇಹಾಪರಾಧ್ಯತಿ ॥೪೭॥

ಕಾಲವೇ ಕಾರ್ಯವನ್ನು ಮಾಡುತ್ತದೆ. ನಾನಾ ಚಟುವಟಿಕೆಗಳು ಕಾಲದ ಪ್ರಭಾವದಿಂದಲೇ ಆಗುತ್ತದೆ (ನಡೆಯುತ್ತದೆ). (ಕಾಲ=ವಿಧಿ=ಕಾಣದ ಪ್ರಾರಬ್ಧಕರ್ಮ. ಅವರವರ ಪ್ರಾರಬ್ಧಕರ್ಮಕ್ಕೆ ಅನುಗುಣವಾಗಿಯೇ ನಾನಾ ಕಾರ್ಯಗಳು, ಘಟನೆಗಳು ಆಗುತ್ತವೆ). (ಕಾಲದ ಪ್ರಚೋದನೆ ಇಲ್ಲದೆ) ಯಾರು ಯಾರ ಮೇಲೆ ಅಪರಾಧವನ್ನು ಮಾಡಲು ಸಾಧ್ಯ ?

ತುಲ್ಯಂ ಚೋಭೇ ಪ್ರವರ್ತೇತೇ ಮರಣಂ ಜನ್ಮ ಚೈವ ಹ ।
ಕಾರ್ಯತೇ ಚೈವ ಕಾಲೇನ ತನ್ನಿಮಿತ್ತಂ ಹಿ ಜೀವತಿ ॥೪೮॥

ಹುಟ್ಟು-ಸಾವು ಸಮವಾಗಿ ಸಂಭವಿಸುತ್ತವೆ. ಕಾಲವೇ ಹುಟ್ಟು-ಸಾವುಗಳ ಪ್ರವರ್ತಕ. ಬದುಕಿಗೂ ಕಾಲವೇ ನಿಮಿತ್ತ (ಮರಣಕ್ಕೂ ಅದೇ ನಿಮಿತ್ತ).

ವಧ್ಯಂತೇ ಯುಗಪತ್ ಕೇಚಿತ್ ಏಕೈಕಂ ಚಾಪರೇ ತಥಾ ।
ಕಾಲೋ ದಹತಿ ಭೂತಾನಿ ಸಂಪ್ರಾಪ್ಯಾಗ್ನಿರಿವೇಂಧನಮ್ ॥೪೯॥

ಕೆಲವರು ಸಾಮೂಹಿಕವಾಗಿ ಸಾಯುತ್ತಾರೆ. ಕೆಲವರಿಗೆ ಬಿಡಿಬಿಡಿಯಾಗಿ ಒಬ್ಬೊಬ್ಬರಿಗೇ ಸಾವು ಬರುತ್ತದೆ. ಅಗ್ನಿಯು ತನಗೆ ಲಭಿಸಿದ ಇಂಧನವನ್ನು ದಹಿಸುವಂತೆ ಕಾಲವು ಚೇತನಗಳನ್ನೂ, ಅಚೇತನಗಳನ್ನೂ ದಹಿಸುತ್ತದೆ.

ನಾಹಂ ಪ್ರಮಾಣಂ ನೈವ ತ್ವಮನ್ಯೋನ್ಯಕರಣೇ ಶುಭೇ ।
ಕಾಲೋ ನಿತ್ಯಮುಪಾಧತ್ತೇ ಸುಖಂ ದುಃಖಂ ಚ ದೇಹಿನಾಮ್ ॥೫೦॥

ಶುಭಸ್ವರೂಪಳೇ! ಪರಸ್ಪರ ಉಪಕಾರ-ಅಪಕಾರಗಳನ್ನು ಮಾಡಲು ನಾನು ನೀನು ಇಬ್ಬರೂ ಸಮರ್ಥರಲ್ಲ. ಕಾಲವು ದೇಹಧಾರಿಗಳಿಗೆ ಯಾವಾಗಲೂ ಸುಖವನ್ನು-ದುಃಖವನ್ನು ಉಂಟು ಮಾಡುತ್ತದೆ.

ಏವಂ ವಸೇಹ ಸಸ್ನೇಹಾ ಯಥಾಕಾಲಮಹಿಂಸಿತಾ ।
ಯತ್ಕೃತಂ ತಚ್ಚ ಮೇ ಕ್ಷಾಂತಂ ತ್ವಂ ಚೈವ ಕ್ಷಮ ಪೂಜನಿ ॥೫೧॥

ಪೂಜನಿ! ಆದ್ದರಿಂದ ಇಲ್ಲಿ ಸ್ನೇಹಪೂರ್ವಕವಾಗಿ ನಿರಂತರವಾಗಿ ವಾಸಿಸು. ನೀನು ಮಾಡಿದ್ದನ್ನು ನಾನು ಕ್ಷಮಿಸಿದ್ದೇನೆ. ನೀನು ನನ್ನನ್ನು ದಯವಿಟ್ಟು ಕ್ಷಮಿಸು.

ಪೂಜನೀ

ಯದಿ ಕಾಲಃ ಪ್ರಮಾಣಂ ತೇ ನ ವೈರಂ ಕಸ್ಯಚಿದ್ಭವೇತ್ ।
ಕಸ್ಮಾತ್ತ್ವಪಚಿತಿಂ ಯಾಂತಿ ಬಾಂಧವಾ ಬಾಂಧವೇ ಹತೇ ॥೫೨॥

ನೀನು ಹೇಳುವಂತೆ ಕಾಲವೇ ಎಲ್ಲ ಘಟನೆಗಳಿಗೂ ಕಾರಣವಾಗಿದ್ದರೆ ಬಂಧುವೊಬ್ಬನು ಹತನಾದಾಗ ಅವನ ಬಾಂಧವರೇಕೆ ಕುಗ್ಗುತ್ತಾರೆ?

ಕಸ್ಮಾದ್ ದೇವಾಸುರಾಃ ಪೂರ್ವಮನ್ಯೋನ್ಯಮಭಿಜಘ್ನಿರೇ ।
ಯದಿ ಕಾಲೇನ ನಿರ್ಯಾಣಂ ಸುಖದುಃಖೇ ಭವಾಭವೌ ॥೫೩॥

ಮುಕ್ತಿ, ಸುಖ-ದುಃಖ, ಹುಟ್ಟು-ಸಾವು - ಇವು ಕಾಲದ ಪ್ರಭಾವದಿಂದಲೇ ಆಗುವುದಾದರೆ ಹಿಂದೆ ದೇವತೆಗಳು-ಅಸುರರು ಏಕೆ ಪರಸ್ಪರ ಬಡಿದಾಡಿದ್ದರು?

ಭಿಷಜೋ ಭೇಷಜಂ ಕರ್ತುಂ ಕಸ್ಮಾದಿಚ್ಛಂತಿ ರೋಗಿಣೇ ।
ಯದಿ ಕಾಲೇನ ಪಚ್ಯಂತೇ ಭೇಷಜೈಃ ಕಿಂ ಪ್ರಯೋಜನಮ್ ॥೫೪॥

ಕಾಲಾನುಗುಣವಾಗಿಯೇ ರೋಗವು ವಾಸಿಯಾಗುವುದಾದರೆ ಔಷಧಿಗಳಿಂದ ಏನು ಪ್ರಯೋಜನ? ವೈದ್ಯರು ರೋಗಿಗೆ ಔಷಧವನ್ನು ನೀಡಲು ಏಕೆ ಬಯಸುತ್ತಾರೆ?

ಪ್ರಲಾಪಃ ಕ್ರಿಯತೇ ಕಸ್ಮಾತ್ ಸುಮಹಾನ್ ಶೋಕಮೂರ್ಛಿತೈಃ ।
ಯದಿ ಕಾಲಃ ಪ್ರಮಾಣಂ ತೇ ಕಸ್ಮಾದ್ಧರ್ಮೋಽಸ್ತಿ ಕರ್ತೃಷು ॥೫೫॥

ಕಾಲವೇ ಎಲ್ಲದಕ್ಕೂ ಕಾರಣವಾಗಿದ್ದರೆ ಕೋಪಕ್ಕೆ ಒಳಗಾದವರು ಏಕೆ ಭಾರಿ ಪ್ರಲಾಪವನ್ನು ಮಾಡುತ್ತಾರೆ? ಏಕೆ ಜನಗಳು ಧರ್ಮನಿಷ್ಠರಾಗಿದ್ದಾರೆ?

ತವ ಪುತ್ರೋ ಮಮಾಪತ್ಯಂ ಹತವಾನ್ ಹಿಂಸಿತೋ ಮಯಾ ।
ಅನಂತರಂ ತ್ವಯಾ ಚಾಹಂ ಬಂಧನೀಯಾ ಮಹೀಪತೇ ॥೫೬॥

ನಿನ್ನ ಮಗ ನನ್ನ ಸಂತಾನವನ್ನು ಕೊಂದನು. ಅನಂತರ ನಾನು ಅವನನ್ನು ಹಿಂಸಿಸಿದೆ. ರಾಜನೇ! ನೀನು ನನ್ನನ್ನು ಬಂಧಿಸಬೇಕು.

ಅಹಂ ಹಿ ಪುತ್ರಶೋಕೇನ ಕೃತಪಾಪಾ ತವಾತ್ಮಜೇ ।
ತಥಾ ತ್ವಯಾ ಪ್ರಹರ್ತವ್ಯಂ ಮಯಿ ತತ್ತ್ವಂ ಚ ಮೇ ಶೃಣು ॥೫೭॥

ನಾನು ಪುತ್ರಶೋಕದಿಂದ ನಿನ್ನ ಮಗನಿಗೆ ಹಾನಿ ಮಾಡಿದ್ದೇನೆ. ಆದ್ದರಿಂದ ನೀನು ನನ್ನನ್ನು ಸಂಹರಿಸಬೇಕು. ತತ್ವವನ್ನು ಹೇಳುವೆನು, ಕೇಳು.

ಭಕ್ಷಾರ್ಥಂ ಕ್ರೀಡನಾರ್ಥಂ ವಾ ನರಾ ವಾಂಛಂತಿ ಪಕ್ಷಿಣಃ ।
ತೃತೀಯೋ ನಾಸ್ತಿ ಸಂಯೋಗೋ ವಧಬಂಧಾದೃತೇ ಕ್ಷಮಃ ॥೫೮॥

ನರರು ತಿನ್ನುವುದಕ್ಕೆ ಅಥವಾ ಮೋಜಿಗೆ ಪಕ್ಷಿಗಳನ್ನು ಬಯಸುತ್ತಾರೆ. ವಧೆ ಅಥವಾ ಬಂಧನ - ಇವೆರಡನ್ನು ಬಿಟ್ಟು-ಮಾನವ ಮತ್ತು ಪಕ್ಷಿಗಳ ಸಂಬಂಧಕ್ಕೆ ಬೇರೆ ಏನೂ ಕಾರಣವಿಲ್ಲ.

ವಧಬಂಧಭಯಾದೇಕೇ ಮೋಕ್ಷತಂತ್ರಮುಪಾಗತಾಃ ।
ಮರಣೋತ್ಪಾತಜಂ ದುಃಖಮಾಹುರ್ಧರ್ಮವಿದೋ ಜನಾಃ ॥೫೯॥

ವಧೆಯ ಭಯ ಮತ್ತು ಬಂಧನದ ಭಯ- ಈ ಎರಡು ಭಯಗಳಿಂದ ಬಿಡುಗಡೆಯನ್ನು ಪಡೆಯುವ ಉಪಾಯಗಳನ್ನು ಕೆಲವರು ಅನ್ವೇಷಿಸುತ್ತಾರೆ ಮತ್ತು ಅವುಗಳನ್ನು ಬಳಸುತ್ತಾರೆ. ಧರ್ಮವನ್ನು ತಿಳಿದ ಜನರು ಮರಣ ಎಂಬ ಅನಾಹುತದಿಂದ ಉಂಟಾಗುವ ಸ್ಥಿತಿಯನ್ನು ದುಃಖ ಎಂದು ಹೇಳುತ್ತಾರೆ.

ಸರ್ವಸ್ಯ ದಯಿತಾಃ ಪ್ರಾಣಾಃ ಸರ್ವಸ್ಯ ದಯಿತಾಃ ಸುತಾಃ ।
ದುಃಖಾದುದ್ವಿಜತೇ ಸರ್ವಃ ಸರ್ವಸ್ಯ ಸುಖಮೀಪ್ಸಿತಮ್ ॥೬೦॥

ಎಲ್ಲರಿಗೂ ಪ್ರಾಣವು ಪ್ರಿಯ. ಎಲ್ಲರಿಗೂ ಮಕ್ಕಳು ಪ್ರಿಯರು. ಎಲ್ಲರೂ ದುಃಖದಿಂದ ಅಥವಾ ದುಃಖಕರವಾದ ಸಂದರ್ಭವು ಎದುರಾದಾಗ ಉದ್ವೇಗಕ್ಕೆ ಒಳಗಾಗುತ್ತಾರೆ. ಎಲ್ಲರಿಗೂ ಸುಖವು ಇಷ್ಟ.

ದುಃಖಂ ಜರಾ ಬ್ರಹ್ಮದತ್ತ ದುಃಖಮರ್ಥವಿಪರ್ಯಯಃ ।
ದುಃಖಂ ಚಾನಿಷ್ಟಸಂವಾಸೋ ದುಃಖಮಿಷ್ಟವಿಯೋಗಜಮ್ ॥೬೧॥

ಬ್ರಹ್ಮದತ್ತ! ಮುಪ್ಪು ದುಃಖ. ಹಣವಿಲ್ಲದ ಸ್ಥಿತಿ ದುಃಖ. ಇಷ್ಟವಾಗದವರ ಅಥವಾ ಅನಿಷ್ಟಕರರಾದವರ ಸಹವಾಸವು ದುಃಖ. ಪ್ರಿಯ ವ್ಯಕ್ತಿಗಳ ಮತ್ತು ವಸ್ತುಗಳ ವಿಯೋಗವು ದುಃಖ.

ವೈರಬಂಧಕೃತಂ ದುಃಖಂ ಹಿಂಸಾಜಂ ಸ್ತ್ರೀಕೃತಂ ತಥಾ ।
ದುಃಖಂ ಸುಖೇನ ಸತತಂ ಜನಾನ್ ವಿಪರಿವರ್ತತೇ ॥೬೨॥

ನಿರಂತರ ವೈರದಿಂದ ಮತ್ತು ಗಾಢ ವೈರದಿಂದ ಉಂಟಾಗುವ ದುಃಖ, ಹಿಂಸೆಯಿಂದ ಉಂಟಾಗುವ ದುಃಖ, ಸ್ತ್ರೀಗೆ ಪುರುಷನಿಂದ ಮತ್ತು ಪುರುಷನಿಗೆ ಸ್ತ್ರೀಯಿಂದ ಆಗುವ ದುಃಖ-ಇವೆಲ್ಲವೂ ಸುಖೇನ-ಸುಖಕಾಗಿ ಮಾಡುವ ಪ್ರವೃತ್ತಿಯಿಂದ ಉಂಟಾಗುವ ದುಃಖ. ಈ ದುಃಖವು ಜನರನ್ನು ನಿರಂತರವಾಗಿ ಸುತ್ತುವರಿದಿದೆ.

ನ ದುಃಖಂ ಪರದುಃಖೇ ವೈ ಕೇಚಿದಾಹುರಬುದ್ಧಯಃ ।
ಯೋ ದುಃಖಂ ನಾಭಿಜಾನಾತಿ ಸ ಜಲ್ಪತಿ ಮಹಾಜನೇ ॥೬೩॥

ಕೆಲವರು ಬುದ್ಧಿಹೀನರು ಪರರಿಗೆ ಆದ ದುಃಖವು ತಮಗೆ ದುಃಖವುಂಟು ಮಾಡುವುದಿಲ್ಲ ಎಂದು ಹೇಳುತ್ತಾರೆ. ದುಃಖದ ಅನುಭವವಿಲ್ಲದವನು ಮಾತ್ರ ಜನಗಳೆದುರು ನಾಚಿಕೆಯಿಲ್ಲದ ಹೀಗೆ ಹರಟುತ್ತಾನೆ.

ಯಸ್ತು ಶೋಚತಿ ದುಃಖಾರ್ತಃ ಸ ಕಥಂ ವಕ್ತುಮುತ್ಸಹೇತ್ ।
ರಸಜ್ಞಃ ಸರ್ವದುಃಖಸ್ಯ ಯಥಾತ್ಮನಿ ತಥಾ ಪರೇ ॥೬೪॥

ಯಾರು ದುಃಖದಿಂದ ಆರ್ತನಾಗಿ ಶೋಕಪಟ್ಟಿದ್ದಾನೋ, 'ತನ್ನ ದುಃಖದಂತೆಯೇ ಪರರ ದುಃಖ' ಎಂದು ದುಃಖದ ಸ್ವರೂಪವನ್ನು ತಿಳಿದಿದ್ದಾನೋ ಅವನು ಹೇಗೆ ತಾನೆ ಹೀಗೆ ಹೇಳುವ ಉತ್ಸಾಹವನ್ನು ಹೊಂದಿಯಾನು?

ಯತ್ಕೃತಂ ತೇ ಮಯಾ ರಾಜಂಸ್ತ್ವಯಾ ಚ ಮಮ ಯತ್ಕೃತಮ್ ।
ನ ತದ್ವರ್ಷಶತೈಃ ಶಕ್ಯಂ ವ್ಯಪೋಹಿತುಮರಿಂದಮ ॥೬೫॥

ರಾಜನೇ! ನಾನು ನಿನಗೆ ಏನು ಮಾಡಿದೆನೋ, ನೀನು ನನಗೆ ಏನು ಮಾಡಿದೆಯೋ ಅದನ್ನು, ಶತ್ರುದಮನಕಾರಿಯೇ!' ನೂರಾರು ವರ್ಷಗಳಾದರೂ ಅಳಿಸಲು ಆಗುವುದಿಲ್ಲ.

ಆವಯೋಃ ಕೃತಮನ್ಯೋನ್ಯಂ ತತ್ರ ಸಂಧಿರ್ನ ವಿದ್ಯತೇ ।
ಸ್ಮೃತ್ವಾ ಸ್ಮೃತ್ವಾ ಹಿ ತೇ ಪುತ್ರಂ ನವಂ ವೈರಂ ಭವಿಷ್ಯತಿ ॥೬೬॥

ನಾವಿಬ್ಬರೂ ಪರಸ್ಪರ ಅಪಕಾರವನ್ನು ಮಾಡಿದ್ದೇವೆ. ಆದ್ದರಿಂದ ನಮ್ಮಿಬ್ಬರ ಮನಸ್ಸು ಇನ್ನು ಎಂದೂ ಕೂಡುವುದಿಲ್ಲ. ನಿನ್ನ ಮಗನನ್ನು ಚಿಂತಿಸಿ, ಚಿಂತಿಸಿ ವೈರವು ಹೊಸದಾಗಿ ಹುಟ್ಟುತ್ತಿರುತ್ತದೆ.

ವೈರಮಂತಿಕಮಾಸಜ್ಯ ಯಃ ಪ್ರೀತಿಂ ಕರ್ತುಮಿಚ್ಛತಿ ।
ಮೃನ್ಮಯಸ್ಯೇವ ಭಗ್ನಸ್ಯ ತಸ್ಯ ಸಂಧಿರ್ನ ವಿದ್ಯತೇ ॥೬೭॥

ಯಾರು ಹತ್ತಿರದಲ್ಲಿ (ಹೃದಯದಲ್ಲಿ) ವೈರವನ್ನು ಅಂಟಿಸಿಕೊಂಡು ಪ್ರೀತಿಯನ್ನು ಮಾಡಲು ಬಯಸುವನೋ ಅವನಲ್ಲಿ ಪ್ರೀತಿಯು ಕೂಡುವುದಿಲ್ಲ. ಒಡೆದು ಹೋದ ಮಣ್ಣಿನ ಪಾತ್ರೆಯಂತೆ.

ನಿಶ್ಚಿತಶ್ಚಾರ್ಥಶಾಸ್ತ್ರಜ್ಞೈರವಿಶ್ವಾಸಃ ಸುಖೋದಯಃ ।
ಉಶನಾಶ್ಚಾಥ ಗಾಥೇ ದ್ವೇ ಪ್ರಹ್ಲಾದಾಯಾಬ್ರವೀತ್ ಪುರಾ ॥೬೮॥

ಅವಿಶ್ವಾಸವು ಸುಲಭವಾಗಿ= ಸಾಮಾನ್ಯ ಕಾರಣಗಳಿಂದ ಹುಟ್ಟುತ್ತದೆ ಎಂದು ಅರ್ಥಶಾಸ್ತ್ರವನ್ನು (ಲೋಕದ ಬದುಕಿನ ರೀತಿಗಳನ್ನು ತಿಳಿಸುವ ಶಾಸ್ತ್ರ) ಬಲ್ಲವರು ನಿಶ್ಚಯಿಸಿದ್ದಾರೆ. ಈ ವಿಷಯದಲ್ಲಿ ಶುಕ್ರಾಚಾರ್ಯರು ಪ್ರಹ್ಲಾದನಿಗೆ ಹೇಳಿದ ಎರಡು ಶ್ಲೋಕಗಳು ಹೀಗಿವೆ.

ಭಿನ್ನಕ್ರಮಾ ನ ಸಜ್ಜಂತೇ ಶಸ್ತ್ರೈಃ ಸುನಿಶಿತೈರಪಿ ।
ಸಾಮ್ನಾ ತೇಽಪಿ ನಿಗೃಹ್ಯಂತೇ ಗಜಾ ಇವ ಕರೇಣುಭಿಃ ॥೬೯॥

ಶಿಸ್ತು-ಸುವ್ಯವಸ್ಥೆಗಳಿಗಾಗಿ ಇರುವ ನಿಯಮಗಳನ್ನು ಮುರಿದವರು ಬಹಳ ಹರಿತವಾದ ಶಸ್ತ್ರಗಳಿಂದ (= ತೀವ್ರ ದಂಡನೆಗಳಿಂದಲೂ) ಶಿಸ್ತಿಗೆ ಬದ್ಧರಾಗುವುದಿಲ್ಲ. ಇಂತಹವರನ್ನೂ ಸಾಮೋಪಾಯದಿಂದ ಪಳಗಿಸಬಹುದು. ಅಪಾಯಕಾರಿ ಆನೆಗಳನ್ನು ಹೆಣ್ಣಾನೆಗಳಿಂದ ಪಳಗಿಸುವಂತೆ.

ಯೇ ವೈರಿಣಃ ಶ್ರದ್ದಧತೇ ಸತ್ಯೇ ಸತ್ಯೇತರೇಽಪಿ ವಾ ।
ತೇ ಶ್ರದ್ದಧಾನಾ ವಧ್ಯಂತೇ ಮಧು ಶುಷ್ಕತೃಣೈರ್ಯಥಾ ॥೭೦॥

ಯಾರು ವೈರಿಯ ಸತ್ಯವಾದ ಮಾತಿನಲ್ಲಿ ಅಥವಾ ಸತ್ಯವಲ್ಲದ ಮಾತಿನಲ್ಲಿ ನಂಬಿಕೆಯನ್ನು ಇಡುತ್ತಾರೋ ಅವರು ವಧಿಸಲ್ಪಡುತ್ತಾರೆ/ ಬಂಧಿಸಲ್ಪಡುತ್ತಾರೆ. 'ಮುಂದೆ ಮಧು ಇದೆ' ಎಂಬ ವಂಚಕನ ಮಾತನ್ನು ನಂಬಿದವನು ಹುಲ್ಲಿನಿಂದ ಮರೆಯಾಗಿಸಲ್ಪಟ್ಟ ಬಾವಿಯಲ್ಲಿ ಬೀಳುವಂತೆ.

ನ ಹಿ ವೈರಾಣಿ ಶಾಮ್ಯಂತಿ ಕುಲೇಷ್ವಾ ದಶಮಾದ್ಯುಗಾತ್ ।
ಆಖ್ಯಾತಾರಶ್ಚ ವಿದ್ಯಂತೇ ಕುಲೇ ಚೇದ್ವಿದ್ಯತೇ ಪುಮಾನ್ ॥೭೧॥

ಕುಲಗಳಲ್ಲಿ ಹುಟ್ಟಿದ ವೈರವು ಹತ್ತೂ ತಲೆಮಾರಿನವರೆಗೂ ಶಮನವಾಗುವುದಿಲ್ಲ. ಕುಲದಲ್ಲಿ ಪುರುಷನಿದ್ದರೆ ಅವನಿಗೆ ಆಗಿ ಹೋದ ಘಟನೆಯನ್ನು ಹೇಳುವವರು ಇರುತ್ತಾರೆ.

ಉಪಗುಹ್ಯ ಹಿ ವೈರಾಣಿ ಸಾಂತ್ವಯಂತಿ ನರಾಧಿಪಾಃ ।
ಅಥೈನಂ ಪ್ರತಿಪಿಂಷಂತಿ ಪೂರ್ಣಂ ಘಟಮಿವಾಶ್ಮನಿ ॥೭೨॥

ರಾಜರುಗಳು ವೈರವನ್ನು ಅಡಗಿಸಿಕೊಂಡು ಓಲೈಸುತ್ತಾರೆ. ಅನಂತರ ತುಂಬಿದ ಮಡಕೆಯನ್ನು ನೆಲಕ್ಕ ಅಪ್ಪಳಿಸುವಂತೆ ಪುಡಿಗಟ್ಟುತ್ತಾರೆ.

ಸದಾ ನ ವಿಶ್ವಸೇದ್ ರಾಜನ್ ಪಾಪಂ ಕೃತ್ವೇಹ ಕಸ್ಯಚಿತ್ ।
ಅಪಕೃತ್ಯ ಪರೇಷಾಂ ಹಿ ವಿಶ್ವಾಸಾದ್ದುಃಖಮಶ್ನುತೇ ॥೭೩॥

ರಾಜನೇ! ಪಾಪಕೃತ್ಯವನ್ನು ಮಾಡಿದ ಮೇಲೆ (ಅನಂತರ) ಪಾಪಕೃತ್ಯಕ್ಕೆ ಗುರಿಯಾದವನ ಮೇಲೆ ವಿಶ್ವಾಸವಿಡಬಾರದು. ಪರರಿಗೆ ಅಪಕಾರ ಮಾಡಿ, ಅವರ ಮೇಲೆ ನಂಬಿಕೆ ಇಟ್ಟರೆ, ಆ ನಂಬಿಕೆಯ ಕಾರಣದಿಂದಲೇ ದುಃಖವನ್ನು ಅನುಭವಿಸಬೇಕಾಗುತ್ತದೆ.

ಬ್ರಹ್ಮದತ್ತಃ

ನಾವಿಶ್ವಾಸಾಚ್ಚಿನ್ನತ್ವೇऽರ್ಥಾನ್ನೇಹಂತೇ ಚಾಪಿ ಕಿಂಚನ ।
ಪ್ರಯಾತ್ವೇಕತರಂ ಮಿತ್ರೇ ಕೃತಕೃತ್ಯಾ ಭವತ್ವಿಹ ॥೭೪॥

ಅವಿಶ್ವಾಸದಿಂದ ಏನನ್ನೂ ಗಳಿಸಲಾಗುವುದಿಲ್ಲ. ಏನನ್ನೂ ಮಾಡಲಾಗುವುದಿಲ್ಲ. ಮಿತ್ರನಾದ ನನ್ನಲ್ಲೇ ಇದ್ದು ಎರಡರಲ್ಲಿ ಒಂದನ್ನು (ಧನವನ್ನು ಅಥವಾ ಕ್ರಿಯಾಶೀಲತೆಯನ್ನು) ನೀನು ಹೊಂದು. ಹೀಗೆ ನನ್ನ ಮನೆಯಲ್ಲೇ ಇದ್ದು ಕೃತಕೃತ್ಯಳಾಗು.

ಪೂಜನೀ

ಯಸ್ಯೈವ ವ್ರಣಿನೌ ಪಾದೌ ಪದ್ಭ್ಯಾಂ ಚ ಪರಿಸರ್ಪತಿ ।
ಕ್ಷಣ್ಯೇತೇ ತಸ್ಯ ತೌ ಪಾದೌ ಸುಗುಪ್ತಮಭಿಧಾವತಃ ॥೭೫॥

ಯಾರ ಪಾದಗಳಿಗೆ ಗಾಯಗಳಾಗಿವೆಯೋ, ಆದರೂ ನಡೆದೇ ಚಲಿಸುತ್ತಾನೋ, ಅವನ ಪಾದಗಳು, ಅವನು ಬಹಳ ಎಚ್ಚರಿಕೆಯಿಂದ ನಡೆದರೂ, ಹಾನಿಗೆ ಒಳಗಾಗುತ್ತವೆ.

ನೇತ್ರಾಭ್ಯಾಂ ಸರುಜಾಭ್ಯಾಂ ಯಃ ಪ್ರತಿವಾತಮುದೀಕ್ಷತೇ ।
ತಸ್ಯ ವಾಯುರುಜಾತ್ಯರ್ಥಂ ನೇತ್ರಯೋರ್ಭವತಿ ಧ್ರುವಮ್ ॥೭೬॥

ರೋಗಕ್ಕೆ ಒಳಗಾದ ಕಣ್ಣುಗಳನ್ನು ಯಾರು ಎದುರುಗಾಳಿಗೆ ತೆರೆಯುತ್ತಾನೋ ಅವನ ಕಣ್ಣುಗಳಲ್ಲಿ ರೋಗವು ನಿಶ್ಚಯವಾಗಿ ಹೆಚ್ಚಾಗುತ್ತದೆ.

ದುಷ್ಟಂ ಪಂಥಾನಮಾಶ್ರಿತ್ಯ ಯೋ ಮೋಹಾದಭಿಪದ್ಯತೇ ।
ಆತ್ಮನೋ ಬಲಮಜ್ಞಾತ್ವಾ ತದಂತಂ ತಸ್ಯ ಜೀವಿತಮ್ ॥೭೭॥

ಯಾರು ತನ್ನ ಸಾಮರ್ಥ್ಯವನ್ನು ಅರಿಯದೆ ಮೋಹದಿಂದ ತಪ್ಪುದಾರಿಯನ್ನು ಹಿಡಿದು ಸಾಗುತ್ತಾನೋ ಅವನ ಜೀವಿತವು ಅಲ್ಲಿಗೆ ಮುಗಿಯುತ್ತದೆ.

ಯಸ್ತು ವರ್ಷಮವಿಜ್ಞಾಯ ಕ್ಷೇತ್ರಂ ಕೃಷತಿ ಮಾನವಃ ।
ಹೀನಃ ಪುರುಷಕಾರೇಣ ಸಸ್ಯಂ ನೈವಾಪ್ನುತೇ ಪುನಃ ॥೭೮॥

ಯಾವ ಹೀನ=ವಿವೇಚನೆಯಿಲ್ಲದ ಮನುಷ್ಯನು ಮಳೆಯ ಅನುಕೂಲವನ್ನು ತಿಳಿದುಕೊಳ್ಳದೆ ಭೂಮಿಯನ್ನು ಉಳುತ್ತಾನೋ ಅವನು ಪುರುಷ ಪ್ರಯತ್ನದ ಬಲದಿಂದ ಸಸ್ಯವನ್ನು ಪಡೆಯುವುದಿಲ್ಲ. (ಅವನ ಪರಿಶ್ರಮವು ವ್ಯರ್ಥ).

ಯಶ್ಚ ತಿಕ್ತಂ ಕಷಾಯಂ ವಾಪ್ಯಾಸ್ವಾದವಿಧುರಂ ಹಿತಮ್ ।
ಆಹಾರಂ ಕುರುತೇ ನಿತ್ಯಂ ಸೋऽಮೃತತ್ವಾಯ ಕಲ್ಪತೇ ॥೭೯॥

ಯಾರು ಕಹಿಕಷಾಯವನ್ನು ಸೇವಿಸುತ್ತಾನೋ, ಆಸ್ವಾದವಿಲ್ಲದ, ಆದರೆ ಹಿತವಾದ ಆಹಾರವನ್ನು ನಿತ್ಯವೂ ಸೇವಿಸುತ್ತಾನೋ ಅವನು ಬಾಧೆಗಳಿಲ್ಲದೆ ಆರೋಗ್ಯದಿಂದ ಇರುತ್ತಾನೆ.

ಪಥ್ಯಂ ಮುಕ್ತ್ವಾ ನರೋ ಲೋಭಾದ್ ಯೋಽನ್ಯದಶ್ನಾತಿ ಭೋಜನಮ್।
ಪರಿಣಾಮಮವಿಜ್ಞಾಯ ತದಂತಂ ತಸ್ಯ ಜೀವಿತಮ್ ॥೮೦॥

ಯಾವ ನರನು ಪಥ್ಯ ಆಹಾರವನ್ನು ಬಿಟ್ಟು, ಲೋಭದಿಂದ, ಪರಿಣಾಮವನ್ನು ಲೆಕ್ಕಿಸದೆ, ಆಪಥ್ಯ ಆಹಾರವನ್ನು ತಿನ್ನುತ್ತಾನೋ ಅವನ ಬದುಕು ಅಲ್ಲಿಗೆ ಮುಗಿಯುತ್ತದೆ.

ದೈವಂ ಪುರುಷಕಾರಶ್ಚ ಸ್ಥಿತಾವನ್ಯೋನ್ಯಸಂಶ್ರಯಾತ್ ।
ಉದಾತ್ತಾ ವೈ ಕರ್ಮ ತತ್ರ ದೈವಂ ಕಿಂ ವಾ ಉಪಾಸತೇ ॥೮೧॥

ಯಾರಲ್ಲಿ ದೈವ ಮತ್ತು ಪುರುಷಪ್ರಯತ್ನಗಳು ಸಮನ್ವಯದಿಂದ ಇರುತ್ತವೋ ಅಂತಹ ವ್ಯಕ್ತಿಯಿಂದ ಉದಾತ್ತಕಾರ್ಯಗಳು ಆಗುತ್ತವೆ (ಅಸಮರ್ಥರು ಕೇವಲ ದೈವವನ್ನು ಅವಲಂಬಿಸುತ್ತಾರೆ). ಪುರುಷ ಪ್ರಯತ್ನವಿಲ್ಲದೆ ಕೇವಲ ದೈವದಿಂದ ಏನನ್ನು ಸಾಧಿಸುತ್ತಾರೆ?

ಕರ್ಮ ಚಾತ್ಮಹಿತಂ ಕಾರ್ಯಂ ತೀಕ್ಷ್ಣಂ ವಾ ಯದಿ ವಾ ಮೃದು ।
ಗ್ರಸ್ಯತೇಽಕರ್ಮಶೀಲಸ್ತು ಸದಾನರ್ಥೈರಕಿಂಚನಃ ॥೮೨॥

ತೀಕ್ಷ್ಣವೋ, ಮೃದುವೋ, ತನಗೆ ಹಿತವಾದ ಕರ್ಮವನ್ನೇ ಮಾಡಬೇಕು. ಕ್ರಿಯಾಶೀಲನಲ್ಲದ ದರಿದ್ರನನ್ನು ಅನರ್ಥಗಳು ನುಂಗುತ್ತವೆ.

ತಸ್ಮಾತ್ ಸಂಶಯಿತೇಽಪ್ಯರ್ಥೇ ಕಾರ್ಯ ಏವ ಪರಾಕ್ರಮಃ ।
ಸರ್ವಸ್ವಮಪಿ ಸಂತ್ಯಜ್ಯ ಕಾರ್ಯಮಾತ್ಮಹಿತಂ ನರೈಃ ॥೮೩॥

ಆದ್ದರಿಂದ ಪ್ರಯೋಜನವು ಲಭಿಸುವ ಸಂಶಯವಿದ್ದರೂ ಪರಾಕ್ರಮವನ್ನೇ ಆಚರಿಸಬೇಕು. ನರರು ಎಲ್ಲವನ್ನೂ ತ್ಯಜಿಸಿ ಆತ್ಮಹಿತವನ್ನೇ ಸಾಧಿಸಬೇಕು.

ವಿದ್ಯಾ ಶೌರ್ಯಂ ಚ ದಾಕ್ಷ್ಯಂ ಚ ಬಲಂ ಧೈರ್ಯಂ ಚ ಪಂಚಮಮ್।
ಮಿತ್ರಾಣಿ ಸಹಜಾನ್ಯಾಹುರ್ವರ್ತಯಂತೀಹ ಯೈರ್ಬುಧಾಃ ॥೮೪॥

ವಿದ್ಯೆ, ಶೌರ್ಯ, ಸಾಮರ್ಥ್ಯ, ಬಲ ಮತ್ತು ಐದನೆಯ ಧೈರ್ಯ- ಇವು ಸಹಜ ಮಿತ್ರರು ಎಂದು ಪ್ರಾಜ್ಞರು ಹೇಳುತ್ತಾರೆ. ವಿವೇಕಿಗಳು ಇವುಗಳನ್ನು ಅವಲಂಬಿಸಿ ನಡೆಯುತ್ತಾರೆ.

ನಿವೇಶನಂ ಚ ಕುಪ್ಯಂ ಚ ಕ್ಷೇತ್ರಂ ಭಾರ್ಯಾ ಸುಹೃಜ್ಜನಃ ।
ಏತಾನ್ಯುಪಚಿತಾನ್ಯಾಹುಃ ಸರ್ವತ್ರ ಲಭತೇ ಪುಮಾನ್ ॥೮೫॥

ನಿವೇಶನ (ಗೃಹ ನಿರ್ಮಾಣಭೂಮಿ), ಕುಪ್ಯ (ಗೋವುಗಳು, ಧಾನ್ಯ ಮೊದಲಾದವುಗಳು) ಕೃಷಿಭೂಮಿ, ಹೆಂಡತಿ, ಮಿತ್ರರು- ಇವು ಸಂಗ್ರಹಗಳು. ಇವುಗಳನ್ನು ಎಲ್ಲ ಕಡೆಯೂ ಪಡೆಯಬಹುದು.

ಸರ್ವತ್ರ ರಮತೇ ಪ್ರಾಜ್ಞಃ ಸರ್ವತ್ರ ಚ ವಿರೋಚತೇ ।
ನ ವಿಭೀಷಯತೇ ಕಂಚಿದ್ ಭೀಷಿತೋ ನ ಬಿಭೇತಿ ಚ ॥೮೬॥

ಪ್ರಾಜ್ಞನು ಎಲ್ಲ ಸಂನಿವೇಶಗಳನ್ನು ಆಸ್ವಾದಿಸುತ್ತಾನೆ. ಎಲ್ಲ ಸಂನಿವೇಶಗಳಲ್ಲೂ ಬೆಳಗುತ್ತಾನೆ. ಯಾರನ್ನೂ ಹೆದರಿಸುವುದಿಲ್ಲ. ಬೇರೆಯವರು ತನ್ನನ್ನು ಹೆದರಿಸಿದರೆ ಹೆದರುವುದಿಲ್ಲ.

ನಿತ್ಯಂ ಬುದ್ಧಿಮತೋ ಹ್ಯರ್ಥಃ ಸ್ವಲ್ಪಕೋಽಪಿ ವಿವರ್ಧತೇ ।
ದಾಕ್ಷ್ಯೇಣ ಕುರುತೇ ಕರ್ಮ ಸಂಯಮಾತ್ ಪ್ರತಿತಿಷ್ಠತಿ ॥೮೭॥

ಬುದ್ಧಿವಂತನ ಸ್ವಲ್ಪವೇ ಹಣವೂ ನಿರಂತರವಾಗಿ ಬೆಳೆಯುತ್ತದೆ. ಬುದ್ಧಿವಂತನು ಸಾಮರ್ಥ್ಯದಿಂದ ಕೆಲಸ ಮಾಡುತ್ತಾನೆ. ಸಂಯಮದಿಂದ ಸ್ಥಿರವಾಗಿ ನಿಲ್ಲುತ್ತಾನೆ.

ಗೃಹಸ್ನೇಹಾವಬದ್ಧಾನಾಂ ನರಾಣಾಮಲ್ಪಮೇಧಸಾಮ್ ।
ಕುಸ್ತ್ರೀ ಖಾದತಿ ಮಾಂಸಾನಿ ಮಾಘಮಾ ಸೇಗವಾಮಿವ ॥೮೮॥

ಹೆಂಡತಿಯ ಆಕರ್ಷಣೆಗೆ ಒಳಗಾದ ಮಂದಮತಿಗಳ ಮಾಂಸವನ್ನೇ ಕೆಟ್ಟ ಮಹಿಳೆಯು ತಿಂದುಬಿಡುತ್ತಾಳೆ. ಚೇಳಿನ ಮರಿಗಳು ತಾಯಿ ಚೇಳನ್ನು ನಾಶಮಾಡುವಂತೆ.

ಗೃಹಂ ಕ್ಷೇತ್ರಾಣಿ ಮಿತ್ರಾಣಿ ಸ್ವದೇಶ ಇತಿ ಚಾಪರೇ ।
ಇತ್ಯೇವಮವಸೀದಂತಿ ನರಾ ಬುದ್ಧಿವಿಪರ್ಯಯೇ ॥೮೯॥

ನರರು ತಮ್ಮ ಬುದ್ಧಿಯು ವಿರುದ್ಧವಾಗಿ ಅಥವಾ ವಿನಾಶಕಾರಿಯಾಗಿ ಕೆಲಸ ಮಾಡಿದಾಗ ಮನೆ, ಹೊಲ, ಮಿತ್ರರು ಎಂದು, ಮತ್ತೆ ಕೆಲವರು ಸ್ವದೇಶ ಎಂದು ವಿನಾಶಕ್ಕೊಳಗಾಗುತ್ತಾರೆ.

ಉತ್ಪತೇತ್ ಸರುಜಾದ್ ದೇಶಾದ್ ವ್ಯಾಧಿದುರ್ಭಿಕ್ಷಪೀಡಿತಾತ್ ।
ಅನ್ಯತ್ರ ವಸ್ತುಂ ಗಚ್ಛೇದ್ವಾ ವಸೇದ್ವಾ ನಿತ್ಯಮಾನಿತಃ ॥೯೦॥

ವ್ಯಾಧಿ, ದುರ್ಭಿಕ್ಷೆಗಳಿಂದ ಪೀಡಿತವಾದ ದೇಶವನ್ನು ಬಿಟ್ಟು ಹೋಗಬೇಕು. ಬೇರೆ ಕಡೆ ವಾಸಿಸಲು ಹೋಗಬೇಕು. ಅಥವಾ ನಿರಂತರವಾಗಿ ಗೌರವಾರ್ಹನಾಗಿಯೇ ಇರಬೇಕು.

ತಸ್ಮಾದನ್ಯತ್ರ ಯಾಸ್ಯಾಮಿ ವಸ್ತುಂ ನಾಹಮಿಹೋತ್ಸಹೇ ।
ಕೃತಮೇತದನಾಹಾರ್ಯಂ ತವ ಪುತ್ರೇಣ ಪಾರ್ಥಿವ ॥೯೧॥

ರಾಜನೇ! ಆದ್ದರಿಂದ ಬೇರೆ ಕಡೆ ಹೋಗುತ್ತೇನೆ. ಇಲ್ಲಿ ವಾಸಿಸಲು ಉತ್ಸಾಹವಿಲ್ಲ. ನಿನ್ನ ಮಗನು ಪರಿಹಾರವಿಲ್ಲದ ಕೆಲಸವನ್ನು ಮಾಡಿದ್ದಾನೆ.

ಕುಭಾರ್ಯಾಂ ಚ ಕುಪುತ್ರಂ ಚ ಕುರಾಜಾನಂ ಕುಸೌಹೃದಮ್ ।
ಕುಸಂಬಂಧಂ ಕುದೇಶಂ ಚ ದೂರತಃ ಪರಿವರ್ಜಯೇತ್ ॥೯೨॥

ಕೆಟ್ಟ ಹೆಂಡತಿಯನ್ನು, ಕೆಟ್ಟ ಮಗನನ್ನು, ಕೆಟ್ಟ ರಾಜನನ್ನು, ಕೆಟ್ಟ ಸ್ನೇಹಿತನನ್ನು, ಕೆಟ್ಟ ಸಂಬಂಧವನ್ನು, ಕೆಟ್ಟ ದೇಶವನ್ನು ದೂರದಿಂದಲೇ ಪರಿತ್ಯಜಿಸಬೇಕು.

ಕುಮಿತ್ರೇ ನಾಸ್ತಿ ವಿಶ್ವಾಸಃ ಕುಭಾರ್ಯಾಯಾಂ ಕುತೋ ರತಿಃ ।
ಕುರಾಜ್ಯೇ ನಿರ್ವೃತಿರ್ನಾಸ್ತಿ ಕುದೇಶೇ ನ ಪ್ರಜೀವ್ಯತೇ ॥೯೩॥

ಕೆಟ್ಟ ಮಿತ್ರನಲ್ಲಿ ವಿಶ್ವಾಸವಿರುವುದಿಲ್ಲ. ಕೆಟ್ಟ ಹೆಂಡತಿಯಲ್ಲಿ ರತಿ ಎಲ್ಲಿಂದ? ಕೆಟ್ಟ ಆಡಳಿತ ವ್ಯವಸ್ಥೆಯಲ್ಲಿ ಸಂತೋಷವಿರುವುದಿಲ್ಲ. ಕೆಟ್ಟ ಸ್ಥಳದಲ್ಲಿ ಜೀವನೋಪಾಯವು ಸಿಗುವುದಿಲ್ಲ.

ಕುಮಿತ್ರೇ ಸಂಗತಂ ನಾಸ್ತಿ ನಿತ್ಯಮಸ್ಥಿರಸೌಹೃದೇ ।
ಅವಮಾನಃ ಕುಸಂಬಂಧೇ ಭವತ್ಯರ್ಥವಿಪರ್ಯಯೇ ॥೯೪॥

ಯಾವಾಗಲೂ ಚಂಚಲ ಸೌಹಾರ್ದವನ್ನೇ ತೋರಿಸುವ ಕೆಟ್ಟ ಮಿತ್ರನ ಜೊತೆ ಹೊಂದಾಣಿಕೆಯಾಗುವುದಿಲ್ಲ. ಧನಹೀನ ಸ್ಥಿತಿಯು ಒದಗಿದಾಗ ಕೆಟ್ಟ ಬಂಧುಗಳ ನಡುವೆ ಅವಮಾನವಾಗುತ್ತದೆ.

ಸಾ ಭಾರ್ಯಾ ಯಾ ಪ್ರಿಯಂ ಬ್ರೂತೇ ಸ ಪುತ್ರೋ ಯತ್ರ ನಿರ್ವೃತಿಃ ।
ತನ್ಮಿತ್ರಂ ಯತ್ರ ವಿಶ್ವಾಸಃ ಸ ದೇಶೋ ಯತ್ರ ಜೀವ್ಯತೇ ॥೯೫॥

ಪ್ರಿಯವಚನಗಳನ್ನು ಹೇಳುವವಳು ಹೆಂಡತಿ. ಸಂತೋಷವುಂಟು ಮಾಡುವವನು ಪುತ್ರ. ಯಾರಲ್ಲಿ ವಿಶ್ವಾಸವಿರುವುದೋ ಅವನು ಮಿತ್ರ. ಎಲ್ಲಿ ಬದುಕಬಹುದೋ ಅದು ದೇಶ.

ಯತ್ರ ನಾಸ್ತಿ ಬಲಾತ್ಕಾರಃ ಸ ರಾಜಾ ತೀವ್ರಶಾಸನಃ ।
ಯತ್ಕೈವ ಹ್ಯಭಿಸಂಬಂಧೋ ದರಿದ್ರಂ ಯೋ ಬುಭೂಷತಿ ॥೯೬॥

ಯಾವ ರಾಜನ ಆಳ್ವಿಕೆಯಲ್ಲಿ ಪ್ರಜೆಗಳ ಮೇಲೆ ಬಲಾತ್ಕಾರವಿಲ್ಲವೋ ಆ ರಾಜನು ಸರಿಯಾಗಿ ಆಳುವ ರಾಜ. ಯಾವ ರಾಜನಿಗೂ- ಪ್ರಜೆಗಳಿಗೂ ಸಾಮರಸ್ಯದ ಸಂಬಂಧವಿದೆಯೋ ಅವನು ಸರಿಯಾದ ರಾಜ. ಯಾವ ರಾಜನು ಬಡವನೂ ಹಿತವಾಗಿ ಬದುಕಬೇಕೆಂದು ಬಯಸುವನೋ ಅವನು ಸರಿಯಾದ ರಾಜ.

ಭಾರ್ಯಾ ದೇಶೋऽಥ ಮಿತ್ರಾಣಿ ಪುತ್ರಸಂಬಂಧಿಬಾಂಧವಾಃ ।
ಏತತ್ ಸರ್ವಂ ಗುಣವತಿ ಧರ್ಮನೇತ್ರೇ ಮಹೀಪತೌ ॥೯೭॥

ರಾಜನು ಗುಣಸಂಪನ್ನನೂ ಧರ್ಮದೃಷ್ಟಿಯವನೂ ಆಗಿದ್ದರೆ ಹೆಂಡತಿ, ದೇಶ, ಮಿತ್ರರು, ಪುತ್ರರು, ಸಂಬಂಧಿಗಳು ಹಿತಕರರಾಗಿರುತ್ತಾರೆ.

ಅಧರ್ಮಜ್ಞಸ್ಯ ವಿಲಯಂ ಪ್ರಜಾ ಗಚ್ಛಂತ್ಯನಿಗ್ರಹಾತ್ ।
ರಾಜಾ ಮೂಲಂ ತ್ರಿವರ್ಗಸ್ಯ ಅಪ್ರಮತ್ತೋऽನುಪಾಲಯನ್ ॥೯೮॥

ಧರ್ಮದ ಪರಿಜ್ಞಾನವಿಲ್ಲದ ರಾಜನ ಪ್ರಜೆಗಳು, ಅಧರ್ಮದ ನಿಗ್ರಹವಾಗುವುದಿಲ್ಲವಾದ್ದರಿಂದ, ನಾಶವಾಗುತ್ತಾರೆ. ಸದಾ ಎಚ್ಚರದಿಂದ ಇರುತ್ತಾ ಅನುಶಾಸನವನ್ನು ಮಾಡುವ ರಾಜ ತ್ರಿವರ್ಗದ=ಧರ್ಮ-ಅರ್ಥ-ಕಾಮಗಳ ಮೂಲ.

ಬಲಿಷಡ್ಭಾಗಮುದ್ಧೃತ್ಯ ಬಲಿಂ ತಮುಪಯೋಜಯೇತ್ ।
ನ ರಕ್ಷತಿ ಪ್ರಜಾಃ ಸಮ್ಯಗ್ಯಃ ಸ ಪಾರ್ಥಿವತಸ್ಕರಃ ॥೯೯॥

(೧) ಪ್ರಜೆಗಳ ಆದಾಯದ ಆರನೇ ಒಂದು ಭಾಗವನ್ನು ತೆರಿಗೆಯಾಗಿ ಪಡೆದು ಆ ತೆರಿಗೆಯನ್ನು ಪ್ರಜಾಹಿತಕ್ಕಾಗಿ ಬಳಸಬೇಕು. (೨) ಪ್ರಜೆಗಳು ಕೊಡುವ ತೆರಿಗೆಯ ಆರನೆಯ ಒಂದು ಭಾಗವನ್ನು ರಾಜನು ತನಗಾಗಿ ಉಪಯೋಗಿಸಿಕೊಳ್ಳಬಹುದು. ಯಾರು ಪ್ರಜೆಗಳನ್ನು ಸರಿಯಾಗಿ ರಕ್ಷಿಸುವುದಿಲ್ಲವೋ ಅವನು ಕಳ್ಳರಾಜ.

ದತ್ತ್ವಾ ಭಯಂ ಯಃ ಸ್ವಯಮೇವ ರಾಜಾ ನ ತತ್ ಪ್ರಮಾಣಂ ಕುರುತೇ ಯಥಾವತ್ ।
ಸ ಸರ್ವಲೋಕಾದುಪಲಭ್ಯ ಪಾಪಮಧರ್ಮಬುದ್ಧಿರ್ನಿರಯಂ ಪ್ರಯಾತಿ ॥

ಯಾವ ರಾಜನು ಪ್ರಜೆಗಳಿಗೆ ಅಭಯವನ್ನು ಕೊಟ್ಟು, ಆ ವಚನವನ್ನು ಸರಿಯಾಗಿ ಪಾಲಿಸುವುದಿಲ್ಲವೋ ಆ ಅಧರ್ಮಬುದ್ಧಿಯ ರಾಜನು ಎಲ್ಲ ಜನರ ಪಾಪಕ್ಕೆ ಹೊಣೆಯಾಗುತ್ತಾನೆ. ಅವುಗಳ ಫಲವನ್ನು ಅನುಭವಿಸುವುದಕ್ಕಾಗಿ ನರಕಕ್ಕೆ ಹೋಗುತ್ತಾನೆ.

ದತ್ತ್ವಾ ಭಯಂ ಯಃ ಸ್ಮ ರಾಜಾ ಪ್ರಮಾಣಂ ಕುರುತೇ ಸದಾ ।
ಸ ಸರ್ವಸುಖಿಕೃಜ್ಜ್ಞೇಯಃ ಪ್ರಜಾ ಧರ್ಮೇಣ ಪಾಲಯನ್ ॥೧೦೧॥

ಯಾವ ರಾಜನು ಅಭಯವನ್ನು ಕೊಟ್ಟು, ಅದರಂತೆ ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಾನೋ ಅವನು ಎಲ್ಲ ಸುಖಗಳಿಗೆ ಪಾತ್ರ.

ಪಿತಾ ಮಾತಾ ಗುರುರ್ಗೋಪ್ತಾ ವಹ್ನಿರ್ವೈಶ್ರವಣೋ ಯಮಃ ।
ಸಪ್ತ ರಾಜ್ಞೋ ಗುಣಾನೇತಾನ್ ಮನುರಾಹ ಪ್ರಜಾಪತಿಃ ॥೧೦೨॥

ತಂದೆ, ತಾಯಿ, ಗುರು, ಅಗ್ನಿ, ಕುಬೇರ, ಯಮ - ಈ ಏಳು ಚೇತನಗಳ ಗುಣಗಳು ರಾಜನಿಗೆ ಇರಬೇಕು ಎಂದು ಸ್ವಾಯಂಭುವ ಮನುವು ಹೇಳಿದ್ದಾನೆ.

ಪಿತಾ ಹಿ ರಾಜಾ ರಾಷ್ಟ್ರಸ್ಯ ಪ್ರಜಾನಾಂ ಯೋಽನುಕಂಪಕಃ ।
ತಸ್ಮಿನ್ ಮಿಥ್ಯಾಪ್ರಣೀತೇ ಹಿ ತಿರ್ಯಗ್ಗಚ್ಛತಿ ಮಾನವಃ ॥೧೦೩॥

ರಾಜನು ರಾಷ್ಟ್ರದ ತಂದೆ. ಅವನು ಪ್ರಜೆಗಳ ಮೇಲೆ ಅನುಕಂಪವನ್ನು ಹೊಂದಿರಬೇಕು. ಅವನು (ರಾಜನು) ಅಸತ್ಯಮಾರ್ಗದಲ್ಲಿ ನಡೆದರೆ ಅಥವಾ (ಮಂತ್ರಿಗಳಿಂದ ಅಧಿಕಾರಿಗಳಿಂದ) ನಡೆಸಲ್ಪಟ್ಟರೆ ಪ್ರಜೆಗಳು ಅಡ್ಡದಾರಿಯಲ್ಲಿ ಹೋಗುತ್ತಾರೆ.

ಸಂಭಾವಯತಿ ಮಾತೇವ ದೀನಮಭ್ಯವಪದ್ಯತೇ ।
ದಹತ್ಯಗ್ನಿರಿವಾನಿಷ್ಟಾನ್ ಯಮಯನ್ ಭವತೇ ಯಮಃ ॥೧೦೪॥

ತಾಯಿಯಂತೆ ಉಪಚರಿಸಬೇಕು. ದೀನರನ್ನು ರಕ್ಷಿಸಬೇಕು. ಅಗ್ನಿಯಂತೆ ಅನಿಷ್ಟಗಳನ್ನು ಸುಡಬೇಕು. ನಿಯಂತ್ರಿಸುವ ಅವನು ಯಮ.

ಇಷ್ಟೇಷು ವಿಸೃಜತ್ಯರ್ಥಾನ್ ಕುಬೇರ ಇವ ಕಾಮದಃ ।
ಗುರುರ್ಧರ್ಮೋಪದೇಶೇನ ಗೋಪ್ತಾ ಚ ಪರಿಪಾಲನಾತ್ ॥೧೦೫॥

ಬಯಸಿದ್ದನ್ನು ಕೊಡುವ ಕುಬೇರನಂತೆ ರಾಜನು ಇಷ್ಟಜನರಿಗೆ ನಾನಾ ಸಂಪತ್ತನ್ನು ಕೊಡಬೇಕು. ಧರ್ಮವನ್ನು ಉಪದೇಶಿಸಿ ಗುರು ಆಗಬೇಕು. ಪರಿಪಾಲನೆ ಮಾಡಿ ಗೋಪ್ತಾ=ರಕ್ಷಕ ಆಗಬೇಕು.

ಯಸ್ತು ರಂಜಯತೇ ರಾಜಾ ಪೌರಜಾನಪದಾನ್ ಗುಣೈಃ ।
ನ ತಸ್ಯ ಭ್ರಶ್ಯತೇ ರಾಜ್ಯಂ ಗುಣಧರ್ಮಾನುಪಾಲನಾತ್ ॥೧೦೬॥

ಯಾವ ರಾಜನು ತನ್ನ ಗುಣಗಳಿಂದ ಪೌರರನ್ನೂ, ಜಾನಪದರನ್ನೂ ರಂಜಿಸುವನೋ ಅವನ ರಾಜ್ಯವು, ಗುಣ-ಧರ್ಮಗಳ ರಕ್ಷಣೆಯಿಂದಾಗಿ ಭ್ರಷ್ಟವಾಗುವುದಿಲ್ಲ. ಅವನೂ ರಾಜಪದವೀ ಭ್ರಷ್ಟನಾಗುವುದಿಲ್ಲ.

ಸ್ವಯಂ ಸಮುಪಜಾನನ್ಹಿ ಪೌರಜಾನಪದಕ್ರಿಯಾಃ ।
ಸ ಸುಖಂ ಮೋದತೇ ಭೂಪ ಇಹ ಲೋಕೇ ಪರತ್ರ ಚ ॥೧೦೭॥

ರಾಜನೇ! ಪುರವಾಸಿಗಳಿಗೆ, ಜನಪದ ವಾಸಿಗಳಿಗೆ ಆಗಬೇಕಾದ ಕೆಲಸಗಳನ್ನು ತಾನಾಗಿಯೇ ತಿಳಿದುಕೊಳ್ಳುವ ರಾಜನು ಈ ಲೋಕದಲ್ಲಿ, ಮತ್ತು ಪರಲೋಕದಲ್ಲಿ ಹರ್ಷದಿಂದ ಇರುತ್ತಾನೆ.

ನಿತ್ಯೋದ್ವಿಗ್ನಾಃ ಪ್ರಜಾ ಯಸ್ಯ ಕರಭಾರಪ್ರಪೀಡಿತಾಃ ।
ಅನರ್ಥೈರ್ವಿಪ್ರಲುಪ್ಯಂತೇ ಸ ಗಚ್ಛತಿ ಪರಾಭವಮ್ ॥೧೦೮॥

ಯಾವ ರಾಜನ ಪ್ರಜೆಗಳು ಯಾವಾಗಲೂ ಆತಂಕಕ್ಕೆ ಒಳಗಾಗಿರುತ್ತಾರೋ, ತೆರಿಗೆಯ ಭಾರದಿಂದ ನರಳುತ್ತಾರೋ, ಅನರ್ಥಗಳಿಗೆ ಸಿಕ್ಕಿ ನಷ್ಟರಾಗುತ್ತಾರೋ, ಆ ರಾಜನು ಪರಾಭವವನ್ನು ಹೊಂದುತ್ತಾನೆ.

ಪ್ರಜಾ ಯಸ್ಯ ವಿವರ್ಧಂತೇ ಸರಸೀವ ಮಹೋತ್ಪಲಮ್ ।
ಸ ಸರ್ವಯಜ್ಞಫಲಭಾಗ್ ರಾಜಾ ಲೋಕೇ ಮಹೀಯತೇ ॥೧೦೯॥

ಯಾರ ಪ್ರಜೆಗಳು, ಸರೋವರದಲ್ಲಿ ಕಮಲವು ಅರಳುವಂತೆ, ವೃದ್ಧಿಯನ್ನು ಹೊಂದುತ್ತಾರೋ, ಆ ರಾಜನು ಸಕಲ ಯಜ್ಞಗಳ ಫಲವನ್ನು ಹೊಂದುತ್ತಾನೆ. ಲೋಕದಲ್ಲಿ ಗೌರವಿಸಲ್ಪಡುತ್ತಾನೆ.

ಬಲಿನಾ ವಿಗ್ರಹೋ ರಾಜನ್ನ ಕಥಂಚಿತ್ ಪ್ರಶಸ್ಯತೇ ।
ಬಲಿನಾ ವಿಗೃಹೀತಸ್ಯ ಕುತೋ ರಾಜ್ಯಂ ಕುತಃ ಸುಖಮ್ ॥೧೧೦॥

ರಾಜನೇ! ಬಲಶಾಲಿಗಳ ಜೊತೆ ಕಲಹವು ಸರ್ವಥಾ ಒಳ್ಳೆಯದಲ್ಲ. ಇದನ್ನು ಪ್ರಾಜ್ಞರು ಒಪ್ಪುವುದಿಲ್ಲ. ಬಲಶಾಲಿಯ ಜೊತೆ ವಿರೋಧವನ್ನು ಕಟ್ಟಿಕೊಂಡವನಿಗೆ ರಾಜ್ಯವೂ ಇಲ್ಲ, ಸುಖವೂ ಇಲ್ಲ.

ಭೀಷ್ಮಃ

ಸೈವಮುಕ್ತ್ವಾ ಶಕುನಿಕಾ ಬ್ರಹ್ಮದತ್ತಂ ನರಾಧಿಪಮ್ ।
ರಾಜಾನಂ ಸಮನುಜ್ಞಾಪ್ಯ ಜಗಾಮಾಥೇಪ್ಸಿತಾಂ ದಿಶಮ್ ॥೧೧೧॥

ಆ ಹೆಣ್ಣುಹಕ್ಕಿಯು ರಾಜಾ ಬ್ರಹ್ಮದತ್ತನಿಗೆ ಹೀಗೆ ಹೇಳಿ, ಅವನ ಅನುಮತಿಯನ್ನು ಕೇಳಿ ತನಗೆ ಇಷ್ಟವಾದ ದಿಕ್ಕಿಗೆ ಹೊರಟು ಹೋಯಿತು.

ಏತತ್ತೇ ಬ್ರಹ್ಮದತ್ತಸ್ಯ ಪೂಜನ್ಯಾ ಸಹ ಭಾಷಿತಮ್ ।
ಮಯೋಕ್ತಂ ಭರತಶ್ರೇಷ್ಠ ಕಿಮನ್ಯಚ್ಛ್ರೋತುಮಿಚ್ಛಸಿ ॥೧೧೨॥

ಭರತಶ್ರೇಷ್ಠ! ನಿನಗೆ ಈ ಬ್ರಹ್ಮದತ್ತ-ಪೂಜನಿಯರ ಸಂಭಾಷಣೆಯನ್ನು ಹೇಳಿದ್ದೇನೆ. ಇನ್ನೇನನ್ನು ಕೇಳಲು ಬಯಸುವಿ?

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಒಂಬತ್ತನೆಯ ಅಧ್ಯಾಯವು ಮುಗಿಯಿತು.

★ ★ ★ ★

ಹತ್ತನೆಯ ಅಧ್ಯಾಯ

ಆಪತ್‌ಕಾಲದಲ್ಲಿ ರಾಜನು ನಿರ್ದಯನಾಗಿ ವರ್ತಿಸಬೇಕು. ಇದನ್ನು ಸಮರ್ಥಿಸುವ-ವಿವರಿಸುವ ಶತ್ರುಂತಪ-ಭರದ್ವಾಜ ಸಂವಾದ. ಈ ನೀತಿಯಲ್ಲಿರುವ ದೋಷ ಕಥನ. ಅನಿವಾರ್ಯವಾದಾಗ ಇದನ್ನು ಪ್ರಯೋಗಿಸಬೇಕು.

ಯುಧಿಷ್ಠಿರಃ

ಯುಗಕ್ಷಯಾತ್ ಪರಿಕ್ಷೀಣೇ ಧರ್ಮೇ ಲೋಕೇ ಚ ಭಾರತ ।
ದಸ್ಯುಭಿಃ ಪೀಡ್ಯಮಾನೇ ಚ ಕಥಂ ಸ್ಥೇಯಂ ಪಿತಾಮಹ ॥೧॥

ಭರತಕುಲಸಂಜಾತ! ಪಿತಾಮಹ! ಯುಗಕ್ಕೆ ಅನುಗುಣವಾದ ಅವನತಿಯಿಂದ ಧರ್ಮವು= ಜೀವನ ಮೌಲ್ಯವು ನಶಿಸಿದಾಗ, ಜನಗಳು ದಸ್ಯುಗಳಿಂದ (ಕೊಳ್ಳೆ ಹೊಡೆಯುವವರಿಂದ) ಪೀಡಿಸಲ್ಪಡುತ್ತಿರುವಾಗ ಹೇಗೆ ನಡೆದುಕೊಳ್ಳಬೇಕು?

ಭೀಷ್ಮಃ

ಹಂತ ತೇ ಕಥಯಿಷ್ಯಾಮಿ ನೀತಿಮಾಪತ್ಸು ಭಾರತ ।
ಉತ್ಸೃಜ್ಯಾಪಿ ಘೃಣಾಂ ಕಾಲೇ ಯಥಾ ವರ್ತೇತ ಭೂಮಿಪಃ ॥೨॥

ಭರತಕುಲಸಂಜಾತ! ಸಂತೋಷ. ಆಪತ್ಕಾಲದಲ್ಲಿ ಅನುಸರಿಸಬೇಕಾದ ನೀತಿಯನ್ನು ನಿನಗೆ ಹೇಳುತ್ತೇನೆ. ಅಂತಹ ಕಾಲದಲ್ಲಿ ರಾಜನು ದಯೆಯನ್ನು ಪರಿತ್ಯಜಿಸಿ ಹೇಗೆ ಇರಬೇಕೆಂದು ಈ ನೀತಿಯಿಂದ ತಿಳಿಯುತ್ತದೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಭರದ್ವಾಜಸ್ಯ ಸಂವಾದಂ ರಾಜ್ಞಃ ಶತ್ರುಂತಪಸ್ಯ ಚ ॥೩॥

ಈ ವಿಷಯದಲ್ಲಿ ಈ ಪುರಾತನ ಇತಿಹಾಸವನ್ನು ಹೇಳುತ್ತಾರೆ. ಈ ಇತಿಹಾಸವು ರಾಜಾ ಶತ್ರುಂತಪ ಮತ್ತು ಭರದ್ವಾಜನ ಸಂವಾದ.

ರಾಜಾ ಶತ್ರುಂತಪೋ ನಾಮ ಸೌವೀರಾಣಾಂ ಮಹಾರಥಃ ।
ಕಲಿಂಗಮುಪಸಂಗಮ್ಯ ಪಪ್ರಚ್ಛಾರ್ಥವಿನಿಶ್ಚಯಮ್ ॥೪॥

ಶತ್ರುಂತಪನು ಸೌವೀರದೇಶದ ರಾಜ. ಮಹಾರಥ. ಅವನು ಕಲಿಂಗ ದೇಶದಲ್ಲಿದ್ದ ಭರದ್ವಾಜನ ಬಳಿ ಹೋಗಿ, ನಾನಾ ಸೂಕ್ಷ್ಮ ವಿಷಯಗಳ ಬಗ್ಗೆ ಸ್ಪಷ್ಟಜ್ಞಾನವಿದ್ದ ಅವನನ್ನು ಕೇಳಿದನು.

ಅಲಬ್ಧಸ್ಯ ಕಥಂ ಲಿಪ್ಸಾ ಲಬ್ಧಂ ಕೇನ ವಿವರ್ಧತೇ ।
ವರ್ಧಿತಂ ಪಾಲಯೇತ್ಕೇನ ಪಾಲಿತಂ ಪ್ರಣಯೇತ್ ಕಥಮ್ ॥೫॥

ಇಲ್ಲದ ವಸ್ತುವನ್ನು ಪಡೆಯುವುದು ಹೇಗೆ? ಪಡೆದದ್ದನ್ನು ಹೆಚ್ಚಿಸುವ ಉಪಾಯವು ಯಾವುದು? ವೃದ್ಧಿಯಾದದ್ದನ್ನು ರಕ್ಷಿಸುವ ಉಪಾಯವು ಯಾವುದು? ರಕ್ಷಿತ ವಸ್ತುವನ್ನು ಹೇಗೆ ಬಳಸಬೇಕು?

ತಸ್ಯೈ ವಿನಿಶ್ಚಯಾರ್ಥಂ ಸ ಪರಿಪೃಷ್ಟಾರ್ಥನಿಶ್ಚಯಃ ।
ಉವಾಚ ಬ್ರಾಹ್ಮಣೋ ವಾಕ್ಯಮಿದಂ ಹೇತುಮದುತ್ತರಮ್ ॥೬॥

ರಾಜನು ಕೇಳಿದ ವಿಷಯಗಳ ಬಗ್ಗೆ ಸ್ಪಷ್ಟ ಜ್ಞಾನವಿದ್ದ ಬ್ರಾಹ್ಮಣ ಭರದ್ವಾಜನು ಅವನಿಗೆ ಯುಕ್ತಿಯುಕ್ತವಾದ ಉತ್ತರವನ್ನು ಹೇಳಿದನು.

ನಿತ್ಯಮುದ್ಯತದಂಡಃ ಸ್ಯಾನ್ನಿತ್ಯಂ ವಿವೃತಪೌರುಷಃ ।
ಅಚ್ಛಿದ್ರಶ್ಛಿದ್ರದರ್ಶೀ ಚ ಪರೇಷಾಂ ವಿವರಾನುಗಃ ॥೭॥

ಯಾವಾಗಲೂ ದಂಡವನ್ನು ಎತ್ತಿಯೇ ಇರಬೇಕು. ಪ್ರಹಾರಕ್ಕೆ ಸಿದ್ಧನಾಗಿರಬೇಕು. ಪೌರುಷದ ಅಭಿವ್ಯಕ್ತಿಯನ್ನು ಮಾಡುತ್ತಲೇ ಇರಬೇಕು. ತನ್ನಲ್ಲಿನ್ಯೂನತೆಗಳಿರಬಾರದು. ಎದುರಾಳಿಯ ನ್ಯೂನತೆಯನ್ನು ತಿಳಿಯುತ್ತಲೇ ಇರಬೆಕು. ಆ ನ್ಯೂನತೆಯನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಬೇಕು.

ನಿತ್ಯಮುದ್ಯತದಂಡಸ್ಯ ಭೃಶಮುದ್ವಿಜತೇ ಜನಃ ।
ತಸ್ಮಾತ್ ಸರ್ವಾಣಿ ಭೂತಾನಿ ದಂಡೇನೈವ ಪ್ರರೋಧಯೇತ್ ॥೮॥

ಯಾವಾಗಲೂ ಪ್ರಹಾರ ಮಾಡುವ ಮನಃಸ್ಥಿತಿಯಲ್ಲೇ ಇರುವ ರಾಜನ ಬಗ್ಗೆ ಜನರು ಹೆದರುತ್ತಾರೆ. ಆದ್ದರಿಂದ ಎಲ್ಲ ಪ್ರಾಣಿಗಳನ್ನೂ ದಂಡದಿಂದಲೇ ನಿರೋಧಿಸಬೇಕು.

ಏವಮೇವ ಪ್ರಶಂಸಂತಿ ಪಂಡಿತಾಸ್ತತ್ತ್ವದರ್ಶಿನಃ ।
ತಸ್ಮಾಚ್ಚತುಷ್ಟಯೇ ತಸ್ಮಿನ್ ಪ್ರಧಾನೋ ದಂಡ ಉಚ್ಯತೇ ॥೯॥

ತತ್ತ್ವದರ್ಶಿಗಳಾದ ಪಂಡಿತರು ಹೀಗೆಯೇ ಹೇಳುತ್ತಾರೆ. ಆದ್ದರಿಂದ ಸಾಮ-ದಾನ-ಭೇದ-ದಂಡಗಳಲ್ಲಿ ದಂಡವೇ ಪ್ರಧಾನ.

ಛಿನ್ನಮೂಲೇ ಹ್ಯಧಿಷ್ಠಾನೇ ಸರ್ವೇ ತಜ್ಜೀವಿನೋ ಹತಾಃ ।
ಕಥಂ ಹಿ ಶಾಖಾಸ್ತಿಷ್ಠೇಯುಶ್ಛಿನ್ನಮೂಲೇ ವನಸ್ಪತೌ ॥೧೦॥

ಆಧಾರವಾಗಿರುವ ಮೂಲವೇ ಕತ್ತರಿಸಿ ಹೋದಾಗ ಅದನ್ನು ಅವಲಂಬಿಸಿ ಬದುಕುವ ಎಲ್ಲರೂ ಹತರಾಗುತ್ತಾರೆ. ಮರದ ಬೇರು ಕತ್ತರಿಸಿ ಹೋದಾಗ ಕೊಂಬೆಗಳು ಹೇಗೆ ತಾನೆ ಇದ್ದಾವು?

ಮೂಲಮೇವಾದಿತಶ್ಛಿಂದ್ಯಾತ್ ಪರಪಕ್ಷಸ್ಯ ಪಂಡಿತಃ ।
ತತಃ ಸಹಾಯಾನ್ ಪಕ್ಷಂ ಚ ಸರ್ವಮೇವಾನುಸಾರಯೇತ್ ॥೧೧॥

ಪ್ರಾಜ್ಞನಾದವನು ಶತ್ರುಪಕ್ಷದ ಬೇರನ್ನೇ ಮೊದಲು ಕತ್ತರಿಸಬೇಕು. ಅನಂತರ ಸಹಾಯಕರ ಮೇಲೆ ಮತ್ತು ಆ ಇಡೀ ಪಕ್ಷದ ಮೇಲೆ ಆಕ್ರಮಣ ಮಾಡಿಸಬೇಕು.

ಸುಮಂತ್ರಿತಂ ಸುವಿಕ್ರಾಂತಂ ಸುಯುದ್ಧಂ ಸುಪಲಾಯಿತಮ್ ।
ಆಪದಾಂ ಪದಕಾಲೇಷು ಕುರ್ವೀತ ನ ವಿಚಾರಯೇತ್ ॥೧೨॥

ಆಪತ್ತುಗಳು ಹೆಜ್ಜೆಯಿಟ್ಟಾಗ ಸರಿಯಾಗಿ ಸಮಾಲೋಚನೆಯನ್ನು ಮಾಡಬೇಕು. ಪರಾಕ್ರಮಿಸಬೇಕು. ಸರಿಯಾಗಿ ಯುದ್ಧವನ್ನು ಮಾಡಬೇಕು. ಚತುರತೆಯಿಂದ ಪಲಾಯನವನ್ನೂ ಮಾಡಬೇಕು. ಎಲ್ಲವನ್ನೂ ಶೀಘ್ರವಾಗಿ ಮಾಡಬೇಕು. ಸಂಶಯಕ್ಕೆ ಒಳಗಾಗಬಾರದು.

ವಾಙ್ಮಾತ್ರೇಣ ವಿನೀತಃ ಸ್ಯಾದ್ಧೃದಯೇನ ಯಥಾ ಕ್ಷುರಃ ।
ಶ್ಲಕ್ಷ್ಣಪೂರ್ವಾಭಿಭಾಷೀ ಚ ಕಾಮಕ್ರೋಧೌ ವಿವರ್ಜಯೇತ್ ॥೧೩॥

ಮಾತಿನಲ್ಲಿ ಮಾತ್ರ ವಿನೀತನಾಗಿರಬೇಕು. ಹೃದಯವು ಕತ್ತಿಯಂತೆ ಹರಿತವಾಗಿರಬೇಕು. ಮಂದಹಾಸ ಪೂರ್ವಕವಾಗಿ, ಮಧುರವಾಗಿ ಮಾತನಾಡಬೇಕು. ಕಾಮ-ಕ್ರೋಧಗಳನ್ನು ಬಿಡಬೇಕು..

ಸಪತ್ನಸಹಿತೇ ಕಾರ್ಯೇ ಕೃತ್ವಾ ಸಂಧಿಂ ನ ವಿಶ್ವಸೇತ್ ।
ಅಪಕ್ರಾಮೇತ್ತತಃ ಕ್ಷಿಪ್ರಂ ಕೃತಕಾರ್ಯೋ ವಿಚಕ್ಷಣಃ ॥೧೪॥

ಶತ್ರುವಿನ ಜೊತೆಗೇ ಮಾಡಬೇಕಾದ ಕೆಲಸವಿದ್ದರೆ ಸಂಧಿಯನ್ನು ಮಾಡಿಕೊಳ್ಳಬೇಕು. ಆದರೆ ವಿಶ್ವಾಸವಿಡಬಾರದು. ಕೆಲಸವು ಆದ ಕೂಡಲೇ ಸರಿಯಾದ ವಿಮರ್ಶೆಯಿಂದ ಕೂಡಲೇ ಅವನಿಂದ ದೂರಹೋಗಬೇಕು.

ಶತ್ರುಮಿತ್ರೇ ಚ ಪೂರ್ವೇಣ ಸಾಂತ್ವೇನೈವಾಭಿಸಾಂತ್ವಯೇತ್ ।
ನಿತ್ಯಶಶ್ಚೋದ್ವಿಜೇತ್ತಸ್ಮಾತ್ ಸರ್ಪಾದ್ವೇಶ್ಮಗತಾದಿವ ॥೧೫॥

ಶತ್ರುವಾಗಿರುವ ಮಿತ್ರನನ್ನು (ಮಿತ್ರರೂಪದಿಂದ ಇರುವ ಶತ್ರುವನ್ನು) ಮೊದಲನೆಯ ಸಾಮೋಪಾಯದಿಂದ ಶಾಂತನನ್ನಾಗಿಸಬೇಕು. ಅವನಿಂದ ತನಗೆ ತೊಂದರೆಯನ್ನು ನಿರೀಕ್ಷಿಸುತ್ತಲೇ ಇರಬೇಕು. ಮನೆಯಲ್ಲಿರುವ ಸರ್ಪದಿಂದ ನಿರಂತರ ಆತಂಕಕ್ಕೆ ಒಳಗಾಗುವಂತೆ.

ಯಸ್ಯ ಬುದ್ಧಿಃ ಪರಿಭವೇತ್ ತಮತೀತೇನ ಸಾಂತ್ವಯೇತ್ ।
ಅನಾಗತೇನ ದುಷ್ಪಜ್ಞಂ ಪ್ರತ್ಯುತ್ಪನ್ನೇನ ಪಂಡಿತಮ್ ॥೧೬॥

ಯಾರ ಬುದ್ಧಿಯು ಸೋಲುವುದೋ ಅವನಿಗೆ ಹಿಂದೆ ನಡೆದುಹೋದ ಘಟನೆಗಳನ್ನು (ಶ್ರೀರಾಮಚಂದ್ರ, ನಳ ಮೊದಲಾದವರ) ಹೇಳಿ ಸಮಾಧಾನ ಪಡಿಸಬೇಕು. ದುರಾಲೋಚನೆಯ ವ್ಯಕ್ತಿಯನ್ನು ಮುಂದಾಗುವ ಅನರ್ಥವನ್ನು ಹೇಳಿ ಎಚ್ಚರಿಸಬೇಕು. ಪಂಡಿತನನ್ನು ತತ್ಕಾಲದಲ್ಲಿ ಒದಗುವ ಸಾಧನಗಳಿಂದ (ಧನ, ಭೋಜನಾದಿಗಳಿಂದ) ಸಮಾಧಾನ ಪಡಿಸಬೇಕು.

ಅಂಜಲಿಂ ಶಪಥಂ ಸಾಂತ್ವಂ ಪ್ರಣಮ್ಯ ಶಿರಸಾ ವದೇತ್ ।
ಅಶ್ರುಪ್ರಪಾತನಂ ಚೈವ ಕರ್ತವ್ಯಂ ಭೂತಿಮಿಚ್ಛತಾ ॥೧೭॥

ಶ್ರೇಯಸ್ಸು-ಸಮೃದ್ಧಿಗಳನ್ನು ಬಯಸುವವನು ಅವಶ್ಯಕತೆಗೆ ಅನುಗುಣವಾಗಿ ಶತ್ರುವಿಗೆ ಕೈಮುಗಿಯಬೇಕು, ಶಪಥ ಮಾಡಬೇಕು. ಸಮಾಧಾನದಿಂದ ವರ್ತಿಸಬೇಕು, ತಲೆಬಾಗಿಸಿ ನಮಸ್ಕರಿಸಿ ಮಾತನಾಡಬೇಕು, ಕಣ್ಣೀರನ್ನು ಹರಿಸಬೇಕು.

ವಹೇದಮಿತ್ರಂ ಸ್ಕಂಧೇನ ಯಾವದರ್ಥಸ್ಯ ಬಂಧನಮ್ ।
ಅಥೈನಮಾಗತೇ ಕಾಲೇ ಭಿಂದ್ಯಾದ್ಘಟಮಿವಾಶ್ಮನಿ ॥೧೮॥

ಪ್ರಯೋಜನವಾಗುವ ಸಂಬಂಧವು ಇರುವವರೆಗೆ (ಕಾಲವು ತನಗೆ ಅನುಕೂಲವಾಗಿ ತಿರುಗುವವರೆಗೆ) ಶತ್ರುವನ್ನು ಹೆಗಲ ಮೇಲೆ ಹೊರಬೇಕು. ಕಾಲವು ಬಂದಾಗ ಮಡಕೆಯನ್ನು ಕಲ್ಲಿನ ಮೇಲೆ ಚಚ್ಚುವಂತೆ ಚಚ್ಚಿಬಿಡಬೇಕು.

ಛಿನ್ನಮೂಲೇ ಹ್ಯಧಿಷ್ಠಾನೇ ಸರ್ವೇ ತಜ್ಜೀವಿನೋ ಹತಾಃ ।
ಕಥಂ ಹಿ ಶಾಖಾಸ್ತಿಷ್ಠೇಯುಶ್ಛಿನ್ನಮೂಲೇ ವನಸ್ಪತೌ ॥೧೦॥

ಆಧಾರವಾಗಿರುವ ಮೂಲವೇ ಕತ್ತರಿಸಿ ಹೋದಾಗ ಅದನ್ನು ಅವಲಂಬಿಸಿ ಬದುಕುವ ಎಲ್ಲರೂ ಹತರಾಗುತ್ತಾರೆ. ಮರದ ಬೇರು ಕತ್ತರಿಸಿ ಹೋದಾಗ ಕೊಂಬೆಗಳು ಹೇಗೆ ತಾನೆ ಇದ್ದಾವು?

ಮೂಲಮೇವಾದಿತಶ್ಛಿಂದ್ಯಾತ್ ಪರಪಕ್ಷಸ್ಯ ಪಂಡಿತಃ ।
ತತಃ ಸಹಾಯಾನ್ ಪಕ್ಷಂ ಚ ಸರ್ವಮೇವಾನುಸಾರಯೇತ್ ॥೧೧॥

ಪ್ರಾಜ್ಞನಾದವನು ಶತ್ರುಪಕ್ಷದ ಬೇರನ್ನೇ ಮೊದಲು ಕತ್ತರಿಸಬೇಕು. ಅನಂತರ ಸಹಾಯಕರ ಮೇಲೆ ಮತ್ತು ಆ ಇಡೀ ಪಕ್ಷದ ಮೇಲೆ ಆಕ್ರಮಣ ಮಾಡಿಸಬೇಕು.

ಸುಮಂತ್ರಿತಂ ಸುವಿಕ್ರಾಂತಂ ಸುಯುದ್ಧಂ ಸುಪಲಾಯಿತಮ್ ।
ಆಪದಾಂ ಪದಕಾಲೇಷು ಕುರ್ಯಾತ ನ ವಿಚಾರಯೇತ್ ॥೧೨॥

ಆಪತ್ತುಗಳು ಹೆಜ್ಜೆಯಿಟ್ಟಾಗ ಸರಿಯಾಗಿ ಸಮಾಲೋಚನೆಯನ್ನು ಮಾಡಬೇಕು. ಪರಾಕ್ರಮಿಸಬೇಕು. ಸರಿಯಾಗಿ ಯುದ್ಧವನ್ನು ಮಾಡಬೇಕು. ಚತುರತೆಯಿಂದ ಪಲಾಯನವನ್ನೂ ಮಾಡಬೇಕು. ಎಲ್ಲವನ್ನೂ ಶೀಘ್ರವಾಗಿ ಮಾಡಬೇಕು. ಸಂಶಯಕ್ಕೆ ಒಳಗಾಗಬಾರದು.

ವಾಙ್‌ಮಾತ್ರೇಣ ವಿನೀತಃ ಸ್ಯಾದ್ಧೃದಯೇನ ಯಥಾ ಕ್ಷುರಃ ।
ಶ್ಲಕ್ಷ್ಣಪೂರ್ವಾಭಿಭಾಷೀ ಚ ಕಾಮಕ್ರೋಧೌ ವಿವರ್ಜಯೇತ್ ॥೧೩॥

ಮಾತಿನಲ್ಲಿ ಮಾತ್ರ ವಿನೀತನಾಗಿರಬೇಕು. ಹೃದಯವು ಕತ್ತಿಯಂತೆ ಹರಿತವಾಗಿರಬೇಕು. ಮಂದಹಾಸ ಪೂರ್ವಕವಾಗಿ, ಮಧುರವಾಗಿ ಮಾತನಾಡಬೇಕು. ಕಾಮ-ಕ್ರೋಧಗಳನ್ನು ಬಿಡಬೇಕು..

ಸಪತ್ನಸಹಿತೇ ಕಾರ್ಯೇ ಕೃತ್ವಾ ಸಂಧಿಂ ನ ವಿಶ್ವಸೇತ್ ।
ಅಪಕ್ರಾಮೇತ್ತತಃ ಕ್ಷಿಪ್ರಂ ಕೃತಕಾರ್ಯೋ ವಿಚಕ್ಷಣಃ ॥೧೪॥

ಶತ್ರುವಿನ ಜೊತೆಗೇ ಮಾಡಬೇಕಾದ ಕೆಲಸವಿದ್ದರೆ ಸಂಧಿಯನ್ನು ಮಾಡಿಕೊಳ್ಳಬೇಕು. ಆದರೆ ವಿಶ್ವಾಸವಿಡಬಾರದು. ಕೆಲಸವು ಆದ ಕೂಡಲೇ ಸರಿಯಾದ ವಿಮರ್ಶೆಯಿಂದ ಕೂಡಲೇ ಅವನಿಂದ ದೂರಹೋಗಬೇಕು.

ಶತ್ರುಮಿತ್ರೇ ಚ ಪೂರ್ವೇಣ ಸಾಂತ್ವೇನೈವಾಭಿಸಾಂತ್ವಯೇತ್ ।
ನಿತ್ಯಶಶ್ಚೋದ್ವಿಜೇತ್ತಸ್ಮಾತ್ ಸರ್ಪಾದ್ವೇಶ್ಮಗತಾದಿವ ॥೧೫॥

ಶತ್ರುವಾಗಿರುವ ಮಿತ್ರನನ್ನು (ಮಿತ್ರರೂಪದಿಂದ ಇರುವ ಶತ್ರುವನ್ನು) ಮೊದಲನೆಯ ಸಾಮೋಪಾಯದಿಂದ ಶಾಂತನನ್ನಾಗಿಸಬೇಕು. ಅವನಿಂದ ತನಗೆ ತೊಂದರೆಯನ್ನು ನಿರೀಕ್ಷಿಸುತ್ತಲೇ ಇರಬೇಕು. ಮನೆಯಲ್ಲಿರುವ ಸರ್ಪದಿಂದ ನಿರಂತರ ಆತಂಕಕ್ಕೆ ಒಳಗಾಗುವಂತೆ.

ಯಸ್ಯ ಬುದ್ಧಿಃ ಪರಿಭವೇತ್ ತಮತೀತೇನ ಸಾಂತ್ವಯೇತ್ ।
ಅನಾಗತೇನ ದುಷ್ಪಜ್ಞಂ ಪ್ರತ್ಯುತ್ಪನ್ನೇನ ಪಂಡಿತಮ್ ॥೧೬॥

ಯಾರ ಬುದ್ಧಿಯು ಸೋಲುವುದೋ ಅವನಿಗೆ ಹಿಂದೆ ನಡೆದುಹೋದ ಘಟನೆಗಳನ್ನು (ಶ್ರೀರಾಮಚಂದ್ರ, ನಳ ಮೊದಲಾದವರ) ಹೇಳಿ ಸಮಾಧಾನ ಪಡಿಸಬೇಕು. ದುರಾಲೋಚನೆಯ ವ್ಯಕ್ತಿಯನ್ನು ಮುಂದಾಗುವ ಅನರ್ಥವನ್ನು ಹೇಳಿ ಎಚ್ಚರಿಸಬೇಕು. ಪಂಡಿತನನ್ನು ತತ್ಕಾಲದಲ್ಲಿ ಒದಗುವ ಸಾಧನಗಳಿಂದ (ಧನ, ಭೋಜನಾದಿಗಳಿಂದ) ಸಮಾಧಾನ ಪಡಿಸಬೇಕು.

ಅಂಜಲಿಂ ಶಪಥಂ ಸಾಂತ್ವಂ ಪ್ರಣಮ್ಯ ಶಿರಸಾ ವದೇತ್ ।
ಅಶ್ರುಪ್ರಪಾತನಂ ಚೈವ ಕರ್ತವ್ಯಂ ಭೂತಿಮಿಚ್ಛತಾ ॥೧೭॥

ಶ್ರೇಯಸ್ಸು-ಸಮೃದ್ಧಿಗಳನ್ನು ಬಯಸುವವನು ಅವಶ್ಯಕತೆಗೆ ಅನುಗುಣವಾಗಿ ಶತ್ರುವಿಗೆ ಕೈಮುಗಿಯಬೇಕು, ಶಪಥ ಮಾಡಬೇಕು. ಸಮಾಧಾನದಿಂದ ವರ್ತಿಸಬೇಕು, ತಲೆಬಾಗಿಸಿ ನಮಸ್ಕರಿಸಿ ಮಾತನಾಡಬೇಕು, ಕಣ್ಣೀರನ್ನು ಹರಿಸಬೇಕು.

ವಹೇದಮಿತ್ರಂ ಸ್ಕಂಧೇನ ಯಾವದರ್ಥಸ್ಯ ಬಂಧನಮ್ ।
ಅಥೈನಮಾಗತೇ ಕಾಲೇ ಭಿಂದ್ಯಾದ್ಘಟಮಿವಾಶ್ಮನಿ ॥೧೮॥

ಪ್ರಯೋಜನವಾಗುವ ಸಂಬಂಧವು ಇರುವವರೆಗೆ (ಕಾಲವು ತನಗೆ ಅನುಕೂಲವಾಗಿ ತಿರುಗುವವರೆಗೆ) ಶತ್ರುವನ್ನು ಹೆಗಲ ಮೇಲೆ ಹೊರಬೇಕು. ಕಾಲವು ಬಂದಾಗ ಮಡಕೆಯನ್ನು ಕಲ್ಲಿನ ಮೇಲೆ ಚಚ್ಚುವಂತೆ ಚಚ್ಚಿಬಿಡಬೇಕು.

ಮುಹೂರ್ತಮಪಿ ರಾಜೇಂದ್ರ ತಿನ್ದುಕಾಲಾತವಜ್ಜ್ವಲೇತ್ ।
ಮಾನುಷಾಗ್ನಿರಿವಾನರ್ಚಿರ್ಧೂಮಾಯೇತ ನರಶ್ಚಿರಮ್ ॥೧೯॥

ರಾಜೇಂದ್ರ! ನರನು ಸ್ವಲ್ಪವೇ ಕಾಲ ತುಂಬೆ ಗಿಡದ ಕೊಳ್ಳಿಯಂತೆ ಉರಿಯಬೇಕು. ಮನುಷ್ಯರಿಂದ ಹೊತ್ತಿಸಲ್ಪಟ್ಟ ಜ್ವಾಲೆಯಿಲ್ಲದ ಅಗ್ನಿಯಂತೆ ಬಹಳಕಾಲ ಹೊಗೆ ಮಾಡಬೇಕು.

ನಾನಾರ್ಥಿಕೋಽರ್ಥಸಂಬಂಧಂ ಕೃತಘ್ನೇ ನ ಸಮಾಚರೇತ್ ।
ಕಾರ್ಯಾರ್ಥೀ ಶಕ್ಯತೇ ಯೋಕ್ತುಂ ಕೃತಕಾರ್ಯೋಽಭಿಮನ್ಯತಿ ।
ತಸ್ಮಾತ್ ಸರ್ವಾಣಿ ಕಾರ್ಯಾಣಿ ಸಾವಶೇಷಾಣಿ ಕಾರಯೇತ್ ॥೨೦॥

ನಾನಾ ಪ್ರಯೋಜನಗಳನ್ನು ಸಾಧಿಸುವ ಗುರಿ ಇರುವವನು ಕೃತಘ್ನನ ಜೊತೆ ಅರ್ಥ ಸಂಬಂಧವನ್ನು= ಗುರಿಸಾಧನೆಗಾಗಿ ಸಂಬಂಧವನ್ನು ಮಾಡಿಕೊಳ್ಳಬಾರದು. ತನ್ನ ಕೆಲಸವನ್ನು ಮಾಡಿಸಿಕೊಳ್ಳಲು ಬಯಸುವವನಿಗೆ (ಕೆಲಸವನ್ನು ಮಾಡಿಕೊಡುವವನು) ಕೆಲಸಗಳನ್ನು ವಹಿಸಬಹುದು. ತನ್ನ ಕೆಲಸವು ಪೂರ್ಣವಾಗಿ ಆದನಂತರ (ಕೆಲಸ ಮಾಡಿಸಿಕೊಂಡವನು) ಅವಜ್ಞೆಯಿಂದ ವರ್ತಿಸುತ್ತಾನೆ. ಆದ್ದರಿಂದ ಎಲ್ಲ ಕಾರ್ಯಗಳನ್ನು ಅಪೂರ್ಣವಾಗಿಯೇ ಮಾಡಿಕೊಡಬೇಕು.

ಕೋಕಿಲಸ್ಯ ವರಾಹಸ್ಯ ಮೇರೋಃ ಶೂನ್ಯಸ್ಯ ವೇಶ್ಮನಃ ।
ವ್ಯಾಲಸ್ಯ ಭಕ್ತಚಿತ್ತಸ್ಯ ಯಚ್ಛ್ರೇಯಸ್ತತ್ ಸಮಾಚರೇತ್ ॥೨೧॥

ಕೋಗಿಲೆಯ, ಹಂದಿಯ, ಟಗರುಗಳ, ಖಾಲಿಮನೆಯ, ಸರ್ಪದ, ಭಿತ್ತಿಚಿತ್ರದ - ಒಳ್ಳೆಯ ಗುಣಗಳನ್ನು ಅನುಸರಿಸಬೇಕು. (ಪಾಠಾಂತರ : ಕೋಗಿಲೆಯ, ಹಂದಿಯ, ಮೇರುಪರ್ವತದ ಖಾಲಿ ಮನೆಯ, ಸರ್ಪದ, ಪ್ರೀತಿ ತೋರುವ ಮಿತ್ರನ- ಒಳ್ಳೆಯ ಅಂಶಗಳನ್ನು ರೂಢಿಸಿಕೊಳ್ಳಬೇಕು).

(೧) ಕೋಗಿಲೆಯು ತನ್ನ ಮರಿಗಳನ್ನು ತಾನು ಪೋಷಿಸುವುದಿಲ್ಲ. ಬೇರೆ ಹಕ್ಕಿಗಳ ಗೂಡಿನಲ್ಲಿ ಇಟ್ಟು ಅವುಗಳಿಂದ ಪೋಷಣೆ ಮಾಡಿಸುತ್ತದೆ. ಇದು ಬೇರೆಯವರಿಂದ ತನ ಕಾರ್ಯವನ್ನು ಸಾಧಿಸುವುದಕ್ಕೆ ನಿದರ್ಶನ.

(೨) ಹಂದಿಯಲ್ಲಿ ಭೂಮಿಯಲ್ಲಿ ಆಳದಲ್ಲಿರುವ ಗೆಡ್ಡೆ-ಗೆಣಸುಗಳನು ಕಿತ್ತು ತಿನ್ನುವ ಸ್ವಭಾವವಿದೆ.

(೩) ಟಗರುಗಳು ತಮ್ಮ ಶತ್ರುವಿನ ತಲೆಯನ್ನೇ ಚಚ್ಚುತ್ತವೆ. ಮೇರುಪರ್ವತದಲ್ಲಿ ಔನ್ನತ್ಯ, ಅಚಲತ್ವ, ಅನುಲ್ಲಂಘನೀಯತ್ವ ಮೊದಲಾದ ಗುಣಗಳಿವೆ.

(೪) ಖಾಲಿ ಮನೆ= ಧರ್ಮಶಾಲಾ. ಸರ್ವರೂ ಅದರ ಉಪಯೋಗವನ್ನು ಪಡೆಯಬಹುದು. ಅಂತೆಯೇ ರಾಜನು ಸರ್ವೋಪಕಾರಿಯಾಗಿರಬೇಕು.

(೫) ಸರ್ಪವು ತಾನು ನಿರ್ಮಿಸದ ಹುತ್ತದಲ್ಲಿ ಪ್ರವೇಶಿಸಿ ವಾಸಿಸುತ್ತದೆ.

(೬) ಭಿತ್ತಿಚಿತ್ರವು ಕಣ್ಣಿಗೆ ಪ್ರಿಯ. ಭಕ್ತನ ಚಿತ್ತದಲ್ಲಿ ಪ್ರೀತಿಯು ತುಂಬಿರುತ್ತದೆ.

ಉತ್ಥಾಯೋತ್ಥಾಯ ಗಚ್ಛೇಚ್ಚ ನಿತ್ಯಯುಕ್ತೋ ರಿಪೋರ್ಗೃಹಾನ್ ।
ಕುಶಲಂ ಚಾಪಿ ಪೃಚ್ಛೇತ ಯದ್ಯಪ್ಯಕುಶಲಂ ಭವೇತ್ ॥೨೨॥

ಸದಾ ಉಪಾಯವಂತನಾಗಿದ್ದು ಬಹಳ ಎಚ್ಚರದಿಂದ ಶತ್ರುವಿನ ಮನೆಗೆ ಹೋಗಬೇಕು. ಕೆಡುಕಾಗಲಿ ಎಂಬ ಭಾವವಿದ್ದರೂ ಕುಶಲವನ್ನೇ ವಿಚಾರಿಸಬೇಕು.

ನಾಲಸಾಃ ಪ್ರಾಪ್ನುವಂತ್ಯರ್ಥಾನ್ನ ಕ್ಲೀಬಾ ನ ಚ ಮಾನಿನಃ ।
ನ ಚ ಲೋಕರವಾದ್ಭೀತಾ ನ ಚ ಶಶ್ವತ್ ಪ್ರತೀಕ್ಷಿಣಃ ॥೨೩॥

ಸೋಮಾರಿಗಳು, ಹೇಡಿಗಳು, ದುರಭಿಮಾನಿಗಳು, ಜನರ ಮಾತಿಗೆ ಹೆದರುವವರು, ಒಳ್ಳೆಯ ಕಾಲದ ನಿರೀಕ್ಷೆಯಲ್ಲಿ ಕಾಲ ಕಳೆಯುವವರು ಸಂಪತ್ತನ್ನು ಗಳಿಸಲಾರರು.

ನಾಸ್ಯ ಛಿದ್ರಂ ಪರೋ ವಿದ್ಯಾದ್ ವಿದ್ಯಾಚ್ಛಿದ್ರಂ ಪರಸ್ಯ ತು ।
ಗೂಹೇತ್ ಕೂರ್ಮ ಇವಾಂಗಾನಿ ರಕ್ಷೇದ್ ವಿವರಮಾತ್ಮನಃ ॥೨೪॥

ತನ್ನ ಕೊರತೆಗಳನ್ನು ಶತ್ರುಗಳು ಅರಿಯಬಾರದು. ತಾನು ಶತ್ರುವಿನ ಕೊರತೆಗಳನ್ನು ತಿಳಿಯಬೇಕು. ಆಮೆಯು ತನ್ನ ಅಂಗಗಳನ್ನು ಅಡಗಿಸಿಕೊಳ್ಳುವಂತೆ ತನ್ನ ನ್ಯೂನತೆಗಳನ್ನು ಇತರರು ತಿಳಿಯದಂತೆ ಅಡಗಿಸಿಕೊಳ್ಳಬೇಕು.

ಬಕವಚ್ಚಿಂತಯೇದರ್ಥಾನ್ ಸಿಂಹವಚ್ಚ ಪರಾಕ್ರಮೇತ್ ।
ವೃಕವಚ್ಚಾವಲುಮ್ಪೇತ ಶಶವಚ್ಚ ವಿನಿಷ್ಪತೇತ್ ॥೨೫॥

ಅರ್ಥಗಳ= ಸಾಧಿಸಬೇಕಾದ ಕಾರ್ಯಗಳ ಬಗ್ಗೆ ಬಕದಂತೆ ಚಿಂತಿಸಬೇಕು. (ಬಕದ ಏಕಾಗ್ರತೆಯು ಸುಪ್ರಸಿದ್ಧ). ಸಿಂಹದಂತೆ ಪರಾಕ್ರಮಿಸಬೇಕು. ತೋಳದಂತೆ ಲೂಟಿ ಮಾಡಬೇಕು. ಮೊಲದಂತೆ ಜಿಗಿಯಬೇಕು.

ಪಾನಮಕ್ಷಾಸ್ತಥಾ ನಾರ್ಯೋ ಮೃಗಯಾ ಗೀತವಾದಿತಮ್ ।
ಏತಾನಿ ಯುಕ್ತ್ಯಾ ಸೇವೇತ ಪ್ರಸಂಗೋ ಹ್ಯತ್ರ ದೋಷವಾನ್ ॥೨೬॥

ಸುರಾಪಾನ, ದ್ಯೂತ, ಸ್ತ್ರೀಯರು, ಬೇಟೆ, ಗಾಯನ, ವಾದ್ಯ - ಇವುಗಳನ್ನು ಕೌಶಲದಿಂದ ಮತ್ತು ಎಚ್ಚರದಿಂದ ಸೇವಿಸಬೇಕು. ಅತ್ಯಾಸಕ್ತಿಯು ಹಾನಿಕರ.

ಕುರ್ಯಾತ್ ತೃಣಮಯಂ ಚಾಪಂ ಶಯೀತ ಮೃಗಶಾಯಿಕಾಮ್ ।
ಅಂಧಃ ಸ್ಯಾದಂಧವೇಲಾಯಾಂ ಬಾಧಿರ್ಯಮಪಿ ಸಂಶ್ರಯೇತ್ ॥೨೭॥

ಬಿಲ್ಲನ್ನು ತೃಣಮಯವಾಗಿ ಮಾಡಬೇಕು (ಹುಲ್ಲಿನ ಕಂತೆಯಂತೆ ಕಾಣಿಸುವಂತೆ ಮಾಡಬೇಕು). ಜಿಂಕೆಯು ಮಲಗುವಂತೆ ಮಲಗಬೇಕು. (ಯಾವಾಗಲೂ ಎಚ್ಚರದಿಂದ ಇರಬೇಕು) ಅಂಧನಂತೆ ಇರಬೇಕಾದ ಅವಶ್ಯಕತೆ ಇದ್ದಾಗ ಅಂಧನಾಗಿರಬೇಕು. ಕಿವುಡನಂತೆ ಇರಬೇಕಾದ ಅವಶ್ಯಕತೆ ಇದ್ದಾಗ ಕಿವುಡಾಗಿರಬೇಕು.

ದೇಶಂ ಕಾಲಂ ಸಮಾಸಾದ್ಯ ವಿಕ್ರಮೇತ ವಿಚಕ್ಷಣಃ ।
ದೇಶಕಾಲಾಭ್ಯತೀತೋ ಹಿ ವಿಕ್ರಮೋ ನಿಷ್ಫಲೋ ಭವೇತ್ ॥೨೮॥

ವಿವೇಚನಶೀಲನು ತನಗೆ ಅನುಕೂಲವಾದ ದೇಶ-ಕಾಲಗಳನ್ನು ಒದಗಿಸಿಕೊಂಡು ಅಥವಾ ಅವುಗಳು ಒದಗಿ ಬಂದಾಗ ಪರಾಕ್ರಮಿಸಬೇಕು. ದೇಶ-ಕಾಲಗಳನ್ನು ಮೀರಿದ ಪರಾಕ್ರಮವು ಫಲಪ್ರದವಲ್ಲ.

ಕಾಲಾಕಾಲೌ ಸಂಪ್ರಧಾರ್ಯ ಬಲಾಬಲಮಥಾತ್ಮನಃ ।
ಪರಸ್ಪರಬಲಂ ಜ್ಞಾತ್ವಾ ತಥಾತ್ವಂ ವಿನಿಯೋಜಯೇತ್ ॥೨೯॥

ಕಾಲ-ಅಕಾಲಗಳನ್ನು, ತನ್ನ ಬಲ-ದೌರ್ಬಲ್ಯಗಳನು, ಪರಸ್ಪರರ ಬಲವನ್ನೂ ಅರಿತು ಅದಕ್ಕೆ ತಕ್ಕಂತೆ ಕಾರ್ಯದಲ್ಲಿ ತೊಡಗಬೇಕು.

ದಂಡೇನೋಪನತಂ ಶತ್ರುಂ ಯೋ ರಾಜಾ ನ ನಿಯಚ್ಛತಿ ।
ಸ ಮೃತ್ಯುಮುಪಗೂಹ್ಯಾಸ್ತೇ ಗರ್ಭಮಶ್ವತರೀ ಯಥಾ ॥೩೦॥

ಸೋತು ಶರಣಾಗತನಾದ ಶತ್ರುವನ್ನು ಯಾರು ದಂಡಪ್ರಯೋಗದಿಂದ ನಿಯಂತ್ರಿಸುವುದಿಲ್ಲವೋ, ಅವನು ಮೃತ್ಯುವನ್ನು ತಬ್ಬಿಕೊಂಡೇ ಇರುತ್ತಾನೆ. ಹೆಸರಗತ್ತೆಯು ಗರ್ಭ ಧರಿಸಿ ಇರುವಂತೆ. (ಗರ್ಭ ಧರಿಸಿದ ಹೆಸರಗತ್ತೆ ಪ್ರಸವಿಸಿ ಸಾಯುತ್ತದೆ ಎಂದು ಹೇಳುತ್ತಾರೆ).

ಸುಪುಷ್ಪಿತಃ ಸ್ಯಾದಫಲಃ ಫಲವಾನ್ ಸ್ಯಾದ್ದುರಾರುಹಃ ।
ಆಮಃ ಸ್ಯಾತ್ ಪಕ್ವಸಂಕಾಶೋ ನ ಚ ಶೀರ್ಯೇತ ಕಸ್ಯಚಿತ್ ॥೩೧॥

ಬಹಳ ಹೂ ಬಿಟ್ಟಿರುವ, ಆದರೆ ಫಲಬಿಡದ ಮರ, ಫಲವಿರುವ ಆದರೆ ಏರಲಾಗದ ಮರ, ಕಾಯಿಗಳಾಗಿರಬೇಕು, ಹಣ್ಣುಗಳಂತೆ ಕಾಣಬೇಕು- ಅಂತಹ ಮರ ರಾಜನು ಈ ಮರಗಳಂತೆ ಇರಬೇಕು (ಬೇರೆ ಬೇರೆ ಜನಗಳಿಗೆ ಬೇರೆ ಬೇರೆ ರೀತಿಯಲ್ಲಿ ರಾಜನು ಇರಬೇಕು). ಯಾರಿಂದಲೂ ಹಾನಿಗೆ ಒಳಗಾಗಬಾರದು.

ಆಶಾಂ ಕಾಲವತೀಂ ಕುರ್ಯಾತ್ತಾಂ ಚ ವಿಘ್ನೈನ ಯೋಜಯೇತ್ ।
ವಿಘ್ನಂ ನಿಮಿತ್ತತೋ ಬ್ರೂಯಾನ್ನಿಮಿತ್ತಂ ಚಾಪಿ ಹೇತುತಃ ॥೩೨॥

ಪ್ರಜೆಗಳ ಆಸೆಯು ಸರಿಯಾದ ಕಾಲದಲ್ಲಿ ಈಡೇರುತ್ತದೆ ಎಂದು ಹೇಳಬೇಕು. ವಿಳಂಬವಾದಾಗ ವಿಳಂಬಕ್ಕೆ ವಿಘ್ನಗಳು ಕಾರಣ ಎಂದು ಹೇಳಬೇಕು. ವಿಘ್ನಕ್ಕೆ ನಿಮಿತ್ತಗಳನ್ನು ಹೇಳಬೇಕು. ನಿಮಿತ್ತಗಳನ್ನು ಯುಕ್ತಿಯಿಂದ ವಿವರಿಸಬೇಕು.

ಭೀತವತ್ ಸಂವಿಧಾತವ್ಯಂ ಯಾವದ್ಭಯಮನಾಗತಮ್ ।
ಆಗತಂ ತು ಭಯಂ ದೃಷ್ಟ್ವಾ ಪ್ರಹರ್ತವ್ಯಮಭೀತವತ್ ॥೩೩॥

ಭಯವು ಬರುವುದಕ್ಕೆ ಮೊದಲು ಅದರ ನಿರೀಕ್ಷೆಯಿದ್ದರೆ ಹೆದರಿದವನಂತೆ ನಡೆದುಕೊಳ್ಳಬೇಕು. (ಭಯದ ನಿರೀಕ್ಷೆ ಇದ್ದವರು ಅದು ಬರದಂತೆ ಪ್ರಯತ್ನಿಸಬೇಕು). ಭಯವು ಬಂದಾಗ ನಿರ್ಭಯವಾಗಿ ಪ್ರಹಾರ ಮಾಡಬೇಕು.

ನ ಸಂಶಯಮಪಾರುಹ್ಯ ನರೋ ಭದ್ರಾಣಿ ಪಶ್ಯತಿ ।
ಸಂಶಯಂ ಪುನರಾರುಹ್ಯ ಯದಿ ಜೀವತಿ ಪಶ್ಯತಿ ॥೩೪॥

ಸಂಶಯಕ್ಕೊಳಗಾಗದ ನರನು ಉನ್ನತಿಯನ್ನು ಕಾಣುವುದಿಲ್ಲ. ಸಂಶಯಗ್ರಸ್ತನಾಗಿದ್ದರೂ ಪ್ರಯತ್ನಿಸುತ್ತಾ ಬದುಕಿದವನು ಉನ್ನತಿಯನ್ನು ಕಾಣುತ್ತಾನೆ. ಇಷ್ಟವಾದ ಉನ್ನತ ಸ್ಥಿತಿಗೆ ಏರುವ ಅಪೇಕ್ಷೆ ಇದ್ದವನು ಅದಕ್ಕಾಗಿ ಮಹಾಪ್ರಯತ್ನವನ್ನು ಮಾಡಬೇಕು. ಹೀಗೆ ಮಾಡಬೇಕಾದಾಗ ಆ ಉನ್ನತಸ್ಥಿತಿಯ ಬಗ್ಗೆ, ಅದನ್ನು ಸಾಧಿಸುವ ಮಾರ್ಗದ ಬಗ್ಗೆ, ತನ್ನ ಸಾಮರ್ಥ್ಯದ ಬಗ್ಗೆ ನಾನಾ ಸಂಶಯಗಳು ಉದ್ಭವಿಸುತ್ತವೆ. ಇವುಗಳನ್ನು ಎದುರಿಸಿ ಮುಂದೆ ಸಾಗಬೇಕು. ಹೀಗೆ ಸಂಶಯದ ಸ್ಥಿತಿಯಲ್ಲೇ ಪ್ರಯತ್ನಿಸುತ್ತಾ, ಅನ್ವೇಷಿಸುತ್ತಾ ಬದುಕಿದರೆ ಕೊನೆಯಲ್ಲಿ ಉನ್ನತ ಸ್ಥಿತಿಯನ್ನು ತಲುಪುತ್ತಾನೆ.

ಅನಾಗತಂ ವಿಜಾನೀಯಾದ್ಯಚ್ಚೇದ್ಭಯಮುಪಸ್ಥಿತಮ್ ।
ಪುನರ್ಬುದ್ಧಿಕ್ಷಯಾತ್ ಕಿಂಚಿದಭಿವೃತ್ತಂ ನಿಶಾಮಯೇತ್ ॥೩೫॥

ಮುಂದೆ ಬರಬಹುದಾದ ಭಯವನ್ನು ಮೊದಲೇ ಅರಿಯಬೇಕು. ಬಂದ ಭಯವನ್ನು ಪರಿಹರಿಸಬೇಕು. ಮತ್ತೆ ಪ್ರಮಾದದಿಂದ ಭಯವು ಬರಬಹುದೆಂದು ಕಂಡು ಎಚ್ಚರದಿಂದ ಇರಬೇಕು.

ಪ್ರತ್ಯುಪಸ್ಥಿತಕಾಲಸ್ಯ ಸುಖಸ್ಯ ಪರಿವರ್ಜನಮ್ ।
ಅನಾಗತಸುಖಾಶಾ ಚ ನೈಷ ಬುದ್ಧಿಮತಾಂ ನಯಃ ॥೩೬॥

ವರ್ತಮಾನದಲ್ಲಿ ಒದಗಿರುವ ಸುಖದ ತ್ಯಾಗ, ಮುಂದೆ ಸುಖವು ಬರುವ ಆಸೆ- ಇದು ಬುದ್ಧಿವಂತರ ನೀತಿಯಲ್ಲ.

ಯೋಽರಿಣಾ ಸಹ ಸಂಧಾಯ ಸುಖಂ ಸ್ವಪಿತಿ ವಿಶ್ವಸನ್ ।
ಸ ವೃಕ್ಷಾಗ್ರೇ ಪ್ರಸುಪ್ತೋ ವಾ ಪತಿತಃ ಪ್ರತಿಬುಧ್ಯತೇ ॥೩೭॥

ಯಾರು ಶತ್ರುವಿನ ಜೊತೆ ಸಂಧಾನ ಮಾಡಿಕೊಂಡು, ನಂಬಿಕೆ ಇಟ್ಟು ಸುಖವಾಗಿ ನಿದ್ರಿಸುತ್ತಾನೋ ಅವನು ಮರದ ತುದಿಯಲ್ಲಿ ನಿದ್ರಿಸಿದವನಿಗೆ ಸಮಾನ. ಅವನಿಗೆ ಬಿದ್ದನಂತರವೇ ಎಚ್ಚರವಾಗುತ್ತದೆ. ಇವನು ಶತ್ರುವಿನ ಬಲೆಗೆ ಬಿದ್ದೇ ಬೀಳುತ್ತಾನೆ.

ಕರ್ಮಣಾ ಯೇನ ತೇನೇಹ ಮೃದುನಾ ದಾರುಣೇನ ವಾ ।
ಉದ್ಧರೇದ್ ದೀನಮಾತ್ಮಾನಂ ಸಮರ್ಥೋ ಧರ್ಮಮಾಚರೇತ್ ॥೩೮॥

ದೀನ ಸ್ಥಿತಿಗೆ ಹೋದವನು ಮೃದು ಕೆಲಸಗಳಿಂದಲೋ ಅಥವಾ ದಾರುಣ ಕೆಲಸಗಳಿಂದಲೋ ತನ್ನನ್ನು ಮೇಲೆತ್ತಿಕೊಳ್ಳಬೇಕು. ಸಮರ್ಥನಾಗಿ ಧರ್ಮವನ್ನು ಆಚರಿಸಬೇಕು.

ಯೇ ಸಪತ್ನಾಃ ಸಪತ್ನಾನಾಂ ಸರ್ವಾಂಸ್ತಾನಪವರ್ತಯೇತ್ ।
ಆತ್ಮನಶ್ಚಾಪಿ ಬೋದ್ಧವ್ಯಾಶ್ಚಾರಾಃ ಪ್ರಣಿಹಿತಾಃ ಪರೈಃ ॥೩೯॥

ಯಾರು ಶತ್ರುಗಳ ಶತ್ರುಗಳೋ ಅವರೆಲ್ಲರನ್ನು ಓಲೈಸಬೇಕು. ಶತ್ರುಗಳು ತನ್ನ ಬಗ್ಗೆ ತಿಳಿಯಲು ಕಳುಹಿಸಿರುವ ಗೂಢಚಾರರನ್ನು ಪತ್ತೆ ಮಾಡಬೇಕು.

ಚಾರಃ ಸುವಿಹಿತಃ ಕಾರ್ಯ ಆತ್ಮನೋऽಥ ಪರಸ್ಯ ಚ ।
ಪಾಷಂಡಾಂಸ್ತಾಪಸಾದೀಂಶ್ಚ ಪರರಾಷ್ಟ್ರಂ ಪ್ರವೇಶಯೇತ್ ॥೪೦॥

ತನ್ನ ರಾಜ್ಯದಲ್ಲೂ, ಪರರ ರಾಜ್ಯದಲ್ಲೂ ಗೂಢಚಾರರನ್ನು ಸರಿಯಾಗಿ ತೊಡಗಿಸಬೇಕು. ಪಾಷಂಡ-ತಾಪಸ ಮೊದಲಾದವರನ್ನು ಪರರಾಷ್ಟ್ರಕ್ಕೆ ಗೂಢಚಾರರನ್ನಾಗಿ ಕಳುಹಿಸಬೇಕು.

ಉದ್ಯಾನೇಷು ವಿಹಾರೇಷು ಪ್ರಪಾಸ್ವಾವಸಥೇಷು ಚ ।
ಪಾನಾಗಾರೇಷು ವೇಶೇಷು ತೀರ್ಥೇಷು ಚ ಸಭಾಸು ಚ ॥೪೧॥

ಉದ್ಯಾನಗಳಲ್ಲಿ, ವಿಹಾರಸ್ಥಳಗಳಲ್ಲಿ, ಅರವಟ್ಟಿಗೆಗಳಲ್ಲಿ, ಧರ್ಮಶಾಲೆಗಳಲ್ಲಿ, ಸುರಾಪಾನಗೃಹಗಳಲ್ಲಿ, ವೇಶ್ಯಾಗೃಹಗಳಲ್ಲಿ, ತೀರ್ಥ ಸ್ಥಳಗಳಲ್ಲಿ, ಸಭೆಗಳಲ್ಲಿ

ಧರ್ಮಾಭಿಚಾರಿಣಃ ಪಾಪಾಶ್ಚಾರಾ ಲೋಕಸ್ಯ ಕಂಟಕಾಃ ।
ಸಮಾಗಚ್ಛಂತಿ ತಾನ್ ಬುದ್ಧ್ವಾ ನಿಯಚ್ಛೇಚ್ಚಮಯೇದಪಿ ॥೪೨॥

ಲೋಕಕಂಟಕರಾದ, ಪಾಪಿಗಳಾದ ಚಾರರು ಧರ್ಮಾಚರಣನಿಷ್ಠರಂತೆ ಬರುತ್ತಾರೆ. ಅವರನು ಪತ್ತೆ ಮಾಡಿ ನಿಯಂತ್ರಿಸಬೇಕು. ಅಡಗಿಸಬೇಕು.

ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾಪಿ ವಿಶ್ವಸೇತ್ ।
ವಿಶ್ವಸ್ತಂ ಭಯಮನ್ವೇತಿ ನಾಪರೀಕ್ಷ್ಯ ಚ ವಿಶ್ವಸೇತ್ ॥೪೩॥

ವಿಶ್ವಾಸವಿಲ್ಲದವನ ಮೇಲೆ ವಿಶ್ವಾಸವಿಡಬಾರದು. ವಿಶ್ವಾಸವಿರುವವನ ಮೇಲೂ ವಿಶ್ವಾಸವಿಡಬಾರದು. ನಂಬಿದವನಿಗೆ ಭಯವು ಹಿಂದೆಯೇ ಬರುತ್ತದೆ. ಪರೀಕ್ಷಿಸದೆ ಯಾರನ್ನೂ ನಂಬಬಾರದು.

ವಿಶ್ವಾಸಯಿತ್ವಾ ತು ಪರಂ ತತ್ತ್ವಭೂತೇನ ಹೇತುನಾ ।
ಅಥಾಸ್ಯ ಪ್ರಹರೇತ್ ಕಾಲೇ ಕಿಂಚಿದ್ ವಿಚಲಿತೇ ಪದೇ ॥೪೪॥

ಸರಿಯಾಗಿರುವ ಕಾರಣಗಳನ್ನು ತೋರಿಸಿಯೇ ಶತ್ರುವು ತನ್ನನ್ನು ನಂಬುವಂತೆ ಮಾಡಬೇಕು. ಶತ್ರುವಿನ ಹೆಜ್ಜೆಯು ಸ್ವಲ್ಪ ವಿಚಲಿತವಾದಾಗ (ಶತ್ರುವು ನಂಬಿ ಅಸ್ಥಿರನಾದಾಗ) ಅವನ ಮೇಲೆ ಪ್ರಹಾರ ಮಾಡಬೇಕು.

ಅಶಂಕ್ಯಮಪಿ ಶಂಕೇತ ನಿತ್ಯಂ ಶಂಕೇತ ಶಂಕಿತಾತ್ ।
ಭಯಂ ಹಿ ಶಂಕಿತಾಜ್ಜಾತಂ ಸಮೂಲಮಪಿ ಕೃಂತತಿ ॥೪೫॥

ಸಂದೇಹಕ್ಕೆ ಅನರ್ಹನ ಮೇಲೂ ಸಂದೇಹವಿರಬೇಕು. ಸಂದೇಹಕ್ಕೆ ಅರ್ಹನಾದವನ ಮೇಲೆ ಯಾವಾಗಲೂ ಸಂಶಯವಿರಬೇಕು. ಸಂದೇಹಾಸ್ಪದ ವ್ಯಕ್ತಿಯಿಂದ ಉಂಟಾದ ಭಯವು ಸರಿಯಾದ ಬೇರುಗಳು (ಆಧಾರಗಳು) ಇದ್ದವನನ್ನೂ ಕತ್ತರಿಸುತ್ತದೆ.

ಅವಧಾನೇನ ಮೌನೇನ ಕಾಷಾಯೇಣ ಜಟಾಜಿನೈಃ ।
ವಿಶ್ವಾಸಯಿತ್ವಾ ದ್ವೇಷ್ಟಾರಮವಲುಂಪೇದ್ಯಥಾ ವೃಕಃ ॥೪೬॥

ಶತ್ರುವನ್ನು ಏಕಾಗ್ರತೆಯಿಂದ (ಧ್ಯಾನದಿಂದ, ಅವಧಾನ ಕಲೆಯಿಂದ), ಮೌನದಿಂದ, ಕಾವಿ ವಸ್ತ್ರಧಾರಣೆಯಿಂದ, ಜಟೆ ಮತ್ತು ಕೃಷ್ಣಾಜಿನಗಳಿಂದ ನಂಬಿಸಿ ತೋಳದಂತೆ ಮೇಲೆ ಬಿದ್ದು ನಾಶಮಾಡಬೇಕು.

ಪುತ್ರೋ ವಾ ಯದಿ ವಾ ಭ್ರಾತಾ ಪಿತಾ ವಾ ಯದಿ ವಾ ಸುಹೃತ್ ।
ಅರ್ಥಸ್ಯ ವಿಘ್ನಂ ಕುರ್ವಾಣಾ ಹಂತವ್ಯಾ ಭೂತಿವರ್ಧನಾಃ ॥೪೭॥

ಸಂಪತ್ತನು ಹೆಚ್ಚಿಸುವ ಉದ್ದೇಶವಿರುವವರು, ಸಂಪತ್ತಿನ ವೃದ್ಧಿಗೆ ವಿಘ್ನ ಮಾಡುವವರನ್ನು- ಅವರು ಮಗನಾಗಿರಲಿ, ಸೋದರನಾಗಿರಲಿ, ತಂದೆಯಾಗಿರಲಿ ಅಥವಾ ಸ್ನೇಹಿತನಾಗಿರಲಿ- ಕೊಂದು ಬಿಡಬೇಕು.

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ।
ಉತ್ಪಥಂ ಪ್ರತಿಪನ್ನಸ್ಯ ದಂಡೋ ಭವತಿ ಶಾಸನಮ್ ॥೪೮॥

ಗರ್ವವನ್ನು ಬೆಳೆಸಿಕೊಂಡಿರುವ, ಕಾರ್ಯ-ಅಕಾರ್ಯಗಳನ್ನು ತಿಳಿಯದ, ದಾರಿಬಿಟ್ಟುಹೋಗಿರುವ ಹಿರಿಯರೂ ದಂಡನೆಗೆ ಅರ್ಹರೇ.

ಪ್ರತ್ಯುತ್ಥಾನಾಭಿವಾದಾಭ್ಯಾಂ ಸಂಪ್ರದಾನೇನ ಕಸ್ಯಚಿತ್ ।
ಪ್ರಪೂಜಯನ್ನಿಘಾತೀ ಸ್ಯಾತ್ ತೀಕ್ಷ್ಣತುಂಡ ಇವ ದ್ವಿಜಃ ॥೪೯॥

ಶತ್ರುವು ಬಂದಾಗ ಎದ್ದುನಿಂತು, ಅಭಿವಾದನವನ್ನು ಮಾಡಿ ಕಾಣಿಕೆಗಳನ್ನು ಕೊಟ್ಟು ಪೂಜಿಸಿ ಸಂಹರಿಸಬೇಕು. ತೀಕ್ಷ್ಣಕೊಕ್ಕಿನ ಹಕ್ಕಿಯು ಮಾಡುವಂತೆ.

ನಾಚ್ಛಿತ್ತ್ವಾ ಪರಮರ್ಮಾಣಿ ನಾಕೃತ್ವಾ ಕರ್ಮ ದಾರುಣಮ್ ।
ನಾಹತ್ವಾ ಮತ್ಸ್ಯಘಾತೀವ ಪ್ರಾಪ್ನೋತಿ ಪರಮಾಂ ಶ್ರಿಯಮ್ ॥೫೦॥

ಶತ್ರುವಿನ ಮರ್ಮಗಳನ್ನು ಕತ್ತರಿಸದೆ, ದಾರುಣ ಕರ್ಮಗಳನ್ನು ಮಾಡದೆ, ಮೀನುಗಳನ್ನು ಕೊಲ್ಲುವವನಂತೆ ಕೊಲ್ಲದೆ ದೊಡ್ಡ ಸಂಪತ್ತನ್ನು ಹೊಂದುವುದಿಲ್ಲ.

ನಾಸ್ತಿ ಜಾತ್ಯಾ ರಿಪುರ್ನಾಮ ಮಿತ್ರಂ ನಾಮ ನ ವಿದ್ಯತೇ ।
ಸಾಮರ್ಥ್ಯಯೋಗಾಜ್ಜಾಯಂತೇ ಮಿತ್ರಾಣಿ ರಿಪವಸ್ತಥಾ ॥೫೧॥

ಹುಟ್ಟಿನಿಂದಲೇ ಯಾರೂ ಶತ್ರುವಲ್ಲ. ಅಂತಹ ಮಿತ್ರನೂ ಇಲ್ಲ. ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಮಿತ್ರರು ಆಗುತ್ತಾರೆ. ಶತ್ರುಗಳೂ ಆಗುತ್ತಾರೆ.

ಅಮಿತ್ರಂ ನೈವ ಮುಂಚೇತ ಬ್ರುವಂತಂ ಕರುಣಾನ್ಯಪಿ ।
ದುಃಖಂ ತತ್ರ ನ ಕುರ್ವೀತ ಹನ್ಯಾತ್ ಪೂರ್ವಾಪಕಾರಿಣಮ್ ॥೫೨॥

ಶತ್ರುವು ಕರುಣಾಜನಕವಾದ ಮಾತುಗಳನ್ನು ಹೇಳುತ್ತಿದ್ದರೂ ಅವನನ್ನು ಬಿಡಬಾರದು. ಅವನ ಬಗ್ಗೆ ದುಃಖಿಸಬಾರದು. ಹಿಂದೆ ಅಪಕಾರ ಮಾಡಿದವನನ್ನು ಕೊಂದುಬಿಡಬೇಕು.

ಸಂಗ್ರಹಾನುಗ್ರಹೇ ಯತ್ನಃ ಸದಾ ಕಾರ್ಯೋ‌ಽನಸೂಯತಾ ।
ನಿಗ್ರಹಶ್ಚಾಪಿ ಯತ್ನೇನ ಕರ್ತವ್ಯೋ ಭೂತಿಮಿಚ್ಛತಾ ॥೫೩॥

ಉನ್ನತಿಯನ್ನು ಬಯಸುವವನು ಪ್ರಜೆಗಳು ತನ್ನನ್ನು ಗ್ರಹಿಸುವುದಕ್ಕಾಗಿ ಅವರಿಗೆ ನಾನಾ ಅನುಕೂಲಗಳನ್ನು ಅಸೂಯೆಯಿಲ್ಲದೆ ಮಾಡುತ್ತಲೇ ಇರಬೇಕು. ನಿಗ್ರಹಕ್ಕೆ ಅರ್ಹರಾದವರನ್ನು ಪ್ರಯತ್ನಪೂರ್ವಕವಾಗಿ ನಿಗ್ರಹಿಸಬೇಕು.

ಪ್ರಹರಿಷ್ಯನ್ ಪ್ರಿಯಂ ಬ್ರೂಯಾತ್ ಪ್ರಹೃತ್ಯಾಪಿ ಪ್ರಿಯೋತ್ತರಮ್ ।
ಅಪಿ ಚಾಸ್ಯ ಶಿರಶ್ಛಿತ್ತ್ವಾ ರುದ್ಯಾಚ್ಛೋಚೇದಥಾಪಿ ವಾ ॥೫೪॥

ಪ್ರಹಾರವನ್ನು ಮಾಡುವಾಗಲೂ ಪ್ರಿಯವಚನಗಳನ್ನು ಹೇಳಬೇಕು. ಪ್ರಹಾರ ಮಾಡಿದ ಮೇಲೂ ಪ್ರಿಯವಾದ ಮಾತುಗಳನ್ನು ಆಡಬೇಕು. ಅವನ ಶಿರಶ್ಛೇದನ ಮಾಡಿದ ಮೇಲೂ ಅವನಿಗಾಗಿ ಅಳಬೇಕು, ಶೋಕಿಸಬೇಕು.

ನಿಮಂತ್ರಯೇತ ಸಾನ್ತ್ವೇನ ಸಮ್ಮಾನೇನ ತಿತಿಕ್ಷಯಾ ।
ಆಶಾಕಾರಣಮಿತ್ಯೇತತ್ ಕರ್ತವ್ಯಂ ಭೂತಿಮಿಚ್ಛತಾ ॥೫೫॥

ಸಮೃದ್ಧಿಯನ್ನು ಬಯಸುವವನು ಒಲೈಸುವ ಮಾತುಗಳಿಂದ, ಸಮ್ಮಾನದಿಂದ, ತಾಳ್ಮೆಯಿಂದ ಜನರನ್ನು ತನ್ನ ಕಡೆ ಒಲಿಸಿಕೊಳ್ಳಬೇಕು. ಇದಕ್ಕೆ ಆಶಾಕಾರಣ (ಲೋಕಾರಾಧನ) ಎಂದು ಹೆಸರು. ಇದನ್ನು ಮಾಡಲೇಬೇಕು.

ನ ಶುಷ್ಕವೈರಂ ಕುರ್ವೀತ ನ ಬಾಹುಭ್ಯಾಂ ನದೀಂ ತರೇತ್ ।
ಅಪಾರ್ಥಕಮನಾಯುಷ್ಯಂ ಗೋವಿಷಾಣಸ್ಯ ಭಕ್ಷಣಮ್ ।
ದಂತಾಶ್ಚ ಪರಿಘೃಷ್ಯಂತೇ ರಸಶ್ಚಾಪಿ ನ ಲಭ್ಯತೇ ॥೫೬॥

ಒಣವೈರವನ್ನು ಮಾಡಬಾರದು. ಬಾಹುಗಳಿಂದ ನದಿಯನ್ನು ದಾಟಬಾರದು. ಹಸುವಿನ ಕೊಂಬನ್ನು ತಿನ್ನುವುದರಿಂದ ಏನೂ ಪ್ರಯೋಜನವಿಲ್ಲ. ಆಯುಷ್ಯ ಹಾಳಾಗುತ್ತದೆ, ಹಲ್ಲುಗಳಿಗೆ ಘರ್ಷಣೆಯಾಗುತ್ತದೆ. ರಸವು ಸಿಗುವುದಿಲ್ಲ.

ತ್ರಿವರ್ಗೇ ತ್ರಿವಿಧಾ ಪೀಡಾ ಅನುಬಂಧಸ್ತಥೈವ ಚ ।
ಅನುಬಂಧಂ ತಥಾ ಜ್ಞಾತ್ವಾ ಪೀಡಾಂ ಹಿ ಪರಿವರ್ಜಯೇತ್ ॥೫೭॥

ತ್ರಿವರ್ಗದಲ್ಲಿ=ಧರ್ಮ-ಅರ್ಥ-ಕಾಮ ಈ ಮೂರರ ವಿಷಯದಲ್ಲಿ ಮೂರು ಪೀಡೆಗಳು. ಮೂರು ಅನುಬಂಧಗಳು. (೧) ಸಂಪಾದಿಸದೆ ಇರುವುದು (೨) ಸಂಪಾದಿಸಿದ ಸಂಪತ್ತಿನ ರಕ್ಷಣೆ ಮಾಡದಿರುವುದು (೩) ರಕ್ಷಣೆ ಮಾಡಿದ್ದರೂ ಕೊನೆಗೆ

ನಾಶ- ಇವು ಪೀಡೆಗಳು (ಮೂರ್ಖತನ, ಲೋಭ, ದೌರ್ಬಲ್ಯಗಳು ಎಂದೂ ಹೇಳುತ್ತಾರೆ). (೧) ಸಂಪಾದನೆ, (೨) ರಕ್ಷಣೆ (೩) ಮರಣಪರ್ಯಂತ ಪರಿಪಾಲನೆ- ಇವು ಅನುಬಂಧ (ಚಿತ್ತಶುದ್ಧಿ, ಯಜ್ಞಾದಿ ಕರ್ಮಗಳು, ಉಪಭೋಗ ಎಂದೂ ಹೇಳುತ್ತಾರೆ). ಅನುಬಂಧಗಳು ಶುಭ. ಪೀಡೆಗಳನ್ನು ಪರಿತ್ಯಜಿಸಬೇಕು.

ಋಣಶೇಷೋಗ್ನಿಶೇಷಶ್ಚ ಶತ್ರುಶೇಷಸ್ತಥೈವ ಚ ।
ಪುನಃ ಪುನರ್ವಿವರ್ಧೇತ ಸ್ವಲ್ಪೋಽಪಿ ಹ್ಯನಿವಾರಿತಃ ॥೫೮॥

ಋಣಶೇಷ, ಅಗ್ನಿಶೇಷ ಮತ್ತು ಶತ್ರುಶೇಷ- ಇವುಗಳನ್ನು ಸ್ವಲ್ಪವೂ ಉಳಿಸಬಾರದು. ಸ್ವಲ್ಪವೇ ಉಳಿದರೂ ಅವು ಮತ್ತೆ ಬೆಳೆಯುತ್ತವೆ.

ವರ್ಧಮಾನಮೃಣಂ ತಿಷ್ಠತ್ ಪರಿಭೂತಾಶ್ಚ ಶತ್ರವಃ ।
ಆವಹಂತ್ಯನಯಂ ತೀವ್ರಂ ವ್ಯಾಧಯಶ್ಚಾಪ್ಯುಪೇಕ್ಷಿತಾಃ ॥೫೯॥

ಉಳಿದ ಋಣವು, ಸೋಲಿಸಲ್ಪಟ್ಟ ಶತ್ರುಗಳೂ, ಉಪೇಕ್ಷಿಸಲ್ಪಟ್ಟ (ಪರಿಹಾರ ಕ್ರಮವನ್ನು ಕೈಗೊಳ್ಳದೆ ಬಿಟ್ಟ) ವ್ಯಾಧಿಗಳೂ ಬೆಳೆದು ತೀವ್ರ ಹಾನಿಯನ್ನುಂಟು ಮಾಡುತ್ತವೆ.

ನಾಸಮ್ಯಕ್ಕೃತಕಾರೀ ಸ್ಯಾದಪ್ರಮತ್ತಃ ಸದಾ ಭವೇತ್ ।
ಕಂಟಕೋಽಪಿ ಹಿ ದುಶ್ಛಿನ್ನೋ ವಿಕಾರಂ ಕುರುತೇ ಚಿರಮ್ ॥೬೦॥

ಶತ್ರುವಿನಾಶವನ್ನು ಸರಿಯಾಗಿ ಮಾಡಬೇಕು. ಕೆಟ್ಟರೀತಿಯಲ್ಲಿ ಮಾಡಬಾರದು. ಯಾವಾಗಲೂ ಜಾಗರೂಕನಾಗಿರಬೇಕು. ಕೆಟ್ಟದಾಗಿ ಕತ್ತರಿಸಲ್ಪಟ್ಟ ಕಂಟಕವು ದೀರ್ಘಕಾಲ ತೊಂದರೆಯುಂಟು ಮಾಡುತ್ತದೆ (ಮುಳ್ಳನ್ನು ಬೇರುಸಹಿತ ಕಿತ್ತದಿದ್ದರೆ ಉಳಿದ ಮುಳ್ಳು ದೀರ್ಘಕಾಲ ತೊಂದರೆ ಕೊಡುತ್ತದೆ).

ವಧೇನ ಚ ಮನುಷ್ಯಾಣಾಂ ಮಾರ್ಗಾಣಾಂ ದೂಷಣೇನ ಚ ।
ಆಕರಾಣಾಂ ವಿನಾಶೈಶ್ಚ ಪರರಾಷ್ಟ್ರಂ ವಿನಾಶಯೇತ್ ॥೬೧॥

ಪರರಾಷ್ಟ್ರವನ್ನು, ಆ ರಾಷ್ಟ್ರದ ಪ್ರಜೆಗಳನ್ನು (ಕಾರ್ಯನಿರತರನ್ನು) ಕೊಂದು ಮಾರ್ಗಗಳನ್ನು ಹಾಳು ಮಾಡಿ, ಸರಬರಾಜುಗಳ ಮೂಲವನ್ನು ನಾಶಮಾಡಿ ನಾಶ ಮಾಡಬೇಕು.

ಉನ್ನತಿಯನ್ನು ಬಯಸುವವನು ಪ್ರಜೆಗಳು ತನ್ನನ್ನು ಗ್ರಹಿಸುವುದಕ್ಕಾಗಿ ಅವರಿಗೆ ನಾನಾ ಅನುಕೂಲಗಳನ್ನು ಅಸೂಯೆಯಿಲ್ಲದೆ ಮಾಡುತ್ತಲೇ ಇರಬೇಕು. ನಿಗ್ರಹಕ್ಕೆ ಅರ್ಹರಾದವರನ್ನು ಪ್ರಯತ್ನಪೂರ್ವಕವಾಗಿ ನಿಗ್ರಹಿಸಬೇಕು.

ಪ್ರಹರಿಷ್ಯನ್ ಪ್ರಿಯಂ ಬ್ರೂಯಾತ್ ಪ್ರಹೃತ್ಯಾಪಿ ಪ್ರಿಯೋತ್ತರಮ್ ।
ಅಪಿ ಚಾಸ್ಯ ಶಿರಶ್ಛಿತ್ತ್ವಾ ರುದ್ಯಾಚ್ಛೋಚೇದಥಾಪಿ ವಾ ॥೫೪॥

ಪ್ರಹಾರವನ್ನು ಮಾಡುವಾಗಲೂ ಪ್ರಿಯವಚನಗಳನ್ನು ಹೇಳಬೇಕು. ಪ್ರಹಾರ ಮಾಡಿದ ಮೇಲೂ ಪ್ರಿಯವಾದ ಮಾತುಗಳನ್ನು ಆಡಬೇಕು. ಅವನ ಶಿರಶ್ಛೇದನ ಮಾಡಿದ ಮೇಲೂ ಅವನಿಗಾಗಿ ಅಳಬೇಕು, ಶೋಕಿಸಬೇಕು.

ನಿಮಂತ್ರಯೇತ ಸಾನ್ತ್ವೇನ ಸಮ್ಮಾನೇನ ತಿತಿಕ್ಷಯಾ ।
ಆಶಾಕಾರಣಮಿತ್ಯೇತತ್ ಕರ್ತವ್ಯಂ ಭೂತಿಮಿಚ್ಛತಾ ॥೫೫॥

ಸಮೃದ್ಧಿಯನ್ನು ಬಯಸುವವನು ಒಲೈಸುವ ಮಾತುಗಳಿಂದ, ಸಮ್ಮಾನದಿಂದ, ತಾಳ್ಮೆಯಿಂದ ಜನರನ್ನು ತನ್ನ ಕಡೆ ಒಲಿಸಿಕೊಳ್ಳಬೇಕು. ಇದಕ್ಕೆ ಆಶಾಕಾರಣ (ಲೋಕಾರಾಧನ) ಎಂದು ಹೆಸರು. ಇದನ್ನು ಮಾಡಲೇಬೇಕು.

ನ ಶುಷ್ಕವೈರಂ ಕುರ್ವೀತ ನ ಬಾಹುಭ್ಯಾಂ ನದೀಂ ತರೇತ್ ।
ಅಪಾರ್ಥಕಮನಾಯುಷ್ಯಂ ಗೋವಿಷಾಣಸ್ಯ ಭಕ್ಷಣಮ್ ।
ದಂತಾಶ್ಚ ಪರಿಘೃಷ್ಯಂತೇ ರಸಶ್ಚಾಪಿ ನ ಲಭ್ಯತೇ ॥೫೬॥

ಒಣವೈರವನ್ನು ಮಾಡಬಾರದು. ಬಾಹುಗಳಿಂದ ನದಿಯನ್ನು ದಾಟಬಾರದು. ಹಸುವಿನ ಕೊಂಬನ್ನು ತಿನ್ನುವುದರಿಂದ ಏನೂ ಪ್ರಯೋಜನವಿಲ್ಲ. ಆಯುಷ್ಯ ಹಾಳಾಗುತ್ತದೆ, ಹಲ್ಲುಗಳಿಗೆ ಘರ್ಷಣೆಯಾಗುತ್ತದೆ. ರಸವು ಸಿಗುವುದಿಲ್ಲ.

ತ್ರಿವರ್ಗೇ ತ್ರಿವಿಧಾ ಪೀಡಾ ಅನುಬಂಧಸ್ತಥೈವ ಚ ।
ಅನುಬಂಧಂ ತಥಾ ಜ್ಞಾತ್ವಾ ಪೀಡಾಂ ಹಿ ಪರಿವರ್ಜಯೇತ್ ॥೫೭॥

ತ್ರಿವರ್ಗದಲ್ಲಿ=ಧರ್ಮ-ಅರ್ಥ-ಕಾಮ ಈ ಮೂರರ ವಿಷಯದಲ್ಲಿ ಮೂರು ಪೀಡೆಗಳು. ಮೂರು ಅನುಬಂಧಗಳು. (೧) ಸಂಪಾದಿಸದೆ ಇರುವುದು (೨) ಸಂಪಾದಿಸಿದ ಸಂಪತ್ತಿನ ರಕ್ಷಣೆ ಮಾಡದಿರುವುದು (೩) ರಕ್ಷಣೆ ಮಾಡಿದ್ದರೂ ಕೊನೆಗೆ

ನಾಶ- ಇವು ಪೀಡೆಗಳು (ಮೂರ್ಖತನ, ಲೋಭ, ದೌರ್ಬಲ್ಯಗಳು ಎಂದೂ ಹೇಳುತ್ತಾರೆ). (೧) ಸಂಪಾದನೆ, (೨) ರಕ್ಷಣೆ (೩) ಮರಣಪರ್ಯಂತ ಪರಿಪಾಲನೆ- ಇವು ಅನುಬಂಧ (ಚಿತ್ತಶುದ್ಧಿ, ಯಜ್ಞಾದಿ ಕರ್ಮಗಳು, ಉಪಭೋಗ ಎಂದೂ ಹೇಳುತ್ತಾರೆ). ಅನುಬಂಧಗಳು ಶುಭ. ಪೀಡೆಗಳನ್ನು ಪರಿತ್ಯಜಿಸಬೇಕು.

ಋಣಶೇಷೋಗ್ನಿಶೇಷಶ್ಚ ಶತ್ರುಶೇಷಸ್ತಥೈವ ಚ ।
ಪುನಃ ಪುನರ್ವಿವರ್ಧೇತ ಸ್ವಲ್ಪೋಽಪಿ ಹ್ಯನಿವಾರಿತಃ ॥೫೮॥

ಋಣಶೇಷ, ಅಗ್ನಿಶೇಷ ಮತ್ತು ಶತ್ರುಶೇಷ- ಇವುಗಳನ್ನು ಸ್ವಲ್ಪವೂ ಉಳಿಸಬಾರದು. ಸ್ವಲ್ಪವೇ ಉಳಿದರೂ ಅವು ಮತ್ತೆ ಬೆಳೆಯುತ್ತವೆ.

ವರ್ಧಮಾನಮೃಣಂ ತಿಷ್ಠತ್ ಪರಿಭೂತಾಶ್ಚ ಶತ್ರವಃ ।
ಆವಹಂತ್ಯನಯಂ ತೀವ್ರಂ ವ್ಯಾಧಯಶ್ಚಾಪ್ಯುಪೇಕ್ಷಿತಾಃ ॥೫೯॥

ಉಳಿದ ಋಣವು, ಸೋಲಿಸಲ್ಪಟ್ಟ ಶತ್ರುಗಳೂ, ಉಪೇಕ್ಷಿಸಲ್ಪಟ್ಟ (ಪರಿಹಾರ ಕ್ರಮವನ್ನು ಕೈಗೊಳ್ಳದೆ ಬಿಟ್ಟ) ವ್ಯಾಧಿಗಳೂ ಬೆಳೆದು ತೀವ್ರ ಹಾನಿಯನ್ನುಂಟು ಮಾಡುತ್ತವೆ.

ನಾಸಮ್ಯಕ್ಕೃತಕಾರೀ ಸ್ಯಾದಪ್ರಮತ್ತಃ ಸದಾ ಭವೇತ್ ।
ಕಂಟಕೋಽಪಿ ಹಿ ದುಶ್ಛಿನ್ನೋ ವಿಕಾರಂ ಕುರುತೇ ಚಿರಮ್ ॥೬೦॥

ಶತ್ರುವಿನಾಶವನ್ನು ಸರಿಯಾಗಿ ಮಾಡಬೇಕು. ಕೆಟ್ಟರೀತಿಯಲ್ಲಿ ಮಾಡಬಾರದು. ಯಾವಾಗಲೂ ಜಾಗರೂಕನಾಗಿರಬೇಕು. ಕೆಟ್ಟದಾಗಿ ಕತ್ತರಿಸಲ್ಪಟ್ಟ ಕಂಟಕವು ದೀರ್ಘಕಾಲ ತೊಂದರೆಯುಂಟು ಮಾಡುತ್ತದೆ (ಮುಳ್ಳನ್ನು ಬೇರುಸಹಿತ ಕಿತ್ತದಿದ್ದರೆ ಉಳಿದ ಮುಳ್ಳು ದೀರ್ಘಕಾಲ ತೊಂದರೆ ಕೊಡುತ್ತದೆ).

ವಧೇನ ಚ ಮನುಷ್ಯಾಣಾಂ ಮಾರ್ಗಾಣಾಂ ದೂಷಣೇನ ಚ ।
ಆಕರಾಣಾಂ ವಿನಾಶೈಶ್ಚ ಪರರಾಷ್ಟ್ರಂ ವಿನಾಶಯೇತ್ ॥೬೧॥

ಪರರಾಷ್ಟ್ರವನ್ನು, ಆ ರಾಷ್ಟ್ರದ ಪ್ರಜೆಗಳನ್ನು (ಕಾರ್ಯನಿರತರನ್ನು) ಕೊಂದು ಮಾರ್ಗಗಳನ್ನು ಹಾಳು ಮಾಡಿ, ಸರಬರಾಜುಗಳ ಮೂಲವನ್ನು ನಾಶಮಾಡಿ ನಾಶ ಮಾಡಬೇಕು.

ಗೃಧ್ರದೃಷ್ಟಿರ್ಬಕಾಲೀನಃ ಸಚೇಷ್ಟಃ ಸಿಂಹವಿಕ್ರಮಃ ।
ಅನುದ್ವಿಗ್ನಃ ಕಾಕಶಂಕೀ ಭುಜಂಗಚರಿತಂ ಚರೇತ್ ॥೬೨॥

ಹದ್ದಿನ ದೃಷ್ಟಿವುಳ್ಳವನಾಗಿ (ದೂರದರ್ಶಿಯಾಗಿ), ಬಕಪಕ್ಷಿಯಂತೆ ನಿಶ್ಚಲನಾಗಿದ್ದು (ಏಕಾಗ್ರತೆ ಮತ್ತು ಶತ್ರುವಿಗೆ ಗೊತ್ತಾಗದಂತೆ ಕಾರ್ಯಾಚರಣೆ), ಕಾರ್ಯಾಚರಣೆ ಮಾಡುವಾಗ ಸಿಂಹದಂತೆ ವಿಕ್ರಮವನ್ನು ತೋರಿ (ಶ್ವಚೇಷ್ಟಃ=ನಾಯಿಯಂತೆ ಜಾಗರೂಕನಾಗಿ), ಉದ್ವೇಗರಹಿತನಾಗಿ, ಕಾಗೆಯಂತೆ ಶತ್ರುವಿನ ಇಂಗಿತವನ್ನು ತಿಳಿದು, ಸರ್ಪದಂತೆ ವರ್ತಿಸಬೇಕು (ಇದ್ದಕ್ಕಿದ್ದಂತೆ ಪೂರ್ವಸೂಚನೆಯಿಲ್ಲದೆ ಶತ್ರುವಿನ ಕೋಟೆ ಮೊದಲಾದವುಗಳಲ್ಲಿ ಪ್ರವೇಶಿಸಬೇಕು).

ಶ್ರೇಣಿಮುಖ್ಯೋಪಜಾಪೇಷು ವಲ್ಲಭಾನುನಯೇಷು ಚ ।
ಅಮಾತ್ಯಾನ್ ಪರಿರಕ್ಷೇತ ಭೇದಸಂಘಾತಯೋರಪಿ ॥೬೩॥

ದಳಗಳ ನಾಯಕರಲ್ಲಿ ಒಡಕು ಉಂಟಾದಾಗ, ಮಿತ್ರರನ್ನು ಒಲೈಸುವಾಗ, ಒಡಕು-ಸಂಘರ್ಷಗಳು ಉಂಟಾಗುವ ಸಂದರ್ಭಗಳಲ್ಲಿ ಅಮಾತ್ಯರನ್ನು (ಅವರು ರಾಜ ವಿರೋಧಿಗಳಾಗದಂತೆ) ಕಾಯಬೇಕು.

ಮೃದುರಿತ್ಯವಮನ್ಯಂತೇ ತೀಕ್ಷ್ಣ ಇತ್ಯುದ್ವಿಜಂತಿ ಚ ।
ತೀಕ್ಷ್ಣಕಾಲೇ ಚ ತೀಕ್ಷ್ಣಃ ಸ್ಯಾನ್ಮೃದುಕಾಲೇ ಮೃದುರ್ಭವೇತ್ ॥೬೪॥

ರಾಜನು ಮೃದುವಾಗಿದ್ದರೆ, ಆ ಕಾರಣದಿಂದಲೇ ಅವಹೇಳನ ಮಾಡುತ್ತಾರೆ. ತೀಕ್ಷ್ಣನಾಗಿದ್ದರೆ ಅದೇ ಕಾರಣದಿಂದಲೇ ಉದ್ವೇಗಕ್ಕೆ ಒಳಗಾಗುತ್ತಾರೆ. ಆದ್ದರಿಂದ ರಾಜನು ತೀಕ್ಷ್ಣನಾಗಿರಬೇಕಾದ ಕಾಲದಲ್ಲಿ ತೀಕ್ಷ್ಣನಾಗಿರಬೇಕು. ಮೃದುವಾಗಿರಬೇಕಾದ ಕಾಲದಲ್ಲಿ ಮೃದುವಾಗಿರಬೇಕು.

ಮೃದುನಾ ಸುಮೃದುಂ ಹಂತಿ ಮೃದುನಾ ಹಂತಿ ದಾರುಣಮ್ ।
ನಾಸಾಧ್ಯಂ ಮೃದುನಾ ಕಿಂಚಿತ್ತಸ್ಮಾತ್ತೀಕ್ಷ್ಣತರಂ ಮೃದು ॥೬೫॥

ಮೃದು ವಿಧಾನಗಳಿಂದಲೇ ಮೃದು ಶತ್ರುವನ್ನು ಕೊಲ್ಲುತ್ತಾರೆ. ಮೃದು ವಿಧಾನಗಳಿಂದ ದಾರುಣ ಶತ್ರುವನ್ನೂ ಕೊಲ್ಲುತ್ತಾರೆ. ಮೃದುವಿಧಾನದಿಂದ ಸಾಧಿಸಲು ಆಗದ ಕೆಲಸ ಯಾವುದೂ ಇಲ್ಲ. ಆದ್ದರಿಂದ ಮೃದು ವಿಧಾನಗಳು ಅತಿತೀಕ್ಷ್ಣ.

ಲಕ್ಷಾಲಂಕಾರ– ಮೃದುವಾದ ಹುಳಿರಸದಿಂದ ಮೃದುವಾದ ಹಾಲನ್ನು ಕೊಲ್ಲುತ್ತಾರೆ. ಖಡ್ಗದ ಅಲಗಿನ ಮೇಲಿನ ನೀರಿನಿಂದ ದಾರುಣವಾದ ಆನೆಯ ತಲೆಯನ್ನು ನಾಶ ಮಾಡುತ್ತಾರೆ. ಸೋಲಿಸಲಾಗದ ಶತ್ರುವನ್ನು ಮೃದು ವಚನಗಳಿಂದ ಸೋಲಿಸುತ್ತಾರೆ.

ಕಾಲೇ ಮೃದುರ್ಯೋ ಭವತಿ ಕಾಲೇ ಭವತಿ ದಾರುಣಃ ।
ಸ ಸಾಧಯತಿ ಕೃತ್ಯಾನಿ ಶತ್ರೂಂಶ್ಚೈವಾಧಿತಿಷ್ಠತಿ ॥೬೬॥

ಯಾರು ಸಮಯಕ್ಕೆ ತಕ್ಕಂತೆ ಮೃದುವಾಗುತ್ತಾನೋ, ದಾರುಣನಾಗುತ್ತಾನೋ ಅವನು ತನ್ನ ಕಾರ್ಯಗಳನ್ನು ಸಾಧಿಸುತ್ತಾನೆ. ಶತ್ರುಗಳ ಮೇಲೇರಿ ನಿಲ್ಲುತ್ತಾನೆ.

ಪಂಡಿತೇನ ವಿರುದ್ಧಃ ಸನ್ ದೂರೇऽಸ್ಮೀತಿ ನ ವಿಶ್ವಸೇತ್ ।
ದೀರ್ಘೌ ಬುದ್ಧಿಮತೋ ಬಾಹೂ ಯಾಭ್ಯಾಂ ಹಿಂಸತಿ ಹಿಂಸಿತಃ ॥೬೭॥

ಜಾಣನೊಂದಿಗೆ ವಿರೋಧವನ್ನು ಮಾಡಿಕೊಂಡು, 'ಅವನಿಂದ ದೂರವಿದ್ದೇನೆ, ಏನೂ ಅಪಾಯವಿಲ್ಲ' ಎಂಬ ನಂಬಿಕೆಯಿಂದ ಇರಬಾರದು. ಜಾಣನ ಬಾಹುಗಳು ಬಹಳ ಉದ್ದ. ಹಿಂಸೆಗೆ ಗುರಿಯಾದ ಜಾಣನು ತನ್ನ ಬುದ್ಧಿ ಬಾಹುಗಳಿಂದ ಸೇಡು ತೀರಿಸಿಕೊಳ್ಳುತ್ತಾನೆ (ಉಪಾಯ ಮತ್ತು ಪ್ರಯತ್ನಗಳು ಜಾಣನ ಎರಡು ಬಾಹುಗಳು).

ನ ತತ್ತರೇದ್ಯಸ್ಯ ನ ಪಾರಮುತ್ತರೇ-
ನ್ನ ತದ್ದರೇದ್ಯತ್ ಪುನರಾಹರೇತ್ ಪರಃ ।
ನ ತತ್ತನೇದ್ಯಸ್ಯ ನ ಮೂಲಮುತ್ತನೇ-
ನ್ನ ತಂ ಹನ್ಯಾದ್ಯಸ್ಯ ಶಿರೋ ನ ಪಾತಯೇತ್ ॥೬೮॥

ಯಾವ ನದಿಯ ದಡಕ್ಕೆ ಸೇರಲಾಗುವುದಿಲ್ಲವೋ ಆ ನದಿಯನ್ನು ದಾಟಬಾರದು. ಶತ್ರುವು ಪುನಃ ವಶಪಡಿಸಿಕೊಳ್ಳಬಹುದಾದ ಸಂಪತ್ತನ್ನು ಶತ್ರುವಿನಿಂದ ಅಪಹರಿಸಬಾರದು. ಯಾವ ಮರದ ಬೇರನ್ನು ಮೇಲೆ ಎತ್ತಲು ಸಾಧ್ಯವಿಲ್ಲವೋ ಆ ಮರದ ಬುಡವನ್ನು ಅಗೆಯಬಾರದು. ಯಾರ ತಲೆಯನ್ನು ಕೆಳಗೆ ಉರುಳಿಸಲು ಅಸಾಧ್ಯವೋ ಅಂತಹವನ ಮೇಲೆ ಪ್ರಹಾರ ಮಾಡಬಾರದು.

ಇತೀದಮುಕ್ತಂ ವೃಜಿನಾಭಿಸಂಹಿತಂ
ನ ಚೈತದೇವಂ ಪುರುಷಃ ಸಮಾಚರೇತ್ ।

ಪರಪ್ರಯುಕ್ತಂ ತು ಕಥಂ ನಿಶಾಮಯೇ-
ದತೋ ಮಯೋಕ್ತಂ ಭವತೋ ಹಿತಾರ್ಥಿನಾ ॥೬೯॥

ಇಲ್ಲಿಯವರೆಗೂ ಹೇಳಿದ ನೀತಿಯಲ್ಲಿ ಪಾಪವು ತುಂಬಿದೆ. ಯಾವುದೇ ಪುರುಷನು ಹೀಗೆ ಮಾಡಬಾರದು. ಆದರೆ ಶತ್ರುವು ಈ ನೀತಿಯನ್ನು ಪ್ರಯೋಗಿಸಿದರೆ ಹೇಗೆ ನೋಡಬೇಕು? ಆದ್ದರಿಂದ ನಿನ್ನ ಹಿತಕ್ಕಾಗಿ ಈ ನೀತಿಯನ್ನು ನಿನಗೆ ಹೇಳಿದ್ದೇನೆ.

ಯಥಾವದುಕ್ತಂ ವಚನಂ ಹಿತಂ ತದಾ
ನಿಶಮ್ಯ ವಿಪ್ರೇಣ ಸುವೀರರಾಷ್ಟ್ರಿಯಃ ।
ತಥಾಕರೋದ್ ವಾಕ್ಯಮದೀನಚೇತನಃ
ಶ್ರಿಯಂ ಚ ದೀಪ್ತಾಂ ಬುಭುಜೇ ಸಬಾಂಧವಃ ॥೭೦॥

ಸೌವೀರ ರಾಷ್ಟ್ರದ ರಾಜನು (ಭರದ್ವಾಜ ಎಂಬ) ಬ್ರಾಹ್ಮಣನಿಂದ ಹೇಳಲ್ಪಟ್ಟ ಹಿತವಚನವನ್ನು ಕೇಳಿ, ಸೋಲದ, ಕುಸಿಯದ ಮನಸ್ಸಿನ ಆ ರಾಜನು ಹಾಗೆಯೇ ಮಾಡಿದನು. ತನ್ನ ಬಾಂಧವರೊಂದಿಗೆ ಉಜ್ವಲವಾದ ಸಂಪತ್ತನ್ನು ಅನುಭವಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಹತ್ತನೆಯ ಅಧ್ಯಾಯವು ಮುಗಿಯಿತು.

★ ★ ★ ★

ಹನ್ನೊಂದನೆಯ ಅಧ್ಯಾಯ

ಮೌಲ್ಯಗಳು ನಶಿಸಿದಾಗ, ವ್ಯವಸ್ಥೆಗಳು ಕುಸಿದಾಗ, ಬದುಕು ದುರ್ಭರವಾದಾಗ ಇತಿಹಾಸ ಮತ್ತು ಧರ್ಮಸೂಕ್ಷ್ಮಗಳನ್ನು ತಿಳಿದು ಜೀವಿಸಬೇಕು. ವಿಶ್ವಾಮಿತ್ರ-ಶ್ವಪಚ ಸಂವಾದ.

ಯುಧಿಷ್ಠಿರಃ

ಹೀನೇ ಪರಮಕೇ ಧರ್ಮೇ ಸರ್ವಲೋಕಾತಿಲಂಘಿನಿ ।
ಅಧರ್ಮೇ ಧರ್ಮತಾಂ ನೀತೇ ಧರ್ಮೇ ಚಾಧರ್ಮತಾಂ ಗತೇ ॥೧॥

ಪ್ರಭುವೇ! ಪರಮಧರ್ಮವು (ಉನ್ನತ ಮೌಲ್ಯಗಳು) ನಶಿಸಿದಾಗ, ಎಲ್ಲ ಜನರೂ ಉಲ್ಲಂಘನೆಯನ್ನು ಮಾಡುತ್ತಿರುವಾಗ, ಅಧರ್ಮವು ಧರ್ಮ ಎಂದೂ, ಧರ್ಮವು ಅಧರ್ಮ ಎಂದೂ ಪರಿಗಣನೆಯನ್ನು (ಮಾನ್ಯತೆಯನ್ನು) ಪಡೆದಾಗ

ಮರ್ಯಾದಾಸು ಪ್ರಭಿನ್ನಾಸು ಕ್ಷುಭಿತೇ ಧರ್ಮನಿಶ್ಚಯೇ ।
ರಾಜಭಿಃ ಪೀಡಿತೇ ಲೋಕೇ ಚೋರೈರ್ವಾಪಿ ವಿಶಾಂ ಪತೇ ॥೨॥

ಮರ್ಯಾದೆಗಳು (ನಡವಳಿಕೆಗಳ ಇತಿಮಿತಿಗಳು) ಭಗ್ನವಾದಾಗ, ಧರ್ಮನಿರ್ಣಯವು ಕ್ಷೋಭೆಗೆ ಒಳಗಾದಾಗ, ಜನರು ರಾಜರುಗಳಿಂದ, ಕಳ್ಳರಿಂದ ಪೀಡಿತರಾದಾಗ,

ಸರ್ವಾಶ್ರಮೇಷು ಮೂಢೇಷು ಕರ್ಮಸೂಪಹತೇಷು ಚ ।
ಕಾಮಾನ್ಮೋಹಾಚ್ಚ ಲೋಭಾಚ್ಚ ಭಯಂ ಪಶ್ಯತ್ಸು ಭಾರತ ॥೩॥

ಭರತಕುಲಸಂಜಾತ! ಕಾಮ-ಮೋಹ-ಲೋಭಗಳಿಂದ ಎಲ್ಲ ಆಶ್ರಮಗಳೂ (ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಗಳು) ಮೂಢಸ್ಥಿತಿಯನ್ನು ತಲುಪಿದಾಗ, ಎಲ್ಲ ಆಚರಣೆಗಳು-ಕರ್ತವ್ಯಗಳು ಭಂಗಕ್ಕೆ ಒಳಗಾದಾಗ, ಎಲ್ಲ ಕಡೆಯೂ ಭಯದ ಪರಿಸ್ಥಿತಿಯನ್ನೇ ಕಾಣುವಾಗ,

ಅವಿಶಸ್ತೇಷು ಸರ್ವೇಷು ನಿತ್ಯಭೀತೇಷು ಪಾರ್ಥಿವ ।
ನಿಕೃತ್ಯಾ ಹನ್ಯಮಾನೇಷು ವಂಚಯತ್ಸು ಪರಸ್ಪರಮ್ ॥೪॥

ರಾಜನೇ! ಎಲ್ಲರೂ ವಿಶ್ವಾಸಹೀನರಾದಾಗ, ನಿರಂತರವಾಗಿ ಹೆದರಿದಾಗ, ವಂಚನೆಯಿಂದ ಪೀಡಿತರಾಗುತ್ತಿರುವಾಗ, ಪರಸ್ಪರ ವಂಚಿಸುತ್ತಿರುವಾಗ,

ಸಂಪ್ರದೀಪ್ತೇಷು ದೇಶೇಷು ಬ್ರಾಹ್ಮಣ್ಯೇ ಚಾಭಿಪೀಡಿತೇ ।
ಅವರ್ಷತಿ ಚ ಪರ್ಜನ್ಯೇ ಮಿಥೋ ಭೇದೇ ಸಮುತ್ಥಿತೇ ॥೫॥

ನಾನಾ ಪ್ರದೇಶಗಳು ಅಗ್ನಿಯಿಂದ ಉರಿದು ಹೋಗುತ್ತಿರುವಾಗ, ಬ್ರಹ್ಮಾನ್ವೇಷಣೆಯನ್ನು ಮಾಡುವ ಮನೋಧರ್ಮವು ಉಪದ್ರವಕ್ಕೆ ಒಳಗಾದಾಗ, ಮೋಡಗಳು ಮಳೆ ಸುರಿಸದಿರುವಾಗ, ಪರಸ್ಪರ ಒಡಕು ಹುಟ್ಟಿದಾಗ,

ಸರ್ವಸ್ಮಿನ್ ದಸ್ಯುಸಾದ್ಭೂತೇ ಪೃಥಿವ್ಯಾಮುಪಜೀವನೇ ।
ಕೇನ ಸ್ವಿದ್ಬ್ರಾಹ್ಮಣೋ ಜೀವೇಜ್ಜಘನ್ಯೇ ಕಾಲ ಆಗತೇ ॥೬॥

ಲೋಕದ ಜೀವನೋಪಾಯಗಳೆಲ್ಲವೂ ಲೂಟಿಕೋರರ ವಶವಾಗಿರುವಾಗ, ಅವನತಿಯ ಕಾಲವು ಬಂದಾಗ ಬ್ರಹ್ಮನಿಷ್ಠ ಜನರು ಹೇಗೆ ಜೀವಿಸಬೇಕು?

ಅತಿತ್ಯಕ್ಷುಃ ಪುತ್ರಪೌತ್ರಾನನುಕ್ರೋಶಾನ್ನರಾಧಿಪ ।
ಕಥಮಾಪತ್ಸು ವರ್ತೇತ ತನ್ಮೇ ಬ್ರೂಹಿ ಪಿತಾಮಹ ॥೭॥

ಪಿತಾಮಹನೇ! ದಯಾಲುವಾಗಿದ್ದು, ಮಕ್ಕಳನ್ನು, ಮೊಮ್ಮಕ್ಕಳನ್ನು ಕೈಬಿಡಲಾಗದವನು ಆಪತ್ಕಾಲದಲ್ಲಿ ಹೇಗೆ ಜೀವಿಸಬೇಕು? ದಯವಿಟ್ಟು ತಿಳಿಸು.

ಕಥಂ ಚ ರಾಜಾ ವರ್ತೇತ ಲೋಕೇ ಕಲುಷತಾಂ ಗತೇ ।
ಕಥಮರ್ಥಾಚ್ಚ ಧರ್ಮಾಚ್ಚ ನ ಹೀಯೇತ ಪರಂತಪ ॥೮॥

ಪರಂತಪನೇ! ಇಡೀ ಲೋಕವು ನೀತಿ-ಮೌಲ್ಯಗಳನ್ನು ತ್ಯಜಿಸಿ ಮಲಿನವಾದಾಗ ರಾಜನು ಹೇಗೆ ವರ್ತಿಸಬೇಕು? ಅರ್ಥ (ಸಂಪತ್ತು) ಹೀನನಾಗದೆ, ಧರ್ಮಭ್ರಷ್ಟನಾಗದೆ ಇರುವ ದಾರಿ ಯಾವುದು?

ಭೀಷ್ಮಃ

ರಾಜಮೂಲಾ ಮಹಾರಾಜ ಯೋಗಕ್ಷೇಮಸುವೃಷ್ಟಯಃ ।
ಪ್ರಜಾಸು ವ್ಯಾಧಯಶ್ಚೈವ ಮರಣಂ ಚ ಭಯಾನಿ ಚ ॥೯॥

ಮಹಾರಾಜ! ರಾಜನು ಯೋಗ-ಕ್ಷೇಮ-ಸುವೃಷ್ಟಿ (ಒಳ್ಳೆಯ ಮಳೆ)ಗಳ ಮೂಲಕಾರಣ. ಪ್ರಜೆಗಳಲ್ಲಿ ವ್ಯಾಧಿಗಳು, ಮರಣ, ಭಯ ಇವುಗಳಿಗೂ ರಾಜನೇ ಮೂಲಕಾರಣ.

ಕೃತಂ ತ್ರೇತಾ ದ್ವಾಪರಶ್ಚ ಕಲಿಶ್ಚ ಭರತರ್ಷಭ ।
ರಾಜಮೂಲಾನಿ ಸರ್ವಾಣಿ ಮಮ ನಾಸ್ತ್ಯತ್ರ ಸಂಶಯಃ ॥೧೦॥

ಭರತಕುಲಶ್ರೇಷ್ಠ! ಕೃತ, ತ್ರೇತಾ, ದ್ವಾಪರ, ಕಲಿ- ಇವೆಲ್ಲವುಗಳಿಗೂ ರಾಜನೇ ಮೂಲಕಾರಣ. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ.

ತಸ್ಮಿಂಸ್ತ್ವಭ್ಯಾಗತೇ ಕಾಲೇ ಪ್ರಜಾನಾಂ ದೋಷಕಾರಕೇ ।
ವಿಜ್ಞಾನಬಲಮಾಸ್ಥಾಯ ಜೀವಿತವ್ಯಂ ತದಾ ಭವೇತ್ ॥೧೧॥

ಪ್ರಜೆಗಳಿಗೆ ತೊಂದರೆ ಮಾಡುವ ಆ ಕಾಲವು (ಕಲಿಕಾಲವು) ಬಂದಾಗ ವಿಜ್ಞಾನ ಬಲವನ್ನು (ಇತಿಹಾಸ-ಧರ್ಮಸೂಕ್ಷ್ಮಗಳ ಜ್ಞಾನದ ಬಲವನ್ನು) ಅವಲಂಬಿಸಿ ಜೀವಿಸಬೇಕು.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ವಿಶ್ವಾಮಿತ್ರಸ್ಯ ಸಂವಾದಂ ಚಂಡಾಲಸ್ಯ ಚ ಪಕ್ಕಣೇ ॥೧೨॥

ಈ ವಿಷಯದಲ್ಲಿ ಬೇಡನ ಮನೆಯೊಂದರಲ್ಲಿ ನಡೆದ ಪುರಾತನವಾದ ವಿಶ್ವಾಮಿತ್ರ-ಬೇಡರ ಸಂವಾದವನ್ನು ಹೇಳುತ್ತಾರೆ.

ತ್ರೇತಾದ್ವಾಪರಯೋಃ ಸಂಧೌ ಪುರಾ ದೈವವಿಧಿಕ್ರಮಾತ್ ।
ಅನಾವೃಷ್ಟಿರಭೂದ್ ಘೋರಾ ರಾಜನ್ ದ್ವಾದಶವಾರ್ಷಿಕೀ ॥೧೩॥

ರಾಜನೆ! ಹಿಂದೆ ತ್ರೇತಾ-ದ್ವಾಪರಗಳ ಸಂಧಿಕಾಲದಲ್ಲಿ ದೈವಕೃತ ಶಾಸನದಂತೆ ಹನ್ನೆರಡು ವರ್ಷ ಘೋರ ಅನಾವೃಷ್ಟಿಯು ಸಂಭವಿಸಿತು.

ಪ್ರಜಾನಾಮಭಿವೃದ್ಧಾನಾಂ ಯುಗಾಂತೇ ಪರ್ಯುಪಸ್ಥಿತೇ ।
ತ್ರೇತಾನಿರ್ಮೋಕ್ಷಸಮಯೇ ದ್ವಾಪರಪ್ರತಿಪಾದನೇ ॥೧೪॥

ನ ವವರ್ಷ ಸಹಸ್ರಾಕ್ಷಃ ಪ್ರತಿಲೋಮೋಽಭವದ್ ಗುರುಃ ।
ಜಗಾಮ ದಕ್ಷಿಣಂ ಮಾರ್ಗಂ ಸೋಮೋ ವ್ಯಾವೃತ್ತಲಕ್ಷಣಃ ॥೧೫॥

ತ್ರೇತಾಯುಗವು ಮುಗಿಯುವ, ದ್ವಾಪರ ಯುಗವು ಪ್ರಾರಂಭವಾಗುವ, ಪ್ರಜೆಗಳ ಸಮೃದ್ಧಿ ಯುಗದ ಅಂತ್ಯವು ಸಮೀಪಿಸಿದಾಗ ಇಂದ್ರನು ಮಳೆ ಸುರಿಸಲಿಲ್ಲ. ಗುರುವು ವಕ್ರಗತಿಯಲ್ಲಿದ್ದನು. ಚಂದ್ರನು ಹಿನ್ನಡೆಯ ಲಕ್ಷಣವನ್ನು ಪಡೆದು ದಕ್ಷಿಣ ದಿಕ್ಕಿಗೆ ಚಲಿಸಿದನು.

ನಾವಶ್ಯಾಯೋಽಪಿ ರಾತ್ರ್ಯಂತೇ ಕುತ ಏವಾಭ್ರರಾಜಯಃ ।
ನದ್ಯಃ ಸಂಕ್ಷಿಪ್ತತೋಯೌಘಾಃ ಕ್ವಚಿದಂತರ್ಗತಾಭವನ್ ॥೧೬॥

ರಾತ್ರಿಯ ಕೊನೆಯಲ್ಲಿ ಇಬ್ಬನಿಯೂ ಇರಲಿಲ್ಲ. ಮೋಡದ ಸಾಲುಗಳಿಂದ ಎಲ್ಲಿಂದ? ನದಿಗಳಲ್ಲಿ ನೀರಿನ ರಾಶಿಯು ಕಡಿಮೆಯಾಗಿ, ಅವು ಎಲ್ಲಿಯೋ ಅಡಗಿ ಹೋದವು.

ಸರಾಂಸಿ ಸರಿತಶ್ಚೈವ ಕೂಪಾಃ ಪ್ರಸ್ರವಣಾನಿ ಚ ।
ಹತತ್ವಿಟ್ಕಾನ್ಯಲಕ್ಷ್ಯಂತ ವಿಸರ್ಗಾದ್ ಪೂರ್ವಕಾರಿತಾತ್ ॥೧೭॥

ಹಿಂದೆ ಆಗಿದ್ದ ಸೃಷ್ಟಿಗೆ ವಿರುದ್ಧವಾದ ಸೃಷ್ಟಿಯಿಂದ ಸರೋವರಗಳು, ನದಿಗಳು, ಭಾವಿಗಳು, ಚಿಲುಮೆಗಳು ಕಾಂತಿಹೀನವಾಗಿದ್ದವು.

ಉಪಶುಷ್ಕಜಲಸ್ಥಾಯಾ ವಿನಿವೃತ್ತಸಭಾಪ್ರಪಾ ।
ನಿವೃತ್ತಯಜ್ಞಸ್ವಾಧ್ಯಾಯಾ ನಿರ್ವಷಟ್ಕಾರಮಂಗಲಾ ॥೧೮॥

ಉತ್ಪನ್ನಕೃಷಿಗೋರಕ್ಷ್ಯಾ ನಿವೃತ್ತವಿಪಣಾಪಣಾ ।
ನಿವೃತ್ತಪೂಗಸಮಯಾ ಸಂಪ್ರನಷ್ಟಮಹೋತ್ಸವಾ ॥೧೯॥

ಜಲಸ್ಥಾನಗಳು ಒಣಗಿದ್ದವು. ಸಭೆ, ಅರವಟ್ಟಿಗೆಗಳು ನಿಂತುಹೋಗಿದ್ದವು. ಯಜ್ಞ ಮತ್ತು ವೇದಾಧ್ಯಯನಗಳೂ, ವಷಟ್‌ಕಾರದ ಮಂಗಳ ಸಂದರ್ಭಗಳೂ ನಿಂತು ಹೋಗಿದ್ದವು. ಕೃಷಿ-ಗೋರಕ್ಷಣೆಗಳು ನಾಶವಾಗಿದ್ದವು. ಕ್ರಯ-ವಿಕ್ರಯಗಳು ನಿಂತು ಹೋಗಿದ್ದವು. ಸಾಮಗ್ರಿಗಳ ಸಂಗ್ರಹವೂ ನಿಂತುಹೋಗಿತ್ತು. ಮಹೋತ್ಸವಗಳು ನಡೆಯುತ್ತಿರಲಿಲ್ಲ.

ಅಸ್ಥಿಕಂಕಾಲಸಂಕೀರ್ಣಾ ಹಾಹಾಭೂತಜನಾಕುಲಾ ।
ಶೂನ್ಯಭೂಯಿಷ್ಠನಗರಾ ದಗ್ಧಗ್ರಾಮನಿವೇಶನಾ ॥೨೦॥

ಪೃಥಿವಿಯಲ್ಲಿ ಎಲ್ಲಕಡೆ ಅಸ್ಥಿಗಳು (ಕೈ-ಕಾಲು ಮೊದಲಾದವುಗಳ ಎಲುಬುಗಳು), ಕಂಕಾಲಗಳು (ಶರೀರದ ಬೇರೆ ಭಾಗಗಳ ಎಲುಬುಗಳು) ಚದುರಿದ್ದವು. ಜನರು ಹಾಹಾಕಾರಕ್ಕೆ ಒಳಗಾಗಿದ್ದರು. ನಗರಗಳು ಖಾಲಿ ಖಾಲಿಯಾಗಿದ್ದವು. ಗ್ರಾಮಗಳೂ, ಮನೆಗಳೂ ಸುಟ್ಟುಹೋಗಿದ್ದವು.

ಕ್ವಚಿಚ್ಚೋರೈಃ ಕ್ವಚಿಚ್ಛಸ್ತ್ರೈಃ ಕ್ವಚಿದ್ರಾಜಭಿರಾತುರೈಃ ।
ಪರಸ್ಪರಭಯಾಚ್ಚೈವ ಶೂನ್ಯಭೂಯಿಷ್ಠನಿರ್ಜನಾ ॥೨೧॥

ಕೆಲವು ಕಡೆ ಕಳ್ಳರಿಂದ, ಕೆಲವು ಕಡೆ ಶಸ್ತ್ರಧಾರಿಗಳಿಂದ, ಕೆಲವು ಕಡೆ ರಾಜರುಗಳಿಂದ, ಕೆಲವು ಕಡೆ ಕ್ಲೇಶಕ್ಕೆ ಒಳಗಾದವರಿಂದ ಉಪದ್ರವಕ್ಕೆ ಒಳಗಾದ ಭೂಮಿಯು ಜನರಹಿತವಾಗಿ ಖಾಲಿಖಾಲಿಯಾಗಿತ್ತು.

ಗತದೈವತಸಂಕಲ್ಪಾ ವೃದ್ಧಬಾಲವಿನಾಕೃತಾ ।
ಗೋಜಾವಿಮಹಿಷೈರ್ಹೀನಾ ಪರಸ್ಪರಹರಾಹರಾ ॥೨೨॥

ದೇವಮಂದಿರಗಳು ನಾಶವಾಗಿದ್ದವು. ವೃದ್ಧರೂ, ಬಾಲರೂ ಇರಲಿಲ್ಲ. ಗೋವುಗಳು, ಕುರಿಗಳೂ, ಮೇಕೆಗಳೂ, ಎಮ್ಮೆಗಳೂ ಇರಲಿಲ್ಲ. ಇದ್ದ ಜನಗಳು, ಪ್ರಾಣಿಗಳು ಪರಸ್ಪರ ಕಚ್ಚಾಡುತ್ತಿದ್ದರು.

ಹತವಿಪ್ರಾ ಹತಾರಕ್ಷಾ ಪ್ರನಷ್ಟೌಷಧಿಸಂಚಯಾ ।
ಶ್ಯಾವಭೂತನರಪ್ರಾಯಾ ಬಭೂವ ವಸುಧಾ ತದಾ ॥೨೩॥

ಆಗ ಭೂಮಿಯಲ್ಲಿ ವಿಪ್ರರು ನಾಶವಾಗಿದ್ದರು. ರಕ್ಷಕರು ಇರಲಿಲ್ಲ. ಆಹಾರ ಧಾನ್ಯಗಳ, ಹಣ್ಣು-ಹಂಪಲುಗಳ ರಾಶಿ ಕಾಣದಂತಾಗಿತ್ತು. ಜನರೆಲ್ಲ ತಪಿಸಿ, ತಪಿಸಿ ಕಪ್ಪಾಗಿದ್ದರು. ಶವದಂತಾಗಿದ್ದರು.

ತಸ್ಮಿನ್ ಪ್ರತಿಭಯೇ ಕಾಲೇ ಕ್ಷೀಣೇ ಧರ್ಮೇ ಯುಧಿಷ್ಠಿರ ।
ಬಭ್ರಮುಃ ಕ್ಷುಧಿತಾ ಮರ್ತ್ಯಾಃ ಖಾದಂತಃ ಸ್ಮ ಪರಸ್ಪರಮ್ ॥೨೪॥

ಯುಧಿಷ್ಠಿರ! ಆ ಭಯಂಕರ ಕಾಲದಲ್ಲಿ ಧರ್ಮವು ಕ್ಷೀಣಿಸಿದ್ದಾಗ ಹಸಿವೆಯಿಂದ ಆರ್ತರಾದ ಮನುಷ್ಯರು ಒಬ್ಬರನ್ನೊಬ್ಬರು ತಿನ್ನುತ್ತಾ ಅಲೆಯುತ್ತಿದ್ದರು.

ಋಷಯೋ ನಿಯಮಾಂಸ್ಯಕ್ತ್ವಾ ಪರಿತ್ಯಕ್ತಾಗ್ನಿದೈವತಾಃ ।
ಆಶ್ರಮಾನ್ ಸಂಪರಿತ್ಯಜ್ಯ ಪರ್ಯಧಾವನ್ನಿತಸ್ತತಃ ॥೨೫॥

ಋಷಿಗಳು ನಿಯಮಗಳನ್ನು ಪರಿತ್ಯಜಿಸಿ, ಅಗ್ನಿಯಲ್ಲಿ ದೇವತಾರಾಧನೆಯನ್ನು, ಬೇರೆ ವಿಹಿತ ದೇವತಾರಾಧನೆಯನ್ನೂ ಪರಿತ್ಯಜಿಸಿ, ಆಶ್ರಮಗಳನ್ನೂ ಪರಿತ್ಯಜಿಸಿ ಎಲ್ಲೆಲ್ಲೋ ಅಲೆದರು.

ವಿಶ್ವಾಮಿತ್ರೋಽಥ ಭಗವಾನ್ಮಹರ್ಷಿರನಿಕೇತನಃ ।
ಕ್ಷುಧಾ ಪರಿಗತೋ ಧೀಮಾನ್ ಸಮಂತಾತ್ ಪರ್ಯಧಾವತ ॥೨೬॥

ಇದೇ ಸಮಯದಲ್ಲಿದ್ದ ಸ್ಥಿರ ವಸತಿರಹಿತರಾಗಿದ್ದ, ಧೀಮಂತರಾಗಿದ್ದ, ಭಗವಾನ್ ವಿಶ್ವಾಮಿತ್ರ ಮಹರ್ಷಿಗಳು ಹಸಿವೆಯಿಂದ ಪೀಡಿತರಾಗಿ ಎಲ್ಲೆಲ್ಲೋ ಅಲೆದಾಡಿದರು.

ಸ ಕದಾಚಿತ್ ಪರಿಪತನ್ ಶ್ವಪಚಾನಾಂ ನಿವೇಶನಮ್ ।
ಹಿಂಸ್ರಾಣಾಂ ಪ್ರಾಣಿಹಂತ್ರ್ಯಾಣಾಮಾಸಸಾದ ವನೇ ಕ್ವಚಿತ್ ॥೨೭॥

ಹೀಗೆ ಅಲೆಯುತ್ತಿದ್ದ ಅವರು ಒಮ್ಮೆ ಒಂದು ವನಪ್ರದೇಶದಲ್ಲಿ ಹಿಂಸೆಯನ್ನು ಸಹಜವಾಗಿ ಮಾಡುವ, ಪ್ರಾಣಿವಧೆಯನ್ನು ಮಾಡುವ ಶ್ವಪಚರ ನಿವೇಶನಕ್ಕೆ ಹೋದರು.

ವಿಭಿನ್ನಕಲಶಾಕೀರ್ಣಂ ಶ್ವಚರ್ಮಾಚ್ಛಾದನಾಯುತಮ್ ।
ವರಾಹಖರಭಗ್ವಾಷ್ಟಿಕಪಾಲಘಟಸಂಕುಲಮ್ ॥೨೮॥

ಮೃತಚೇಲಪರಿಸ್ತೀರ್ಣಂ ನಿರ್ಮಲಂ ಕೃತ್ತಿಭೂಷಿತಮ್ ।
ಸರ್ಪನಿರ್ಮೋಕಮಾಲಾಭಿಃ ಕೃತಚಿಹ್ನಕುಟೀಮಠಮ್ ॥೨೯॥

ಉಲೂಕಪಕ್ಷಧ್ವಜಿಭಿರ್ದೇವತಾಯತನೈರ್ವೃತಮ್ ।
ಲೋಹಘಂಟಾಪರಿಷ್ಕಾರಂ ಶ್ವಯೂಥಪರಿವಾರಿತಮ್ ॥೩೦॥

ಆ ನಿವೇಶನದಲ್ಲಿ ಒಡೆದ ಮಡಕೆಗಳ ಚೂರುಗಳು ಹರಡಿದ್ದವು. ನಾಯಿಗಳ ಚರ್ಮಗಳನ್ನು ಪರದೆಯಾಗಿ ಹಾಕಿದ್ದರು. ಹಂದಿ, ಕತ್ತೆಗಳ ಮುರಿದ ಮೂಳೆಗಳು, ತಲೆ ಬುರುಡೆಗಳು, ಮಡಕೆಗಳು ತುಂಬಿದ್ದವು. ಹೆಣದ ಮೇಲಿನ ಬಟ್ಟೆಗಳನ್ನು ಹಾಕಿದ್ದರು. ಆ ನಿವೇಶನವು ಬಹಳ ಮಲಿನವಾಗಿತ್ತು. ಆನೆಯ ಚರ್ಮಗಳಿಂದ ಅಲಂಕೃತವಾಗಿತ್ತು. ಹಾವಿನ ಪೊರೆಗಳ ಮಾಲೆಗಳಿಂದ ಕುಟೀರವನ್ನು ಅಲಂಕರಿಸಿದ್ದರು. ಅಲ್ಲಿಯ ದೇವಮಂದಿರಗಳಲ್ಲಿ ಗೂಬೆಗಳ ರೆಕ್ಕೆಗಳನ್ನು ಧ್ವಜವಾಗಿ ಅಲಂಕರಿಸಿದ್ದರು. ಲೋಹದ ಘಂಟೆಗಳಿದ್ದವು. ನಾಯಿಗಳ ಗುಂಪು ಆ ಜನರ ಪರಿವಾರವಾಗಿತ್ತು.

ತತ್ ಪ್ರವಿಶ್ಯ ಕ್ಷುಧಾವಿಷ್ಟೋ ಗಾಧೇಃ ಪುತ್ರೋ ಮಹಾನೃಷಿಃ ।
ಆಹಾರಾನ್ವೇಷಣೇ ಯುಕ್ತಃ ಪರಂ ಯತ್ನಂ ಸಮಾಸ್ಥಿತಃ ॥೩೧॥

ಹಸಿವೆಯ ಆವೇಶಕ್ಕೊಳಗಾಗಿದ್ದ, ಗಾಧಿಪುತ್ರನಾದ ಆ ಮಹರ್ಷಿಯು ಆ ನಿವೇಶನವನ್ನು ಪ್ರವೇಶಿಸಿ ಆಹಾರಾನ್ವೇಷಣೆಗೆ ಭಾರೀ ಪ್ರಯತ್ನವನ್ನೇ ಮಾಡಿದನು.

ನ ಚ ಕ್ವಚಿದವಿಂದತ್ಸ ಭಿಕ್ಷಮಾಣೋಽಪಿ ಕೌಶಿಕಃ ।
ಮಾಂಸಮನ್ನಂ ಮೂಲಫಲಮನ್ಯದ್ ವಾ ತತ್ರ ಕಿಂಚನ ॥೩೨॥

ಕೌಶಿಕನಿಗೆ (ವಿಶ್ವಾಮಿತ್ರನಿಗೆ) ಬೇಡಿದರೂ ಮಾಂಸ, ಅನ್ನ, ಮೂಲ, ಫಲ ಅಥವಾ ಏನಾದರೂ ಆಹಾರ ಸಿಗಲಿಲ್ಲ.

ಅಹೋ ಕೃಚ್ಛ್ರಂ ಮಯಾ ಪ್ರಾಪ್ತಮಿತಿ ನಿಶ್ಚಿತ್ಯ ಕೌಶಿಕಃ ।
ಪಪಾತ ಭೂಮೌ ದೌರ್ಬಲ್ಯಾತ್ತಸ್ಮಿಂಶ್ಚಂಡಾಲಪಕ್ಕಣೇ ॥೩೩॥

ಅಯ್ಯೋ! ಎಂತಹ ಕಷ್ಟಕ್ಕೆ ಸಿಕ್ಕಿದ್ದೇನೆ ಎಂದುಕೊಳ್ಳುತ್ತಾ ಆ ಮುನಿಯು ಅಶಕ್ತಿಯಿಂದ ಆ ಚಂಡಾಲನ ನಿವೇಶನದಲ್ಲಿ ಕುಸಿದುಬಿದ್ದನು.

ಚಿಂತಯಾಮಾಸ ಸ ಮುನಿಃ ಕಿಂ ನು ಮೇ ಸುಕೃತಂ ಭವೇತ್ ।
ಕಥಂ ವೃಥಾ ನ ಮೃತ್ಯುಃ ಸ್ಯಾದಿತಿ ಪಾರ್ಥಿವಸತ್ತಮ ॥೩೪॥

ರಾಜಶ್ರೇಷ್ಠ! ಆ ಮುನಿಯು ನಾನೀಗ ಮಾಡಬಹುದಾದ ಸರಿಯಾದ ಕೆಲಸ ಯಾವುದು? ವ್ಯರ್ಥವಾಗಿ ಮೃತ್ಯುವು ಸಂಭವಿಸದಿರಲು ನಾನು ಈಗ ಏನು ಮಾಡಬೇಕು? ಎಂದು ಚಿಂತಿಸಿದನು.

ಸ ದದರ್ಶ ಶ್ವಮಾಂಸಸ್ಯ ಕುತಂತ್ರಿಕತತಿಂ ಮುನಿಃ ।
ಚಂಡಾಲಸ್ಯ ಗೃಹೇ ರಾಜನ್ ಸದ್ಯಃ ಶಸ್ತ್ರಹತಸ್ಯ ಚ ॥೩೫॥

ರಾಜನೆ! ಆ ಮುನಿಯು ಚಂಡಾಲನ ಮನೆಯಲ್ಲಿ ಆಗ ತಾನೇ ಶಸ್ತ್ರಹತವಾದ ನಾಯಿಮಾಂಸವನ್ನು ನೇತುಹಾಕಿದ್ದ ತಂತಿಯ ಬಲೆಯನ್ನು ನೋಡಿದನು.

ಸ ಚಿಂತಯಾಮಾಸ ತದಾ ಸ್ತೇಯಂ ಕಾರ್ಯಮಿತೋ ಮಯಾ ।
ನ ಹೀದಾನೀಮುಪಾಯೋಽನ್ಯೋ ವಿದ್ಯತೇ ಪ್ರಾಣಧಾರಣೇ ॥೩೬॥

ಅವನು ಆಲೋಚಿಸಿದನು 'ನಾನು ಇಲ್ಲಿ ಕಳ್ಳತನವನ್ನು ಮಾಡಬೇಕು. ಪ್ರಾಣ ಉಳಿಸಿಕೊಳ್ಳಲು ಬೇರೆ ಉಪಾಯವಿಲ್ಲ'.

ಆಪತ್ಸು ವಿಹಿತಂ ಸ್ತೇಯಂ ವಿಶಿಷ್ಟಸ್ಯ ನಿಹೀನತಃ ।
ಪರಸ್ಪರಂ ಭವೇತ್ ಪೂರ್ವಮಾಸ್ತೇಯಮಿತಿ ನಿಶ್ಚಯಃ ॥೩೭॥

ಆಪತ್ಕಾಲದಲ್ಲಿ ತನಗಿಂತ ವಿಶಿಷ್ಟರ, ತನಗೆ ಸಮಾನರ ಅಥವಾ ತನಗಿಂತ ಹೀನರ ವಸ್ತುಗಳ ಅಪಹಾರವನ್ನು ಪ್ರಾಜ್ಞರು ಅಂಗೀಕರಿಸಿದ್ದಾರೆ. ಮುಂದಿನವರ, ಮುಂದಿನವರ (ಹೀನರ ಅಥವಾ ಸಮಾನರ) ವಸ್ತುಗಳನ್ನು ಅಪಹರಿಸುವ ಅವಕಾಶವಿದ್ದಾಗ ಮೊದಲಿನವರ (ಸಮಾನರ ಅಥವಾ ವಿಶಿಷ್ಟರ) ವಸ್ತುಗಳನು ಅಪಹರಿಸಬಾರದು ಎಂದು ಪ್ರಾಜ್ಞರ ನಿರ್ಣಯ.

ಹೀನಾದಾದೇಯಮಾದೌ ಸ್ಯಾತ್ ಸಮಾನಾತ್ತದನಂತರಮ್ ।
ಅಸಂಭವಾದಾದದೀತ ವಿಶಿಷ್ಟಾದಪಿ ಧಾರ್ಮಿಕಾತ್ ॥೩೮॥

ಹೀನನಾದವನ ವಸ್ತುವಿನ ಅಪಹಾರ ಮೊದಲ ಆಯ್ಕೆ. ಅದಕ್ಕೆ ಅವಕಾಶವಿಲ್ಲದಿದ್ದಾಗ ಸಮಾನನ ವಸ್ತುವಿನ ಅಪಹಾರವನ್ನು ಮಾಡಬೇಕು. ಅದಕ್ಕೂ ಅವಕಾಶವಿಲ್ಲದಿದ್ದಾಗ ಧಾರ್ಮಿಕನಾದ ವಿಶಿಷ್ಟನ ವಸ್ತುವನ್ನು ಅಪಹರಿಸಬೇಕು.

ಸೋಽಹಮಂತೇತ್ಯವಸ್ಥಾಯಾಂ ಹರಮಾಣಃ ಪರಿಗ್ರಹಾತ್ ।
ನ ಸ್ತೇಯದೋಷಂ ಪಶ್ಯಾಮಿ ಹರಿಷ್ಯಾಮ್ಯೇತದಾಮಿಷಮ್ ॥೩೯॥

ಪ್ರಾಣಗಳು ಹೋಗುವ ಸ್ಥಿತಿಯಲ್ಲಿರುವ ನಾನು ಈ ಮಾಂಸವನ್ನು ಅಪಹರಿಸುತ್ತೇನೆ. ಅಪಹರಿಸುವ ನಾನು ಕಳ್ಳತನದ ದೋಷಕ್ಕೆ ಒಳಗಾಗುವುದಿಲ್ಲ.

ಏತಾಂ ಬುದ್ಧಿ ಸಮಾಸ್ಥಾಯ ವಿಶ್ವಾಮಿತ್ರೋ ಮಹಾಮುನಿಃ ।
ತಸ್ಮಿನ್ ದೇಶೇ ಪ್ರಸುಷ್ಟಾವ ಪತಿತೋ ಯತ್ರ ಭಾರತ ॥೪೦॥

ಭಾರತನೇ! ಹೀಗೆ ನಿಶ್ಚಯಿಸಿ ಮಹಾಮುನಿ ವಿಶ್ವಾಮಿತ್ರನು ಶ್ವಪಚನು ಮಲಗಿದ ಜಾಗದಲ್ಲೇ ಮಲಗಿದನು.

ಸ ವಿಗಾಢಾಂ ನಿಶಾಂ ದೃಷ್ಟ್ವಾ ಸುಪ್ತೇ ಚಂಡಾಲಪಕ್ಕಣೇ ।
ಶನೈರುತ್ಥಾಯ ಭಗವಾನ್ ಪ್ರವಿವೇಶ ಕುಟೀಮಠಮ್ ॥೪೧॥

ರಾತ್ರಿಯು ಗಾಢವಾಗಿರುವುದನ್ನು ಕಂಡು, ಚಂಡಾಲರೆಲ್ಲರೂ ನಿದ್ರಿಸಿದ್ದಾಗ ಮೆಲ್ಲನೆ ಎದ್ದು ಚಂಡಾಲನ ಗುಡಿಸಲನ್ನು ಪ್ರವೇಶಿಸಿದನು.

ಸ ಸುಪ್ತ ಏವ ಚಂಡಾಲಃ ಶ್ಲೇಷ್ಮಾಪಿಹಿತಲೋಚನಃ ।
ಪರಿಭಿನ್ನಸ್ವರೋ ರೂಕ್ಷ ಉವಾಚಾಪ್ರಿಯದರ್ಶನಃ ॥೪೨॥

ಕಫದಿಂದಾಗಿ ಸ್ವಲ್ಪವೇ ಕಣ್ಣು ಮುಚ್ಚಿದ್ದ, ಗೊಗ್ಗರು ಧ್ವನಿಯ ಕಠೋರ ಸ್ವಭಾವದ, ಕುರೂಪಿಯಾದ ಚಂಡಾಲನು ಮಲಗಿಕೊಂಡೇ ಹೇಳಿದನು.

ಕಃ ಕುತಂತೀಂ ಘಟ್ಟಯತಿ ಸುಪ್ತೇ ಚಂಡಾಲಪಕ್ಕಣೇ ।
ಜಾಗರ್ಮಿ ನಾವಸುಪ್ತೋಽಸ್ಮಿ ಹತೋಽಸೀತಿ ಚ ದಾರುಣಃ ॥೪೩॥

ಚಂಡಾಲರು ನಿದ್ರಿಸಿರುವಾಗ, ತಂತಿಯಲ್ಲಿ ನೇತುಹಾಕಿರುವ ಮಾಂಸವನ್ನು ಅಪಹಾರ ಮಾಡುತ್ತಿರುವವನು ಯಾರು? ಎಚ್ಚರವಾಗಿದ್ದೇನೆ. ನಿದ್ರಿಸಿಲ್ಲ. ಈಗ ನೀನು ಸತ್ತೇ ಹೋಗುವಿ.

ವಿಶ್ವಾಮಿತ್ರೋಽಹಮಿತ್ಯೇವ ಸಹಸಾ ತಮುವಾಚ ಸಃ ।
ಸಹಸಾಭ್ಯಾಗತಭಯಃ ಸೋದ್ವೇಗಸ್ತೇನ ಕರ್ಮಣಾ ॥೪೪॥

ಆ ಕದಿಯುವ ಕೆಲಸದಿಂದಾಗಿ ಉದ್ವೇಗದಲ್ಲಿದ್ದ, ಹೆದರಿದ ವಿಶ್ವಾಮಿತ್ರನು 'ನಾನು ವಿಶ್ವಾಮಿತ್ರ' ಎಂದು ಹೇಳಿದನು.

ಚಂಡಾಲಸ್ತದ್ವಚಃ ಶ್ರುತ್ವಾ ಮಹರ್ಷೇರ್ಭಾವಿತಾತ್ಮನಃ ।
ಶಯನಾದುಪಸಂಭ್ರಾಂತ ಇಯೇಷ ಪತಿತುಂ ತತಃ ॥೪೫॥

ಚಂಡಾಲನು ಶುದ್ಧಾಂತಃಕರಣದ ಮಹರ್ಷಿಯ ಮಾತನ್ನು ಕೇಳಿ ಗಡಿಬಿಡಿಯಿಂದ ಹಾಸಿಗೆಯಿಂದ ಎದ್ದು ಋಷಿಯ ಪಾದಗಳಿಗೆ ಎರಗಲು ಬಯಸಿದನು.

ಸ ವಿಸೃಜ್ಯಾಶ್ರು ನೇತ್ರಾಭ್ಯಾಂ ಬಹುಮಾನಾತ್ಕೃತಾಂಜಲಿಃ ।
ಉವಾಚ ಕೌಶಿಕಂ ರಾತ್ರೌ ಬ್ರಹ್ಮನಿನ್ ಕಿಂ ತೇ ಚಿಕೀರ್ಷಿತಮ್ ॥೪೬॥

ಚಂಡಾಲನು ಕಣ್ಣುಗಳಿಂದ ನೀರು ಹರಿಸುತ್ತಾ, ಗೌರವದಿಂದ ಕೈಮುಗಿದು ಕೌಶಿಕನಿಗೆ ಹೇಳಿದನು. 'ಬ್ರಹ್ಮಜ್ಞಾನಿಗಳೇ, ನಿಮಗಾಗಿ ನಾನು ಏನು ಮಾಡಲಿ?' (ಅಥವಾ ನೀವು ಏನು ಮಾಡಲು ಬಯಸಿರುವಿರಿ?)

ವಿಶ್ವಾಮಿತ್ರಸ್ತು ಮಾತಂಗಮುವಾಚ ಪರಿಸಾಂತ್ವಯನ್ ।
ಕ್ಷುಧಿತೋಽಹಂ ಗತಪ್ರಾಣೋ ಹರಿಷ್ಯಾಮಿ ಶ್ವಜಾಘನೀಮ್ ॥೪೭॥

ವಿಶ್ವಾಮಿತ್ರನು ಚಂಡಾಲನನ್ನು ಓಲೈಸುತ್ತಾ ಹೇಳಿದನು. 'ನನಗೆ ಹಸಿವು, ಪ್ರಾಣ ಹೋಗುತ್ತಿದೆ. ನಾಯಿಯ ಸೊಂಟದ ಮಾಂಸವನ್ನು ತೆಗೆದುಕೊಳ್ಳುತ್ತೇನೆ'.

ಅವಸೀದಂತಿ ಮೇ ಪ್ರಾಣಾಃ ಸ್ಮೃತಿರ್ಮೇ ನಶ್ಯತಿ ಕ್ಷುಧಾ ।
ಸ್ವಧರ್ಮಂ ಬುಧ್ಯಮಾನೋಽಪಿ ಹರಿಷ್ಯಾಮಿ ಶ್ವಜಾಘನೀಮ್ ॥೪೮॥

ಹಸಿವೆಯಿಂದ ನನ್ನ ಪ್ರಾಣಗಳು ಕುಸಿಯುತ್ತಿವೆ. ಎಚ್ಚರ ಹೋಗುತ್ತಿದೆ. ಸ್ವಧರ್ಮದ ಜ್ಞಾನವಿದ್ದರೂ ನಾಯಿ ಮಾಂಸವನ್ನು ತೆಗೆದುಕೊಳ್ಳುತ್ತೇನೆ.

ಅಟನ್ ಭೈಕ್ಷಂ ನ ವಿನ್ದಾಮಿ ಯದಾ ಯುಷ್ಮಾಕಮಾಲಯೇ ।
ತದಾ ಬುದ್ಧಿಃ ಕೃತಾ ಪಾಪೇ ಹರಿಷ್ಯಾಮಿ ಶ್ವಜಾಘನೀಮ್ ॥೪೯॥

ಆಹಾರಕ್ಕಾಗಿ ಅಲೆಯುತ್ತಾ, ಎಲ್ಲೂ ಭಿಕ್ಷೆಯು ಸಿಗದೆ, ನಿಮ್ಮ ವಸತಿಯವರೆಗೆ ಬಂದಿದ್ದೇನೆ. ಈಗ ಪಾಪಬುದ್ಧಿಯು ಹುಟ್ಟಿದೆ. ನಾಯಿ ಮಾಂಸವನ್ನು ತೆಗೆದುಕೊಳ್ಳುತ್ತೇನೆ.

ತೃಷಿತಃ ಕಲುಷಂ ಪಾತಾ ನಾಸ್ತಿ ಹ್ರೀರಶನಾರ್ಥಿನಃ ।
ಕ್ಷುದ್ಧರ್ಮಂ ದೂಷಯತ್ಯತ್ರ ಹರಿಷ್ಯಾಮಿ ಶ್ವಜಾಘನೀಮ್ ॥೫೦॥

ಬಾಯಾರಿದವನು ಮಲಿನ ನೀರನ್ನು ಕುಡಿಯುತ್ತಾನೆ. ಹಸಿದವನಿಗೆ ನಾಚಿಕೆ ಇಲ್ಲ. ಹಸಿವು ಧರ್ಮವನ್ನು ಕೆಡಿಸುತ್ತದೆ. ನಾಯಿಮಾಂಸವನ್ನು ತೆಗೆದುಕೊಳ್ಳುತ್ತೇನೆ.

ಅಗ್ನಿರ್ಮುಖಂ ಪುರೋಧಾಶ್ಚ ದೇವಾನಾಂ ಶುಚಿಪಾದ್ ವಿಭುಃ ।
ಯಥಾ ಸ ಸರ್ವಭುಗ್ಬ್ರಹ್ಮಾ ತಥಾ ಮಾಂ ವಿದ್ಧಿ ಧರ್ಮತಃ ॥೫೧॥

ಅಗ್ನಿಯು ದೇವತೆಗಳ ಬಾಯಿ, ಪುರೋಹಿತ. ಶುಚಿಯನ್ನೇ ಬಯಸುತ್ತಾನೆ. ಆ ದೇವತೆ (ಅಗ್ನಿ) ಕೆಲವು ಸಂದರ್ಭದಲ್ಲಿ ಎಲ್ಲವನ್ನೂ ತಿನ್ನುತ್ತಾನೆ. ನೀನು ನನ್ನನ್ನು ಅಗ್ನಿಯಂತೆ ಎಂದು ತಿಳಿ. ನಾನು ಬ್ರಹ್ಮನಿಷ್ಠನೇ ಆಗಿದ್ದರೂ ಈಗ ಎಲ್ಲವನ್ನೂ ತಿನ್ನುತ್ತೇನೆ. ನನ್ನನ್ನು ಧರ್ಮನಿಷ್ಠ ಬ್ರಾಹ್ಮಣ ಎಂದು ತಿಳಿ.

ತಮುವಾಚ ಸ ಚಂಡಾಲೋ ಮಹರ್ಷೇ ಶೃಣು ಮೇ ವಚಃ ।
ಶ್ರುತ್ವಾ ತಥಾ ಸಮಾತಿಷ್ಠ ಯಥಾ ಧರ್ಮಾನ್ನ ಹೀಯಸೇ ॥೫೨॥

ಚಂಡಾಲನು ಮಹರ್ಷಿಗೆ ಹೇಳಿದನು. ಮಹರ್ಷಿಯೇ! ನನ್ನ ಮಾತನ್ನು ಕೇಳಿರಿ. ಕೇಳಿದ ನಂತರ ಧರ್ಮಹೀನನಾಗದಂತೆ ಆಚರಿಸಿರಿ.

ಮೃಗಾಣಾಮಧಮಂ ಶ್ವಾನಂ ಪ್ರವದಂತಿ ಮನೀಷಿಣಃ ।
ತಸ್ಯಾಪ್ಯಧಮ ಉದ್ದೇಶಃ ಶರೀರಸ್ಯ ತು ಜಾಘನೀ ॥೫೩॥

ಪ್ರಾಣಿಗಳಲ್ಲಿ ನಾಯಿ ಅಧಮ ಎಂದು ಪ್ರಾಜ್ಞರು ಹೇಳುತ್ತಾರೆ. ಅದರ ಶರೀರದ ಜಘನದ ಮಾಂಸವು ಮತ್ತೂ ಅಧಮ ಎಂದು ಪ್ರಾಜ್ಞರು ಹೇಳುತ್ತಾರೆ.

ನೇದಂ ಸಮ್ಯಗ್ವ್ಯವಸಿತಂ ಮಹರ್ಷೇ ಕರ್ಮ ವೈಕೃತಮ್ ।
ಚಂಡಾಲಸ್ವಸ್ಯ ಹರಣಮಭಕ್ಷ್ಯಸ್ಯ ವಿಶೇಷತಃ ॥೫೪॥

ಮಹರ್ಷಿಗಳೇ! ಚಂಡಾಲನ ವಸ್ತುವಿನ ಅಪಹಾರ ಅಥವಾ ಸ್ವೀಕಾರ, ಅದರಲ್ಲೂ ತಿನ್ನಬಾರದ ವಸ್ತುವಿನ ಸ್ವೀಕಾರ - ಇದು ಸರಿಯಾದ ಕೆಲಸವಲ್ಲ. ಇದು ವಿಕೃತ ನಡವಳಿಕೆ.

ಸಾಧ್ವನ್ಯಮನುಪಶ್ಯ ತ್ವಮುಪಾಯಂ ಪ್ರಾಣಧಾರಣೇ ।
ನ ಮಾಂಸಲೋಭಾತ್ ತಪಸೋ ನಾಶಸ್ತೇ ಸ್ಯಾನ್ಮಹಾಮುನೇ ॥೫೫॥

ಮಹಾಮುನಿಯೇ! ಪ್ರಾಣಧಾರಣೆಗಾಗಿ ನೀವು ಬೇರೆ ಉಪಾಯವನ್ನು ಸರಿಯಾಗಿ ಹುಡುಕಿಕೊಳ್ಳಿ. ಮಾಂಸದ ಮೇಲೆ ಆಸೆಯಿಂದ ನಿಮ್ಮ ತಪಸ್ಸು ನಾಶವಾಗಬಾರದು.

ಜಾನತೋಽವಿಹಿತೋ ಮಾರ್ಗೋ ನ ಕಾರ್ಯೋ ಧರ್ಮಸಂಕರಃ ।
ಮಾ ಸ್ಮ ಧರ್ಮಂ ಪರಿತ್ಯಾಕ್ಷೀಸ್ತ್ವಂ ಹಿ ಧರ್ಮವಿದುತ್ತಮಃ ॥೫೬॥

ಜ್ಞಾನಿಗಳಿಗೆ ಈ ಮಾರ್ಗವು ನಿಷಿದ್ಧ. ಧರ್ಮಸಾಂಕರ್ಯವನ್ನು ಮಾಡಬಾರದು. ಧರ್ಮವನ್ನು ತಿಳಿದವರಲ್ಲಿ ಉತ್ತಮನಾಗಿರುವ ನೀವು ಧರ್ಮವನ್ನು ಬಿಡಬೇಡಿ.

ವಿಶ್ವಾಮಿತ್ರಸ್ತತೋ ರಾಜನ್ನಿತ್ಯುಕ್ತೋ ಭರತರ್ಷಭ ।
ಕ್ಷುಧಾರ್ತಃ ಪ್ರತ್ಯುವಾಚೇದಂ ಪುನರೇವ ಮಹಾಮುನಿಃ ॥೫೭॥

ಭರತಕುಲಶ್ರೇಷ್ಠ! ಹೀಗೆ ಹೇಳಲ್ಪಟ್ಟ, ಹಸಿವೆಯ ಪೀಡೆಗೆ ಒಳಗಾಗಿದ್ದ ಮಹಾಮುನಿ ವಿಶ್ವಾಮಿತ್ರನು ಪುನಃ ಈ ಮಾತನ್ನು ಹೇಳಿದನು.

ನಿರಾಹಾರಸ್ಯ ಸುಮಹಾನ್ಮಮ ಕಾಲೋಽಭಿಧಾವತಃ ।
ನ ವಿದ್ಯತೇಽಭ್ಯುಪಾಯಶ್ಚ ಕಶ್ಚಿನ್ಮೇ ಪ್ರಾಣಧಾರಣೇ ॥೫೮॥

ಆಹಾರವಿಲ್ಲದೆ ಅಲೆಯುತ್ತಾ ಬಹಳ ಕಾಲ ಕಳೆದಿದೆ. ಪ್ರಾಣಧಾರಣೆಗೆ ನನ್ನಲ್ಲಿ ಇನ್ನು ಯಾವ ಉಪಾಯವೂ ಇಲ್ಲ.

ಯೇನ ತೇನ ವಿಶೇಷೇಣ ಕರ್ಮಣಾ ಯೇನ ಕೇನಚಿತ್ ।
ಅಭ್ಯುಜ್ಜೀವೇತ್ ಸೀದಮಾನಃ ಸಮರ್ಥೋ ಧರ್ಮಮಾಚರೇತ್ ॥೫೯॥

ಹಸಿವೆಯಿಂದ ಕುಸಿಯುತ್ತಿರುವವನು ಯಾವುದಾದರೂ ಕ್ರಮದಿಂದ ಪ್ರಾಣವನ್ನು ಉಳಿಸಿಕೊಳ್ಳಬೇಕು. ಶಕ್ತನಾದ ಮೇಲೆ ಧರ್ಮವನ್ನು ಆಚರಿಸಬೇಕು.

ಐಂದ್ರೋ ಧರ್ಮಃ ಕ್ಷತ್ರಿಯಾಣಾಂ ಬ್ರಾಹ್ಮಣಾನಾಮಥಾಗ್ನಿಕಃ ।
ಬ್ರಹ್ಮವಹ್ನಿರ್ಮಮ ಬಲಂ ಭೋಕ್ಷ್ಯಾಮಿ ಶಮಯನ್ ಕ್ಷುಧಮ್ ॥೬೦॥

ಐಂದ್ರವು=ಪ್ರಜಾರಕ್ಷಣೆಯು ಕ್ಷತ್ರಿಯರ ಧರ್ಮ. ಆಗ್ನಿಕವು= ಪವಿತ್ರವಾದ ವಸ್ತುಗಳ ಮತ್ತು ಎಲ್ಲವಸ್ತುಗಳ ಭಕ್ಷಣವು ಬ್ರಾಹ್ಮಣರಿಗೆ ಧರ್ಮ. ನನಗೆ ವೇದವು ಅಗ್ನಿ. ಅದೇ ನನ್ನ ಬಲ. ಈಗ ಹಸಿವೆಯ ಸಮಯ. ಅದರ ಶಮನಕ್ಕಾಗಿ ತಿನ್ನುತ್ತೇನೆ.

ಯಥಾ ಯಥಾ ವೈ ಜೀವೇದ್ಧಿ ತತ್ ಕರ್ತವ್ಯಮಪೀಡಯಾ ।
ಜೀವಿತಂ ಮರಣಾಚ್ಛ್ರೇಯೋ ಜೀವನ್ ಧರ್ಮಮವಾಪ್ನುಯಾತ್ ॥೬೧॥

ಯಾವ ಯಾವ ಉಪಾಯದಿಂದ (ವಿಧಾನದಿಂದ) ಬದುಕಬಹುದೋ ಅದನ್ನು ಅಹಿಂಸೆಯಿಂದ ಮಾಡಬೇಕು. ಮರಣಕ್ಕಿಂತ ಬದುಕು ಒಳ್ಳೆಯದು. ಬದುಕಿದವನು ಧರ್ಮವನ್ನು ಸಾಧಿಸಬಹುದು.

ಸೋಽಹಂ ಜೀವಿತಮಾಕಾಂಕ್ಷನ್ನಭಕ್ಷ್ಯಾಪಿ ಭಕ್ಷಣಮ್ ।
ವ್ಯವಸ್ಯೇ ಬುದ್ಧಿಪೂರ್ವಂ ವೈ ತದ್ಭವಾನನುಮನ್ಯತಾಮ್ ॥೬೨॥

ಬದುಕನ್ನು ಬಯಸುತ್ತಿರುವ ಈ ನಾನು ತಿನ್ನಬಾರದ (ನಾಯಿಮಾಂಸದ) ಭಕ್ಷಣವನ್ನು ಮಾಡುತ್ತೇನೆ. ನೀನು ಒಪ್ಪಿಗೆ ಕೊಡು.

ಜೀವನ್ ಧರ್ಮಂ ಚರಿಷ್ಯಾಮಿ ಪ್ರಣೋತ್ಸ್ಯಾಮ್ಯಶುಭಾನಿ ಚ ।
ತಪೋಭಿರ್ವಿದ್ಯಯಾ ಚೈವ ಜ್ಯೋತೀಂಷೀವ ಮಹತ್ತಮಃ ॥೬೩॥

ಬದುಕಿ ಧರ್ಮವನ್ನು ಆಚರಿಸುತ್ತೇನೆ. ತಪಸ್ಸುಗಳಿಂದ ಮತ್ತು ವಿದ್ಯೆಯಿಂದ ಪಾಪಗಳನ್ನು ಪರಿಹರಿಸಿಕೊಳ್ಳುತ್ತೇನೆ. ಬೆಳಕುಗಳು ಗಾಢ ಕತ್ತಲನ್ನು ಪರಿಹರಿಸುವಂತೆ.

ಶ್ವಪಚಃ

ನೈತತ್ಪಾದನ್ ಪ್ರಾಪ್ಸ್ಯಸೇ ಪ್ರಾಣಮದ್ಯ
ನಾಯುರ್ದೀರ್ಘಂ ನಾಮೃತಸ್ಯೇವ ತೃಪ್ತಿಮ್ ।

ಭಿಕ್ಷಾಮನ್ಯಾಂ ಭಿಕ್ಷ ಮಾ ತೇ ಮನೋಽಸ್ತು
ಶ್ವಭಕ್ಷಣೇ ಶ್ವಾ ಹ್ಯಭಕ್ಷ್ಯೋ ದ್ವಿಜಾನಾಮ್ ॥೬೪॥

ಈಗ ಇದನ್ನು ತಿಂದು ನೀನು ಪ್ರಾಣವನ್ನು ಉಳಿಸಿಕೊಳ್ಳುವುದಿಲ್ಲ. ದೀರ್ಘ ಆಯುಷ್ಯವನ್ನೂ ಪಡೆಯುವುದಿಲ್ಲ. ನೀರಿನಿಂದ ಅಥವಾ ಅಮೃತದಿಂದ ಸಿಗುವ ತೃಪ್ತಿಯೂ ಲಭಿಸುವುದಿಲ್ಲ. ಬೇರೆ ಭಿಕ್ಷೆಯನ್ನು ಬೇಡು. ನಾಯಿಮಾಂಸದ ಭಕ್ಷಣಕ್ಕೆ ಮನಸ್ಸು ಮಾಡಬೇಡ. ವಿಪ್ರರು ನಾಯಿಯನ್ನು ತಿನ್ನಬಾರದು.

ವಿಶ್ವಾಮಿತ್ರಃ

ನ ದುರ್ಭಿಕ್ಷೇ ಸುಲಭಂ ಮಾಂಸಮದ್ಯಂ
ಶ್ವಪಾಕ ನಾನ್ನಂ ನ ಚ ಮೇಽಸ್ತಿ ವಿತ್ತಮ್ ।
ಕ್ಷುಧಾರ್ತಶ್ಚಾಹಮಗತಿರ್ನಿರಾಶಃ
ಶ್ವಮಾಂಸೇ ಚಾಸ್ಮಿನ್ ಷಡ್ರಸಾನ್ ಸಾಧು ಮನ್ಯೇ ॥೬೫॥

ಶ್ವಪಚ! ಈ ದುರ್ಭಿಕ್ಷೆಯ ಸಮಯದಲ್ಲಿ ತಿನ್ನಲು ಯೋಗ್ಯವಾದ ಮಾಂಸವು ಸುಲಭವಾಗಿ ಸಿಗುವುದಿಲ್ಲ. ಅನ್ನವೂ ಸಿಗುವುದಿಲ್ಲ. ನನ್ನಲ್ಲಿ ಹಣವಿಲ್ಲ. ಹಸಿವೆಯಿಂದ ಕಂಗಾಲಾಗಿರುವ ನಾನು ಎಲ್ಲೂ ಹೋಗಲಾರೆ. ಯಾವ ಭರವಸೆಯೂ ಇಲ್ಲ. ಈ ನಾಯಿಯ ಮಾಂಸದಲ್ಲಿ ಆರುರಸಗಳ ಸವಿಯನ್ನು ಭಾವಿಸುತ್ತಿದ್ದೇನೆ.

ಶ್ವಪಚಃ

ಪಂಚ ಪಂಚನಖಾ ಭಕ್ಷ್ಯಾ ಬ್ರಹ್ಮಕ್ಷತ್ರಸ್ಯ ವೈ ದ್ವಿಜ ।
ಯದಿ ಶಾಸ್ತ್ರಂ ಪ್ರಮಾಣಂ ತೇ ಮಾಭಕ್ಷ್ಯೇ ಮಾನಸಂ ಕೃಥಾಃ ॥೬೬॥

ಬ್ರಾಹ್ಮಣ! ಬ್ರಾಹ್ಮಣರು ಮತ್ತು ಕ್ಷತ್ರಿಯರು ಐದು ಉಗುರುಗಳಿರುವ ಐದು ಪ್ರಾಣಿಗಳನ್ನು ತಿನ್ನಬಹುದು. ನೀನು ಶಾಸ್ತ್ರವನ್ನು ಪ್ರಮಾಣವೆಂದು ತಿಳಿಯುವುದಾದರೆ ತಿನ್ನಬಾರದ್ದನ್ನು ತಿನ್ನಲು ಮನಸ್ಸು ಮಾಡಬೇಡ.

ವಿಶ್ವಾಮಿತ್ರಃ

ಅಗಸ್ತ್ಯೇನಾಸುರೋ ಜಗ್ಧೋ ವಾತಾಪಿಃ ಕ್ಷುಧಿತೇನ ವೈ ।
ಅಹಮಾಪದ್ಗತಃ ಕ್ಷುಬ್ಧೋ ಭಕ್ಷಯಿಷ್ಯೇ ಶ್ವಜಾಘನೀಮ್ ॥೬೭॥

ಹಸಿವೆಯಿಂದ ಕುಸಿಯುತ್ತಿರುವವನು ಯಾವುದಾದರೂ ಕ್ರಮದಿಂದ ಪ್ರಾಣವನ್ನು ಉಳಿಸಿಕೊಳ್ಳಬೇಕು. ಶಕ್ತನಾದ ಮೇಲೆ ಧರ್ಮವನ್ನು ಆಚರಿಸಬೇಕು.

ಐಂದ್ರೋ ಧರ್ಮಃ ಕ್ಷತ್ರಿಯಾಣಾಂ ಬ್ರಾಹ್ಮಣಾನಾಮಥಾಗ್ನಿಕಃ ।
ಬ್ರಹ್ಮವಹ್ನಿರ್ಮಮ ಬಲಂ ಭೋಕ್ಷ್ಯಾಮಿ ಶಮಯನ್ ಕ್ಷುಧಮ್ ॥೬೦॥

ಐಂದ್ರವು=ಪ್ರಜಾರಕ್ಷಣೆಯು ಕ್ಷತ್ರಿಯರ ಧರ್ಮ. ಆಗ್ನಿಕವು= ಪವಿತ್ರವಾದ ವಸ್ತುಗಳ ಮತ್ತು ಎಲ್ಲ ವಸ್ತುಗಳ ಭಕ್ಷಣವು ಬ್ರಾಹ್ಮಣರಿಗೆ ಧರ್ಮ. ನನಗೆ ವೇದವು ಅಗ್ನಿ. ಅದೇ ನನ್ನ ಬಲ. ಈಗ ಹಸಿವೆಯ ಸಮಯ. ಅದರ ಶಮನಕ್ಕಾಗಿ ತಿನ್ನುತ್ತೇನೆ.

ಯಥಾ ಯಥಾ ವೈ ಜೀವೇದ್ಧಿ ತತ್ ಕರ್ತವ್ಯಮಪೀಡಯಾ ।
ಜೀವಿತಂ ಮರಣಾಚ್ಛ್ರೇಯೋ ಜೀವನ್ ಧರ್ಮಮವಾಪ್ನುಯಾತ್ ॥೬೧॥

ಯಾವ ಯಾವ ಉಪಾಯದಿಂದ (ವಿಧಾನದಿಂದ) ಬದುಕಬಹುದೋ ಅದನ್ನು ಅಹಿಂಸೆಯಿಂದ ಮಾಡಬೇಕು. ಮರಣಕ್ಕಿಂತ ಬದುಕು ಒಳ್ಳೆಯದು. ಬದುಕಿದವನು ಧರ್ಮವನ್ನು ಸಾಧಿಸಬಹುದು.

ಸೋಽಹಂ ಜೀವಿತಮಾಕಾಂಕ್ಷನ್ನಭಕ್ಷ್ಯಾಪಿ ಭಕ್ಷಣಮ್ ।
ವ್ಯವಸ್ಯೇ ಬುದ್ಧಿಪೂರ್ವಂ ವೈ ತದ್ಭವಾನನುಮನ್ಯತಾಮ್ ॥೬೨॥

ಬದುಕನ್ನು ಬಯಸುತ್ತಿರುವ ಈ ನಾನು ತಿನ್ನಬಾರದ (ನಾಯಿಮಾಂಸದ) ಭಕ್ಷಣವನ್ನು ಮಾಡುತ್ತೇನೆ. ನೀನು ಒಪ್ಪಿಗೆ ಕೊಡು.

ಜೀವನ್ ಧರ್ಮಂ ಚರಿಷ್ಯಾಮಿ ಪ್ರಣೋತ್ಸ್ಯಾಮ್ಯಶುಭಾನಿ ಚ ।
ತಪೋಭಿರ್ವಿದ್ಯಯಾ ಚೈವ ಜ್ಯೋತೀಂಷೀವ ಮಹತ್ತಮಃ ॥೬೩॥

ಬದುಕಿ ಧರ್ಮವನ್ನು ಆಚರಿಸುತ್ತೇನೆ. ತಪಸ್ಸುಗಳಿಂದ ಮತ್ತು ವಿದ್ಯೆಯಿಂದ ಪಾಪಗಳನ್ನು ಪರಿಹರಿಸಿಕೊಳ್ಳುತ್ತೇನೆ. ಬೆಳಕುಗಳು ಗಾಢ ಕತ್ತಲನ್ನು ಪರಿಹರಿಸುವಂತೆ.

ಶ್ವಪಚಃ

ನೈತತ್ಖಾದನ್ ಪ್ರಾಪ್ಸ್ಯಸೇ ಪ್ರಾಣಮದ್ಯ
ನಾಯುರ್ದೀರ್ಘಂ ನಾಮೃತಸ್ಯೇವ ತೃಪ್ತಿಮ್ ।

ಭಿಕ್ಷಾಮನ್ಯಾಂ ಭಿಕ್ಷ ಮಾ ತೇ ಮನೋಽಸ್ತು
ಶ್ವಭಕ್ಷಣೇ ಶ್ವಾ ಹ್ಯಭಕ್ಷ್ಯೋ ದ್ವಿಜಾನಾಮ್ ॥೬೪॥

ಈಗ ಇದನ್ನು ತಿಂದು ನೀನು ಪ್ರಾಣವನ್ನು ಉಳಿಸಿಕೊಳ್ಳುವುದಿಲ್ಲ. ದೀರ್ಘ ಆಯುಷ್ಯವನ್ನೂ ಪಡೆಯುವುದಿಲ್ಲ. ನೀರಿನಿಂದ ಅಥವಾ ಅಮೃತದಿಂದ ಸಿಗುವ ತೃಪ್ತಿಯೂ ಲಭಿಸುವುದಿಲ್ಲ. ಬೇರೆ ಭಿಕ್ಷೆಯನ್ನು ಬೇಡು. ನಾಯಿಮಾಂಸದ ಭಕ್ಷಣಕ್ಕೆ ಮನಸ್ಸು ಮಾಡಬೇಡ. ವಿಪ್ರರು ನಾಯಿಯನ್ನು ತಿನ್ನಬಾರದು.

ವಿಶ್ವಾಮಿತ್ರಃ

ನ ದುರ್ಭಿಕ್ಷೇ ಸುಲಭಂ ಮಾಂಸಮದ್ಯಂ
ಶ್ವಪಾಕ ನಾನ್ನಂ ನ ಚ ಮೇಽಸ್ತಿ ವಿತ್ತಮ್ ।
ಕ್ಷುಧಾರ್ತಶ್ಚಾಹಮಗತಿರ್ನಿರಾಶಃ
ಶ್ವಮಾಂಸೇ ಚಾಸ್ಮಿನ್ ಷಡ್ರಸಾನ್ ಸಾಧು ಮನ್ಯೇ ॥೬೫॥

ಶ್ವಪಚ! ಈ ದುರ್ಭಿಕ್ಷೆಯ ಸಮಯದಲ್ಲಿ ತಿನ್ನಲು ಯೋಗ್ಯವಾದ ಮಾಂಸವು ಸುಲಭವಾಗಿ ಸಿಗುವುದಿಲ್ಲ. ಅನ್ನವೂ ಸಿಗುವುದಿಲ್ಲ. ನನ್ನಲ್ಲಿ ಹಣವಿಲ್ಲ. ಹಸಿವೆಯಿಂದ ಕಂಗಾಲಾಗಿರುವ ನಾನು ಎಲ್ಲೂ ಹೋಗಲಾರೆ. ಯಾವ ಭರವಸೆಯೂ ಇಲ್ಲ. ಈ ನಾಯಿಯ ಮಾಂಸದಲ್ಲಿ ಆರುರಸಗಳ ಸವಿಯನ್ನು ಭಾವಿಸುತ್ತಿದ್ದೇನೆ.

ಶ್ವಪಚಃ

ಪಂಚ ಪಂಚನಖಾ ಭಕ್ಷ್ಯಾ ಬ್ರಹ್ಮಕ್ಷತ್ರಸ್ಯ ವೈ ದ್ವಿಜ ।
ಯದಿ ಶಾಸ್ತ್ರಂ ಪ್ರಮಾಣಂ ತೇ ಮಾಭಕ್ಷ್ಯೇ ಮಾನಸಂ ಕೃಥಾಃ ॥೬೬॥

ಬ್ರಾಹ್ಮಣ! ಬ್ರಾಹ್ಮಣರು ಮತ್ತು ಕ್ಷತ್ರಿಯರು ಐದು ಉಗುರುಗಳಿರುವ ಐದು ಪ್ರಾಣಿಗಳನ್ನು ತಿನ್ನಬಹುದು. ನೀನು ಶಾಸ್ತ್ರವನ್ನು ಪ್ರಮಾಣವೆಂದು ತಿಳಿಯುವುದಾದರೆ ತಿನ್ನಬಾರದ್ದನ್ನು ತಿನ್ನಲು ಮನಸ್ಸು ಮಾಡಬೇಡ.

ವಿಶ್ವಾಮಿತ್ರಃ

ಅಗಸ್ತ್ಯೇನಾಸುರೋ ಜಗ್ಧೋ ವಾತಾಪಿಃ ಕ್ಷುಧಿತೇನ ವೈ ।
ಅಹಮಾಪದ್ಗತಃ ಕ್ಷುಬ್ಧೋ ಭಕ್ಷಯಿಷ್ಯೇ ಶ್ವಜಾಘನೀಮ್ ॥೬೭॥

ಹಸಿದಿದ್ದ ಅಗಸ್ತ್ಯರು ಅಸುರ ವಾತಾಪಿಯನ್ನು ತಿಂದರು. ನಾನು ಈಗ ಆಪತ್ತಿಗೆ ಒಳಗಾಗಿದ್ದೇನೆ. ಕ್ಷೋಭೆಗೆ ಒಳಗಾಗಿದ್ದೇನೆ, ನಾಯಿಯ ಜಘನ ಮಾಂಸವನ್ನು ತಿನ್ನುತ್ತೇನೆ.

ಶ್ವಪಚಃ

ಭಿಕ್ಷಾಮನ್ಯಾಮಾಹರೇತಿ ನ ಚೈತತ್ ಕರ್ತುಮರ್ಹಸಿ ।
ನ ನೂನಂ ಕಾರ್ಯಮೇತದ್ವೈ ಹರ ಕಾಮಂ ಶ್ವಜಾಘನೀಮ್ ॥೬೮॥

ಬೇರೆ ಭಿಕ್ಷೆಯನ್ನೇ ತೆಗೆದುಕೋ ಎಂದು ಹೇಳಿದ ಮೇಲೂ ಈ ಕೆಲಸವನ್ನು ದಯವಿಟ್ಟು ಮಾಡಬೇಡ. ಈ ಕೆಲಸವನ್ನು ಸರ್ವಥಾ ಮಾಡಬಾರದು. ನಾಯಿಯ ಜಘನ ಮಾಂಸವನ್ನು ದಯವಿಟ್ಟು ತೆಗೆದುಕೊಳ್ಳಬೇಡ.

ವಿಶ್ವಾಮಿತ್ರಃ

ಶಿಷ್ಟಾ ವೈ ಕಾರಣಂ ಧರ್ಮೇ ತದ್ವೃತ್ತಮನುವರ್ತಯೇ ।
ಪರಾಂ ಮೇಧ್ಯಾಶನಾದೇತಾಂ ಭಕ್ಷ್ಯಾಂ ಮನ್ಯೇ ಶ್ವಜಾಘನೀಮ್ ॥೬೯॥

ಧರ್ಮಾಚರಣೆಯ ವಿಷಯದಲ್ಲಿ ಶಿಷ್ಟರೇ ಪ್ರಮಾಣ. ಅವರ ವರ್ತನೆಯನ್ನು ಅನುಸರಿಸುತ್ತೇನೆ. ಈ ನಾಯಿಯ ಜಘನಮಾಂಸವನ್ನು ಯಾಗದ ಹವಿಸ್ಸಿಗಿಂತ ಹೆಚ್ಚು ಶ್ರೇಷ್ಠ ಭಕ್ಷ್ಯವೆಂದು ತಿಳಿಯುತ್ತೇನೆ.

ಶ್ವಪಚಃ

ಅಸತಾ ಯತ್ ಸಮಾಚೀರ್ಣಂ ನ ಸ ಧರ್ಮಃ ಸನಾತನಃ ।
ನಾವೃತ್ತಮನುಕಾರ್ಯಂ ವೈ ಮಾ ಫಲೇನಾನೃತಂ ಕೃಥಾಃ ॥೭೦॥

ಅಸತ್‌ಪುರುಷರು ಯಾವುದನ್ನು ಆಚರಿಸುತ್ತಾರೋ ಅದು ಸನಾತನ ಧರ್ಮವಲ್ಲ. ವಿರುದ್ಧ ವರ್ತನೆಗಳು ಅನುಕರಣೆಗೆ ಯೋಗ್ಯವಲ್ಲ. ಹಾರಿಕೆಯ ಮಾತುಗಳಿಂದ ಅಥವಾ ವಚನಗಳಿಗೆ ಮತ್ತು ಆಚರಣೆಗಳಿಗೆ ಅಸಮ್ಮತ ಅರ್ಥಗಳನ್ನು ಹೇಳುವುದರಿಂದ ತಪ್ಪು ಮಾಡಬೇಡ.

ವಿಶ್ವಾಮಿತ್ರಃ

ನ ಪಾತಕಂ ನ ಚಾವೃತ್ತಂ ಮೃಷಾ ತತ್ ಕರ್ತುಮರ್ಹಸಿ ।
ಸಮೌ ಚ ಶ್ವಮೃಗೌ ಮನ್ಯೇ ತಸ್ಮಾದ್ಭಕ್ಷ್ಯಾ ಶ್ವಜಾಘನೀ ॥೭೧॥

ಇದು ಪಾತಕವಲ್ಲ. ಹಿಂದೆ ನಡೆಯದ ಘಟನೆಯೂ ಅಲ್ಲ. ಆದ್ದರಿಂದ ನನ್ನ ಪ್ರವೃತ್ತಿಯನ್ನು ವಿಫಲಗೊಳಿಸಬೇಡ. ನಾಯಿ ಮತ್ತು ಜಿಂಕೆಗಳು ಸಮ ಎಂದು ಭಾವಿಸುತ್ತೇನೆ. ಆದ್ದರಿಂದ ನಾಯಿಯ ಜಾಘನಿಯು ತಿನ್ನಲು ಯೋಗ್ಯ.

ಶ್ವಪಚಃ

ಯದ್ ಬ್ರಾಹ್ಮಣಾರ್ಥೇ ಕೃತಮರ್ಥಿತೇನ
ತೇನರ್ಷಿಣಾ ತದಭಕ್ಷ್ಯಂ ನ ಕಸ್ಮಾತ್ ।
ಸ ವೈ ಧರ್ಮೋ ಯತ್ರ ನ ಪಾಪಮಸ್ತಿ
ಸರ್ವೈರುಪಾಯೈರ್ಹಿ ಸ ರಕ್ಷಿತವ್ಯಃ ॥೭೨॥

ಬ್ರಾಹ್ಮಣನು ನನ್ನನ್ನು ಬೇಡಿದಾಗ ನಾನು ಆ ಬ್ರಾಹ್ಮಣನಿಗೆ ಏನನ್ನು ನಿಷೇಧಿಸಿದೆನೋ ಆ ವಸ್ತು ಆ ಋಷಿಗೆ ಯಾವ ಕಾರಣದಿಂದಲೂ ಅಭಕ್ಷ್ಯವಲ್ಲ. ಅದು ಭಕ್ಷ್ಯವೇ. ಪಾಪರಹಿತವಾದ ಆಚರಣೆಗಳು ಧರ್ಮವೇ. ಎಲ್ಲ ವಿಧಾನಗಳಿಂದಲೂ ಆ ಬ್ರಾಹ್ಮಣನು ರಕ್ಷಣಾರ್ಹ.

ವಿಶ್ವಾಮಿತ್ರಃ

ಮಿತ್ರಂ ಚ ಮೇ ಬ್ರಾಹ್ಮಣಶ್ಚಾಯಮಾತ್ಮಾ
ಪ್ರಿಯಶ್ಚ ಮೇ ಪೂಜ್ಯತಮಶ್ಚ ಲೋಕೇ ।
ತಂ ಭರ್ತುಕಾಮೋಹಮಿಮಾಂ ಹರಿಷ್ಯೇ
ನೃಶಂಸಾನಾಮೀದೃಶಾನಾಂ ನ ಬಿಭ್ಯೇ ॥೭೩॥

ಈ ಬ್ರಾಹ್ಮಣದೇಹವು ನನ್ನ ಮಿತ್ರ. ನನಗೆ ಪ್ರಿಯವೂ ಹೌದು. ಈ ದೇಹವು ಲೋಕದಲ್ಲಿ ಬಹಳ ಪೂಜ್ಯ. ಈ ದೇಹವನ್ನು ಉಳಿಸುವುದಕ್ಕಾಗಿ ನಾನು ಈ ಜಾಘನಿಯನ್ನು ಅಪಹರಿಸುವೆ. (ನನ್ನನ್ನು ನಿಷೇಧಿಸುವವರು ಕ್ರೂರರು). ಇಂತಹ ಕ್ರೂರರಿಗೆ ನಾನು ಹೆದರುವುದಿಲ್ಲ.

ಶ್ವಪಚಃ

ಕಾಮಂ ನರಾ ಜೀವಿತಂ ಸಂತ್ಯಜಂತಿ
ನ ಚಾಭಕ್ಷ್ಯೈಃ ಪ್ರತಿಕುರ್ವಂತಿ ತತ್ರ ।
ಸರ್ವಾನ್ ಕಾಮಾನ್ ಪ್ರಾಪ್ನುವಂತೀಹ ವಿದ್ವನ್
ಪ್ರಿಯಸ್ವ ಕಾಮಂ ಸಹಿತಃ ಕ್ಷುಧಾ ವೈ ॥೭೪॥

ಮನುಷ್ಯರು ಹಸಿವೆಯಿಂದ ಪೀಡಿತರಾಗಿ ಜೀವವನ್ನೇ ತ್ಯಜಿಸುತ್ತಾರೆ. ಅಭಕ್ಷ್ಯಗಳನ್ನು ತಿಂದು ಪರಿಹಾರ ಮಾಡಿಕೊಳ್ಳುವುದಿಲ್ಲ. ಪ್ರಾಜ್ಞನೇ! ಪ್ರಾಣಗಳ ತ್ಯಾಗದಿಂದಲೇ ಎಲ್ಲ ಅಭಿಲಾಷೆಗಳನ್ನು ಪೂರೈಸಿಕೊಳ್ಳುತ್ತಾರೆ. ಹಸಿವೆಯಲ್ಲೇ ಇದ್ದು ನಿನ್ನ ಅಭಿಲಾಷೆಗಳನ್ನು ಪೂರ್ಣಮಾಡಿಕೊ.

ವಿಶ್ವಾಮಿತ್ರಃ

ಸ್ಥಾನೇ ಭವೇತ್ ಸಂಶಯಃ ಪ್ರೇತ್ಯಭಾವೇ
ನಿಃಸಂಶಯಂ ಕರ್ಮಣೋ ವೈ ವಿನಾಶಃ ।
ಅಹಂ ಪುನರ್ವರ್ತ ಇತ್ಯಾಶಯಾತ್ಮಾ
ಶುಷ್ಕಂ ರಕ್ಷ್ಯಂ ಭಕ್ಷಯಿಷ್ಯಾಮ್ಯಭಕ್ಷ್ಯಮ್ ॥೭೫॥

ಈಗ ಮರಣವಾದರೆ ಅನಂತರ ಸಿಗುವ ಸ್ಥಾನದ ಬಗ್ಗೆ ಸಂಶಯವುಂಟಾಗುತ್ತದೆ. ಈಗ ಮರಣವಾದರೆ ಪುಣ್ಯಕರ್ಮಗಳನ್ನು ಮಾಡುವ ಅವಕಾಶವು ತಪ್ಪಿಹೋಗುತ್ತದೆ. ನಾನು ಇನ್ನು ಇರಬೇಕು, ಸತ್ಕರ್ಮಗಳನ್ನು ಆಚರಿಸಬೇಕು ಎಂದು ಆಶೆವುಳ್ಳವನು. ಆದ್ದರಿಂದ ಸತ್ಕರ್ಮಾಚರಣೆಗೆ ಮೂಲವಾದ ಈ ದೇಹವನ್ನು ರಕ್ಷಿಸುವುದಕ್ಕಾಗಿ ತಿನ್ನಬಾರದ್ದನ್ನು ತಿನ್ನುತ್ತೇನೆ.

ಬುದ್ಧ್ಯಾತ್ಮಕೇ ವ್ಯಕ್ತಮಸ್ಮೀತಿ ಸೃಷ್ಟೋ
ಮೋಕ್ಷಾತ್ಮಕೇ ತ್ವಂ ಯಥಾ ಶಿಷ್ಟಚಕ್ಷುಃ ।
ಯದ್ಯಪ್ಯೇತತ್ ಸಂಶಯಾಚ್ಚ ತ್ರಪಾಮಿ
ನಾಹಂ ಭವಿಷ್ಯಾಮಿ ಯಥಾ ನ ಮಾಯಾ ॥೭೬॥

ಈ ದೇಹವು ಮೋಕ್ಷಸಾಧನ ಎಂದು ನಿನಗೆ ಶಿಷ್ಟ ದೃಷ್ಟಿಯಿದೆ. ಅದಕ್ಕೆ ಅನುಗುಣವಾಗಿ ಮೋಕ್ಷ ಸಾಧನವಾದ ಜ್ಞಾನವನ್ನು ಸಾಧಿಸುವುದಕ್ಕಾಗಿ ನಾನು ಹೀಗೆ ಋಷಿಯಾಗಿ ಸೃಷ್ಟಿಸಲ್ಪಟ್ಟಿದ್ದೇನೆ. ಇದು ಸ್ಪಷ್ಟ. ನೀನು ಏನು ಹೇಳಿರುವೆಯೋ (ಬ್ರಾಹ್ಮಣನೇ, ನಾಯಿಮಾಂಸವನ್ನು ತಿನ್ನಬಾರದು ಎಂದು) ಅದು ಸತ್ಯ. ಆದರೆ ದೇಹವಿಲ್ಲದಿದ್ದರೆ ಅಜ್ಞಾನರಹಿತನಾಗಲಾರೆ ಎಂಬ ಸಂಶಯದಿಂದ ನಾನು ದೇಹವನ್ನು ತ್ಯಜಿಸಲು ಹಿಂಜರಿಯುತ್ತಿದ್ದೇನೆ.

ಶ್ವಪಚಃ

ಗೋಪನೀಯಮಿದಂ ದುಃಖಮಿತಿ ಮೇ ನಿಶ್ಚಿತಾ ಮತಿಃ ।
ದುಷ್ಕೃತಂ ಬ್ರಾಹ್ಮಣಂ ಸಂತಂ ಯಸ್ತ್ವಾಮಹಮುಪಾಲಭೇ ॥೭೭॥

ದುಃಖಕರವಾದ ಈ ದುಷ್ಕೃತ್ಯವು ನಿನ್ನಿಂದ ಆಗಬಾರದು ಎಂದು ನನ್ನ ದೃಢಮತಿ. ಆದ್ದರಿಂದ ನಾನು ಬ್ರಾಹ್ಮಣನಾಗಿರುವ ನಿನ್ನನ್ನು ಹೀಗೆ ನಿಂದಿಸುತ್ತಿದ್ದೇನೆ, ತಡೆಯುತ್ತಿದ್ದೇನೆ, ನಿನಗೆ ಬೋಧಿಸುತ್ತಿದ್ದೇನೆ.

ವಿಶ್ವಾಮಿತ್ರಃ

ಪಿಬಂತ್ಯೇವೋದಕಂ ಗಾವೋ ಮಂಡೂಕೇಷು ರುವತ್ಸ್ವಪಿ ।
ನ ತೇಽಧಿಕಾರೋ ಧರ್ಮೇಽಸ್ತಿ ಮಾ ಭೂರಾತ್ಮಪ್ರಶಂಸಕಃ ॥೭೮॥

ಕಪ್ಪೆಗಳು ವಟಗುಟ್ಟುತ್ತಿದ್ದರೂ ಗೋವುಗಳು ಜಲಾಶಯದ ನೀರನ್ನು ಕುಡಿಯುತ್ತವೆ. ನಿನಗೆ ಧರ್ಮಬೋಧನೆಯ ಅಧಿಕಾರವಿಲ್ಲ. ಆತ್ಮಪ್ರಶಂಸೆಯನ್ನು ಮಾಡಿಕೊಳ್ಳಬೇಡ.

ಶ್ವಪಚಃ

ಸುಹೃದ್ಭೂತ್ವಾನುಶಾಸ್ಮಿ ತ್ವಾ ಕೃಪಾ ಹಿ ತ್ವಯಿ ಮೇ ದ್ವಿಜ ।
ತದೇವಂ ಶ್ರೇಯ ಆಧತ್ಸ್ವ ಮಾ ಲೋಭಾಚ್ಛ್ವನಮಾದಿಥಾಃ ॥೭೯॥

ಹೇ ಬ್ರಾಹ್ಮಣ! ನನಗೆ ನಿನ್ನ ಮೇಲೆ ಕೃಪೆ. ಹಿತಚಿಂತಕನಾಗಿ ನಿನಗೆ ಅನುಶಾಸನವನ್ನು ತಿಳಿಸುತ್ತಿದ್ದೇನೆ. ಆದ್ದರಿಂದ ಅನುಶಾಸನಕ್ಕೆ ಅನುಗುಣವಾಗಿ ಶ್ರೇಯಸ್ಕರವಾದದ್ದನ್ನು ಮಾಡು. ಲೋಭದಿಂದ ನಾಯಿಯನ್ನು ತಿನ್ನಬೇಡ.

ವಿಶ್ವಾಮಿತ್ರಃ

ಸುಹೃನ್ಮೇ ತ್ವಂ ಸುಖೇಪ್ಸುಶ್ಚೇದಾಪದೋ ಮಾಂ ಸಮುದ್ಧರ ।
ಜಾನೇಽಹಂ ಧರ್ಮತೋಽತ್ಮಾನಮುತ್ಸೃಜೇಮಾಂ ಶ್ವಜಾಘನೀಮ್ ॥

ನೀನು ನನ್ನ ಹಿತಚಿಂತಕ. ನನ್ನ ಸುಖವನ್ನು ಬಯಸುವುದಾದರೆ ಈ ಆಪತ್ತಿನಿಂದ ನನ್ನನ್ನು ಮೇಲೆತ್ತು. ನೀನು ಧರ್ಮಾತ್ಮ ಎಂದು ತಿಳಿದಿದ್ದೇನೆ. ಈ ನಾಯಿ ಜಾಘನಿಯನ್ನು ನನಗೆ ಕೊಡು.

ಶ್ವಪಚಃ

ನೈವೋತ್ಸಹೇ ಭವತೇ ದಾತುಮೇತಾಂ
ನೋಪೇಕ್ಷಿತುಂ ಹ್ರಿಯಮಾಣಂ ಸ್ವಮನ್ನಮ್ ।
ಉಭೌ ಸ್ಯಾವಃ ಸ್ವಮಲೇನಾವಲಿಪ್ತೌ
ದಾತಾಹಂ ಚ ತ್ವಂ ಚ ವಿಪ್ರ ಪ್ರತೀಚ್ಛನ್ ॥೮೧॥

ವಿಪ್ರನೇ! ಇದನ್ನು ನಿನಗೆ ಕೊಡಲು ನನಗೆ ಇಚ್ಛೆಯಿಲ್ಲ. ನನ್ನ ಆಹಾರವನ್ನು ನೀನು ಅಪಹರಿಸಿದರೆ ಸುಮ್ಮನೆ ಇರಲೂ ಇಚ್ಛೆಯಿಲ್ಲ. ಈ ಘಟನೆಯಿಂದ ಕೊಡುವ ನಾನು, ಪ್ರತಿಗ್ರಹ ಮಾಡುವ ನೀನು - ಇಬ್ಬರೂ ಪಾಪಭಾಗಿಗಳಾಗುತ್ತೇವೆ.

ವಿಶ್ವಾಮಿತ್ರಃ

ಅದ್ಯಾಹಮೇತದ್ ವೃಜಿನಂ ಕರ್ಮ ಕೃತ್ವಾ
ಜೀವಂಶ್ಚರಿಷ್ಯಾಮಿ ಮಹಾಪವಿತ್ರಮ್ ।
ಪ್ರಪೂತಾತ್ಮಾ ಧರ್ಮಮೇವಾಭಿಪತ್ಸ್ಯೇ
ಯದೇತಯೋರ್ಗುರು ತದ್ಬ್ರೂಹಿ ॥೮೨॥

ಈ ದಿನ ನಾನು ಈ ಪಾಪಕರ್ಮವನ್ನು ಮಾಡಿ, ಬದುಕಿ ಮಹಾಪವಿತ್ರವಾದ ಆಚರಣೆಗಳನ್ನು ಮಾಡುತ್ತೇನೆ. ಈ ಆಚರಣೆಗಳಿಂದ ಬಹಳ ಪವಿತ್ರನಾಗಿ ಧರ್ಮಾಚರಣೆಯ ಫಲವನ್ನೇ ಪಡೆಯುತ್ತೇನೆ. (೧) ಪ್ರಾಣರಕ್ಷಣೆಯನ್ನು ಮಾಡಿಕೊಂಡು ಧರ್ಮಸಾಧನೆ, (೨) ಆಹಾರವಿಲ್ಲದೆ ಪ್ರಾಣತ್ಯಾಗ - ಇವೆರಡರಲ್ಲಿ ಯಾವುದು ಹೆಚ್ಚು ಒಳ್ಳೆಯದು? ನೀನೇ ಹೇಳು.

ಶ್ವಪಚಃ

ಆತ್ಮೈವ ಸಾಕ್ಷೀ ಕಿಲ ಲೋಕಕೃತ್ಯೇ
ತ್ವಮೇವ ಜಾನಾಸಿ ಯದತ್ರ ದುಷ್ಟಮ್ ।
ಯೋ ಹ್ಯಾದ್ರಿಯೇದ್ ಭಕ್ಷ್ಯಮಿತಿ ಶ್ವಮಾಂಸಂ
ಮನ್ಯೇ ನ ತಸ್ಯಾಸ್ತಿ ವಿವರ್ಜನೀಯಮ್ ॥೮೩॥

ಜನಗಳಿಗೆ ತಾವು ಏನು ಮಾಡಬೇಕು ಅಥವಾ ಮಾಡಬಾರದು ಎಂಬ ವಿಷಯದಲ್ಲಿ ಅವರವರ ಅಂತಃಕರಣವೇ ಪ್ರಮಾಣ. ಇವೆರಡರಲ್ಲಿ ಯಾವುದು ದೋಷಯುಕ್ತ

ಎಂದು ನೀನೇ ತಿಳಿದಿರುವಿ. ಯಾರು ನಾಯಿ ಮಾಂಸವನ್ನು ತಿನ್ನಲು ಅರ್ಹ ಎಂದು ಆದರಿಸುವನೋ ಅವನಿಗೆ ಯಾವ ಪದಾರ್ಥವೂ ತ್ಯಾಜ್ಯವಲ್ಲ ಎಂದು ನನ್ನ ಅಭಿಪ್ರಾಯ.

ವಿಶ್ವಾಮಿತ್ರಃ

ಉಪಾಧಾನೈಃ ಸಾಧತೇ ನಾಪಿ ದೋಷಃ
ಕಾರ್ಯೇ ಸಿದ್ಧೇ ಮಿತ್ರ ನಾತ್ರಾಪವಾದಃ ।
ಅಸ್ಮಿನ್ನಹಿಂಸಾ ನಾನೃತೇ ವಾಕ್ಯಲೇಶೋ
ಭಕ್ಷ್ಯಕ್ರಿಯಾ ತತ್ರ ನ ತದ್ ಗರೀಯಃ ॥೮೪॥

ನಿಮಿತ್ತಗಳಿಂದ (ಪ್ರಾಣ ಉಳಿಸಿಕೊಳ್ಳುವುದು ಮೊದಲಾದ ಅನಿವಾರ್ಯ ಕಾರಣಗಳಿಂದ) ನಿಷಿದ್ಧ ಕೆಲಸಗಳನ್ನು ಮಾಡುವವನಿಗೆ ಅದರಿಂದ ದೋಷವಿಲ್ಲ. ಮಿತ್ರ! ಆಗಲೇಬೇಕಾದ ಕೆಲಸವು ಆದನಂತರ ನಿಷಿದ್ಧ ಕೆಲಸವನ್ನು ಮುಂದುವರಿಸಬಾರದು. (ಹಾಗೆ ಮಾಡಲು ಏನೂ ವಿನಾಯಿತಿ ಇಲ್ಲ). ಹಾಗೆ ಅವಶ್ಯಕತೆ ಇಲ್ಲದಿರುವಾಗಲೂ ನಿಷಿದ್ಧ ಕೆಲಸಗಳನ್ನು ಮಾಡುವವನಲ್ಲಿ ಅಹಿಂಸಾ, ಸತ್ಯ ಮೊದಲಾದ ಧರ್ಮಗಳು ಇರುವುದಿಲ್ಲ. ಇರುತ್ತವೆ ಎಂದು ತಿಳಿಸುವ ಒಂದೇ ಒಂದು ಶಾಸ್ತ್ರವಚನವೂ ಇಲ್ಲ. ಅದರಲ್ಲೂ ತಿನ್ನಬಾರದ ಪದಾರ್ಥದ ಭಕ್ಷಣವು ಸರ್ವಥಾ ಸರಿಯಲ್ಲ.

ಶ್ವಪಚಃ

ಯದ್ಯೇಷ ಹೇತುಸ್ತವ ತತ್ತ್ವಾದನೇ ಸ್ಯಾತ್
ನ ತೇ ವೇದಃ ಕಾರಣಂ ನಾಪಿ ಧರ್ಮಃ ।
ತಸ್ಮಾದ್ ಭಕ್ಷ್ಯೇ ಭಕ್ಷಣೇ ವಾ ದ್ವಿಜೇಂದ್ರ
ದೋಷಂ ನ ಪಶ್ಯಾಮಿ ಯದರ್ಥಮಾಹ ॥೮೫॥

ನೀನು ನಾಯಿಮಾಂಸವನ್ನು ತಿನ್ನುವುದಕ್ಕೆ ಇದು ಪ್ರಾಣರಕ್ಷಣೆಯು ಕಾರಣವಾಗಿದ್ದರೆ (ಈ ವಿಷಯದಲ್ಲಿ) ವೇದವು ನಿನಗೆ (ಅಡ್ಡಿಯಾಗುವ) ಕಾರಣವಲ್ಲ. ಧರ್ಮವೂ (ಅಡ್ಡಿಯಾಗುವ ಕಾರಣ) ಅಲ್ಲ. ದ್ವಿಜಶ್ರೇಷ್ಠ! ಆದ್ದರಿಂದ ತಿಂದರೆ ಅಥವಾ ತಿನ್ನದಿದ್ದರೆ ನಾನು ದೋಷವನ್ನು ಕಾಣುವುದಿಲ್ಲ. ಆದ್ದರಿಂದಲೇ ನೀನೇ ಇದನ್ನು= ನಾಯಿಮಾಂಸ ಭಕ್ಷಣವನ್ನು ಪುರುಷಾರ್ಥ ಎಂದು ಹೇಳುತ್ತಿರುವಿ.

ವಿಶ್ವಾಮಿತ್ರಃ

ನ ಪಾತಕಂ ಭಕ್ಷಣಮಸ್ಯ ದೃಷ್ಟಂ
ಸುರಾಂ ಪೀತ್ವಾ ಪತತೀತಿ ಶಬ್ದಃ ।
ಅನ್ಯೋನ್ಯಕಾರ್ಯಾಣಿ ಯಥಾ ತಥೈವ
ನ ಲೇಪಮಾತ್ರೇಣ ಕೃತಂ ಹಿನಸ್ತಿ ॥೮೬॥

(ಆಪತ್ಕಾಲದಲ್ಲಿ) ನಾಯಿ ಮಾಂಸದ ಭಕ್ಷಣವು ಪಾತಕ ಎಂದು ಪ್ರಮಾಣಗಳಲ್ಲಿ ಕಂಡಿಲ್ಲ. 'ಸುರಾಂ ಪೀತ್ವಾ ಪತಿತ' (ಸುರಾಪಾನ ಮಾಡಿದವನು ಪತಿತನಾಗುತ್ತಾನೆ) ಎಂಬ ಪ್ರಮಾಣ ವಚನವು ಇದೆ. ಅನ್ಯೋನ್ಯ ಕಾರ್ಯಗಳು (ಮೈಥುನ) ಹೇಗೆ ಪಾಪಲೇಪವನ್ನು ಉಂಟುಮಾಡಿದರೂ ಮಾಡಿದ ಪುಣ್ಯವನ್ನು ನಾಶ ಮಾಡುವುದಿಲ್ಲವೋ ಹಾಗೆ ಆಪತ್ಕಾಲದಲ್ಲಿ ನಾಯಿ ಮಾಂಸ ಭಕ್ಷಣವು ಸ್ವಲ್ಪ ಪಾಪಲೇಪವನ್ನು ಉಂಟುಮಾಡಿದರೂ ಬ್ರಾಹ್ಮಣ್ಯಹಾನಿಯನ್ನು, ಪುಣ್ಯಹಾನಿಯನ್ನೂ ಉಂಟು ಮಾಡುವುದಿಲ್ಲ.

ಶ್ವಪಚಃ

ಅಸ್ಥಾನತೋ ಹೀನತಃ ಕುತ್ಸಿತಾದ್ವಾ
ತಂ ವಿದ್ವಾಂಸಂ ಬಾಧತೇ ಸಾಧುವೃತ್ತಮ್ ।
ಸ್ಥಾನಂ ಪುನರ್ಯೋ ಲಭತೇತಿಭಂಗಾತ್
ತೇನಾಪಿ ದಂಡಃ ಪ್ರಹಿತಃ ಸ ಏವ ॥೮೭॥

ಅಶುದ್ಧ ಸ್ಥಳಗಳಿಂದ, ಹೀನಕರ್ಮಗಳಿಂದ ಅಥವಾ ಹೀನ ಮನುಷ್ಯನಿಂದ ಅವಶ್ಯಕತೆಗಳನ್ನು ಪೂರೈಸಿಕೊಂಡರೆ, ಅದು ಸದಾಚಾರನಿಷ್ಠನಾದ ಪಂಡಿತನನ್ನು ಬಾಧಿಸುತ್ತದೆ. ಯಾರು ನಾಯಿಮಾಂಸವನ್ನೇ ಆಗ್ರಹದಿಂದ ಪಡೆಯುತ್ತಾರೋ ಅವನಿಗೆ ಶಿಕ್ಷೆ ಆಗುತ್ತದೆ. ಅದನ್ನು ಅವನು ಸಹಿಸಲೇಬೇಕು.

ಭೀಷ್ಮಃ

ಏವಮುಕ್ತ್ವಾ ನಿವವೃತೇ ಮಾತಂಗಃ ಕೌಶಿಕಂ ತದಾ ।
ವಿಶ್ವಾಮಿತ್ರೋ ಜಹಾರೈವ ಕೃತಬುದ್ಧಿಃ ಶ್ವಜಾಘನೀಮ್ ॥೮೮॥

ಮಾತಂಗನು ಕೌಶಿಕನಿಗೆ ಹೀಗೆ ಹೇಳಿ ನಿವೃತ್ತನಾದನು (ಮತ್ತೇನೂ ಮಾತನಾಡಲಿಲ್ಲ). ನಾಯಿ ಮಾಂಸವನ್ನು ತಿನ್ನಲು ನಿಶ್ಚಯ ಮಾಡಿದ್ದ (ಶುದ್ಧಬುದ್ಧಿಯ) ವಿಶ್ವಾಮಿತ್ರನು ಶ್ವಜಾಘನಿಯನ್ನು ತೆಗೆದುಕೊಂಡೇ ಬಿಟ್ಟನು.

ತತೋ ಜಗ್ರಾಹ ಪಂಚಾಂಗೀಂ ಜೀವಿತಾರ್ಥೀ ಮಹಾಮುನಿಃ ।
ಸದಾರಸ್ತಾಮುಪಾಕೃತ್ಯ ವನೇ ಯಾತೋ ಮಹಾಮುನಿಃ ॥೮೯॥

ಅನಂತರ ಪತ್ನೀ ಸಹಿತನಾಗಿ ಪ್ರಾಣವುಳಿಸಿಕೊಳ್ಳಲು ಕಾತರನಾಗಿದ್ದ ಆ ಮಹಾಮುನಿಯು ಐದು ಅಂಗಗಳ ಸಮಾವೇಶವಿದ್ದ ಆ ಮಾಂಸವನ್ನು ತೆಗೆದುಕೊಂಡು ವನಕ್ಕೆ ಹೋದನು.

ಏತಸ್ಮಿನ್ನೇವ ಕಾಲೇ ತು ಪ್ರವವರ್ಷಾಥ ವಾಸವಃ ।
ಸಂಜೀವಯನ್ ಪ್ರಜಾಃ ಸರ್ವಾ ಜನಯಾಮಾಸ ಚೌಷಧೀಃ ॥೯೦॥

ಇದೇ ಸಮಯದಲ್ಲಿ ದೇವೇಂದ್ರನು ಧಾರಾಕಾರ ಮಳೆಯನ್ನು ಸುರಿಸಿದನು. ಎಲ್ಲ ಜೀವಗಳಿಗೂ ಸಂಜೀವನವನ್ನುಂಟು ಮಾಡಿದನು. ಸಸ್ಯಗಳನ್ನು ಹುಟ್ಟಿಸಿದನು.

ವಿಶ್ವಾಮಿತ್ರೋಽಪಿ ಭಗವಾಂಸ್ತಪಸಾ ದಗ್ಧಕಿಲ್ಬಿಷಃ ।
ಕಾಲೇನ ಮಹತಾ ಸಿದ್ಧಿಮವಾಪ ಪರಮಾದ್ಭುತಾಮ್ ॥೯೧॥

ಭಗವಾನ್ ವಿಶ್ವಾಮಿತ್ರನೂ ತಪಸ್ಸಿನಿಂದ ಎಲ್ಲ ದೋಷಗಳನ್ನು ದಹಿಸಿದನು. ಅನಂತರ ದೀರ್ಘಕಾಲ ತಪಸ್ಸನ್ನಾಚರಿಸಿ ಪರಮಾದ್ಭುತ ಸಿದ್ಧಿಯನ್ನು ಪಡೆದನು.

ಏವಂ ವಿದ್ವಾನದೀನಾತ್ಮಾ ವ್ಯಸನಸ್ಥೋ ಜಿಜೀವಿಷುಃ ।
ಸರ್ವೋಪಾಯೈರುಪಾಯಜ್ಞೋ ದೀನಮಾತ್ಮಾನಮುದ್ಧರೇತ್ ॥೯೨॥

ಹೀಗೆ ವ್ಯಸನದಲ್ಲಿ ಸಿಕ್ಕಿಕೊಂಡ, ಬದುಕ ಬಯಸುವ ಪ್ರಾಜ್ಞನು ದೀನ ಮನಸ್ಸಿನವನಾಗದೆ, ಎಲ್ಲ ಉಪಾಯಗಳಿಂದ ತನ್ನನ್ನು ಉದ್ಧರಿಸಿಕೊಳ್ಳಬೇಕು.

ಏತಾಂ ಬುದ್ಧಿಂ ಸಮಾಸ್ಥಾಯ ಜೀವಿತವ್ಯಂ ಸದಾ ಭವೇತ್ ।
ಜೀವನ್ ಪುಣ್ಯಮವಾಪ್ನೋತಿ ನರೋ ಭದ್ರಾಣಿ ಪಶ್ಯತಿ ॥೯೩॥

ಯಾವಾಗಲೂ ಈ ಬುದ್ದಿಯನ್ನೇ ಅವಲಂಬಿಸಿ ಬದುಕಬೇಕು. ಬದುಕುವ ಮನುಷ್ಯನು ಪುಣ್ಯವನ್ನು ಹೊಂದುತ್ತಾನೆ. ಒಳ್ಳೆಯ ಸ್ಥಿತಿಯನ್ನು ಕಾಣುತ್ತಾನೆ.

ತಸ್ಮಾತ್ ಕೌಂತೇಯ ವಿದುಷಾ ಧರ್ಮಾಧರ್ಮವಿನಿಶ್ಚಯೇ ।
ಬುದ್ಧಿಮಾಸ್ಥಾಯ ಲೋಕೇಽಸ್ಮಿನ್ವರ್ತಿತವ್ಯಂ ಯತಾತ್ಮನಾ ॥೯॥

ಕೌಂತೇಯ! ಆದ್ದರಿಂದ ಧರ್ಮ-ಅಧರ್ಮಗಳನ್ನು ನಿಶ್ಚಯಿಸಬೇಕಾದಾಗ ಪ್ರಾಜ್ಞನಾದವನು ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು, ಸರಿಯಾದ ನಿರ್ಣಯಗಳನ್ನು ಮಾಡಿ ಈ ಲೋಕದಲ್ಲಿ ವರ್ತಿಸಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಹನ್ನೊಂದನೆಯ ಅಧ್ಯಾಯವು ಮುಗಿಯಿತು.

★ ★ ★ ★

ಹನ್ನೆರಡನೆಯ ಅಧ್ಯಾಯ

ಕೇವಲ ಪುಸ್ತಕಗಳ ಅಧ್ಯಯನದಿಂದ ಧರ್ಮದ ಅರಿವು ಆಗುವುದಿಲ್ಲ. ಈ ಅಧ್ಯಯನದ ಜೊತೆ ಉತ್ತಮ ವಿವೇಚನೆಯೂ ಬೇಕು. ರಾಜನು ಅವಶ್ಯಕತೆಗೆ ಅನುಗುಣವಾಗಿ ಉಗ್ರನೂ, ಮೃದುವೂ ಆಗಿರಬೇಕು. ಸತ್ಕುಲಜನ್ಮ ಮತ್ತು ಶ್ರೇಷ್ಠ ಸಾಧನೆಗಳು- ಇವೆರಡೂ ಇರುವವರು ಮಂತ್ರಿಗಳಾಗಲು ಅರ್ಹರು.

ಯುಧಿಷ್ಠಿರಃ

ಯದಿದಂ ಘೋರಮುದ್ದಿಷ್ಟಮಶ್ರದ್ಧೇಯಮಿವಾನೃತಮ್ ।
ಅಸ್ತಿ ಸ್ವಿದಸ್ಯ ಮರ್ಯಾದಾ ಯಾಮಹಂ ಪರಿವರ್ಜಯೇ ॥೧॥

ನಿಮ್ಮಿಂದ ಘೋರಕರ್ಮವು (ಬ್ರಾಹ್ಮಣನು ನಾಯಿಮಾಂಸವನ್ನು ತಿನ್ನುವುದು) ಹೇಳಲ್ಪಟ್ಟಿದೆ. ಈ ಸಲಹೆಯು ಸ್ವೀಕಾರಾರ್ಹವಲ್ಲ, ಸುಳ್ಳಿನಂತೆ. ಈ ನಿಷಿದ್ಧಕರ್ಮಕ್ಕೆ ಮಿತಿ ಅಥವಾ ಲಕ್ಷ್ಮಣರೇಖೆಯು ಇದೆಯೇ? ಇದ್ದರೆ ನಾನು ಅದನ್ನು ಪರಿತ್ಯಜಿಸುತ್ತೇನೆ= ನಿಷಿದ್ಧ ಕರ್ಮವನ್ನು ಆದಷ್ಟು ಕಡಿಮೆ ಮಾಡುತ್ತೇನೆ; ಎಷ್ಟು ಮಾಡಲು ಅವಕಾಶವಿದೆಯೋ ಅಷ್ಟು ಮಾಡುವುದಿಲ್ಲ.

ಸಮ್ಮುಹ್ಯಾಮಿ ವಿಷೀದಾಮಿ ಧರ್ಮೋ ಮೇ ಶಿಥಿಲೀಕೃತಃ ।
ಉದ್ಯಮಂ ನಾಧಿಗಚ್ಛಾಮಿ ಕುತಶ್ಚಿತ್ ಪರಿಚಿಂತಯನ್ ॥೨॥

ನಾನು ಮೋಹಕ್ಕೊಳಗಾಗಿದ್ದೇನೆ. ವಿಷಾದಕ್ಕೊಳಗಾಗಿದ್ದೇನೆ. ನನ್ನ ಧರ್ಮವು ಶಿಥಿಲವಾಗಿಸಲ್ಪಟ್ಟಿದೆ. ಎಷ್ಟೇ ಆಲೋಚಿಸಿದರೂ ನಾನು ಈ ಆಪದ್ಧರ್ಮದ ಆಚರಣೆಯಲ್ಲಿ ಪ್ರವೃತ್ತಿ ಮಾಡಲಾರೆ.

ಭೀಷ್ಮಃ

ನೈತದ್ ಬುದ್ಧ್ಯಾಗಮಾದೇವ ತವ ಧರ್ಮಾನುಶಾಸನಮ್ ।
ಪ್ರಜ್ಞಾಸಮಭಿಹಾರೋಽಯಂ ಕವಿಭಿಃ ಸಂಭೃತಂ ಮಧು ॥೩॥

ಇದು ಶಾಸ್ತ್ರಗ್ರಂಥಗಳಿಂದ ತಿಳಿದು ನಿನಗೆ ಮಾಡಿದ ಧರ್ಮಾನುಶಾಸನ ಅಲ್ಲ. ಇದು ವಿವೇಕದ ಸರಿಯಾದ ಬಳಕೆ. ಚಿಂತನಶೀಲರು ಸಂಗ್ರಹಿಸಿದ ಮಕರಂದ. (ಇದು =ನಿನ್ನ ಅಭಿಪ್ರಾಯವು- ಸರಿಯಲ್ಲ. ನಿನಗೆ ಮಾಡಿದ ಧರ್ಮಾನುಶಾಸನವು ಆಗಮಗಳಿಂದ ತಿಳಿಯಲ್ಪಡುವ ವಿಷಯಗಳು. ಅಷ್ಟೆ ಅಲ್ಲ. ಇದು ವಿವೇಕದ ಸರಿಯಾದ ಬಳಕೆ. ಚಿಂತನಶೀಲರು ಸಂಗ್ರಹಿಸಿದ ಮಕರಂದ).

ಬಾಹ್ಯಾಃ ಪ್ರತಿವಿಧಾತವ್ಯಾಃ ಪ್ರಜಾ ರಾಜ್ಞಾ ತತಸ್ತತಃ ।
ಬಹುಶಾಖೇನ ಧರ್ಮೇಣ ಯಾತ್ಯೇಷಾ ಸಂಪ್ರವರ್ತತೇ ॥೪॥

ಸಾಧಾರಣ ಬುದ್ಧಿಯ ಜನರಿಗೆ ಬೇರೆ ಬೇರೆ ನಿದರ್ಶನಗಳಿಂದ (ಕೋಗಿಲೆ-ವರಾಹ-ತೋಳ-ಸಿಂಹ ಮೊದಲಾದ ಪ್ರಾಣಿಗಳು ಆಪತ್ತನ್ನು ನಿಭಾಯಿಸುವ ನಿದರ್ಶನಗಳಿಂದ) ಶಿಕ್ಷಣವನ್ನು ಕೊಡಬೇಕು. ಬಹುವಿಧ ಧರ್ಮಗಳಿಂದ (ವ್ಯವಸ್ಥೆಗಳಿಂದ) ಈ ಲೋಕಜೀವನವು ನಡೆಯುತ್ತದೆ. (ಬಹುವಿಧ ಧರ್ಮ-ಚಿಕ್ಕವರಿಗೆ ಒಂದು ವ್ಯವಸ್ಥೆ, ತರುಣರಿಗೆ ಇನ್ನೊಂದು ವ್ಯವಸ್ಥೆ. ವೃದ್ಧರಿಗೆ ಮತ್ತೊಂದು ವ್ಯವಸ್ಥೆ. ತಿಳಿದವರಿಗೆ ಒಂದು ವ್ಯವಸ್ಥೆ. ತಿಳಿಯದವರಿಗೆ ಇನ್ನೊಂದು ವ್ಯವಸ್ಥೆ).

ಬುದ್ಧಿಸಂಜನನಂ ರಾಜ್ಞಾಂ ಧರ್ಮಮಾಚರತಾಂ ಸದಾ ।
ಜಯೋ ಭವತಿ ಕೌರವ್ಯ ತದಾ ತದ್ವಿದ್ಧಿ ಮೇ ವಚಃ ॥೫॥

ಸದಾ ಧರ್ಮನಿಷ್ಠರಾದ ರಾಜರಿಗೆ (ಸಮಯಕ್ಕೆ ಅನುಕೂಲವಾದ) ಬುದ್ಧಿಯು ಹುಟ್ಟುತ್ತದೆ. ಆಗ ಜಯವೂ ಆಗುತ್ತದೆ. ಕುರುಕುಲ ಸಂಜಾತ! ಆದ್ದರಿಂದ ನನ್ನ ಮಾತನ್ನು ಸರಿಯಾಗಿ ತಿಳಿ.

ಬುದ್ಧಿಶ್ರೇಷ್ಠಾ ಹಿ ರಾಜಾನೋ ಜಯಂತಿ ವಿಜಯೈಷಿಣಃ ।
ಧರ್ಮಃ ಪ್ರತಿವಿಧಾತವ್ಯೋ ಬುದ್ಧ್ಯಾ ರಾಜ್ಞಾ ತತಸ್ತತಃ ॥೬॥

ವಿಜಯಾಕಾಂಕ್ಷಿಗಳಾದ ರಾಜರು ಬುದ್ಧಿಯಿಂದ (ಅನುಕೂಲಕರ ಸ್ಫೂರ್ತಿಯಿಂದ) ಶ್ರೇಷ್ಠರಾಗಿದ್ದರೆ ಜಯಿಸುತ್ತಾರೆ. ರಾಜರು ಬೇರೆ ಬೇರೆ ಮೂಲಗಳಿಂದ (ನಿದರ್ಶನಗಳಿಂದ) ವಿಮರ್ಶ ಪ್ರಜ್ಞೆಯಿಂದ ಧರ್ಮವನ್ನು ವಿಮರ್ಶಿಸಬೇಕು.

ನೈಕಶಾಖೇನ ಧರ್ಮೇಣ ರಾಜ್ಞಾಂ ಧರ್ಮೋ ವಿಧೀಯತೇ ।
ದುರ್ಬಲಸ್ಯ ಕುತಃ ಪ್ರಜ್ಞಾ ಪುರಸ್ತಾದನುದಾಹೃತಾ ॥೭॥

ನಾನಾ ಪ್ರಕಾರದ ಧರ್ಮಗಳ ನಿದರ್ಶನದಿಂದ ರಾಜರಿಗೆ ಧರ್ಮವನ್ನು ಬೋಧಿಸಲಾಗುತ್ತದೆ. ಅಧ್ಯಯನ ಕಾಲದಲ್ಲಿ ಪ್ರೌಢಸ್ಥಿತಿಗೆ ಏರದ ಪ್ರಜ್ಞೆಯು, ಆದ್ದರಿಂದಲೇ ಜ್ಞಾನ ದುರ್ಬಲನಾದ ರಾಜನಿಗೆ, ಅನಂತರ ಹೇಗೆ ತಾನೆ ಕೂಡಿ ಬರುತ್ತದೆ.

ಅದ್ವೈಧಜ್ಞಃ ಪ್ರತಿದ್ವೈಧೇ ಸಂಶಯಂ ಪ್ರಾಪ್ತುಮರ್ಹತಿ ।
ಬುದ್ಧಿದ್ವೈಧಂ ವೇದಿತವ್ಯಂ ಪುರಸ್ತಾದೇವ ಭಾರತ ॥೮॥

ಪ್ರತಿಯೊಂದು ಧರ್ಮಕ್ಕೂ ಎರಡು ಅಥವಾ ಹೆಚ್ಚು ಪ್ರಕಾರಗಳು ಇರುತ್ತವೆ. (ಅಹಿಂಸೆಯು ಸಾಮಾನ್ಯವಾಗಿ ಧರ್ಮ. ರಾಷ್ಟ್ರಕ್ಕೆ, ಜನಗಳಿಗೆ ಹಾನಿ ಮಾಡುವವರ ವಿಷಯದಲ್ಲಿ ಅಧರ್ಮ). ರಾಜನು ಇದನ್ನು ತಿಳಿದಿರಬೇಕು. ತಿಳಿಯದ ರಾಜನು ತನ್ನ ವಿರುದ್ಧ ಪ್ರಯೋಗಿಸುವ ದ್ವಿಮುಖ ಅಥವಾ ಬಹುಮುಖ ಧರ್ಮದ ಬಗ್ಗೆ ಸಂಶಯಕ್ಕೆ ಒಳಗಾಗುತ್ತಾನೆ. ಭರತಕುಲಸಂಜಾತ! ಧರ್ಮದ್ವೈವಿಧ್ಯವನ್ನು ಮತ್ತು ಬುದ್ಧಿದ್ವೈವಿಧ್ಯವನ್ನು ಮೊದಲೇ ತಿಳಿದಿರಬೇಕು.

ಪಾರ್ಶ್ವತಃಕರಣಂ ಪ್ರಜ್ಞಾ ವಿಷೂಚೀ ತ್ವಾಪಗಾ ಇವ ।
ಜನಸ್ತೂಚ್ಚಾರಿತಂ ಧರ್ಮಂ ವಿಜಾನಾತ್ಯನ್ಯಥಾನ್ಯಥಾ ॥೯॥

ಯಾವ ಕಡೆ, ಹೇಗೆ ಹರಿಯುತ್ತದೆ ಎಂಬ ಸೂಚನೆಯನ್ನು ಕೊಡದ ನದಿಯಂತೆ ಪರರಿಗೆ ತಿಳಿಯದಂತೆ ಮರೆಯಲ್ಲಿ ಕೆಲಸ ಮಾಡುವುದು ಪ್ರಜ್ಞೆ. ಜನರು ಪ್ರಕಟವಾಗಿ ಘೋಷಿಸಿದ ಕಾರ್ಯಗಳನ್ನು ತಪ್ಪುತಪ್ಪಾಗಿ ತಿಳಿಯುತ್ತಾರೆ.

ಸಮ್ಯಗ್ ವಿಜ್ಞಾನಿನಃ ಕೇಚಿನ್ಮಿಥ್ಯಾವಿಜ್ಞಾನಿನೋಽಪರೇ ।
ತದ್ವೈ ಯಥಾತಥಂ ಬುದ್ಧ್ವಾ ಜ್ಞಾನಮಾದದತೇ ಸತಾಮ್ ॥೧೦॥

ಕೆಲವರು ಸರಿಯಾಗಿ ತಿಳಿದಿರುತ್ತಾರೆ. ಕೆಲವರು ತಪ್ಪಾಗಿ ತಿಳಿದಿರುತ್ತಾರೆ. ವಿವೇಕಿಗಳು ಅಂತಹವರನ್ನು ಸರಿಯಾಗಿ ತಿಳಿದು, ಸಜ್ಜನರಿಂದ= ಪ್ರಾಜ್ಞ ಸಜ್ಜನರಿಂದ ಜ್ಞಾನವನ್ನು ಪಡೆಯುತ್ತಾರೆ.

ಪರಿಮುಷ್ಣಂತಿ ಶಾಸ್ತ್ರಾಣಿ ಧರ್ಮಸ್ಯ ಪರಿಪಂಥಿನಃ ।
ವೈಷಮ್ಯಮಪಿ ವಿದ್ಯಾನಾಂ ನೈರರ್ಥ್ಯಾತ್ ಖ್ಯಾಪಯಂತಿ ತೇ ॥೧೧॥

ಧರ್ಮದ ವಿರೋಧಿಗಳು ಶಾಸ್ತ್ರಗಳನ್ನು ಕದಿಯುತ್ತಾರೆ. ಅಂದರೆ, ಶಾಸ್ತ್ರಗಳು ಅರ್ಥಹೀನವೆಂದು ಪ್ರತಿಪಾದಿಸಿ, ಅವುಗಳ ವಿಷಮತೆಯನ್ನು= ಅಸಾಮಂಜಸ್ಯವನ್ನು ಪ್ರತಿಪಾದಿಸುತ್ತಾರೆ.

ಆಜಿಜೀವಿಷವೋ ವಿದ್ಯಾಂ ಯಶಸ್ಕಾಮಾಃ ಸಮಂತತಃ ।
ತೇ ಸರ್ವೇ ನರಪಾಪಿಷ್ಠಾ ಧರ್ಮಸ್ಯ ಪರಿಪಂಥಿನಃ ॥೧೨॥

ವಿದ್ಯೆಯನ್ನು ಜೀವನೋಪಾಯವನ್ನಾಗಿಸಿಕೊಳ್ಳುವವರು, ವಿದ್ಯೆಯಿಂದ ಕೀರ್ತಿಯನ್ನು ಬಯಸುವವರು ಪಾಪಿಷ್ಠರು, ಧರ್ಮದ ವಿರೋಧಿಗಳು.

ಅಪಕ್ವಮತಯೋ ಮನ್ದಾ ನ ಜಾನಂತಿ ಯಥಾತಥಮ್ ।
ಸದಾ ಹ್ಯಶಾಸ್ತ್ರಕುಶಲಾಃ ಸರ್ವತ್ರಾಪರಿನಿಷ್ಠಿತಾಃ ॥೧೩॥

ಪಕ್ವಮತಿಯಿಲ್ಲದ ಮಂದರು ಎಂದೂ ಶಾಸ್ತ್ರದಲ್ಲಿ ಕುಶಲರಾಗುವುದಿಲ್ಲ. ಇವರಿಗೆ ಯಾವುದೇ ವಿಷಯದಲ್ಲಿ ತಲಸ್ಪರ್ಶಿಜ್ಞಾನವಿರುವುದಿಲ್ಲ. ಇಂತಹವರು ವಸ್ತುಸ್ಥಿತಿಯನ್ನು ತಿಳಿಯುವುದೇ ಇಲ್ಲ.

ಪರಿಮುಷ್ಣಂತಿ ಶಾಸ್ತ್ರಾಣಿ ಶಾಸ್ತ್ರದೋಷಾನುದರ್ಶಿನಃ ।
ವಿಜ್ಞಾನಮಥ ವಿದ್ಯಾನಾಂ ನ ಸಮ್ಯಗಿತಿ ವರ್ತತೇ ॥೧೪॥

ಶಾಸ್ತ್ರಗಳಲ್ಲಿ ದೋಷಗಳನ್ನೇ ಕಾಣುವವರು ಅವುಗಳನ್ನು ಕದಿಯುತ್ತಾರೆ. ಅಂದರೆ, ಅವುಗಳಿಗೆ ಅಪಾರ್ಥವನ್ನು ಹೇಳುತ್ತಾರೆ. ಶಾಸ್ತ್ರಗಳ ವಿಪರೀತ ಜ್ಞಾನವು ಶ್ರೇಯಸ್ಕರವಲ್ಲ. ಇದು ಸಿದ್ಧವಾದ ವಿಷಯ.

ನಿಂದಯಾ ಪರವಿದ್ಯಾನಾಂ ಸ್ವಾಂ ವಿದ್ಯಾಂ ಖ್ಯಾಪಯಂತಿ ಯೇ ।
ವಾಗಾಸ್ತಿಕ್ಯಾನುನೀತಾಶ್ಚ ದುಗ್ಧವಿದ್ಯಾಫಲಾ ಇವ ।
ತಾನ್ ವಿದ್ಯಾವಣಿಜೋ ವಿದ್ಧಿ ರಾಕ್ಷಸಾನಿವ ಭಾರತ ॥೧೫॥

ಯಾರು ವಿದ್ಯೆಯ ಫಲವನ್ನು ಪಡೆದವರಂತೆ ಬೇರೆಯವರ ವಿದ್ಯೆಯನ್ನು ನಿಂದಿಸುತ್ತಾ ತಮ್ಮ ವಿದ್ಯೆಯ ಪ್ರಶಂಸೆಯನ್ನು ಮಾಡುತ್ತಾರೋ, ಸ್ವರ್ಗವೇ ಮಹಾಫಲ ಎನ್ನುವ ಆಸ್ತಿಕ್ಯದ ಮಾತುಗಳಿಂದ ಯಾರು ಪ್ರಭಾವಿತರಾಗುತ್ತಾರೋ, ಅವರನ್ನು, ಹೇ ಭರತಕುಲಸಂಜಾತ! ವಿದ್ಯೆಯನ್ನು ಮಾರುವ ವರ್ತಕರೆಂದು ತಿಳಿ. ರಾಕ್ಷಸ ಸದೃಶ ಎಂದು ತಿಳಿ.

ವ್ಯಾಜೇನ ಕೃತ್ಸ್ನೋ ವಿಹಿತೋ ಧರ್ಮಸ್ತೇ ಪರಿಹಾಸ್ಯತೇ ।
ನ ಧರ್ಮವಚನಂ ವಾಚಾ ಕಿಂತು ಬುದ್ಧ್ಯೇತಿ ನಃ ಶ್ರುತಮ್ ॥೧೬॥

ಇತಿ ಬಾರ್ಹಸ್ಪತಂ ಜ್ಞಾನಂ ಪ್ರೋವಾಚ ಮಘವಾ ಸ್ವಯಮ್ ।
ನ ತ್ವೇವ ವಚನಂ ಕಿಂಚಿದನಿಮಿತ್ತಾದಿಹೋಚ್ಯತೇ ॥೧೭॥

ಯಾವುದೋ ನೆಪದಿಂದ ಧರ್ಮವನ್ನು ಆಚರಿಸಿದರೆ ಆ ಧರ್ಮವು ಯಾವುದೋ ನೆಪದಿಂದ ದೂರವಾಗುತ್ತದೆ. ಧರ್ಮದ ಪ್ರತಿಪಾದನೆಯ ಮತ್ತು ಆಚರಣೆಯ ಗುರಿ ಕೇವಲ ಸ್ವರ್ಗಪ್ರಾಪ್ತಿ ಅಲ್ಲ. ತತ್ತ್ವಜ್ಞಾನದ ಪ್ರಾಪ್ತಿಯು ಇವುಗಳ ಗುರಿ ಎಂದೂ ನಾವು ಕೇಳಿದ್ದೇವೆ. ಇದು ಬೃಹಸ್ಪತಿಯ ಮತ. ಇಂದ್ರನೇ ಇದನ್ನು ಪ್ರಚುರಪಡಿಸಿದನು. ಈ ಶಾಸ್ತ್ರದಲ್ಲಿ ಅಸಮರ್ಥನೀಯವಾದ ಯಾವ ವಚನವೂ ಇಲ್ಲ. (ಈ ಭಾವವು ಶ್ರೀವಾದಿರಾಜರ ಲಕ್ಷಾಲಂಕಾರದಲ್ಲಿ ಹೇಳಲ್ಪಟ್ಟಿದೆ).

ಸ್ವವಿನೀತೇನ ಶಾಸ್ತ್ರೇಣ ವ್ಯವಸ್ಯಂತಿ ಯಥಾ ಪರಃ ।
ಲೋಕಯಾತ್ರಾಮಿಹೈಕೇ ತು ಧರ್ಮಮಾಹುರ್ಮನೀಷಿಣಃ ॥೧೮॥

ಕೆಲವರು (ಗುರುಗಳಿಂದ ಶಿಕ್ಷಣ ಪಡೆಯದೆ) ತಾವೇ ಅಭ್ಯಾಸ ಮಾಡಿದ ಶಾಸ್ತ್ರಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತಾರೆ. ಇವರು ಪಾಮರಸದೃಶ. ಕೆಲವು ಪ್ರಾಜ್ಞರು

ವರ್ತಮಾನ ಜೀವನ ನಿರ್ವಹಣೆಗೆ ಅನುಕೂಲವಾದ ವ್ಯವಸ್ಥೆಯೇ ಧರ್ಮ ಎಂದು ಹೇಳುತ್ತಾರೆ.

ಸಮುದ್ದಿಷ್ಟಂ ಸತಾಂ ಧರ್ಮಂ ಸ್ವಯಂ ಮುಚ್ಯೇದಪಂಡಿತಃ ।
ಅಮರ್ಷಾಚ್ಛಾಸ್ತ್ರಸಮ್ಮೋಹಾದನಿಮಿತ್ತಾದಿಹೋಚ್ಯತೇ ॥೧೯॥

ಸಜ್ಜನರು ಆಚರಿಸಿದ ಮತ್ತು ಸಜ್ಜನರಿಗೆ ಹಿತವಾಗುವಂತೆ ಸರಿಯಾಗಿ ಹೇಳಲ್ಪಟ್ಟ ಧರ್ಮವನ್ನು ಯಾರು ಕೋಪದಿಂದ, ಶಾಸ್ತ್ರಗಳ ಬಗ್ಗೆ ತಪ್ಪು ಕಲ್ಪನೆಯಿಂದ ಅಥವಾ ಏನೂ ಕಾರಣವಿಲ್ಲದೆ ತ್ಯಜಿಸುತ್ತಾನೋ ಅವನು ಅಪಂಡಿತ ಎಂದು ಅಭಿಪ್ರಾಯ.

ಶಾಸ್ತ್ರಂ ಪ್ರಜ್ಞಾಸ್ಯ ವದತಃ ಸಮೂಹೇ ಯತ್ತದ್ದರ್ಶನಮ್ ।
ಆಜಗಾಮ ತಯೋರ್ಬುದ್ಧ್ಯಾ ವಚನೇನ ಪ್ರಶಸ್ಯತೇ ॥೨೦॥

ಧರ್ಮದ ಬಗ್ಗೆ ಇರುವ ವಿವಿಧ ಅಭಿಪ್ರಾಯಗಳ ಮಧ್ಯೆ ಯಾವ ಶಾಸ್ತ್ರದಿಂದ ಉತ್ಕೃಷ್ಟವಾದ ಧರ್ಮದ ಅರಿವು ಬರುವುದೋ ಆ ಶಾಸ್ತ್ರವು ಪ್ರಜ್ಞೆಯ ಮೂಲ ಮತ್ತು ಆ ಶಾಸ್ತ್ರಕ್ಕೆ ಪ್ರಜ್ಞೆಯು ಮೂಲ. ಶಾಸ್ತ್ರಮತ್ತು ವಿವೇಚನೆ ಇವೆರಡರ ಸಮನ್ವಯದಿಂದ ಮಾಡಲ್ಪಡುವ ಕರ್ಮವು ಸರಿಯಾದ ಫಲವನ್ನು ಕೊಡುತ್ತದೆ.

ಅಜ್ಞಾನಾಜ್ಜ್ಞಾನಹೇತುತ್ವಾದ್ ವಚನಂ ಸಾಧು ಮನ್ಯತೇ ।
ಅನುಪಾಗತಮೇವೇದಂ ಶಾಸ್ತ್ರಮೇವಮಪಾರ್ಥಕಮ್ ॥೨೧॥

ಶಾಸ್ತ್ರವು ಅಜ್ಞಾನದಿಂದ ಜ್ಞಾನದ ಕಡೆ ಸಾಗಲು ಕಾರಣವಾದ್ದರಿಂದ ಅದನ್ನು ಸರಿಯಾದ ಜ್ಞಾನಸಾಧನ ಎಂದು ತಿಳಿಯುತ್ತಾರೆ. ಶಾಸ್ತ್ರವು ಯುಕ್ತಿಗೆ ಅನುಗುಣವಾಗಿಲ್ಲ ಎಂದೂ ಕೆಲವರು ತಿಳಿಯುತ್ತಾರೆ. ಶಾಸ್ತ್ರಗಳಲ್ಲಿ ವಸ್ತುಸ್ಥಿತಿಗೆ ವಿರುದ್ಧವಾದ ಅಭಿಪ್ರಾಯಗಳಿಲ್ಲ.

ದೈತೇಯಾನುಶನಾಃ ಪ್ರಾಹ ಸಂಶಯಚ್ಛೇದನೇ ಪುರಾ ।
ಜ್ಞಾನಮವ್ಯಪದೇಶ್ಯಂ ಹಿ ಯಥಾ ನಾಸ್ತಿ ತಥೈವ ತತ್ ॥೨೨॥

(ತರ್ಕ ಮತ್ತು ಶಾಸ್ತ್ರಗಳಲ್ಲಿ ಪರಸ್ಪರ ವಿರೋಧವನ್ನು ಕಾಣದೆ. ಅವೆರಡನ್ನು ಸಮನ್ವಯಗೊಳಿಸಿ ವಸ್ತುಸ್ಥಿತಿಯನ್ನು ತಿಳಿಯಬೇಕು). ಹೀಗೆ ಶುಕ್ರಾಚಾರ್ಯರು ಹಿಂದೆ

ದಿತಿಯ ಮಕ್ಕಳಿಗೆ ಸಂಶಯವನ್ನು ಪರಿಹರಿಸುವ ಕ್ರಮವನ್ನು ತಿಳಿಸುವಾಗ ಹೇಳಿದರು. ಗುರಿಯನ್ನು ಮುಟ್ಟಲು ಸಾಧನವಾಗದ ಜ್ಞಾನವು ಇದ್ದರೂ ಇಲ್ಲದಂತೆಯೇ.

ತೇನ ಸಂಛಿನ್ನಮೂಲೇನ ಕಸ್ತೋಷಯಿತುಮಿಚ್ಛತಿ ।
ಪುನರ್ವ್ಯವಸಿತುಂ ಯೋ ವಾ ನೇದಂ ವಾಕ್ಯಮುಪಾಶ್ರಯೇತ್ ॥೨೩॥

(ಮೇಲೆ ಹೇಳಿದ ಶುಕ್ರಾಚಾರ್ಯರ ಉಪದೇಶವು ಮೂಲ) ಮೂಲದ= ಗುರೂಪದೇಶದ ಹಿನ್ನೆಲೆಯಿಲ್ಲದ ಜ್ಞಾನದಿಂದ ಯಾರು ತಾನೆ (ಅವಶ್ಯಕತೆ ಇರುವವರಿಗೆ) ಅನುಕೂಲವಾಗುವಂತೆ ಬೋಧಿಸಿ ಸಂತೋಷಪಡಿಸಲು ಬಯಸಬಹುದು? ಮತ್ತು ಯಾರು ತಾನೆ ಸರಿಯಾದ ನಿಶ್ಚಯಕ್ಕಾಗಿ ಗುರೂಪದೇಶವನ್ನು ಆಶ್ರಯಿಸದೆ ಇದ್ದಾನು? (ಗುರೂಪದೇಶದಿಂದ ಗಳಿಸದ ಜ್ಞಾನದಲ್ಲಿ ಕೊರತೆ ಇರುತ್ತದೆ. ಅಸಮರ್ಪಕ ಜ್ಞಾನದಿಂದ ಯಾರಿಗೂ ಯಾವ ಅನುಕೂಲವನ್ನು ಮಾಡಲಾಗುವುದಿಲ್ಲ. ಸರಿಯಾದ ನಿಶ್ಚಯಕ್ಕಾಗಿ ಗುರೂಪದೇಶವನ್ನೇ ಅವಲಂಬಿಸಬೇಕು).

ಉಗ್ರಾಯೈವ ಹಿ ಸೃಷ್ಟೋऽಸಿ ತದೇವ ತ್ವಮಪೀಕ್ಷಸೇ ।
ಅಂಗೇಮಾಮನ್ವವೇಕ್ಷಸ್ವ ರಾಜನೀತಿಂ ಬುಭೂಷಿತುಮ್ ।
ಯಯಾ ಪ್ರಮುಚ್ಯತೇ ತ್ವನ್ಯೋ ಯದರ್ಥಂ ಚ ಪ್ರಮೋದತೇ ॥೨೪॥

ಪ್ರಿಯ ಯುಧಿಷ್ಠಿರ! ಉಗ್ರಕರ್ಮವನ್ನು (ಯುದ್ಧವನ್ನು) ಮಾಡುವುದಕ್ಕಾಗಿಯೇ ನೀನು ಹುಟ್ಟಿರುವಿ. ನಿನಗೂ ಅದು ತಿಳಿದಿದೆ. ನೀನು ಸುಸ್ಥಿತಿಯಲ್ಲಿ ಇರುವುದಕ್ಕಾಗಿ ಈ ರಾಜನೀತಿಯನ್ನೇ ಅನುಸರಿಸು. ಈ ರಾಜನೀತಿಯಿಂದಾಗಿ ಯಾರಿಗೋ ಕೆಲವರಿಗೆ ಬಿಡುಗಡೆಯಾಗುತ್ತದೆ. ಮತ್ತೆ ಯಾರಿಗೋ ಸಂತೋಷವಾಗುತ್ತದೆ.

ಅಜೋऽಶ್ವಃ ಕ್ಷತ್ರಮಿತ್ಯೇತತ್ ಸದೃಶಂ ಬ್ರಹ್ಮಣಾ ಕೃತಮ್ ।
ತಸ್ಮಾನ್ನ ತೈಕ್ಷ್ಣ್ಯಾದ್ ಭೂತಾನಾಂ ಯಾತ್ರಾ ಕಾಚಿತ್ ಪ್ರಸಿಧ್ಯತಿ ॥೨೫॥

ಬ್ರಹ್ಮದೇವನು ಆಡು, ಕುದುರೆ, ಕ್ಷತ್ರಿಯ- ಈ ಮೂವರನ್ನು ಸದೃಶವಾಗಿ ಸೃಷ್ಟಿಸಿದ್ದಾನೆ (ಈ ಮೂವರಲ್ಲಿ ಸಾದೃಶ್ಯವಿದೆ). (ಆಡನ್ನು ಯಜ್ಞದಲ್ಲಿ ಬಲಿಕೊಟ್ಟರೆ ಈ ಬಲಿಯಿಂದ ಆ ಆತ್ಮಕ್ಕೆ ಹಿತವಾಗುತ್ತದೆ. ಹೀಗೆಯೇ ಕುದುರೆಗಳು ಮತ್ತು ಕ್ಷತ್ರಿಯರು ಯುದ್ಧದಲ್ಲಿ ಭಾಗವಹಿಸಬೇಕು. ಇದರಿಂದ ಇಬ್ಬರಿಗೂ ಹಿತವಾಗುತ್ತದೆ). ಆದ್ದರಿಂದ

ಕ್ಷತ್ರಿಯನ ತೀಕ್ಷ್ಣತೆಯಿಂದಲೇ ಲೋಕಜೀವನವು ನಡೆಯುತ್ತದೆ. ಕ್ಷತ್ರಿಯನು ತೀಕ್ಷ್ಣತೆಯನ್ನು ಬಿಟ್ಟರೆ ಲೋಕಜೀವನವು ನಡೆಯುವುದಿಲ್ಲ.

ಯಸ್ತ ವಧ್ಯವಧೇ ದೋಷಃ ಸ ವಧ್ಯಸ್ಯಾವಧೇ ಸ್ಮೃತಃ ।
ಏಷೈವ ಖಲು ಮರ್ಯಾದಾ ಯಾಮಯಂ ಪರಿವರ್ಜಯೇತ್ ॥೨೬॥

ಕೊಲ್ಲಬಾರದವರನ್ನು ಕೊಂದರೆ ಯಾವ ದೋಷವೋ ಆ ದೋಷವು ಕೊಲ್ಲಬೇಕಾದವರನ್ನು ಕೊಲ್ಲದಿದ್ದರೂ ಆಗುತ್ತದೆ. ಇದೇ ಧರ್ಮದ ಮರ್ಯಾದೆ=ಗಡಿ. ಪಾಮರರು ಈ ಮರ್ಯಾದೆಯನ್ನು ಉಲ್ಲಂಘಿಸುತ್ತಾರೆ.

ತಸ್ಮಾತ್ ತೀಕ್ಷ್ಣಃ ಪ್ರಜಾ ರಾಜಾ ಸ್ವಧರ್ಮೇ ಸ್ಥಾಪಯೇದುತ ।
ಅನ್ಯೋನ್ಯಂ ಭಕ್ಷಯಂತೋ ಹಿ ಪ್ರಚರೇಯುರ್ವೃಕಾ ಇವ ॥೨೭॥

ಯಸ್ಯ ದಸ್ಯುಗಣಾ ರಾಷ್ಟ್ರೇ ಧ್ವಾಂಕ್ಷಾ ಮತ್ಸ್ಯಾನ್ ಜಲಾದಿವ ।
ವಿಹರಂತಿ ಪರಸ್ವಾನಿ ಸ ವೈ ಕ್ಷತ್ರಿಯಪಾಂಸನಃ ॥೨೮॥

ಆದ್ದರಿಂದ ರಾಜನು ತೀಕ್ಷ್ಣಶಾಸನದಿಂದಲೇ ಪ್ರಜೆಗಳನ್ನು ನ್ಯಾಯಮಾರ್ಗದಲ್ಲಿ ಸ್ಥಾಪಿಸಬೇಕು. ಯಾರ ರಾಷ್ಟ್ರದಲ್ಲಿ ಲೂಟಿಕೋರರು ತೋಳಗಳಂತೆ ಜನಗಳನ್ನು ತಿನ್ನುತ್ತಾ, ಹಿಂಸಿಸುತ್ತಾ, ಕಾಗೆಗಳು ನೀರಿನಲ್ಲಿರುವ ಮೀನುಗಳನ್ನು ಅಪಹರಿಸುವಂತೆ ಪರರ ಸ್ವತ್ತನ್ನು ಅಪಹರಿಸುತ್ತಾರೋ ಆ ರಾಜನು ಕ್ಷತ್ರಿಯ ಕುಲಕ್ಕೆ ಕಳಂಕ.

ಕುಲೀನಾನ್ ಸಚಿವಾನ್ಕೃತ್ವಾ ವೇದವಿದ್ಯಾಸಮನ್ವಿತಾನ್ ।
ಪ್ರಶಾಧಿ ಪೃಥಿವೀಂ ರಾಜನ್ ಪ್ರಜಾ ಧರ್ಮೇಣ ಪಾಲಯನ್ ॥೨೯॥

ರಾಜನೆ! ಸತ್ಕುಲಪ್ರಸೂತರೂ, ವೇದವಿದ್ಯಾಸಂಪನ್ನರೂ ಆದವರನ್ನು ಸಚಿವರನ್ನಾಗಿ ಮಾಡಿಕೊಂಡು, ಧರ್ಮದಿಂದ ಪ್ರಜೆಗಳನ್ನು ರಕ್ಷಿಸುತ್ತಾ ಭೂಮಿಯನ್ನು ಆಳು.

ವಿಹೀನಜನ್ಮಕರ್ಮಾಣಂ ಯಃ ಪ್ರಗೃಹ್ಣಾತಿ ಭೂಮಿಪಃ ।
ಉಭಯಸ್ಯಾವಿಶೇಷಜ್ಞಸ್ತದ್ವೈ ಕ್ಷತ್ರಂ ನಪುಂಸಕಮ್ ॥೩೦॥

ಸತ್ಕುಲದಲ್ಲಿ ಜನ್ಮ ಮತ್ತು ಶ್ರೇಷ್ಠ ಸಾಧನೆಗಳಿಲ್ಲದವರನ್ನು ಮಂತ್ರಿಗಳನ್ನಾಗಿ ಯಾರು ಸ್ವೀಕರಿಸುವನೋ ಅವನು ಅಂತಹ ಜನ್ಮ ಮತ್ತು ಸಾಧನೆಗಳು ಮತ್ತು ಈ ಜನ್ಮ-ಪರಜನ್ಮಗಳ ಮಹತ್ವವನ್ನು ಅರಿಯದವನು. ಅಂತಹ ಕ್ಷತ್ರಿಯ ಅಪ್ರಯೋಜಕ.

ನೈವೋಗ್ರಂ ನೈವ ಚಾನುಗ್ರಂ ಧರ್ಮೇಣೇಹ ಪ್ರಶಸ್ಯತೇ ।
ಉಭಯಂ ನ ವ್ಯತಿಕ್ರಾಮೇದುಗ್ರೋ ಭೂತ್ವಾ ಮೃದುರ್ಭವ ॥೩೧॥

ಧರ್ಮವು ಉಗ್ರಶಾಸನವನ್ನು ಒಪ್ಪುವುದಿಲ್ಲ. ಮೃದುಶಾಸನವನ್ನೂ ಒಪ್ಪುವುದಿಲ್ಲ. ಎರಡು ವಿಧಶಾಸನವನ್ನೂ ಮೀರಬಾರದು. ಉಗ್ರನೂ ಆಗು, ಮೃದುವೂ ಆಗು.

ಕಷ್ಟಃ ಕ್ಷತ್ರಿಯಧರ್ಮೋಯಂ ಸೌಹೃದಂ ತ್ವಯಿ ಯತ್ ಸ್ಥಿತಮ್ ।
ಉಗ್ರೇ ಕರ್ಮಣಿ ಸೃಷ್ಟೋಽಸಿ ತಸ್ಮಾದ್ ರಾಜ್ಯಂ ಪ್ರಶಾಧಿ ವೈ ॥೩೨॥

ನಿನ್ನಲ್ಲಿ ಮೃದು ಮನಸ್ಸು ಇರುವುದರಿಂದ ನಿನಗೆ ಈ ಕ್ಷತ್ರಿಯ ಧರ್ಮವು ಕಷ್ಟ. ನೀನು ಕಠೋರ ಕರ್ಮಗಳನ್ನು ಮಾಡುವುದಕ್ಕಾಗಿ ಹುಟ್ಟಿರುವಿ. ಆದ್ದರಿಂದ ನೀನು (ಉಗ್ರ ಮತ್ತು ಮೃದು ಸ್ವಭಾವಗಳ ಸಮನ್ವಯದಿಂದ) ರಾಜ್ಯವನ್ನು ಆಳು.

ಅಶಿಷ್ಟನಿಗ್ರಹೋ ನಿತ್ಯಂ ಶಿಷ್ಟಸ್ಯ ಪರಿಪಾಲನಮ್ ।
ಇತಿ ಶುಕ್ರೋಽಬ್ರವೀದ್ ಧೀಮಾನಾಪತ್ಸು ಭರತರ್ಷಭ ॥೩೩॥

ಭರತಕುಲಶ್ರೇಷ್ಠ! ಆಪತ್ಕಾಲದಲ್ಲಿ ಅಶಿಷ್ಟರ ನಿಗ್ರಹವನ್ನು ಶಿಷ್ಟರ ಪರಿಪಾಲನವನ್ನು ರಾಜನು ಮಾಡಬೇಕು ಎಂದು ಜ್ಞಾನಿಯಾದ ಶುಕ್ರಾಚಾರ್ಯರು ಹೇಳಿದ್ದಾರೆ.

ಯುಧಿಷ್ಠಿರಃ

ಅಸ್ತಿ ಸ್ವಿದ್ದಸ್ಯುಮರ್ಯಾದಾ ಯಾಮನ್ಯೋ ನಾತಿಲಂಘಯೇತ್ ।
ಪೃಚ್ಛಾಮಿ ತ್ವಾಂ ಸತಾಂ ಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ ॥೩೪॥

ಯಾರೂ ಉಲ್ಲಂಘಿಸಬಾರದ ಎಲ್ಲೆಗಳು ಇವೆಯೇ? ಪಿತಾಮಹ! ಸಜ್ಜನಶ್ರೇಷ್ಠ! ದಯವಿಟ್ಟು ನನಗೆ ತಿಳಿಸಿರಿ.

ಭೀಷ್ಮಃ

ಬ್ರಾಹ್ಮಣಾನೇವ ಸೇವೇತ ವಿದ್ಯಾವೃದ್ಧಾಂಸ್ತಪಸ್ವಿನಃ ।
ಶ್ರುತಚಾರಿತ್ರವೃತ್ತಾಢ್ಯಾನ್ ಪವಿತ್ರಂ ಹ್ಯೇತದುತ್ತಮಮ್ ॥೩೫॥

ವಿದ್ಯಾವೃದ್ಧರಾದ, ತಪಸ್ವಿಗಳಾದ, ವೇದವಿದ್ಯಾ ಮತ್ತು ಸಚ್ಚಾರಿತ್ರ್ಯ ಸಂಪನ್ನರಾದ ಬ್ರಾಹ್ಮಣರ ಸೇವೆಯನ್ನು ಮಾಡಲೇಬೇಕು. ಇದು ಉತ್ತಮವೂ, ಪವಿತ್ರವೂ ಆದ ಕಾರ್ಯ.

ಯಾ ದೇವತಾಸು ವೃತ್ತಿಸ್ತೇ ಸಾಸ್ತು ವಿಪ್ರೇಷು ಸರ್ವದಾ ।
ಕ್ರುದ್ಧೈರ್ಹಿ ವಿಪ್ರೈಃ ಕರ್ಮಾಣಿ ಕೃತಾನಿ ಬಹುಧಾ ನೃಪ ॥೩೬॥

ರಾಜನೆ! ನೀನು ದೇವತೆಗಳ ಬಗ್ಗೆ ಹೇಗೆ ವರ್ತಿಸುವೆಯೋ ಹಾಗೆಯೇ ಯಾವಾಗಲೂ ಬ್ರಾಹ್ಮಣರಲ್ಲೂ ನಡೆದುಕೊಳ್ಳಬೇಕು. ಕ್ರುದ್ಧರಾದ ವಿಪ್ರರು ವಿಚಿತ್ರ ಕಾರ್ಯಗಳನ್ನು ಮಾಡಿರುವ ನಿದರ್ಶನಗಳಿವೆ.

ತೇಷಾಂ ಪ್ರೀತ್ಯಾ ಯಶೋ ಮುಖ್ಯಮಪ್ರೀತ್ಯಾ ತು ವಿಪರ್ಯಯಃ ।
ಪ್ರೀತ್ಯಾ ಹ್ಯಮೃತವದ್ ವಿಪ್ರಾಃ ಕ್ರುದ್ಧಾಶ್ಚೈವ ಯಥಾ ವಿಷಮ್ ॥೩೭॥

ಬ್ರಾಹ್ಮಣರ ಪ್ರೀತಿಯಿಂದ ದೊಡ್ಡ ಕೀರ್ತಿಯು ಲಭಿಸುತ್ತದೆ. ಅವರ ಅಪ್ರೀತಿಯಿಂದ ದೊಡ್ಡ ಅಪಕೀರ್ತಿಯು ಬರುತ್ತದೆ. ಪ್ರೀತರಾದ ಬ್ರಾಹ್ಮಣರು ಅಮೃತದಂತೆ. ಕ್ರುದ್ಧ ಬ್ರಾಹ್ಮಣರು ವಿಷದಂತೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಹನ್ನೆರಡನೆಯ ಅಧ್ಯಾಯವು ಮುಗಿಯಿತು.

★ ★ ★ ★

ಹದಿಮೂರನೆಯ ಅಧ್ಯಾಯ

ಶರಣಾಗತರ ರಕ್ಷಣೆಯನ್ನು ಮಾಡಿದವರಿಗೆ ಲಭಿಸುವ ಫಲದ ಬಗ್ಗೆ ಯುಧಿಷ್ಠಿರನ ಪ್ರಶ್ನೆ. ಕಾಡಿನಲ್ಲಿ ಮಳೆಯ ಹೊಡೆತಕ್ಕೆ ನಲುಗಿದ ಬೇಟೆಗಾರ.

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಶರಣಂ ಪಾಲಯಾನಸ್ಯ ಯೋ ಧರ್ಮಸ್ತಂ ವದಸ್ವ ಮೇ ॥೧॥

ಪಿತಾಮಹ! ಮಹಾಪ್ರಾಜ್ಞ! ಸರ್ವಶಾಸ್ತ್ರವಿಶಾರದ! ಶರಣಾಗತರನ್ನು ರಕ್ಷಿಸುವವರಿಗೆ ಯಾವ ಧರ್ಮದ ಫಲದ ಸಿದ್ಧಿಯಾಗುವುದೋ ಅದನ್ನು ತಿಳಿಸಿರಿ. (ಶರಣಾಗತರ ರಕ್ಷಣೆ ಧರ್ಮ. ಈ ಧರ್ಮವನ್ನು ಆಚರಿಸುವವರಿಗೆ ಏನು ಫಲವು ಲಭಿಸುತ್ತದೆ?)

ಭೀಷ್ಮಃ

ಮಹಾನ್ ಧರ್ಮೋ ಮಹಾರಾಜ ಶರಣಾಗತಪಾಲನೇ ।
ಅರ್ಹಃ ಪ್ರಷ್ಟುಂ ಭವಾಂಶ್ಚೈವ ಪ್ರಶ್ನಂ ಭರತಸತ್ತಮ ॥೨॥

ಮಹಾರಾಜ! ಶರಣಾಗತರ ರಕ್ಷಣೆ ಮಾಡಿದವರಿಗೆ ಮಹಾಫಲವು ಲಭಿಸುತ್ತದೆ. ಭರತಕುಲಶ್ರೇಷ್ಠ! ನೀನು ಇದರ ಬಗ್ಗೆ ಪ್ರಶ್ನಿಸುವ ಅರ್ಹತೆಯನ್ನು ಹೊಂದಿರುವಿ.

ನೃಗಪ್ರಭೃತಯೋ ರಾಜನ್ ರಾಜಾನಃ ಶರಣಾಗತಾನ್ ।
ಪರಿಪಾಲ್ಯ ಮಹಾರಾಜ ಸಂಸಿದ್ಧಿ ಪರಮಾಂ ಗತಾಃ ॥೩॥

ರಾಜನೆ! ನೃಗ ಮೊದಲಾದ ರಾಜರು ಶರಣಾಗತರನ್ನು ರಕ್ಷಿಸಿ ಮಹಾಸಿದ್ಧಿಯನ್ನು ಹೊಂದಿದರು.

ಶ್ರೂಯತೇ ಹಿ ಕಪೋತೇನ ಶತ್ರುಃ ಶರಣಮಾಗತಃ ।
ಪೂಜಿತಶ್ಚ ಯಥಾನ್ಯಾಯಂ ಸ್ವೈಶ್ಚ ಮಾಂಸೈರ್ನಿಮಂತ್ರಿತಃ ॥೪॥

ಕಪೋತ ಹಕ್ಕಿಯು ಶರಣಾಗತನಾದ ಶತ್ರುವನ್ನು ಸತ್ಕರಿಸಿ ತನ್ನ ಮಾಂಸವನ್ನೇ ಅವನಿಗೆ ಅರ್ಪಿಸಿದ ಘಟನೆಯು ಪ್ರಸಿದ್ಧ.

ಯುಧಿಷ್ಠಿರಃ

ಕಥಂ ಕಪೋತೇನ ಪುರಾ ಶತ್ರುಃ ಶರಣಮಾಗತಃ ।
ಸ್ವಮಾಂಸೈರ್ಭೋಜಿತಃ ಕಾಂ ಚ ಗತಿಂ ಲೇಭೇ ಸ ಭಾರತ ॥೫॥

ಭರತಕುಲಸಂಜಾತ! ಶರಣಾಗತ ಶತ್ರುವಿಗೆ ಕಪೋತವು ಅವನ ಆಹಾರಕ್ಕಾಗಿ ತನ್ನ ಮಾಂಸವನ್ನೇ ಹೇಗೆ ಅರ್ಪಿಸಿತು? ಅದರಿಂದ ಕಪೋತವು ಯಾವ ಗತಿಯನ್ನು ಪಡೆಯಿತು?

ಭೀಷ್ಮಃ

ಶೃಣು ರಾಜನ್ ಕಥಾಂ ದಿವ್ಯಾಂ ಸರ್ವಪಾಪಪ್ರಣಾಶಿನೀಮ್ ।
ನೃಪತೇರ್ಮುಚುಕುಂದಸ್ಯ ಕಥಿತಾಂ ಭಾರ್ಗವೇಣ ಹ ॥೬॥

ರಾಜನೆ! ಪರಶುರಾಮರು ಮುಚುಕುಂದ ಮಹಾರಾಜನಿಗೆ ಹೇಳಿದ ಕಥೆ ಇದು. ದಿವ್ಯ ಕಥೆ. ಸರ್ವಪಾಪವನ್ನೂ ಪರಿಹರಿಸುವ ಕಥೆ, ಕೇಳು.

ಇಮಮರ್ಥಂ ಪುರಾ ಪಾರ್ಥ ಮುಚುಕುಂದೋ ನರಾಧಿಪಃ ।
ಭಾರ್ಗವಂ ಪರಿಪಪ್ರಚ್ಛ ಪ್ರಣತೋ ಭರತರ್ಷಭ ॥೭॥

ಭರತಕುಲಶ್ರೇಷ್ಠ! ಕುಂತೀಸುತ! ಹಿಂದೆ ಮುಚುಕುಂದ ಮಹಾರಾಜನು ಈ ವಿಷಯವನ್ನು ಕುರಿತು ಪರಶುರಾಮರನ್ನು ಕೇಳಿದನು.

ತಸ್ಮೈ ಶುಶ್ರೂಷಮಾಣಾಯ ಭಾರ್ಗವೋಽಕಥಯತ್ ಕಥಾಮ್ ।
ಇಯಂ ಯಥಾ ಕಪೋತೇನ ಸಿದ್ಧಿಃ ಪ್ರಾಪ್ತಾ ನರಾಧಿಪ ॥೮॥

ಕೇಳ ಬಯಸಿದ ಆ ರಾಜನಿಗೆ ಪರಶುರಾಮರು ಕಪೋತವು ಸಿದ್ಧಿಯನ್ನು ಪಡೆದ ಈ ಕಥೆಯನ್ನು ಹೇಳಿದರು.

ಧರ್ಮನಿಶ್ಚಯಸಂಯುಕ್ತಾಂ ಕಾಮಾರ್ಥಸಹಿತಾಂ ಕಥಾಮ್ ।
ಶೃಣುಷ್ವಾವಹಿತೋ ರಾಜನ್ ಗದತೋ ಮೇ ಮಹಾಭುಜ ॥೯॥

ರಾಜನೇ! ಪರಾಕ್ರಮಿಯೇ! ಧರ್ಮ-ಅರ್ಥ-ಕಾಮಗಳ ಬಗ್ಗೆ ಬೋಧನೆಯನ್ನು ಒಳಗೊಂಡ ಈ ಕಥೆಯನ್ನು ಕೇಳು.

ಕಶ್ಚಿತ್ ಕ್ಷುದ್ರಸಮಾಚಾರಃ ಪೃಥಿವ್ಯಾಂ ಕಾಲಸಮ್ಮತಃ ।
ಚಚಾರ ಪೃಥಿವೀಂ ಪಾಪೋ ಘೋರಃ ಶಕುನಿಲುಬ್ಧಕಃ ॥೧೦॥

ಕಾಕೋಲ ಇವ ಕೃಷ್ಣಾಂಗೋ ರೂಕ್ಷಃ ಪಾಪಸಮಾಹಿತಃ ।
ಯವಮಧ್ಯಃ ಕೃಶಗ್ರೀವೋ ಹ್ರಸ್ವಪಾದೋ ಮಹಾಹನುಃ ॥೧೧॥

ಒಬ್ಬ ಹಕ್ಕಿಗಳ ಬೇಟೆಗಾರ. ಕ್ಷುದ್ರ ನಡವಳಿಕೆಯವನು. ಯಮ ಸದೃಶ, ಪಾಪಿ, ಘೋರ. ಕಾಗೆಯಷ್ಟು ಕಪ್ಪು. ನಿಷ್ಠುರ. ಕೆಟ್ಟ ಕೆಲಸವನ್ನು ಮಾಡಲೇಬೇಕೆಂಬ ದೃಢ ನಿರ್ಧಾರದವನು. ತೆಳು ನಡು, ತೆಳು ಕುತ್ತಿಗೆ, ಸಣ್ಣ ಕಾಲು, ದೊಡ್ಡ ಗದ್ದ.

ನೈವ ತಸ್ಯ ಸುಹೃತ್ ಕಶ್ಚಿನ್ನ ಸಂಬಂಧೀ ನ ಬಾಂಧವಃ ।
ಸ ಹಿ ತೈಃ ಸಂಪರಿತ್ಯಕ್ತಸ್ತೇನ ಘೋರೇಣ ಕರ್ಮಣಾ ॥೧೨॥

ಅವನಿಗೆ ಒಬ್ಬನು ಸ್ನೇಹಿತನೂ ಇಲ್ಲ. ಸಂಬಂಧಿ ಇಲ್ಲ. ಬಂಧು ಇಲ್ಲ. ಅವನ ಘೋರ ಕರ್ಮಗಳಿಂದಾಗಿ ಅವರೆಲ್ಲರೂ ಅವನನ್ನು ಪರಿತ್ಯಜಿಸಿದ್ದರು.

ಸ ವೈ ಕ್ಷಾರಕಮಾದಾಯ ದ್ವಿಜಾನ್ ಹತ್ವಾ ವನೇ ಸದಾ ।
ಚಕಾರ ವಿಕ್ರಯಂ ತೇಷಾಂ ಪತಂಗಾನಾಂ ನರಾಧಿಪ ॥೧೩॥

ರಾಜನೆ! ಅವನು ಕಾಡಿನಲ್ಲಿ ಬಲೆ ಹಾಕಿ ಹಕ್ಕಿಗಳನ್ನು ಹಿಡಿದು, ಕೊಂದು ಅವುಗಳ ಮಾರಾಟವನ್ನು ಮಾಡುತ್ತಿದ್ದನು.

ಏವಂ ತು ವರ್ತಮಾನಸ್ಯ ತಸ್ಯ ವೃತ್ತಿಂ ದುರಾತ್ಮನಃ ।
ಅಗಮತ್ ಸುಮಹಾನ್ಕಾಲೋ ನ ಚಾಧರ್ಮಮಬುಧ್ಯತ ॥೧೪॥

ಹೀಗೆ ವೃತ್ತಿಯನ್ನು ನಡೆಸುತ್ತಾ ಆದುರಾತ್ಮನ ದೀರ್ಘಕಾಲವು ಕಳೆದುಹೋಯಿತು. ಅವನಿಗೆ ತಾನು ಮಾಡುತ್ತಿರುವುದು ಅಧರ್ಮ ಎಂದು ತಿಳಿಯಲೇ ಇಲ್ಲ.

ತಸ್ಯ ಭಾರ್ಯಾಸಹಾಯಸ್ಯ ರಮಮಾಣಸ್ಯ ಶಾಶ್ವತಮ್ ।
ದೈವಯೋಗವಿಮೂಢಸ್ಯ ನಾನ್ಯಾ ವೃತ್ತಿರರೋಚತ ॥೧೫॥

ಪತ್ನೀ ಸಹಿತನಾಗಿ ಈ ವೃತ್ತಿಯಲ್ಲೇ ದೀರ್ಘಕಾಲ ಸುಖವನ್ನು ಅನುಭವಿಸುತ್ತಿದ್ದ, ದೈವಯೋಗದಿಂದ ಮೂಢನೇ ಆಗಿದ್ದ ಅವನಿಗೆ ಬೇರೆ ಯಾವ ವೃತ್ತಿಯೂ ಇಷ್ಟವಾಗಲಿಲ್ಲ.

ತತಃ ಕದಾಚಿತ್ತಸ್ಯಾಥ ವನಸ್ಥಸ್ಯ ಸಮುದ್ಗತಃ ।
ಪಾತಯನ್ನಿವ ವೃಕ್ಷಾಂಸ್ತಾನ್ ಸುಮಹಾನ್ ವಾತಸಂಭ್ರಮಃ ॥೧೬॥

ಮೇಘಸಂಕುಲಮಾಕಾಶಂ ವಿದ್ಯುನ್ಮಂಡಲಮಂಡಿತಮ್ ।
ಸಂವೃತಂ ಸುಮುಹೂರ್ತೇನ ನೌಸಾರ್ಥೇನೇವ ಸಾಗರಃ ॥೧೭॥

ಒಮ್ಮೆ ಅವನು ಕಾಡಿನಲ್ಲಿದ್ದಾಗ ಅಲ್ಲಿನ ಮರಗಳನ್ನು ಬೀಳಿಸುವಂತಿದ್ದ, ಭಾರಿ ಬಿರುಗಾಳಿಯು ಎದ್ದಿತು. ಸ್ವಲ್ಪವೇ ಹೊತ್ತಿನಲ್ಲಿ ಆಕಾಶವು ಮೋಡಗಳಿಂದ ಮುಚ್ಚಿಹೋಯಿತು. ಮಿಂಚುಗಳು ಆಕಾಶವನ್ನು ಅಲಂಕರಿಸಿದ್ದವು. ಹಡಗುಗಳ ಸಮೂಹದಿಂದ ಆವೃತವಾದ ಸಾಗರದಂತಿತ್ತು ಆಕಾಶ.

ವಾರಿಧಾರಾಸಮೂಹೈಶ್ಚ ಸಂಪ್ರಹೃಷ್ಟಃ ಶತಕ್ರತುಃ ।
ಕ್ಷಣೇನ ಪೂರಯಾಮಾಸ ಸಲಿಲೇನ ವಸುಂಧರಾಮ್ ॥೧೮॥

ಬಹಳ ಸಂತೋಷದಲ್ಲಿದ್ದ ಇಂದ್ರನು ಕ್ಷಣ ಮಾತ್ರದಲ್ಲಿ ನೀರಿನ ಧಾರೆಗಳಿಂದ ಭೂಮಿಯನ್ನು ತುಂಬಿಸಿದನು.

ತತೋ ಧಾರಾಕುಲೇ ಲೋಕೇ ಸಂಭ್ರಮನ್ನಷ್ಟಚೇತನಃ ।
ಶೀತಾರ್ತಸ್ತದ್ವನಂ ಸರ್ವಮಾಕುಲೇನಾಂತರಾತ್ಮನಾ ॥೧೯॥

ನೈವ ನಿಮ್ನಂ ಸ್ಥಲಂ ವಾಪಿ ಸೋಽವಿಂದತ ವಿಹಂಗಹಾ ।
ಪೂರಿತೋ ಹಿ ಜಲೌಘೇನ ಮಾರ್ಗಸ್ತಸ್ಯ ವನಸ್ಯ ವೈ ॥೨೦॥

ಆ ಪ್ರದೇಶವೆಲ್ಲವು ಮಳೆಯ ಧಾರೆಗಳಿಂದ ಅಸ್ತವ್ಯಸ್ತವಾದಾಗ ಚಳಿಯ ಬಾಧೆಗೆ ಒಳಗಾಗಿ, ವ್ಯಾಕುಲ ಮನಸ್ಸಿನಿಂದ, ಏನು ತೋಚದೆ ಆ ವನದಲ್ಲಿ ಅಲೆಯುತ್ತಿರುವ ಆ ಪಕ್ಷಿ ಹಂತಕನು ಆ ಇಡೀ ವನದಲ್ಲಿ ತಗ್ಗು, ದಿಣ್ಣೆ, ಸಮತಟ್ಟು ಸ್ಥಳಗಳನ್ನೇ ತಿಳಿಯದಾದನು. ಆ ವನದ ಎಲ್ಲ ಮಾರ್ಗಗಳೂ ಜಲರಾಶಿಯಿಂದ ತುಂಬಿಹೋಗಿತ್ತು.

ಪಕ್ಷಿಣೋ ವಾತವೇಗೇನ ಹತಾ ಲೀನಾಸ್ತದಾಭವನ್ ।
ಮೃಗಾಃ ಸಿಂಹಾ ವರಾಹಾಶ್ಚ ಸ್ಥಲಾನ್ಯಾಶ್ರಿತ್ಯ ತಸ್ಥಿರೇ ॥೨೧॥

ಆಗ ಹಕ್ಕಿಗಳು ಗಾಳಿಯ ವೇಗದ ಹೊಡೆತಕ್ಕೆ ಸಿಕ್ಕಿ ಅಲ್ಲಲ್ಲಿ ಅಡಗಿಕೊಂಡವು. ಜಿಂಕೆಗಳು, ಸಿಂಹಗಳು, ಹಂದಿಗಳು ಗಟ್ಟಿನೆಲವನ್ನು ಆಶ್ರಯಿಸಿ ನಿಂತವು.

ಮಹತಾ ವಾತವರ್ಷೇಣ ತ್ರಾಸಿತಾಸ್ತೇ ವನೌಕಸಃ ।
ಭಯಾರ್ತಾಶ್ಚ ಕ್ಷುಧಾರ್ತಾಶ್ಚ ಬಭ್ರಮುಃ ಸಹಿತಾ ವನೇ ॥೨೨॥

ಭಾರಿ ಗಾಳಿ- ಮಳೆಯಿಂದ ಪೀಡಿತರಾದ ಆ ವನವಾಸಿ ಪ್ರಾಣಿಗಳು ಭಯ-ಹಸಿವೆಗಳಿಂದ ಆರ್ತರಾಗಿ ಜೊತೆಯಲ್ಲೇ ಅಲೆದಾಡಿದವು.

ಸ ತು ಶೀತಹತೈರ್ಗಾತ್ರೈರ್ಜಗಾಮೈವ ನ ತಸ್ಥಿವಾನ್ ।
ಸೋಽಪಶ್ಯದ್ವನಷಣ್ಡೇಷು ಮೇಘನೀಲಂ ವನಸ್ಪತಿಮ್ ॥೨೩॥

ಆ ಬೇಡನು ಶೀತಪೀಡಿತನಾಗಿ ಎಲ್ಲೂ ನಿಲ್ಲಲಾಗದೆ ಎಲ್ಲೆಲ್ಲೋ ಹೋದನು. ದಟ್ಟ ವನದಲ್ಲಿ ಮೋಡದಂತೆ ಕಪ್ಪಾದ ಮರವೊಂದನ್ನು ನೋಡಿದನು.

ತಾರಾಢ್ಯಂ ಕುಮುದಾಕಾರಮಾಕಾಶಂ ನಿರ್ಮಲಂ ಚ ಹ ।
ಮೇಘೈರ್ಮುಕ್ತಂ ನಭೋ ದೃಷ್ಟ್ವಾ ಲುಬ್ಧಕಃ ಶೀತವಿಹ್ವಲಃ ॥೨೪॥

ದಿಶೋऽವಲೋಕಯಾಮಾಸ ವೇಲಾಂ ಚೈವ ದುರಾತ್ಮವಾನ್ ।
ದೂರೇ ಗ್ರಾಮನಿವೇಶಶ್ಚ ತಸ್ಮಾದ್ದೇಶಾದಿತಿ ಪ್ರಭೋ ।
ಕೃತಬುದ್ಧಿರ್ವನೇ ತಸ್ಮಿನ್ ವಸ್ತುಂ ತಾಂ ರಜನೀಂ ತದಾ ॥೨೫॥

ನಕ್ಷತ್ರಗಳಿಂದ ತುಂಬಿದ, ನೈದಿಲೆಗಳಿಂದ ಶೋಭಿಸುವ ಸರೋವರದಂತಿರುವ ನಿರ್ಮಲ ಆಕಾಶವು ಕಾಣಿಸಿತು. ಶೀತ ಪೀಡಿತನಾದ ಬೇಡನು ಮೋಡಗಳಿಲ್ಲದ ಆಕಾಶವನ್ನು ನೋಡಿ ಸುತ್ತಲೂ ನೋಡಿದನು. ಸಮಯವನ್ನು ತಿಳಿದನು. ಆ ದುರಾತ್ಮನು ಊರು ಆ ಪ್ರದೇಶದಿಂದ ದೂರವಿದೆ ಎಂದು ತಿಳಿದು, ಆ ರಾತ್ರಿ ಆ ವನದಲ್ಲೇ ವಾಸ ಮಾಡಲು ನಿಶ್ಚಯಿಸಿದನು.

ಸೋऽಂಜಲಿಂ ಪ್ರಯತಃ ಕೃತ್ವಾ ವಾಕ್ಯಮಾಹ ವನಸ್ಪತಿಮ್ ।
ಶರಣಂ ಯಾಮಿ ಯಾನ್ಯಸ್ಮಿನ್ ದೈವತಾನೀಹ ಭಾರತ ॥೨೬॥

ಭರತಕುಲಜಾತ! ಅವನು ಕೈಮುಗಿದು, ವಿನೀತನಾಗಿ ಮರಕ್ಕೆ ಹೇಳಿದನು. 'ಈ ಮರದಲ್ಲಿರುವ ದೇವತಾ ಸಮುದಾಯಕ್ಕೆ ರಕ್ಷಿಸಿರಿ ಎಂದು ಬೇಡುವೆನು'.

ಸ ಶಿಲಾಯಾಂ ಶಿರಃ ಕೃತ್ವಾ ಪರ್ಣಾನ್ಯಾಸ್ತೀರ್ಯ ಭೂತಲೇ ।
ದುಃಖೇನ ಮಹತಾವಿಷ್ಟಸ್ತತಃ ಸುಷ್ವಾಪ ಪಕ್ಷಿಹಾ ॥೨೭॥

ಬಹಳ ದುಃಖಕ್ಕೆ ಒಳಗಾದ ಆ ಪಕ್ಷಿಹಂತಕನು ನೆಲದ ಮೇಲೆ ಎಲೆಗಳನ್ನು ಹಾಸಿ, ಕಲ್ಲಿನ ಮೇಲೆ ತಲೆ ಇಟ್ಟು ಮಲಗಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಹದಿಮೂರನೆಯ ಅಧ್ಯಾಯವು ಮುಗಿಯಿತು.

★ ★ ★ ★

ಹದಿನಾಲ್ಕನೆಯ ಅಧ್ಯಾಯ

ಕಪೋತ-ಕಪೋತೀ ದಂಪತಿಗಳು. ಕಪೋತಿಗೆ ಬೇಡನ ಬಲೆಯಲ್ಲಿ ಬಂಧನ.
ಅದನ್ನು ನೋಡಿದ ಕಪೋತಕ್ಕೆ 'ಶರಣಾಗತ ರಕ್ಷಣೆಯು ಧರ್ಮ.
ಇದನ್ನು ನಿಷ್ಠೆಯಿಂದ ಪಾಲಿಸು' ಎಂದು ಕಪೋತಿಯ ಸಲಹೆ.
ಕಪೋತನಿಂದ ಬೇಡನಿಗೆ ಉಪಚಾರ-ಆತ್ಮಾರ್ಪಣೆ.

ಭೀಷ್ಮಃ

ಅಥ ವೃಕ್ಷಸ್ಯ ಶಾಖಾಯಾಂ ವಿಹಂಗಃ ಸಸುಹೃಜ್ಜನಃ ।
ದೀರ್ಘಕಾಲೋಷಿತೋ ರಾಜಂಸ್ತತ್ರ ಚಿತ್ರತನೂರುಹಃ ॥೧॥

ರಾಜನೆ! ಆ ಮರದ ಕೊಂಬೆಯಲ್ಲಿ ವಿಚಿತ್ರ ರೆಕ್ಕೆಗಳಿದ್ದ ಹಕ್ಕಿಯೊಂದು ತನ್ನ ಮಿತ್ರರೊಂದಿಗೆ ದೀರ್ಘಕಾಲದಿಂದ ವಾಸ ಮಾಡುತ್ತಿತ್ತು.

ತಸ್ಯ ಕಾಲಂ ಗತಾ ಭಾರ್ಯಾ ಚರಿತುಂ ನಾಭ್ಯವರ್ತತ ।
ಪ್ರಾಪ್ತಾಂ ಚ ರಜನೀಂ ದೃಷ್ಟ್ವಾ ಸ ಪಕ್ಷೀ ಪರ್ಯತಪ್ಯತ ॥೨॥

ಅದರ ಪತ್ನಿ ಹಕ್ಕಿಯು ತಿರುಗಾಡಲು ಹೋಗಿ ಬಹಳ ಸಮಯವಾದರೂ ಹಿಂತಿರುಗಲಿಲ್ಲ. ರಾತ್ರಿಯಾದರೂ ಬರದಿದ್ದಾಗ ಪಕ್ಷಿಗೆ ಚಿಂತೆಯಾಯಿತು.

ವಾತವರ್ಷಂ ಮಹಚ್ಚಾಸೀನ್ನ ಚಾಗಚ್ಛತಿ ಮೇ ಪ್ರಿಯಾ ।
ಕಿಂ ನು ತತ್ ಕಾರಣಂ ಯೇನ ಸಾದ್ಯಾಪಿ ನ ನಿವರ್ತತೇ ॥೩॥

ಭಾರಿ ಗಾಳಿ-ಮಳೆ ಇತ್ತು. ನನ್ನ ಪ್ರಿಯೆ ಇನ್ನೂ ಬಂದಿಲ್ಲ. ಬರದಿರಲು ಏನು ಕಾರಣವಿರಬಹುದು?

ಅಪಿ ಸ್ವಸ್ತಿ ಭವೇತ್ ತಸ್ಯಾಃ ಪ್ರಿಯಾಯಾ ಮಮ ಕಾನನೇ ।
ತಯಾ ವಿರಹಿತಂ ಹೀದಂ ಶೂನ್ಯಮದ್ಯ ಗೃಹಂ ಮಮ ॥೪॥

ನನ್ನ ಪ್ರಿಯೆಯು ಕಾಡಿನಲ್ಲಿ ಕ್ಷೇಮವಾಗಿರಬಹುದೆ? ಅವಳಿಲ್ಲದ ಈ ನನ್ನ ಮನೆ ಶೂನ್ಯ.

ಯದಿ ಸಾ ರಕ್ತನೇತ್ರಾಂತಾ ಚಿತ್ರಾಂಗೀ ಮಧುರಸ್ವರಾ ।
ಅದ್ಯ ನಾಭ್ಯೇತಿ ಮೇ ಕಾಂತಾ ನ ಕಾರ್ಯಂ ಜೀವಿತೇನ ಮೇ ॥೫॥

ಕೆಂಪು ಕುಡಿಗಣ್ಣಿನ, ಮಧುರ ಸ್ವರದ, ಸುಂದರಾಂಗಿಯಾದ ಆ ನನ್ನ ಕಾಂತೆಯು ಈಗ ಬರದಿದ್ದರೆ ನಾನು ಬದುಕಿ ಮಾಡಬೇಕಾದುದು ಏನೂ ಇಲ್ಲ.

ಪತಿಧರ್ಮರತಾ ಸಾಧ್ವೀ ಪ್ರಾಣೇಭ್ಯೋಽಪಿ ಗರೀಯಸೀ ।
ಸಾ ಹಿ ಶ್ರಾಂತಂ ಕ್ಷುಧಾರ್ತಂ ಚ ಜಾನೀತೇ ಮಾಂ ತಪಸ್ವಿನೀ ॥೬॥

ಪತಿವ್ರತೆಯಾದ, ನನಗೆ ನನ್ನ ಪ್ರಾಣಗಳಿಗಿಂತ ಹೆಚ್ಚು ಪ್ರಿಯಳಾದ, ಸಾಧ್ವಿಯಾದ ಆ ತಪಸ್ವಿನಿಯು ನಾನು ಬಳಲಿದ್ದೇನೆ, ಬಹಳ ಹಸಿದಿದ್ದೇನೆ ಎಂದು ತಿಳಿದಿದ್ದಾಳೆ.

ಅನುರಕ್ತಾ ಹಿತಾ ಚೈವ ಸ್ನಿಗ್ಧಾ ಚೈವ ಪತಿವ್ರತಾ ।
ಯಸ್ಯ ವೈ ತಾದೃಶೀ ಭಾರ್ಯಾ ಧನ್ಯಃ ಸ ಮನುಜೋ ಭುವಿ ॥೭॥

ಯಾರ ಪತ್ನಿಯು ತನ್ನಲ್ಲಿ ಅನುರಕ್ತಳೂ, ಹಿತಕರಳೂ, ಸ್ನೇಹಶೀಲಳೂ ಆಗಿರುತ್ತಾಳೋ ಆ ಪುರುಷನು ಧನ್ಯ .

ಭಾರ್ಯಾ ಹಿ ಪರಮೋ ನಾಥಃ ಪುರುಷಸ್ಯೇಹ ಪಠ್ಯತೇ ।
ಅಸಹಾಯಸ್ಯ ಲೋಕೇಽಸ್ಮಿಲ್ಲೋಕಯಾತ್ರಾಸಹಾಯಿನೀ ॥೮॥

ಈ ಜೀವನದಲ್ಲಿ ಪುರುಷನಿಗೆ ಪತ್ನಿಯು ಶ್ರೇಷ್ಠನಾಥ ಎಂದು ಅಲ್ಲಲ್ಲಿ ಓದುತ್ತೇವೆ. ಈ ಲೋಕದಲ್ಲಿ ಬೇರೆ ಯಾರೂ ಸಹಾಯಕರಿಲ್ಲದ ಅವನಿಗೆ ಪತ್ನಿಯು ಜೀವನ ಯಾತ್ರೆಯಲ್ಲಿ ಜೊತೆಗಾರ್ತಿ.

ತಥಾ ರೋಗಾಭಿಭೂತಸ್ಯ ನಿತ್ಯಂ ಕೃಚ್ಛ್ರಗತಸ್ಯ ಚ ।
ನಾಸ್ತಿ ಭಾರ್ಯಾಸಮಂ ಕಿಂಚಿನ್ನರಸ್ಯಾರ್ತಸ್ಯ ಭೇಷಜಮ್ ॥೯॥

ರೋಗಪೀಡಿತನಾದ, ಕಷ್ಟಕ್ಕೊಳಗಾದ, ಆರ್ತ ನರನಿಗೆ ಪತ್ನಿಗೆ ಸಮವಾದ ಔಷಧವು ಯಾವುದೂ ಇಲ್ಲ.

ನಾಸ್ತಿ ಭಾರ್ಯಾಸಮೋ ಬಂಧುರ್ನಾಸ್ತಿ ಭಾರ್ಯಾಸಮಾ ಗತಿಃ ।
ನಾಸ್ತಿ ಭಾರ್ಯಾಸಮೋ ಲೋಕೇ ಸಹಾಯೋ ಧರ್ಮಸಾಧನಃ ॥೧೦॥

ಲೋಕದಲ್ಲಿ ಪತ್ನೀ ಸಮನಾದ ಬಂಧುವಿಲ್ಲ. ಪತ್ನಿ ಸಮವಾದ ದಾರಿಯಿಲ್ಲ. ಪತ್ನೀ ಸಮಳಾದ ಧರ್ಮಸಾಧನವು ಇಲ್ಲವೇ ಇಲ್ಲ.

ಏವಂ ವಿಲಪತಸ್ತಸ್ಯ ದ್ವಿಜಸ್ಯಾರ್ತಸ್ಯ ತತ್ರ ವೈ ।
ಗೃಹೀತಾ ಶಕುನಘ್ನೇನ ಭಾರ್ಯಾ ಶುಶ್ರಾವ ಭಾರತೀಮ್ ॥೧೧॥

ಹೀಗೆ ವಿಲಪಿಸುತ್ತಿರುವ, ದುಃಖಿಯಾದ ಆ ಹಕ್ಕಿಯ ಮಾತು ಹಕ್ಕಿ ಹಂತಕನಿಂದ ಹಿಡಿಯಲ್ಪಟ್ಟಿದ್ದ ಪತ್ನಿ ಹಕ್ಕಿಗೆ ಕೇಳಿಸಿತು.

ನ ಸಾ ಸ್ತ್ರೀತ್ಯಭಿಭಾಷಾ ಸ್ಯಾದ್ಯಸ್ಯಾ ಭರ್ತಾ ನ ತುಷ್ಯತಿ ।
ಅಗ್ನಿಸಾಕ್ಷಿಕಮಪ್ಯೇತದ್ಭರ್ತಾ ಹಿ ಶರಣಂ ಸ್ತ್ರಿಯಃ ॥೧೨॥

ಯಾವ ಮಹಿಳೆಯ ಬಗ್ಗೆ ಪತಿಯು ಸಂತುಷ್ಟನಲ್ಲವೋ ಅವಳು 'ಸ್ತ್ರೀ' ಎಂಬ ಹೆಸರಿಗೆ ಅರ್ಹಳಲ್ಲ. ಸ್ತ್ರೀಗೆ ಪತಿಯು ರಕ್ಷಕ. ಇದು ಅಗ್ನಿ ಸಮ್ಮುಖದಲ್ಲಿ ಸಿದ್ಧವಾದ ವಿಷಯ.

ಇತಿ ಸಂಚಿಂತ್ಯ ದುಃಖಾರ್ತಾ ಭರ್ತಾರಂ ದುಃಖಿತಂ ತದಾ ।
ಕಪೋತೀ ಲುಬ್ಧಕೇನಾಥ ಯತ್ತಾ ವಚನಮಬ್ರವೀತ್ ॥೧೩॥

ಬೇಡನ ಬಂಧನಕ್ಕೆ ಒಳಗಾದ ದುಃಖಾರ್ತಳಾದ ಕಪೋತಿಯು ಹೀಗೆ ಆಲೋಚಿಸಿ ದುಃಖಿತ ಪತಿಗೆ ಹೇಳಿದಳು.

ಹಂತ ವಕ್ಷ್ಯಾಮಿ ತೇ ಶ್ರೇಯಃ ಶ್ರುತ್ವಾ ಚ ಕುರು ತತ್ತಥಾ ।
ಶರಣಾಗತಸಂತ್ರಾತಾ ಭವ ಕಾಂತ ವಿಶೇಷತಃ ॥೧೪॥

ಕಾಂತ! ಶ್ರೇಯಸ್ಕರವಾದ ಕೆಲಸವೊಂದನ್ನು ನಿನಗೆ ಹೇಳುತ್ತೇನೆ. ಕೇಳಿ ಹಾಗೆ ಮಾಡು. ಶರಣಾಗತರನ್ನು ವಿಶೇಷ ಶ್ರದ್ಧೆಯಿಂದ ರಕ್ಷಿಸು.

ಏಷ ಶಾಕುನಿಕಃ ಶೇತೇ ತವ ವಾಸಂ ಸಮಾಶ್ರಿತಃ ।
ಶೀತಾರ್ತಶ್ಚ ಕ್ಷುಧಾರ್ತಶ್ಚ ಪೂಜಾಮಸ್ಮೈ ಪ್ರಯೋಜಯ ॥೧೫॥

ಈ ಹಕ್ಕಿಯ ಬೇಟೆಗಾರನು ನಿನ್ನ ವಸತಿಯನ್ನು ಆಶ್ರಯಿಸಿ ಮಲಗಿದ್ದಾನೆ. ಛಳಿಯ ಬಾಧೆಗೆ ಒಳಗಾಗಿದ್ದಾನೆ. ಬಹಳ ಹಸಿಸಿದ್ದಾನೆ. ಅವನನ್ನು ಆದರಿಸು.

ಯೋ ಹಿ ಕಶ್ಚಿದ್ ದ್ವಿಜಂ ಹನ್ಯಾದ್ ಗಾಂ ವಾ ಲೋಕಸ್ಯ ಮಾತರಮ್ ।
ಶರಣಾಗತಂ ಚ ಯೋ ಹನ್ಯಾತ್ ತುಲ್ಯಂ ತೇಷಾಂ ಚ ಪಾತಕಮ್ ॥

ಬ್ರಾಹ್ಮಣ ಹತ್ಯೆ, ಲೋಕಮಾತೆಯಾದ ಗೋವಿನ ಹತ್ಯೆ, ಶರಣಾಗತನ ಹತ್ಯೆ- ಇವು ಸಮಾನ ಪಾತಕಗಳು.

ಯಾಸ್ಮಾಕಂ ವಿಹಿತಾ ವೃತ್ತಿಃ ಕಾಪೋತೀ ಜಾತಿಧರ್ಮತಃ ।
ಸಾ ಚರ್ಯಾತ್ಮವತಾ ನಿತ್ಯಂ ತದ್ವಿಧೇನಾಭಿವರ್ತಿತುಮ್ ॥೧೭॥

ನಮ್ಮ ಜನ್ಮ-ಧರ್ಮಕ್ಕನುಗುಣವಾಗಿ ನಮಗೆ ಕಪೋತವೃತ್ತಿಯು ವಿಹಿತ. ಪ್ರಶಸ್ತ ಮನಸ್ಸಿನ ನಿನ್ನಂತಹವನು ಆ ಆಚರಣೆಯನ್ನು ಪಾಲಿಸಬೇಕು.

ಯಸ್ತು ಧರ್ಮಂ ಯಥಾಶಕ್ತಿ ಗೃಹಸ್ಥೋ ಹ್ಯನುವರ್ತತೇ ।
ಸ ಪ್ರೇತ್ಯ ಲಭತೇ ಲೋಕಾನಕ್ಷಯಾನಿತಿ ಶುಶ್ರುಮ ॥೧೮॥

ಯಾವ ಗೃಹಸ್ಥಾಶ್ರಮಿಯು ತನ್ನ ಧರ್ಮವನ್ನು ಯಥಾಶಕ್ತಿ ಅನುಸರಿಸುವನೋ ಅವನು ಮರಣಾನಂತರ ಅಕ್ಷಯಲೋಕವನ್ನು= ಮುಕ್ತಿಯನ್ನು ಹೊಂದುತ್ತಾನೆ ಎಂದು ಕೇಳಿದ್ದೇವೆ.

ಸ ತ್ವಂ ಸಂತಾನವಾನದ್ಯ ಪುತ್ರವಾನಪಿ ಚ ದ್ವಿಜ ।
ತತ್ಸ್ವದೇಹೇ ದಯಾಂ ತ್ಯಕ್ತ್ವಾ ಧರ್ಮಾರ್ಥೌ ಪರಿಗೃಹ್ಯ ವೈ ।
ಪೂಜಾಮಸ್ಮೈ ಪ್ರಯುಂಕ್ಷ್ವ ತ್ವಂ ಪ್ರೀಯೇತಾಸ್ಯ ಮನೋ ಯಥಾ॥೧೯॥

ನಿನ್ನ ಸಂತತಿಯನ್ನು ಮುಂದುವರಿಸುವ ಪುತ್ರರು ನಿನಗೆ ಇದ್ದಾರೆ. ಆದ್ದರಿಂದ ನಿನ್ನ ದೇಹದ ಮೇಲೆ ಅಭಿಮಾನವನ್ನು ಬಿಟ್ಟು ಧರ್ಮ-ಅರ್ಥಗಳನ್ನು ಪರಿಗ್ರಹಿಸಿ, ಈ ಬೇಡನ ಮನಸ್ಸಿಗೆ ಪ್ರೀತಿಯಾಗುವಂತೆ ಇವನನ್ನು ಸತ್ಕರಿಸು.

ಇತಿ ಸಾ ಶಕುನೀ ವಾಕ್ಯಂ ಕ್ಷಾರಕಸ್ಯಾ ತಪಸ್ವಿನೀ ।
ಅತಿದುಃಖಾನ್ವಿತಾ ಪ್ರೋಚ್ಯ ಭರ್ತಾರಂ ಸಮುದೈಕ್ಷತ ॥೨೦॥

ಬಲೆಯಲ್ಲಿದ್ದ ಆ ತಪಸ್ವಿನೀ ಹಕ್ಕಿಯು ಹೀಗೆ ಹೇಳಿ ಅತಿ ದುಃಖದಿಂದ ಪತಿಯನ್ನು ನೋಡಿತು.

ಸ ಪತ್ನ್ಯಾ ವಚನಂ ಶ್ರುತ್ವಾ ಧರ್ಮಯುಕ್ತಿಸಮನ್ವಿತಮ್ ।
ಹರ್ಷೇಣ ಮಹತಾ ಯುಕ್ತೋ ಬಾಷ್ಪವ್ಯಾಕುಲಲೋಚನಃ ॥೨೧॥

ಆ ಗಂಡು ಹಕ್ಕಿಗೆ ಪತ್ನಿಯ ಧರ್ಮಸಾಧಕವಾದ ಮಾತನ್ನು ಕೇಳಿ ಬಹಳ ಸಂತೋಷವಾಯಿತು. ಕಣ್ಣೀರು ತುಂಬಿ ಕಣ್ಣುಮಬ್ಬಾಯಿತು.

ತಂ ವೈ ಶಾಕುನಿಕಂ ದೃಷ್ಟ್ವಾ ವಿಧಿದೃಷ್ಟೇನ ಕರ್ಮಣಾ ।
ಪೂಜಯಾಮಾಸ ಯತ್ನೇನ ಸ ಪಕ್ಷೀ ಪಕ್ಷಿಜೀವಿನಮ್ ॥೨೨॥

ಹಕ್ಕಿಯು ಹಕ್ಕಿಗಳನ್ನು ಕೊಂದು ಜೀವಿಸುವ ಆ ಬೇಡನನ್ನು ನೋಡಿ ವಿಧಿಗೆ ಅನುಗುಣವಾಗಿ ಪ್ರಯತ್ನಪಟ್ಟು ಅವನನ್ನು ಸತ್ಕರಿಸಿತು.

ಉವಾಚ ಚ ಸ್ವಾಗತಂ ತೇ ಬ್ರೂಹಿ ಕಿಂ ಕರವಾಣ್ಯಹಮ್ ।
ಸಂತಾಪಶ್ಚ ನ ಕರ್ತವ್ಯಃ ಸ್ವಗೃಹೇ ವರ್ತತೇ ಭವಾನ್ ॥೨೩॥

ಹೇಳಿತು. ನಿನಗೆ ಸ್ವಾಗತ. ನಿನಗಾಗಿ ಏನು ಮಾಡಲಿ? ದಯವಿಟ್ಟು ಹೇಳು. ಸಂತಾಪ ಪಡಬೇಡ. ಇದು ನಿನ್ನ ಮನೆಯೆ.

ತದ್ ಬ್ರವೀತು ಭವಾನ್‌ಕ್ಷಿಪ್ರಂ ಕಿಂ ಕರೋಮಿ ಕಿಮಿಚ್ಛಸಿ ।
ಪ್ರಣಯೇನ ಬ್ರವೀಮಿ ತ್ವಾಂ ತ್ವಂ ಹಿ ನಃ ಶರಣಾಗತಃ ॥೨೪॥

ಆದ್ದರಿಂದ ದಯವಿಟ್ಟು ಬೇಗ ಹೇಳು. ನಿನ್ನ ಇಚ್ಛೆ ಏನು? ನಾನು ಏನು ಮಾಡಬೇಕು? ಪ್ರೀತಿಯಿಂದ ಹೇಳುತ್ತಿದ್ದೇನೆ. ನೀನು ನಮ್ಮನ್ನು ಆಶ್ರಯಿಸಿ ಬಂದಿರುವಿ.

ಶರಣಾಗತಸ್ಯ ಕರ್ತವ್ಯಮಾತಿಥ್ಯಮಿಹ ಯತ್ನತಃ ।
ಪಂಚಯಜ್ಞಪ್ರವೃತ್ತೇನ ಗೃಹಸ್ಥೇನ ವಿಶೇಷತಃ ॥೨೫॥

ಶರಣಾಗತರ ಆತಿಥ್ಯವನ್ನು ಶ್ರದ್ಧೆಯಿಂದ ಮಾಡಬೇಕು. ಪಂಚಯಜ್ಞ (ದೇವ-ಋಷಿ-ಪಿತೃ-ಮನುಷ್ಯ-ಪಶುಗಳ ಆರಾಧನೆ) ದಲ್ಲಿ ಪ್ರವೃತ್ತನಾದ ಗೃಹಸ್ಥಾಶ್ರಮಿಯು ವಿಶೇಷವಾಗಿ ಅತಿಥಿ ಸತ್ಕಾರವನ್ನು ಮಾಡಬೇಕು.

ಪಂಚಯಜ್ಞಾಂಸ್ತು ಯೋ ಮೋಹಾನ್ನ ಕರೋತಿ ಗೃಹಾಶ್ರಮೀ ।
ತಸ್ಯ ನಾಯಂ ನ ಚ ಪರೋ ಲೋಕೋ ಭವತಿ ಧರ್ಮತಃ ॥೨೬॥

ಯಾವ ಗೃಹಸ್ಥಾಶ್ರಮಿಯು ಮೋಹದಿಂದ ಪಂಚಯಜ್ಞಗಳನ್ನು ಧರ್ಮ-ಶ್ರದ್ಧೆಯಿಂದ ಮಾಡುವುದಿಲ್ಲವೋ ಅವನಿಗೆ ಈ ಲೋಕವೂ ಇಲ್ಲ. ಪರಲೋಕವೂ ಇಲ್ಲ.

ತದ್ ಬ್ರೂಹಿ ತ್ವಂ ಸುವಿಸ್ರಬ್ಧೋ ಯತ್ತ್ವಂ ವಾಚಾ ವದಿಷ್ಯಸಿ ।
ತತ್ ಕರಿಷ್ಯಾಮ್ಯಹಂ ಸರ್ವಂ ಮಾ ತ್ವಂ ಶೋಕೇ ಮನಃ ಕೃಥಾಃ ॥೨೭॥

ಆದ್ದರಿಂದ ಏನೂ ಸಂಕೋಚವಿಲ್ಲದೆ ಹೇಳು. ನೀನು ಹೇಳುವ ಎಲ್ಲವನ್ನೂ ಮಾಡುತ್ತೇನೆ. ಶೋಕಿಸಬೇಡ.

ತಸ್ಯ ತದ್ವಚನಂ ಶ್ರುತ್ವಾ ಶಕುನೇರ್ಲುಬ್ಧಕೋಽಬ್ರವೀತ್ ।
ಬಾಧತೇ ಖಲು ಮಾ ಶೀತಂ ಹಿಮತ್ರಾಣಂ ವಿಧೀಯತಾಮ್ ॥೨೮॥

ಆ ಹಕ್ಕಿಯ ಮಾತನ್ನು ಕೇಳಿದ ಬೇಡನು ಹೇಳಿದನು. ಛಳಿಯು ಬಹಳ ಬಾಧಿಸುತ್ತಿದೆ. ಏನಾದರೂ ಪರಿಹಾರವನ್ನು ಏರ್ಪಡಿಸು.

ಏವಮುಕ್ತಸ್ತತಃ ಪಕ್ಷೀ ಪರ್ಣಾನ್ಯಾಸ್ತೀರ್ಯ ಭೂತಲೇ ।
ಯಥಾಶುಷ್ಕಾಣಿ ಯತ್ನೇನ ಜ್ವಲನಾರ್ಥಂ ದ್ರುತಂ ಯಯೌ ॥೨೯॥

ಹೀಗೆ ಹೇಳಲ್ಪಟ್ಟ ಹಕ್ಕಿಯು ಚೆನ್ನಾಗಿ ಒಣಗಿದ ಎಲೆಗಳನ್ನು ನೆಲದ ಮೇಲೆ ಹಾಸಿ ಬೆಂಕಿಯನ್ನು ತರಲು ವೇಗದಿಂದ ಹೋಯಿತು.

ಸ ಗತ್ವಾಂಗಾರಕರ್ಮಾಂತಂ ಗೃಹೀತ್ವಾಗ್ನಿಮಥಾಗಮತ್ ।
ತತಃ ಶುಷ್ಕೇಷು ಪರ್ಣೇಷು ಪಾವಕಂ ಸೋಽಭ್ಯದೀದಿಪತ್ ॥೩೦॥

ಕಮ್ಮಾರನ ಕಾರ್ಯಾಗಾರಕ್ಕೆ ಹೋಗಿ ಅಗ್ನಿಯನ್ನು ಹಿಡಿದುಕೊಂಡು ಬಂದಿತು. ಒಣಗಿದ ಎಲೆಗಳ ಮೇಲೆ ಅಗ್ನಿಯನ್ನು ಹಾಕಿ ಉದ್ದೀಪಿಸಿತು.

ಸುಸಂದೀಪ್ತಂ ಮಹತ್ಕೃತ್ವಾ ತಮಾಹ ಶರಣಾಗತಮ್ ।
ಪ್ರತಾಪಯ ಸುವಿಸ್ರಬ್ಧಂ ಸ್ವಗಾತ್ರಾಣ್ಯಕುತೋಭಯಃ ॥೩೧॥

ಅಗ್ನಿಯ ಜ್ವಾಲೆಗಳು ಏಳುವಂತೆ ಮಾಡಿ ಆ ಶರಣಾಗತನಿಗೆ ಹೇಳಿತು. ಏನೂ ಸಂಕೋಚವಿಲ್ಲದ ಶರೀರವನ್ನು ಕಾಯಿಸಿಕೋ. ನಿನಗೆ ಇಲ್ಲಿ ಯಾವ ಭಯವೂ ಇಲ್ಲ.

ಸ ತಥೋಕ್ತಸ್ತಥೇತ್ಯುಕ್ತ್ವಾ ಲುಬ್ಧೋ ಗಾತ್ರಾಣ್ಯತಾಪಯತ್ ।
ಅಗ್ನಿಪ್ರತ್ಯಾಗತಪ್ರಾಣಸ್ತತಃ ಪ್ರಾಹ ವಿಹಂಗಮಮ್ ॥೩೨॥

ಹೀಗೆ ಹೇಳಲ್ಪಟ್ಟ ಬೇಡನು ಶರೀರವನ್ನು ಕಾಯಿಸಿಕೊಂಡನು. ಶಾಖದಿಂದಾಗಿ ಪ್ರಾಣಶಕ್ತಿಗಳ ಉಜ್ಜೀವನವನ್ನು ಪಡೆದ ಅವನು ಹಕ್ಕಿಗೆ ಹೇಳಿದನು.

ದತ್ತಮಾಹಾರಮಿಚ್ಛಾಮಿ ತ್ವಯಾ ಕ್ಷುದ್ ಬಾಧತೇ ಹಿ ಮಾಮ್ ।
ತದ್ವಚಃ ಸ ಪ್ರತಿಶ್ರುತ್ಯ ವಾಕ್ಯಮಾಹ ವಿಹಂಗಮಃ ॥೩೩॥

ನನಗೆ ಬಹಳ ಹಸಿವು. ಏನಾದರೂ ಆಹಾರವನ್ನು ಕೊಡು. ಆ ಮಾತನ್ನು ಕೇಳಿದ ಹಕ್ಕಿಯು ಪ್ರತ್ಯುತ್ತರವನ್ನು ಹೇಳಿತು.

ನ ಮೇಽಸ್ತಿ ವಿಭವೋ ಯೇನ ನಾಶಯಾಮಿ ತವ ಕ್ಷುಧಾಮ್ ।
ಉತ್ಪನ್ನೇನ ಹಿ ಜೀವಾಮೋ ವಯಂ ನಿತ್ಯಂ ವನೌಕಸಃ ॥೩೪॥

ನಿನ್ನ ಹಸಿವೆಯನ್ನು ಪರಿಹರಿಸುವ ಅನುಕೂಲ ನನಗೆ ಇಲ್ಲ. 'ವನವಾಸಿಗಳಾದ ನಾವು ಆಯಾಯ ದಿನ ಸಿಗುವ ಆಹಾರದಿಂದ ಜೀವಿಸುತ್ತೇವೆ'.

ಸಂಚಯೋ ನಾಸ್ತಿ ಚಾಸ್ಮಾಕಂ ಮುನೀನಾಮಿವ ಕಾನನೇ ।
ಇತ್ಯುಕ್ತ್ವಾ ಸ ತದಾ ತತ್ರ ವಿವರ್ಣವದನೋಭವತ್ ॥೩೫॥

ಕಾಡಿನಲ್ಲಿರುವ ಮುನಿಗಳ ಬಳಿ ಸಂಚಯವೂ ಇರುವುದಿಲ್ಲ. ಅಂತೆಯೇ ನಮ್ಮಲ್ಲಿ ಯಾವ ಸಂಚಯವೂ ಇಲ್ಲ. ಹೀಗೆ ಹೇಳುತ್ತಾ ಹಕ್ಕಿಯು ಮುಖ ಕಳೆಗುಂದಿತು.

ಕಥಂ ನು ಖಲು ಕರ್ತವ್ಯಮಿತಿ ಚಿಂತಾಪರಃ ಸದಾ ।
ಬಭೂವ ಭರತಶ್ರೇಷ್ಠ ಗರ್ಹಯನ್ವೃತ್ತಿಮಾತ್ಮನಃ ॥೩೬॥

ಭರತಶ್ರೇಷ್ಠ! ತನ್ನ ವೃತ್ತಿ (ಸ್ಥಿತಿ)ಯನ್ನೇ ಬೈದುಕೊಳ್ಳುತ್ತಾ ಏನು ಮಾಡಬೇಕೆಂದು ಚಿಂತಾಕ್ರಾಂತನಾದನು.

ಮುಹೂರ್ತಾಲ್ಲಬ್ಧಸಂಜ್ಞಸ್ತು ಸ ಪಕ್ಷೀ ಪಕ್ಷಿಘಾತಕಮ್ ।
ಉವಾಚ ತರ್ಪಯಿಷ್ಯೇ ತ್ವಾಂ ಮುಹೂರ್ತಂ ಪ್ರತಿಪಾಲಯ ॥೩೭॥

ಸ್ವಲ್ಪ ಹೊತ್ತಿಗೆ ಅವನಿಗೆ ಒಂದು ಉಪಾಯವು ಹೊಳೆಯಿತು. ಪಕ್ಷಿಯು ಪಕ್ಷಿಘಾತಕನಿಗೆ ಹೇಳಿತು. 'ನಿನಗೆ ತೃಪ್ತಿಯಾಗುವಂತೆ ಮಾಡುತ್ತೇನೆ. ಸ್ವಲ್ಪ ತಾಳು'.

ಇತ್ಯುಕ್ತ್ವಾ ಶುಷ್ಕಪರ್ಣೈಃ ಸ ಸಂಪ್ರಜ್ವಾಲ್ಯ ಹುತಾಶನಮ್ ।
ಹರ್ಷೇಣ ಮಹತಾ ಯುಕ್ತಃ ಕಪೋತಃ ಪುನರಬ್ರವೀತ್ ॥೩೮॥

ಹೀಗೆ ಹೇಳಿ, ಒಣಗಿದ ಎಲೆಗಳಿಂದ ಅಗ್ನಿಯನ್ನು ಪ್ರಜ್ವಲಿಸಿ ಬಹಳ ಸಂತೋಷದಿಂದ ಕಪೋತವು ಹೇಳಿತು.

ದೇವಾನಾಂ ಚ ಮುನೀನಾಂ ಚ ಪಿತೃಣಾಂ ಚ ಮಹಾತ್ಮನಾಮ್ ।
ಶ್ರುತಪೂರ್ವೋ ಮಯಾ ಧರ್ಮೋ ಮಹಾನತಿಥಿಪೂಜನೇ ॥೩೯॥

ಅತಿಥಿ ಸತ್ಕಾರವು ಮಹಾಧರ್ಮ ಎಂದು ಮಹಾತ್ಮರಾದ ದೇವತೆಗಳ, ಮುನಿಗಳ, ಪಿತೃಗಳ ಮಾತನ್ನು ಕೇಳಿದ್ದೇನೆ. ಅವರು ಈ ಮಹಾಧರ್ಮವನ್ನು ಆಚರಿಸಿದರೆಂದೂ ಕೇಳಿದ್ದೇನೆ.

ಕುರುಷ್ವಾನುಗ್ರಹಂ ಮೇऽದ್ಯ ಸತ್ಯಮೇತದ್ ಬ್ರವೀಮಿ ತೇ ।
ನಿಶ್ಚಿತಾ ಖಲು ಮೇ ಬುದ್ಧಿರತಿಥಿಪ್ರತಿಪೂಜನೇ ॥೪೦॥

ಇಂದು ನೀನು ನನ್ನನ್ನು ಅನುಗ್ರಹಿಸು. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಅತಿಥಿ ಸತ್ಕಾರವನ್ನು ಮಾಡಲೇಬೇಕೆಂದು ನನಗೆ ದೃಢವಾದ ಬುದ್ಧಿಯು ಹುಟ್ಟಿದೆ.

ತತಃ ಸತ್ಯಪ್ರತಿಜ್ಞೋ ವೈ ಸ ಪಕ್ಷೀ ಪ್ರಹಸನ್ನಿವ ।
ತಮಗ್ನಿ ತ್ರಿಃ ಪರಿಕ್ರಮ್ಯ ಪ್ರವಿವೇಶ ಮಹೀಪತೇ ॥೪೧॥

ರಾಜನೆ! ಅನಂತರ ಸತ್ಯಪ್ರತಿಜ್ಞೆಯ ಆ ಹಕ್ಕಿಯು ಮಂದಸ್ಮಿತನಾಗಿ ಆ ಅಗ್ನಿಗೆ ಮೂರು ಬಾರಿ ಪ್ರದಕ್ಷಿಣೆಯನ್ನು ಮಾಡಿ ಅದರಲ್ಲಿ ಪ್ರವೇಶಿಸಿತು.

ಅಗ್ನಿಮಧ್ಯಂ ಪ್ರವಿಷ್ಟಂ ತಂ ಲುಬ್ಧೋ ದೃಷ್ಟ್ವಾ ಥ ಪಕ್ಷಿಣಮ್ ।
ಚಿಂತಯಾಮಾಸ ಮನಸಾ ಕಿಮಿದಂ ನು ಕೃತಂ ಮಯಾ ॥೪೨॥

ಬೇಡನು ಅಗ್ನಿಮಧ್ಯೆ ಪ್ರವೇಶಿಸಿದ ಆ ಹಕ್ಕಿಯನ್ನು ನೋಡಿ 'ಇದೇನು ಮಾಡಿದೆ' ಎಂದು ಚಿಂತಿಸಿತು.

ಅಹೋ ಮಮ ನೃಶಂಸಸ್ಯ ಗರ್ಹಿತಸ್ಯ ಸ್ವಕರ್ಮಣಾ ।
ಅಧರ್ಮಃ ಸುಮಹಾನ್ ಘೋರೋ ಭವಿಷ್ಯತಿ ನ ಸಂಶಯಃ ॥೪೩॥

ಏವಂ ಬಹುವಿಧಂ ಭೂರಿ ವಿಲಲಾಪ ಸ ಲುಬ್ಧಕಃ ।
ಗರ್ಹಯನ್ ಸ್ವಾನಿ ಕರ್ಮಾಣಿ ದ್ವಿಜಂ ದೃಷ್ಟ್ವಾ ತಥಾಗತಮ್ ॥೪೪॥

ಅಯ್ಯೋ! ನನ್ನ ಕೆಟ್ಟ ಕಾರ್ಯಗಳಿಂದ ಪಾಪಿಯಾದ ನನಗೆ ಘೋರ ಪಾಪವು ಉಂಟಾಗುತ್ತದೆ. ಅಗ್ನಿಯಲ್ಲಿ ಬಿದ್ದಿರುವ ಹಕ್ಕಿಯನ್ನು ನೋಡಿ, ತನ್ನ ಕೆಲಸವನ್ನು ಬೈದುಕೊಳ್ಳುತ್ತಾ ಆ ಬೇಡನು ಹೀಗೆ ಬಹುವಿಧವಾಗಿ ವಿಲಾಪ ಮಾಡಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು.

★ ★ ★ ★

ಹದಿನೈದನೆಯ ಅಧ್ಯಾಯ

ಕಪೋತದ ಆತ್ಮಾರ್ಪಣೆಯನ್ನು ನೋಡಿ ಬೇಟೆಗಾರನ ಮನಃಪರಿವರ್ತನೆ.
ಧರ್ಮಸಾಧನೆಗೆ ಪ್ರವೃತ್ತಿ.

ಭೀಷ್ಮಃ

ತತಸ್ತಂ ಲುಬ್ಧಕಃ ಪಶ್ಯನ್ ಕೃಪಯಾಭಿಪರಿಪ್ಲುತಃ ।
ಕಪೋತಮಗ್ನೌ ಪತಿತಂ ವಾಕ್ಯಂ ಪುನರುವಾಚ ಹ ॥೧॥

ಅನಂತರ ಬೇಡನು ಅಗ್ನಿಯಲ್ಲಿ ಬಿದ್ದಿರುವ ಆ ಕಪೋತವನ್ನು ನೋಡಿ ಕೃಪೆ ತುಂಬಿ ಹೀಗೆ ಹೇಳಿದನು.

ಕಿಮೀದೃಶಂ ನೃಶಂಸೇನ ಮಯಾ ಕೃತಮಬುದ್ಧಿನಾ ।
ಭವಿಷ್ಯತಿ ಹಿ ಮೇ ನಿತ್ಯಂ ಪಾತಕಂ ಹೃದಿ ಜೀವತಃ ॥೨॥

ಬುದ್ಧಿಯಿಲ್ಲದ, ಕ್ರೂರಿಯಾದ ನಾನು ಇದೆಂತಹ ಕೆಲಸ ಮಾಡಿದೆ? ನಾನು ಬದುಕಿ ಉಳಿದರೆ ಮನಸ್ಸಿನಲ್ಲಿ ನಿತ್ಯವೂ ಪಾಪಪ್ರಜ್ಞೆಯು ಕಾಡುತ್ತದೆ.

ಸ ವಿನಿಂದನ್ನಥಾತ್ಮಾನಂ ಪುನಃ ಪುನರುವಾಚ ಹ ।
ಧಿಙ್ ಮಾಮಸ್ತು ಸುದುರ್ಬುದ್ಧಿಂ ಸದಾ ನಿಕೃತಿನಿಶ್ಚಯಮ್ ।
ಶುಭಂ ಕರ್ಮ ಪರಿತ್ಯಜ್ಯ ಯೋಽಹಂ ಶಕುನಿಲುಬ್ಧಕಃ ॥೩॥

ಅವನು ತನ್ನನ್ನು ಮತ್ತೆ ಮತ್ತೆ ಬೈದುಕೊಳ್ಳುತ್ತಾ ಹೇಳಿದನು. 'ಬಹಳ ಕೆಟ್ಟ ಬುದ್ಧಿಯ, ವಂಚನೆಯನ್ನು ಮಾಡಲು ಅಚಲಬುದ್ಧಿವುಳ್ಳ ನನಗೆ ಧಿಕ್ಕಾರ'. ಶುಭಕರ್ಮಗಳನ್ನು ಮಾಡದ, ಹಕ್ಕಿಗಳ ಬೇಟೆ ಮಾಡುವ ನನಗೆ ಧಿಕ್ಕಾರ.

ನೃಶಂಸಸ್ಯ ಮಹಾನ್ಯಾಯಪ್ರತ್ಯಾದೇಶೋ ನ ಸಂಶಯಃ ।
ದತ್ತಃ ಸ್ವಮಾಂಸಂ ದಹತಾ ಕಪೋತೇನ ಮಹಾತ್ಮನಾ ॥೪॥

ಕ್ರೂರಿಯಾದ ನಾನು ಆಹಾರವನ್ನು ಕೇಳಿ ಮಹಾ ಅನ್ಯಾಯವನ್ನು ಮಾಡಿದ್ದೇನೆ. ಸಂಶಯವಿಲ್ಲ. ಈ ಮಹಾತ್ಮ ಕಪೋತನು ತನ್ನನ್ನು ಸುಟ್ಟುಕೊಂಡು ತನ್ನ ಮಾಂಸವನ್ನು ದಾನ ಮಾಡಿದ.

ಸೋಽಹಂ ತ್ಯಕ್ಷ್ಯೇ ಪ್ರಿಯಾನ್ ಪ್ರಾಣಾನ್ ಪುತ್ರದಾರಂ ವಿಸೃಜ್ಯ ಚ ।
ಉಪದಿಷ್ಟೋ ಹಿ ಮೇ ಧರ್ಮಃ ಕಪೋತೇನಾತಿಧರ್ಮಿಣಾ ॥೫॥

ಈ ನಾನು ಪುತ್ರರನ್ನೂ, ಪತ್ನಿಯನ್ನೂ ಪರಿತ್ಯಜಿಸಿ ಪ್ರಾಣತ್ಯಾಗವನ್ನು ಮಾಡುತ್ತೇನೆ. ಅತ್ಯಂತ ಧರ್ಮನಿಷ್ಠನಾದ ಈ ಕಪೋತವು ನನಗೆ ಧರ್ಮವನ್ನು ಉಪದೇಶಿಸಿದೆ.

ಅದ್ಯಪ್ರಭೃತಿ ದೇಹಂ ಸ್ವಂ ಸರ್ವಭೋಗೈರ್ವಿವರ್ಜಿತಮ್ ।
ಯಥಾ ಸ್ವಲ್ಪಂ ಜಲಂ ಗ್ರೀಷ್ಮೇ ಶೋಷಯಿಷ್ಯಾಮ್ಯಹಂ ತಥಾ ॥೬॥

ಇಂದಿನಿಂದ ನಾನು ಎಲ್ಲ ಭೋಗಗಳನ್ನು ಪರಿತ್ಯಜಿಸಿ ನನ್ನ ದೇಹವನ್ನು ಒಣಗಿಸುತ್ತೇನೆ. ಗ್ರೀಷ್ಮಕಾಲದಲ್ಲಿ ಸ್ವಲ್ಪ ಜಲವು ಸಸ್ಯಗಳನ್ನು ಒಣಗಿಸುವಂತೆ.

ಕ್ಷುತ್ತಿಪಾಸಾತಪಸಹಃ ಕೃಶೋ ಧಮನಿಸಂತತಃ ।
ಉಪವಾಸೈರ್ಬಹುವಿಧೈಶ್ಚರಿಷ್ಯೇ ಪಾರಲೌಕಿಕಮ್ ॥೭॥

ಹಸಿವೆ, ಬಾಯಾರಿಕೆ, ಬಿಸಿಲು- ಇವುಗಳನ್ನು ಸಹಿಸಿ, ಕೃಶನಾಗಿ, ನರ ನಾಡಿಗಳು ಕಾಣುವಂತಾಗಿ ಬಹುವಿಧ ಉಪವಾಸಗಳಿಂದ ಪರಲೋಕದಲ್ಲಿ ಸುಖಪ್ರಾಪ್ತಿ ಆಗುವಂತಹ ಆಚರಣೆಗಳನ್ನು ಮಾಡುತ್ತೇನೆ.

ಅಹೋ ದೇಹಪ್ರದಾನೇನ ದರ್ಶಿತಾತಿಥಿಪೂಜನಾ ।
ತಸ್ಮಾದ್ಧರ್ಮಂ ಚರಿಷ್ಯಾಮಿ ಧರ್ಮೋ ಹಿ ಪರಮಾ ಗತಿಃ ।
ದೃಷ್ಟೋ ಹಿ ಧರ್ಮೋ ಧರ್ಮಿಷ್ಠೈರ್ಯಾದೃಶೋ ವಿಹಗೋತ್ತಮೇ ॥೮॥

ಅಹೋ! ಈ ಹಕ್ಕಿಯು ದೇಹವನ್ನೇ ದಾನ ಮಾಡಿ ಅತಿಥಿ ಪೂಜೆಯನ್ನು ಅರ್ಥ ಮಾಡಿಸಿದೆ. ಆದ್ದರಿಂದ ನಾನು ಧರ್ಮವನ್ನು ಆಚರಿಸುತ್ತೇನೆ. ಧರ್ಮವೇ ಪರಮಗತಿ. ಧರ್ಮಿಷ್ಠರು ಆಚರಿಸುವ ಧರ್ಮವನ್ನು ಈ ಶ್ರೇಷ್ಠ ಹಕ್ಕಿಯಲ್ಲಿ ನಾನು ನೋಡಿದೆನು.

ಏವಮುಕ್ತ್ವಾ ವಿನಿಶ್ಚಿತ್ಯ ರೌದ್ರಕರ್ಮಾ ಸ ಲುಬ್ಧಕಃ ।
ಮಹಾಪ್ರಸ್ಥಾನಮಾಶ್ರಿತ್ಯ ಪ್ರಯಯೌ ಸಂಶಿತವ್ರತಃ ॥೯॥

ನಿಷ್ಠುರಕೆಲಸಗಳನ್ನು ಮಾಡುತ್ತಿದ್ದ ಆ ಬೇಡನು ಹೀಗೆ ನಿಶ್ಚಯಿಸಿ ಕಠೋರ ವ್ರತಗಳನ್ನು ಮಾಡುತ್ತಾ ಮಹಾಪ್ರಸ್ಥಾನದ ದಾರಿಯನ್ನು ಹಿಡಿದನು.

ತತೋ ಯಷ್ಟಿ ಶಲಾಕಾಶ್ಚ ಕ್ಷಾರಕಂ ಪಂಜರಂ ತಥಾ ।
ತಾಂ ಚ ಬದ್ಧಾಂ ಕಪೋತೀಂ ಸ ಸಂಪ್ರಮುಚ್ಯೋತ್ಸಸರ್ಜ ಹ ॥೧೦॥

ಅನಂತರ ದೊಣ್ಣೆಯನ್ನೂ, ಸಲಾಕೆಗಳನು, ಬಲೆಯನ್ನು, ಪಂಜರವನ್ನು ಎಸೆದು, ತಾನು ಹಿಡಿದಿದ್ದ ಕಪೋತಗಳನ್ನು ಬಿಡುಗಡೆ ಮಾಡಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಹದಿನೈದನೆಯ ಅಧ್ಯಾಯವು ಮುಗಿಯಿತು.

★ ★ ★ ★

ಹದಿನಾರನೆಯ ಅಧ್ಯಾಯ

ಪತಿಯನ್ನು ಕಳೆದುಕೊಂಡ ಕಪೋತಿಯ ಶೋಕ. ಅಗ್ನಿಪ್ರವೇಶ.
ಕಪೋತ-ಕಪೋತಿಗಳ ಸ್ವರ್ಗಾರೋಹಣ.

ಭೀಷ್ಮಃ

ತತೋ ಗತೇ ಶಾಕುನಿಕೇ ಕಪೋತೀ ಪ್ರಾಹ ದುಃಖಿತಾ ।
ಸಂಸ್ಮೃತ್ಯ ಭರ್ತಾರಮಥೋ ರುದತೀ ಶೋಕಮೂರ್ಛಿತಾ ॥೧॥

ಹಕ್ಕಿಯ ಬೇಟೆಗಾರನು ಹೊರಟು ಹೋದನಂತರ ಹೆಣ್ಣು ಕಪೋತವು ಬಹಳ ದುಃಖಕ್ಕೆ ಒಳಗಾಯಿತು. ಪತಿಯನ್ನು ನೆನೆದು ಅಳುತ್ತಾ ತೀವ್ರ ಶೋಕದ ಸ್ಥಿತಿಯಲ್ಲಿ ಹೇಳಿತು.

ನಾಹಂ ತೇ ವಿಪ್ರಿಯಂ ಕಾಂತ ಕದಾಚಿದಪಿ ಸಂಸ್ಮರೇ ।
ಸರ್ವಾ ವೈ ವಿಧವಾ ನಾರೀ ಬಹುಪುತ್ರಾಪಿ ಖೇಚರ ।
ಶೋಚ್ಯಾ ಭವತಿ ಬಂಧೂನಾಂ ಪತಿಹೀನಾ ಮನಸ್ವಿನೀ ॥೨॥

ಕಾಂತ! ನಾನು ನಿನಗೆ ಎಂದೂ ಏನೂ ಅಪ್ರಿಯವನ್ನು ಮಾಡಿಲ್ಲ. ಹಕ್ಕಿಯೇ! ಎಲ್ಲ ನಾರಿಯರೂ- ಬಹಳ ಪುತ್ರರಿದ್ದರೂ, ಒಳ್ಳೆಯ ಮನಸ್ಸಿನವರಾಗಿದ್ದರೂ - ವಿಧವೆಯಾದರೆ ಬಂಧುಗಳ ಮಧ್ಯೆ ಶೋಚನೀಯರಾಗುತ್ತಾರೆ.

ಲಾಲಿತಾಹಂ ತ್ವಯಾ ನಿತ್ಯಂ ಬಹುಮಾನಾಚ್ಚ ಸಾಂತಿ ತ್ವಾ ।
ವಚನೈರ್ಮಧುರೈಃ ಸ್ನಿಗ್ಧೈರಸಕೃತ್ ಸುಮನೋಹರೈಃ ॥೩॥

ನೀನು ನನಗೆ ಯಾವಾಗಲೂ ಹಿತವನ್ನೇ ಮಾಡಿರುವಿ. ಮಧುರವಾದ ಸ್ನೇಹಪೂರ್ಣವಾದ ಮಾತುಗಳಿಂದ ಬಹಳ ಆದರದಿಂದ ಪ್ರೀತಿ ತೋರಿರುವಿ.

ಕಂದರೇಷು ಚ ಶೈಲಾನಾಂ ನದೀನಾಂ ನಿರ್ಝರೇಷು ಚ ।
ದ್ರುಮಾಗ್ರೇಷು ಚ ರಮ್ಯೇಷು ರಮಿತಾಹಂ ತ್ವಯಾ ಪ್ರಿಯ ॥೪॥

ಪ್ರಿಯ! ಬೆಟ್ಟಗಳ ಗುಹೆಗಳಲ್ಲಿ, ನದಿಗಳ ಝರಿಗಳಲ್ಲಿ ರಮಣೀಯವಾದ ಮರದ ತುದಿಗಳಲ್ಲಿ ನೀನು ನನಗೆ ವಿಹಾರದ ಸಂತೋಷವನ್ನು ಉಂಟುಮಾಡಿರುವಿ.

ಆಕಾಶಗಮನೇ ಚೈವ ಸುಖಿತಾಹಂ ತ್ವಯಾ ಸುಖಮ್ ।
ವಿಹೃತಾಸ್ಮಿ ತ್ವಯಾ ಕಾಂತ ತನ್ಮೇ ನಾದ್ಯಾಸ್ತಿ ಕಿಂಚನ ॥೫॥

ಆಕಾಶದಲ್ಲಿ ನಿನ್ನ ಜೊತೆ ಹಾರುವ ಸುಖವನ್ನು ಅನುಭವಿಸಿದ್ದೇನೆ. ನಿನ್ನ ಜೊತೆ ವಿಹರಿಸಿದ್ದೇನೆ. ಕಾಂತ! ಇನ್ನು ಮುಂದೆ ನನಗೆ ಅದು ಯಾವುದೂ ಇಲ್ಲ.

ಮಿತಂ ದದಾತಿ ಹಿ ಪಿತಾ ಮಿತಂ ಮಾತಾ ಮಿತಂ ಸುತಃ ।
ಅಮಿತಸ್ಯ ತು ದಾತಾರಂ ಭರ್ತಾರಂ ಕಾ ನ ಪೂಜಯೇತ್ ॥೬॥

ತಂದೆಯು ಸ್ವಲ್ಪವೇ ಕೊಡುತ್ತಾನೆ. ತಾಯಿಯೂ ಸ್ವಲ್ಪವೇ ಕೊಡುತ್ತಾಳೆ. ಮಗನೂ ಸ್ವಲ್ಪವೇ ಕೊಡುತ್ತಾನೆ. ಪತಿಯು ಅಳತೆಗೆ ಸಿಗದಷ್ಟು ಕೊಡುತ್ತಾನೆ. ಆ ಪತಿಯನ್ನು ಯಾವ ಸ್ತ್ರೀ ತಾನೆ ಪೂಜಿಸದೆ ಇದ್ದಾಳು?

ನಾಸ್ತಿ ಭರ್ತೃಸಮೋ ನಾಥೋ ನ ಚ ಭರ್ತೃಸಮಂ ಸುಖಮ್ ।
ವಿಸೃಜ್ಯ ಧನಸರ್ವಸ್ವಂ ಭರ್ತಾ ವೈ ಶರಣಂ ಸ್ತ್ರಿಯಾಃ ॥೭॥

ಪತಿಗೆ ಸಮನಾದ ರಕ್ಷಕನಿಲ್ಲ. ಪತಿಗೆ ಸಮವಾದ ಸುಖವಿಲ್ಲ. ಎಲ್ಲ ಸಂಪತ್ತಿಗಿಂತಲೂ ಹೆಚ್ಚಾಗಿ ಸ್ತ್ರೀಗೆ ಪತಿಯೇ ರಕ್ಷಕ.

ನ ಕಾರ್ಯಮಿಹ ಮೇ ನಾಥ ಜೀವಿತೇನ ತ್ವಯಾ ವಿನಾ ।
ಪತಿಹೀನಾಪಿ ಕಾ ನಾರೀ ಸತೀ ಜೀವಿತುಮುತ್ಸಹೇತ್ ॥೮॥

ನಾಥ! ನೀನಿಲ್ಲದೆ ನಾನು ಬದುಕಿ ಏನು ಮಾಡಬೇಕು? ಯಾವ ಸತೀ ಸ್ತ್ರೀ ತಾನೆ ಪತಿಯಿಲ್ಲದೆ ಜೀವಿಸಲು ಬಯಸುವಳು?

ಏವಂ ವಿಲಪ್ಯ ಬಹುಧಾ ಕರುಣಂ ಸಾ ಸುದುಃಖಿತಾ ।
ಪತಿವ್ರತಾ ಸಂಪ್ರದೀಪ್ತಂ ಪ್ರವಿವೇಶ ಹುತಾಶನಮ್ ॥೯॥

ಬಹಳ ದುಃಖಿತಳಾದ ಆ ಪತಿವ್ರತೆಯು ಶೋಕದಿಂದ ಹೀಗೆ ಬಹುವಿಧವಾಗಿ ವಿಲಪಿಸಿ ಜ್ವಲಿಸುತ್ತಿದ್ದ ಅಗ್ನಿಯನ್ನು ಪ್ರವೇಶಿಸಿದಳು.

ತತಶ್ಚಿತ್ರಾಂಬರಧರಂ ಭರ್ತಾರಂ ಸಾನ್ವಪಶ್ಯತ ।
ವಿಮಾನಸ್ಥಂ ಸುಕೃತಿಭಿಃ ಪೂಜ್ಯಮಾನಂ ಮಹಾತ್ಮಭಿಃ ॥೧೦॥

ಅನಂತರ ಆ ಹಕ್ಕಿಯು ಆ ಚಿತೆಯ ಸ್ಥಳದಿಂದ ಸುಂದರ ವಸ್ತ್ರಗಳನ್ನು ಧರಿಸಿದ, ಸುಕೃತಿಗಳಾದ ಮಹಾತ್ಮರಿಂದ ಪೂಜಿಸಲ್ಪಡುತ್ತಿರುವ ವಿಮಾನದಲ್ಲಿರುವ ಪತಿಯನ್ನು ನೋಡಿತು.

ಚಿತ್ರಮಾಲ್ಯಾಂಬರಧರಂ ಸರ್ವಾಭರಣಭೂಷಿತಮ್ ।
ವಿಮಾನಶತಕೋಟೀಭಿರಾವೃತಂ ಪುಣ್ಯಕೀರ್ತಿಭಿಃ ॥೧೧॥

ಆ ಪತಿಯು ಸುಂದರಮಾಲೆಗಳನ್ನು, ವಸ್ತ್ರಗಳನ್ನು ಧರಿಸಿದ್ದನು. ಎಲ್ಲ ಆಭರಣಗಳಿಂದ ಅಲಂಕೃತನಾಗಿದ್ದನು. ಪುಣ್ಯಪುರುಷರು ಇದ್ದ ನಾನಾ ವಿಮಾನಗಳು ಅವನಿದ್ದ ವಿಮಾನದ ಸುತ್ತಲೂ ಇದ್ದವು.

ತತಃ ಸ್ವರ್ಗಗತಃ ಪಕ್ಷೀ ಭಾರ್ಯಯಾ ಸಹ ಸಂಗತಃ ।
ಕರ್ಮಣಾ ಪೂಜಿತಸ್ತೇನ ರೇಮೇ ತತ್ರ ಸ ಭಾರ್ಯಯಾ ॥೧೨॥

ಅನಂತರ ಆ ಪಕ್ಷಿಯು ಸ್ವರ್ಗವನ್ನು ತಲುಪಿತು. ಅಲ್ಲಿ ಅವನಿಗೆ ಪತ್ನಿಯ ಜೊತೆ ಸಮಾಗಮವಾಯಿತು. ಅವನು ಮಾಡಿದ ಸತ್ಕರ್ಮಕ್ಕಾಗಿ (ವ್ಯಾಧನ ಆಹಾರಕ್ಕಾಗಿ ದೇಹಾರ್ಪಣೆ) ಎಲ್ಲರೂ ಅವನನ್ನು ಸತ್ಕರಿಸಿದರು. ಅಲ್ಲಿ ಅವನು ತನ್ನ ಪತ್ನಿಯ ಜೊತೆ ಸುಖವಾಗಿದ್ದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಹದಿನಾರನೆಯ ಅಧ್ಯಾಯವು ಮುಗಿಯಿತು.

★ ★ ★ ★

ಹದಿನೇಳನೆಯ ಅಧ್ಯಾಯ

ವ್ಯಾಧನಿಗೆ ವಿಮಾನದಲ್ಲಿದ್ದ ಕಪೋತ-ಕಪೋತಿಯರ ದರ್ಶನ. ಸದ್ಗತಿಗಾಗಿ ವ್ಯಾಧನ ಮಹಾಪ್ರಸ್ಥಾನ. ದಾವಾಗ್ನಿಯಲ್ಲಿ ಶರೀರತ್ಯಾಗ. ಸ್ವರ್ಗಗಮನ.

ಭೀಷ್ಮಃ

ವಿಮಾನಸ್ಥೌ ತು ತೌ ರಾಜನ್ ಲುಬ್ಧಕೋ ವೈ ದದರ್ಶ ಹ ।
ದೃಷ್ಟ್ವಾ ತೌ ದಂಪತೀ ದುಃಖಾದಚಿಂತಯತ ಸದ್ಗತಿಮ್ ॥೧॥

ರಾಜನೇ! ಬೇಡನು ವಿಮಾನದಲ್ಲಿದ್ದ ಆ ದಂಪತಿಗಳನ್ನು ನೋಡಿದನು. ಅವರಿಬ್ಬರನ್ನು ನೋಡಿ ದುಃಖದಿಂದ ತನಗೆ ಸದ್ಗತಿಯಾಗುವುದರ ಬಗ್ಗೆ ಚಿಂತಿಸಿದನು.

ಕೀದೃಶೇನೇಹ ತಪಸಾ ಗಚ್ಛೇಯಂ ಪರಮಾಂ ಗತಿಮ್ ।
ಇತಿ ಬುದ್ಧ್ಯಾ ವಿನಿಶ್ಚಿತ್ಯ ಗಮನಾಯೋಪಚಕ್ರಮೇ ॥೨॥

ಯಾವ ರೀತಿಯ ತಪಸ್ಸಿನಿಂದ ಸದ್ಗತಿಯನ್ನು ಹೊಂದಿಯೇನು? ಎಂದು ಚಿಂತಿಸಿದನು. ಕೊನೆಗೆ ಒಂದು ನಿಶ್ಚಯವು ಅವನಿಗೆ ಉಂಟಾಯಿತು.

ಮಹಾಪ್ರಸ್ಥಾನಮಾಶ್ರಿತ್ಯ ಲುಬ್ಧಕಃ ಪಕ್ಷಿಜೀವನಃ ।
ನಿಶ್ಚೇಷ್ಟೋ ಮಾರುತಾಹಾರೋ ನಿರ್ಮಮಃ ಸ್ವರ್ಗಕಾಂಕ್ಷಯಾ ॥೩॥

ಪಕ್ಷಿಗಳನ್ನು ಅವಲಂಬಿಸಿ ಜೀವಿಸುವ ಆ ಬೇಡನು ಸ್ವರ್ಗಕ್ಕೆ ಹೋಗುವ ಆಸೆಯಿಂದ ಎಲ್ಲ ಬಾಹ್ಯ ಚಟುವಟಿಕೆಗಳನ್ನು ನಿಲ್ಲಿಸಿ, ಗಾಳಿಯನ್ನು ಮಾತ್ರ ಸೇವಿಸುತ್ತ, ಮಮಕಾರವಿಲ್ಲದೆ ಮಹಾಪ್ರಸ್ಥಾನವನ್ನು ಬಯಸಿ ಹೊರಟನು.

ತತೋಽಪಶ್ಯತ್ ಸುವಿಸ್ತೀರ್ಣಂ ಹೃದ್ಯಂ ಪದ್ಮವಿಭೂಷಿತಮ್ ।
ನಾನಾದ್ವಿಜಗಣಾಕೀರ್ಣಂ ಸರಃ ಶೀತಜಲಂ ಶುಭಮ್ ।
ಪಿಪಾಸಾತೋರ್ಽಪಿ ತದ್ದೃಷ್ಟ್ವಾ ತೃಪ್ತಃ ಸ್ಯಾನ್ನಾತ್ರ ಸಂಶಯಃ ॥೪॥

ಹೋಗುತ್ತಾ ಬಹಳ ವಿಶಾಲವಾದ, ರಮಣೀಯವಾದ, ಕಮಲಗಳಿಂದ ಅಲಂಕೃತವಾದ, ನಾನಾ ಹಕ್ಕಿಗಳಿಂದ ತುಂಬಿದ, ತಂಪು ನೀರಿನ ಶುಭ ಸರೋವರವನ್ನು ನೋಡಿದನು. ಬಹಳ ಬಾಯಾರಿದ್ದರೂ ಸರೋವರವನ್ನು ನೋಡಿಯೇ ತೃಪ್ತನಾದನು. ನೀರು ಕುಡಿಯಲಿಲ್ಲ. ಈ ವಿಷಯದಲ್ಲಿ ಸಂದೇಹಬೇಡ. ನೀರು ಕುಡಿಯಲಿಲ್ಲ.

ಉಪವಾಸಕೃಶೋಽತ್ಯರ್ಥಂ ಸ ತು ಪಾರ್ಥಿವ ಲುಬ್ಧಕಃ ।
ಉಪಸರ್ಪತ ಸಂಹೃಷ್ಟಃ (ಉಪಸೃತ್ಯ ತು ತದ್ದೃಷ್ಟಃ) ಶ್ವಾಪದಾಧ್ಯುಷಿತಂ ವನಮ್ ॥೫॥

ರಾಜನೇ! ಉಪವಾಸದಿಂದ ಕೃಶನಾಗಿದ್ದ ಆ ಬೇಡನು ಸಂತೋಷದಿಂದಲೇ ಹಿಂಸೆ, ಪ್ರಾಣಿಗಳಿದ್ದ ವನವನ್ನು ಸಮೀಪಿಸಿದನು.

ಮಹಾಂತಂ ನಿಶ್ಚಯಂ ಕೃತ್ವಾ ಲುಬ್ಧಕಃ ಪ್ರವಿವೇಶ ಹ ।
ಪ್ರವಿಶನ್ನೇವ ಚ ವನಂ ನಿಗೃಹೀತಃ ಸ ಕಂಟಕೈಃ ॥೬॥

ಬೇಡನು ಮಹಾನಿಶ್ಚಯವನ್ನು ಮಾಡಿ ಆ ವನವನ್ನು ಪ್ರವೇಶಿಸಿದನು. ವನವನ್ನು ಪ್ರವೇಶಿಸುತ್ತಲೇ ಮುಳ್ಳುಗಳಲ್ಲಿ ಅವನು ಸಿಕ್ಕಿಕೊಂಡನು.

ಸ ಕಂಟಕವಿಭುಗ್ನಾಂಗೋ ಲೋಹಿತಾರ್ದ್ರೋಕೃತಚ್ಛವಿಃ ।
ಬಭ್ರಾಮ ತಸ್ಮಿನ್ ವಿಜನೇ ನಾನಾಮೃಗಸಮಾಕುಲೇ ॥೭॥

ಮುಳ್ಳುಗಳಿಂದ ಅವನ ಶರೀರದಲ್ಲಿ ನಾನಾ ಛಿದ್ರಗಳು ಉಂಟಾದವು. ರಕ್ತ ಹರಿದು ದೇಹವಿಡಿ ತೊಯ್ದುಹೋಯಿತು. ನಾನಾ ಪ್ರಾಣಿಗಳಿಂದ ತುಂಬಿದ, ಜನರಿಲ್ಲದ ಆ ವನದಲ್ಲಿ ಅಲೆದನು.

ತತೋ ದ್ರುಮಾಣಾಂ ಮಹತಾಂ ಪವನೇನ ವನೇ ತದಾ ।
ಉದತಿಷ್ಠತ ಸಂಘರ್ಷಾತ್ ಸುಮಹಾನ್ ಹವ್ಯವಾಹನಃ ॥೮॥

ಅನಂತರ ವನದಲ್ಲಿ ಗಾಳಿಯಿಂದ ಮರಗಳಿಗೆ ಸಂಘರ್ಷವಾಗಿ ಭಾರಿ ಬೆಂಕಿಯು ಉದ್ಭವಿಸಿತು.

ತದ್ವನಂ ವೃಕ್ಷಸಂಕೀರ್ಣಂ ಲತಾವಿಟಪಸಂಕುಲಮ್ ।
ದದಾಹ ಪಾವಕಃ ಕ್ರುದ್ಧೋ ಯುಗಾಂತಾಗ್ನಿಸಮಪ್ರಭಃ ॥೯॥

ಪ್ರಲಯಾಗ್ನಿಯಂತಿದ್ದ ಆ ಕಾಡ್ಗಿಚ್ಚು ವೃಕ್ಷಗಳಿಂದ ತುಂಬಿದ್ದ, ಬಳ್ಳಿಗಳ ರಾಶಿಯಿದ್ದ ಆ ವನವನ್ನು ಸುಟ್ಟುಹಾಕಿತು.

ಸಜ್ವಾಲೈಃ ಪವನೋದ್ಧೂತೈರ್ವಿಸ್ಫುಲಿಂಗೈಃ ಸಮನ್ವಿತಃ ।
ದದಾಹ ತದ್ವನಂ ಘೋರಂ ಮೃಗಪಕ್ಷಿಸಮಾಕುಲಮ್ ॥೧೦॥

ಜ್ವಾಲೆಯಿಂದ ಕೂಡಿದ, ಗಾಳಿಯಿಂದ ಎದ್ದ ಕಿಡಿಗಳಿಂದ ಕೂಡಿದ ಅಗ್ನಿಯು ಪ್ರಾಣಿ- ಪಕ್ಷಿಗಳಿಂದ ತುಂಬಿದ ಆ ಘೋರ ವನವನ್ನು ಸುಟ್ಟುಹಾಕಿತು.

ತತಃ ಸ ದೇಹಮೋಕ್ಷಾರ್ಥಂ ಸಂಪ್ರಹೃಷ್ಟೇನ ಚೇತಸಾ ।
ಅಭ್ಯಧಾವತ ಸಂವೃದ್ಧಂ ಪಾವಕಂ ಲುಬ್ಧಕಸ್ತದಾ ॥೧೧॥

ಆಗ ಆ ಬೇಡನು ದೇಹವನ್ನು ತ್ಯಜಿಸುವುದಕ್ಕಾಗಿ ಸಂತುಷ್ಟ ಮನಸ್ಸಿನಿಂದ ಆ ಮಹಾಗ್ನಿಯ ಕಡೆಗೆ ಧಾವಿಸಿದನು.

ತತಸ್ತೇನಾಗ್ನಿನಾ ದಗ್ಧೋ ಲುಬ್ಧಕೋ ನಷ್ಟಕಿಲ್ಬಿಷಃ ।
ಜಗಾಮ ಪರಮಾಂ ಸಿದ್ಧಿಂ ತದಾ ಭರತಸತ್ತಮ ॥೧೨॥

ಭರತಸತ್ತಮ! ಆ ಅಗ್ನಿಯಿಂದ ಬೇಡನು ಸುಟ್ಟುಹೋದನು. ಅವನ ಪಾಪಗಳೂ ಸುಟ್ಟುಹೋದವು. ಪರಮಸಿದ್ಧಿಯನ್ನು ಹೊಂದಿದನು.

ತತಃ ಸ್ವರ್ಗಸ್ಥಮಾತ್ಮಾನಂ ಸೋಽಪಶ್ಯದ್ ವಿಗತಜ್ವರಃ ।
ಯಕ್ಷಗಂಧರ್ವಸಿದ್ಧಾನಾಂ ಮಧ್ಯೇ ಭ್ರಾಜಂತಮಿಂದ್ರವತ್ ॥೧೩॥

ಅನಂತರ ಅವನು ಎಲ್ಲ ತಾಪಗಳಿಂದ ದೂರವಾಗಿ ಸ್ವರ್ಗದಲ್ಲಿ ಯಕ್ಷ-ಗಂಧರ್ವ-ಸಿದ್ಧರ ನಡುವೆ ಇಂದ್ರನಂತೆ ಶೋಭಿಸುತ್ತಿರುವ ತನ್ನನ್ನು ಕಂಡುಕೊಂಡನು.

ಏವಂ ಖಲು ಕಪೋತಶ್ಚ ಕಪೋತೀ ಚ ಪತಿವ್ರತಾ ।
ಲುಬ್ಧಕೇನ ಸಹ ಸ್ವರ್ಗಂ ಗತಾಃ ಪುಣ್ಯೇನ ಕರ್ಮಣಾ ॥೧೪॥

ಹೀಗೆ ಕಪೋತ, ಪತಿವ್ರತೆಯಾದ ಕಪೋತಿ ಮತ್ತು ಬೇಡನು ಪುಣ್ಯಕರ್ಮಗಳಿಂದ ಸ್ವರ್ಗಕ್ಕೆ ಹೋದರು.

ಯಾಪಿ ಚೈವಂವಿಧಾ ನಾರೀ ಭರ್ತಾರಮನುವರ್ತತೇ ।
ವಿರಾಜತೇ ಹಿ ಸಾ ಕ್ಷಿಪ್ರಂ ಕಪೋತೀವ ದಿವಿ ಸ್ಥಿತಾ ॥೧೫॥

ಈ ವಿಧದ ಯಾವ ನಾರಿಯು ಪತಿಯನ್ನು ಅನುಸರಿಸುವಳೋ ಅವಳು ಶೀಘ್ರವಾಗಿ ಸ್ವರ್ಗವನ್ನು ತಲುಪಿ ಕಪೋತಿಯಂತೆ ವಿರಾಜಿಸುತ್ತಾಳೆ.

ಏವಮೇತತ್ ಪುರಾ ವೃತ್ತಂ ಲುಬ್ಧಕಸ್ಯ ಮಹಾತ್ಮನಃ ।
ಕಪೋತಸ್ಯ ಚ ಧರ್ಮಿಷ್ಠಾ ಗತಿಃ ಪುಣ್ಯೇನ ಕರ್ಮಣಾ ॥೧೬॥

ಇದು ಹಿಂದೆ ನಡೆದ ಬೇಡನ ಮತ್ತು ಮಹಾತ್ಮನಾದ ಕಪೋತದ ಪುಣ್ಯಕರ್ಮಗಳಿಂದ ಸಂಭವಿಸಿದ ಧರ್ಮಿಷ್ಠಗತಿ.

ಯಶ್ಚೇದಂ ಶೃಣುಯಾನ್ನಿತ್ಯಂ ಯಶ್ಚೇದಂ ಪರಿಕೀರ್ತಯೇತ್ ।
ನಾಶುಭಂ ವಿದ್ಯತೇ ತಸ್ಯ ಮನಸಾಪಿ ಪ್ರಮಾದ್ಯತಃ ॥೧೭॥

ಯಾರು ಇದನ್ನು ನಿತ್ಯವೂ ಕೇಳುವರೋ, ಹೇಳುವರೋ ಅವರು ಮಾನಸಿಕವಾಗಿ ಪ್ರಮಾದಗಳನ್ನು ಮಾಡಿದರೂ ಅವರಿಗೆ ಏನೂ ಅಶುಭವಾಗುವುದಿಲ್ಲ.

ಯುಧಿಷ್ಠಿರ ಮಹಾನೇಷ ಧರ್ಮೋ ಧರ್ಮಭೃತಾಂ ವರ ।
ಗೋಘ್ನೇಷ್ವಪಿ ಭವೇದಸ್ಮಿನ್ನಿಷ್ಕೃತಿಃ ಪಾಪಕರ್ಮಣಃ ।
ನಿಷ್ಕೃತಿರ್ನ ಭವೇತ್ತಸ್ಮಿನ್ ಯೋ ಹನ್ಯಾಚ್ಚರಣಾಗತಮ್ ॥೧೮॥

ಯುಧಿಷ್ಠಿರ! ಧರ್ಮನಿಷ್ಠರಲ್ಲಿ ಶ್ರೇಷ್ಠ! ಈ ಲೋಕದಲ್ಲಿ ಗೋಹತ್ಯೆ ಮಾಡಿದವರಿಗೂ ಪಾಪಗಳಿಂದ ಬಿಡುಗಡೆಯಾಗುತ್ತದೆ. ಶರಣಾಗತರನ್ನು ಕೊಂದವರಿಗೆ ಯಾವ ಪರಿಹಾರವೂ ಇಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಆಪದ್ಧರ್ಮೇ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಹದಿನೇಳನೆಯ ಅಧ್ಯಾಯವು ಮುಗಿಯಿತು.

★ ★ ★ ★

ಹದಿನೆಂಟನೆಯ ಅಧ್ಯಾಯ

ಜನಮೇಜಯನಿಗೆ ಆಕಸ್ಮಿಕವಾಗಿ ಸಂಭವಿಸಿದ ಬ್ರಹ್ಮಹತ್ಯಾ ಪಾಪ. ಪ್ರಾಯಶ್ಚಿತ್ತಕ್ಕಾಗಿ ಪ್ರಯತ್ನ. ಶೌನಕರ ಗದರಿಕೆ.

ಯುಧಿಷ್ಠಿರಃ

ಅಬುದ್ಧಿಪೂರ್ವಂ ಯಃ ಪಾಪಂ ಕುರ್ಯಾದ್ ಭರತಸತ್ತಮ ।
ಮುಚ್ಯತೇ ಸ ಕಥಂ ತಸ್ಮಾದೇನಸಸ್ತದ್ವದಸ್ವ ಮೇ ॥೧॥

ಭರತಸತ್ತಮ! ಯಾರು ತಿಳಿಯದೆ (ಪಾಪವನ್ನು ಮಾಡುತ್ತಿದ್ದೇನೆಂದು ತಿಳಿಯದೆ) ಪಾಪವನ್ನು ಮಾಡುತ್ತಾನೋ ಅವನಿಗೆ ಆ ಪಾಪದಿಂದ ಬಿಡುಗಡೆ ಹೇಗೆ? ದಯವಿಟ್ಟು ಹೇಳು.

ಭೀಷ್ಮಃ

ಅತ್ರ ತೇ ವರ್ಣಯಿಷ್ಯೇऽಹಮಿತಿಹಾಸಂ ಪುರಾತನಮ್ ।
ದಂಡೇನ ಶೌನಕೋ ವಿಪ್ರೋ ಯದಾಹ ಜನಮೇಜಯಮ್ ॥೨॥

ಶೌನಕ ಎಂಬ ವಿಪ್ರನು ಇಂತಹ ಪರಿಹಾರಕ್ಕೆ ಅನುಭವಿಸಬೇಕಾದ ಶಿಕ್ಷೆಯನ್ನು ಜನಮೇಜಯನಿಗೆ ಹೇಳಿದ್ದನು. ಈ ಪುರಾತನ ಇತಿಹಾಸವನ್ನು ನಿನಗೆ ಹೇಳುವೆನು.

ಆಸೀದ್ ರಾಜಾ ಮಹಾವೀರ್ಯಃ ಪರಿಕ್ಷಿಜ್ಜನಮೇಜಯಃ ।
ಅಬುದ್ಧಿಪೂರ್ವಂ ಬ್ರಹ್ಮಹತ್ಯಾ ತಮಾಗಚ್ಛನ್ಮಹೀಪತಿಮ್ ॥೩॥

ಜನಮೇಜಯ ಎಂಬ ಮಹಾಬಲಶಾಲಿಯಾದ ರಾಜನಿದ್ದನು. ಅವನು ಒಳ್ಳೆಯ ವಿಮರ್ಶಕ. ಅವನಿಗೆ ಬುದ್ಧಿಪೂರ್ವಕವಲ್ಲದ ಬ್ರಹ್ಮಹತ್ಯಾದೋಷವು ಬಂದಿತು. (ಈ ಜನಮೇಜಯ ಕುರುಕುಲದ ಪರೀಕ್ಷಿತನ ಮಗನಲ್ಲ).

ತಂ ಬ್ರಾಹ್ಮಣಾಃ ಸರ್ವ ಏವ ತತ್ಯಜುಃ ಸಪುರೋಹಿತಾಃ ।
ಜಗಾಮ ಸ ವನಂ ರಾಜಾ ದಹ್ಯಮಾನೋ ದಿವಾನಿಶಮ್ ॥೪॥

ಅವನನ್ನು ಎಲ್ಲ ಬ್ರಾಹ್ಮಣರು ಮತ್ತು ಪುರೋಹಿತರು ತ್ಯಾಗ ಮಾಡಿದರು. ಹಗಲು-ರಾತ್ರಿ ಪರಿತಪಿಸುತ್ತಿದ್ದ ಆ ರಾಜನು ಕಾಡಿಗೆ ಹೋದನು.

ಸ ಪ್ರಜಾಭಿಃ ಪರಿತ್ಯಕ್ತಶ್ಚಕಾರ ಕುಶಲಂ ಮಹತ್ ।
ಅತಿವೇಲಂ ತಪಸ್ತೇಪೇ ದಹ್ಯಮಾನಃ ಸ ಮನ್ಯುನಾ ॥೫॥

ಪ್ರಜೆಗಳಿಂದ ಪರಿತ್ಯಕ್ತನಾದ ಅವನು ಕಾಡಿನಲ್ಲಿ ನಾನಾ ಪುಣ್ಯಕೆಲಸಗಳನ್ನು ಮಾಡಿದನು. ದುಃಖದಿಂದ ಬೇಯುತ್ತಾ ತೀವ್ರ ತಪಸ್ಸನ್ನು ಮಾಡಿದನು.

ಬ್ರಹ್ಮಹತ್ಯಾಪನೋದಾರ್ಥಮಪೃಚ್ಛದ್ ಬ್ರಾಹ್ಮಣಾನ್ ಬಹೂನ್ ।
ಪರ್ಯಟನ್ ಪೃಥಿವೀಂ ಕೃತ್ಸ್ನಾಂ ದೇಶೇ ದೇಶೇ ನರಾಧಿಪಃ ॥೬॥

ಇಡೀ ಭೂಮಂಡಲವನ್ನು ಸಂಚರಿಸುತ್ತಾ ಬೇರೆ ಬೇರೆ ಪ್ರದೇಶಗಳಲ್ಲಿ ಬಹು ಬ್ರಾಹ್ಮಣರನ್ನು ಬ್ರಹ್ಮಹತ್ಯಾ ದೋಷದ ಪರಿಹಾರವು ಹೇಗೆ ಎಂದು ವಿಚಾರಿಸಿದನು.

ತತ್ರೇತಿಹಾಸಂ ವಕ್ಷ್ಯಾಮಿ ಧರ್ಮಸ್ಯಾಸ್ಯೋಪಬೃಂಹಣಮ್ ।
ದಹ್ಯಮಾನಃ ಪಾಪಕೃತ್ಯಾ ಜಗಾಮ ಜನಮೇಜಯಃ ॥೭॥

ವರಿಷ್ಯಮಾಣ ಇನ್ದ್ರೋತಂ ಶೌನಕಂ ಸಂಶಿತವ್ರತಮ್ ।
ಸಮಾಸಾದ್ಯೋಪಜಗ್ರಾಹ ಪಾದಯೋಃ ಪರಿಪೀಡಯನ್ ॥೮॥

ಈ ಧರ್ಮವನ್ನು= ಬ್ರಹ್ಮಹತ್ಯಾ ದೋಷವನ್ನು ಪರಿಹರಿಸುವ ಆಚರಣೆಯನ್ನು ವಿವರವಾಗಿ ತಿಳಿಸುವ ಇತಿಹಾಸವನ್ನು ನಿನಗೆ ಹೇಳುತ್ತೇನೆ. ತನ್ನ ಪಾಪಕೃತ್ಯದಿಂದ ದಹಿಸುತ್ತಿದ್ದ ಜನಮೇಜಯನು ಸಂಚರಿಸುತ್ತಾ ಶೌನಕವಂಶದ, ಕಠಿಣವ್ರತನಿಷ್ಠನಾದ ಇಂದ್ರೋತನ ಬಳಿ ಹೋದನು. ಹತ್ತಿರ ಹೋಗಿ ಅವನ ಪಾದಗಳನ್ನು ಗಟ್ಟಿಯಾಗಿ ಹಿಡಿದನು.

ತತೋ ಭೀತೋ ಮಹಾಪ್ರಾಜ್ಞೋ ಜಗರ್ಹೇ ಸುಭೃಶಂ ತದಾ ।
ಕರ್ತಾ ಪಾಪಸ್ಯ ಮಹತೋ ಭ್ರೂಣಹಾ ಕಿಮಿಹಾಗತಃ ॥೯॥

ಆಗ ಅವನನ್ನು ನೋಡಿ ಹೆದರಿದ ಆ ಮಹಾಪ್ರಾಜ್ಞನು ತೀವ್ರವಾಗಿ ನಿಂದಿಸಿದನು. 'ಭ್ರೂಣಹತ್ಯೆ ಮಾಡಿರುವ, ಮಹಾಪಾಪವನ್ನು ಮಾಡಿರುವ ನೀನು ಇಲ್ಲಿಗೆ ಏಕೆ ಬಂದೆ?'

ಕಿಂ ತವಾಸ್ಮಾಸು ಕರ್ತವ್ಯಂ ಮಾ ಮಾ ಸ್ಪಾಕ್ಷೀಃ ಕಥಂಚನ ।
ಗಚ್ಛ ಗಚ್ಛ ನ ತೇ ಸ್ಥಾನಂ ಪ್ರೇಣಾತ್ಯಸ್ಮಾನಿಹ ಧ್ರುವಮ್ ॥೧೦॥

'ನನ್ನಲ್ಲಿ ನಿನಗೇನು ಕೆಲಸ? ಸರ್ವಥಾ ಮುಟ್ಟಬೇಡ; ಹೊರಟುಹೋಗು. ನೀನಿಲ್ಲಿರುವುದು ನನಗೆ ಸರ್ವಥಾ ಇಷ್ಟವಿಲ್ಲ'.

ರುಧಿರಸ್ಯೇವ ತೇ ಗಂಧಃ ಶವಸ್ಯೇವ ಚ ದರ್ಶನಮ್ ।
ಅಶಿವಃ ಶಿವಸಂಕಾಶೋ ಮೃತೋ ಜೀವನ್ನಿವಾಟಸಿ ॥೧೧॥

'ನಿನ್ನ ವಾಸನೆ ರಕ್ತದ ವಾಸನೆಯಂತಿದೆ. ನಿನ್ನ ದರ್ಶನ ಶವದ ದರ್ಶನದಂತೆ. (ನೀನು ಶವದಂತೆ ಕಾಣುವಿ). ಮಂಗಳಾತ್ಮರಂತಿರುವ ನೀನು ಅಮಂಗಳ. ಜೀವಚ್ಛವದಂತೆ ಅಲೆಯುತ್ತಿರುವಿ.

ಅಂತರ್ಮೃತ್ಯುರಶುದ್ಧಾತ್ಮಾ ಪಾಪಮೇವಾನುಚಿಂತಯನ್ ।
ಪ್ರಬುಧ್ಯಸೇ ಪ್ರಸ್ವಪಿಷಿ ವರ್ತಸೇ ಚರಸೇ ಸುಖೀ ॥೧೨॥

'ನೀನು ಒಳಗೆ ಸತ್ತುಹೋಗಿರುವಿ. ಅಶುದ್ಧಾತ್ಮ. ಪಾಪಕೆಲಸವನ್ನೇ ಚಿಂತಿಸುತ್ತಾ ಏಳುವಿ, ಮಲಗುವಿ, ಇರುವಿ, ಸುಖವಾಗಿ ಓಡಾಡುವಿ'.

ಮೋಘಂ ತೇ ಜೀವಿತಂ ರಾಜನ್ ಪರಿಕ್ಲಿಷ್ಟಂ ಚ ಜೀವಸಿ ।
ಪಾಪಾಯೈವ ಚ ಸೃಷ್ಟೋಽಸಿ ಕರ್ಮಣೇ ಹ ಯವೀಯಸೇ ॥೧೩॥

ರಾಜನೆ! ನಿನ್ನ ಜೀವನ ವ್ಯರ್ಥ. ಕ್ಲೇಶಪಡುತ್ತಾ ಜೀವಿಸುತ್ತಿರುವಿ. ಪಾಪ ಸಂಪಾದನೆಗಾಗಿಯೇ ನಿನ್ನ ಜನ್ಮವಾಗಿದೆ. ಹೀನಕರ್ಮಗಳನ್ನು ಮಾಡುವುದಕ್ಕಾಗಿಯೇ ನಿನ್ನ ಜನ್ಮವಾಗಿದೆ.

ಬಹು ಕಲ್ಯಾಣಮಿಚ್ಛಂತ ಈಹಂತೇ ಪಿತರಃ ಸುತಾನ್ ।
ತಪಸಾ ದೇವತೇಜ್ಯಾಭಿರ್ವಂದನೇನ ತಿತಿಕ್ಷಯಾ ॥೧೪॥

ಬಹು ಶುಭೋದಯವನ್ನು ಬಯಸುವ ದಂಪತಿಗಳು ತಪಸ್ಸು, ದೇವತಾರಾಧನೆ, ನಮಸ್ಕಾರ, ದ್ವಂದ್ವಸಹನೆ-ಇವುಗಳಿಂದ ಮಕ್ಕಳನ್ನು ಪಡೆಯಲು ಪ್ರಯತ್ನಿಸುತ್ತಾರೆ.

ಪಿತೃವಂಶಮಿಮಂ ಪಶ್ಯ ತ್ವತ್ಕೃತೇ ನರಕಂ ಗತಮ್ ।
ನಿರರ್ಥಾಃ ಸರ್ವ ಏವೈಷಾಮಾಶಾಬಂಧಾಸ್ತ್ವದಾಶ್ರಯಾಃ ॥೧೫॥

ನಿನ್ನಿಂದಾಗಿ ನರಕಕ್ಕೆ ಹೋಗಿರುವ ಈ ಪಿತೃಕುಲವನ್ನು ನೋಡು. ನಿನ್ನಿಂದ ಈಡೇರುವುದೆಂದು ಅವರು ನಂಬಿದ್ದ ಅವರ ಎಲ್ಲ ಆಸೆಗಳೂ ವ್ಯರ್ಥವಾಗಿವೆ.

ಯಾನ್ ಪೂಜಯಂತೋ ವಿಂದಂತಿ ಸ್ವರ್ಗಮಾಯುರ್ಯಶಃ ಸುಖಮ್ ।
ತೇಷು ತೇ ಸತತಂ ದ್ವೇಷೋ ಬ್ರಾಹ್ಮಣೇಷು ನಿರರ್ಥಕಃ ॥೧೬॥

ಯಾರನ್ನು ಪೂಜಿಸಿ ಸ್ವರ್ಗ, ಆಯುಷ್ಯ, ಕೀರ್ತಿ, ಸುಖ- ಇವುಗಳನ್ನು ಪಡೆಯುವರೋ ಆ ಬ್ರಾಹ್ಮಣರ ಮೇಲೆ ನಿನಗೆ ಯಾವಾಗಲೂ ನಿರರ್ಥಕ ದ್ವೇಷ.

ಇಮಂ ಲೋಕಂ ವಿಮುಚ್ಯ ತ್ವಮವಾಙ್ಮೂರ್ಧಾ ಪತಿಷ್ಯಸಿ ।
ಅಶಾಶ್ವತೀಃ ಶಾಶ್ವತೀಶ್ಚ ಸಮಾಃ ಪಾಪೇನ ಕರ್ಮಣಾ ॥೧೭॥

ನೀನು ಈ ದೇಹವನ್ನು ತ್ಯಜಿಸಿದ ನಂತರ, ನಿನ್ನ ಪಾಪಕರ್ಮದ ಫಲವಾಗಿ ಒಂದೊಂದು ಪಾಪಕರ್ಮದ ಅಶಾಶ್ವತ ಫಲಗಳನ್ನು= ಮಿತಫಲಗಳನ್ನು ಅನುಭವಿಸುತ್ತಾ ಶಾಶ್ವತವಾಗಿ ನರಕದಲ್ಲಿ ತಲೆಕೆಳಗಾಗಿ ಬಿದ್ದಿರುವಿ.

ಅದ್ಯಮಾನೋ ಜಂತುಗೃಧ್ನೈಃ ಶಿತಿಕಂಠೈರಯೋಮುಖೈಃ ।
ತತೋಽಪಿ ಪುನರಾವೃತ್ತಃ ಪಾಪಯೋನಿಂ ಗಮಿಷ್ಯಸಿ ॥೧೮॥

ಕಬ್ಬಿಣದ ಕೊಕ್ಕುಗಳಿರುವ ನವಿಲುಗಳಿಂದ, ಹದ್ದುಗಳಿಂದ, ಇನ್ನೂ ಬೇರೆ ಬೇರೆ ಪ್ರಾಣಿಗಳಿಂದ ತಿನ್ನಲ್ಪಡುತ್ತಾ ನರಕದಲ್ಲಿ ಬಿದ್ದಿರುವಿ. ಅಲ್ಲಿಂದ ಹಿಂತಿರುಗಿ ಹೀನಜನ್ಮವನ್ನು ಹೊಂದುವಿ.

ಯದಿದಂ ಮನ್ಯಸೇ ರಾಜನ್ನಾಯಮಸ್ತಿ ಪರಃ ಕುತಃ ।
ಪ್ರತಿಸ್ಮಾರಯಿತಾರಸ್ತಾ ತ್ವಂ ಯಮದೂತಾ ಯಮಕ್ಷಯೇ ॥೧೯॥

ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ (ಈ ಲೋಕದಲ್ಲಿ ಪಾಪದ ಫಲ ಅನುಭವಕ್ಕೆ ಬರುವುದಿಲ್ಲ, ಪರಲೋಕವು ಇಲ್ಲವೇ ಇಲ್ಲ) ಎಂದು ನೀನು ಭಾವಿಸಿರುವಿ. ಯಮಸದನದಲ್ಲಿ ಯಮದೂತರು ನಿನ್ನ ವಿಚಾರಗಳನ್ನು ನಿನಗೆ ನೆನಪಿಸುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಹದಿನೆಂಟನೆಯ ಅಧ್ಯಾಯವು ಮುಗಿಯಿತು.

★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಜನಮೇಜಯನಿಂದ ಶೌನಕರ ತೆಗಳಿಕೆಯ ಅಂಗೀಕಾರ. ದಯೆ ತೋರಲು ಪ್ರಾರ್ಥನೆ. ಬ್ರಹ್ಮನಿಷ್ಠರಿಗೆ ದ್ರೋಹ ಮಾಡದಿರಲು ಉಪದೇಶ. ಉಪದೇಶದ ಅಂಗೀಕಾರ.

ಭೀಷ್ಮಃ

ಏವಮುಕ್ತಃ ಪ್ರತ್ಯುವಾಚ ತಂ ಮುನಿಂ ಜನಮೇಜಯಃ ।
ಗರ್ಹ್ಯಂ ಭವಾನ್ ಗರ್ಹಯತಿ ನಿಂದ್ಯಂ ನಿಂದತಿ ಮಾ ಭವಾನ್ ॥೧॥

ಹೀಗೆ ಹೇಳಲ್ಪಟ್ಟ ಜನಮೇಜಯನು ಆ ಮುನಿಗೆ ಉತ್ತರ ಹೇಳಿದನು. ಮುನಿಯೇ! ನಿಂದಾರ್ಹನಾದ ನನ್ನನ್ನು ನೀನು ನಿಂದಿಸುತ್ತಿರುವಿ. ತೆಗೆಳಿಕೆಗೆ ಅರ್ಹನಾದ ನನ್ನನ್ನು ತೆಗಳುತ್ತಿರುವಿ.

ಧಿಕ್ಕಾರ್ಯಂ ಮಾ ಧಿಕ್ಕುರುತೇ ತಸ್ಮಾತ್ತಾ ತ್ವಹಂ ಪ್ರಸಾದಯೇ ।
ಸರ್ವಂ ಹೀದಂ ಸ್ವಕೃತಂ ಮೇ ಜ್ವಲಾಮ್ಯಗ್ನಾವಿವಾಹಿತಃ ॥೨॥

ಧಿಕ್ಕಾರಕ್ಕೆ ಯೋಗ್ಯನಾದ ನನ್ನನ್ನು ಧಿಕ್ಕರಿಸುತ್ತಿರುವಿ. ನಾನು ನಿನ್ನ ಅನುಗ್ರಹವನ್ನು ಬೇಡುತ್ತೇನೆ. ಪ್ರಸನ್ನನಾಗಬೇಕೆಂದು ಬೇಡುತ್ತೇನೆ. ಇದೆಲ್ಲವೂ ನಾನು ಮಾಡಿದ ಅಪರಾಧವೇ. ನಾನು ಬೆಂಕಿಯಲ್ಲಿ ಹಾಕಲ್ಪಟ್ಟವನಂತೆ ದಹಿಸುತ್ತಿದ್ದೇನೆ.

ಸ್ವಕರ್ಮಾಣ್ಯಭಿಸಂಧಾಯ ನಾಭಿನಂದತಿ ಮೇ ಮನಃ ।
ಪ್ರಾಪ್ತಂ ನೂನಂ ಮಯಾ ಘೋರಂ ಭಯಂ ವೈವಸ್ವತಾದಪಿ ॥೩॥

ನನ್ನ ಕೃತ್ಯಗಳನ್ನು ನೆನೆದಾಗ ನನ್ನ ಮನಸ್ಸಿಗೆ ದುಃಖವಾಗುತ್ತದೆ. ಯಮನಿಂದ ನನಗೆ ಘೋರ ಶಿಕ್ಷೆ ಕಾದಿದೆ. ಇದು ನಿಶ್ಚಯ.

ತತ್ತು ಶಲ್ಯಮನಿರ್ಹೃತ್ಯ ಕಥಂ ಶಕ್ಷ್ಯಾಮಿ ಜೀವಿತುಮ್ ।
ಸರ್ವಮನ್ಯೂನ್ ವಿನೀಯ ತ್ವಮಭಿ ಮಾ ವದ ಶೌನಕ ॥೪॥

ಮನಸ್ಸಿಗೆ ಚುಚ್ಚಿರುವ ಆ ಪಾಪಕೃತ್ಯದ ಶಲ್ಯವನ್ನು (ಮುಳ್ಳನ್ನು) ತೆಗೆಯದೆ ನಾನು ಹೇಗೆ ತಾನೆ ಬದುಕಲಿ? ಶೌನಕರೇ! ಎಲ್ಲ ಕೋಪವನ್ನು ದೂರ ಇಟ್ಟು ನನಗೆ ನನ್ನ ಉದ್ಧಾರದ ದಾರಿಯನ್ನು ದಯವಿಟ್ಟು ಉಪದೇಶಿಸಿರಿ.

ಮಹಾನಾಸಂ ಬ್ರಾಹ್ಮಣಾನಾಂ ಭವಿಷ್ಯಾಮ್ಯರ್ಥವಾನ್ ಪುನಃ ।
ಅಸ್ತು ಶೇಷಂ ಕುಲಸ್ಯಾಸ್ಯ ಮಾ ಪರಾಭೂದಿದಂ ಕುಲಮ್ ॥೫॥

ನಾನು ಬ್ರಾಹ್ಮಣರ ದೊಡ್ಡ ಭಕ್ತನಾಗಿದ್ದೆ. ಮತ್ತೆ ಅವರಿಗೆ ಉಪಯೋಗಿಯಾದವನು ಆಗಬೇಕು. ಈ ಕುಲವು ಉಳಿಯಬೇಕು. ಈ ಕುಲವು ನಾಶವಾಗಬಾರದು.

ನ ಹಿ ನೋ ಬ್ರಹ್ಮಶಪ್ತಾನಾಂ ಶೇಷೋ ಭವಿತುಮರ್ಹತಿ ।
ಶ್ರುತೀರಲಭಮಾನಾನಾಂ ಸಂವಿದಂ ವೇದ ನಿಶ್ಚಯಾತ್ ॥೬॥

ಬ್ರಾಹ್ಮಣಶಾಪಕ್ಕೆ ಒಳಗಾದ ನಾವು ಉಳಿಯುವುದೇ ಇಲ್ಲ. ಯಾರ ಮಾತನ್ನು ಯಾರು ಕೇಳುವುದಿಲ್ಲವೋ ಅಂತಹವರ ಸ್ಥಿತಿಯನ್ನು (ದುಃಸ್ಥಿತಿಯನ್ನು) ನೀವು ನಿಶ್ಚಯವಾಗಿ ತಿಳಿದಿರುವಿರಿ.

ನಿರ್ವಿದ್ಯಮಾನಃ ಸುಭೃಶಂ ಭೂಯೋ ವಕ್ಷ್ಯಾಮಿ ಸಾಂಪ್ರತಮ್ ।
ಭೂಯಶ್ಚೈವಾಭಿನಂಕ್ಷಂತಿ ನಿರ್ಧರ್ಮಾ ನಿರ್ಜಪಾ ಇವ ॥೭॥

ಬಹಳ ಬೇಸರಗೊಂಡಿರುವ ನಾನು ಮತ್ತೆ ಮತೆ ಹೇಳುತ್ತೇನೆ. ಬ್ರಾಹ್ಮಣಶಾಪಕ್ಕೆ ಒಳಗಾದವರು ನಾಶವಾಗುತ್ತಾರೆ. ಧರ್ಮಾಚರಣೆಯಿಲ್ಲದವರಂತೆ. ಜಪವಿಲ್ಲದವರಂತೆ.

ಅರ್ವಾಕ್ಚ ಪ್ರತಿತಿಷ್ಠಂತಿ ಪುಲಿಂದಶಬರಾ ಇವ ।
ನ ಹ್ಯಯಜ್ಞಾ ಅಮುಂ ಲೋಕಂ ಪ್ರಾಪ್ನುವಂತಿ ಕಥಂಚನ ॥೮॥

ಪುಲಿಂದರಂತೆ, ಶಬರರಂತೆ ಕೆಳಸ್ಥಿತಿಯಲ್ಲೇ ನಿಲ್ಲುತ್ತಾರೆ. ಯಜ್ಞಗಳನ್ನು ಮಾಡದವರು ಮೇಲಿನ ಲೋಕಗಳಿಗೆ ಸರ್ವಥಾ ಹೋಗುವುದಿಲ್ಲ.

ಅವಿಜ್ಞಾಯೈವ ಮೇ ಪ್ರಜ್ಞಾಂ ಬಾಲಸ್ಯೇವ ಸುಪಂಡಿತಃ ।
ಬ್ರಹ್ಮನ್ ಪಿತೇವ ಪುತ್ರೇಭ್ಯಃ ಪ್ರತಿ ಮಾಂ ವಾಂಛ ಶೌನಕ ॥೯॥

ಬ್ರಾಹ್ಮಣೋತ್ತಮರೇ! ನೀವು ಒಳ್ಳೆಯ ಪಂಡಿತರು. ನನ್ನ ಬಾಲಿಶ ಪ್ರಜ್ಞೆಯನ್ನು ಗಮನಕ್ಕೆ ತೆಗೆದುಕೊಳ್ಳದೆ, ತಂದೆಯು ಮಗನ ಮೇಲೆ ಪ್ರೀತಿಯನ್ನು ತೋರುವಂತೆ ನನ್ನ ಮೇಲೆ ದಯೆ ತೋರಿ.

ಶೌನಕಃ

ಕಿಮಾಶ್ಚರ್ಯಂ ಯತಃ ಪ್ರಾಜ್ಞೋ ಬಹು ಕುರ್ಯಾದ್ಧಿ ಸಾಂಪ್ರತಮ್ ।
ಇತಿ ವೈ ಪಂಡಿತೋ ಭೂತ್ವಾ ಭೂತಾನಾಂ ನೋಪತಪ್ಯತಿ ॥೧೦॥

ಪ್ರಾಜ್ಞನು ಸರಿಯಾದ ಕೆಲಸಗಳನ್ನೇ ಹೆಚ್ಚಾಗಿ ಮಾಡುತ್ತಾನೆ. ಇದರಲ್ಲಿ ಆಶ್ಚರ್ಯವೇನು? ಆದ್ದರಿಂದ ಪಂಡಿತನಾದವನು ಪಾಮರರ ಬಗ್ಗೆ ತಪಿಸುವುದಿಲ್ಲ, ಕೋಪಿಸಿಕೊಳ್ಳುವುದಿಲ್ಲ.

ಪ್ರಜ್ಞಾಪ್ರಾಸಾದಮಾರುಹ್ಯ ಅಶೋಚ್ಯಃ ಶೋಚತೇ ಜನಾನ್ ।
ಜಗತೀಸ್ಥಾನಿವಾದ್ರಿಸ್ಥಃ ಪ್ರಜ್ಞಯಾ ಪ್ರತಿಪಶ್ಯತಿ ॥೧೧॥

ಪ್ರಜ್ಞಾ ಎಂಬ ಪ್ರಾಸಾದವನ್ನು= ಬಹುಮಹಡಿ ಕಟ್ಟಡವನ್ನು ಏರಿದವನು ಶೋಚನೀಯನಾಗದಂತಹ ಸುಸ್ಥಿತಿಯಲ್ಲಿರುತ್ತಾನೆ. ಅವನಿಗೆ ಪಾಮರರ ಮೇಲೆ ಅನುಕಂಪ. ಬೆಟ್ಟದ ಮೇಲಿರುವವನು ನೆಲದ ಮೇಲೆ ಇರುವವರನ್ನು ನೋಡುವಂತೆ ಪ್ರಾಜ್ಞನು ತನ್ನ ಪ್ರಜ್ಞಾಬಲದಿಂದ ಪಾಮರರನ್ನು ನೋಡುತ್ತಾನೆ.

ನ ಚೋಪಲಭತೇ ತತ್ರ ನ ಚ ಕಾರ್ಯಾಣಿ ಪಶ್ಯತಿ ।
ನಿರ್ವಿಣ್ಣಾತ್ಮಾ ಪರೋಕ್ಷೋ ವಾ ಧಿಕೃತಃ ಸರ್ವಸಾಧುಷು ॥೧೨॥

ಕುಸಿದ ಮನಸ್ಸಿನವನಿಗೆ, ಸಾಧುಜನರ ದೃಷ್ಟಿಗೆ ಬೀಳದವನಿಗೆ. ಅವರ ಧಿಕ್ಕಾರಕ್ಕೆ ಒಳಗಾದವನಿಗೆ ಏನೂ ತಿಳಿಯುವುದಿಲ್ಲ. ಏನು ಮಾಡಲೂ ತೋಚುವುದಿಲ್ಲ.

ವಿದಿತ್ವೋಭಯತೋ ವೀರ್ಯಂ ಮಾಹಾತ್ಮ್ಯಂ ವೇದ ಆಗಮೇ ।
ಕುರುಷ್ವೇಹ ಮಹಾಶಾಂತಿಂ ಬ್ರಹ್ಮಾ ಶರಣಮಸ್ತು ತೇ ॥೧೩॥

ವೇದ ಮತ್ತು ಪೌರುಷೇಯ ಆಗಮ - ಇವೆರಡರಲ್ಲಿರುವ ಸತ್ವ ಮತ್ತು ಮಹಿಮೆಯನ್ನು ತಿಳಿದು ನಿನ್ನ ಪಾಪಕ್ಕೆ ಮಹಾಶಾಂತಿಯನ್ನು ಮಾಡು. ಬ್ರಾಹ್ಮಣರು ನಿನ್ನನ್ನು ರಕ್ಷಿಸಲಿ.

ತದ್ವೈ ಪಾರತ್ರಿಕಂ ಚಾರು ಬ್ರಾಹ್ಮಣಾನಾಮಕುಪ್ಯತಾಮ್ ।
ಅಥ ಚೇತ್ತಪ್ಯಸೇ ಪಾಪೈರ್ಧರ್ಮಂ ಚೇದನುಪಶ್ಯಸಿ ॥೧೪॥

ಪ್ರಸನ್ನ ಮನಸ್ಸಿನವರಾದ ಬ್ರಾಹ್ಮಣರ ರಕ್ಷಣೆಯು ಪರಲೋಕ ಪ್ರಾಪ್ತಿಗೆ ಸಾಧನ. ಮಾಡಿದ ಪಾಪದ ಬಗ್ಗೆ ಪಶ್ಚಾತ್ತಾಪವಿದ್ದರೆ, ಧರ್ಮವನ್ನು ಸರಿಯಾಗಿ ತಿಳಿದರೆ - ಇವೆರಡರಿಂದ ಪರಲೋಕದಲ್ಲಿ ಸದ್ಗತಿಯಾಗುತ್ತದೆ.

ಜನಮೇಜಯಃ

ಅನುತಪ್ಯೇ ಚ ಪಾಪೇನ ನ ಚಾಧರ್ಮಂ ಚರಾಮ್ಯಹಮ್ ।
ಬುಭೂಷುಂ ಭಜಮಾನಂ ಚ ಪ್ರತಿವಾಂಛಾಮಿ ಶೌನಕ ॥೧೫॥

ಶೌನಕರೇ! ನನ್ನ ಪಾಪಕೃತ್ಯದ ಬಗ್ಗೆ ನನಗೆ ಪಶ್ಚಾತ್ತಾಪವಿದೆ. ನಾನು ಅಧರ್ಮವನ್ನು ಮಾಡುವುದಿಲ್ಲ. ನಾನು ನನಗೆ ಶ್ರೇಯಸ್ಸನ್ನು ಬಯಸುತ್ತಿರುವೆ. ನಿಮ್ಮನ್ನು ಆಶ್ರಯಿಸಿದ್ದೇನೆ. ನಿಮ್ಮ ಪ್ರಸಾದವನ್ನು ಬಯಸಿದ್ದೇನೆ.

ಶೌನಕಃ

ಛಿತ್ತ್ವಾ ಸ್ತಂಭಂ ಚ ಮಾನಂ ಚ ಪ್ರೀತಿಮಿಚ್ಛಾಮಿ ತೇ ನೃಪ ।
ಸರ್ವಭೂತಹಿತೇ ತಿಷ್ಠ ಧರ್ಮಂ ಚೈವ ಪ್ರತಿಸ್ಮರ ॥೧೬॥

ರಾಜನೇ! ನಿನ್ನ ದರ್ಪ-ದುರಭಿಮಾನಗಳನ್ನು ಕತ್ತರಿಸಿ ನಿನಗೆ ಪ್ರೀತಿಯನ್ನು ತೋರುತ್ತೇನೆ. ಸರ್ವಭೂತಗಳಿಗೂ ಹಿತವಾಗುವಂತೆ ನಡೆದುಕೊ. ಧರ್ಮವನ್ನೇ ಚಿಂತಿಸು.

ನ ಭಯಾನ್ನ ಚ ಕಾರ್ಪಣ್ಯಾನ್ನ ಲೋಭಾತ್ತ್ವಾಮುಪಾಹ್ವಯೇ ।
ತಾಂ ಮೇ ದೇವಾ ಗಿರಂ ಸತ್ಯಾಂ ಶೃಣ್ವಂತು ಬ್ರಾಹ್ಮಣೈಃ ಸಹ ॥೧೭॥

ನಾನು ನಿನ್ನನ್ನು ನನ್ನ ಬಳಿಗೆ ಭಯದಿಂದ ಆಹ್ವಾನಿಸುವುದಿಲ್ಲ. ಕಾರ್ಪಣ್ಯದಿಂದಲೂ ಅಲ್ಲ. ಲೋಭದಿಂದಲೂ ಅಲ್ಲ. ನನ್ನ ಸತ್ಯವಾದ ಮಾತನ್ನು ದೇವತೆಗಳು ಮತ್ತು ಬ್ರಾಹ್ಮಣರು ದಯವಿಟ್ಟು ಕೇಳಲಿ.

ಸೋಽಹಂ ನ ಕೇನಚಿಚ್ಚಾರ್ಥೀ ತ್ವಾಂ ಚ ಧರ್ಮಮುಪಾಹ್ವಯೇ ।
ಕ್ರೋಶತಾಂ ಸರ್ವಭೂತಾನಾಮಹೋ ಧಿಗಿತಿ ಕುರ್ವತಾಮ್ ॥೧೮॥

ನನಗೆ ನಿನ್ನಿಂದ ಏನನ್ನಾದರೂ ಪಡೆಯುವ ಅಪೇಕ್ಷೆ ಇಲ್ಲ. ಎಲ್ಲರೂ ನಿನ್ನ ವಿರುದ್ಧ ಕೂಗುತ್ತಿರುವಾಗ, ಧಿಕ್ಕಾರವನ್ನು ಮಾಡುತ್ತಿರುವಾಗ ಧರ್ಮಾಪೇಕ್ಷಿಯಾದ ನಿನ್ನನ್ನು ನಾನು ಹತ್ತಿರ ಕರೆಯುತ್ತಿದ್ದೇನೆ.

ವಕ್ಷ್ಯಂತಿ ಮಾಮಧರ್ಮಜ್ಞಾ ವಕ್ಷ್ಯಂತ್ಯಸುಹೃದೋ ಜನಾಃ ।
(ವಕ್ಷ್ಯಂತಿ ಮಾಮಧರ್ಮಜ್ಞಂ ತ್ಯಕ್ಷಂತಿ ಸುಹೃದೋ ಜನಾಃ ।)
ವಾಚಸ್ತಾಃ ಸುಹೃದಃ ಶ್ರುತ್ವಾ ಸಂಜ್ವರಿಷ್ಯಂತಿ ಮೇ ಭೃಶಮ್ ॥೧೯॥

ಧರ್ಮವನ್ನು ತಿಳಿಯದವರು ನನ್ನನ್ನು ನಿಂದಿಸುತ್ತಾರೆ. ಒಳ್ಳೆಯ ಹೃದಯವಿಲ್ಲದ ಜನರು ನನ್ನನ್ನು ನಿಂದಿಸುತ್ತಾರೆ. (ನನ್ನ ಬಗ್ಗೆ ಸೌಹಾರ್ದವಿರುವ ಜನರು ನನ್ನನ್ನು ಧರ್ಮದ ಜ್ಞಾನವಿಲ್ಲದವನು ಎಂದು ಹೇಳುತ್ತಾರೆ. ನನ್ನನ್ನು ತ್ಯಜಿಸುತ್ತಾರೆ). ಕೆಲವು ಮಿತ್ರರು ನನ್ನ ಬಗ್ಗೆ ಆ ಮಾತುಗಳನ್ನು ಕೇಳಿ ಬಹಳ ಪರಿತಪಿಸುತ್ತಾರೆ.

ಕೇಚಿದೇವ ಮಹಾಪ್ರಾಜ್ಞಾಃ ಪರಿಜ್ಞಾಸ್ಯಂತಿ ಕಾರ್ಯತಾಮ್ ।
ಜಾನೀಹಿ ಮೇ ಕೃತಂ ತಾತ ಬ್ರಾಹ್ಮಣಾನ್ ಪ್ರತಿ ಭಾರತ ॥೨೦॥

ಕೆಲವೇ ಮಹಾಪ್ರಾಜ್ಞರು ನನ್ನ ಕೆಲಸವನ್ನು ಸರಿಯಾದ ಕೆಲಸ (ಅರ್ಹಕೆಲಸ) ಎಂದು ತಿಳಿಯುತ್ತಾರೆ. ಭರತಕುಲಸಂಜಾತ! ಪ್ರಿಯ! ನನ್ನ ಈ ಕೆಲಸ ಬ್ರಾಹ್ಮಣರಿಗಾಗಿಯೇ ಎಂದು ತಿಳಿದುಕೊ.

ಯಥಾ ತೇ ಮತ್ಕೃತೇ ಕ್ಷೇಮಂ ಲಭೇರಂಸ್ತತ್ತಥಾ ಕುರು ।
ಪ್ರತಿಜಾನೀಹಿ ಚಾದ್ರೋಹಂ ಬ್ರಾಹ್ಮಣಾನಾಂ ನರಾಧಿಪ ॥೨೧॥

ಆ ಬ್ರಾಹ್ಮಣರು ನನ್ನ ಈ ಕೆಲಸದಿಂದಾಗಿ ಕ್ಷೇಮವನ್ನು ಹೊಂದುವಂತೆ ನೀನು ಮಾಡು. ರಾಜನೆ! ಬ್ರಾಹ್ಮಣರಿಗೆ ದ್ರೋಹ ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡು.

ಜನಮೇಜಯಃ

ನೈವ ವಾಚಾ ನ ಮನಸಾ ನ ಪುನರ್ಜಾತು ಕರ್ಮಣಾ ।
ದ್ರೋಗ್ಧಾಸ್ಮಿ ಬ್ರಾಹ್ಮಣಾನ್ ವಿಪ್ರ ಚರಣಾವೇವ ತೇ ಸ್ಪೃಶೇ ॥೨೨॥

ವಿಪ್ರರೆ! ಎಂದೂ ನಾನು ಬ್ರಾಹ್ಮಣರಿಗೆ ಮಾತಿನಿಂದ ದ್ರೋಹ ಮಾಡುವುದಿಲ್ಲ. ಮನಸ್ಸಿನಿಂದ ದ್ರೋಹ ಮಾಡುವುದಿಲ್ಲ. ಕೃತಿಯಿಂದ ದ್ರೋಹ ಮಾಡುವುದಿಲ್ಲ. ನಿಮ್ಮ ಪಾದಗಳನ್ನು ಮುಟ್ಟಿ ಪ್ರತಿಜ್ಞೆ ಮಾಡುವೆನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಆಪದ್ಧರ್ಮೇ ಏಕೋನವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯವು ಮುಗಿಯಿತು.

★ ★ ★ ★

ಇಪ್ಪತ್ತನೆಯ ಅಧ್ಯಾಯ

ಬ್ರಹ್ಮಹತ್ಯಾ ಪಾಪದಿಂದ ಬಿಡುಗಡೆಯ ದಾರಿಯ ಉಪದೇಶ.

ಶೌನಕಃ

ತಸ್ಮಾತ್ ತೇಽಹಂ ಪ್ರವಕ್ಷ್ಯಾಮಿ ಧರ್ಮಮಾವೃತ್ತಚೇತಸೇ ।
ಶ್ರೀಮಾನ್ ಮಹಾಬಲಸ್ತುಷ್ಟೋ ಯಸ್ತ್ವಂ ಧರ್ಮಮವೇಕ್ಷಸೇ ॥೧॥

ಆದ್ದರಿಂದ ಬ್ರಾಹ್ಮಣರ ಬಗ್ಗೆ ನಿನಗೆ ಇರುವ ಗೌರವ ಭಾವನೆಯ ಕಾರಣದಿಂದ ಒಳ್ಳೆಯ ನಡವಳಿಕೆಯ ಮನಸ್ಸಿರುವ ನಿನಗೆ ಧರ್ಮವನ್ನು ಉಪದೇಶಿಸುತ್ತೇನೆ. ಸತ್ವಸಂಪನ್ನನೂ, ಮಹಾಬಲಶಾಲಿಯೂ, ಸಂತುಷ್ಟನೂ ಆಗಿರುವ ನಿನಗೆ ಧರ್ಮದ ಕಡೆ ದೃಷ್ಟಿಯಿದೆ.

ಪುರಸ್ತಾದ್ದಾರುಣೋ ಭೂತ್ವಾ ಸುಚಿತ್ರತರಮೇವ ತತ್ ।
ಅನುಗೃಹ್ಣಂತಿ ಭೂತಾನಿ ಸ್ವೇನ ವೃತ್ತೇನ ಪಾರ್ಥಿವ ॥೨॥

ಕೃತ್ಸ್ನೋ ನೂನಂ ಸದಸತೀ ಇತಿ ಲೋಕೋ ವ್ಯವಸ್ಯತಿ ।
ಯತ್ರ ತ್ವಂ ತಾದೃಶೋ ಭೂತ್ವಾ ಧರ್ಮಮದ್ಯಾನುಪಶ್ಯಸಿ ॥೩॥

ರಾಜನೆ! ಮೊದಲು ದಾರುಣ ನಡತೆಯಿಂದ ಇದ್ದವನಿಗೆ, ಅನಂತರ ಅವನಲ್ಲಿ ಉಂಟಾಗಿರುವ ಒಳ್ಳೆಯ ನಡತೆಯನ್ನು ಪರಿಗಣಿಸಿ ಭೂತಾಭಿಮಾನಿ ದೇವತೆಗಳು ಅನುಗ್ರಹಿಸಿರುತ್ತಾರೆ. ಇದು ಬಹಳ ಅದ್ಭುತ ವಿಷಯ. ಇದನ್ನು ನೋಡಿ ಲೋಕವು ಎಲ್ಲವೂ/ ಎಲ್ಲರೂ ಒಳ್ಳೆಯದು/ ಒಳ್ಳೆಯವರು ಆಗಿರುತ್ತವೆ/ ಆಗಿರುತ್ತಾರೆ. ಕೆಟ್ಟದ್ದೂ/ ಕೆಟ್ಟವರೂ ಆಗಿರುತ್ತವೆ/ ಆಗಿರುತ್ತಾರೆ ಎಂದು ನಿರ್ಣಯಿಸುತ್ತಾರೆ. ಅವರ ನಿರ್ಣಯಕ್ಕೆ ನೀನೇ ನಿದರ್ಶನ. ನೀನು ಮೊದಲು ಹಾಗೆ ಇದ್ದು (ಅತಿ ಕೆಟ್ಟವನಾಗಿದ್ದು) ಈಗ ಧರ್ಮವನ್ನು ಅನುಕೂಲ- ಅನುಗ್ರಹಕಾರಕ ಎಂದು ನೋಡುತ್ತಿರುವಿ.

ಹಿತ್ವಾ ಸುರುಚಿರಂ ಭಕ್ಷ್ಯಂ ಭೋಗಾಂಶ್ಚ ತಪ ಆಸ್ಥಿತಃ ।
ಇತ್ಯೇತದಪಿ ಭೂತಾನಾಮದ್ಭುತಂ ಜನಮೇಜಯ ॥೪॥

ಜನಮೇಜಯ! ಬಹಳ ಆಸ್ವಾದಕರವಾದ ಭಕ್ಷ್ಯಗಳನ್ನೂ-ಭೋಗಗಳನ್ನು ಬಿಟ್ಟು ತಪಸ್ಸನು ಕೈಗೊಂಡಿರುವಿ. ಇದು ಎಲ್ಲ ಚೇತನಗಳಿಗೂ-ಭೂತಾಭಿಮಾನಿಗಳಿಗೂ ಅದ್ಭುತ ಎನಿಸುತ್ತವೆ.

ಯೋ ದುರ್ಬಲೋ ಭವೇದ್ದಾತಾ ಕೃಪಣೋ ವಾ ತಪೋಧನಃ ।
ಅನಾಶ್ಚರ್ಯಂ ತದಿತ್ಯಾಹುರ್ನಾತಿದೂರೇ ಹಿ ವರ್ತತೇ ॥೫॥

ದುರ್ಬಲನು ದಾನಶೀಲನಾಗಬಹುದು. ಕೃಪಣನು ತಪೋಧನ ಆಗಬಹುದು! ಅದು ಆಶ್ಚರ್ಯವಲ್ಲ ಎಂದು ಹೇಳುತ್ತಾರೆ. ಈ ಹೇಳಿಕೆಗೆ ನಿದರ್ಶನವಾಗಿ ನೀನು ಹತ್ತಿರದಲ್ಲೇ ಇರುವಿ.

ತಪ ಏವ ಹಿ ಕಾರ್ಪಣ್ಯಂ ಸಮರ್ಥಮಸಮೀಹಿತುಮ್ ।
ತಸ್ಮಾತ್ ಸಮೀಕ್ಷ್ಯಯೈವ ಸ್ಯಾದ್ ಭವೇತ್ ತಸ್ಮಿಂಸ್ತತೋ ಗುಣಃ ॥೬॥

ಕಾರ್ಪಣ್ಯವನ್ನು ಮಾಡದಿರಲು ತಪಸ್ಸೇ ಸಮರ್ಥ ದಾರಿ. ಆದ್ದರಿಂದ ಸರಿಯಾದ ಸಮೀಕ್ಷೆಯ ಇರಬೇಕು. ಸಮೀಕ್ಷೆಯಿಂದ ತಪಸ್ಸಿನಲ್ಲಿ ಉತ್ಕರ್ಷವು ಉಂಟಾಗುತ್ತದೆ.

ಯಜ್ಞೋ ದಾನಂ ದಯಾ ವೇದಾಃ ಸತ್ಯಂ ಚ ಪೃಥಿವೀಪತೇ ।
ಪಂಚೈತಾನಿ ಪವಿತ್ರಾಣಿ ಷಷ್ಠಂ ಸುಚರಿತಂ ತಪಃ ॥೭॥

ಭೂಪತಿ! ಯಜ್ಞ-ದಾನ-ದಯ-ವೇದ-ಸತ್ಯ- ಈ ಐದು ಪವಿತ್ರ. ಸರಿಯಾಗಿ ಆಚರಿಸಲ್ಪಡುವ ತಪಸ್ ಆರನೆಯದು.

ತದೇವ ರಾಜ್ಞಾಂ ಪರಮಂ ಪವಿತ್ರಂ ಜನಮೇಜಯ ।
ತೇನ ಸಮ್ಯಗ್ಗೃಹೀತೇನ ಶ್ರೇಯಾಂಸಂ ಧರ್ಮಮಾಪ್ಸ್ಯಸಿ ॥೮॥

ಜನಮೇಜಯ! ರಾಜರಿಗೆ ಅದೇ=ತಪಸ್ಸೇ ಪರಮಪವಿತ್ರ. ಸರಿಯಾಗಿ ಆಚರಿಸಲ್ಪಟ್ಟ ತಪಸ್ಸಿನಿಂದ ಶ್ರೇಷ್ಠ ಧರ್ಮವನ್ನು (ಧರ್ಮಫಲವನ್ನು) ಹೊಂದುವಿ.

ಪುಣ್ಯದೇಶಾಭಿಗಮನಂ ಪವಿತ್ರಂ ಪರಮಂ ಸ್ಮೃತಮ್ ।
ಅಪಿ ಹ್ಯುದಾಹರಂತೀಮಾ ಗಾಥಾ ಗೀತಾ ಯಯಾತಿನಾ ॥೯॥

ಪುಣ್ಯಸ್ಥಳಗಳಿಗೆ ಯಾತ್ರೆಯು ಪರಮಪವಿತ್ರ ಎಂದು ಪೂರ್ವಸೂರಿಗಳ ಚಿಂತನೆಯಿದೆ. ಯಯಾತಿಯು ಹಾಡಿದ ಈ ಗಾಥೆಗಳನ್ನು ಉದಾಹರಿಸುತ್ತಾರೆ.

ಯೋ ಮರ್ತ್ಯಃ ಪ್ರತಿಪದ್ಯೇತ ಆಯುರ್ದೇವೇತ ವಾ ಪುನಃ ।
ಯಜ್ಞಮೇಕಾಂತತಃ ಕೃತ್ವಾ ತತ್ ಸನ್ನ್ಯಸ್ಯ ಪುನಶ್ಚರೇತ್ ॥೧೦॥

ಯಾವ ಮನುಷ್ಯನು ಆಯುಷ್ಯವನ್ನು ಹೊಂದುತ್ತಾನೋ, ಜೀವಿಸುತ್ತಾನೋ ಅವನು ಚೆನ್ನಾಗಿ ಯಜ್ಞವನ್ನು ಮಾಡಬೇಕು. ಅದನ್ನು ಹರಿಚರಣಗಳಿಗೆ ಅರ್ಪಿಸಿ ತೀರ್ಥಯಾತ್ರೆಯನ್ನು ಮಾಡಬೇಕು.

ಪುಣ್ಯಮಾಹುಃ ಕುರುಕ್ಷೇತ್ರಂ ಸರಸ್ವತ್ಯಾಂ ಪೃಥೂದಕಮ್ ।
ಯತ್ರಾವಗಾಹ್ಯ ಪೀತ್ವಾ ವಾ ನೈನಂ ಶ್ವೋ ಮರಣಂ ತಪೇತ್ ॥೧೧॥

ಕುರುಕ್ಷೇತ್ರವನ್ನು ಪುಣ್ಯಕರ ಎಂದು ಹೇಳುತ್ತಾರೆ. ಸರಸ್ವತೀ ನದಿಯ ಬೇರೆ ಬೇರೆ ತೀರ್ಥಗಳನ್ನು ಪುಣ್ಯಕರ ಎಂದು ಹೇಳುತ್ತಾರೆ. ಈ ತೀರ್ಥಗಳಲ್ಲಿ ಅವಗಾಹನ ಮಾಡಿದವರಿಗೆ, ಈ ತೀರ್ಥವನು ಪಾನ ಮಾಡಿದವನಿಗೆ ನಾಳೆಯೇ ಸಂಭವಿಸುವ ಮರಣವೂ ಕೂಡ ತಾಪವುಂಟು ಮಾಡುವುದಿಲ್ಲ (ಇಲ್ಲಿ ಅವಗಾಹನ-ಪಾನಗಳಿಂದ ಎಲ್ಲ ಪಾಪಗಳ ಪರಿಹಾರವಾಗಿರುತ್ತದೆ).

ಮಹಾಸರಃ ಪುಷ್ಕರಾಣಿ ಪ್ರಭಾಸೋತ್ತರಮಾನಸೇ ।
ಕಾಲೋದಂ ತ್ವೇವ ಗಂತಾಸಿ ಲಬ್ಧಾಯುರ್ಜೀವಿತೇ ಪುನಃ ॥೧೨॥

ಮಹಾಸರೋವರ, ಪುಷ್ಕರಗಳು, ಪ್ರಭಾಸ, ಉತ್ತರಮಾನಸ, ಕಾಲೋದ - ಇವುಗಳಿಗೆ ಹೋಗು. ಮತ್ತಷ್ಟು ಆಯುಷ್ಯವು ನಿನಗೆ ಲಬ್ಧವಾಗುತ್ತದೆ.

ಸರಸ್ವತೀದೃಷದ್ವತ್ಯೌ ಸೇವಮಾನೋऽನುಸಂಚರೇಃ ।
ಸ್ವಾಧ್ಯಾಯಶೀಲಃ ಸ್ಥಾನೇಷು ಸರ್ವೇಷು ಸಮುಪಸ್ಪೃಶೇಃ ॥೧೩॥

ಸರಸ್ವತಿ-ದೃಷದ್ವತಿಗಳ ಸೇವೆಯನ್ನು ಮಾಡಿ ಸಂಚಾರವನ್ನು ಮುಂದುವರಿಸು. ಎಲ್ಲ ಸ್ಥಾನಗಳಲ್ಲಿ ವೇದಾಧ್ಯಯನಶೀಲನಾಗಿ ಸ್ನಾನ ಮಾಡು.

ತ್ಯಾಗಧರ್ಮಂ ಪವಿತ್ರಾಣಾಂ ಸಂನ್ಯಾಸಂ ಪರಮಬ್ರವೀತ್ ।
ಅತ್ರಾಪ್ಯುದಾಹರಂತೀಮಾ ಗಾಥಾಃ ಸತ್ಯವತಾ ಕೃತಾಃ ॥೧೪॥

ಪವಿತ್ರಕಾರ್ಯಗಳಲ್ಲಿ ಸರ್ವಸಂಗಪರಿತ್ಯಾಗವಿರುವ ಸಂನ್ಯಾಸವನ್ನು ಶ್ರೇಷ್ಠ ಎಂದು ಹೇಳುತ್ತಾರೆ. ಈ ವಿಷಯದಲ್ಲಿ ಸತ್ಯವಾನ್ ಹೇಳಿದ ಗಾಥೆಗಳನ್ನು ಉದಾಹರಿಸುತ್ತಾರೆ.

ಯಥಾ ಕುಮಾರಃ ಸದ್ಯೋ ವೈ ನೈವ ಪುಣ್ಯೋ ನ ಪಾಪಕೃತ್ ।
ನ ಹ್ಯಸ್ತಿ ಸರ್ವಭೂತೇಷು ದುಃಖಮಸ್ಮಿನ್ ಕುತಃ ಸುಖಮ್ ॥೧೫॥

ಕುಮಾರ ವಯಸ್ಸಿನವನು ಆಗ ಪುಣ್ಯವನ್ನು ಮಾಡುವುದಿಲ್ಲ, ಪಾಪವನ್ನೂ ಮಾಡುವುದಿಲ್ಲ. ಎಲ್ಲರೂ ಹಾಗೆ ಇರಬೇಕು. ಎಲ್ಲ ಪ್ರಾಣಿಗಳಲ್ಲಿ ದುಃಖವಿಲ್ಲದಿದ್ದರೆ ಸುಖವು ಹೇಗೆ ತಾನೇ ಇದ್ದೀತು?

ಏವಂ ಪ್ರಕೃತಿಭೂತಾನಾಂ ಸರ್ವಸಂಸರ್ಗಯಾಯಿನಾಮ್ ।
ತ್ಯಜತಾಂ ಜೀವಿತಂ ಪ್ರಾಯೋ ವಿವೃತೇ ಪುಣ್ಯಪಾತಕೇ ॥೧೬॥

ಎಲ್ಲರಿಗೂ ದುಃಖವುಂಟು ಮಾಡುವ, ಆದ್ದರಿಂದಲೇ, ಸರ್ವಯೋನಿಗಳಲ್ಲಿ ಹುಟ್ಟುವ ಮತ್ತು ಸಾಯುವ ಜೀವಗಳ ಪುಣ್ಯ ಮತ್ತು ಪಾಪಗಳು ಅವುಗಳ ಹುಟ್ಟು-ಸಾವುಗಳಿಂದ ವಿವರಿಸಲ್ಪಡುತ್ತವೆ.

ಯತ್ತೇ ವ ರಾಜನ್ ಸ್ಥಾಯಿಷ್ಯಂ ಕಾರ್ಯಾಣಾಂ ತದ್ವದಾಮಿ ತೇ ।
ಬಲೇನ ಸಂವಿಭಾಗೈಶ್ಚ ಜಯ ಸ್ವರ್ಗಂ ಪುನೀಷ್ವ ಚ ॥೧೭॥

ರಾಜನೆ! ಕಾರ್ಯಗಳಲ್ಲಿ ಯಾವುದು ಗಟ್ಟಿಯಾಗಿ ನಿಲ್ಲುವುದೋ ಅದನ್ನು ಹೇಳುತ್ತೇನೆ. ನೀನು ಬಲದಿಂದ (ಧರ್ಮನಿಷ್ಠೆಯಿಂದ) ಮತ್ತು ದಾನಗಳಿಂದ ಸ್ವರ್ಗವನ್ನು ಜಯಿಸು. ಪವಿತ್ರನಾಗು.

ಯಸ್ಯೈವಂ ಬಲಮೋಜಶ್ಚ ಸ ಧರ್ಮಸ್ಯ ಪ್ರಭುರ್ನರಃ ।
ಬ್ರಾಹ್ಮಣಾನಾಂ ಸುಖಾರ್ಥಂ ತ್ವಂ ಪರ್ಯೇಹಿ ಪೃಥಿವೀಮಿಮಾಮ್ ॥

ಯಾರಿಗೆ ಬಲ ಮತ್ತು ಇಂದ್ರಿಯಪಾಟವಗಳು ಇರುತ್ತವೋ ಆ ಮನುಷ್ಯನು ಧರ್ಮನಿಷ್ಠನಾಗಲು ಸಮರ್ಥ. ಬ್ರಾಹ್ಮಣರ ಸುಖಕ್ಕಾಗಿ ನೀನು ಈ ಭೂಮಿಯನ್ನು ರಕ್ಷಿಸು.

ಯಥೈವೈನಾನ್ ಪುರಾಕ್ಷೈಪ್ಸೀಸ್ತಥೈವೈನಾನ್ ಪ್ರಸಾದಯ ।
ಅಪಿ ಧಿಕ್ಕೃಯಮಾಣೋಽಪಿ ತ್ಯಜ್ಯಮಾನೋಽಪ್ಯನೇಕಧಾ ॥೧೯॥

ಹಿಂದೆ ಇವರನ್ನು ಹೇಗೆ ದೂರ ಮಾಡಿದೆಯೋ ಹಾಗೆಯೇ ಈಗ ಇವರನ್ನು ಸಂತೋಷಗೊಳಿಸು. ಅವರು ನಿನ್ನನ್ನು ಅನೇಕ ರೀತಿಯಲ್ಲಿ ಧಿಕ್ಕರಿಸಿದರೂ, ತ್ಯಜಿಸಿದರೂ ಅವರನ್ನು ಸಂತೋಷಗೊಳಿಸು.

ಆತ್ಮನೋ ದರ್ಶನಂ ವಿದ್ವನ್ನಾಹರ್ತಾಸ್ಮೀತಿ ಮಾ ಕ್ರುಧಃ ।
ಘಟಮಾನಃ ಸ್ವಕಾರ್ಯೇಷು ಕುರು ನೈಃಶ್ರೇಯಸಂ ಪರಮ್ ॥೨೦॥

ಜ್ಞಾನಿಯೇ! ಶತ್ರುಗಳನ್ನು ನಿಗ್ರಹ ಮಾಡುತ್ತೇನೆ ಎಂಬ ಸಿದ್ಧಾಂತವು ನಿನಗಿರಲಿ. ಕೋಪಿಸಬೇಡ. ನಿನ್ನ ಕರ್ತವ್ಯಗಳಲ್ಲಿ ತೊಡಗಿ ಮುಕ್ತಿಯನ್ನು ಪರಮಗುರಿಯಾಗಿಸಿಕೊ.

ಹಿಮಾಗ್ನಿಗೋಪಸದೃಶೋ ರಾಜಾ ಭವತಿ ಕಶ್ಚನ ।
ಲಾಂಗಲಾಶನಿಕಲ್ಪೋ ವಾ ಭವತ್ಯನ್ಯಃ ಪರಂತಪ ॥೨೧॥

ಪರಂತಪ! ಒಬ್ಬ ರಾಜನು ಹಿಮದಂತೆ (ಶಾಂತನು) ಅಗ್ನಿಯಂತೆ (ಕ್ರೂರನು) ಗೋಪಾಲಕನಂತೆ (ಸರ್ವೋಪಕಾರಿಯೂ) ಇರುತ್ತಾನೆ. ಮತ್ತೊಬ್ಬ ರಾಜನು

ನೇಗಿಲಿನಂತೆ (ಶತ್ರುಗಳನ್ನು ಎಳೆಯುವವನು), ಸಿಡಿಲಿನಂತೆ (ಅನಿರೀಕ್ಷಿತವಾಗಿ ಶತ್ರುಗಳ ಮೇಲೆ ಬೀಳುವವನು) ಆಗಿರುತ್ತಾನೆ.

ನ ವಿಶೇಷೇಣ ಗಂತವ್ಯಮಚಿಕಿತ್ಸೇನ ವಾ ಪುನಃ ।
ನ ಜಾತು ನಾಹಮಸ್ಮೀತಿ ಪ್ರಸಕ್ತವ್ಯಮಸಾಧುಷು ॥೨೨॥

ಶಕ್ತಿಯನ್ನು ಮೀರಿ ಕಾರ್ಯಸಾಧನೆಗೆ ಹೋಗಬಾರದು. ವಿಮರ್ಶೆ ಮಾಡದೆಯೂ ಹೋಗಬಾರದು. ಆತ್ಮನಾಶವಾಗುವಂತೆ ಕೆಟ್ಟವರ ಸಂಗವನ್ನು ಮಾಡಬಾರದು.

ವಿಕರ್ಮಣಾ ತಪ್ಯಮಾನಃ ಪಾದಾತ್ ಪಾಪಸ್ಯ ಮುಚ್ಯತೇ ।
ನೈತತ್ ಕಾರ್ಯಂ ಪುನರಿತಿ ದ್ವಿತೀಯಾತ್ ಪರಿಮುಚ್ಯತೇ ।
ಚರಿಷ್ಯೇ ಧರ್ಮಮೇವೇತಿ ತೃತೀಯಾತ್ ಪರಿಮುಚ್ಯತೇ ॥೨೩॥

ವಿರುದ್ಧಕರ್ಮ (ಪಾಪಕರ್ಮ)ಗಳನ್ನು ಮಾಡಿದ್ದಕ್ಕಾಗಿ ಪಶ್ಚಾತ್ತಾಪವಾದರೆ ಪಾಪದ ಕಾಲುಭಾಗದಿಂದ ಬಿಡುಗಡೆಯಾಗುತ್ತದೆ. ಇನ್ನೊಮ್ಮೆ ಇಂತಹ ಪಾಪವನ್ನು ಮಾಡುವುದಿಲ್ಲ ಎಂದು ನಿಶ್ಚಯಿಸಿದರೆ ಪಾಪದ ಎರಡನೆಯ ಪಾದದಿಂದ ಬಿಡುಗಡೆ ಆಗುತ್ತದೆ. ಇನ್ನು ಮುಂದೆ ಧರ್ಮವನ್ನೇ ಆಚರಿಸುತ್ತೇನೆ ಎಂದು ನಿಶ್ಚಯಿಸಿದವನಿಗೆ ಪಾಪದ ಮೂರನೆಯ ಪಾದದಿಂದ ಬಿಡುಗಡೆಯಾಗುತ್ತದೆ.

ಕಲ್ಯಾಣಮನುಮಂತವ್ಯಂ ಪುರುಷೇಣ ಬುಭೂಷತಾ ।
ಯೇ ಸುಗಂಧೀನಿ ಸೇವಂತೇ ತಥಾಗಂಧಾ ಭವಂತಿ ತೇ ।
ಯೇ ದುರ್ಗಂಧೀನಿ ಸೇವಂತೇ ತಥಾಗಂಧಾ ಭವಂತಿ ತೇ ॥೨೪॥

ಸುಸ್ಥಿತಿಯಲ್ಲಿ ಇರಲು ಬಯಸುವ ಪುರುಷನು ಶುಭಕಾರ್ಯಗಳನ್ನು ಅನುಮೋದಿಸಬೇಕು. ಯಾರು ಸುಗಂಧದ್ರವ್ಯಗಳನ್ನು ಉಪಯೋಗಿಸುತ್ತಾನೋ ಅವರು ಸುಗಂಧವುಳ್ಳವರಾಗುತ್ತಾರೆ. ಯಾರು ದುರ್ಗಂಧ ಪದಾರ್ಥಗಳನು ಬಳಸುತ್ತಾರೋ ಅವರು ದುರ್ಗಂಧವುಳ್ಳವರಾಗುತ್ತಾರೆ.

ತಪಶ್ಚರ್ಯಾಪರಃ ಸದ್ಯಃ ಪಾಪಾದ್ಧಿ ಪರಿಮುಚ್ಯತೇ ।
ಸಂವತ್ಸರಮುಪಾಸ್ಯಾಗ್ನಿಮಭಿಶಸ್ತಃ ಪ್ರಮುಚ್ಯತೇ ।
ತ್ರೀಣಿ ವರ್ಷಾಣ್ಯುಪಾಸ್ಯಾಗ್ನಿಂ ಭ್ರೂಣಹಾ ವಿಪ್ರಮುಚ್ಯತೇ ॥೨೫॥

ತಪಶ್ಚರ್ಯೆಯಲ್ಲಿ ನಿರತನಾದವನು ಬೇಗನೆ ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಶಾಪಕ್ಕೊಳಗಾದವನು ಅಥವಾ ಪಾಪಿಯು ಒಂದು ವರ್ಷ ಅಗ್ನಿಯನ್ನು ಉಪಾಸನೆ ಮಾಡಿ ಅವುಗಳಿಂದ ಬಿಡುಗಡೆಯನ್ನು ಪಡೆಯುತ್ತಾನೆ. ಭ್ರೂಣಹತ್ಯೆ ಮಾಡಿದವನು ಮೂರು ವರ್ಷ ಅಗ್ನಿಯ ಉಪಾಸನೆಯನ್ನು ಮಾಡಿ ಆ ಪಾಪದಿಂದ ಬಿಡುಗಡೆಯನ್ನು ಪಡೆಯುತ್ತಾನೆ.

ಯಾವತಃ ಪ್ರಾಣಿನೋ ಹನ್ಯಾತ್ ತಜ್ಜಾತೀಯಾನ್ಸ್ವಭಾವತಃ ।
ಪ್ರಣೀಯಮಾನಾನುನ್ಮುಚ್ಯ ಪ್ರಾಣಹಾ ವಿಪ್ರಮುಚ್ಯತೇ ॥೨೬॥

ಎಷ್ಟು ಪ್ರಾಣಿಗಳ ಹತ್ಯೆಯನ್ನು ಮಾಡಿರುತ್ತಾನೋ, ಆಯಾಯಾ ಜಾತಿಯ ಅಷ್ಟೇ ಪ್ರಾಣಿಗಳನ್ನು ಸಾಯುವ ಸ್ಥಿತಿಯಿಂದ ಬಿಡುಗಡೆ ಮಾಡಿದರೆ ಆ ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಅಪಿ ವಾಪ್ಸು ನಿಮಜ್ಜೇತ ತ್ರಿರ್ಜಪನ್ನಘಮರ್ಷಣಮ್ ।
ಯಥಾಶ್ವಮೇಧಾವಭೃಥಸ್ತಥಾ ತನ್ಮನುರಬ್ರವೀತ್ ॥೨೭॥

ಮತ್ತು ಅಘಮರ್ಷಣಸೂಕ್ತವನ್ನು ಮೂರು ಬಾರಿ ಜಪಿಸುತ್ತಾ ನೀರಿನಲ್ಲಿ ಅವಗಾಹನ ಮಾಡುವವನು ಅಶ್ವಮೇಧದ ಅವಭೃಥವನ್ನು ಮಾಡಿದವನಿಗೆ ಸಮಾನ. ಹೀಗೆ ಮನು ಹೇಳಿದನು.

ಕ್ಷಿಪ್ರಂ ಪ್ರಣುದತೇ ಪಾಪಂ ಸತ್ಕಾರಂ ಲಭತೇ ತಥಾ ।
ಅಪಿ ಚೈನಂ ಪ್ರಸೀದಂತಿ ಭೂತಾನಿ ಜಡಮೂಕವತ್ ॥೨೮॥

ಈ ಅಘಮರ್ಷಣಸ್ನಾನವು ಶೀಘ್ರವಾಗಿ ಪಾಪಗಳನ್ನು ದೂರ ಮಾಡುತ್ತದೆ. ಈ ವ್ಯಕ್ತಿಯು ಸತ್ಕಾರಗಳನ್ನು ಪಡೆಯುತ್ತಾನೆ. ಜಡನಂತಿದ್ದ, ಮೂಕನಂತಿದ್ದ ಇವನ ಮೇಲೆ ಎಲ್ಲ ಭೂತಾಭಿಮಾನಿಗಳು ಪ್ರಸನ್ನರಾಗುತ್ತಾರೆ.

ಬೃಹಸ್ಪತಿಂ ದೇವಗುರುಂ ಸುರಾಸುರಾಃ
ಸಮೇತ್ಯ ಸರ್ವೇ ನೃಪತೇಽನ್ವಯುಂಜನ್ ।
ಧರ್ಮೇ ಫಲಂ ವೇತ್ಥ ಕೃತೇ ಮಹರ್ಷೇ
ತಥೇತರಸ್ಮಿನ್ನರಕೇ ಪಾಪಲೋಕೇ ॥೨೯॥

ರಾಜನೆ! ದೇವತೆಗಳು ಮತ್ತು ಅಸುರರು ದೇವಗುರು ಬೃಹಸ್ಪತ್ಯಾಚಾರ್ಯರ ಬಳಿ ಹೋಗಿ ಕೇಳಿದರು. ಮಹರ್ಷಿಗಳೇ! ಧರ್ಮಾಚರಣೆಯ ಫಲವನ್ನು ನೀವು ತಿಳಿದಿದ್ದೀರಿ. ಅಧರ್ಮದ ಫಲವನ್ನು ನರಕದಲ್ಲಿ ಅನುಭವಿಸುತ್ತಾರೆಂದು ತಿಳಿದಿರುವಿರಿ.

ಉಭೇ ತು ಯಸ್ಯ ಸುಕೃತೇ ಭವೇತಾಂ
ಕಿಂ ಸ್ವಿತ್ತಯೋಸ್ತತ್ರ ಜಯೋತ್ತರಂ ಸ್ಯಾತ್ ।
ಆಚಕ್ಷ್ವ ನಃ ಕರ್ಮಫಲಂ ಮಹರ್ಷೇ
ಕಥಂ ಪಾಪಂ ನುದತೇ ಪುಣ್ಯಶೀಲಃ ॥೩೦॥

ಯಾರು ಧರ್ಮ-ಅಧರ್ಮ ಇವೆರಡನ್ನೂ ಬಹಳ ಮಾಡಿರುತ್ತಾನೋ ಅವನಿಗೆ ಅವೆರಡರ ಫಲವೂ ಆಗುತ್ತದೆಯೇ? ಮಹರ್ಷಿಗಳೇ ನಮಗೆ ಕರ್ಮದ ಫಲವನ್ನು ಹೇಳಿರಿ. ಪುಣ್ಯಶೀಲನಾದವನ ಪಾಪವು ಹೇಗೆ ಪರಿಹಾರವಾಗುತ್ತದೆ?

ಬೃಹಸ್ಪತಿಃ

ಕೃತ್ವಾ ಪಾಪಂ ಪೂರ್ವಮಬುದ್ಧಿಪೂರ್ವಂ
ಪುಣ್ಯಾನಿ ಯಃ ಕುರುತೇ ಬುದ್ಧಿಪೂರ್ವಮ್ ।
ಸ ತತ್ ಪಾಪಂ ನುದತೇ ಪುಣ್ಯಶೀಲೋ
ವಾಸೋ ಯಥಾ ಮಲಿನಂ ಕ್ಷಾರಯುಕ್ತ್ಯಾ ॥೩೧॥

ತಿಳಿಯದೆ ಮೊದಲು ಪಾಪವನ್ನು ಮಾಡಿದವನು ಅನಂತರ ಪ್ರಜ್ಞಾ ಪೂರ್ವಕವಾಗಿ ಪುಣ್ಯಕರ್ಮಗಳನ್ನು ಮಾಡಿದರೆ, ಆ ಪುಣ್ಯಶೀಲನ ಪೂರ್ವಪಾಪಗಳು ದೂರವಾಗುತ್ತವೆ. ಕ್ಷಾರಸಂಯೋಜನೆಯಿಂದ ಬಟ್ಟೆಯ ಕೊಳೆಯು ದೂರವಾಗುವಂತೆ.

ಪಾಪಂ ಕೃತ್ವಾ ಹಿ ಮನ್ಯೇತ ನಾಹಮಸ್ಮೀತಿ ಪೂರುಷಃ ।
ಚಿಕೀರ್ಷೇದೇವ ಕಲ್ಯಾಣಂ ಶ್ರದ್ದಧಾನೋನಸೂಯಕಃ ॥೩೨॥

ಪಾಪಗಳನು ಮಾಡಿದ ಪುರುಷನು 'ನಾನು ಹಾಳಾಗಿ ಹೋದೆನು' ಎಂದು ಭಾವಿಸಬೇಕು. ಅಂದರೆ, ಪಶ್ಚಾತ್ತಾಪ ಪಡಬೇಕು. ಶ್ರದ್ಧಾವಂತನಾಗಿ, ಪರರ ಗುಣಗಳಲ್ಲಿ ದೋಷವನ್ನು ತೋರಿಸದೆ ಸತ್ಕರ್ಮಗಳನ್ನು ಮಾಡಬೇಕು.

ಛಿದ್ರಾಣಿ ವಸನಸ್ಯೇವ ಸಾಧುನಾ ಸಂವೃಣೋತಿ ಸಃ ।
ಯಃ ಪಾಪಂ ಪುರುಷಃ ಕೃತ್ವಾ ಕಲ್ಯಾಣಮಭಿಪದ್ಯತೇ ॥೩೩॥

ಪಾಪಗಳನ್ನು ಮಾಡಿದ ಯಾವ ಪುರುಷನು ಸತ್ಕರ್ಮಗಳಿಂದ, ಕುಶಲ ದರ್ಜಿಯು ಬಟ್ಟೆಯ ಛಿದ್ರಗಳನ್ನು ಮುಚ್ಚುವಂತೆ, ಪಾಪಗಳನ್ನು ಮುಚ್ಚುವನೋ ಅವನು ಶ್ರೇಯಸ್ಸನ್ನು ಹೊಂದುತ್ತಾನೆ.

ಯಥಾದಿತ್ಯಃ ಪುನರುದ್ಯಂಸ್ತಮಃ ಸರ್ವಂ ವ್ಯಪೋಹತಿ ।
ಕಲ್ಯಾಣಮಾಚರನ್ನೇವಂ ಸರ್ವಂ ಪಾಪಂ ವ್ಯಪೋಹತಿ ॥೩೪॥

ಉದಯಿಸುವ ಸೂರ್ಯನು ಕತ್ತಲನ್ನು ಸಂಪೂರ್ಣವಾಗಿ ನಾಶಮಾಡುವಂತೆ ಸತ್ಕರ್ಮಗಳನ್ನು ಮಾಡುವವನು ಪಾಪಗಳನ್ನು ನಾಶ ಮಾಡುತ್ತಾನೆ.

ಭೀಷ್ಮಃ

ಏವಮುಕ್ತ್ವಾ ಸ ರಾಜಾನಮಿಂದ್ರೋತೋ ಜನಮೇಜಯಮ್ ।
ಯಾಜಯಾಮಾಸ ವಿಧಿವದಾಪ್ತಿಮೇಧೇನ ಶೌನಕಃ ॥೩೫॥

ಆ ಶೌನಕವಂಶದ ಇಂದ್ರೋತನು ರಾಜ ಜನಮೇಜಯನಿಗೆ ಹೀಗೆ ಹೇಳಿ, ಅವನಿಂದ ವಿಧಿಗೆ ಅನುಗುಣವಾಗಿ ಅಶ್ವಮೇಧವನ್ನು ಮಾಡಿಸಿದನು.

ತತಃ ಸ ರಾಜಾ ವ್ಯಪನೀತಕಲ್ಮಷಃ
ಶ್ರಿಯಾ ಯುತಃ ಪ್ರಜ್ವಲಿತಾಗ್ನಿರೂಪಯಾ ।
ವಿವೇಶ ರಾಜ್ಯಂ ಸ್ವಮಮಿತ್ರಕರ್ಶನೋ
ದಿವಂ ಯಥಾ ಪೂರ್ಣವಪೂರ್ನಿಶಾಕರಃ ॥೩೬॥

ಅನಂತರ ಎಲ್ಲ ಪಾಪಗಳೂ ಅವನಿಂದ ದೂರವಾಗಿ ರಾಜನು ಶುದ್ಧನಾದನು. ಪ್ರಜ್ವಲಿಸುತ್ತಿರುವ ಅಗ್ನಿಯಂತಹ ಕಾಂತಿಯು ಅವನಿಗೆ ಬಂದಿತು. ಈ ಹೊಸ ಸ್ಥಿತಿಯಲ್ಲಿ ಶತ್ರುಸಂಹಾರಿಯಾದ ರಾಜನು ತನ್ನ ರಾಜ್ಯಕ್ಕೆ ಪ್ರವೇಶಿಸಿದನು. ಪೂರ್ಣಚಂದ್ರನು ಆಕಾಶವನ್ನು ಪ್ರವೇಶಿಸುವಂತೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯವು ಮುಗಿಯಿತು.

★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ಬಾಲಕನ ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿದ್ದ ಬಂಧುಜನಗಳಿಗೆ ಹದ್ದು-ನರಿಗಳ ವಿರುದ್ಧ ಮಾತುಗಳು ಕೊನೆಗೆ ರುದ್ರದೇವರ ಆಗಮನ. ಬಾಲಕನ ಪುನರುಜ್ಜೀವನ.

ಯುಧಿಷ್ಠಿರಃ

ಕಚ್ಚಿತ್ ಪಿತಾಮಹೇನಾಸೀಚ್ಛ್ರುತಂ ವಾ ದೃಷ್ಟಮೇವ ಚ ।
ಕಚ್ಚಿನ್ಮೃತೋ ಮನುಷ್ಯೋ ರಾಜನ್ ಪುನರುಜ್ಜೀವಿತೋಭವತ್ ॥೧॥

ಪಿತಾಮಹರಾದ ನೀವು ಮೃತ ಮನುಷ್ಯನು ಪುನಃ ಬದುಕಿದ ಘಟನೆಯನ್ನು ನೀವು ಕೇಳಿದ್ದೀರಾ? ಅಥವಾ ನೋಡಿದ್ದೀರಾ? ರಾಜನೇ! ಸತ್ತವನು ಮತ್ತೆ ಬದುಕಿಸಲ್ಪಟ್ಟನು ಎಂಬ ಸುದ್ದಿಯನ್ನು ನಂಬಲೇ?

ಭೀಷ್ಮಃ

ಶೃಣು ಪಾರ್ಥ ಯಥಾವೃತ್ತಮಿತಿಹಾಸಂ ಪುರಾತನಮ್ ।
ಗೃಧ್ರಜಂಬುಕಸಂವಾದಂ ಯೋ ವೃತ್ತೋ ವೈದಶೇ ಪುರಾ ॥೨॥

ಕುಂತೀಸುತ! ವೈದಶ ಎಂಬ ದೇಶದಲ್ಲಿ ಹಿಂದೆ ನಡೆದ ಹದ್ದು- ನರಿಗಳ ಸಂವಾದವನ್ನು ಹೇಳುತ್ತೇನೆ, ಕೇಳು.

ಕಸ್ಯಚಿದ್ ಬ್ರಾಹ್ಮಣಸ್ಯಾಸೀದ್ ದುಃಖಲಬ್ಧಃ ಸುತೋ ಮೃತಃ ।
ಬಾಲ ಏವ ವಿಶಾಲಾಕ್ಷೋ ಬಾಲಗ್ರಹನಿಪೀಡಿತಃ ॥೩॥

ಒಬ್ಬ ಬ್ರಾಹ್ಮಣ. ನಾನಾ ವ್ರತ-ನಿಯಮಗಳನ್ನು ಆಚರಿಸಿ ಒಬ್ಬ ಪುತ್ರನನ್ನು ಪಡೆದಿದ್ದನು. ಬಾಲಗ್ರಹಪೀಡಿತನಾದ ಅವನು ಬಾಲಕನಾಗಿರುವಾಗಲೇ ಸತ್ತು ಹೋದನು.

ದುಃಖಿತಾಃ ಕೇಚಿದಾದಾಯ ಬಾಲಮಪ್ರಾಪ್ತಯೌವನಮ್ ।
ಕುಲಸರ್ವಸ್ವಭೂತಂ ವೈ ರುದಂತಃ ಶೋಕವಿಹ್ವಲಾಃ ॥೪॥

ಆ ಬಾಲಕನ ಬಂಧುಗಳಲ್ಲಿ ಕೆಲವರು ತಾರುಣ್ಯವನ್ನೂ ಹೊಂದದ, ಕುಲಕ್ಕೆ ಸರ್ವಸ್ವನಾಗಿದ್ದ ಆ ಬಾಲಕನನ್ನು ಎತ್ತಿಕೊಂಡು, ಶೋಕಾಕುಲರಾಗಿ, ದುಃಖಿತರಾಗಿ ಅತ್ತರು.

ಬಾಲಂ ಮೃತಂ ಗೃಹೀತ್ವಾಥ ಶ್ಮಶಾನಾಭಿಮುಖಾಃ ಸ್ಥಿತಾಃ ।
ಅಂಕೇನಾಂಕಂ ಚ ಸಂಕ್ರಮ್ಯ ರುರುದುರ್ಭೂತಲೇ ತದಾ ॥೫॥

ಮೃತನನ್ನು ಎತ್ತಿಕೊಂಡು ಸ್ಮಶಾನದ ಕಡೆಗೆ ಹೋದರು. ಆಗ ನೆಲದ ಮೇಲೆ (ಕುಳಿತು) ತೊಡೆಯಿಂದ ತೊಡೆಗೆ ವರ್ಗಾಯಿಸಿ ಅತ್ತರು.

ಶೋಚಂತಸ್ತಸ್ಯ ಪೂರ್ವೋಕ್ತಾನ್ ಭಾಷಿತಾಂಶ್ಚಾಸಕೃತ್ ಪುನಃ ।
ತಂ ಬಾಲಂ ಭೂತಲೇ ಕ್ಷಿಪ್ಯ ಪ್ರತಿಗಂತುಂ ನ ಶಕ್ನುಯುಃ ॥೬॥

ಆ ಬಾಲಕನ ಬಾಲನುಡಿಗಳನ್ನು ಮತ್ತೆ ಮತ್ತೆ ನೆನೆಸಿಕೊಂಡು ಅತ್ತರು. ಶವವನ್ನು ಭೂಮಿಯಲ್ಲಿ ಹಾಕಿ ಹಿಂದಿರುಗಲು ಮನಸ್ಸೇ ಬರಲಿಲ್ಲ.

ತೇಷಾಂ ರುದಿತಶಬ್ದೇನ ಗೃಧ್ರೋಽಭ್ಯೇತ್ಯ ವಚೋಽಬ್ರವೀತ್ ।
ಏಕಾತ್ಮಕಮಿದಂ ಲೋಕೇ ತ್ಯಕ್ತ್ವಾ ಗಚ್ಛತ ಮಾಚಿರಮ್ ॥೭॥

ಅವರು ಅಳುವಿನ ಧ್ವನಿಯನ್ನು ಕೇಳಿ ಒಂದು ಹದ್ದು ಅಲ್ಲಿಗೆ ಬಂದು ಹೇಳಿತು. ಜನನ-ಮರಣಗಳು ಎಲ್ಲರಿಗೂ ಅನ್ವಯಿಸುವ ನಿಯಮ. ಯಾರಿಗೂ ವಿನಾಯಿತಿ ಇಲ್ಲ. ಆದ್ದರಿಂದ ತಡ ಮಾಡದೆ ಈ ಮೃತದೇಹವನ್ನು ಬಿಟ್ಟು ಹೊರಟು ಹೋಗಿ.

ಇಹ ಪುಂಸಾಂ ಸಹಸ್ರಾಣಿ ಸ್ತ್ರೀಸಹಸ್ರಾಣಿ ಚೈವ ಹಿ ।
ಸಮಾನೀತಾನಿ ಕಾಲೇನ ಕಿಂ ತೇ ವೈ ಜಾತ್ವಬಾಂಧವಾಃ ॥೮॥

ಕಾಲಗತಿಯಲ್ಲಿ ಇಲ್ಲಿಗೆ ಸಾವಿರಾರು ಪುರುಷರನ್ನು ತಂದಿದ್ದಾರೆ. ಸ್ತ್ರೀಯರನ್ನು ತಂದಿದ್ದಾರೆ. ಅವರೆಲ್ಲ ಬಂಧುಗಳಲ್ಲವೇ?

ಸಂಪಶ್ಯತ ಜಗತ್ ಸರ್ವಂ ಸುಖದುಃಖೈರಧಿಷ್ಠಿತಮ್ ।
ಸಂಯೋಗೋ ವಿಪ್ರಯೋಗಶ್ಚ ಪರ್ಯಾಯೇಣೋಪಲಭ್ಯತೇ ॥೯॥

ನೋಡಿ. ಇಡೀ ಜಗತ್ತಿನಲ್ಲಿ ಸುಖ-ದುಃಖಗಳು ಇದ್ದೇ ಇವೆ. ಸಂಯೋಗ-ವಿಯೋಗಗಳು ಪರ್ಯಾಯದಿಂದ (ಒಂದಾದ ಮೇಲೆ ಒಂದು) ಒದಗಿ ಬರುತ್ತವೆ.

ಗೃಹೀತ್ವಾ ಯೇಽನುಗೃಹ್ಣಂತಿ ಅನುಯಾಂತಿ ಚ ಯೇ ಗುಣಾತ್ ।
ತೇಪ್ಯಾಯುಷಃ ಪ್ರಮಾಣೇನ ತೇನ ಗಚ್ಛಂತಿ ಜಂತವಃ ॥೧೦॥

ಯಾರು ಈ ಮೃತಬಾಲಕನನ್ನು ಹಿಡಿದುಕೊಂಡು ಕೃಪೆ ತೋರುತ್ತಾರೋ, ಯಾರು ಸ್ನೇಹದಿಂದಾಗಿ ಸ್ಮಶಾನದವರೆಗೆ ಹಿಂಬಾಲಿಸುತ್ತಾರೋ ಆ ಜನರೂ ತಮ್ಮ ಆಯುಷ್ಯದ ಅಳತೆಗೆ ಅನುಗುಣವಾಗಿ ಅದೇ ಮಾರ್ಗದಲ್ಲಿ ಹೋಗುತ್ತಾರೆ.

ಅಲಂ ಸ್ಥಿತ್ವಾ ಶ್ಮಶಾನೇऽಸ್ಮಿನ್ ಗೃಧ್ರಗೋಮಾಯುಸಂಕುಲೇ ।
ಕೃಕಾಲಬಹುಲೇ ಘೋರೇ ಸರ್ವಪ್ರಾಣಿಭಯಂಕರೇ ॥೧೧॥

ಹದ್ದು, ನರಿ, ಕೋಳಿಗಳಿಂದ ತುಂಬಿರುವ, ಎಲ್ಲ ಪ್ರಾಣಿಗಳಿಗೂ ಭಯ ಹುಟ್ಟಿಸುವ, ಘೋರವಾದ ಈ ಸ್ಮಶಾನದಲ್ಲಿ ಇದ್ದದ್ದು ಸಾಕು.

ನ ಪುನರ್ಜೀವಿತಃ ಕಶ್ಚಿತ್ ಕಾಲಧರ್ಮಮುಪಾಗತಃ ।
ಪ್ರಿಯೋ ವಾ ಯದಿ ವಾ ದ್ವೇಷ್ಯಃ ಪ್ರಾಣಿನಾಂ ಗತಿರೀದೃಶೀ ॥೧೨॥

ಸತ್ತವರು ಪ್ರಿಯರಾಗಲಿ, ಅಪ್ರಿಯರಾಗಲಿ, ಯಾರೂ ಪುನಃ ಬದುಕಿಲ್ಲ. ಪ್ರಾಣಧಾರಿಗಳ ಗತಿಯೇ ಹೀಗೆ.

ಸರ್ವೇಣ ಖಲು ಮರ್ತವ್ಯಂ ಮರ್ತ್ಯಲೋಕೇ ಪ್ರಸೂಯತಾ ।
ಕೃತಾಂತವಿಹಿತೇ ಮಾರ್ಗೇ ಕೋ ಮೃತಂ ಜೀವಯಿಷ್ಯತಿ ॥೧೩॥

ಇದು ಸಾಯುವವರ ಲೋಕ. ಹುಟ್ಟಿದವರೆಲ್ಲ ಸಾಯಲೇಬೇಕು. ಯಮನು ಏರ್ಪಡಿಸಿದ ದಾರಿಯಲ್ಲಿ ಯಾರು ಸತ್ತವನನ್ನು ಬದುಕಿಸಬಲ್ಲರು?

ದಿಶಾಂತೋಪರತೇ ಕಾಲೇ ಚಾಸ್ತಂ ಗಚ್ಛತಿ ಭಾಸ್ಕರೇ ।
ಗಮ್ಯತಾಂ ಸ್ವಮಧಿಷ್ಠಾನಂ ಸುತಸ್ನೇಹಂ ವಿಸೃಜ್ಯ ವೈ ॥೧೪॥

ಸೂರ್ಯನು ಅಸ್ತಂಗತನಾಗುತ್ತಿರುವಾಗ, ಎಲ್ಲ ದಿಕ್ಕುಗಳಲ್ಲಿ ಎಲ್ಲ ಚಟುವಟಿಕೆಗಳೂ ನಿಲ್ಲುವ ಕಾಲ. ಈ ಕಾಲದಲ್ಲಿ ನೀವೂ ಪುತ್ರಸ್ನೇಹವನ್ನು ಬಿಟ್ಟು ನಿಮ್ಮ ಮನೆಗಳಿಗೆ ಹೋಗಿ.

ತತೋ ಗೃಧ್ರವಚಃ ಶ್ರುತ್ವಾ ವಿಕ್ರೋಶಂತಸ್ತದಾ ನೃಪ ।
ಬಾಂಧವಾಸ್ತೇಭ್ಯಗಚ್ಛಂತ ಪುತ್ರಮುತ್ಸೃಜ್ಯ ಭೂತಲೇ ॥೧೫॥

ವಿನಿಶ್ಚಿತ್ಯಾಥ ಚ ತತಃ ಸಂತ್ಯಜಂತಃ ಸ್ವಮಾತ್ಮಜಮ್ ।
ನಿರಾಶಾ ಜೀವಿತೇ ತಸ್ಯ ಮಾರ್ಗಮಾರುಹ್ಯ ಧಿಷ್ಠಿತಾಃ ॥೧೬॥

ರಾಜನೆ! ಆ ಹದ್ದಿನ ಮಾತನ್ನು ಕೇಳಿ ಆ ಬಂಧುಗಳೆಲ್ಲರೂ ಅಳುತ್ತಾ ಮಗನನ್ನು ನೆಲದಲ್ಲಿ ಬಿಟ್ಟು ಹೊರಟರು. ತಮ್ಮ ಮಗು ಪುನಃ ಬದುಕುವ ಆಶೆಯನ್ನು ಬಿಟ್ಟು, ಅವನನ್ನು ಬಿಟ್ಟು ಮನೆಯ ದಾರಿಯನ್ನು ಹಿಡಿದರು.

ಧ್ವಾಂಕ್ಷರೂಕ್ಷೇ ವಿವರ್ಣಸ್ತು ಬಿಲಾನ್ನಿಃಸೃತ್ಯ ಜಂಬುಕಃ ।
ಗಚ್ಛಮಾನಾನ್ ಸ್ಮ ತಾನಾಹ ನಿರ್ಘೃಣಾಃ ಖಲು ಮಾನವಾಃ ॥೧೭॥

ಕಾಗೆಯ ಶಬ್ದದಿಂದ ಭಯಂಕರವಾದ ಆ ಕಾಡಿನಲ್ಲಿ ಇದ್ದ, ವಿವಿಧವರ್ಣದ ನರಿಯೊಂದು ತನ್ನ ಗುಹೆಯಿಂದ ಹೊರಗೆ ಬಂದು ಹೋಗುತ್ತಿದ್ದ ಅವರಿಗೆ ಹೇಳಿತು. 'ಮಾನವರು ದಯಾಹೀನರು' ಎಂದು.

ಆದಿತ್ಯೋಽಯಂ ಸ್ಥಿತೋ ಮೂಢಾಃ ಸ್ನೇಹಂ ಕುರುತ ಮಾ ಭಯಮ್ ।
ಬಹುರೂಪೋ ಮುಹೂರ್ತಶ್ಚ ಜೀವೇತಾಪಿ ಕದಾಚನ ॥೧೮॥

ಮೂಢರೆ! ಸೂರ್ಯ ಇನ್ನೂ ಇದ್ದಾನೆ. ಸ್ನೇಹವನ್ನು ತೋರಿಸಿ. ಹೆದರಬೇಡಿ. ಮುಹೂರ್ತಗಳು ಬಹುವಿಧ. ನಿಮ್ಮ ಮಗ ಬದುಕಬಹುದು.

ಯೂಯಂ ಭೂಮೌ ವಿನಿಕ್ಷಿಪ್ಯ ಪುತ್ರಸ್ನೇಹವಿನಾಕೃತಾಃ ।
ಶ್ಮಶಾನೇ ಪುತ್ರಮುತ್ಸೃಜ್ಯ ಕಸ್ಮಾದ್ಗಚ್ಛಥ ನಿರ್ಘೃಣಾಃ ॥೧೯॥

ನೀವು ಪುತ್ರಸ್ನೇಹರಹಿತರಾಗಿ, ದಯಾರಹಿತರಾಗಿ ಮಗನನ್ನು ಸ್ಮಶಾನದಲ್ಲಿ ನೆಲದ ಮೇಲೆ ಎಸೆದು ಏಕೆ ಹೋಗುತ್ತೀರಿ?

ನ ವೋಽಸ್ಯಸ್ಮಿನ್ ಸುತೇ ಸ್ನೇಹೋ ಬಾಲೇ ಮಧುರಭಾಷಿಣೆ ।
ಯಸ್ಯ ರಾವಿತಮಾತ್ರೇಣ ಪ್ರಸಾದಮುಪಗಚ್ಛಥ ॥೨೦॥

ನೀವು ಯಾರ ಧ್ವನಿ ಮಾತ್ರದಿಂದಲೇ ಪ್ರಸನ್ನರಾಗುತ್ತೀರೋ ಅಂತಹ ಮಧುರ ಭಾಷಿಯಾದ ನಿಮ್ಮ ಬಾಲಕನ ಮೇಲೆ ನಿಮಗೆ ಸ್ನೇಹವಿಲ್ಲವೇ?

ನ ಪಶ್ಯಥ ಸುತಸ್ನೇಹೋ ಯಾದೃಶಃ ಪಶುಪಕ್ಷಿಣಾಮ್ ।
ನ ಯೇಷಾಂ ಧಾರಯಿತ್ವಾ ತಾನ್ ಕಶ್ಚಿದಸ್ತಿ ಫಲಾಗಮಃ ॥೨೧॥

ಚತುಷ್ಪಾತ್ ಪಕ್ಷಿಕೀಟಾನಾಂ ಪ್ರಾಣಿನಾಂ ಸ್ನೇಹಸಂಗಿನಾಮ್ ।
ಪರಲೋಕಗತಿಸ್ಥಾನಾಂ ಮುನಿಯಜ್ಞಕ್ರಿಯಾ ಇವ ॥೨೨॥

ತೇಷಾಂ ಪುತ್ರಾಭಿರಾಮಾಣಾಮಿಹ ಲೋಕೇ ಪರತ್ರ ಚ ।
ನ ಗುಣೋ ದೃಶ್ಯತೇ ಕಶ್ಚಿತ್ ಪ್ರಜಾಃ ಸಂಧಾರಯಂತಿ ಚ ॥೨೩॥

ಪಶು-ಪಕ್ಷಿಗಳಿಗೆ ಯಾವ ವಿಧವಾದ ಸುತಸ್ನೇಹವಿದೆ! ನಿಮಗೆ ಕಾಣುವುದಿಲ್ಲವೆ? ಪರಲೋಕದಲ್ಲಿ ಸದ್ಗತಿಯನ್ನು ಪಡೆಯುವುದರಲ್ಲಿ ನಿರತರಾದ ಮುನಿಗಳಿಗೆ ಅವರ ಯಜ್ಞಕ್ರಿಯೆಗಳಿಂದ ಫಲವಿರುವಂತೆ, ಕೇವಲ ಸ್ನೇಹದಿಂದ ಗಾಢಸಂಗವನ್ನು ಹೊಂದುವ ನಾಲ್ಕು ಕಾಲಿನ ಪ್ರಾಣಿಗಳಿಗೆ, ಪಕ್ಷಿ, ಕೀಟಗಳಿಗೆ, ತಮ್ಮ ಸಂತಾನವನ್ನು ಪೋಷಿಸುವುದರಿಂದ ಯಾವ ಫಲವೂ ಬರುವುದಿಲ್ಲ. ಮಕ್ಕಳ ಮೇಲೆ ಪ್ರೀತಿ ಹೊಂದಿರುವ ಆ ಪ್ರಾಣಿಗಳಿಗೆ ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಯಾವ ಅನುಕೂಲವೂ-ಲಾಭವೂ ಇಲ್ಲ. ಆದರೂ ಅವುಗಳು ತಮ್ಮ ಮಕ್ಕಳನ್ನು ಪೋಷಿಸುತ್ತವೆ.

ಅಪಶ್ಯತಾಂ ಪ್ರಿಯಾನ್ ಪುತ್ರಾನ್ನೈಷಾಂ ಶೋಕೋऽನುತಿಷ್ಠತಿ ।
ನ ಚ ಪುಷ್ಣಂತಿ ಸಂವೃದ್ಧಾಸ್ತೇ ಮಾತಾಪಿತರೌ ಕ್ವಚಿತ್ ॥೨೪॥

(ತಾವು ಬೆಳೆಸಿದ) ಪ್ರಿಯ ಪುತ್ರರು (ದೊಡ್ಡವರಾದ ಮೇಲೆ ಎಲ್ಲಿಯೋ ಹೋಗಿ ಬಿಡುತ್ತವೆ. ಆದ್ದರಿಂದ) ತಮಗೆ ಕಾಣದೆ ಇದ್ದಾಗ ಹಕ್ಕಿಗಳಿಗೆ ಶೋಕವಾಗುವುದಿಲ್ಲ. ಆ ಬೆಳೆದ ಹಕ್ಕಿಗಳು ತಮ್ಮ ತಂದೆ-ತಾಯಿಗಳನ್ನು ಪೋಷಿಸುವುದಿಲ್ಲ. (ಆದರೂ ತಂದೆ-ತಾಯಿ ಹಕ್ಕಿಗಳಿಗೆ ತಮ್ಮ ಮರಿಗಳ ಮೇಲೆ ಸ್ನೇಹವಿದೆ).

ಮಾನುಷಾಣಾಂ ಕುತಃ ಸ್ನೇಹೋ ಯೇಷಾಂ ಶೋಕೋ ಭವಿಷ್ಯತಿ ।
ಇಮಂ ಕುಲಕರಂ ಪುತ್ರಂ ಕಥಂ ತ್ಯಕ್ತ್ವಾ ಗಮಿಷ್ಯಥ ॥೨೫॥

ಮನುಷ್ಯರಿಗೆ ತಾವು ಬೆಳೆಸಿದ ಮಕ್ಕಳು ದೂರವಾದಾಗ ಶೋಕವಾಗುತ್ತದೆ. ಯಾರಿಗೆ ಭವಿಷ್ಯತ್‌ಕಾಲದಲ್ಲಿ ಮಕ್ಕಳು ಕಾಣದಿದ್ದಾಗ ಶೋಕವಾಗುತ್ತದೋ, ಅಂತಹ ಮನುಷ್ಯ ವರ್ಗಕ್ಕೆ ಸೇರಿದ ನಿಮಗೆ ಏಕೆ ಸ್ನೇಹವಿಲ್ಲ? ಕುಲೋದ್ಧಾರವನ್ನು ಮಾಡುವ ಈ ಮಗನನ್ನು ಹೇಗೆ ಬಿಟ್ಟುಹೋಗುತ್ತೀರಿ?

ಚಿರಭೂತಂ ಚ ಬಾಲಂ ಚ ಚಿರಂ ಸ್ನೇಹೇನ ಪಶ್ಯತ ।
ಏವಂವಿಧಾನಿ ಹೀಷ್ಟಾನಿ ದುಸ್ಯಜಾನಿ ವಿಶೇಷತಃ ॥೨೬॥

ಬಹಳ ಕಾಲಾನಂತರ ಹುಟ್ಟಿದ ಈ ಬಾಲಕನನ್ನು ಬಹಳ ಕಾಲ ಸ್ನೇಹದಿಂದ ಕಾಣಿರಿ. ವಿಶೇಷವಾಗಿ ಇಷ್ಟವಾದ ಇಂತಹ ಮಕ್ಕಳನ್ನು ತ್ಯಜಿಸುವುದು ಬಹಳ ದುಃಖಕರ.

ಕ್ಷೀಣಸ್ಯಾಥಾಭಿಯುಕ್ತಸ್ಯ ಸ್ಮಶಾನಾಭಿಮುಖಸ್ಯ ಚ ।
ಬಾಂಧವಾ ಯತ್ರ ತಿಷ್ಠಂತಿ ತತ್ರಾನ್ಯೋ ನಾವತಿಷ್ಠತೇ ॥೨೭॥

ದುರ್ಬಲನಿಗೆ, ಫಾಸಿಗೊಳಗಾದವನಿಗೆ, ಸಾಯುವ ಸ್ಥಿತಿಯಲ್ಲಿರುವವನಿಗೆ ಆಸರೆಯಾಗಿ ಬಂಧುಗಳು ನಿಲ್ಲುತ್ತಾರೆ. ಎಲ್ಲಿ ಬಂಧುಗಳು ನಿಲ್ಲಬೇಕೋ ಅಲ್ಲಿ ಬೇರೆ ಯಾರೂ ನಿಲ್ಲುವುದಿಲ್ಲ.

ಸರ್ವಸ್ಯ ದಯಿತಾಃ ಪ್ರಾಣಾಃ ಸರ್ವಃ ಸ್ನೇಹಂ ಚ ವಿಂದತಿ ।
ತಿರ್ಯಗ್ಯೋನಿಷ್ವಪಿ ಸತಾಂ ಸ್ನೇಹಂ ಪಶ್ಯತ ಯಾದೃಶಮ್ ॥೨೮॥

ಎಲ್ಲರಿಗೂ ಪ್ರಾಣಿಗಳು ಬಹಳ ಇಷ್ಟ. ಎಲ್ಲರೂ ಸ್ನೇಹವನ್ನು ಬಯಸುತ್ತಾರೆ. ಪಶು-ಪಕ್ಷಿಮೊದಲಾದ ಕೆಳಮಟ್ಟದ ಜನ್ಮವನ್ನು ತಾಳಿದ ಪ್ರಾಣಿಗಳಲ್ಲಿಕೂಡ ಎಂತಹ ಸ್ನೇಹವಿದೆ ನೀವೇ ನೋಡಿ.

ತ್ಯಕ್ತ್ವಾ ಕಥಂ ಗಚ್ಛಥೇಮಂ ಪದ್ಮಲೋಲಾಯತಾಕ್ಷಕಮ್ ।
ಯಥಾ ನವೋದ್ವಾಹಕೃತಂ ಸ್ನಾನಮಾಲ್ಯವಿಭೂಷಿತಮ್ ॥೨೯॥

ಮದುಮಗನಂತೆ ಸ್ನಾನ ಮಾಡಿ ಮಾಲೆ ಮೊದಲಾದವುಗಳಿಂದ ಅಲಂಕೃತನಾಗಿರುವ, ಕಮಲದ ಎಸಳಿನಂತಹ ಸುಂದರ ಕಣ್ಣಿರುವ ಇವನನ್ನು ಹೇಗೆ ಬಿಟ್ಟುಹೋಗುತ್ತೀರಿ?

ಭೀಷ್ಮಃ

ಜಂಬುಕಸ್ಯ ವಚಃ ಶ್ರುತ್ವಾ ಕೃಪಣಂ ಪರಿದೇವತಃ ।
ನ್ಯವರ್ತಂತ ತದಾ ಸರ್ವೇ ಶವಾರ್ಥಂ ತೇ ಸ್ಮ ಮಾನುಷಾಃ ॥೩೦॥

ಕರುಣಾಜನಕವಾಗಿ ವಿಲಪಿಸಿದ ನರಿಯ ಮಾತನ್ನು ಕೇಳಿ ಆ ಮನುಷ್ಯರೆಲ್ಲರೂ ಆ ಶವದ ಕಡೆಗೆ ಹಿಂತಿರುಗಿದರು.

ಗೃಧ್ರಃ

ಅಹೋ ಧಿಕ್ ಸುನೃಶಂಸೇನ ಜಂಬುಕೇನಾಲ್ಪಮೇಧಸಾ ।
ಕ್ಷುದ್ರೇಣೋಕ್ತಾ ಹೀನಸತ್ತ್ವಾ ಮಾನುಷಾಃ ಕಿಂ ನಿವರ್ತಧ ॥೩೧॥

ಅಯ್ಯೋ! ಅನ್ಯಾಯ! ಕ್ರೂರಿ, ಮಂದಮತಿ, ಕ್ಷುದ್ರ ನರಿಯ ಮಾತನ್ನು ಕೇಳಿ ನೀವು ಸತ್ವಹೀನ (ಸತ್ವ= ಪ್ರೌಢಮನೋಬಲ. ಇದಿದ್ದವರು ಲೋಕೋತ್ತರ ಸಾಧನೆಗಳನ್ನು ಮಾಡುತ್ತಾರೆ) ಮನುಷ್ಯರು ಏಕೆ ಹಿಂತಿರುಗುತ್ತೀರಿ?

ಪಂಚಭೂತಪರಿತ್ಯಕ್ತಂ ಶೂನ್ಯಂ ಕಾಷ್ಠತ್ವಮಾಗತಮ್ ।
ಕಸ್ಮಾಚ್ಛೋಚಥ ನಿಶ್ಚೇಷ್ಟಮಾತ್ಮಾನಂ ಕಿಂ ನ ಶೋಚಥ ॥೩೨॥

ಪಂಚಭೂತಗಳಿಂದ= ಪಂಚಭೂತಾಭಿಮಾನಿ ದೇವತೆಗಳಿಂದ ಪರಿತ್ಯಜಿಸಲ್ಪಟ್ಟ, ಶೂನ್ಯ= ಸೊನ್ನೆಯಾಗಿರುವ, ಮರಗಟ್ಟಿರುವ, ನಿಶ್ಚೇಷ್ಟನಾದ ಈ ಬಾಲಕನ ಬಗ್ಗೆ ಏಕೆ ಶೋಕಪಡುತ್ತೀರಿ? ನಿಮ್ಮ ಬಗ್ಗೆಯೇ ಏಕೆ ಶೋಕಪಡುವುದಿಲ್ಲ?

ತಪಃ ಕುರುತ ವೈ ತೀವ್ರಂ ಮುಚ್ಯಧ್ವಂ ಯೇನ ಕಿಲ್ಬಿಷಾತ್ ।
ತಪಸಾ ಲಭ್ಯತೇ ಸರ್ವಂ ವಿಲಾಪಃ ಕಿಂ ಕರಿಷ್ಯತಿ ॥೩೩॥

ತೀವ್ರವಾದ ತಪಸ್ಸನ್ನು ಮಾಡಿರಿ. ಅದರಿಂದ ಎಲ್ಲ ಪಾಪಗಳಿಂದ ಬಿಡುಗಡೆಯನ್ನು ಪಡೆಯಿರಿ. ತಪಸ್ಸಿನಿಂದ ಎಲ್ಲವೂ ಲಭಿಸುತ್ತದೆ. ಏಕೆ ವಿಲಪಿಸುತ್ತೀರಿ?

ಸ್ವನಿಷ್ಪಾನಿ ಚ ಭೋಜ್ಯಾನಿ ಜಾನೀತ ಸ್ವಂ ಸ್ವಮಾತ್ಮನಾ ।
ಯೇನ ಗಚ್ಛತಿ ಲೋಕೋಽಯಂ ದತ್ತ್ವಾ ಶೋಕಮನಂತಕಮ್ ॥೩೪॥

ಉಣ್ಣಲೇಬೇಕಾದ (ಅನುಭವಿಸಲೇಬೇಕಾದ) ಅತಿ ಅನಿಷ್ಟಗಳು, ನಮ್ಮದೆ ಆಗುವ ಸಂಪತ್ತುಗಳು ನಮ್ಮಿಂದಲೇ (ನಮ್ಮ ಪೂರ್ವಕರ್ಮಗಳಿಂದಲೇ) ನಮಗೆ ಬಂದಿರುತ್ತವೆ. ತಿಳಿಯಿರಿ. ಆದ್ದರಿಂದ ಈ ಜನರು ಕೊನೆಯಿಲ್ಲದ ಶೋಕವನ್ನು ಕೊಟ್ಟು ಹೋಗುತ್ತಾರೆ.

ಧೇನುರ್ಗೌಶ್ಚ ಸುವರ್ಣಂ ಚ ಮಣಿರತ್ನಮಥಾಪಿ ಚ ।
ಅಪತ್ಯಂ ಚ ತಯೋರ್ಮೂಲಂ ತಪೋಯೋಗಾಚ್ಚ ಲಭ್ಯತೇ ॥೩೫॥

ಹಸುಗಳು, ವಿದ್ಯೆ, ಬಂಗಾರ, ಮಣಿಗಳು ಮತ್ತು ರತ್ನಗಳು, ಸಂತತಿ ಮತ್ತು ಸುಖ-ದುಃಖ ಕಾರಣವಾದ ಶರೀರ-ಇವುಗಳು ತಪಸ್ ಮತ್ತು ಪಾಪಗಳಿಂದ ಉಂಟಾಗುತ್ತವೆ.

ಯಥಾಕೃತ್ವಾ ಚ ಭೂತೇಷು ಪ್ರಾಪ್ಯತೇ ಸುಖದುಃಖಿತಾ ।
ಗೃಹೀತ್ವಾ ಜಾಯತೇ ಜಂತುರ್ದುಃಖಾನಿ ಚ ಸುಖಾನಿ ಚ ॥೩೬॥

ಜೀವಗಳಿಗೆ ಅವರವರು ಮಾಡಿದ ಸುಖಕರವಾದ ಅಥವಾ ದುಃಖಕರವಾದ ಕರ್ಮಗಳಿಗೆ ಅನುಗುಣವಾಗಿ ಸುಖ-ದುಃಖಗಳು ಲಭಿಸುತ್ತವೆ. ಜೀವಾತ್ಮನು ಸುಖಗಳನ್ನು-ದುಃಖಗಳನ್ನು ಜೊತೆಗಿಟ್ಟುಕೊಂಡೇ ಹುಟ್ಟುತ್ತಾನೆ.

ನ ಕರ್ಮಣಾ ಪಿತುಃ ಪುತ್ರಃ ಪಿತಾ ವಾ ಪುತ್ರಕರ್ಮಣಾ ।
ಮಾರ್ಗೇಣಾನ್ಯೇನ ಗಚ್ಛಂತಿ ವಿದ್ವಾಂಃ ಸುಕೃತದುಷ್ಕೃತೈಃ ॥೩೭॥

ತಂದೆಯ ಕರ್ಮದಿಂದ ಮಗನಿಗೆ ಸುಖ-ದುಃಖಗಳು ಉಂಟಾಗುವುದಿಲ್ಲ. ಮಗನ ಕರ್ಮದಿಂದ ತಂದೆಗೆ ಸುಖ-ದುಃಖಗಳು ಉಂಟಾಗುವುದಿಲ್ಲ. ತಮ್ಮ ತಮ್ಮ ಪುಣ್ಯ-ಪಾಪಗಳ ಹೊಡೆತಕ್ಕೆ ಸಿಕ್ಕಿ ಬೇರೆ ಬೇರೆ ದಾರಿಯಲ್ಲಿ ಹೋಗುತ್ತಾರೆ.

ಧರ್ಮಂ ಚರತ ಯತ್ನೇನ ತಥಾಧರ್ಮಾನ್ನಿವರ್ತತ ।
ವರ್ತಧ್ವಂ ಚ ಯಥಾಕಾಲಂ ದೈವತೇಷು ದ್ವಿಜೇಷು ಚ ॥೩೮॥

ಪ್ರಯತ್ನ ಪಟ್ಟು ಧರ್ಮವನ್ನು ಆಚರಿಸಿರಿ. ಅಧರ್ಮದಿಂದ ದೂರ ಇರಿ. ಕಾಲಾನುಗುಣವಾಗಿ (ಯಾವ ಕಾಲದಲ್ಲಿ ಯಾವ ಅನುಷ್ಠಾನಗಳನ್ನು ಶಾಸ್ತ್ರಗಳು ತಿಳಿಸಿವೆಯೋ ಅದರಂತೆ) ದೇವತಾರಾಧನೆಯನ್ನೂ, ಬ್ರಾಹ್ಮಣಾರಾಧನೆಯನ್ನು ಮಾಡಿರಿ.

ಶೋಕಂ ತ್ಯಜತ ದೈನ್ಯಂ ಚ ಸುತಸ್ನೇಹಾನ್ನಿವರ್ತತ ।
ತ್ಯಜ್ಯತಾಮಯಮಾಕಾಶೇ ತತಃ ಶೀಘ್ರಂ ನಿವರ್ತತ ॥೩೯॥

ಶೋಕವನ್ನೂ, ದೈನ್ಯವನ್ನೂ ಬಿಡಿ. ಸುತಸ್ನೇಹವನ್ನೂ ಬಿಡಿ. ಈ ಬಾಲಕನನ್ನು ಬಯಲಿನಲ್ಲಿ ಬಿಟ್ಟು ಬಿಡಿ. ಬೇಗ ಇಲ್ಲಿಂದ ಹಿಂತಿರುಗಿರಿ.

ಯತ್ ಕರೋತಿ ಶುಭಂ ಕರ್ಮ ತಥಾಧರ್ಮಂ ಸುದಾರುಣಮ್ ।
ತತ್ ಕರ್ತ್ಯೈವ ಸಮಶ್ನಾತಿ ಬಾಂಧವಾನಾಂ ಕಿಮತ್ರ ಹಿ ॥೪೦॥

ಯಾರು ಯಾವ ಶುಭಕರ್ಮವನ್ನು ಮಾಡುತ್ತಾರೋ, ಹಾಗೆಯೇ ಯಾವ ದಾರುಣ ಅಧರ್ಮವನ್ನು ಮಾಡುತ್ತಾರೋ ಅವರೇ ಅದನ್ನು ಅನುಭವಿಸುತ್ತಾರೆ. ಈ ವಿಷಯದಲ್ಲಿ ಬಾಂಧವರಿಗೆ ಏನು ಪಾತ್ರವಿದೆ? ಏನೂ ಇಲ್ಲ.

ಇಹ ತ್ಯಕ್ತ್ವಾ ನ ತಿಷ್ಠಂತಿ ಬಾಂಧವಾ ಬಾಂಧವಂ ಪ್ರಿಯಮ್ ।
ಸ್ನೇಹಮುತ್ಸೃಜ್ಯ ಗಚ್ಛಂತಿ ಬಾಷ್ಪಪೂರ್ಣಾವಿಲೇಕ್ಷಣಾಃ ॥೪೧॥

ಈ ಸ್ಮಶಾನದಲ್ಲಿ ಬಂಧುಗಳು ತಮ್ಮ ಪ್ರಿಯಬಂಧುವನ್ನು ತ್ಯಜಿಸುತ್ತಾರೆ. ತ್ಯಜಿಸಿ ಇಲ್ಲೇ ನಿಲ್ಲುವುದಿಲ್ಲ. ಸ್ನೇಹವನ್ನು ಬಿಟ್ಟು ಕಣ್ಣುಗಳಲ್ಲಿ ನೀರು ತುಂಬಿಕೊಂಡು ಹೊರಟು ಹೋಗುತ್ತಾರೆ.

ಪ್ರಾಜ್ಞೋ ವಾ ಯದಿ ವಾ ಮೂರ್ಖಃ ಸಧನೋ ನಿರ್ಧನೋಽಪಿ ವಾ ।
ಸರ್ವಃ ಕಾಲವಶಂ ಯಾತಿ ಶುಭಾಶುಭಸಮನ್ವಿತಃ ॥೪೨॥

ಪ್ರಾಜ್ಞನಾಗಲಿ, ಮೂರ್ಖನಾಗಲಿ, ಧನವಂತನಾಗಲಿ, ಬಡವನಾಗಲಿ ಎಲ್ಲರೂ ತಮ್ಮ ತಮ್ಮ ಪುಣ್ಯ-ಪಾಪಗಳ ಜೊತೆಗೆ ಯಮನಿಗೆ ವಶವಾಗುತ್ತಾರೆ.

ಕಿಂ ಕರಿಷ್ಯಥ ಶೋಚಿತ್ವಾ ಮೃತಂ ಕಿಮನುಶೋಚಥ ।
ಸರ್ವಸ್ಯ ಹಿ ಪ್ರಭುಃ ಕಾಲೋ ಧರ್ಮತಃ ಸಮದರ್ಶನಃ ॥೪೩॥

ಶೋಕಪಟ್ಟು ಏನು ಮಾಡುತ್ತೀರಿ. ಸತ್ತು ಹೋದವನ ಬಗ್ಗೆ ಯಾಕೆ ಶೋಕಪಡುತ್ತೀರಿ? ಯಮನು ಎಲ್ಲರ ಪ್ರಭು. ಅವನು ಧರ್ಮದ ವಿಷಯದಲ್ಲಿ ಸಮದೃಷ್ಟಿವುಳ್ಳವನು.

ಯೌವನಸ್ಥಾಂಶ್ಚ ಬಾಲಾಂಶ್ಚ ವೃದ್ಧಾನ್ ಗರ್ಭಗತಾನಪಿ ।
ಸರ್ವಾನಾವಿಶತೇ ಮೃತ್ಯುರೇವಂಭೂತಮಿದಂ ಜಗತ್ ॥೪೪॥

ಮೃತ್ಯುವು ತರುಣರನ್ನೂ, ಬಾಲಕರನ್ನೂ, ವೃದ್ಧರನ್ನೂ, ಗರ್ಭದಲ್ಲಿದ್ದವರನ್ನೂ - ಎಲ್ಲರನ್ನೂ ಪ್ರವೇಶಿಸುತ್ತದೆ. ಈ ಜಗತ್ತು ಹೀಗೆಯೇ.

ಜಂಬುಕಃ

ಅಹೋ ಮಂದೀಕೃತಃ ಸ್ನೇಹೋ ಗೃಧ್ರೇಣೇಹಾಲ್ಪಮೇಧಸಾ ।
ಪುತ್ರಸ್ನೇಹಾಭಿಭೂತಾನಾಂ ಯುಷ್ಮಾಕಂ ಶೋಚತಾಂ ಭೃಶಮ್ ॥೪೫॥

ಪುತ್ರಸ್ನೇಹದ ಆವೇಶದಲ್ಲಿರುವ, ಬಹಳ ಶೋಕಿಸುತ್ತಿರುವ ನಿಮ್ಮ ಸ್ನೇಹವನ್ನು ಈ ಮಂದಮತಿ ಹದ್ದು ಮಂದವಾಗಿಸಿಬಿಟ್ಟಿತು. ಅಯ್ಯೋ, ಅನ್ಯಾಯ!

ಸಮೈಃ ಸಮ್ಯಕ್ಪ್ರಯುಕ್ತೈಶ್ಚ ವಚನೈಃ ಪ್ರಶ್ರಯೋತ್ತರೈಃ ।
ಯದ್ಗಚ್ಛಥ ಜಲಸ್ಥಾಯಂ ಸ್ನೇಹಮುತ್ಸೃಜ್ಯ ದುಸ್ತ್ಯಜಮ್ ॥೪೬॥

ಚೆನ್ನಾಗಿರುವಂತೆ ಕಾಣುವ, ಪರಿಣಾಮಕಾರಿಯಾಗಿ ಹೇಳಲ್ಪಟ್ಟ, ವಿನಯಸಂಪನ್ನವಾದ ಮಾತುಗಳ ಪ್ರಭಾವಕ್ಕೆ ಒಳಗಾಗಿ ಬಿಡಲು ಅಸಾಧ್ಯವಾದ ಸ್ನೇಹವನ್ನು ಬಿಟ್ಟು ನೀರಿನ ಕಡೆಗೆ ಹೋಗುತ್ತಿದ್ದೀರಿ!

ಅಹೋ ಪುತ್ರವಿಯೋಗೇನ ಮೃತಶೂನ್ಯೋಪಸೇವನಾತ್ ।
ಕ್ರೋಶತಾಂ ವೈ ಭೃಶಂ ದುಃಖಂ ವಿವತ್ಸಾನಾಂ ಗವಾಮಿವ ॥೪೭॥

ಅಬ್ಬಾ! ಪುತ್ರ ವಿಯೋಗದಿಂದ ಸ್ಮಶಾನಕ್ಕೆ ಬಂದು ಅಳುತ್ತಿರುವವರಿಗೆ ಎಂತಹ ತೀವ್ರ ದುಃಖ! ಕರುಗಳನ್ನು ಕಳೆದುಕೊಂಡ ಹಸುಗಳ ದುಃಖದಂತೆ.

ಅದ್ಯ ಶೋಕಂ ವಿಜಾನಾಮಿ ಮಾನುಷಾಣಾಂ ಮಹೀತಲೇ ।
ಸ್ನೇಹಂ ಹಿ ಕರುಣಂ ದೃಷ್ಟ್ವಾ ಮಮಾಪ್ಯಶ್ರೂಣ್ಯಥಾಗಮನ್ ॥೪೮॥

ಈ ಭೂಮಿಯಲ್ಲಿ ಮನುಷ್ಯರ ದುಃಖ ಈಗ ಅರ್ಥವಾಗುತ್ತಿದೆ. ನಿಮ್ಮ ಕರುಣಾಜನಕವಾದ ಸ್ನೇಹವನ್ನು ನೋಡಿ ನನಗೂ ಕಣ್ಣೀರು ಬಂದಿತು.

ಯತ್ನೋ ಹಿ ಸತತಂ ಕಾರ್ಯಃ ಕೃತೋ ದೈವೇನ ಸಿಧ್ಯತಿ ।
ದೈವಂ ಪುರುಷಕಾರಶ್ಚ ಕೃತಾಂತೇನೋಪಪದ್ಯತೇ ॥೪೯॥

ಸತತ ಪ್ರಯತ್ನವನ್ನು ಮಾಡಬೇಕು. ಪ್ರಯತ್ನವು ದೈವಾನುಗ್ರಹದಿಂದ ಫಲಿಸುತ್ತದೆ. ದೈವ ಮತ್ತು ಪುರುಷ ಪ್ರಯತ್ನಗಳು ಉಪಪನ್ನವಾಗಿ ಫಲಿಸುತ್ತವೆ ಎಂದು ಪ್ರಾಜ್ಞರ ಸಿದ್ಧಾಂತ.

ಅನಿರ್ವೇದಃ ಸದಾ ಕಾರ್ಯೋ ನಿರ್ವೇದಾದ್ಧಿ ಕುತಃ ಸುಖಮ್ ।
ಪ್ರಯತ್ನಾತ್ ಪ್ರಾಪ್ಯತೇ ಹ್ಯರ್ಥಃ ಕಸ್ಮಾದ್ ಗಚ್ಛಥ ನಿರ್ದಯಾಃ ॥೫೦॥

ಎಂದೂ ಬೇಸರಿಸಬಾರದು, ಯಾವಾಗಲೂ ಹುರುಪಿನಿಂದ ಕ್ರಿಯಾಶೀಲರಾಗಿರಬೇಕು. ಬೇಸರದಿಂದ ಸುಖವಿಲ್ಲ. ಪ್ರಯತ್ನದಿಂದ ಫಲವಿದೆ. ಏಕೆ ನಿರ್ದಯರಾಗಿ ಹೋಗುತ್ತೀರಿ?

ಆತ್ಮಮಾಂಸೋಪವೃತ್ತಂ ಚ ಶರೀರಾರ್ಧಮಯೀಂ ತನುಮ್ ।
ಪಿತೃಣಾಂ ವಂಶಕರ್ತಾರಂ ವನೇ ತ್ಯಕ್ತ್ವಾ ಕ್ವ ಯಾಸ್ಯಥ ॥೫೧॥

ನಿಮ್ಮದೇ ರಕ್ತ-ಮಾಂಸಗಳೊಂದಿಗೆ ಬಂದಿರುವ, ನಿಮ್ಮ ಅರ್ಧಶರೀರವೇ ಆಗಿರುವ, ಪಿತೃಗಳ ವಂಶವನ್ನು ಮುಂದುವರಿಸುವ ಇವನನ್ನು ವನದಲ್ಲಿ ಬಿಟ್ಟು ಎಲ್ಲಿಗೆ ಹೋಗುವಿರಿ?

ಅಥವಾಸ್ತಂ ಗತೇ ಸೂರ್ಯೇ ಸಂಧ್ಯಾಕಾಲ ಉಪಸ್ಥಿತೇ ।
ತತೋ ನೇಷ್ಯಥ ವಾ ಪುತ್ರಮಿಹಸ್ಥಾ ವಾ ಭವಿಷ್ಯಥ ॥೫೨॥

ಅಥವಾ ಸೂರ್ಯಾಸ್ತವಾದ ಮೇಲೆ, ಸಂಧ್ಯಾಕಾಲವು ಸನ್ನಿಹಿತವಾದಾಗ ನಿಮ್ಮ ಮಗನನ್ನು ನಿಮ್ಮ ಜೊತೆಗೆ ಒಯ್ಯಿರಿ ಅಥವಾ ನೀವು ಇಲ್ಲೇ ಇರಿ.

ಗೃಧ್ರಃ

ಅದ್ಯ ವರ್ಷಸಹಸ್ರಂ ಮೇ ಸಾಗ್ರಂ ಜಾತಸ್ಯ ಮಾನುಷಾಃ ।
ನ ಚ ಪಶ್ಯಾಮಿ ಜೀವಂತಂ ಮೃತಂ ಸ್ತ್ರೀಪುಂನಪುಂಸಕಮ್ ॥೫೩॥

ಮನುಷ್ಯರೇ! ನಾನು ಹುಟ್ಟಿ ಬಂದು ಸಾವಿರ ವರ್ಷಕ್ಕಿಂತ ಹೆಚ್ಚಾಯಿತು. ಸತ್ತು ಬದುಕಿದ ಪುರುಷನನ್ನೋ , ಸ್ತ್ರೀಯನ್ನೋ, ನಪುಂಸಕನನ್ನೋ ನಾನು ನೋಡಿಲ್ಲ.

ಮೃತಾ ಗರ್ಭೇಷು ಜಾಯಂತೇ ಮ್ರಿಯಂತೇ ಜಾತಮಾತ್ರಕಾಃ ।
ವಿಕ್ರಮಂತೋ ಮ್ರಿಯಂತೇ ಚ ಯೌವನಸ್ಥಾಸ್ತಥಾಪರೇ ॥೫೪॥

ಗರ್ಭದಲ್ಲೇ ಸತ್ತು ಹುಟ್ಟುತ್ತಾರೆ. ಹುಟ್ಟಿದ ಕೂಡಲೇ ಸಾಯುತ್ತಾರೆ. ಪರಾಕ್ರಮವನ್ನು ಮೆರೆಯುತ್ತಾ ಸಾಯುತ್ತಾರೆ. ಮತ್ತೆ ಕೆಲವರು ತರುಣರಾಗಿದ್ದಾಗ ಸಾಯುತ್ತಾರೆ.

ಅನಿತ್ಯಾನೀಹ ಭಾಗ್ಯಾನಿ ಚತುಷ್ಪಾತ್ಕ್ಷಿಣಾಮಪಿ ।
ಜಂಗಮಾಜಂಗಮಾನಾಂ ಚಾಪ್ಯಾಯುರಗ್ರೇऽವತಿಷ್ಠತೇ ॥೫೫॥

ನಾಲ್ಕು ಕಾಲಿನ ಪ್ರಾಣಿಗಳ ಮತ್ತು ಪಕ್ಷಿಗಳ ಭಾಗ್ಯವೂ ಅನಿತ್ಯವೇ. ಎಲ್ಲ ಜಂಗಮ-ಸ್ಥಾವರಗಳಿಗೆ ಆಯುಷ್ಯವೇ ಮುಖ್ಯ.

ಇಷ್ಟದಾರವಿಯುಕ್ತಾಶ್ಚ ಪುತ್ರಶೋಕಾನ್ವಿತಾಸ್ತಥಾ ।
ದಹ್ಯಮಾನಾಃ ಸ್ಮ ಶೋಕೇನ ಗೃಹಂ ಗಚ್ಛಂತಿ ನಿತ್ಯದಾ ॥೫೬॥

ಪ್ರಿಯಜನರ ವಿಯೋಗಕ್ಕೊಳಗಾದವರು, ಪತ್ನೀವಿಯೋಗಕ್ಕೆ ಒಳಗಾದವರು, ಪುತ್ರಶೋಕಕ್ಕೆ ಒಳಗಾದವರು ಶೋಕದಿಂದ ತಪಿಸುತ್ತಾ ಮನೆಗೆ ಹೋಗುತ್ತಾರೆ. ಪ್ರತಿದಿನ ಹೀಗೆಯೇ ನಡೆಯುತ್ತಾರೆ.

ಅನಿಷ್ಟಾನಾಂ ಸಹಸ್ರಾಣಿ ತಥೇಷ್ಟಾನಾಂ ಶತಾನಿ ಚ ।
ಉತ್ಸೃಜ್ಯೇಹ ಪ್ರಯಾತಾ ವೈ ಬಾಂಧವಾ ಭೃಶದುಃಖಿತಾಃ ॥೫೭॥

ಅತ್ಯಂತ ದುಃಖಮಗ್ನರಾದ ಬಂಧುಗಳು ಸಾವಿರಾರು ಇಷ್ಟರಲ್ಲದವರನ್ನು, ನೂರಾರು ಪ್ರಿಯಜನರನ್ನು ಇಲ್ಲಿ ಬಿಟ್ಟುಹೋಗಿದ್ದಾರೆ.

ತ್ಯಜ್ಯತಾಮೇಷ ನಿಸ್ತೇಜಾಃ ಶೂನ್ಯಃ ಕಾಷ್ಠತ್ವಮಾಗತಃ ।
ಅನ್ಯದೇಹವಿಷಕ್ತೋ ಹಿ ಶಾವಂ ಕಾಷ್ಠಮುಪಾಸತೇ ॥೫೮॥

ತೇಜೋಹೀನನಾದ, ಸೊನ್ನೆಯಾಗಿರುವ, ಕಟ್ಟಿಗೆಯಂತಿರುವ ಇವನನ್ನು ಇಲ್ಲಿ ಬಿಟ್ಟುಬಿಡಿ. ಇವನು ಈಗಾಗಲೇ ಬೇರೆ ದೇಹಕ್ಕೆ ಅಂಟಿಕೊಂಡಿದ್ದಾನೆ. ನೀವು ಕಟ್ಟಿಗೆಯಂತಿರುವ ಶವದ ಹತ್ತಿರ ಇದ್ದೀರಿ.

ಭ್ರಾಂತಜೀವಸ್ಯ ವೈ ಬಾಷ್ಪಂ ಕಸ್ಮಾದ್ದಿತ್ವಾ ನ ಗಚ್ಛಥ ।
ನಿರರ್ಥಕೋ ಹ್ಯಯಂ ಸ್ನೇಹೋ ನಿರರ್ಥಶ್ಚ ಪರಿಶ್ರಮಃ ॥೫೯॥

ಹೊರಟು ಹೋಗಿರುವ ಈ ಜೀವಕ್ಕಾಗಿ ಕಂಬನಿ ಮಿಡಿದು ನೀವೇಕೆ ಇವನನ್ನು ಬಿಟ್ಟು ಹೋಗುತ್ತಿಲ್ಲ. ನಿಮ್ಮ ಈ ಸ್ನೇಹ ನಿರರ್ಥಕ. ನಿಮ್ಮ ಪರಿಶ್ರಮ ವ್ಯರ್ಥ.

ನ ಚಕ್ಷುರ್ಭ್ಯಾಂ ನ ಕರ್ಣಾಭ್ಯಾಂ ಸಂಶೃಣೋತಿ ಸಮೀಕ್ಷತೇ ।
ತಸ್ಮಾದೇನಂ ಸಮುತ್ಸೃಜ್ಯ ಸ್ವಗೃಹಾನ್ ಗಚ್ಛತಾಶು ವೈ ॥೬೦॥

ಕಣ್ಣುಗಳಿಂದ ನೋಡುವುದಿಲ್ಲ. ಕಿವಿಗಳಿಂದ ಕೇಳುವುದಿಲ್ಲ. ಆದ್ದರಿಂದ ಇವನನು ಇಲ್ಲಿ ಬಿಟ್ಟು ಬೇಗ ಮನೆಗೆ ಹೋಗಿರಿ.

ಮೋಕ್ಷಧರ್ಮಾಶ್ರಿತೈರ್ವಾಕ್ಯೈರ್ಹೇತುಮದ್ಭಿರನಿಷ್ಠುರೈಃ ।
ಮಯೋಕ್ತಾ ಗಚ್ಛತ ಕ್ಷಿಪ್ರಂ ಸ್ವಂ ಸ್ವಮೇವ ನಿವೇಶನಮ್ ॥೬೧॥

ಮೋಕ್ಷ ಮತ್ತು ಧರ್ಮಗಳ ಸಾಧನೆಗೆ ಅನುಕೂಲವಾದ, ಯುಕ್ತಿಯುಕ್ತವಾದ, ಸೌಮ್ಯವಾದ ಮಾತುಗಳನ್ನು ಹೇಳಿದ್ದೇನೆ. ಬೇಗನೆ ನಿಮ್ಮ ನಿಮ್ಮ ಮನೆಗೆ ತೆರಳಿರಿ.

ಪ್ರಜ್ಞಾವಿಜ್ಞಾನಯುಕ್ತೇನ ಬುದ್ಧಿಸಂಜ್ಞಾಪ್ರದಾಯಿನಾ ।
ವಚನಂ ಶ್ರಾವಿತಾ ನೂನಂ ಮಾನುಷಾಃ ಸನ್ನಿವರ್ತತ ॥೬೨॥

ಪ್ರಜ್ಞಾ-ವಿಜ್ಞಾನ ಸಂಪನ್ನನಾದ, ಬುದ್ಧಿ-ವಿವೇಕಗಳನ್ನು ಕೊಡುವ ನಾನು ನಿಮಗೆ ಒಳ್ಳೆಯ ಮಾತುಗಳನ್ನು ಕೇಳಿಸಿದ್ದೇನೆ. ಮನುಷ್ಯರೇ! ಸಂದೇಹಬೇಡ, ಹಿಂತಿರುಗಿರಿ.

ಜಂಬುಕಃ

ಇಮಂ ಕನಕವರ್ಣಾಭಂ ಭೂಷಣೈಃ ಸಮಲಂಕೃತಮ್ ।
ಗೃಧ್ರವಾಕ್ಯಾತ್ ಕಥಂ ಪುತ್ರಂ ತ್ಯಜಧ್ವಂ ಪಿತೃಪಿಂಡದಮ್ ॥೬೩॥

ಬಂಗಾರದ ಬಣ್ಣ ಮತ್ತು ಕಾಂತಿಗಳನ್ನು ಹೊಂದಿರುವ, ಆಭರಣಗಳಿಂದ ಅಲಂಕೃತನಾದ, ಮುಂದೆ ಪಿತೃಗಳಿಗೆ ಪಿಂಡ ಪ್ರದಾನ ಮಾಡುವ ಮಗನನ್ನು ಹದ್ದಿನ ಮಾತನ್ನು ಕೇಳಿ ಹೇಗೆ ತ್ಯಜಿಸುವಿರಿ?

ನ ಸ್ನೇಹಸ್ಯ ವಿರೋಧೋಸ್ತಿ ವಿಲಾಪರುದಿತಸ್ಯ ವೈ ।
ಮೃತಸ್ಯಾಸ್ಯ ಪರಿತ್ಯಾಗಾತ್ ತಪೋ ವೈ ಭವಿತಾ ಧ್ರುವಮ್ ॥೬೪॥

ಸ್ನೇಹಕ್ಕೆ ತಡೆಯಿಲ್ಲ. ವಿಲಾಪ ಮತ್ತು ಅಳುವಿಗೂ ತಡೆಯಿಲ್ಲ. ಮೃತನಾದ ಇವನನ್ನು ತ್ಯಜಿಸಿದರೆ ನಿಮಗೆ ಮುಂದೆ ದುಃಖವೇ ಆಗುತ್ತದೆ. ಇದು ನಿಶ್ಚಯ.

ಶ್ರೂಯತೇ ಶಂಬುಕೇ ಶೂದ್ರೇ ಹತೇ ಬ್ರಾಹ್ಮಣದಾರಕಃ ।
ಜೀವಿತೋ ಧರ್ಮಮಾಸಾದ್ಯ ರಾಮಾತ್ ಸತ್ಯಪರಾಕ್ರಮಾತ್ ॥೬೫॥

ಸತ್ಯಪರಾಕ್ರಮನಾದ ರಾಮನಿಂದ ಧರ್ಮವನ್ನು ಅವಲಂಬಿಸಿ ಶೂದ್ರ ಶಂಬುಕನು ಕೊಲ್ಲಲ್ಪಟ್ಟನಂತರ, ಬ್ರಾಹ್ಮಣಕುಮಾರನು ಬದುಕಿದನು ಎಂದು ಕೇಳಿದ್ದೇವೆ.

ತಥಾ ಶ್ವೇತಸ್ಯ ರಾಜರ್ಷೇರ್ಬಾಲೋ ದಿಷ್ಟಾಂತಮಾಗತಃ ।
ಶ್ವೋಽಭೂತೇ ಧರ್ಮನಿತ್ಯೇನ ಮೃತಃ ಸಂಜೀವಿತಃ ಪುನಃ ॥೬೬॥

ಹಾಗೆಯೇ, ಶ್ವೇತ ಎಂಬ ರಾಜರ್ಷಿಯ ಬಾಲಕನು ಮೃತನಾಗಿದ್ದನು. ಧರ್ಮನಿಷ್ಠನಾದ ಒಬ್ಬ ಸಿದ್ಧಪುರುಷನು ಮರುದಿನಕ್ಕಿಂತ ಮೊದಲೇ= ಆ ದಿನವೇ (ಮರುದಿನವೇ) ಮೃತಪುತ್ರನನ್ನು ಬದುಕಿಸಿದನು.

ತಥಾ ಕಶ್ಚಿದ್ ಭವೇತ್ ಸಿದ್ಧೋ ಮುನಿರ್ವಾ ದೇವತಾಪಿ ವಾ ।
ಕೃಪಣಾನಾಮನುಕ್ರೋಶಂ ಕುರ್ಯಾದ್ವೋ ರುದತಾಮಿಹ ॥೬೭॥

ಹಾಗೆಯೇ ಯಾರಾದರೊಬ್ಬ ಸಿದ್ಧಪುರುಷನೋ, ಮುನಿಯೋ, ದೇವತೆಯೋ ಬರಬಹುದು. ಅವನು ಅಳುತ್ತಿರುವ, ಕೃಪಣರಾದ ನಿಮ್ಮ ಮೇಲೆ ದಯೆ ತೋರಬಹುದು.

ಭೀಷ್ಮಃ

ಇತ್ಯುಕ್ತಾಃ ಸನ್ನ್ಯವರ್ತಂತ ಶೋಕಾರ್ತಾಃ ಪುತ್ರವತ್ಸಲಾಃ ।
ಅಂಕೇ ಶಿರಃ ಸಮಾಧಾಯ ರುರುದುರ್ಬಹುವಿಸ್ತರಮ್ ॥೬೮॥

ಹೀಗೆ ಹೇಳಲ್ಪಟ್ಟ ಶೋಕಾರ್ತರಾದ, ಪುತ್ರವತ್ಸಲರಾದ ಆ ಜನರು ಶವದ ಬಳಿ ಹಿಂತಿರುಗಿದರು. ತೊಡೆಯ ಮೇಲೆ ಮೃತನ ತಲೆಯಿಟ್ಟುಕೊಂಡು ಬಹಳ ಅತ್ತರು.

ಗೃಧ್ರಃ

ಅಶ್ರುಪಾತಪರಿಕ್ಲಿನ್ನಃ ಪಾಣಿಸ್ಪರ್ಶನಪೀಡಿತಃ ।
ಧರ್ಮರಾಜಪ್ರಯೋಗಾಚ್ಚ ದೀರ್ಘಾಂ ನಿದ್ರಾಂ ಪ್ರವೇಶಿತಃ ॥೬೯॥

ನಿಮ್ಮ ಕಣ್ಣೀರುಗಳಿಂದ ತೊಯ್ದಿರುವ, ನಿಮ್ಮ ಪ್ರಾಣಿಸ್ಪರ್ಶದ ಹಿತಾನುಭವವನ್ನು ಹೊಂದಿರುವ ಈ ಬಾಲಕನು ಯಮಧರ್ಮರಾಜನ ಶಾಸನದಂತೆ ಚಿರನಿದ್ರೆಗೆ ಹೋಗಿದ್ದಾನೆ.

ತಪಸಾಪಿ ಹಿ ಸಂಯುಕ್ತೋ ನಕಾಲೇ ನೋಪಹನ್ಯತೇ ।
ಸರ್ವಸ್ನೇಹಾವಸಾನಂ ತದಿದಂ ತತ್ ಪ್ರೇತಪತ್ತನಮ್ ॥೭೦॥

ತಪಸ್ವಿಗಳೂ ಕೂಡ ಆಯುಷ್ಯ ಮುಗಿದಾಗ ಮರಣಕ್ಕೆ ಒಳಗಾಗುತ್ತಾರೆ. ಈ ಪ್ರೇತ ಪಟ್ಟಣವು (ಸ್ಮಶಾನವು) ಎಲ್ಲ ಸ್ನೇಹಗಳೂ ಕೊನೆಯಾಗುವ ತಾಣ.

ಬಾಲವೃದ್ಧಸಹಸ್ರಾಣಿ ಸದಾ ಸಂತ್ಯಜ್ಯ ಬಾಂಧವಾಃ ।
ದಿನಾನಿ ಚೈವ ರಾತ್ರೀಶ್ಚ ದುಃಖಂ ತಿಷ್ಠಂತಿ ಭೂತಲೇ ॥೭೧॥

ಸಾವಿರಾರು ಬಾಲಕರನ್ನು- ವೃದ್ಧರನ್ನು ಬಂಧುಗಳು ಹಗಲು- ರಾತ್ರಿಗಳಲ್ಲಿ ಇಲ್ಲಿ ಬಿಟ್ಟು ದುಃಖಿಸುತ್ತಾರೆ. ಇದು ಭೂಲೋಕದ ಸ್ಥಿತಿ.

ಅಲಂ ನಿರ್ಬಂಧಮಾಗಮ್ಯ ಶೋಕಸ್ಯ ಪರಿವಾರಣಮ್ ।
ಸಂಪ್ರತ್ಯಯಕೃತೋಽಪ್ಯಸ್ಯ ಪುನರದ್ಯೇಹ ಜೀವಿತಮ್ ॥೭೨॥

ಈ ನಿರ್ಬಂಧ ಸಾಕು. ಶೋಕದ ಪರಿಹಾರವನ್ನು ಮಾಡಿಕೊಳ್ಳಿ. ಈ ನರಿ ಎಷ್ಟೇ ನಂಬಿಕೆಯನ್ನು ಹುಟ್ಟಿಸಿದರೂ ಈ ದಿನ ಇವನ ಪುನರುಜ್ಜೀವನವು ಆಗುವುದಿಲ್ಲ.

ನೈಷ ಜಂಬುಕವಾಕ್ಯೇನ ಪುನಃ ಪ್ರಾಪ್ಸ್ಯತಿ ಜೀವಿತಮ್ ।
ಭೂತಸ್ಯೋತ್ಸೃಷ್ಟದೇಹಸ್ಯ ಪುನರ್ದೇಹೋ ನ ವಿದ್ಯತೇ ॥೭೩॥

ನರಿಯ ಮಾತಿನಿಂದ ಈ ಬಾಲಕ ಮತ್ತೆ ಬದುಕುವುದಿಲ್ಲ. ದೇಹವನ್ನು ಬಿಟ್ಟ ಚೇತನಕ್ಕೆ ಪುನಃ ಅದೇ ದೇಹದಲ್ಲಿ ಪ್ರವೇಶವಿಲ್ಲ.

ನ ವೈ ಮೂರ್ತಿಪ್ರದಾನೇನ ನ ಜಂಬುಕಶತೈರಪಿ ।
ಶಕ್ಯೋ ಜೀವಯಿತುಂ ಹ್ಯೇಷ ಬಾಲೋ ವರ್ಷಶತೈರಪಿ ॥೭೪॥

ನೂರಾರು ನರಿಗಳು ಒಟ್ಟಾಗಿ ನೂರಾರು ವರ್ಷ ಪ್ರಯತ್ನಿಸಿದರೂ ಇವನಿಗೆ ದೇಹವನ್ನು ಕೊಟ್ಟು ಬದುಕಿಸಲು ಆಗುವುದಿಲ್ಲ.

ಅಪಿ ರುದ್ರಃ ಕುಮಾರೋ ವಾ ಬ್ರಹ್ಮಾ ವಾ ವಿಷ್ಣುರೇವ ವಾ ।
ವರಮಸ್ಮೈ ಪ್ರಯಚ್ಛೇಯುಸ್ತತೋ ಜೀವೇದಯಂ ಶಿಶುಃ ॥೭೫॥

ರುದ್ರದೇವರು, ಷಣ್ಮುಖ, ಚತುರ್ಮುಖ ಬ್ರಹ್ಮ, ವಿಷ್ಣು- ಇವರಲ್ಲಿ ಯಾರಾದರೂ ವರವನ್ನು ಕೊಟ್ಟರೆ, ಆ ವರಬಲದಿಂದ ಈ ಶಿಶುವು ಬದುಕಬಹುದು.

ನ ಚ ಬಾಷ್ಪವಿಮೋಕ್ಷೇಣ ನ ಚಾಶ್ವಾಸಕೃತೇನ ವೈ ।
ನ ದೀರ್ಘರುದಿತೇನೇಹ ಪುನರ್ಜೀವೋ ಭವಿಷ್ಯತಿ ॥೭೬॥

ಕಣ್ಣೀರು ಹಾಕುವುದರಿಂದ ಈ ಶಿಶುವಿಗೆ ಪುನಃ ಜೀವ ಬರುವುದಿಲ್ಲ. ಆಶ್ವಾಸನೆಯಿಂದ ಬರುವುದಿಲ್ಲ. ದೀರ್ಘರೋದನದಿಂದಲೂ ಬರುವುದಿಲ್ಲ.

ಅಹಂ ಚ ಕ್ರೋಷ್ಟುಕಶ್ಚೈವ ಯೂಯಂ ಚೈವಾಸ್ಯ ಬಾಂಧವಾಃ ।
ಧರ್ಮಾಧರ್ಮೌ ಗೃಹೀತ್ವೇಹ ಸರ್ವೇ ವರ್ತಾಮಹೇಧ್ವನಿ ॥೭೭॥

ನಾನು, ಈ ನರಿ, ಈ ಶಿಶುವಿನ ಬಂಧುಗಳಾದ ನೀವು - ಎಲ್ಲರೂ ಅವರವರ ಧರ್ಮ-ಅಧರ್ಮಗಳನ್ನು (ಪುಣ್ಯ-ಪಾಪಗಳನ್ನು) ಹಿಡಿದುಕೊಂಡೇ (ಅವುಗಳ ಫಲವನ್ನು ಅನುಭವಿಸುತ್ತಲೇ) ಜೀವನ ಮಾರ್ಗದಲ್ಲಿ ಇದ್ದೇವೆ.

ಅಪ್ರಿಯಂ ಪರುಷಂ ಚಾಪಿ ಪರದ್ರೋಹಂ ಪರಸ್ತ್ರಿಯಮ್ ।
ಅಧರ್ಮಮನೃತಂ ಚೈವ ದೂರಾತ್ ಪ್ರಾಜ್ಞೋ ನಿವರ್ತಯೇತ್ ॥೭೮॥

ಅಪ್ರಿಯ ನಡವಳಿಕೆ, ನಿಷ್ಠುರ ಮಾತು, ಪರದ್ರೋಹ, ಪರಸ್ತ್ರೀ, ಅಧರ್ಮ, ಸುಳ್ಳು- ಇವುಗಳನ್ನು ಪ್ರಾಜ್ಞನು ಸರ್ವಥಾ ದೂರವಿರಿಸಬೇಕು.

ಸತ್ಯಂ ಧರ್ಮಂ ಶುಭಂ ನ್ಯಾಯ್ಯಂ ಪ್ರಾಣಿನಾಂ ಮಹತೀಂ ದಯಾಮ್।
ಅಜಿಹ್ಮತ್ವಮಶಾಠ್ಯಂ ಚ ಯತ್ನತಃ ಪರಿಮಾರ್ಗತ ॥೭೯॥

ಸತ್ಯ, ಧರ್ಮ, ಶುಭ, ನ್ಯಾಯ, ಪ್ರಾಣಿಗಳ ಮೇಲೆ ದೊಡ್ಡ ಪ್ರಮಾಣದ ದಯೆ, ಅಕುಟಿಲತೆ, ಶಾಠ್ಯಹೀನತೆ - ಇವುಗಳನ್ನು ಪ್ರಯತ್ನ ಪೂರ್ವಕವಾಗಿ ಅನುಸರಿಸಿರಿ.

ಮಾತರಂ ಪಿತರಂ ಚೈವ ಬಾಂಧವಾನ್ ಸುಹೃದಸ್ತಥಾ ।
ಜೀವತೋ ಯೇ ನ ಪಶ್ಯಂತಿ ತೇಷಾಂ ಧರ್ಮವಿಪರ್ಯಯಃ ॥೮೦॥

ತಾಯಿ, ತಂದೆ, ಬಂಧುಗಳು, ಸ್ನೇಹಿತರು- ಇವರನ್ನು, ಇವರು ಬದುಕಿದ್ದಾಗ, ಯಾರು ಆದರಿಸುವುದಿಲ್ಲವೋ ಅವರಿಗೆ ಪಾಪವೇ ಅಂಟಿಕೊಳ್ಳುತ್ತದೆ.

ಯೋ ನ ಪಶ್ಯತಿ ಚಕ್ಷುರ್ಭ್ಯಾಂ ನೇಂಗತೇ ಚ ಕಥಂಚನ ।
ತಸ್ಯ ನಿಷ್ಠಾವಸಾನಾಂತೇ ರುದಂತಃ ಕಿಂ ಕರಿಷ್ಯಥ ॥೮೧॥

ಯಾರು ಕಣ್ಣುಗಳಿಂದ ನೋಡುವುದಿಲ್ಲವೋ ಯಾರಲ್ಲಿ ಯಾವ ಚಲನೆಯೂ ಇಲ್ಲವೋ, ಅವನ ಮರಣವಾಗಿರುವುದು ನಿಶ್ಚಯ. ಅವಸಾನವೂ ನಿಶ್ಚಯವಾಗಿರುವಾಗ ಅಳುತ್ತಾ ಏನು ಮಾಡುತ್ತೀರಿ.

ಭೀಷ್ಮಃ

ಇತ್ಯುಕ್ತಾಸ್ತಂ ಸುತಂ ತ್ಯಕ್ತ್ವಾ ಭೂಮೌ ಶೋಕಪರಿಪ್ಲುತಾಃ ।
ದಹ್ಯಮಾನಾಃ ಸುತಸ್ನೇಹಾತ್ ಪ್ರಯಯುರ್ಬಾಂಧವಾ ಗೃಹಾನ್ ॥೮೨॥

ಹೀಗೆ ಹೇಳಲ್ಪಟ್ಟ, ಶೋಕದಲ್ಲಿ ಮುಳುಗಿದ್ದ ಆ ಬಾಂಧವರು ಆ ಮಗನನ್ನು ಅಲ್ಲೇ ಭೂಮಿಯಲ್ಲಿ ಬಿಟ್ಟು, ಸುತಸ್ನೇಹದಿಂದ ಬೇಯುತ್ತಾ ಮನೆಯ ಕಡೆಗೆ ಹೊರಟರು.

ಜಂಬುಕಃ

ದಾರುಣೋ ಮರ್ತ್ಯಲೋಕೋಽಯಂ ಸರ್ವಪ್ರಾಣಿವಿನಾಶನಃ ।
ಇಷ್ಟಬಂಧುವಿಯೋಗಶ್ಚ ತಥೈವಾಲ್ಪಂ ಚ ಜೀವಿತಮ್ ॥೮೩॥

ಬಹ್ವಲೀಕಮಸತ್ಯಂ ಚ ಪ್ರತಿವಾದಾಪ್ರಿಯಂವದಮ್ ।
ಇಮಂ ಪ್ರೇಕ್ಷ್ಯ ಪುನರ್ಭಾವಂ ದುಃಖಶೋಕಾಭಿವರ್ಧನಮ್ ॥೮೪॥

ನ ಮೇ ಮಾನುಷಲೋಕೋಽಯಂ ಮುಹೂರ್ತಮಪಿ ರೋಚತೇ ।
ಅಹೋ ಧಿಗ್ಧ್ರಧ್ರವಾಕ್ಯೇನ ಸನ್ನಿವರ್ತಧ್ವ ಮಾನುಷಾಃ ॥೮೫॥

ಈ ಮನುಷ್ಯ ಸಮುದಾಯ ದಾರುಣ. ಇಲ್ಲಿ ಎಲ್ಲ ಪ್ರಾಣಧಾರಿಗಳೂ ನಾಶವಾಗುತ್ತಾರೆ. ಇಷ್ಟಬಂಧುಗಳ ವಿಯೋಗವಾಗುತ್ತದೆ. ಇಲ್ಲಿ ಆಯುಷ್ಯವೂ ಕಡಿಮೆ. ಇಲ್ಲಿ ಬಹಳ ಸುಳ್ಳು. ಬಹಳ ಅಸತ್ಯ. ಎದುರುತ್ತರ ಅಪ್ರಿಯವಚನಗಳು. ದುಃಖ-ಶೋಕಗಳನ್ನು ಹೆಚ್ಚಿಸುವ ಈ ಸ್ಥಿತಿಯನ್ನು ನೋಡಿ ನನಗೆ ಈ ಮನುಷ್ಯಲೋಕವು ಸ್ವಲ್ಪವೂ ಇಷ್ಟವಾಗುತ್ತಿಲ್ಲ. ಸ್ವಲ್ಪ ಹೊತ್ತು ಕೂಡ ಇಷ್ಟವಾಗುತ್ತಿಲ್ಲ. ಅಯ್ಯೋ! ಅನ್ಯಾಯ! ಮನುಷ್ಯರೇ! ಹದ್ದಿನ ಮಾತು ಕೇಳಿ ಹಿಂತಿರುಗುತ್ತಿದ್ದೀರಿ!

ಪ್ರದೀಪ್ತಾಃ ಪುತ್ರಶೋಕೇನ ಯಥೈವಾಬುದ್ಧಯಸ್ತಥಾ ।
ಕಥಂ ಗಚ್ಛಥ ಸಸ್ನೇಹಾಃ ಸುತಸ್ನೇಹಂ ವಿಸೃಜ್ಯ ಚ ।
ಶ್ರುತ್ವಾ ಗೃಧ್ರಸ್ಯ ವಚನಂ ಪಾಪಸ್ಯೇಹಾಕೃತಾತ್ಮನಃ ॥೮೬॥

ಪುತ್ರಶೋಕದ ಜ್ವಾಲೆಯಲ್ಲಿ ಸುಟ್ಟು ಹೋಗಿರುವ, ಸ್ನೇಹಮಯರಾದ ನೀವು, ಪಾಪಿಯಾದ, ಅಶುದ್ಧ ಬುದ್ಧಿಯ ಹದ್ದಿನ ಮಾತನ್ನು ಕೇಳಿ ಸುತಸ್ನೇಹವನ್ನು ಬಿಟ್ಟು ಹೇಗೆ ಹೊರಟು ಹೋಗುತ್ತೀರಿ?

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್ ।
ಸುಖದುಃಖಾನ್ವಿತೇ ಲೋಕೇ ನೇಹಾಸ್ತ್ಯೇಕಮನಂತಕಮ್ ॥೮೭॥

ಸುಖದ ಅನಂತರ ದುಃಖ. ದುಃಖದ ಅನಂತರ ಸುಖ. ಸುಖ-ದುಃಖಗಳೆರಡೂ ಇರುವ ಈ ಲೋಕದಲ್ಲಿ ಯಾವುದೇ ಒಂದು ಶಾಶ್ವತವಲ್ಲ.

ಇಮಂ ಕ್ಷಿತಿತಲೇ ನ್ಯಸ್ಯ ಬಾಲಂ ರೂಪಸಮನ್ವಿತಮ್ ।
ಕುಲಶೋಭಾಕರಂ ಮೂಢಾಃ ಪುತ್ರಂ ತ್ಯಕ್ತ್ವಾ ಕ್ವ ಯಾಸ್ಯಥ ॥೮೮॥

ಮೂಢರೆ! ರೂಪಸಂಪನ್ನನಾದ, ಕುಲಕ್ಕೆ ಶೋಭಾಕರನಾದ ಈ ಬಾಲಕ ಪುತ್ರನನ್ನು ಭೂಮಿಯಲ್ಲಿ ಬಿಟ್ಟು ಎಲ್ಲಿಗೆ ಹೋಗುತ್ತೀರಿ?

ರೂಪಯೌವನಸಂಪನ್ನಂ ದ್ಯೋತಮಾನಮಿವ ಶ್ರಿಯಾ ।
ಜೀವಂತಮೇನಂ ಪಶ್ಯಾಮಿ ಮನಸಾ ನಾತ್ರ ಸಂಶಯಃ ॥೮೯॥

ಇವನು ಬದುಕಿ, ರೂಪ-ಯೌವನ ಸಂಪನ್ನನಾಗಿ, ಕಾಂತಿಯಿಂದ ಬೆಳಗುವವನಂತೆ ನನ್ನ ಮನಸ್ಸಿಗೆ ಕಾಣುತ್ತಿದೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ವಿನಾಶಶ್ಚಾಪ್ಯನಹೋ೯ಽಸ್ಯ ಸುಖಂ ಪ್ರಾಪ್ಸ್ಯಥ ಮಾನುಷಾಃ ।
ಪುತ್ರಶೋಕಾಗ್ನಿದಗ್ಧಾನಾಂ ಮೃತಮಪ್ಯದ್ಯ ನ ಕ್ಷಮಮ್ ॥೯೦॥

ಇವನ ವಿನಾಶ ನ್ಯಾಯವಾದುದಲ್ಲ. ಮನುಷ್ಯರೇ ನಿಮಗೆ ಸುಖವು ಲಭಿಸುತ್ತದೆ. ನೀವು ಪುತ್ರಶೋಕಾಗ್ನಿಯಿಂದ ಸುಟ್ಟುಹೋಗಿದ್ದೀರಿ. ಈ ಮರಣ ಸರಿಯಲ್ಲ.

ದುಃಖಸಂಭಾವನಾಂ ಕೃತ್ವಾ ಧಾರಯಿತ್ವಾ ಸ್ವಯಂ ಸುಖಮ್ ।
ತ್ಯಕ್ತ್ವಾ ಗಮಿಷ್ಯಥ ಕ್ವಾದ್ಯ ಸಮುತ್ಸ್ರಜ್ಯಾಲ್ಪಬುದ್ಧಿವತ್ ॥೯೧॥

ದುಃಖದ ತೀವ್ರ ಭಾವನೆಯನ್ನು ಮಾಡಿಕೊಂಡು, ಆದರೆ ಸುಖವೇ ಆಗಲಿ (ಬಾಲಕನು ಬದುಕಲಿ) ಎಂಬ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಅಲ್ಪಮತಿಯ ಜನರಂತೆ, ಇವನನ್ನು ಬಿಟ್ಟು ಎಲ್ಲಿಗೆ ಹೋಗುತ್ತೀರಿ?

ಭೀಷ್ಮಃ

ತಥಾ ಧರ್ಮವಿರೋಧೇನ ಪ್ರಿಯಮಿಥ್ಯಾಭಿಧ್ಯಾಯಿನಾ ।
ಸ್ಮಶಾನವಾಸಿನಾ ನಿತ್ಯಂ ರತಿಂ ಮೃಗಯತಾ ತದಾ ॥೯೨॥

ತತೋ ಮಧ್ಯಸ್ಥತಾಂ ನೀತಾ ವಚನೈರಮೃತೋಪಮೈಃ ।
ಜಂಬುಕೇನ ಸ್ವಕಾರ್ಯಾರ್ಥಂ ಬಾಂಧವಾಸ್ತಸ್ಯ ಧಿಷ್ಠಿತಾಃ ॥೯೩॥

ಹಾಗೆ (ಹಿಂದಿನ ಶ್ಲೋಕಗಳಲ್ಲಿ ಹೇಳಿರುವಂತೆ) ಧರ್ಮ ವಿರೋಧಿಯಾದ, ಪ್ರಿಯವಾದ ಸುಳ್ಳನ್ನು ಚಿಂತಿಸುವ, ನಿತ್ಯವೂ ಸ್ಮಶಾನವಾಸಿಯಾದ, ಅಲ್ಲೇ ಸುಖವನ್ನು ಹುಡುಕಿಕೊಳ್ಳುವ ನರಿಯ ಅಮೃತದಂತಹ ಮಾತುಗಳಿಂದ ಮಧ್ಯಸ್ಥ ಸ್ಥಿತಿಗೆ ಹೋದ ಆ ಬಾಂಧವರು ತಮ್ಮ ಕೆಲಸವು ಆಗುವುದೇನೋ ಎಂಬ ನಿರೀಕ್ಷೆಯಿಂದ ಅಲ್ಲೇ ನಿಂತರು.

ಗೃಧ್ರಃ

ಅಯಂ ಪ್ರೇತಸಮಾಕೀರ್ಣೋ ಯಕ್ಷರಾಕ್ಷಸಸೇವಿತಃ ।
ದಾರುಣಃ ಕಾನನೋದ್ದೇಶಃ ಕೌಶಿಕೈರಭಿನಾದಿತಃ ॥೯೪॥

ಭೀಮಃ ಸುಘೋರಶ್ಚ ತಥಾ ನೀಲಮೇಘಸಮಪ್ರಭಃ ।
ಅಸ್ಮಿನ್ಶವಂ ಪರಿತ್ಯಜ್ಯ ಪ್ರೇತಕಾರ್ಯಾಣ್ಯುಪಾಸತ ॥೯೫॥

ಈ ಸ್ಥಳ ಪ್ರೇತಗಳಿಂದ ತುಂಬಿದೆ. ಯಕ್ಷರೂ, ರಾಕ್ಷಸರೂ ಇಲ್ಲಿದ್ದಾರೆ. ಇದು ದಾರುಣ ಕಾಡು ಪ್ರದೇಶ. ಇಲ್ಲಿ ಎಲ್ಲೆಲ್ಲೂ ಭಯಂಕರವಾದ ಘೋರವಾದ ಗೂಬೆಗಳ ಧ್ವನಿ. ಇಲ್ಲಿ ಕಪ್ಪು ಮೋಡದ ಪ್ರಭೆ (ಬರೀ ಕತ್ತಲು). ಇಲ್ಲಿ ಶವವನ್ನು ಬಿಟ್ಟು ಸತ್ತವರಿಗೆ ಮಾಡಬೇಕಾದ ಕ್ರಿಯೆಗಳಲ್ಲಿ ತೊಡಗಿರಿ.

ಭಾನುರ್ಯಾವನ್ನ ಯಾತ್ಯಸ್ತಂ ಯಾವಚ್ಚ ವಿಮಲಾ ದಿಶಃ ।
ತಾವದೇನಂ ಪರಿತ್ಯಜ್ಯ ಪ್ರೇತಕಾರ್ಯಾಣ್ಯುಪಾಸತ ॥೯೬॥

ಸೂರ್ಯಾಸ್ತವಾಗುವುದಕ್ಕೆ ಮೊದಲೇ, ದಿಕ್ಕುಗಳು ವಿಮಲವಾಗಿರುವಾಗಲೇ ಇವನನ್ನು ಬಿಟ್ಟು ಸತ್ತವರಿಗೆ ಮಾಡಬೇಕಾದ ಕ್ರಿಯೆಗಳಲ್ಲಿ ತೊಡಗಿರಿ.

ನದಂತಿ ಪರುಷಂ ಶ್ಯೇನಾಃ ಶಿವಾಃ ಕ್ರೋಶಂತಿ ದಾರುಣಾಃ ।
ಮೃಗೇಂದ್ರಾಃ ಪ್ರತಿನಂದಂತಿ ರವಿರಸ್ತಂ ಚ ಗಚ್ಛತಿ ॥೯೭॥

ಇಲ್ಲಿ ಗಿಡುಗಗಳು ಕಠೋರವಾಗಿ ಕೂಗುತ್ತವೆ. ನರಿಗಳು ದಾರುಣವಾಗಿ ಕೂಗುತ್ತವೆ. ಸಿಂಹಗಳು ಪ್ರತಿಯಾಗಿ ಕೂಗುತ್ತವೆ. ಸೂರ್ಯನು ಅಸ್ತನಾಗುತ್ತಿದ್ದಾನೆ.

ಚಿತಾಧೂಮೇನ ನೀಲೇನ ಸಂರಜ್ಯಂತೇ ಚ ಪಾದಪಾಃ ।
ಶ್ಮಶಾನೇ ಚ ನಿರಾಹಾರಾಃ ಪ್ರತಿನಂದಂತಿ ದೇಹಿನಃ ॥೯೮॥

ಮರಗಳಿಗೆ ಕಪ್ಪು ಚಿತಾಧೂಮವು ಬಳಿದುಕೊಂಡಿದೆ. ಸ್ಮಶಾನದಲ್ಲಿ ಆಹಾರವಿಲ್ಲದ ಪ್ರಾಣಿಗಳು (ಪರಸ್ಪರ) ಎದುರು ಕೂಗುತ್ತವೆ.

ಸರ್ವೇ ವಿಕ್ರಾಂತವೀರ್ಯಾಶ್ಚ ಅಸ್ಮಿನ್ ದೇಶೇ ಸುದಾರುಣಾಃ ।
ಯುಷ್ಮಾನ್ ಪ್ರಧರ್ಷಯಿಷ್ಯಂತಿ ವಿಕೃತಾ ಮಾಂಸಭೋಜನಾಃ ॥೯೯॥

ಈ ಸ್ಥಳದಲ್ಲಿರುವ ಎಲ್ಲ ಪ್ರಾಣಿಗಳೂ ಪರಾಕ್ರಮಿಗಳು, ಮಾಂಸಾಹಾರಿಗಳು. ನಾನಾ ವಿಕಾರಗಳು ಅವುಗಳಿಗೆ ಇವೆ. ಅವು ನಿಮ್ಮನ್ನು ಆಕ್ರಮಿಸಿ ಘಾಸಿಗೊಳಿಸುತ್ತವೆ.

ದೂರಾಚ್ಚಾಯಂ ವನೋದ್ದೇಶೋ ಭಯಮತ್ರ ಭವಿಷ್ಯತಿ ।
ತ್ಯಜ್ಯತಾಂ ಕಾಷ್ಠಭೂತೋಯಂ ಮೃಷ್ಯತಾಂ ಜಾಂಬುಕಂ ವಚಃ ॥೧೦೦॥

ಇಲ್ಲಿ ಭಯವಾಗುತ್ತದೆ. ಬೇಗ ಈ ವನಪ್ರದೇಶದಿಂದ ದೂರ ಹೋಗಿ. ಕಟ್ಟಿಗೆಯಾಗಿರುವ ಇವನನ್ನು ಬಿಟ್ಟುಬಿಡಿ. ನರಿಯ ಮಾತನ್ನು ಕೇಳಬೇಡಿ.

ಯದಿ ಜಂಬುಕವಾಕ್ಯಾನಿ ನಿಷ್ಫಲಾನ್ಯನೃತಾನಿ ಚ ।
ಶ್ರೋಷ್ಯಥ ಭ್ರಷ್ಟವಿಜ್ಞಾನಾಸ್ತತಃ ಸರ್ವೇ ವಿನಂಕ್ಷ್ಯಥ ॥೧೦೧॥

ನೀವು ಜ್ಞಾನರಹಿತರಾಗಿ, ನಿಷ್ಫಲವೂ, ಸುಳ್ಳು ಆದ ನರಿಯ ಮಾತುಗಳನ್ನೇ ಕೇಳಿದರೆ ಎಲ್ಲರೂ ನಾಶವಾಗುತ್ತೀರಿ.

ಜಂಬುಕಃ

ಸ್ಥೀಯತಾಂ ನೇಹ ಭೇತವ್ಯಂ ಯಾವತ್ತಪತಿ ಭಾಸ್ಕರಃ ।
ತಾವದಸ್ಮಿನ್ ಸುತಸ್ನೇಹಾದನಿರ್ವೇದೇನ ವರ್ತತ ॥೧೦೨॥

ನಿಲ್ಲಿ, ಹೆದರಬೇಡಿ. ಸೂರ್ಯನ ಬೆಳಕು ಇರುವವರೆಗೆ ಇಲ್ಲೇ , ಮಗನ ಮೇಲಿನ ಸ್ನೇಹದಿಂದ, ಬೇಸರವಿಲ್ಲದೆ ಇರಿ.

ಸ್ವೈರಂ ರುದತ ವಿಸ್ರಬ್ಧಾಃ ಸ್ವೈರಂ ಸ್ನೇಹೇನ ಪಶ್ಯತ ।
ಸ್ಥೀಯತಾಂ ಯಾವದಾದಿತ್ಯಃ ಕಿಂ ವಃ ಕ್ರವ್ಯಾದಭಾಷಿತೈಃ ॥೧೦೩॥

ಬದುಕುತ್ತಾನೆ ಎಂಬ ನಂಬಿಕೆವುಳ್ಳವರಾಗಿ. ಸಂಕೋಚವಿಲ್ಲದೆ ರೋದಿಸಿರಿ. ಸ್ನೇಹದಿಂದ ಕಾಣಿರಿ. ಸೂರ್ಯನಿರುವವರೆಗೆ ಇರಿ. ಆ ಮಾಂಸಭಕ್ಷಕನ ಮಾತಿನಿಂದ ನಿಮಗೆ ಏನೂ ಪ್ರಯೋಜನವಿಲ್ಲ.

ಯದಿ ಗೃಧ್ರಸ್ಯ ವಾಕ್ಯಾನಿ ತೀವ್ರಾಣಿ ರಭಸಾನಿ ಚ ।
ಗೃಹ್ಣೀತ ಮೋಹಿತಾತ್ಮಾನಃ ಸುತೋ ವೋ ನ ಭವಿಷ್ಯತಿ ॥೧೦೪॥

ಮೋಹಕ್ಕೊಳಗಾಗಿ, ಹದ್ದಿನ ತೀವ್ರವೂ, ರಭಸವೂ ಆದ ಮಾತುಗಳನ್ನು ಸ್ವೀಕರಿಸಿದರೆ ನಿಮ್ಮ ಮಗ ಇಲ್ಲವಾಗುತ್ತಾನೆ.

ಭೀಷ್ಮಃ

ಗೃಧ್ರೋಽನಸ್ತಮಿತೇ ತ್ವಾಹ ಗತೇಽಸ್ತಮಿತಿ ಜಂಬುಕಃ ।
ಮೃತಂ ಸುತಂ ಪ್ರತಿ ಜನಾನೂಚತುಸ್ತೌ ಕ್ಷುಧಾನ್ವಿತೌ ॥೧೦೫॥

ಸೂರ್ಯಾಸ್ತಕ್ಕಿಂತ ಮೊದಲೇ ಈ ಬಾಲಶವದ ಬಂಧುಗಳು ಹೊರಟು ಹೋಗಲಿ ಎಂದು ಹದ್ದು ಮಾತನಾಡುತ್ತದೆ. ಅಸ್ತವಾದ ಮೇಲೆ ಹೋಗಲಿ ಎಂದು ನರಿಯು ಮಾತನಾಡುತ್ತದೆ. ಹಸಿದಿದ್ದ ಆ ಗೃಧ್ರ-ಜಂಬುಕಗಳು ಮೃತ ಸುತನ ಬಗ್ಗೆ ಅವನ ಬಂಧು-ಜನಗಳಿಗೆ ತಮ್ಮ ಅನುಕೂಲಕ್ಕೆ ತಕ್ಕಂತೆ ಮಾತನಾಡಿದವು.

ಸ್ವಕಾರ್ಯದಕ್ಷೌ ರಾಜನ್ ಗೃಧ್ರೋ ಜಂಬುಕ ಏವ ಚ ।
ಕ್ಷುತ್ಪಿಪಾಸಾಪರಿಶ್ರಾನ್ತೌ ಶಾಸ್ತ್ರಮಾಲಂಬ್ಯ ಜಲ್ಪತಃ ॥೧೦೬॥

ರಾಜನೆ! ಗೃಧ್ರ ಮತ್ತು ಜಂಬುಕ- ಎರಡೂ ತಮ್ಮ ಕಾರ್ಯಸಾಧನೆಯಲ್ಲಿ ದಕ್ಷರು. ಹಸಿವೆ-ಬಾಯಾರಿಕೆಗಳಿಂದ ಬಳಲಿದ್ದಾರೆ. ಶಾಸ್ತ್ರವನ್ನೇ ಆಧರಿಸಿ ಮಾತನಾಡುತ್ತವೆ.

ತಯೋರ್ವಿಜ್ಞಾನವಿದುಷೋರ್ದ್ವಯೋರ್ಜಂಬುಕಪತ್ರಿಣೋಃ ।
ವಾಕ್ಯೈರಮೃತಕಲ್ಪೈರ್ಹಿ ಪ್ರಾತಿಷ್ಠಂತ (ಪ್ರತಿಷ್ಠತ) ವ್ರಜಂತಿ ಚ ॥೧೦೭॥

ಜ್ಞಾನಿಗಳಾದ ಆ ನರಿ-ಹದ್ದುಗಳ ಅಮೃತದಂತಹ ಮಾತುಗಳಿಂದ ಪ್ರಭಾವಿತರಾಗಿ ಹೊರಡುತ್ತಾರೆ. ಮತ್ತೆ ಬರುತ್ತಾರೆ.

ಶೋಕದೈನ್ಯಸಮಾವಿಷ್ಟಾ ರುದಂತಸ್ತಸ್ಥಿರೇ ತದಾ ।
ಸ್ವಕಾರ್ಯಕುಶಲಾಭ್ಯಾಂ ತೇ ಸಂಭ್ರಾಮ್ಯಂತೇ ಹ ನೈಪುಣಾತ್ ॥೧೦೮॥

ಶೋಕ ಮತ್ತು ದೈನ್ಯಗಳಲ್ಲಿ ಮುಳುಗಿರುವ ಅವರು ಅಳುತ್ತಾ ಅಲ್ಲೇ ನಿಂತರು. ತಮ್ಮ ಕಾರ್ಯಸಾಧನೆಯಲ್ಲಿ ಕುಶಲರಾದ ಅವೆರಡು ಪ್ರಾಣಿಗಳು ತಮ್ಮ ನೈಪುಣ್ಯದಿಂದ ಆ ಜನರಿಗೆ ಭ್ರಾಂತಿಯನ್ನುಂಟು ಮಾಡಿದವು.

ತಥಾ ತಯೋರ್ವಿವದತೋರ್ವಿಜ್ಞಾನವಿದುಷೋರ್ದ್ವಯೋಃ ।
ಬಾಂಧವಾನಾಂ ಸ್ಥಿತಾನಾಂ ಚ ಉಪಾತಿಷ್ಠತ ಶಂಕರಃ ॥೧೦೯॥

ಜ್ಞಾನಿಗಳಾದ ಅವೆರಡು ಪ್ರಾಣಿಗಳು ಹಾಗೆ ವಿರುದ್ಧವಾಗಿ ಮಾತನಾಡುತ್ತಿದ್ದಾಗ, ಸ್ಮಶಾನದಲ್ಲೇ ಇದ್ದ ಆ ಬಾಂಧವರ ಸಮೀಪಕ್ಕೆ ರುದ್ರದೇವರು ಬಂದರು.

ತತಸ್ತಾನಾಹ ಮನುಜಾನ್ವರದೋಽಸ್ಮೀತಿ ಶೂಲಭೃತ್ ।
ತೇ ಪ್ರತ್ಯೂಚುರಿದಂ ವಾಕ್ಯಂ ದುಃಖಿತಾಃ ಪ್ರಣತಾಃ ಸ್ಥಿತಾಃ ॥೧೧೦॥

ಶೂಲಧಾರಿಯಾದ ಶಂಕರನು ಆ ಮನುಜರಿಗೆ ಹೇಳಿದನು : 'ನಿಮಗೆ ವರ ಕೊಡುವೆ'. ದುಃಖಿತರಾಗಿದ್ದ ಅವರು ನಮಸ್ಕರಿಸಿ ಈ ಮಾತುಗಳನ್ನು ಹೇಳಿದರು.

ಏಕಪುತ್ರವಿಹೀನಾನಾಂ ಸರ್ವೇಷಾಂ ಜೀವಿತಾರ್ಥಿನಾಮ್ ।
ಪುತ್ರಸ್ಯ ನೋ ಜೀವದಾನಾಜ್ಜೀವಿತಂ ದಾತುಮರ್ಹಸಿ ॥೧೧೧॥

ನೀವು ಜ್ಞಾನರಹಿತರಾಗಿ, ನಿಷ್ಫಲವೂ, ಸುಳ್ಳು ಆದ ನರಿಯ ಮಾತುಗಳನ್ನೇ ಕೇಳಿದರೆ ಎಲ್ಲರೂ ನಾಶವಾಗುತ್ತೀರಿ.

ಜಂಬುಕಃ

ಸ್ಥೀಯತಾಂ ನೇಹ ಭೇತವ್ಯಂ ಯಾವತ್ತಪತಿ ಭಾಸ್ಕರಃ ।
ತಾವದಸ್ಮಿನ್ ಸುತಸ್ನೇಹಾದನಿರ್ವೇದೇನ ವರ್ತತ ॥೧೦೨॥

ನಿಲ್ಲಿ, ಹೆದರಬೇಡಿ. ಸೂರ್ಯನ ಬೆಳಕು ಇರುವವರೆಗೆ ಇಲ್ಲೇ , ಮಗನ ಮೇಲಿನ ಸ್ನೇಹದಿಂದ, ಬೇಸರವಿಲ್ಲದೆ ಇರಿ.

ಸ್ವೈರಂ ರುದತ ವಿಸ್ರಬ್ಧಾಃ ಸ್ವೈರಂ ಸ್ನೇಹೇನ ಪಶ್ಯತ ।
ಸ್ಥೀಯತಾಂ ಯಾವದಾದಿತ್ಯಃ ಕಿಂ ವಃ ಕ್ರವ್ಯಾದಭಾಷಿತೈಃ ॥೧೦೩॥

ಬದುಕುತ್ತಾನೆ ಎಂಬ ನಂಬಿಕೆವುಳ್ಳವರಾಗಿ. ಸಂಕೋಚವಿಲ್ಲದೆ ರೋದಿಸಿರಿ. ಸ್ನೇಹದಿಂದ ಕಾಣಿರಿ. ಸೂರ್ಯನಿರುವವರೆಗೆ ಇರಿ. ಆ ಮಾಂಸಭಕ್ಷಕನ ಮಾತಿನಿಂದ ನಿಮಗೆ ಏನೂ ಪ್ರಯೋಜನವಿಲ್ಲ.

ಯದಿ ಗೃಧ್ರಸ್ಯ ವಾಕ್ಯಾನಿ ತೀವ್ರಾಣಿ ರಭಸಾನಿ ಚ ।
ಗೃಹ್ಣೀತ ಮೋಹಿತಾತ್ಮಾನಃ ಸುತೋ ವೋ ನ ಭವಿಷ್ಯತಿ ॥೧೦೪॥

ಮೋಹಕ್ಕೊಳಗಾಗಿ, ಹದ್ದಿನ ತೀವ್ರವೂ, ರಭಸವೂ ಆದ ಮಾತುಗಳನ್ನು ಸ್ವೀಕರಿಸಿದರೆ ನಿಮ್ಮ ಮಗ ಇಲ್ಲವಾಗುತ್ತಾನೆ.

ಭೀಷ್ಮಃ

ಗೃಧ್ರೋಽನಸ್ತಮಿತೇ ತ್ವಾಹ ಗತೇಽಸ್ತಮಿತಿ ಜಂಬುಕಃ ।
ಮೃತಂ ಸುತಂ ಪ್ರತಿ ಜನಾನೂಚತುಸ್ತೌ ಕ್ಷುಧಾನ್ವಿತೌ ॥೧೦೫॥

ಸೂರ್ಯಾಸ್ತಕ್ಕಿಂತ ಮೊದಲೇ ಈ ಬಾಲಶವದ ಬಂಧುಗಳು ಹೊರಟು ಹೋಗಲಿ ಎಂದು ಹದ್ದು ಮಾತನಾಡುತ್ತದೆ. ಅಸ್ತವಾದ ಮೇಲೆ ಹೋಗಲಿ ಎಂದು ನರಿಯು ಮಾತನಾಡುತ್ತದೆ. ಹಸಿದಿದ್ದ ಆ ಗೃಧ್ರ-ಜಂಬುಕಗಳು ಮೃತ ಸುತನ ಬಗ್ಗೆ ಅವನ ಬಂಧು-ಜನಗಳಿಗೆ ತಮ್ಮ ಅನುಕೂಲಕ್ಕೆ ತಕ್ಕಂತೆ ಮಾತನಾಡಿದವು.

ಸ್ವಕಾರ್ಯದಕ್ಷೌ ರಾಜನ್ ಗೃಧ್ರೋ ಜಂಬುಕ ಏವ ಚ ।
ಕ್ಷುತ್ಪಿಪಾಸಾಪರಿಶ್ರಾನ್ತೌ ಶಾಸ್ತ್ರಮಾಲಂಬ್ಯ ಜಲ್ಪತಃ ॥೧೦೬॥

ರಾಜನೆ! ಗೃಧ್ರ ಮತ್ತು ಜಂಬುಕ- ಎರಡೂ ತಮ್ಮ ಕಾರ್ಯಸಾಧನೆಯಲ್ಲಿ ದಕ್ಷರು. ಹಸಿವೆ-ಬಾಯಾರಿಕೆಗಳಿಂದ ಬಳಲಿದ್ದಾರೆ. ಶಾಸ್ತ್ರವನ್ನೇ ಆಧರಿಸಿ ಮಾತನಾಡುತ್ತವೆ.

ತಯೋರ್ವಿಜ್ಞಾನವಿದುಷೋರ್ದ್ವಯೋರ್ಜಂಬುಕಪತ್ರಿಣೋಃ ।
ವಾಕ್ಯೈರಮೃತಕಲ್ಪೈರ್ಹಿ ಪ್ರಾತಿಷ್ಠಂತ (ಪ್ರತಿಷ್ಠತ) ವ್ರಜಂತಿ ಚ ॥೧೦೭॥

ಜ್ಞಾನಿಗಳಾದ ಆ ನರಿ-ಹದ್ದುಗಳ ಅಮೃತದಂತಹ ಮಾತುಗಳಿಂದ ಪ್ರಭಾವಿತರಾಗಿ ಹೊರಡುತ್ತಾರೆ. ಮತ್ತೆ ಬರುತ್ತಾರೆ.

ಶೋಕದೈನ್ಯಸಮಾವಿಷ್ಟಾ ರುದಂತಸ್ತಸ್ಥಿರೇ ತದಾ ।
ಸ್ವಕಾರ್ಯಕುಶಲಾಭ್ಯಾಂ ತೇ ಸಂಭ್ರಾಮ್ಯಂತೇ ಹ ನೈಪುಣಾತ್ ॥೧೦೮॥

ಶೋಕ ಮತ್ತು ದೈನ್ಯಗಳಲ್ಲಿ ಮುಳುಗಿರುವ ಅವರು ಅಳುತ್ತಾ ಅಲ್ಲೇ ನಿಂತರು. ತಮ್ಮ ಕಾರ್ಯಸಾಧನೆಯಲ್ಲಿ ಕುಶಲರಾದ ಅವೆರಡು ಪ್ರಾಣಿಗಳು ತಮ್ಮ ನೈಪುಣ್ಯದಿಂದ ಆ ಜನರಿಗೆ ಭ್ರಾಂತಿಯನ್ನುಂಟು ಮಾಡಿದವು.

ತಥಾ ತಯೋರ್ವಿವದತೋರ್ವಿಜ್ಞಾನವಿದುಷೋರ್ದ್ವಯೋಃ ।
ಬಾಂಧವಾನಾಂ ಸ್ಥಿತಾನಾಂ ಚ ಉಪಾತಿಷ್ಠತ ಶಂಕರಃ ॥೧೦೯॥

ಜ್ಞಾನಿಗಳಾದ ಅವೆರಡು ಪ್ರಾಣಿಗಳು ಹಾಗೆ ವಿರುದ್ಧವಾಗಿ ಮಾತನಾಡುತ್ತಿದ್ದಾಗ, ಸ್ಮಶಾನದಲ್ಲೇ ಇದ್ದ ಆ ಬಾಂಧವರ ಸಮೀಪಕ್ಕೆ ರುದ್ರದೇವರು ಬಂದರು.

ತತಸ್ತಾನಾಹ ಮನುಜಾನ್ವರದೋಽಸ್ಮೀತಿ ಶೂಲಭೃತ್ ।
ತೇ ಪ್ರತ್ಯೂಚುರಿದಂ ವಾಕ್ಯಂ ದುಃಖಿತಾಃ ಪ್ರಣತಾಃ ಸ್ಥಿತಾಃ ॥೧೧೦॥

ಶೂಲಧಾರಿಯಾದ ಶಂಕರನು ಆ ಮನುಜರಿಗೆ ಹೇಳಿದನು : 'ನಿಮಗೆ ವರ ಕೊಡುವೆ'. ದುಃಖಿತರಾಗಿದ್ದ ಅವರು ನಮಸ್ಕರಿಸಿ ಈ ಮಾತುಗಳನ್ನು ಹೇಳಿದರು.

ಏಕಪುತ್ರವಿಹೀನಾನಾಂ ಸರ್ವೇಷಾಂ ಜೀವಿತಾರ್ಥಿನಾಮ್ ।
ಪುತ್ರಸ್ಯ ನೋ ಜೀವದಾನಾಜ್ಜೀವಿತಂ ದಾತುಮರ್ಹಸಿ ॥೧೧೧॥

ನಮಗೆ ಒಬ್ಬನೇ ಮಗ. ಅವನೂ ಈಗ ಇಲ್ಲ. ಅವನು ಬದುಕಬೇಕು ಎಂದು ನಮ್ಮೆಲ್ಲರ ಅಪೇಕ್ಷೆ. ದಯವಿಟ್ಟು ನಮ್ಮ ಮಗನಿಗೆ ಜೀವದಾನ ಮಾಡಿ ನಮಗೆ ಬದುಕನ್ನು ಕೊಡಬೇಕು ಎಂದು ನಮ್ಮ ಪ್ರಾರ್ಥನೆ.

ಏವಮುಕ್ತಃ ಸ ಭಗವಾನ್ ವಾರಿಪೂರ್ಣೇನ ಪಾಣಿನಾ ।
ಜೀವಂ ತಸ್ಮೈ ಕುಮಾರಾಯ ಪ್ರಾದಾದ್ವರ್ಷಶತಾಯ ವೈ ॥೧೧೨॥

ಹೀಗೆ ಹೇಳಲ್ಪಟ್ಟ ಭಗವಾನ್ ಶಂಕರನು ನೀರು ತುಂಬಿದ ಕೈಯಿಂದ (ಪ್ರೋಕ್ಷಿಸಿ) ಆ ಕುಮಾರನಿಗೆ ನೂರು ವರ್ಷ ಬದುಕಲು ಜೀವವನ್ನು ಕೊಟ್ಟನು.

ತಥಾ ಗೋಮಾಯುಗೃಧ್ರಾಭ್ಯಾಮದದತ್ಕ್ಷುದ್ವಿನಾಶನಮ್ ।
ವರಂ ಪಿನಾಕೀ ಭಗವಾನ್ ಸರ್ವಭೂತಹಿತೇ ರತಃ ॥೧೧೩॥

ಸರ್ವಭೂತಹಿತದಲ್ಲಿ ನಿರತನಾದ ಭಗವಾನ್ ಪಿನಾಕಿಯು ನರಿ-ಹದ್ದುಗಳಿಗೂ ಹಸಿವೆ ಪರಿಹಾರವಾಗಲಿ ಎಂದು ವರವನ್ನು ಕೊಟ್ಟನು.

ತತಃ ಪ್ರಣಮ್ಯ ತಂ ದೇವಂ ಶ್ರೇಯೋಹರ್ಷಸಮನ್ವಿತಾಃ ।
ಕೃತಕೃತ್ಯಾಃ ಸುಖಂ ಹೃಷ್ಟಾಃ ಪ್ರಾತಿಷ್ಠಂತ ತದಾ ವಿಭೋ ॥೧೧೪॥

ಸಮರ್ಥರಾಜನೆ! ಅನಂತರ ಶ್ರೇಯಸ್ಸು (ಮೃತನಿಗೆ ಜೀವಪ್ರಾಪ್ತಿ) ಮತ್ತು ಸಂತೋಷಗಳಿಂದ ಕೂಡಿದ ಅವರು ಕೃತಕೃತ್ಯರಾಗಿ, ಹೃಷ್ಟರಾಗಿ ಅಲ್ಲಿಂದ ಹೊರಟರು.

ಅನಿರ್ವೇದೇನ ದೀರ್ಘೇಣ ನಿಶ್ಚಯೇನ ಧ್ರುವೇಣ ಚ ।
ದೇವದೇವಪ್ರಸಾದಾಚ್ಚ ಕ್ಷಿಪ್ರಂ ಫಲಮವಾಪ್ಯತೇ ॥೧೧೫॥

ದೀರ್ಘಕಾಲ ಶ್ರದ್ಧಾಪೂರ್ವಕ ಕ್ರಿಯಾಶೀಲತೆಯಿಂದ, ದೃಢನಿಶ್ಚಯದಿಂದ, ಮತ್ತು ದೇವೋತ್ತಮನ ಅನುಗ್ರಹದಿಂದ ಬೇಗ ಫಲವು ಲಭಿಸುತ್ತದೆ.

ಪಶ್ಯ ದೇವಸ್ಯ ಸಂಯೋಗಂ ಬಾಂಧವಾನಾಂ ಚ ನಿಶ್ಚಯಮ್ ।
ಕೃಪಣಾನಾಂ ಹಿ ರುದತಾಂ ಕೃತಮಶ್ರುಪ್ರಮಾರ್ಜನಮ್ ॥೧೧೬॥

ನೋಡು. ದೇವನ ಸಂಯೋಗ. ಬಾಂಧವರ ನಿಶ್ಚಯ. ಇವುಗಳಿಂದ ಕೃಪಣರಾಗಿ ಅಳುತ್ತಿದ್ದವರ ಕಣ್ಣೀರು ಅಳಿಸಲ್ಪಟ್ಟಿತು.

ಪಶ್ಯ ಚಾಲ್ಪೇನ ಕಾಲೇನ ನಿಶ್ಚಯಾನ್ವೇಷಣೇನ ಚ ।
ಪ್ರಸಾದಂ ಶಂಕರಾತ್ ಪ್ರಾಪ್ಯ ದುಃಖಿತಾಃ ಸುಖಮಾಪ್ನುವನ್ ॥೧೧೭॥

ನೋಡು. ನಿಶ್ಚಯದಿಂದ ಅನ್ವೇಷಣೆ ಮಾಡಿ, ಅಲ್ಪಕಾಲದಲ್ಲೇ ಶಂಕರನಿಂದ ಅನುಗ್ರಹವನ್ನು ಪಡೆದು ದುಃಖಿತರು ಸುಖವನ್ನು ಹೊಂದಿದರು.

ತೇ ವಿಸ್ಮಿತಾಃ ಪ್ರಹೃಷ್ಟಾಶ್ಚ ಪುತ್ರಸಂಜೀವನಾತ್ ಪುನಃ ।
ಬಭೂವುರ್ಭರತಶ್ರೇಷ್ಠ ಪ್ರಸಾದಾಚ್ಛಂಕರಸ್ಯ ವೈ ॥೧೧೮॥

ಭರತಶ್ರೇಷ್ಠನೇ! ಶಂಕರನ ಅನುಗ್ರಹದಿಂದ ಪುತ್ರನ ಸಂಜೀವನವು ಆಗಿದ್ದರಿಂದ ಅವರೆಲ್ಲರೂ ಪ್ರಹೃಷ್ಟರಾದರು. ವಿಸ್ಮಿತರಾದರು.

ತತಸ್ತೇ ತ್ವರಿತಾ ರಾಜಂಶ್ಶ್ರುತ್ವಾ ಶೋಕಮಫೋದ್ಭವಮ್ ।
ವಿವಿಶುಃ ಪುತ್ರಮಾದಾಯ ನಗರಂ ಹೃಷ್ಟಮಾನಸಾಃ ।
ಏಷಾ ಬುದ್ಧಿಃ ಸಮಸ್ತಾನಾಂ ಚಾತುರ್ವರ್ಣ್ಯೇ ನಿದರ್ಶಿತಾ ॥೧೧೯॥

ರಾಜನೆ! ಅನಂತರ ಅವರು ತಮ್ಮ ಶೋಕವು ತಮ್ಮ ಪಾಪಕರ್ಮದ ಫಲ ಎಂದು ಶಂಕರನಿಂದ ಕೇಳಿ ತಿಳಿದರು. ಸಂತುಷ್ಟ-ಮನಸ್ಸಿನಿಂದ ಮಗನನ್ನು ಕರೆದುಕೊಂಡು ತ್ವರೆಯಿಂದ ನಗರವನ್ನು ಪ್ರವೇಶಿಸಿದರು. ಈ ವಿವೇಚನೆಯು ಚತುರ್ವರ್ಣ ಸಮುದಾಯದ ಎಲ್ಲರಿಗೂ ನಿದರ್ಶನ.

ಧರ್ಮಾರ್ಥಮೋಕ್ಷಸಂಯುಕ್ತಮಿತಿಹಾಸಮಿಮಂ ಶುಭಮ್ ।
ಶ್ರುತ್ವಾ ಮನುಷ್ಯಃ ಸತತಮಿಹ ಪ್ರೇತ್ಯ ಚ ಮೋದತೇ ॥೧೨೦॥

ಧರ್ಮ-ಅರ್ಥ-ಮೋಕ್ಷ- ಈ ಪುರುಷಾರ್ಥಗಳ ಬಗ್ಗೆ ಬೋಧನೆಯನ್ನು ಒಳಗೊಂಡಿರುವ ಈ ಶುಭ ಇತಿಹಾಸವನ್ನು ಪದೇ ಪದೇ ಕೇಳುವ ಮನುಷ್ಯನು ಇಲ್ಲಿಯೂ ಸಂತೋಷದಿಂದ ಇರುತ್ತಾನೆ. ಮರಣಾನಂತರವೂ ಸಂತೋಷದಿಂದ ಇರುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು.

★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ಹಿಮಾಲಯದಲ್ಲಿ ಅತಿ ದೊಡ್ಡ ಬೂರುಗದ ಮರ. ನಾರದರಿಂದ ಅದರ ವರ್ಣನೆ. ಮರದ ಮೇಲೆ ವಾಯುದೇವನ ಪ್ರೀತಿಯ ವರ್ಣನೆ. ಮರದಿಂದ ನಿರಾಕರಣೆ. ವಾಯುವಿಗಿಂತ ತಾನೇ ಹೆಚ್ಚು ಬಲಶಾಲಿ ಎಂದು ಆತ್ಮಶ್ಲಾಘನೆ. ನಾರದರಿಂದ ಮರದ ಧೋರಣೆ ಸರಿಯಲ್ಲ ಎಂದು ಕಥನ.

ಯುಧಿಷ್ಠಿರಃ

ಬಲಿನಃ ಪ್ರತ್ಯಮಿತ್ರಸ್ಯ ನಿತ್ಯಮಾಸನ್ನವರ್ತಿನಃ ।
ಉಪಕಾರಾಪಕಾರಾಭ್ಯಾಂ ಸಮರ್ಥಸ್ಯೋದ್ಯತಸ್ಯ ಚ ॥೧॥

ಪಿತಾಮಹ! ಬಲಶಾಲಿಯಾದ ಶತ್ರು, ಹತ್ತಿರವೇ ಇರುತ್ತಾನೆ. ಉಪಕಾರ ಮಾಡಲೂ ಸಮರ್ಥ, ಅಪಕಾರ ಮಾಡಲೂ ಸಮರ್ಥ, ಆಕ್ರಮಣಕ್ಕೆ ಸಿದ್ಧನಾಗಿರುತ್ತಾನೆ.

ಮೋಹಾದ್ ವಿಕತ್ಥನಾಮಾತ್ಮೈರಸಾರೋಽಲ್ಪಬಲೋ ಲಘುಃ ।
ವಾಗ್ಬಿರಪ್ರತಿರೂಪಾಭಿರಭಿದ್ರುಹ್ಯ ಪಿತಾಮಹ ॥೨॥

ದುರ್ಬಲ, ಹಗುರ (ಗೌರವ ಪಡೆಯಲು- ಭಯಜನಕನಾಗಲು ಬೇಕಾದ ವ್ಯಕ್ತಿತ್ವವಿಲ್ಲದವನು). ಮೋಹದಿಂದ ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುವವನು. ಅನುಚಿತ ಮಾತುಗಳಿಂದ ಬಲಶಾಲಿಯನ್ನು ಕೆಣಕುತ್ತಾನೆ.

ಆತ್ಮನೋ ಬಲಮಾಸ್ಥಾಯ ಕಥಂ ವರ್ತೇತ ಮಾನವಃ ।
ಆಗಚ್ಛತೋಽತಿಕ್ರುದ್ಧಸ್ಯ ತಸ್ಯೋದ್ಧರಣಕಾಮ್ಯಯಾ ॥೩॥

ಬಲಶಾಲಿ ಶತ್ರುವು ಅತಿಕ್ರುದ್ಧನಾಗಿ, ದುರ್ಬಲನನ್ನು ಎತ್ತಿಹಾಕುವ ಸಂಕಲ್ಪದಿಂದ ಬರುತ್ತಾನೆ. ಇಂತಹ ಸನ್ನಿವೇಶದಲ್ಲಿ ದುರ್ಬಲ ಮನುಷ್ಯನು ತನ್ನ ಬಲವನ್ನೇ ಅವಲಂಬಿಸಿ ಹೇಗೆ ವ್ಯವಹರಿಸಬೇಕು?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಸಂವಾದಂ ಭರತಶ್ರೇಷ್ಠ ಶಲ್ಮಲೇಃ ಪವನಸ್ಯ ಚ ॥೪॥

ಭರತಶ್ರೇಷ್ಠ! ಈ ವಿಷಯದಲ್ಲಿ ಬಹಳ ಹಿಂದೆ ನಡೆದ ಶಾಲ್ಮಲಿ ವೃಕ್ಷ (ಬೂರುಗದ ಮರ) ಮತ್ತು ವಾಯುವಿನ ಸಂವಾದವನ್ನು ಉದಾಹರಿಸುತ್ತಾರೆ.

ಹಿಮವಂತಂ ಸಮಾಸಾದ್ಯ ಮಹಾನಾಸೀದ್ ವನಸ್ಪತಿಃ ।
ವರ್ಷಪೂಗಾಭಿಸಂವೃದ್ಧಃ ಶಾಖಾಸ್ಕಂಧಪಲಾಶವಾನ್ ॥೫॥

ಹಿಮಾಲಯದಲ್ಲಿ (ಹಿಮಾಲಯವನ್ನು ಆಶ್ರಯಿಸಿ) ದೊಡ್ಡ ಮರ ಇತ್ತು. ಬಹು ವರ್ಷಗಳ ಅವಧಿಯಲ್ಲಿ ಬೆಳೆದಿದ್ದ ಆ ಮರದಲ್ಲಿ ಕೊಂಬೆಗಳು, ಕಾಂಡಗಳು, ಎಲೆಗಳೂ ಸಮೃದ್ಧವಾಗಿದ್ದವು.

ತತ್ರ ಸ್ಮ ಮತ್ತಾ ಮಾತಂಗಾ ಘರ್ಮಾರ್ತಾಃ ಶ್ರಮಕರ್ಶಿತಾಃ ।
ವಿಶ್ರಮಂತಿ ಮಹಾಬಾಹೋ ತಥಾನ್ಯಾ ಮೃಗಜಾತಯಃ ॥೬॥

ಮಹಾಬಾಹುವೇ! ಆ ಮರದ ನೆರಳಿನಲ್ಲಿ ಬಿಸಿಲಿನ ತಾಪದಿಂದ ಬಂದ, ಶ್ರಮದಿಂದ ಆಯಾಸಗೊಂಡ ಮದಿಸಿದ ಆನೆಗಳು ವಿಶ್ರಮಿಸುತ್ತಿದ್ದವು. ಬೇರೆ ಪ್ರಾಣಿಗಳೂ ವಿಶ್ರಮಿಸುತ್ತಿದ್ದವು.

ನಲ್ವಮಾತ್ರಪರೀಣಾಹೋ ಘನಚ್ಛಾಯೋ ವನಸ್ಪತಿಃ ।
ಶುಕಶಾರಿಕಸಂಘುಷ್ಟಃ ಫಲವಾನ್ ಪುಷ್ಪವಾನಪಿ ॥೭॥

ಆ ಮರ ನಾಲ್ಕುನೂರು ಮೊಳ ವಿಸ್ತಾರವಾಗಿತ್ತು. ದಟ್ಟವಾದ ನೆರಳಿತ್ತು. ಶುಕ-ಶಾರಿಕಾ ಪಕ್ಷಿಗಳ ಕಲರವ ಮೊಳಗುತ್ತಿತ್ತು. ಫಲ ಮತ್ತು ಪುಷ್ಪಗಳು ಸಮೃದ್ಧವಾಗಿದ್ದವು.

ಸಾರ್ಥಿಕಾ ವಣಿಜಶ್ಚಾಪಿ ತಾಪಸಾಶ್ಚ ವನೌಕಸಃ ।
ವಸಂತಿ ವಾಸಾನ್ ಮಾರ್ಗಸ್ಥಾಃ ಸುರಮ್ಯೇ ತರುಸತ್ತಮೇ ॥೮॥

ಗುಂಪಿನಲ್ಲಿ ಪ್ರಯಾಣಿಸುವ ವರ್ತಕರು, ವನವಾಸಿಗಳಾದ ತಪಸ್ವಿಗಳು, ದಾರಿಹೋಕರು ಬಹಳ ರಮಣೀಯವಾದ, ಆ ಶ್ರೇಷ್ಠ ಮರದ ಕೆಳಗೆ ವಾಸಿಸುತ್ತಿದ್ದರು.

ತಸ್ಯ ತಾ ವಿಪುಲಾಃ ಶಾಖಾ ದೃಷ್ಟ್ವಾ ಸ್ಕಂಧಾಂಶ್ಚ ಸರ್ವತಃ ।
ಅಭಿಗಮ್ಯಾಬ್ರವೀದೇನಂ ನಾರದೋ ಭರತರ್ಷಭ ॥೯॥

ಭರತರ್ಷಭ! ಒಮ್ಮೆ ನಾರದರು ಅಲ್ಲಿಗೆ ಬಂದರು. ಆ ಮರದ ಎಲ್ಲ ಕಡೆ ವ್ಯಾಪಿಸಿರುವ ಶಾಖೆಗಳನ್ನೂ, ಕಾಂಡಗಳನ್ನೂ ನೋಡಿ ಆ ಮರಕ್ಕೆ ಹೇಳಿದರು.

ಅಹೋ ನು ರಮಣೀಯಸ್ತ್ವಮಹೋ ಚಾಸಿ ಮನೋರಮಃ ।
ಪ್ರೀಯಾಮಹೇ ತ್ವಯಾ ನಿತ್ಯಂ ತರುಪ್ರವರ ಶಲ್ಮಲೇ ॥೧೦॥

ತರುಶ್ರೇಷ್ಠ! ಬೂರುಗ! ನೀನು ಎಷ್ಟು ರಮಣೀಯ! ಆಹ! ಎಷ್ಟು ಮನೋಹರವಾಗಿರುವಿ! ನಿನ್ನಿಂದ ನಮಗೆ ಯಾವಾಗಲೂ ಪ್ರೀತಿಯಾಗುತ್ತದೆ.

ಸದೈವ ಶಕುನಾಸ್ತಾತ ಮೃಗಾಶ್ಚಾಧಸ್ತಥಾ ಗಜಾಃ ।
ವಸಂತಿ ತವ ಸಂಹೃಷ್ಟಾ ಮನೋಹರತರಾಸ್ತಥಾ ॥೧೧॥

ತವ ಶಾಖಾ ಮಹಾಶಾಖ ಸ್ಕಂಧಂ ಚ ವಿಪುಲಂ ತಥಾ ।
ನ ವೈ ಪ್ರಭಗ್ನಾನ್ ಪಶ್ಯಾಮಿ ಮಾರುತೇನ ಕಥಂಚನ ॥೧೨॥

ಪ್ರಿಯ ಶಾಲ್ಮಲಿ! ಹಕ್ಕಿಗಳು ಯಾವಾಗಲೂ ನಿನ್ನ ಆಶ್ರಯದಲ್ಲಿ ವಾಸಿಸುತ್ತವೆ. ನಿನ್ನ ಕೆಳಭಾಗದಲ್ಲಿ ಆನೆಗಳೂ, ಬೇರೆ ಪ್ರಾಣಿಗಳು ಸಂತೋಷದಿಂದ ವಾಸಿಸುತ್ತವೆ. ವಿಪುಲ ಶಾಖೆಗಳಿರುವ ಮರವೆ! ನಿನ್ನ ಶಾಖೆಗಳು ಬಹಳ ಮನೋಹರವಾಗಿವೆ. ಕಾಂಡಗಳೂ ವಿಪುಲವಾಗಿವೆ. ಗಾಳಿಯಿಂದ ಯಾವುದೇ ಕಾಂಡ-ಕೊಂಬೆಗಳು ಮುರಿದದ್ದು ನನಗೆ ಕಾಣಿಸಿಲ್ಲ.

ಕಿಂ ನು ತೇ ಮಾರುತಸ್ತಾತ ಪ್ರೀತಿಮಾನಥ ವಾ ಸುಹೃತ್ ।
ತ್ವಾಂ ರಕ್ಷತಿ ಸದಾ ಯೇನ ವನೇಽಸ್ಮಿನ್ ಪವನೋ ಧ್ರುವಮ್ ॥೧೩॥

ಪ್ರಿಯ ವೃಕ್ಷ! ಗಾಳಿಗೆ ನಿನ್ನ ಮೇಲೆ ಅಷ್ಟು ಪ್ರೀತಿಯೆ? ಅಷ್ಟು ಸ್ನೇಹವೆ? ಪ್ರೀತಿ-ಸ್ನೇಹಗಳಿಂದಾಗಿ ಗಾಳಿಯು ನಿನ್ನನ್ನು ಸದಾ ರಕ್ಷಿಸುತ್ತಿದ್ದಾನೆ. ಇದು ನಿಶ್ಚಯ.

ವಿವಾನ್ ಹಿ ಪವನಃ ಸ್ಥಾನಾದ್ ವೃಕ್ಷಾನುಚ್ಚಾವಚಾನಪಿ ।
ಪರ್ವತಾನಾಂ ಚ ಶಿಖರಾಣ್ಯಾಚಾಲಯತಿ ವೇಗವಾನ್ ॥೧೪॥

ಮಹಾವೇಗಿಯಾದ ವಾಯುವು ದೊಡ್ಡ-ಸಣ್ಣ ಮರಗಳನ್ನೂ, ಪರ್ವತಗಳ ಶಿಖರಗಳನ್ನೂ ಅವುಗಳ ಸ್ಥಾನದಿಂದ ಚಲಿಸುವಂತೆ ಮಾಡುತ್ತಾನೆ.

ಶೋಷಯತ್ಯೇವ ಪಾತಾಲಂ ವಿವಾನ್ ಗಂಧವಹಃ ಶುಚಿಃ ।
ಹ್ರದಾಂಶ್ಚ ಸರಿತಶ್ಚೈವ ಸಾಗರಾಂಶ್ಚ ತಥೈವ ಹ ॥೧೫॥

ಗಂಧವನ್ನು ಹೊತ್ತು ಒಯ್ಯುವ, ಶುಚಿಯಾದ ವಾಯುವು ಪಾತಾಲವನ್ನೇ ಒಣಗಿಸುತ್ತಾನೆ. ಕೆರೆಗಳನ್ನೂ, ನದಿಗಳನ್ನೂ, ಸಾಗರಗಳನ್ನೂ ಒಣಗಿಸುತ್ತಾನೆ.

ತ್ವಾಂ ಸಂರಕ್ಷೇತ ಪವನಃ ಸಖಿತ್ವೇನ ನ ಸಂಶಯಃ ।
ತಸ್ಮಾದ್ ಬಹಲಶಾಖೋಽಸಿ ಪರ್ಣವಾನ್ ಪುಷ್ಪವಾನಪಿ ॥೧೬॥

ಪವನನು ಸ್ನೇಹದಿಂದ ನಿನ್ನನ್ನು ರಕ್ಷಿಸುತ್ತಾನೆ. ಸಂಶಯವಿಲ್ಲ. ಆದ್ದರಿಂದ ನಿನ್ನಲ್ಲಿ ಬಹಳ ಶಾಖೆಗಳೂ, ಎಲೆಗಳೂ, ಪುಷ್ಪಗಳೂ ಇವೆ.

ಇದಂ ಚ ರಮಣೀಯಂ ತೇ ಪ್ರತಿಭಾತಿ ವನಸ್ಪತೇ ।
ಯದಿಮೇ ವಿಹಗಾಸ್ತಾತ ರಮಂತೇ ಮುದಿತಾಸ್ತ್ವಯಿ ॥೧೭॥

ಪ್ರಿಯ ಮರವೆ! ಈ ಹಕ್ಕಿಗಳು ನಿನ್ನ ಆಶ್ರಯದಲ್ಲಿ ಸಂತೋಷದಿಂದ ವಿಹರಿಸುತ್ತಿವೆ. ಈ ಸನ್ನಿವೇಶವು ಬಹಳ ರಮಣೀಯವಾಗಿ ಕಾಣುತ್ತಿದೆ.

ಏಷಾಂ ಪೃಥಕ್ಸಮಸ್ತಾನಾಂ ಶ್ರೂಯತೇ ಮಧುರಃ ಸ್ವರಃ ।
ಪುಷ್ಪಸಮ್ಮೋದನೇ ಕಾಲೇ ವಾಶತಾಂ ಸುಮನೋಹರಮ್ ॥೧೮॥

ಪುಷ್ಪಗಳು ಅರಳುವ ಕಾಲದಲ್ಲಿ (ವಸಂತ ಋತುವಿನಲ್ಲಿ) ಬಹಳ ಮನೋಹರವಾಗಿ ಕೂಗುವ ಈ ಎಲ್ಲಾ ಹಕ್ಕಿಗಳ ಮಧುರಸ್ವರವು ಬೇರೆ ಬೇರೆಯಾಗಿ ಕೇಳಿಸುತ್ತದೆ.

ತಥೇಮೇ ಮುದಿತಾ ನಾಗಾಃ ಸ್ವಯೂಥಕುಲಶೋಭಿನಃ ।
ಘರ್ಮಾರ್ತಾಸ್ತ್ವಾಂ ಸಮಾಸಾದ್ಯ ಸುಖಂ ವಿಂದಂತಿ ಶಲ್ಮಲೇ ॥೧೯॥

ಹಾಗೆಯೇ ತಮ್ಮ ಹಿಂಡಿನಲ್ಲಿ ಶೋಭಿಸುವ ಆನೆಗಳೂ ಸಂತುಷ್ಟವಾಗಿವೆ. ಶಾಲ್ಮಲಿ! ಬಿಸಿಲಿನಿಂದ ಬೆಂದ ಇವುಗಳು ನಿನ್ನಲ್ಲಿಗೆ ಬಂದು ಸುಖವನ್ನು ಹೊಂದುತ್ತವೆ.

ತಥೈವ ಮೃಗಜಾತೀಭಿರನ್ಯಾಭಿರುಪಶೋಭಸೇ ।
ತಥಾ ಸಾರ್ಥಾಧಿವಾಸೈಶ್ಚ ಶೋಭಸೇ ಮೇರುವದ್ದ್ರುಮ ॥೨೦॥

ಹಾಗೆಯೇ ಬೇರೆ ವಿವಿಧ ಪ್ರಾಣಿಗಳು ನಿನ್ನನ್ನು ಆಶ್ರಯಿಸಿವೆ. ಅವುಗಳಿಗೆ ಆಶ್ರಯನಾದ ನೀನು ಶೋಭಿಸುತ್ತಿರುವೆ. ಮರವೆ! ಗುಂಪಿನಲ್ಲಿ ಸಂಚರಿಸುವ ವರ್ತಕರೂ

ನಿನ್ನ ಆಶ್ರಯದಲ್ಲಿ ವಾಸಿಸುತ್ತಾರೆ. ಆದ್ದರಿಂದಲೂ ನೀನು ಮೇರು ಪರ್ವತದಂತೆ ಶೋಭಿಸುತ್ತಿರುವೆ.

ಬ್ರಾಹ್ಮಣೈಶ್ಚ ತಪಃಸಿದ್ಧೈಸ್ತಾಪಸೈಃ ಶ್ರಮಣೈರಪಿ ।
ತ್ರಿವಿಷ್ಟಪಸಮಂ ಮನ್ಯೇ ತವಾಯತನಮೇವ ಹ ॥೨೧॥

ಬ್ರಾಹ್ಮಣರು, ತಪಸಿದ್ಧಿಯನ್ನು ಪಡೆದ ತಾಪಸರು, ಯತಿಗಳೂ ನಿನ್ನ ಆಶ್ರಯದಲ್ಲಿದ್ದಾರೆ. ಇವರೆಲ್ಲರಿಂದ ನಿನ್ನ ಸ್ಥಾನವು ಸ್ವರ್ಗಸಮ ಎಂದು ಭಾವಿಸುತ್ತೇನೆ.

ಬಂಧುತ್ವಾದಥ ವಾ ಸಖ್ಯಾಚ್ಛಲ್ಮಲೇ ನಾತ್ರ ಸಂಶಯಃ ।
ಪಾಲಯತ್ಯೇವ ಸತತಂ ಭೀಮಃ ಸರ್ವತ್ರಗೋಽನಿಲಃ ॥೨೨॥

ಶಾಲ್ಮಲಿ! ಸರ್ವತ್ರ ಸಂಚರಿಸುವ ಭಯಂಕರನಾದ ಗಾಳಿಯು ನಿನ್ನ ಬಂಧುವಾದ್ದರಿಂದ ಅಥವಾ ಸಖ್ಯದಿಂದ ನಿನ್ನನ್ನು ಸದಾ ರಕ್ಷಿಸುತ್ತಿದ್ದಾನೆ.

ನ್ಯಗ್ಭಾವಂ ಪರಮಂ ವಾಯೋಃ ಶಲ್ಮಲೇ ತ್ವಮುಪಾಗತಃ ।
ತವಾಹಮಸ್ಮೀತಿ ಸದಾ ಯೇನ ರಕ್ಷತಿ ಮಾರುತಃ ॥೨೩॥

ಶಾಲ್ಮಲಿ! ನೀನು 'ನಾನು ನಿನ್ನವನು, ನಿನಗೆ ದಾಸ' ಎಂದು ಸದಾ ವಾಯುವಿಗೆ ಮಹಾವಿನಯವನ್ನು ತೋರಿರುವಿ. ಆದ್ದರಿಂದ ಆ ಮಾರುತನು ನಿನ್ನನ್ನು ರಕ್ಷಿಸುತ್ತಿದ್ದಾನೆ.

ನ ತಂ ಪಶ್ಯಾಮ್ಯಹಂ ವೃಕ್ಷಂ ಪರ್ವತಂ ವಾಪಿ ತಂ ದೃಢಮ್ ।
ಯೋ ನ ವಾಯುಬಲಾದ್ಭಗ್ನಃ ಪೃಥಿವ್ಯಾಮಿತಿ ಮೇ ಮತಿಃ ॥೨೪॥

ನಾನು ಭೂಮಂಡಲದಲ್ಲಿ ವಾಯುಬಲದಿಂದ ಭಗ್ನವಾಗದ ದೃಢವಾದ ಮರವನ್ನು ಅಥವಾ ಪರ್ವತವನ್ನು ನೋಡಿಲ್ಲ.

ತ್ವಂ ಪುನಃ ಕಾರಣೈರ್ನೂನಂ ಶಲ್ಮಲೇ ರಕ್ಷ್ಯಸೇ ಸದಾ ।
ವಾಯುನಾ ಸಪರೀವಾರಸ್ತೇನ ತಿಷ್ಠಸ್ಯಸಂಶಯಮ್ ॥೨೫॥

ಶಲ್ಮಲಿ! ಪ್ರಬಲವಾದ ಕಾರಣಗಳಿಂದ ನೀನು ಪರಿವಾರ ಸಹಿತನಾಗಿ ಗಾಳಿಯಿಂದ ರಕ್ಷಿಸಲ್ಪಡುತ್ತಿರುವಿ, ಸಂಶಯವಿಲ್ಲ. ಆದ್ದರಿಂದ ಹೀಗೆ ಆತಂಕವಿಲ್ಲದೆ ನಿಂತಿರುವಿ.

ಶಲ್ಮಲಿಃ

ನ ಮೇ ವಾಯುಃ ಸಖಾ ಬ್ರಹ್ಮನ್ನ ಬಂಧುರ್ನ ಚ ಮೇ ಸುಹೃತ್ ।
ಪರಮೇಷ್ಠೀ ತಥಾ ನೈವ ಯೇನ ರಕ್ಷತಿ ಮಾನಿಲಃ ॥೨೬॥

ಬ್ರಹ್ಮಜ್ಞಾನಿಯೇ! ವಾಯುವು ನನ್ನ ಗೆಳೆಯನಲ್ಲ. ನನ್ನ ಬಂಧುವಲ್ಲ. ನನ್ನ ಸುಹೃತ್ ಅಲ್ಲ. ಅನಿಲನೂ ಅಲ್ಲ, ಬ್ರಹ್ಮನೂ ಅಲ್ಲ. ಆಗಿದ್ದಿದ್ದರೆ ನನ್ನನ್ನು ರಕ್ಷಿಸುತ್ತಿದ್ದನೇನೊ.

ಮಮ ತೇಜೋಬಲಂ ವಾಯೋರ್ಭೀಮಮಪಿ ಹಿ ನಾರದ ।
ಕಲಾಮಷ್ಟಾದಶೀಂ ಪ್ರಾಣೈರ್ನ ಮೇ ಪ್ರಾಪ್ನೋತಿ ಮಾರುತಃ ॥೨೭॥

ನಾರದರೆ! ನನ್ನ ತೇಜೋಬಲವು ವಾಯುವನ್ನು ಬೆದರಿಸುತ್ತದೆ. ಮಾರುತನು ನನ್ನ ಪ್ರಾಣಶಕ್ತಿಯ ಹದಿನೆಂಟನೆ ಒಂದು ಅಂಶವನ್ನೂ ಹೊಂದಿಲ್ಲ.

ಆಗಚ್ಛನ್ ಪರಮೋ ವಾಯುರ್ಮಯಾ ವಿಷ್ಟಂಭಿತೋ ಬಲಾತ್ ।
ರುಜನ್ ದ್ರುಮಾನ್ ಪರ್ವತಾಂಶ್ಚ ಯಚ್ಚಾನ್ಯದಪಿ ಕಿಂಚನ ॥೨೮॥

ಮರಗಳನ್ನು, ಪರ್ವತಗಳನ್ನು, ಬೇರೆ ಯಾವುದೇ ಪದಾರ್ಥಗಳನ್ನೂ ನಾಶ ಮಾಡುತ್ತಾ ಬರುತ್ತಿದ್ದ ಮಹಾವಾಯುವು ನನ್ನಿಂದ, ನನ್ನ ಬಲದಿಂದ, ಸ್ತಂಭಿಸಲ್ಪಟ್ಟಿದ್ದಾನೆ.

ಸ ಮಯಾ ಬಹುಶೋ ಭಗ್ನಃ ಪ್ರಭಂಜನ್ ವೈ ಪ್ರಭಂಜನಃ ।
ತಸ್ಮಾನ್ನ ಬಿಭ್ಯೇ ದೇವರ್ಷೇ ಕ್ರುದ್ಧಾದಪಿ ಸಮೀರಣಾತ್ ॥೨೯॥

ಬೇರೆ ಎಲ್ಲವನ್ನು ಭಂಗ ಮಾಡುವ ಪ್ರಭಂಜನನು ನನ್ನಿಂದ ಬಹಳ ಸಲ ಭಗ್ನನಾಗಿದ್ದಾನೆ. ಆದ್ದರಿಂದ, ದೇವರ್ಷಿಯೇ! ಕ್ರುದ್ಧ ಸಮೀರಣನಿಂದಲೂ ನನಗೆ ಭಯವಿಲ್ಲ.

ನಾರದಃ

ಶಲ್ಮಲೇ ವಿಪರೀತಂ ತೇ ದರ್ಶನಂ ನಾತ್ರ ಸಂಶಯಃ ।
ನ ಹಿ ವಾಯೋರ್ಬಲೇನಾಸ್ತಿ ಭೂತಂ ತುಲ್ಯಬಲಂ ಕ್ವಚಿತ್ ॥೩೦॥

ಶಾಲ್ಮಲಿ! ನಿನ್ನ ದೃಷ್ಟಿ ವಸ್ತುಸ್ಥಿತಿಗೆ ವಿರುದ್ಧವಾದ ದೃಷ್ಟಿ. ಇದರಲ್ಲಿ ಸಂಶಯವಿಲ್ಲ. ವಾಯುಬಲಕ್ಕೆ ಸರಿಗಟ್ಟುವ ಬಲವುಳ್ಳ ಯಾವ ವಸ್ತುವೂ ಎಲ್ಲಿಯೂ ಇಲ್ಲ.

ಇಂದ್ರೋ ಯಮೋ ವೈಶ್ರವಣೋ ವರುಣಶ್ಚ ಜಲೇಶ್ವರಃ ।
ನ ತೇಽಪಿ ತುಲ್ಯಾ ಮರುತಃ ಕಿಂ ಪುನಸ್ತ್ವಂ ವನಸ್ಪತೇ ॥೩೧॥

ಇಂದ್ರ, ಯಮ, ಕುಬೇರ, ಜಲಾಧಿಪತಿ ವರುಣ- ಇವರೂ ವಾಯುವಿಗೆ ಸಮರಲ್ಲ. ಮರವೆ! ನೀನು ಅಲ್ಲ ಎಂದು ಹೇಳಬೇಕೆ?

ಯದ್ಧಿ ಕಿಂಚಿದಿಹ ಪ್ರಾಣಿ ಶಲ್ಮಲೇ ಚೇಷ್ಟತೇ ಭುವಿ ।
ಸರ್ವತ್ರ ಭಗವಾನ್ ವಾಯುಶ್ಚೇಷ್ಟಾಪ್ರಾಣಕರಃ ಪ್ರಭುಃ ॥೩೨॥

ಶಾಲ್ಮಲಿ! ಈ ಭೂಮಿಯಲ್ಲಿ ಯಾವ ಯಾವ ವಸ್ತುವಿಗೆ ಪ್ರಾಣವಿದೆಯೋ, ಯಾವ ಯಾವ ವಸ್ತು ಚಲಿಸುತ್ತದೋ ಆ ಎಲ್ಲ ವಸ್ತುಗಳಲ್ಲಿ ಪ್ರಭು, ಭಗವಾನ್ ವಾಯುವೇ ಚಲನೆ ಮತ್ತು ಪ್ರಾಣಗಳನ್ನು ಉಂಟು ಮಾಡುತ್ತಾನೆ.

ಏಷ ಚೇಷ್ಟಯತೇ ಸಮ್ಯಕ್ ಪ್ರಾಣಿನಃ ಸಮ್ಯಗಾಯತಃ ।
ಅಸಮ್ಯಗಾಯತೋ ಭೂಯಶ್ಚೇಷ್ಟತೇ ವಿಕೃತೋ ನೃಷು ॥೩೩॥

ಈ ವಾಯುವು ಪ್ರಾಣಿಗಳಲ್ಲಿ ಸುಸ್ಥಿತಿಯಲ್ಲಿದ್ದರೆ ಅವುಗಳಿಗೆ ಸರಿಯಾದ ಚಲನೆಯನ್ನು ಉಂಟು ಮಾಡುತ್ತಾನೆ. ನರರಲ್ಲಿ ದುಸ್ಥಿತಿಯಲ್ಲಿ ವ್ಯಾಪಿಸಿದ್ದರೆ ಅವರಲ್ಲಿ ವಿಕೃತ ಚಲನೆಯನ್ನು ಉಂಟುಮಾಡುತ್ತಾನೆ.

ಸ ತ್ವಮೇವಂವಿಧಂ ವಾಯುಂ ಸರ್ವಸತ್ತ್ವಭೃತಾಂ ವರಮ್ ।
ನ ಪೂಜಯಸಿ ಪೂಜ್ಯಂ ತಂ ಕಿಮನ್ಯದ್ ಬುದ್ಧಿಲಾಘವಾತ್ ॥೩೪॥

ಈ ನೀನು ಪ್ರಾಣಧಾರಿಗಳೆಲ್ಲರಿಗಿಂತ ಶ್ರೇಷ್ಠನಾದ, ಪೂಜ್ಯನಾದ ವಾಯುವನ್ನು ಪೂಜಿಸುವುದಿಲ್ಲ. ಇದಕ್ಕೆ ನಿನ್ನ ಹೀನಬುದ್ಧಿಯೇ ಕಾರಣ. ಬೇರೆ ಏನು ಕಾರಣವಿದೆ?

ಅಸಾರಶ್ಚಾಸಿ ದುರ್ಬುದ್ಧೇ ಕೇವಲಂ ಬಹು ಭಾಷಸೇ ।
ಕ್ರೋಧಾದಿಭಿರವಚ್ಛನ್ನೋ ಮಿಥ್ಯಾ ವದಸಿ ಶಲ್ಮಲೇ ॥೩೫॥

ದುರ್ಬುದ್ಧಿಯ ಶಾಲ್ಮಲಿ! ನಿನ್ನಲ್ಲಿ ಏನೂ ಸಾರವಿಲ್ಲ. ಬಹಳ ಮಾತನಾಡುವಿ ಅಷ್ಟೆ! ಕ್ರೋಧ ಮೊದಲಾದ ದೋಷಗಳು ನಿನ್ನನ್ನು ಆವರಿಸಿವೆ. ಸುಳ್ಳು ಹೇಳುವಿ.

ಮಮ ರೋಷಃ ಸಮುತ್ಪನ್ನಸ್ತ್ವಯ್ಯೇವಂ ಸಂಪ್ರಭಾಷತಿ ।
ಬ್ರವೀಮ್ಯೇಷ ಸ್ವಯಂ ವಾಯೋಸ್ತವ ದುರ್ಭಾಷಿತಂ ಬಹು ॥೩೬॥

ಹೀಗೆ ಮಾತನಾಡುವ ನಿನ್ನ ಮೇಲೆ ನನಗೆ ರೋಷವು ಹುಟ್ಟಿದೆ. ನಿನ್ನ ಈ ಅತಿ ಕೆಟ್ಟ ಮಾತುಗಳನ್ನು ನಾನೇ ಸ್ವಯಂ ವಾಯುವಿಗೆ ಹೇಳುವೆ.

ಚಂದನೈಃ ಸ್ಪಂದನೈಃ ಶಾಲೈಃ ಸರಲೈರ್ದೇವದಾರುಭಿಃ ।
ವೇತಸೈರ್ಬಂಧನೈಶ್ಚಾಪಿ ಯೇ ಚಾನ್ಯೇ ಬಲವತ್ತರಾಃ ॥೩೭॥

ತೈಶ್ಚಾಪಿ ನೈವಂ ದುರ್ಬುದ್ಧೇ ಕ್ಷಿಪ್ತೋ ವಾಯುರ್ದುರಾತ್ಮಭಿಃ ।
ತೇ ಹಿ ಜಾನಂತಿ ವಾಯೋಶ್ಚ ಬಲಮಾತ್ಮನ ಏವ ಚ ॥೩೮॥

ಚಂದನ, ಸ್ಪಂದನ (ನೆಮ್ಮಿ), ಶಾಲ, ಸಕಲ, ದೇವದಾರು, ವೇತಸ (ಬೆತ್ತ) ಬಂಧನ- ಈ ಮರಗಳಿಂದ, ಇವುಗಳಿಗಿಂತಲೂ ಹೆಚ್ಚು ಬಲಶಾಲಿಯಾದ ಮರಗಳಿಂದಲೂ ವಾಯುವು ನಿಂದಿಸಲ್ಪಟ್ಟಿಲ್ಲ. ದುರ್ಬುದ್ಧಿಯವನೆ! ದುರಾತ್ಮರಿಂದ ಮಾತ್ರ ವಾಯುವು ನಿಂದಿಸಲ್ಪಡುತ್ತಾನೆ. ಆ ಚಂದನ ಮೊದಲಾದ ಮರಗಳು ವಾಯುವಿನ ಬಲವನ್ನೂ, ತಮ್ಮ ಬಲವನ್ನೂ ತಿಳಿದಿವೆ.

ತಸ್ಮಾತ್ ತೇ ವೈ ನಮಸ್ಯಂತಿ ಶ್ವಸನಂ ದ್ರುಮಸತ್ತಮಾಃ ।
ತ್ವಂ ತು ಮೋಹಾನ್ನ ಜಾನೀಷೇ ವಾಯೋರ್ಬಲಮನಂತಕಮ್ ॥೩೯॥

ಆದ್ದರಿಂದ ಆ ಶ್ರೇಷ್ಠ ಮರಗಳು ವಾಯುದೇವನನ್ನು ನಮಸ್ಕರಿಸುತ್ತವೆ. ನೀನು ಮೋಹದಿಂದ ವಾಯುವಿನ ಅನಂತಬಲವನ್ನು ತಿಳಿದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು.

★ ★ ★ ★

ಇಪ್ಪತ್ಮೂರನೆಯ ಅಧ್ಯಾಯ

ನಾರದರಿಂದ ವಾಯುದೇವನಿಗೆ, ಶಾಲ್ಮಲಿಯ ಗರ್ವದ ಬಗ್ಗೆ ವರದಿ. ವಾಯುದೇವ-ಶಾಲ್ಮಲಿಯ ವಾಗ್ವಾದ. ಶಾಲ್ಮಲಿಯ ಜಂಭದ ಮಾತುಗಳು. ವಿವೇಕವಿಲ್ಲದ ವರ್ತನೆ ಸರಿಯಲ್ಲ ಎಂದು ಭೀಷ್ಮರ ಉಪದೇಶ.

ಭೀಷ್ಮಃ

ಏವಮುಕ್ತ್ವಾ ತು ರಾಜೇಂದ್ರ ಶಲ್ಮಲಿಂ ಬ್ರಹ್ಮವಿತ್ತಮಃ ।
ನಾರದಃ ಪವನೇ ಸರ್ವಂ ಶಲ್ಮಲೇರ್ವಾಕ್ಯಮಬ್ರವೀತ್ ॥೧॥

ರಾಜೇಂದ್ರ! ಶ್ರೇಷ್ಠಬ್ರಹ್ಮಜ್ಞಾನಿಗಳಾದ ನಾರದರು ಶಾಲ್ಮಲಿ ಮರಕ್ಕೆ ಹೀಗೆ ಹೇಳಿ ವಾಯುವಿನ ಬಳಿ ಹೋಗಿ ಶಾಲ್ಮಲಿಯ ಮಾತೆಲ್ಲವನ್ನೂ ಹೇಳಿದರು.

ಹಿಮವತ್ಪೃಷ್ಠಜಃ ಕಶ್ಚಿಚ್ಛಲ್ಮಲಿಃ ಪರಿವಾರವಾನ್ ।
ಬೃಹನ್ಮೂಲೋ ಬೃಹಚ್ಛಾಖಿಃ ಸ ತ್ವಾಂ ವಾಯೋಽವಮನ್ಯತೇ ॥೨॥

ವಾಯುದೇವ! ಹಿಮಾಲಯದ ಬೆನ್ನಿನಲ್ಲಿ ಒಂದು ಶಾಲ್ಮಲಿ ಮರವಿದೆ. ಅದಕ್ಕೆ ಭಾರಿ ದೊಡ್ಡ ಬೇರು. ಬಡ್ಡೆ ಇದೆ. ಬಹಳ ದೊಡ್ಡ ಕೊಂಬೆಗಳಿವೆ. ಅದಕ್ಕೆ ಬಹಳ ಪರಿವಾರವಿದೆ. ಅವನು ನಿನ್ನನ್ನು ಕೀಳಾಗಿ ತಿಳಿದಿದ್ದಾನೆ.

ಬಹೂನ್ಯಾಕ್ಷೇಪಯುಕ್ತಾನಿ ತ್ವಾಮಾಹ ವಚನಾನಿ ಸಃ ।
ನ ಯುಕ್ತಾನಿ ಮಯಾ ವಾಯೋ ತಾನಿ ವಕ್ತುಂ ತ್ವಯಿ ಪ್ರಭೋ ॥೩॥

ಪ್ರಭು! ಅವನು ನಿನ್ನ ಬಗ್ಗೆ ಬಹಳ ತೆಗಳಿಕೆಯ ಮಾತುಗಳನ್ನು ಹೇಳಿದನು. ನಿನ್ನ ಬಳಿ ಆ ಮಾತುಗಳನ್ನು ಹೇಳಬಾರದು.

ಜಾನಾಮಿ ತ್ವಾಮಹಂ ವಾಯೋ ಸರ್ವಪ್ರಾಣಭೃತಾಂ ವರಮ್ ।
ವರಿಷ್ಠಂ ಚ ಗರಿಷ್ಠಂ ಚ ಕ್ರೋಧೇ ವೈವಸ್ವತಂ ಯಥಾ ॥೪॥

ವಾಯುದೇವ! ಪ್ರಾಣಧಾರಿಗಳೆಲ್ಲರಲ್ಲಿ ನೀನು ಶ್ರೇಷ್ಠ ಎಂದು ತಿಳಿದಿದ್ದೇನೆ. ನೀನು ವರಿಷ್ಠ, ಗರಿಷ್ಠ ಎಂದು ತಿಳಿದಿದ್ದೇನೆ. ಕ್ರೋಧದಲ್ಲಿ ನೀನು ಯಮನಿಗೆ ಸಮ ಎಂದು ತಿಳಿದಿದ್ದೇನೆ.

ಏವಂ ತು ವಚನಂ ಶ್ರುತ್ವಾ ನಾರದಸ್ಯ ಸಮೀರಣಃ ।
ಶಲ್ಮಲಿಂ ತಮುಪಾಗಮ್ಯ ಕ್ರುದ್ಧೋ ವಚನಮಬ್ರವೀತ್ ॥೫॥

ನಾರದರ ಈ ಮಾತನ್ನು ಕೇಳಿ ವಾಯುದೇವನು ಕ್ರುದ್ಧನಾಗಿ ಶಾಲ್ಮಲಿ ಮರದ ಬಳಿ ಹೋಗಿ ಹೇಳಿದನು.

ಶಲ್ಮಲೇ ನಾರದೇ ಯತ್ತತ್ತ್ವಯೋಕ್ತಂ ಮದ್ವಿಗರ್ಹಣಮ್ ।
ಅಹಂ ವಾಯುಃ ಪ್ರಭಾವಂ ತೇ ದರ್ಶಯಾಮ್ಯಾತ್ಮನೋ ಬಲಮ್ ॥೬॥

ಶಾಲ್ಮಲಿ! ನೀನು ನಾರದರ ಬಳಿ ನನ್ನ ನಿಂದನೆಯನ್ನು ಮಾಡಿರುವಿ. ಆದ್ದರಿಂದ ನಾನು ನನ್ನ ಪ್ರಭಾವವನ್ನು, ಬಲವನ್ನೂ ನಿನಗೆ ತೋರಿಸುತ್ತೇನೆ.

ನಾಹಂ ತ್ವಾ ನಾಭಿಜಾನಾಮಿ ವಿದಿತಶ್ಚಾಸಿ ಮೇ ದ್ರುಮ ।
ಪಿತಾಮಹಃ ಪ್ರಜಾಸರ್ಗೇ ತ್ವಯಿ ವಿಶ್ರಾಂತವಾನ್ ಪ್ರಭುಃ ॥೭॥

ಮರವೆ! ನಿನ್ನ ಬಗ್ಗೆ ನನಗೆ ಗೊತ್ತಿಲ್ಲ ಎಂದಿಲ್ಲ. ನಿನ್ನ ಪರಿಚಯ ನನಗಿದೆ. ಪ್ರಭು ಪಿತಾಮಹನು (ಚತುರ್ಮುಖ ಬ್ರಹ್ಮನು) ಪ್ರಜಾಸೃಷ್ಟಿಯನ್ನು ಮಾಡುತ್ತಿರುವಾಗ ನಿನ್ನಲ್ಲಿ ವಿಶ್ರಾಂತಿಯನ್ನು ಪಡೆದಿದ್ದನು.

ತಸ್ಯ ವಿಶ್ರಮಣಾದೇಷ ಪ್ರಸಾದೋ ಗಚ್ಛತಸ್ತವ ।
ರಕ್ಷ್ಯಸೇ ತೇನ ದುರ್ಬುದ್ಧೇ ನಾತ್ಮವೀರ್ಯಾದ್ ದ್ರುಮಾಧಮ ॥೮॥

ನಿನ್ನಲ್ಲಿ ವಿಶ್ರಾಂತಿ ಪಡೆದು ಹೊರಟ ಅವನ ಅನುಗ್ರಹವು ನಿನ್ನ ಮೇಲಿದೆ. ನೀಚ ಮರವೆ! ಆ ಅನುಗ್ರಹದಿಂದಾಗಿ ನಾನು ನಿನ್ನನ್ನು ರಕ್ಷಿಸುತ್ತಿದ್ದೇನೆ. ನಿನ್ನ ಸ್ವಂತಬಲದಿಂದ ನಿನ್ನ ರಕ್ಷಣೆಯಾಗಿಲ್ಲ.

ಯನ್ಮಾ ತ್ವಮವಜಾನೀಷೇ ಯಥಾನ್ಯಂ ಪ್ರಾಕೃತಂ ತಥಾ ।
ದರ್ಶಯಾಮ್ಯೇಷ ಆತ್ಮಾನಂ ಯಥಾ ಮಾಮವಭೋತ್ಸ್ಯಸೇ ॥೯॥

ನೀನು ನನ್ನನ್ನು, ಬೇರೆ ಪ್ರಾಕೃತ (ಅತಿ ಕೆಳಮಟ್ಟದ ವ್ಯಕ್ತಿ) ನನ್ನು ಅವಹೇಳನ ಮಾಡುವಂತೆ ಅವಹೇಳನ ಮಾಡುತ್ತಿರುವಿ. ಆದ್ದರಿಂದ ನಾನು ನನ್ನನ್ನು (ನನ್ನ ಬಲವನ್ನು) ತೋರಿಸುವೆ. ಆಗ ನೀನು ನನ್ನನ್ನು ಸರಿಯಾಗಿ ತಿಳಿಯುವಿ.

ಏವಮುಕ್ತಸ್ತತಃ ಪ್ರಾಹ ಶಲ್ಮಲಿಃ ಪ್ರಹಸನ್ನಿವ ।
ಪವನ ತ್ವಂ ವನೇ ಕ್ರುದ್ಧೋ ದರ್ಶಯಾತ್ಮಾನಮಾತ್ಮನಾ ॥೧೦॥

ಹೀಗೆ ಹೇಳಲ್ಪಟ್ಟ ಶಾಲ್ಮಲಿಯು ಅಣಕಿಸುವವನಂತೆ ಹೇಳಿತು. ಪವನ! ಕ್ರುದ್ಧನಾದ ನೀನು ಈ ವನದಲ್ಲಿ ನಿನ್ನ ಸ್ವರೂಪವನ್ನು ತೋರಿಸು.

ಮಯಿ ವೈ ತ್ಯಜ್ಯತಾಂ ಕ್ರೋಧಃ ಕಿಂ ಮೇ ಕ್ರುದ್ಧಃ ಕರಿಷ್ಯಸಿ ।
ನ ತೇ ಬಿಭೇಮಿ ಪವನ ಯದ್ಯಪಿ ತ್ವಂ ಸ್ವಯಂಪ್ರಭುಃ ॥೧೧॥

ನನ್ನ ಮೇಲೆ ನಿನ್ನ ಕ್ರೋಧವನ್ನು ಪ್ರಯೋಗಿಸು. ಕ್ರುದ್ಧನಾಗಿ ನನಗೇನು ಮಾಡುವಿ? ಪವನ! ವಸ್ತುತಃ ನೀನು ಸ್ವಯಂ ಪ್ರಭು. ಆದರೂ ನಾನು ನಿನಗೆ ಹೆದರುವುದಿಲ್ಲ.

ಯೇ ತು ಬುದ್ಧ್ಯಾ ಹಿ ಬಲಿನಸ್ತೇ ಭವಂತಿ ಬಲೀಯಸಃ ।
ಪ್ರಾಣಮಾತ್ರಬಲಾ ಯೇ ವೈ ನೈವ ತೇ ಬಲಿನೋ ಮತಾಃ ॥೧೨॥

ಯಾರು ಬುದ್ಧಿಯಿಂದ ಬಲಶಾಲಿಗಳೋ ಅವರೇ ನಿಜವಾಗಿ ಬಲಶಾಲಿಗಳು. ಕೇವಲ ಶರೀರಬಲವಿರುವವರು ಬಲಶಾಲಿಗಳೆಂದು ಪ್ರಾಜ್ಞರು ಒಪ್ಪುವುದಿಲ್ಲ.

ಇತ್ಯೇವಮುಕ್ತಃ ಪವನಃ ಶ್ವ ಇತ್ಯೇವಾಬ್ರವೀದ್ ವಚಃ ।
ದರ್ಶಯಿಷ್ಯಾಮಿ ತೇ ತೇಜಸ್ತತೋ ರಾತ್ರಿರುಪಾಗಮತ್ ॥೧೩॥

ಹೀಗೆ ಹೇಳಲ್ಪಟ್ಟ ಪವನನು ನಾಳೆಯೇ ನಿನಗೆ ನನ್ನ ತೇಜಸ್ಸನ್ನು ತೋರಿಸುತ್ತೇನೆ ಎಂದು ಹೇಳಿದನು. ಅನಂತರ ರಾತ್ರಿಯಾಯಿತು.

ಅಥ ನಿಶ್ಚಿತ್ಯ ಮನಸಾ ಶಲ್ಮಲಿರ್ವಾತಕಾರಿತಮ್ ।
ಪಶ್ಯಮಾನಸ್ತದಾತ್ಮಾನಮಸಮಂ ಮಾತರಿಶ್ವನಃ ॥೧೪॥

ಅನಂತರ ಶಾಲ್ಮಲಿಯು ವಾಯುದೇವನ ನಾನಾ ಕಾರ್ಯಗಳನ್ನು ಚಿಂತಿಸಿ ತಾನು ವಾಯುದೇವನಿಗೆ ಸಮ ಅಲ್ಲ ಎಂದು ತಿಳಿಯಿತು.

ನಾರದೇ ಯನ್ಮಯಾ ಪ್ರೋಕ್ತಂ ಪವನಂ ಪ್ರತಿ ತನ್ಮೃಷಾ ।
ಅಸಮರ್ಥೋ ಹ್ಯಹಂ ವಾಯೋರ್ಬಲೇನ ಬಲವಾನ್ಹಿ ಸಃ ॥೧೫॥

ನಾನು ನಾರದರ ಬಳಿ ವಾಯುದೇವನ ಬಗ್ಗೆ ಹೇಳಿದ್ದು ಸುಳ್ಳು. ನಾನು ವಾಯುದೇವನ ಬಲದ ಮುಂದೆ ಸಮರ್ಥನಲ್ಲ. ಅವನೇ ಬಲಶಾಲಿ.

ಮಾರುತೋ ಬಲವಾನ್ನಿತ್ಯಂ ತ್ವಯೇದಂ ನಾರದೋಽಬ್ರವೀತ್ ।
ಅಹಂ ಹಿ ದುರ್ಬಲೋಽನ್ಯೇಭ್ಯೋ ವೃಕ್ಷೇಭ್ಯೋ ನಾತ್ರ ಸಂಶಯಃ॥೧೬॥

ಮಾರುತನು ಯಾವಾಗಲೂ ನಿನಗಿಂತ ಹೆಚ್ಚು ಬಲಶಾಲಿ ಎಂದು ನಾರದರು ಹೇಳಿದರು. ನಾನು ಬೇರೆ ವೃಕ್ಷಗಳಿಗಿಂತ ದುರ್ಬಲ. ಸಂಶಯವೇ ಇಲ್ಲ.

ಕಿಂ ತು ಬುದ್ಧ್ಯಾ ಸಮೋ ನಾಸ್ತಿ ಮಮ ಕಶ್ಚಿದ್ವನಸ್ಪತಿಃ ।
ತದಹಂ ಬುದ್ಧಿಮಾಸ್ಥಾಯ ಭಯಂ ಮೋಕ್ಷ್ಯೇ ಸಮೀರಣಾತ್ ॥೧೭॥

ಆದರೆ ಯಾವ ಮರವೂ ಬುದ್ಧಿಯಿಂದ ನನಗೆ ಸಮವಲ್ಲ. ಆದ್ದರಿಂದ ನಾನು ಬುದ್ಧಿಯನ್ನು ಅವಲಂಬಿಸಿ ವಾಯುದೇವನ ಆಕ್ರಮಣವನ್ನು ಬಿಡಿಸಿಕೊಳ್ಳುತ್ತೇನೆ.

ಯದಿ ತಾಂ ಬುದ್ಧಿಮಾಸ್ಥಾಯ ಚರೇಯುಃ ಪರ್ಣಿನೋ ವನೇ ।
ಅರಿಷ್ಟಾಃ ಸ್ಯುಃ ಸದಾ ಕ್ರುದ್ಧಾತ್ ಪವನಾನ್ನಾತ್ರ ಸಂಶಯಃ ॥೧೮॥

ವನದಲ್ಲಿ ಮರಗಳು ಬುದ್ಧಿಯನ್ನು ಉಪಯೋಗಿಸಿಕೊಂಡು ಇದ್ದರೆ ಕ್ರುದ್ಧ ವಾಯುವಿನಿಂದ ಹಾನಿಗೊಳಗಾಗದೆ ಕ್ಷೇಮದಿಂದ ಇದ್ದಾರು. ಇದರಲ್ಲಿ ಸಂಶಯವಿಲ್ಲ.

ತೇಽತ್ರ ಬಾಲಾ ನ ಜಾನಂತಿ ಯಥಾ ನೈನಾನ್ ಸಮೀರಣಃ ।
ಸಮೀರಯೇತ ಸಂಕ್ರುದ್ಧೋ ಯಥಾ ಜಾನಾಮ್ಯಹಂ ತಥಾ ॥೧೯॥

ಆ ಎಳಸು (ಬುದ್ಧಿಹೀನ) ಮರಗಳು ಕ್ರುದ್ಧ ವಾಯುವು ತಮ್ಮನ್ನು ಪುಡಿಗಟ್ಟದಂತೆ ಮಾಡುವ ಉಪಾಯವನ್ನು ತಿಳಿದಿಲ್ಲ. ನಾನು ತಿಳಿದಿರುವಂತೆ.

ತತೋ ನಿಶ್ಚಿತ್ಯ ಮನಸಾ ಶಲ್ಮಲಿಃ ಕ್ಷುಭಿತಸ್ತದಾ ।
ಶಾಖಾಃ ಸ್ಕಂಧಾನ್ ಪ್ರಶಾಖಾಶ್ಚ ಸ್ವಯಮೇವ ವ್ಯಶಾತಯತ್ ॥೨೦॥

ಕ್ಷೋಭೆಗೊಂಡಿದ್ದ ಶಾಲ್ಮಲಿಯು ಹೀಗೆ ನಿಶ್ಚಯಿಸಿ, ಕೊಂಬೆಗಳನ್ನೂ, ಕಾಂಡಗಳನೂ, ಉಪಶಾಖೆಗಳನ್ನೂ ತಾನೇ ನಾಶಮಾಡಿತು.

ಸ ಪರಿತ್ಯಜ್ಯ ಶಾಖಾಶ್ಚ ಪತ್ರಾಣಿ ಕುಸುಮಾನಿ ಚ ।
ಪ್ರಭಾತೇ ವಾಯುಮಾಯಾಂತಂ ಪ್ರತ್ಯೈಕ್ಷತ ವನಸ್ಪತಿಃ ॥೨೧॥

ಆ ಮರವು ಹೀಗೆ ಕೊಂಬೆಗಳನ್ನೂ, ಎಲೆಗಳನ್ನೂ, ಹೂಗಳನ್ನೂ ಪರಿತ್ಯಜಿಸಿ, ಬೆಳಗಾದನಂತರ ವಾಯುವಿನ ಆಗಮನವನ್ನು ನಿರೀಕ್ಷಿಸಿದನು.

ತತಃ ಕ್ರುದ್ಧಃ ಶ್ವಸನ್ವಾಯುಃ ಪಾತಯನ್ವೈ ಮಹಾದ್ರುಮಾನ್ ।
ಆಜಗಾಮಾಥ ತಂ ದೇಶಂ ಸ್ಥಿತೋ ಯತ್ರ ಸ ಶಲ್ಮಲಿಃ ॥೨೨॥

ಅನಂತರ ಕ್ರುದ್ಧವಾಯುವು ಬೀಸುತ್ತಾ, ದೊಡ್ಡ ಮರಗಳನ್ನು ಬೀಳಿಸುತ್ತಾ ಶಾಲ್ಮಲಿ ಮರವು ಇದ್ದ ಸ್ಥಳಕ್ಕೆ ಬಂದನು.

ತಂ ಹೀನಪರ್ಣಂ ಪತಿತಾಗ್ರಶಾಖಂ
ವಿಶೀರ್ಣಪುಷ್ಪಂ ಪ್ರಸಮೀಕ್ಷ್ಯ ವಾಯುಃ ।
ಉವಾಚ ವಾಕ್ಯಂ ಸ್ಮಯಮಾನ ಏನಂ
ಮುದಾ ಯುತಂ ಶಲ್ಮಲಿಂ ರುಗ್ಣಶಾಖಮ್ ॥೨೩॥

ವಾಯುವು ಎಲೆಗಳಿಲ್ಲದ, ಬಿದ್ದುಹೋದ ಕೊಂಬೆಗಳುಳ್ಳ, ಪುಷ್ಪಗಳೆಲ್ಲವನ್ನು ಕಳೆದುಕೊಂಡಿರುವ, ಆದರೂ ಸಂತೋಷದಿಂದಿದ್ದ ಆ ಬೂರುಗದ ಮರವನ್ನು ನೋಡಿ ಮುಗುಳ್ನಗುತ್ತಾ ಹೇಳಿದನು.

ಅಹಮಪ್ಯೇವಮೇವ ತ್ವಾಂ ಕುರ್ವಾಣಃ ಶಲ್ಮಲೇ ರುಷಾ ।
ಆತ್ಮನಾ ಯತ್ಕೃತಂ ಕೃತ್ಸ್ನಂ ಶಾಖಾನಾಮಪಕರ್ಷಣಮ್ ॥೨೪॥

ಶಾಲ್ಮಲಿ! ನೀನೆ ನಿನ್ನ ಎಲ್ಲ ಶಾಖೆಗಳನ್ನು ಧ್ವಂಸಮಾಡಿರುವಿ. ನಾನೂ ಕೋಪದಿಂದ ಇದನ್ನು ಮಾಡಬೇಕೆಂದಿದ್ದೆ.

ಹೀನಪುಷ್ಪಾಗ್ರಶಾಖಸ್ತ್ವಂ ಶೀರ್ಣಾಂಕುರಪಲಾಶವಾನ್ ।
ಆತ್ಮದುರ್ಮಂತ್ರಿತೇನೇಹ ಮದ್ವೀರ್ಯವಶಗೋಽಭವಃ ॥೨೫॥

ನಿನ್ನ ದುರಾಲೋಚನೆಯಿಂದ ಪುಷ್ಪಹೀನನಾಗಿ, ಶಾಖಾಹೀನನಾಗಿ, ಚಿಗುರುಗಳಿಲ್ಲದವನಾಗಿ, ಎಲೆಗಳಿಲ್ಲದವನಾಗಿ ನನ್ನ ಬಲಕ್ಕೆ ವಶನಾಗಿರುವಿ.

ಏತಚ್ಛ್ರುತ್ವಾ ವಚೋ ವಾಯೋಃ ಶಲ್ಮಲಿರ್ವ್ರೀಡಿತಸ್ತದಾ ।
ಅತಪ್ಯತ ವಚಃ ಸ್ಮೃತ್ವಾ ನಾರದೋ ಯತ್ತದಾಬ್ರವೀತ್ ॥೨೬॥

ಆಗ ವಾಯುವಿನ ಈ ಮಾತನ್ನು ಕೇಳಿ ಶಾಲ್ಮಲಿಗೆ ನಾಚಿಕೆಯಾಯಿತು. ನಾರದರು ಹಿಂದೆ ಹೇಳಿದ ಮಾತನ್ನು ನೆನೆದು ಪರಿತಪಿಸಿದನು.

ಏವಂ ಯೋ ರಾಜಶಾರ್ದೂಲ ದುರ್ಬಲಃ ಸನ್ ಬಲೀಯಸಾ ।
ವೈರಮಾಸಜ್ಜತೇ ಬಾಲಸ್ತಪ್ಯತೇ ಶಲ್ಮಲಿರ್ಯಥಾ ॥೨೭॥

ರಾಜಶ್ರೇಷ್ಠ! ಯಾರು ದುರ್ಬಲನಾಗಿದ್ದರೂ ಹೀಗೆ ಎಳೆಸಾಗಿ ಬಲಶಾಲಿಗಳ ಜೊತೆ ವೈರವನ್ನು ಸಾಧಿಸುತ್ತಾನೋ ಅವನು, ಶಾಲ್ಮಲಿಯಂತೆ ತಾಪಕ್ಕೆ ಒಳಗಾಗುತ್ತಾನೆ.

ತಸ್ಮಾದ್ವೈರಂ ನ ಕುರ್ವೀತ ದುರ್ಬಲೋ ಬಲವತ್ತರೈಃ ।
ಶೋಚೇದ್ಧಿ ವೈರಂ ಕುರ್ವಾಣೋ ಯಥಾ ವೈ ಶಲ್ಮಲಿಸ್ತಥಾ ॥೨೮॥

ಆದ್ದರಿಂದ ದುರ್ಬಲನು ತನಗಿಂತ ಹೆಚ್ಚು ಬಲಶಾಲಿಗಳ ಜೊತೆ ವೈರವನ್ನು ಮಾಡಬಾರದು. ವೈರವನ್ನು ಮಾಡುವವನು ಶಾಲ್ಮಲಿಯಂತೆ ಶೋಕಕ್ಕೆ ಒಳಗಾಗುತ್ತಾನೆ.

ನ ಹಿ ವೈರಂ ಮಹಾತ್ಮಾನೋ ವಿವೃಣ್ವಂತ್ಯಪಕಾರಿಷು ।
ಶನ್ಯೈಃ ಶನ್ಯೈರ್ಮಹಾರಾಜ ದರ್ಶಯಂತಿ ಸ್ಮ ತೇ ಬಲಮ್ ॥೨೯॥

ಮಹಾತ್ಮರು ಅಪಕಾರಿಗಳಿಗೆ ವೈರದ ವಿವರಣೆಯನ್ನು ಕೊಡುವುದಿಲ್ಲ. ಮಹಾರಾಜ! ಅವರು ನಿಧಾನವಾಗಿ ತಮ್ಮ ಬಲವನ್ನು ತೋರಿಸುತ್ತಾರೆ.

ವೈರಂ ನ ಕುರ್ವೀತ ನರೋ ದುರ್ಬುದ್ಧಿರ್ಬುದ್ಧಿಜೀವಿನಾ ।
ಬುದ್ಧಿರ್ಬುದ್ಧಿಮತೋ ಯಾತಿ ತೂಲೇಷ್ವಿವ ಹುತಾಶನಃ ॥೩೦॥

ದುರ್ಬುದ್ಧಿಯವನು ಸುಬುದ್ಧಿಗಳ ಜೊತೆ ವೈರವನ್ನು ಸಾಧಿಸಬಾರದು. ಸುಬುದ್ಧಿಯ ಬುದ್ಧಿಯು ಎಲ್ಲಕಡೆ ವ್ಯಾಪಿಸಿರುತ್ತದೆ. ಹತ್ತಿಯ ರಾಶಿಯಲ್ಲಿ ಬೆಂಕಿಯಂತೆ.

ನ ಹಿ ಬುದ್ಧ್ಯಾ ಸಮಂ ಕಿಂಚಿದ್ ವಿದ್ಯತೇ ಪುರುಷೇ ನೃಪ ।
ತಥಾ ಬಲೇನ ರಾಜೇಂದ್ರ ನ ಸಮೋऽಸ್ತೀತಿ ಚಿಂತಯೇತ್ ॥೩೧॥

ರಾಜನೆ! ಜನರಲ್ಲಿ ಬುದ್ಧಿಗೆ ಸಮಾನವಾದುದು ಯಾವುದೂ ಇಲ್ಲ. ಬುದ್ಧಿಗೆ ಬಲವು ಸಮಾನ ಎಂದು ಚಿಂತಿಸಬಾರದು.

ತಸ್ಮಾತ್ ಕ್ಷಮೇತ ಬಾಲಾಯ ಜಡಾಯ ಬಧಿರಾಯ ಚ ।
ಬಲಾಧಿಕಾಯ ರಾಜೇಂದ್ರ ತದ್ ದೃಷ್ಟಂ ತ್ವಯಿ ಶತ್ರುಹನ್ ॥೩೨॥

ರಾಜೇಂದ್ರ! ಆದ್ದರಿಂದ ಬಾಲನನ್ನೂ, ಜಡನನ್ನೂ, ಕಿವುಡನನ್ನೂ, ಹೆಚ್ಚು ಬಲಶಾಲಿಯನ್ನು ಸಹಿಸಬೇಕು. ಈ ಸಹನೆ ನಿನ್ನಲ್ಲಿ ಕಾಣುತ್ತಿದೆ.

ಅಕ್ಷೌಹಿಣ್ಯೋ ದಶೈಕಾ ಚ ಸಮಮೇವ ಮಹಾದ್ಯುತೇ ।
ಬಲೇನ ನ ಸಮಾ ರಾಜನ್ನರ್ಜುನಸ್ಯ ಮಹಾತ್ಮನಃ ॥೩೩॥

ಮಹಾಕಾಂತಿಶಾಲಿಯೇ! ರಾಜನೇ! ಹನ್ನೊಂದು ಅಕ್ಷೌಹಿಣಿ ಸೈನ್ಯವು ಒಟ್ಟಾಗಿಯೂ ಮಹಾತ್ಮನಾದ ಅರ್ಜುನನ ಬಲಕ್ಕೆ ಸಮವಲ್ಲ.

ಹತಾಸ್ತಾಶ್ಚೈವ ಭಗ್ನಾಶ್ಚ ಪಾಂಡವೇನ ಯಶಸ್ವಿನಾ ।
ಚರತಾ ಬಲಮಾಸ್ಥಾಯ ಪಾಕಶಾಸನಿನಾ ಮೃಧೇ ॥೩೪॥

ಯಶಸ್ವೀ ಆದ, ಪಾಂಡುಪುತ್ರನಾದ ಇಂದ್ರಸುತನಿಂದ, ರಣರಂಗದಲ್ಲಿ ಬಲವನ್ನು ಅವಲಂಬಿಸಿ ಮುನ್ನುಗ್ಗುತ್ತಾ, ಆ ಹನ್ನೊಂದು ಅಕ್ಷೌಹಿಣಿಯು ಭಂಗ ಮಾಡಲ್ಪಟ್ಟಿತು, ನಾಶಮಾಡಲ್ಪಟ್ಟಿತು.

ಉಕ್ತಾಸ್ತೇ ರಾಜಧರ್ಮಾಶ್ಚ ಆಪದ್ಧರ್ಮಾಶ್ಚ ಭಾರತ ।
ವಿಸ್ತರೇಣ ಮಹಾರಾಜ ಕಿಂ ಭೂಯಃ ಪ್ರಬ್ರವೀಮಿ ತೇ ॥೩೫॥

ಭರತಕುಲಸಂಜಾತ! ಮಹಾರಾಜ! ನಿನಗೆ ರಾಜಧರ್ಮಗಳನ್ನೂ, ಆಪದ್ಧರ್ಮಗಳನ್ನೂ ವಿಸ್ತರವಾಗಿ ಹೇಳಿದ್ದೇನೆ. ನಿನಗೆ ಇನ್ನೇನನ್ನು ಹೇಳಲಿ?

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಆಪದ್ಧರ್ಮೇ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯವು ಮುಗಿಯಿತು.

★ ★ ★ ★

ಇಪ್ಪತ್ನಾಲ್ಕನೆಯ ಅಧ್ಯಾಯ

ಲೋಭವು ಪಾಪದ ಮೂಲ. ಲೋಭಿಗಳಲ್ಲಿರುವ ದುರ್ಗುಣಗಳು. ಶಿಷ್ಟರು ಮತ್ತು ಅವರಲ್ಲಿರುವ ಸದ್ಗುಣಗಳು. ಶಿಷ್ಟರನ್ನು ಅನುಸರಿಸಬೇಕು.

ಯುಧಿಷ್ಠಿರಃ

ಪಾಪಸ್ಯ ಯದಧಿಷ್ಠಾನಂ ಯತಃ ಪಾಪಂ ಪ್ರವರ್ತತೇ ।
ಏತದಿಚ್ಛಾಮ್ಯಹಂ ಜ್ಞಾತುಂ ತತ್ತ್ವೇನ ಭರತರ್ಷಭ ॥೧॥

ಭರತರ್ಷಭ! ಪಾಪದ ಮೂಲ ಯಾವುದು? ಅಂದರೆ, ಯಾವ ದೋಷದಿಂದಾಗಿ ಪಾಪಕಾರ್ಯವು ನಡೆಯುತ್ತದೆ? ಇದನ್ನು ಸರಿಯಾಗಿ ತಿಳಿಯಲು ಇಚ್ಛಿಸುತ್ತಿದ್ದೇನೆ.

ಭೀಷ್ಮಃ

ಪಾಪಸ್ಯ ಯದಧಿಷ್ಠಾನಂ ತಚ್ಛೃಣುಷ್ವ ನರಾಧಿಪ ।
ಏಕೋ ಲೋಭೋ ಮಹಾಗ್ರಾಹೋ ಲೋಭಾತ್ ಪಾಪಂ ಪ್ರವರ್ತತೇ ॥

ನರಾಧಿಪ! ಪಾಪದ ಮೂಲವನ್ನು ಹೇಳುವೆ. ಕೇಳು. ಲೋಭವೇ ಪಾಪದ ಮೂಲ. ಅದು ದೊಡ್ಡ ಮೊಸಳೆ (ಎಲ್ಲ ಸದ್ಗುಣಗಳನ್ನು ನುಂಗಿಬಿಡುತ್ತದೆ). ಲೋಭದಿಂದ ಪಾಪಕಾರ್ಯವು ನಡೆಯುತ್ತದೆ.

ತತಃ ಪಾಪಾದಧರ್ಮಶ್ಚ ತಥಾ ದುಃಖಮನುತ್ತಮಮ್ ।
ನಿಕೃಂತ್ಯಾನ್ಮೂಲಮೇತದ್ಧಿ ಯೇನ ಪಾಪಕೃತೋ ಜನಾಃ ॥೩॥

ಪಾಪದಿಂದ ಧರ್ಮವಿರುದ್ಧವಾದ ಕಾರ್ಯಗಳು ಸಂಭವಿಸುತ್ತವೆ ಮತ್ತು ಸಾಟಿಯಿಲ್ಲದ ದುಃಖವೂ ಸಂಭವಿಸುತ್ತದೆ. ಈ ಮೂಲವನ್ನು ಕತ್ತರಿಸಬೇಕು. ಇದರಿಂದಾಗಿಯೆ ಜನರು ಪಾಪಗಳನ್ನು ಮಾಡುತ್ತಾರೆ.

ಲೋಭಾತ್ ಕ್ರೋಧಃ ಪ್ರಭವತಿ ಲೋಭಾತ್ ಕಾಮಃ ಪ್ರವರ್ತತೇ ।
ಲೋಭಾನ್ಮೋಹಶ್ಚ ಮಾಯಾ ಚ ಮಾನಸ್ತಂಭಃ ಪರಾಸುತಾ ॥೪॥

ಲೋಭದಿಂದ ಕ್ರೋಧವು ಹುಟ್ಟುತ್ತದೆ. ಲೋಭದಿಂದ ಕಾಮವು ಹುಟ್ಟುತ್ತದೆ. ಲೋಭದಿಂದ ಮೋಹವೂ, ಕಪಟವೂ, ಸ್ವಾಭಿಮಾನಹೀನತೆಯೂ, ಪರಾಸುತ್ವವೂ

(ಬೇರೆಯವರ ಖರ್ಚಿನಲ್ಲಿ ಜೀವನದ ಅವಶ್ಯಕತೆಗಳನ್ನು ಪೂರೈಸುವ ಮನೋಧರ್ಮ) ಹುಟ್ಟುತ್ತವೆ.

ಅಕ್ಷಮಾ ಹ್ರೀಪರಿತ್ಯಾಗಃ ಶ್ರೀನಾಶೋ ಧರ್ಮಸಂಕ್ಷಯಃ ।
ಅಭಿಧ್ಯಾಪ್ರಜ್ಞತಾ ಚೈವ ಸರ್ವಂ ಲೋಭಾತ್ ಪ್ರವರ್ತತೇ ॥೫॥

ಅಸಹನೆ, ಲಜ್ಜಾಹೀನತೆ, ಸಂಪತ್ತಿನ / ತೇಜಸ್ಸಿನ ನಾಶ, ಧರ್ಮನಾಶ, ಚಿಂತೆ, ಪ್ರಜ್ಞೆಯ ಕೊರತೆ - ಇವೆಲ್ಲವೂ ಲೋಭದಿಂದ ಉಂಟಾಗುತ್ತವೆ.

ಅನ್ಯಾಯಶ್ಚಾವಿತರ್ಕಶ್ಚ ವಿಕರ್ಮಸು ಚ ಯಾಃ ಕ್ರಿಯಾಃ ।
ಕೂಟವಿದ್ಯಾದಯಶ್ಚೈವ ರೂಪೈಶ್ವರ್ಯಮದಸ್ತಥಾ ॥೬॥

ಅನ್ಯಾಯ, ವಿರುದ್ಧಯುಕ್ತಿ, ವಿರುದ್ಧಕರ್ಮಗಳು, ವಂಚಿಸುವ ನೈಪುಣ್ಯ, ರೂಪಮದ, ಐಶ್ವರ್ಯಮದ,

ಸರ್ವಭೂತೇಷ್ವವಿಶ್ವಾಸಃ ಸರ್ವಭೂತೇಷ್ವನಾರ್ಜವಮ್ ।
ಸರ್ವಭೂತೇಷ್ವಭಿದ್ರೋಹಃ ಸರ್ವಭೂತೇಷ್ವಯುಕ್ತತಾ ।
ಹರಣಂ ಪರವಿತ್ತಾನಾಂ ಪರದಾರಾಭಿಮರ್ಶನಮ್ ॥೭॥

ಎಲ್ಲರ ಮೇಲೂ ಅವಿಶ್ವಾಸ, ಎಲ್ಲರ ಬಗ್ಗೆ ವಕ್ರ ನಡವಳಿಕೆ, ಎಲ್ಲರಿಗೂ ದ್ರೋಹ, ಎಲ್ಲರ ಬಗ್ಗೆಯೂ ಅನುಚಿತ ವರ್ತನೆ, ಪರವಿತ್ತಾಪಹಾರ, ಪರಪತ್ನಿಯರ ಮೇಲೆ ಗಮನ,

ವಾಗ್ವೇಗೋ ಮಾನಸೋ ವೇಗೋ ನಿಂದಾವೇಗಸ್ತಥೈವ ಚ ।
ಉಪಸ್ಥೋದರಯೋರ್ವೇಗೋ ಮೃತ್ಯುವೇಗಶ್ಚ ದಾರುಣಃ ॥೮॥

ವೇಗದ ಮಾತುಗಳು, ವೇಗದ ಆಲೋಚನೆಗಳು, ವೇಗದ ನಿಂದೆಗಳು, ಅತಿಹಸಿವು, ಅತಿಯಾದ ಲೈಂಗಿಕ ಕಾಮನೆಗಳು, ದಾರುಣವಾದ ಮೃತ್ಯುವೇಗ (ವೇಗದಿಂದ ಆತ್ಮಹತ್ಯೆ ಇತ್ಯಾದಿಗಳ ಕಡೆ ಪ್ರವೃತ್ತಿ),

ಈರ್ಷ್ಯಾವೇಗಶ್ಚ ಬಲವಾನ್ಮಿಥ್ಯಾವೇಗಶ್ಚ ದುಸ್ತ್ಯಜಃ ।
ರಸವೇಗಶ್ಚ ದುರ್ವಾರಃ ಶ್ರೋತ್ರವೇಗಶ್ಚ ದುಃಸಹಃ ॥೯॥

ಉತ್ಕಟ ಅಸೂಯೆ, ತಡೆಯಲಾಗದ ಸುಳ್ಳಿನ ವೇಗ, ತಡೆಯಲಾಗದ ಜಿಹ್ವಾಚಾಪಲ್ಯ, ತಡೆಯಲಾಗದ ಕಿವಿಯ ವೇಗ (ಸುದ್ದಿಗಳನ್ನು ಕೇಳುವ ಆತುರ),

ಕುತ್ಸಾ ವಿಕತ್ಥಾ ಮಾತ್ಸರ್ಯಂ ಪಾಪಂ ದುಷ್ಕರಕಾರಿತಾ ।
ಸಾಹಸಾನಾಂ ಚ ಸರ್ವೇಷಾಮಕಾರ್ಯಾಣಾಂ ಕ್ರಿಯಾಸ್ತಥಾ ॥೧೦॥

ಪರನಿಂದೆ, ಆತ್ಮಪ್ರಶಂಸೆ, ಮಾತ್ಸರ್ಯ, ಮಾಡಬಾರದ ಕೆಲಸಗಳಲ್ಲಿ ಪ್ರವೃತ್ತಿ, ಮಾಡಬಾರದ ಸಾಹಸಗಳನ್ನು ಮಾಡುವುದು - ಇವೆಲ್ಲವೂ ಲೋಭದ ಪರಿಣಾಮಗಳು.

ಜಾತೌ ಬಾಲ್ಯೇಥ ಕೌಮಾರೇ ಯೌವನೇ ಚಾಪಿ ಮಾನವಃ ।
ನ ಸಂತ್ಯಜತ್ಯಾತ್ಮಕರ್ಮ ಯನ್ನ ಜೀರ್ಯತಿ ಜೀರ್ಯತಃ ॥೧೧॥

ಮಾನವನು ಹುಟ್ಟು, ಬಾಲ್ಯ, ಕುಮಾರಸ್ಥಿತಿ, ಯೌವನಗಳಲ್ಲಿ ತನ್ನ ಸ್ವಭಾವವನ್ನು= ಲೋಭವನ್ನು ಬಿಡುವುದಿಲ್ಲ. ದೇಹವೇ ಜೀರ್ಣವಾದರೂ (ಮರಣಾವಸ್ಥೆಯಲ್ಲೂ) ಲೋಭವು ಜೀರ್ಣವಾಗುವುದಿಲ್ಲ (ಇಲ್ಲವಾಗುವುದಿಲ್ಲ).

ಯೋ ನ ಪೂರಯಿತುಂ ಶಕ್ಯೋ ಲೋಭಃ ಪ್ರಾಪ್ಯಾ ಕುರೂದ್ವಹ ।
ನಿತ್ಯಂ ಗಂಭೀರತೋಯಾಭಿರಾಪಗಾಭಿರಿವೋದಧಿಃ ।
ನ ಪ್ರಹೃಷ್ಯತಿ ಲಾಭೈರ್ಯೋ ಯಶ್ಚ ಕಾಮೈರ್ನ ತೃಪ್ಯತಿ ॥೧೨॥

ಕುರುಕುಲಸಂಜಾತ! ಪದಾರ್ಥಗಳ ಪ್ರಾಪ್ತಿಯಿಂದ, ಅಪೇಕ್ಷೆಗಳ ಪೂರೈಕೆಯಿಂದ ಲೋಭವನ್ನು ತಣಿಸಲು ಸಾಧ್ಯವಿಲ್ಲ. ಆಳವಾದ ನೀರಿರುವ ನದಿಗಳಿಂದ ಸಮುದ್ರವನ್ನು ತುಂಬಿಸಲು ಆಗುವುದಿಲ್ಲ. ಅಂತೆಯೇ ಲೋಭವು ಲಾಭದಿಂದ ತಣಿಯುವುದಿಲ್ಲ. ಭೋಗವಸ್ತುಗಳಿಂದ ತೃಪ್ತವಾಗುವುದಿಲ್ಲ.

ಯೋ ನ ದೇವೈರ್ನ ಗಂಧರ್ವೈರ್ನಾಸುರೈರ್ನ ಮಹೋರಗೈಃ ।
ಜ್ಞಾಯತೇ ನೃಪ ತತ್ತ್ವೇನ ಸರ್ವೇಭ್ಯೂತಗಣೈಸ್ತಥಾ ।
ಸ ಲೋಭಃ ಸಹ ಮೋಹೇನ ವಿಜೇತವ್ಯೋ ಜಿತಾತ್ಮನಾ ॥೧೩॥

ಲೋಭದ ಸ್ವರೂಪವನ್ನು (ಅದರ ಆಳ-ಅಗಲಗಳನ್ನು) ಯಥಾರ್ಥವಾಗಿ ದೇವತೆಗಳು ತಿಳಿಯಲಾರರು. ಗಂಧರ್ವರು ತಿಳಿಯಲಾರರು. ಅಸುರರು

ತಿಳಿಯಲಾರರು. ಮಹಾನಾಗಗಳು ತಿಳಿಯಲಾರರು. ಯಾವ ಚೇತನವೂ ತಿಳಿಯದು. ಈ ಲೋಭವನ್ನು ಮತ್ತು ಮೋಹವನ್ನು ಮನಸ್ಸಿನ ನಿಗ್ರಹದಿಂದಲೇ ಜಯಿಸಬೇಕು.

ದಂಭೋ ದ್ರೋಹಶ್ಚ ನಿಂದಾ ಚ ಪೈಶುನ್ಯಂ ಮತ್ಸರಸ್ತಥಾ ।
ಭವಂತ್ಯೇತಾನಿ ಕೌರವ್ಯ ಲುಬ್ಧಾನಾಮಕೃತಾತ್ಮನಾಮ್ ॥೧೪॥

ಕುರುಕುಲಸಂಜಾತ! ಅಶುದ್ಧ ಮನಸ್ಸಿನ ಲೋಭಿಗಳಲ್ಲಿ, ಡಂಭ (ಇಲ್ಲದ ಉತ್ಕರ್ಷಗಳ ಪ್ರದರ್ಶನ) ದ್ರೋಹ, ಪರನಿಂದೆ, ಚಾಡಿಕೋರತನ, ಮಾತ್ಸರ್ಯ- ಇವುಗಳು ಇರುತ್ತವೆ.

ಸುಮಹಾಂತ್ಯಪಿ ಶಾಸ್ತ್ರಾಣಿ ಧಾರಯಂತಿ ಬಹುಶ್ರುತಾಃ ।
ಛೇತ್ತಾರಃ ಸಂಶಯಾನಾಂ ಚ ಕ್ಲಿಶ್ಯಂತೀಹಾಲ್ಪಬುದ್ಧಯಃ ॥೧೫॥

ಮಹಾ ಮಹಾಶಾಸ್ತ್ರಗಳನ್ನು ಧರಿಸಿರುತ್ತಾರೆ. ಬಹುಶ್ರುತರಾಗಿರುತ್ತಾರೆ. ನಾನಾ ಸಂಶಯಗಳನ್ನು ಪರಿಹರಿಸುತ್ತಾರೆ. ಆದರೂ ಸಣ್ಣಬುದ್ಧಿಯವರಾಗಿರುತ್ತಾರೆ. ಲೋಭದಿಂದ ಕ್ಲೇಶಪಡುತ್ತಾರೆ.

ದ್ವೇಷಕ್ರೋಧಪ್ರಸಕ್ತಾಶ್ಚ ಶಿಷ್ಟಾಚಾರಬಹಿಷ್ಕೃತಾಃ ।
ಅಂತಃಕ್ಷುರಾ ವಾಙ್ಮಧುರಾಃ ಕೂಪಾಶ್ಚನ್ನಾಸ್ತೃಣೈರಿವ ।
ಧರ್ಮವೈತಂಸಿಕಾಃ ಕ್ಷುದ್ರಾ ಮುಷ್ಣಂತಿ ಧ್ವಜಿನೋ ಜಗತ್ ॥೧೬॥

ಲೋಭಿಗಳಲ್ಲಿ ದ್ವೇಷ-ಕ್ರೋಧಗಳು ಗಾಢವಾಗಿ ಅಂಟಿರುತ್ತವೆ. ಶಿಷ್ಟಾಚಾರವು ಅವರಿಂದ ಹೊರಗೇ ಇರುತ್ತದೆ. ಅವರ ಅಂತಃಕರಣವು ಕತ್ತಿಯ ಅಲಗು. ಮಾತು ಮಧುರ. ಹುಲ್ಲಿನ ಹೊದಿಕೆಯನ್ನು ಹೊದ್ದ ಭಾವಿಯಂತೆ. ಇವರು ಧರ್ಮದ ವರ್ತಕರು. ಕ್ಷುದ್ರರು. ಧರ್ಮದ ಧ್ವಜವನ್ನು ಹಿಡಿದವರು (ಧರ್ಮನಿಷ್ಠರಾಗದೆ ಧರ್ಮನಿಷ್ಠರೆಂದು ಜನರು ನಂಬುವಂತೆ ಲಾಂಛನಗಳನ್ನು ಧರಿಸಿದವರು). ಇವರು ಜಗತ್ತನ್ನೇ ಕದಿಯುತ್ತಾರೆ.

ಕುರ್ವತೇ ಚ ಬಹೂನ್ ಮಾರ್ಗಾಂಸ್ತಾಂಸ್ತಾನ್ ಹೇತುಬಲಾಶ್ರಿತಾಃ ।
ಸರ್ವಂ ಮಾರ್ಗಂ ವಿಲುಂಪಂತಿ ಲೋಭಾಜ್ಞಾನೇಷು ನಿಷ್ಠಿತಾಃ ॥೧೭॥

ಯುಕ್ತಿ ಬಲದಿಂದ ನಾನಾ ಮಾರ್ಗಗಳನ್ನು ಸೃಷ್ಟಿಸುತ್ತಾರೆ. ಲೋಭ-ಅಜ್ಞಾನಗಳಲ್ಲಿ ದೃಢನಿಷ್ಠೆವುಳ್ಳವರಾಗಿ ಸಜ್ಜನರ ಮಾರ್ಗಗಳನ್ನು ನಾಶಮಾಡುತ್ತಾರೆ.

ಧರ್ಮಸ್ಯಾಹ್ರಿಯಮಾಣಸ್ಯ ಲೋಭಗ್ರಸ್ತೈರ್ದುರಾತ್ಮಭಿಃ ।
ಯಾ ಯಾ ವಿಕ್ರಿಯತೇ ಸಂಸ್ಥಾ ತಥಾ ಸಾಪಿ ಪ್ರಪದ್ಯತೇ ॥೧೮॥

ಲೋಭಗ್ರಸ್ತರಾದ ದುರಾತ್ಮರು ಧರ್ಮವನ್ನು ಅಪಹರಿಸುತ್ತಾರೆ. ಈ ಅಪಹಾರದಿಂದ ನಾನಾ ವ್ಯವಸ್ಥೆಗಳು ವಿಕೃತವಾಗುತ್ತವೆ. ಅನಂತರ ಆ ವ್ಯವಸ್ಥೆಯೂ ವಿಕಾರಕ್ಕೆ ಒಳಗಾಗುತ್ತದೆ. (ಅನಂತರ ಪರಲೋಕಯಾತನೆಯು ಪ್ರಾಪ್ತವಾಗುತ್ತದೆ-ಲಕ್ಷಾಲಂಕಾರ).

ದರ್ಪಃ ಕ್ರೋಧೋ ಮದಃ ಸ್ವಪ್ನೋ ಹರ್ಷಃ ಶೋಕೋಽತಿಮಾನಿತಾ ।
ತತ ಏವ ಹಿ ಕೌರವ್ಯ ದೃಶ್ಯಂತೇ ಲುಬ್ಧಬುದ್ಧಿಷು ।
ಏತಾನಶಿಷ್ಟಾನ್ ಬುಧ್ಯಸ್ವ ನಿತ್ಯಂ ಲೋಭಸಮನ್ವಿತಾನ್ ॥೧೯॥

ಕುರುಕುಲಸಂಜಾತ! ಲೋಭಿಗಳಲ್ಲಿ ಲೋಭದಿಂದಾಗಿಯೇ ದರ್ಪ, ಕ್ರೋಧ, ಮದ, ನಿದ್ರೆ, ಹರ್ಷ, ಶೋಕ, ದುರಹಂಕಾರ- ಇವುಗಳು ಕಾಣಿಸಿಕೊಳ್ಳುತ್ತವೆ. ಸದಾ ಲೋಭಿಗಳಾದ ಇವರನ್ನು ಅಶಿಷ್ಟರು ಎಂದು ತಿಳಿ.

ಶಿಷ್ಟಾಂಸ್ತು ಪರಿಪೃಚ್ಛೇಥಾ ಯಾನ್ ವಕ್ಷ್ಯಾಮಿ ಶುಚಿವ್ರತಾನ್ ।
ಯೇಷಾಮ್ವವೃತ್ತಿಭಯಂ ನಾಸ್ತಿ ಪರಲೋಕಭಯಂ ನ ಚ ॥೨೦॥

ಶಿಷ್ಟರು ಯಾರು ಎಂದು ನೀನು ಕೇಳಿರುವಿ. ಅವರನ್ನು ಕುರಿತು ಹೇಳುತ್ತೇನೆ. ಕೇಳು. ಅವರು ದೇಹ-ಇಂದ್ರಿಯ-ಮನಸ್ಸುಗಳು ಶುಚಿಯಾಗಿರಲು ಅನುಕೂಲವಾದ ಕೆಲಸಗಳಲ್ಲಿ ದೀಕ್ಷೆವುಳ್ಳವರಾಗಿರುತ್ತಾರೆ. ಅವರಲ್ಲಿ ಹೊಟ್ಟೆಗಾಗಿ ಅಲೆದಾಟವಿಲ್ಲ. ಅಲೆದಾಟದಿಂದ ಹುಟ್ಟುವ ಭಯವಿಲ್ಲ. (ಪುಣ್ಯಶೀಲರಾದ್ದರಿಂದ-ಲಕ್ಷಾಲಂಕಾರ). ಪರಲೋಕದ ಭಯವಿಲ್ಲ. ಅಂದರೆ ಯಮದೂತರ ಭಯವಿಲ್ಲ.

ನಾಮಿಷೇಷು ಪ್ರಸಂಗೋಽಸ್ತಿ ನ ಪ್ರಿಯೇಷ್ವಪ್ರಿಯೇಷು ಚ ।
ಶಿಷ್ಟಾಚಾರಃ ಪ್ರಿಯೋ ಯೇಷು ಶ್ರುತಂ ಯೇಷಾಂ ಪರಾಯಣಮ್ ॥

ಅವರು ಆಮಿಷಗಳಿಗೆ ಅಂಟಿಕೊಳ್ಳುವುದಿಲ್ಲ. ಪ್ರಿಯ-ಅಪ್ರಿಯಗಳ ದ್ವಂದ್ವಕ್ಕೆ ಅಂಟಿಕೊಳ್ಳುವುದಿಲ್ಲ. ಅವರಿಗೆ ಶಿಷ್ಟಾಚಾರವು ಪ್ರಿಯ. ಶಾಸ್ತ್ರಾಧ್ಯಯನವು ಅವರ ಶ್ರೇಷ್ಠ ಆಸಕ್ತಿ.

ಸುಖಂ ದುಃಖಂ ಸಮಂ ಯೇಷಾಂ ಸತ್ಯಂ ಯೇಷಾಂ ಪರಾಯಣಮ್।
ದಾತಾರೋ ನ ಗೃಹೀತಾರೋ ದಯಾವಂತಸ್ತಥೈವ ಚ ॥೨೨॥

ಅವರು ಸುಖ-ದುಃಖಗಳನ್ನು ಸಮವಾಗಿ ಕಾಣುತ್ತಾರೆ. ಅವರಿಗೆ ಸತ್ಯದಲ್ಲಿ ಪರಮನಿಷ್ಠೆ. ದಾನ ಮಾಡುತ್ತಾರೆ. ಪರಿಗ್ರಹವನ್ನು ಮಾಡುವುದಿಲ್ಲ. ದಯಾವಂತರು.

ಪಿತೃದೇವಾತಿಥೇಯಾಶ್ಚ ನಿತ್ಯೋದ್ಯುಕ್ತಾಸ್ತಥೈವ ಚ ।
ಸರ್ವೋಪಕಾರಿಣೋ ಧೀರಾಃ ಸರ್ವದೇಯಾಶ್ಚ ಭಾರತ ॥೨೩॥

ಭರತಕುಲಸಂಜಾತ! ಪಿತೃಗಳನ್ನು, ದೇವತೆಗಳನ್ನು, ಅತಿಥಿಗಳನ್ನು ಸತ್ಕರಿಸುತ್ತಾರೆ. ನಿತ್ಯವೂ ಉತ್ಕೃಷ್ಟ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಎಲ್ಲರಿಗೂ ಉಪಕಾರ ಮಾಡುತ್ತಾರೆ. ಜ್ಞಾನಾಸಕ್ತರೂ-ವಿಕಾರರಹಿತರೂ ಆಗಿರುತ್ತಾರೆ. ಎಲ್ಲವನ್ನು ದಾನ ಮಾಡುತ್ತಾರೆ.

ಸರ್ವಭೂತಹಿತಾಶ್ಚೈವ ಸರ್ವದೇಯಾಶ್ಚ ಭಾರತ ।
ನ ತೇ ಚಾಲಯಿತುಂ ಶಕ್ಯಾ ಧರ್ಮವ್ಯಾಪಾರಪಾರಗಾಃ ॥೨೪॥

ಎಲ್ಲಪ್ರಾಣಿಗಳಿಗೂ ಹಿತವನ್ನು ಮಾಡುತ್ತಾರೆ. ಎಲ್ಲವನ್ನೂ ದಾನ ಮಾಡುತ್ತಾರೆ. ಅವರನ್ನು ಅಲುಗಾಡಿಸಲು ಆಗುವುದಿಲ್ಲ. ಧರ್ಮಕಾರ್ಯಗಳಲ್ಲಿ ಪಾರಂಗತರಾಗಿರುತ್ತಾರೆ.

ನ ತೇಷಾಂ ಭಿದ್ಯತೇ ವೃತ್ತಂ ಯತ್ ಪುರಾ ಸಾಧುಭಿಃ ಕೃತಮ್ ।
ನ ತ್ರಾಸಿನೋ ನ ಚಪಲಾ ನ ರೌದ್ರಾಃ ಸತ್ಪಥೇ ಸ್ಥಿತಾಃ ॥೨೫॥

ಪೂರ್ವಕಾಲದ ಸಜ್ಜನರು ಆಚರಿಸಿದ ಕರ್ಮಗಳನ್ನೇ ಅವರು ಆಚರಿಸುತ್ತಾರೆ. ಅವರ ನಡವಳಿಕೆಯಲ್ಲಿ ಒಡಕು ಉಂಟಾಗುವುದಿಲ್ಲ. ಅವರಿಗೆ ಆತಂಕವಿಲ್ಲ. ಚಪಲವಿಲ್ಲ. ಉಗ್ರರಲ್ಲ. ಸನ್ಮಾರ್ಗದಲ್ಲೇ ಇರುತ್ತಾರೆ.

ತೇ ಸೇವ್ಯಾಃ ಸಾಧುಭಿರ್ನಿತ್ಯಂ ಯೇಷ್ವಹಿಂಸಾ ಪ್ರತಿಷ್ಠಿತಾ ।
ಕಾಮಕ್ರೋಧವ್ಯಪೇತಾ ಯೇ ನಿರ್ಮಮಾ ನಿರಹಂಕೃತಾಃ ।
ಸುವ್ರತಾಃ ಸ್ಥಿರಮರ್ಯಾದಾಸ್ತಾನುಪಾಸ್ಸ್ವ ಚ ಪೃಚ್ಛ ಚ ॥೨೬॥

ಅವರಲ್ಲಿ ಅಹಿಂಸಾಚರಣೆಯು ಅಚಲವಾಗಿದೆ. ಅವರಲ್ಲಿ ಕಾಮ-ಕ್ರೋಧಗಳಿಲ್ಲ. ನಾನು- ನನ್ನದು ಎನ್ನುವ ಹಾನಿಕರ ಭಾವಗಳಿಲ್ಲ. ಒಳ್ಳೆಯ ಆಚರಣೆಗಳಲ್ಲಿ ನಿಷ್ಠೆವುಳ್ಳವರು. ಔಚಿತ್ಯದ ಎಲ್ಲೆಯನ್ನು ಮೀರದವರು. ಸಾಧುಜನಗಳು ಅವರನ್ನು ಅನುಸರಿಸಬೇಕು. ಅವರ ಸಾಮೀಪ್ಯದಲ್ಲಿರಬೇಕು. ಅವರನ್ನು ಕೇಳಿ ತಿಳಿದುಕೊಳ್ಳಬೇಕು.

ನ ವಾಗರ್ಥಂ ಯಶೋರ್ಥಂ ವಾ ಧರ್ಮಸ್ತೇಷಾಂ ಯುಧಿಷ್ಠಿರ ।
ನ ರಕ್ಷ್ಯಂ ಕಾಯಮಿತ್ಯೇವ ಶರೀರಸ್ಯ ಕ್ರಿಯಾ ಯಥಾ ॥೨೭॥

ಯುಧಿಷ್ಠಿರ! ಅವರ ಧರ್ಮಾಚರಣೆಯು ಹೇಳಿಕೊಳ್ಳುವುದಕ್ಕಾಗಿ ಅಲ್ಲ. ಕೀರ್ತಿಗಾಗಿಯೂ ಅಲ್ಲ. ಶರೀರದ ರಕ್ಷಣೆಗಾಗಿ ಅವರು ಆಹಾರವನ್ನು ತೆಗೆದುಕೊಳ್ಳುವುದಿಲ್ಲ. ಶರೀರವು ಕ್ರಿಯಾಶೀಲವಾಗಿರುವುದಕ್ಕಾಗಿ ತೆಗೆದುಕೊಳ್ಳುತ್ತಾರೆ.

ನ ಭಯಂ ಕ್ರೋಧಚಾಪಲ್ಯಂ ನ ಶೋಕಸ್ತೇಷು ವಿದ್ಯತೇ ।
ನ ಧರ್ಮಧ್ವಜಿನಶ್ಚೈವ ನ ಗುಹ್ಯಂ ಕಿಂಚಿದಾಸ್ಥಿತಾಃ ॥೨೮॥

ಅವರಲ್ಲಿ ಭಯವಿಲ್ಲ. ಕ್ರೋಧ-ಚಾಪಲ್ಯಗಳಿಲ್ಲ. ಶೋಕವಿಲ್ಲ. ಧರ್ಮಾಚರಣೆ ಇಲ್ಲದೆ ಧರ್ಮನಿಷ್ಠರೆಂದು ತೋರಿಸಿಕೊಳ್ಳುವುದಕ್ಕಾಗಿ ಲಾಂಛನಧಾರಿಗಳಲ್ಲ. ಅವರಲ್ಲಿ ಮುಚ್ಚಿಡಬೇಕಾದ ಯಾವ ಸಂಗತಿಯೂ ಇಲ್ಲ.

ಯೇಷ್ವಲೋಭಸ್ತಥಾಮೋಹೋ ಯೇ ಚ ಸತ್ಯಾರ್ಜವೇ ರತಾಃ ।
ತೇಷು ಕೌಂತೇಯ ರಜ್ಯೇಥಾ ಯೇಷ್ವತಂದ್ರೀಕೃತಂ ಮನಃ ॥೨೯॥

ಕುಂತೀಸುತ! ಅವರಲ್ಲಿ ಲೋಭವಿಲ್ಲ. ಮೋಹವಿಲ್ಲ. ಸತ್ಯ ಮತ್ತು ಆರ್ಜವದಲ್ಲಿ ರತರು. ಅವರ ಮನಸ್ಸಿನಲ್ಲಿ ಬಳಲಿಕೆ ಇಲ್ಲ, ಆಲಸ್ಯವಿಲ್ಲ. ಈ ಜನಗಳಲ್ಲಿ ಅನುರಕ್ತನಾಗು.

ಯೇ ನ ಹೃಷ್ಯಂತಿ ಲಾಭೇಷು ನಾಲಾಭೇಷು ವ್ಯಥಂತಿ ಚ ।
ನಿರ್ಮಮಾ ನಿರಹಂಕಾರಾಃ ಸತ್ತ್ವಸ್ಥಾಃ ಸಮದರ್ಶಿನಃ ॥೩೦॥

ಅವರು ಲಾಭವಾದಾಗ ಹರ್ಷಿಸುವುದಿಲ್ಲ. ಲಾಭವಾಗದಿದ್ದಾಗ ವ್ಯಥಿಸುವುದಿಲ್ಲ. ಅವರಿಗೆ ಮಮಕಾರವಿಲ್ಲ, ಅಹಂಕಾರವಿಲ್ಲ. ಸತ್ವಗುಣನಿಷ್ಠರು, ಸಮದರ್ಶಿಗಳು.

ಲಾಭಾಲಾಭೌ ಸುಖದುಃಖೇ ಚ ತಾತ
ಪ್ರಿಯಾಪ್ರಿಯೇ ಮರಣಂ ಜೀವಿತಂ ಚ ।
ಸಮಾನಿ ಯೇಷಾಂ ಸ್ಥಿರವಿಕ್ರಮಾಣಾಂ
ಬುದ್ಧಾತ್ಮನಾಂ ಸತ್ತ್ವಮವಸ್ಥಿತಾನಾಮ್ ॥೩೧॥

ಸ್ಥಿರವಾದ ವಿಶಿಷ್ಟ ಹೆಜ್ಜೆಗಳನ್ನು ಇಟ್ಟಿರುವ, ಪ್ರಬುದ್ಧ ಮನಸ್ಸಿನವರಾದ, ಸತ್ವಗುಣವನ್ನು ವಿಪುಲವಾಗಿ ಹೊಂದಿರುವ ಈ ಸಾಧಕರಿಗೆ ಲಾಭ-ಅಲಾಭ, ಸುಖ-ದುಃಖ, ಪ್ರಿಯ-ಅಪ್ರಿಯ, ಹುಟ್ಟು-ಸಾವು - ಇವುಗಳು ಸಮ. ಒಂದು ಹೆಚ್ಚಲ್ಲ. ಒಂದು ಕಡಿಮೆ ಅಲ್ಲ.

ಧರ್ಮಪ್ರಿಯಾಂಸ್ತಾನ್ ಸುಮಹಾನುಭಾವಾನ್
ದಾಂತೋಽಪ್ರಮತ್ತಶ್ಚ ಸಮರ್ಚಯೇಥಾಃ ।
ದೈವಾತ್ ಸರ್ವೇ ಗುಣವಂತೋ ಭವಂತಿ
ಶುಭಾಶುಭಾ ವಾಕ್ಪ್ರಲಾಪಾ ಯಥೈವ ॥೩೨॥

ಧರ್ಮಪ್ರಿಯರಾದ, ಶ್ರೇಷ್ಠ ಮಹಾನುಭಾವರಾದ ಅವರನ್ನು ಸಂಯಮ ಮತ್ತು ಜಾಗರೂಕತೆಗಳಿಂದ ಪೂಜಿಸು. ಗುಣಸಂಪನ್ನರೆಲ್ಲರೂ ದೈವಬಲದಿಂದ ಗುಣಸಂಪನ್ನರಾಗಿರುತ್ತಾರೆ. ದೈವಬಲವಿಲ್ಲದವರು ಶುಭ-ಅಶುಭ ಫಲಗಳ ಬಗ್ಗೆ ಆಡುವ ಮಾತುಗಳು ಅಸಂಬದ್ಧ ಪ್ರಲಾಪ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಇಪ್ಪತ್ನಾಲ್ಕನೆಯ
ಅಧ್ಯಾಯವು ಮುಗಿಯಿತು.

★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ಲೋಭದಿಂದ ಅಜ್ಞಾನವು ಮತ್ತು ಅಜ್ಞಾನದಿಂದ ಲೋಭವು ಹೆಚ್ಚುತ್ತದೆ. ಇವೆರಡರಿಂದ ರಾಗ, ದ್ವೇಷ, ಕ್ರೋಧ ಮೊದಲಾದ ಹಾನಿಕರ ಸ್ಥಿತಿಗಳು ಏರ್ಪಡುತ್ತವೆ. ಲೋಭವನ್ನು ತ್ಯಜಿಸಿದವರಿಗೆ ಸದ್ಗತಿಯಾಗುತ್ತದೆ.

ಯುಧಿಷ್ಠಿರಃ

ಅಮನ್ವತಾಮಧಿಷ್ಠಾನಮುಕ್ತೋ ಲೋಭಃ ಪಿತಾಮಹ ।
ಅಜ್ಞಾನಮಪಿ ವೈ ತಾತ ಶ್ರೋತುಮಿಚ್ಛಾಮಿ ತತ್ತ್ವತಃ ॥೧॥

ಪಿತಾಮಹ! ಪಾಪದ ಮೂಲವನ್ನು ತಿಳಿಯದವರಿಗೆ ಲೋಭವು ಪಾಪದ ಮೂಲ ಎಂದು ಹೇಳಿದಿರಿ. ಪ್ರಿಯ ಪಿತಾಮಹ! ಅಜ್ಞಾನವನ್ನು ಕುರಿತು ಯಥಾರ್ಥ ವಿಷಯಗಳನ್ನು ಕೇಳಲು ಬಯಸುತ್ತಿದ್ದೇನೆ.

ಭೀಷ್ಮಃ

ಕರೋತಿ ಪಾಪಂ ಯೋऽಜ್ಞಾನಾನ್ನಾತ್ಮನೋ ವೇತ್ತಿ ಚ ಕ್ಷಯಮ್ ।
ಪ್ರದ್ವೇಷ್ಟಿ ಸಾಧುವೃತ್ತಾಂಶ್ಚ ಸ ಲೋಕಸ್ಯೈತಿ ವಾಚ್ಯತಾಮ್ ॥೨॥

ಯಾರು ಅಜ್ಞಾನದಿಂದ ಪಾಪವನ್ನು ಮಾಡುತ್ತಾನೋ, ಅದರಿಂದ ತನಗೆ ಆಗುವ ಹಾನಿಯನ್ನು ತಿಳಿಯುವುದಿಲ್ಲವೋ, ಸದ್ವರ್ತನೆಗಳನ್ನು ದ್ವೇಷಿಸುತ್ತಾನೋ ಅವನು ಲೋಕದ ನಿಂದೆಗೆ ಗುರಿಯಾಗುತ್ತಾನೆ.

ಅಜ್ಞಾನಾನ್ನಿರಯಂ ಯಾತಿ ತಥಾಜ್ಞಾನೇನ ದುರ್ಗತಿಮ್ ।
ಅಜ್ಞಾನಾತ್ ಕ್ಲೇಶಮಾಪ್ನೋತಿ ತಥಾಪತ್ಸು ನಿಮಜ್ಜತಿ ॥೩॥

ಅಜ್ಞಾನದಿಂದ ನರಕಕ್ಕೆ ಹೋಗುತ್ತಾನೆ. ಅಜ್ಞಾನದಿಂದ ದುರ್ಗತಿಯನ್ನು ಹೊಂದುತ್ತಾನೆ. ಅಜ್ಞಾನದಿಂದ ಕ್ಲೇಶವನ್ನು ಹೊಂದುತ್ತಾನೆ. ಮತ್ತು ಆಪತ್ತಿನಲ್ಲಿ ಮುಳುಗುತ್ತಾನೆ.

ಯುಧಿಷ್ಠಿರಃ

ಅಜ್ಞಾನಸ್ಯ ಪ್ರವೃತ್ತಿಂ ಚ ಸ್ಥಾನಂ ವೃದ್ಧಿಂ ಕ್ಷಯೋದಯೌ ।
ಮೂಲಂ ಯೋಗಂ ಗತಿಂ ಕಾಲಂ ಕಾರಣಂ ಹೇತುಮೇವ ಚ ॥೪॥

ಶ್ರೋತುಮಿಚ್ಛಾಮಿ ತತ್ತ್ವೇನ ಯಥಾವದಿಹ ಪಾರ್ಥಿವ ।
ಅಜ್ಞಾನಪ್ರಭವಂ ಹೀದಂ ಯದ್ ದುಃಖಮುಪಲಭ್ಯತೇ ॥೫॥

ಪಿತಾಮಹ! ಅಜ್ಞಾನದ (ಅಜ್ಞಾನದಿಂದ ಉಂಟಾಗುವ) ಪ್ರವೃತ್ತಿ, ಸ್ಥಿತಿ, ವೃದ್ಧಿ, ಕ್ಷಯ, ಉದಯ, ಮೂಲ, ಯೋಗ, ಕಾಲ, ಕಾರಣ, ಯುಕ್ತಿ - ಇವುಗಳನ್ನು ಯಥಾರ್ಥವಾಗಿ ತಿಳಿಯಲು ಬಯಸುತ್ತೇನೆ. ಲೋಕದಲ್ಲಿ ಗಮನಕ್ಕೆ ಬರುತ್ತಿರುವ ಎಲ್ಲ ದುಃಖಗಳಿಗೂ ಅಜ್ಞಾನವೇ ಮೂಲಕಾರಣ.

ಭೀಷ್ಮಃ

ರಾಗೋ ದ್ವೇಷಸ್ತಥಾ ಮೋಹೋ ಹರ್ಷಃ ಶೋಕೋऽಭಿಮಾನಿತಾ ।
ಕಾಮಃ ಕ್ರೋಧಶ್ಚ ದರ್ಪಶ್ಚ ತಂದ್ರೀರಾಲಸ್ಯಮೇವ ಚ ॥೬॥

ಇಚ್ಛಾ ದ್ವೇಷಸ್ತಥಾ ತಾಪಃ ಪರವೃದ್ಧ್ಯುಪತಾಪಿತಾ ।
ಅಜ್ಞಾನಮೇತನ್ನಿರ್ದಿಷ್ಟಂ ಪಾಪಾನಾಂ ಚೈವ ಯಾಃ ಕ್ರಿಯಾಃ ॥೭॥

ರಾಜನೆ! ರಾಗ, ದ್ವೇಷ, ಮೋಹ, ಹರ್ಷ, ಶೋಕ, ಅಭಿಮಾನ, ಕಾಮ, ಕ್ರೋಧ, ದರ್ಪ, ಶ್ರಮ, ಆಲಸ್ಯ, ಇಚ್ಛೆ, ವೈರ, ತಾಪ, ಪರರ ಉನ್ನತಿಯನ್ನು ನೋಡಿ ಪರಿತಾಪ, ಪಾಪಜನಕವಾದ ಎಲ್ಲ ಕ್ರಿಯೆಗಳು - ಇವುಗಳು ಅಜ್ಞಾನದ ಪರಿಣಾಮ ಎಂದು ಹೇಳಲ್ಪಟ್ಟಿದೆ.

ಏತಸ್ಯ ಯಾ ಪ್ರವೃತ್ತಿಶ್ಚ ವೃದ್ಧ್ಯಾದೀನ್ ಯಾಂಶ್ಚ ಪೃಚ್ಛಸಿ ।
ವಿಸ್ತರೇಣ ಮಹಾಬಾಹೋ ಶೃಣು ತಚ್ಚ ವಿಶಾಂ ಪತೇ ॥೮॥

ಈ ಅಜ್ಞಾನದ ಪ್ರವೃತ್ತಿ, ಅದರ ವೃದ್ಧಿ ಮೊದಲಾದವುಗಳನು ತಿಳಿಸಲು ಕೇಳಿರುವಿ. ಮಹಾಬಾಹುವೇ! ಇವುಗಳ ಬಗ್ಗೆ ವಿಸ್ತಾರವಾಗಿ ಹೇಳುವೆ. ಕೇಳು.

ಉಭಾವೇತೌ ಸಮಫಲೌ ಸಮದೋಷೌ ಚ ಭಾರತ ।
ಅಜ್ಞಾನಂ ಚಾತಿಲೋಭಶ್ಚಾಪ್ಯೇಕಂ ಜಾನೀಹಿ ಪಾರ್ಥಿವ ॥೯॥

ಭರತಕುಲಸಂಜಾತ! ರಾಜನೆ! ಅಜ್ಞಾನ ಮತ್ತು ಅತಿಲೋಭ ಇವೆರಡರಿಂದ ಆಗುವ ಫಲ ಒಂದೇ ವಿಧವಾದುದು. ಅವುಗಳ ದೋಷವೂ ಸಮಾನವೇ. ಅಜ್ಞಾನ ಮತ್ತು ಅತಿಲೋಭ - ಇವೆರಡನ್ನು ಒಂದೇ ಎಂದು ತಿಳಿ.

ಲೋಭಪ್ರಭವಮಜ್ಞಾನಂ ವೃದ್ಧಂ ಭೂಯಃ ಪ್ರವರ್ಧತೇ ।
ಸ್ಥಾನೇ ಸ್ಥಾನಂ ಕ್ಷಯೇ ಕ್ಷೀಣ್ಯಮುಪೈತಿ ವಿವಿಧಾಂ ಗತಿಮ್ ॥೧೦॥

ಅಜ್ಞಾನವು ಲೋಭದಿಂದ ಹುಟ್ಟುತ್ತದೆ. ಲೋಭದಿಂದ ಅಜ್ಞಾನವು ಹುಟ್ಟುತ್ತದೆ. ಬೆಳೆಯುತ್ತದೆ. ಮತ್ತೆ ಬೆಳೆಯುತ್ತದೆ. ಲೋಭವಿರುವವರೆಗೂ ಅಜ್ಞಾನವಿರುತ್ತದೆ. ಅದು ಕ್ಷೀಣಿಸಿದರೆ ಅಜ್ಞಾನವು ಕ್ಷಯಿಸುತ್ತದೆ. ಇವೆರಡು ಜೀವಾತ್ಮನ ನಾನಾ ಗತಿಗಳಿಗೆ ಕಾರಣ.

ಮೂಲಂ ಲೋಭಸ್ಯ ಮಹತಃ ಕಾಲಾತ್ಮಗತಿರೇವ ಚ ।
ಛಿನ್ನೇಽಚ್ಛಿನ್ನೇ ತಥಾ ಲೋಭೇ ಕಾರಣಂ ಕಾಲ ಏವ ಹಿ ॥೧೧॥

ಕಾಲ ಪುರುಷನ ಗತಿಯೇ ಮಹಾಲೋಭದ ಮೂಲಕಾರಣ. ಲೊಭವು ಛಿನ್ನವಾದರೆ ಇದಕ್ಕೆ ಕಾಲವೇ ಕಾರಣ. ಛಿನ್ನವಾಗದಿದ್ದರೆ, ಇದಕ್ಕೂ ಕಾಲವೇ ಕಾರಣ.

ತಸ್ಯಾಜ್ಞಾನಾತ್ತು ಲೋಭೋ ಹಿ ಲೋಭಾದಜ್ಞಾನಮೇವ ಚ ।
ಸರ್ವೇ ದೋಷಾಸ್ತಥಾ ಲೋಭಾತ್ತಸ್ಮಾಲ್ಲೋಭಂ ವಿವರ್ಜಯೇತ್ ॥೧೨॥

ಅಜ್ಞಾನದಿಂದ ಲೋಭ ಮತ್ತು ಲೋಭದಿಂದ ಅಜ್ಞಾನವು ಉಂಟಾಗುತ್ತದೆ. ಎಲ್ಲ ದೋಷಗಳಿಗೂ ಲೋಭವೇ ಕಾರಣ. ಆದ್ದರಿಂದ ಲೋಭವನ್ನು ತ್ಯಜಿಸಬೇಕು.

ಜನಕೋ ಯುವನಾಶ್ವಶ್ಚ ವೃಷಾದರ್ಭಿಃ ಪ್ರಸೇನಜಿತ್ ।
ಲೋಭಕ್ಷಯಾದ್ ದಿವಂ ಪ್ರಾಪ್ತಾಸ್ತಥೈವಾನ್ಯೇ ಜನಾಧಿಪಾಃ ॥೧೩॥

ಜನಕ, ಯುವನಾಶ್ವ, ವೃಷಾದರ್ಭಿ, ಪ್ರಸೇನಜಿತ್ ಮತ್ತು ಇತರ ರಾಜರುಗಳು ಲೋಭವನ್ನು ನಾಶಮಾಡಿ (ಬಿಟ್ಟು) ಸ್ವರ್ಗವನ್ನು ಹೊಂದಿದರು.

ಪ್ರತ್ಯಕ್ಷಂ ತು ಕುರುಶ್ರೇಷ್ಠ ತ್ಯಜ ಲೋಭಮಿಹಾತ್ಮನಾ ।
ತ್ಯಕ್ತ್ವಾ ಲೋಭಂ ಸುಖಂ ಲೋಕೇ ಪ್ರೇತ್ಯ ಚಾನುಚರಿಷ್ಯಸಿ ॥೧೪॥

ಕುರುಶ್ರೇಷ್ಠ! ಎಲ್ಲ ಕಡೆ ಕಾಣುತ್ತಿರುವ ಈ ಲೋಭವನ್ನು ಮನೋಬಲದಿಂದ ಬಿಡು. ಲೋಭವನ್ನು ತ್ಯಜಿಸಿ ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಸುಖವಾಗಿರುವಿ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯವು ಮುಗಿಯಿತು.

ಇಪ್ಪತ್ತಾರನೆಯ ಅಧ್ಯಾಯ

ದಮದ ಮಹತ್ವ.

ಯುಧಿಷ್ಠಿರಃ

ಸ್ವಾಧ್ಯಾಯಕೃತಯತ್ನಸ್ಯ ಬ್ರಾಹ್ಮಣಸ್ಯ ಪಿತಾಮಹ ।
ಧರ್ಮಕಾಮಸ್ಯ ಧರ್ಮಾತ್ಮನ್ ಕಿಂ ನು ಶ್ರೇಯ ಇಹೋಚ್ಯತೇ ॥೧॥

ಧರ್ಮಾತ್ಮ! ಪಿತಾಮಹ! ವೇದಾಧ್ಯಯನದಲ್ಲೇ ನಿರತನಾದ, ಬ್ರಹ್ಮಾನ್ವೇಷಣೆಯಲ್ಲಿ ಆಸಕ್ತನಾದ, ಧರ್ಮದಲ್ಲಿ ಅಭಿರುಚಿಯುಳ್ಳ ಸಾಧಕನಿಗೆ ಈ ಜಗತ್ತಿನಲ್ಲಿ ಏನು ಶ್ರೇಯಸ್ಸನ್ನು ಪ್ರಾಜ್ಞರು ಹೇಳುತ್ತಾರೆ? ಶಾಸ್ತ್ರಗಳು ಹೇಳುತ್ತವೆ?

ಬಹುಧಾದರ್ಶನೇ ಲೋಕೇ ಶ್ರೇಯೋ ಯದಿಹ ಮನ್ಯಸೇ ।
ಅಸ್ಮಿನ್‌ಲೋಕೇ ಪರೇ ಚೈವ ತನ್ಮೇ ಬ್ರೂಹಿ ಪಿತಾಮಹ ॥೨॥

ಜಗತ್ತಿನ ಬಗ್ಗೆ ಬಹುವಿಧ ದೃಷ್ಟಿಗಳುಳ್ಳ ಈ ಲೋಕದಲ್ಲಿ, ಯಾವ ದೃಷ್ಟಿಯು ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಶ್ರೇಯಸ್ಕರ? ಪಿತಾಮಹ! ಅದನ್ನು ದಯವಿಟ್ಟು ನನಗೆ ಹೇಳಿ.

ಮಹಾನಯಂ ಧರ್ಮಪಥೋ ಬಹುಶಾಖಶ್ಚ ಭಾರತ ।
ಕಿಂ ಸ್ವಿದೇವೇಹ ಧರ್ಮಾಣಾಮನುಷ್ಠೇಯತಮಂ ಮತಮ್ ॥೩॥

ಭರತಕುಲಸಂಜಾತ! ಈ ಧರ್ಮಮಾರ್ಗ ಬಹಳ ದೊಡ್ಡದು. ಇದಕ್ಕೆ ನಾನಾ ಕವಲುಗಳಿವೆ. ಈ ಧರ್ಮಗಳ ಮಧ್ಯೆ ಯಾವುದನ್ನು ತಪ್ಪದೆ ಅನುಷ್ಠಾನ ಮಾಡಬೇಕು? ಅನುಷ್ಠಾನಕ್ಕೆ ಅರ್ಹತಮ ಯಾವುದು? ನಿಮ್ಮ ಅಭಿಪ್ರಾಯವೇನು?

ಧರ್ಮಸ್ಯ ಮಹತೋ ರಾಜನ್ ಬಹುಶಾಖಸ್ಯ ತತ್ತ್ವತಃ ।
ಯನ್ಮೂಲಂ ಪರಮಂ ತಾತ ತತ್ ಸರ್ವಂ ಬ್ರೂಹ್ಯತಂದ್ರಿತಃ ॥೪॥

ಪ್ರಿಯ ಮಹಾರಾಜ! ಬಹು ಕವಲುಗಳಿರುವ ವಿಶಾಲವಾದ ಧರ್ಮದ ಪರಮ ಮೂಲ ಯಾವುದು? ಅದೆಲ್ಲವನ್ನೂ, ಆಯಾಸ ಮಾಡಿಕೊಳ್ಳದೆ ಹೇಳಿ.

ಭೀಷ್ಮಃ

ಹಂತ ತೇ ಕಥಯಿಷ್ಯಾಮಿ ಯೇನ ಶ್ರೇಯಃ ಪ್ರಪತ್ಸ್ಯಸೇ ।
ಪೀತ್ವಾಮೃತಮಿವ ಪ್ರಾಜ್ಞೋ ಜ್ಞಾನತೃಪ್ತೋ ಭವಿಷ್ಯಸಿ ॥೫॥

ಸಂತೋಷ! ನಿನಗೆ ಹೇಳುತ್ತೇನೆ. ಆ ಧರ್ಮದಿಂದ ನೀನು ಶ್ರೇಯಸ್ಸನ್ನು ಹೊಂದುವಿ. ಪ್ರಾಜ್ಞನೂ, ಜ್ಞಾನತೃಪ್ತನೂ ಆಗುವಿ. ಅಮೃತವನ್ನು ಕುಡಿದವನಂತೆ.

ಧರ್ಮಸ್ಯ ವಿಧಯೋ ನೈಕೇ ತೇ ತೇ ಪ್ರೋಕ್ತಾ ಮಹರ್ಷಿಭಿಃ ।
ಸ್ವಂ ಸ್ವಂ ವಿಜ್ಞಾನಮಾಶ್ರಿತ್ಯ ದಮಸ್ತೇಷಾಂ ಪರಾಯಣಮ್ ॥೬॥

ಧರ್ಮದ ವಿಧಿಗಳು ಬಹಳ ಇವೆ. ಅವೆಲ್ಲವೂ ಮಹರ್ಷಿಗಳಿಂದ ತಮ್ಮ ತಮ್ಮ ವಿಜ್ಞಾನಕ್ಕೆ ಅನುಗುಣವಾಗಿ ಹೇಳಲ್ಪಟ್ಟಿವೆ. ಅವುಗಳಲ್ಲಿ ದಮವು ಬಹಳ ಶ್ರೇಷ್ಠ.

ದಮಂ ನಿಃಶ್ರೇಯಸಂ ಪ್ರಾಹುರ್ವೃದ್ಧಾ ನಿಶ್ಚಯದರ್ಶಿನಃ ।
ಬ್ರಾಹ್ಮಣಸ್ಯ ವಿಶೇಷೇಣ ದಮೋ ಧರ್ಮಃ ಸನಾತನಃ ॥೭॥

ತತ್ವನಿಶ್ಚಯವನ್ನು ಕಂಡುಕೊಂಡಿರುವ ಜ್ಞಾನವೃದ್ಧರು ದಮವನ್ನು ಮುಕ್ತಿಸಾಧನ ಎಂದು ಹೇಳುತ್ತಾರೆ. ವಿಶೇಷವಾಗಿ ಬ್ರಾಹ್ಮಣನಿಗೆ. ದಮವು ಸನಾತನ (ವೇದದಲ್ಲಿ ಹೇಳಲ್ಪಟ್ಟ) ಧರ್ಮ.

ನಾದಾಂತಸ್ಯ ಕ್ರಿಯಾಸಿದ್ಧಿರ್ಯಥಾವದುಪಲಭ್ಯತೇ ।
ದಮೋ ದಾನಂ ತಥಾ ಯಜ್ಞಾನಧೀತಂ ಚಾತಿವರ್ತತೇ ॥೮॥

ದಮವಿಲ್ಲದವನಿಗೆ ಅನುಷ್ಠಾನಗಳ ಸಿದ್ಧಿಯು ಚೆನ್ನಾಗಿ ಆಗುವುದಿಲ್ಲ. ದಮವು ದಾನವನ್ನು, ಯಜ್ಞಗಳನ್ನು ಮತ್ತು ಅಧ್ಯಯನವನ್ನು ಮೀರಿಸುತ್ತದೆ.

ದಮಸ್ತೇಜೋ ವರ್ಧಯತಿ ಪವಿತ್ರಂ ಚ ದಮಃ ಪರಮ್ ।
ವಿಪಾಪ್ಮಾ ತೇಜಸಾ ಯುಕ್ತಃ ಪುರುಷೋ ವಿಂದತೇ ಮಹತ್ ॥೯॥

ದಮವು ತೇಜಸ್ಸನ್ನು ಹೆಚ್ಚಿಸುತ್ತದೆ. ದಮವು ಪರಮ ಪಾವಿತ್ರ್ಯವನ್ನು ಉಂಟು ಮಾಡುತ್ತದೆ. ಪುರುಷನು ದಮದಿಂದ ಪಾಪರಹಿತನಾಗುತ್ತಾನೆ. ತೇಜಃಸಂಪನ್ನನಾಗುತ್ತಾನೆ. ಇದರಿಂದ ಮಹಾಫಲವನ್ನು ಹೊಂದುತ್ತಾನೆ.

ದಮೇನ ಸದೃಶಂ ಧರ್ಮಂ ನಾನ್ಯಂ ಲೋಕೇಷು ಶುಶ್ರುಮ ।
ದಮೋ ಹಿ ಪರಮೋ ಲೋಕೇ ಪ್ರಶಸ್ತಃ ಸರ್ವಧರ್ಮಿಣಾಮ್ ॥೧೦॥

ದಮಸದೃಶವಾದ ಬೇರೆ ಧರ್ಮದ ಬಗ್ಗೆ ನಾವು ಎಲ್ಲಿಯೂ ಕೇಳಿಲ್ಲ. ಲೋಕದಲ್ಲಿ ಸಕಲ ಧರ್ಮನಿಷ್ಠರಿಗೂ ದಮವು ಬಹಳ ಪ್ರಶಸ್ತ.

ಪ್ರೇತ್ಯ ಚಾಪಿ ಮನುಷ್ಯೇಂದ್ರ ಪರಮಂ ವಿಂದತೇ ಸುಖಮ್ ।
ದಮೇನ ಹಿ ಸಮಾಯುಕ್ತೋ ಮಹಾಂತಂ ಧರ್ಮಮಶ್ನುತೇ ॥೧೧॥

ಮನುಷ್ಯೇಂದ್ರ! (ರಾಜನೆ!) ದಮವನ್ನು ಸಾಧಿಸಿದವನು ದೊಡ್ಡ ಪ್ರಮಾಣದಲ್ಲಿ ಧರ್ಮಫಲವನ್ನು ಪಡೆಯುತ್ತಾನೆ. ಮರಣಾನಂತರವೂ ಪರಮ ಸುಖವನ್ನು ಹೊಂದುತ್ತಾನೆ.

ಸುಖಂ ದಾಂತಃ ಪ್ರಸ್ವಪಿತಿ ಸುಖಂ ಚ ಪ್ರತಿಬುಧ್ಯತೇ ।
ಸುಖಂ ಪರ್ಯೇತಿ ಲೋಕಾಂಶ್ಚ ಮನಶ್ಚಾಸ್ಯ ಪ್ರಸೀದತಿ ॥೧೨॥

ದಮವುಳ್ಳವನು ಸುಖವಾಗಿ ನಿದ್ರಿಸುತ್ತಾನೆ. ಸುಖವಾಗಿ ಏಳುತ್ತಾನೆ. ಸುಖವಾಗಿ ಲೋಕಪರ್ಯಟನವನ್ನು ಮಾಡುತ್ತಾನೆ. ಇವನ ಮನಸ್ಸು ಪ್ರಸನ್ನವಾಗಿರುತ್ತದೆ.

ಅದಾಂತಃ ಪುರುಷಃ ಕ್ಲೇಶಮಭೀಕ್ಷ್ಣಂ ಪ್ರತಿಪದ್ಯತೇ ।
ಅನರ್ಥಾಂಶ್ಚ ಬಹೂನನ್ಯಾನ್ ಪ್ರಸೃಜತ್ಯಾತ್ಮದೋಷಜಾನ್ ॥೧೩॥

ದಮವಿಲ್ಲದ ಪುರುಷನು ಪದೇ ಪದೇ ಕ್ಲೇಶವನ್ನು ಹೊಂದುತ್ತಾನೆ. ದಮವಿಲ್ಲದವನ ಮನೋದೋಷದಿಂದ ಬೇರೆ ನಾನಾ ಅನರ್ಥಗಳು ಹುಟ್ಟುತ್ತವೆ.

ಆಶ್ರಮೇಷು ಚತುರ್ಥ್ವಾಹುರ್ದಮಮೇವೋತ್ತಮಂ ವ್ರತಮ್ ।
ತಸ್ಯ ಲಿಂಗಾನಿ ವಕ್ಷ್ಯಾಮಿ ಯೇಷಾಂ ಸಮುದಯೋ ದಮಃ ॥೧೪॥

ನಾಲ್ಕು ಆಶ್ರಮಗಳಲ್ಲೂ ದಮವೇ ಉತ್ತಮ ವ್ರತ ಎಂದು ಹೇಳುತ್ತಾರೆ. ಅವುಗಳ ಗುರುತುಗಳನ್ನು ಹೇಳುತ್ತೇನೆ. ಆ ಗುರುತುಗಳ ಮೊತ್ತವೇ ದಮ.

ಕ್ಷಮಾ ಧೃತಿರಹಿಂಸಾ ಚ ಸಮತಾ ಸತ್ಯಮಾರ್ಜವಮ್ ।
ಇಂದ್ರಿಯಾವಜಯೋ ದಾಕ್ಷ್ಯಂ ಮಾರ್ದವಂ ಹ್ರೀರಚಾಪಲಮ್ ॥೧೫॥

ಕ್ಷಮೆ, ಧೃತಿ (ಸ್ಥಿರವಾಗಿ ಇರುವ ಗುಣ), ಅಹಿಂಸಾ, ಸಮತಾ, ಸತ್ಯ, ಆರ್ಜವ, ಇಂದ್ರಿಯನಿಗ್ರಹ, ದಕ್ಷತೆ, ಮೃದುನಡವಳಿಕೆ, ನಾಚಿಕೆ, ಚಾಪಲದ ಅಭಾವ,

ಅಕಾರ್ಪಣ್ಯಮಸಂರಂಭಃ ಸಂತೋಷಃ ಪ್ರಿಯವಾದಿತಾ ।
ಅವಿವಿತ್ಸಾನಸೂಯಾ ಚಾಪ್ಯೇಷಾಂ ಸಮುದಯೋ ದಮಃ ॥೧೬॥

ಅದೀನತೆ, ಕೋಪದ ಅಭಾವ, ಸಂತೋಷ, ಪ್ರಿಯವಚನ, ದುರಾಸೆಯ ಅಭಾವ, ಅಸೂಯೆಯ ಅಭಾವ - ಇವುಗಳ ಮೊತ್ತ ದಮ.

ಗುರುಪೂಜಾ ಚ ಕೌರವ್ಯ ದಯಾ ಭೂತೇಷ್ವಪೈಶುನಮ್ ।
ಜನವಾದಮೃಷಾವಾದಸ್ತುತಿನಿಂದಾವಿವರ್ಜನಮ್ ॥೧೭॥

ಕುರುಕುಲಸಂಜಾತ! ಹಿರಿಯರ ಮೇಲೆ ಗೌರವ, ಭೂತದಯೆ, ಚಾಡಿ ಹೇಳದಿರುವಿಕೆ, ಜನನಿಂದೆ, ಸುಳ್ಳು ಮಾತು, ಸ್ತುತಿ, ನಿಂದೆ - ಇವುಗಳ ತ್ಯಾಗ - ಇವು ದಮದಲ್ಲಿ ಸೇರಿರುವ ಗುಣಗಳು.

ಕಾಮಃ ಕ್ರೋಧಶ್ಚ ಲೋಭಶ್ಚ ದರ್ಪಃ ಸ್ತಂಭೋ ವಿಕತ್ಥನಮ್ ।
ಮೋಹ ಈರ್ಷ್ಯಾವಮಾನಶ್ಚೇತ್ಯೇತದ್ದಾಂತೋ ನ ಸೇವತೇ ॥೧೮॥

ಕಾಮ, ಕ್ರೋಧ, ಲೋಭ, ದರ್ಪ, ಬಿಗುಮಾನ, ಆತ್ಮಪ್ರಶಂಸೆ, ಮೋಹ, ಈರ್ಷ್ಯೆ (ಪರರ ಗುಣವನ್ನು ದೋಷ ಎಂದು ಪರಿಗಣನೆ), ಅವಮಾನ - ಇವುಗಳು ತನ್ನಲ್ಲಿ ಇರುವುದಕ್ಕೆ ದಮ ಇರುವ ಪುರುಷನು ಅವಕಾಶ ಕೊಡುವುದಿಲ್ಲ.

ಅನಿಂದಿತೇ ಹ್ಯಕಾಮಾತ್ಮಾऽಥಾಲ್ಪೇಚ್ಛೋऽಥಾನಸೂಯಕಃ ।
ಸಮುದ್ರಕಲ್ಪಃ ಪುರುಷೋ ನ ಕದಾಚಿನ್ನ ಪೂರ್ಯತೇ ॥೧೯॥

ದಮ ಇರುವ ಪುರುಷನಿಗೆ ನಿಷಿದ್ಧವಲ್ಲದ ವಸ್ತುಗಳ ಬಗ್ಗೆಯೂ, ಅವುಗಳ ಪ್ರಾಪ್ತಿಯಾದರೂ, ಆಸೆ ಇರುವುದಿಲ್ಲ. ಅವುಗಳ ಪ್ರಾಪ್ತಿಯಾಗದಿದ್ದಾಗಲೂ ಅವುಗಳ ಪ್ರಾಪ್ತಿಯಾಗಲಿ ಎಂದು ಆಸೆಯು ಇರುವುದಿಲ್ಲ. ಅವನು ಅಲ್ಪತೃಪ್ತ. ಅಸೂಯಾರಹಿತ. ಆ ಪುರುಷ ಸಮುದ್ರದಂತೆ. ಅವನು ಎಂದೂ ಅತೃಪ್ತನಲ್ಲ.

ಅಹಂ ತ್ವಯಿ ಮಮ ತ್ವಂ ಚ ಮಯಿ ತೇ ತೇಷು ಚಾಪ್ಯಹಮ್ ।
ಪೂರ್ವಸಂಬಂಧಿಸಂಯೋಗಾನ್ನೈತದ್ ದಾಂತೋ ನಿಷೇವತೇ ॥೨೦॥

ನಾನು ನಿನ್ನವನು. ನೀನು ನನ್ನವನು. ಅವರಿಗೆ ನನ್ನಲ್ಲಿ ಅನುರಾಗ. ನನಗೆ ಅವರಲ್ಲಿ ಅನುರಾಗ. ಪೂರ್ವಸಂಬಂಧಿಗಳ ಸಮಾಗಮವಾದಾಗ ಈ ಭಾವಗಳು ಜನರಲ್ಲಿ ಉಂಟಾಗುತ್ತವೆ. ದಮ ಇರುವ ಪುರುಷನು ಈ ಭಾವಗಳಿಗೆ ಅವಕಾಶವನ್ನು ಕೊಡುವುದಿಲ್ಲ.

ಸರ್ವಾ ಗ್ರಾಮ್ಯಾಸ್ತಥಾರಣ್ಯಾ ಯಾಶ್ಚ ಲೋಕೇ ಪ್ರವೃತ್ತಯಃ ।
ನಿಂದಾಂ ಚೈವ ಪ್ರಶಂಸಾಂ ಚ ಯೋ ನಾಶ್ರಯತಿ ಮುಚ್ಯತೇ ॥೨೧॥

ಲೋಕದಲ್ಲಿ ಯಾವ ಯಾವ ಗ್ರಾಮ್ಯ ಪ್ರವೃತ್ತಿಗಳೋ, ಯಾವ ಯಾವ ಕಾಡು ಪ್ರವೃತ್ತಿಗಳೋ, ಅವುಗಳಿಗೆ ದಮ ಇರುವ ಪುರುಷನು ಅವಕಾಶ ಕೊಡುವುದಿಲ್ಲ. ಯಾರು (ಸ್ವಾರ್ಥ ಸಾಧನೆಗಾಗಿ) ಪರನಿಂದೆಯನ್ನು, ಪ್ರಶಂಸೆಯನ್ನು ಅವಲಂಬಿಸುವುದಿಲ್ಲವೋ ಅವನು ಪಾಪಗಳಿಂದ ಮುಕ್ತನಾಗುತ್ತಾನೆ.

ಮೈತ್ರೋಽಥ ಶೀಲಸಂಪನ್ನಃ ಸುಸಹಾಯಪರಶ್ಚ ಯಃ ।
ಮುಕ್ತಶ್ಚ ವಿವಿಧೈಃ ಸಂಗೈಸ್ತಸ್ಯ ಪ್ರೇತ್ಯ ಮಹತ್ಫಲಮ್ ॥೨೨॥

ಮಿತ್ರಭಾವವಿರುವ, ಶೀಲಸಂಪನ್ನನಾದ, ಒಳ್ಳೆಯವರ ಸಹವಾಸದಲ್ಲಿ ಆಸಕ್ತನಾದ, ವಿವಿಧ ಪ್ರಾಪಂಚಿಕ ಸಂಗಗಳಿಂದ ದೂರವಿರುವ ದಮಶಾಲಿ ಪುರುಷನಿಗೆ ಮರಣಾನಂತರ ಮಹಾಫಲವು ಲಭಿಸುತ್ತದೆ.

ಸುವೃತ್ತಃ ಶೀಲಸಂಪನ್ನಃ ಪ್ರಸನ್ನಾತ್ಮಾತ್ಮವಿದ್ ಬುಧಃ ।
ಪ್ರಾಪ್ಯೇಹ ಲೋಕೇ ಸತ್ಕಾರಂ ಸುಗತಿಂ ಪ್ರತಿಪದ್ಯತೇ ॥೨೩॥

ಒಳ್ಳೆಯ ನಡತೆಗಳುಳ್ಳ, ಶೀಲಸಂಪನ್ನನಾದ, ಪ್ರಸನ್ನಮನಸ್ಕನಾದ ಆತ್ಮಜ್ಞಾನಿಯಾದ (ಪರಮಾತ್ಮನನ್ನು ಮತ್ತು ಜೀವಾತ್ಮನನ್ನು ಸರಿಯಾಗಿ ತಿಳಿದುಕೊಂಡಿರುವ) ಬುಧನು ಈ ಲೋಕದಲ್ಲಿ ಸತ್ಕಾರವನ್ನು ಪಡೆಯುತ್ತಾ, ಸದ್ಗತಿಯನ್ನೂ ಪಡೆಯುತ್ತಾನೆ.

ಕರ್ಮ ಯಚ್ಚುಭಮೇವೇಹ ಸದ್ಭಿರಾಚರಿತಂ ಚ ಯತ್ ।
ತದೇವ ಜ್ಞಾನಯುಕ್ತಸ್ಯ ಮುನೇರ್ಧರ್ಮೋ ನ ಹೀಯತೇ ॥೨೪॥

ಈ ಲೋಕದಲ್ಲಿ ಯಾವ ಕರ್ಮವು ಶುಭಪ್ರದವೇ ಆಗಿರುವುದೋ, ಯಾವ ಕರ್ಮಗಳನ್ನು ಸಜ್ಜನರು ಆಚರಿಸಿದ್ದಾರೋ, ಆ ಕರ್ಮಗಳೇ ಜ್ಞಾನಸಂಪನ್ನನಾದ ಮುನಿಯ ಧರ್ಮ. ದಮವಿರುವ ಸಾಧಕನು ಅದನ್ನು ಬಿಡುವುದಿಲ್ಲ.

ನಿಷ್ಕ್ರಮ್ಯ ವನಮಾಸ್ಥಾಯ ಜ್ಞಾನಯುಕ್ತೋ ಜಿತೇಂದ್ರಿಯಃ ।
ಕಾಲಾಕಾಂಕ್ಷೀ ಚರನ್ನೇವಂ ಬ್ರಹ್ಮಭೂಯಾಯ ಕಲ್ಪತೇ ॥೨೫॥

(ಜನಸಮೂಹದಿಂದ) ನಿರ್ಗಮಿಸಿ, ಕಾಡಿಗೆ ಹೋಗಿ ಜ್ಞಾನಯುಕ್ತನಾಗಿ, ಜಿತೇಂದ್ರಿಯನಾಗಿ, ದೇಹಾವಸಾನ ಕಾಲವನ್ನು ನಿರೀಕ್ಷಿಸುತ್ತಾ, ಮೇಲೆ ಹೇಳಿದ ಗುಣಸಹಿತನಾಗಿ ಅನುಷ್ಠಾನ ಮಾಡುತ್ತಾ ಇರುವ ಸಾಧಕನು ನಿರಂತರ ಬ್ರಹ್ಮನಿಷ್ಠನಾಗಿರಲು (ಬ್ರಹ್ಮನಲ್ಲೇ ಇರುವ ಎತ್ತರಕ್ಕೆ ಏರಲು) ಸಮರ್ಥನಾಗುತ್ತಾನೆ.

ಅಭಯಂ ಯಸ್ಯ ಭೂತೇಭ್ಯೋ ಭೂತಾನಾಮಭಯಂ ಯತಃ ।
ತಸ್ಯ ದೇಹಾದ್ ವಿಮುಕ್ತಸ್ಯ ಭಯಂ ನಾಸ್ತಿ ಕುತಶ್ಚನ ॥೨೬॥

ಯಾರಿಗೆ ಪಂಚಭೂತಗಳಿಂದ- ಪಾಂಚಭೌತಿಕಗಳಿಂದ ಭಯವಿಲ್ಲವೋ, ಯಾರಿಂದ ಯಾವ ಪ್ರಾಣಿಗೂ ಭಯವಿಲ್ಲವೋ, ದೇಹಾಭಿಮಾನವಿಲ್ಲದ ಅಂತಹ ಸಾಧಕನಿಗೆ ಯಾವ ಕಡೆಯಿಂದಲೂ ಭಯವಾಗುವುದಿಲ್ಲ.

ಅವಾಚಿನೋತಿ ಕರ್ಮಾಣಿ ನ ಚ ಸಂಪ್ರಚಿನೋತಿ ಹ ।
ಸಮಃ ಸರ್ವೇಷು ಭೂತೇಷು ಮೈತ್ರಾಯಣಗತಿಶ್ಚರೇತ್ ॥೨೭॥

ಇಂತಹ ಸಾಧಕನು ತನ್ನ ಸಾಧನೆಗಳಿಂದ ಕರ್ಮಗಳನ್ನು ದೂರ ಮಾಡುತ್ತಾನೆ. ತನಗೆ ಹಾನಿಯಾಗುವಂತೆ ಅವುಗಳನ್ನು ಸಂಗ್ರಹಿಸುವುದಿಲ್ಲ. ಎಲ್ಲ ಪ್ರಾಣಿಗಳ ಬಗ್ಗೆ ಅವನಿಗೆ ಸಮದೃಷ್ಟಿಯು ಇರುತ್ತದೆ. ಸರ್ವರಿಗೂ ಅಭಯದಾನ ಮಾಡುತ್ತಾ ಸಂಚರಿಸುತ್ತಾನೆ.

ಶಕುನೀನಾಮಿವಾಕಾಶೇ ಜಲೇ ವಾರಿಚರಸ್ಯ ವಾ ।
ಯಥಾ ಗತಿರ್ನ ದೃಶ್ಯೇತ ತಥಾ ತಸ್ಯ ನ ಸಂಶಯಃ ॥೨೮॥

ಹಕ್ಕಿಗಳು ಆಕಾಶಸಂಚಾರಿಗಳು, ಅವುಗಳ ಸಂಚಾರದ ಗುರುತು ಆಕಾಶದಲ್ಲಿ ಕಾಣುವುದಿಲ್ಲ. ಚಲಚರ ಪ್ರಾಣಿಗಳ ಸಂಚಾರದ ಗುರುತು ಜಲದಲ್ಲಿ ಕಾಣುವುದಿಲ್ಲ.

ಅಂತೆಯೇ ದಮಶೀಲನಾದ, ಮೇಲೆ ಹೇಳಿದಂತೆ ಸಾಧಕನಾದ ಪುರುಷನ ಗುರುತುಗಳು ಕಾಣುವುದಿಲ್ಲ.

ಗೃಹಾನುತ್ಸೃಜ್ಯ ಯೋ ರಾಜನ್ ಮೋಕ್ಷಮೇವಾಭಿಪದ್ಯತೇ ।
ಲೋಕಾಸ್ತೇಜೋಮಯಾಸ್ತಸ್ಯ ಕಲ್ಪಂತೇ ಶಾಶ್ವತೀಃ ಸಮಾಃ ॥೨೯॥

ರಾಜನೆ! ಯಾರು ಭೋಗಗಳನ್ನು ತ್ಯಜಿಸಿ ಮುಕ್ತಿಯ ಕಡೆ ನಡೆಯುತ್ತಾನೋ ಅವನಿಗೆ ಬಹುದೀರ್ಘಕಾಲ ತೇಜೋಮಯವಾದ ಲೋಕಗಳಲ್ಲಿ ಸಾಧನೆಗೈಯ್ಯುವ ಅವಕಾಶವು ಲಭಿಸುತ್ತದೆ.

ಸನ್ನ್ಯಸ್ಯ ಸರ್ವಕರ್ಮಾಣಿ ಸನ್ನ್ಯಸ್ಯ ವಿಧಿವತ್ತಪಃ ।
ಸಂನ್ಯಸ್ಯ ವಿವಿಧಾ ವಿದ್ಯಾಃ ಸರ್ವಂ ಸಂನ್ಯಸ್ಯ ಚೈವ ಹ ॥೩೦॥

ಫಲಕಾಮನೆಯನ್ನು ತ್ಯಜಿಸಿ ವಿಹಿತವಾದ ಸಕಲ ಕರ್ಮಗಳನ್ನು ಮಾಡುವ, ಫಲಕಾಮನೆಗಳನ್ನು ತ್ಯಜಿಸಿ ವಿಧಿಗೆ ಅನುಗುಣವಾಗಿ ತಪಸ್ಸನ್ನು ಮಾಡುವ ಫಲಕಾಮನೆಗಳನ್ನು ತ್ಯಜಿಸಿ ವಿವಿಧ ವಿದ್ಯೆಗಳನ್ನು ಸಾಧಿಸುವ, ಫಲಕಾಮನೆಗಳನ್ನು ತ್ಯಜಿಸಿಯೇ ಎಲ್ಲವನ್ನು ಮಾಡುವ ಸಾಧಕನು,

ಕಾಮೇ ಶುಚಿರನಾವೃತ್ತಃ ಪ್ರಸನ್ನಾತ್ಮಾತ್ಮವಿಚ್ಛುಚಿಃ ।
ಪ್ರಾಪ್ಯೇಹ ಲೋಕೇ ಸತ್ಕಾರಂ ಸ್ವರ್ಗಂ ಸಮಭಿಪದ್ಯತೇ ॥೩೧॥

ಯಾರ ಅಪೇಕ್ಷೆಗಳು ಶುಚಿಯಾಗಿರುತ್ತವೋ, ಯಾರು ತನ್ನ ವರ್ತನೆಗಳನ್ನು ರಹಸ್ಯವಾಗಿಡಬೇಕಿಲ್ಲವೋ, ಪ್ರಸನ್ನ ಮನಸ್ಸನ್ನು ಹೊಂದಿರುವನೋ, ಆತ್ಮಜ್ಞಾನಿಯೂ, ಶುಚಿಯೂ ಆಗಿರುವನೋ, ಆ ಸಾಧಕನು ಈ ಲೋಕದಲ್ಲಿ ಸತ್ಕಾರವನ್ನು ಪಡೆಯುತ್ತಾನೆ ಸ್ವರ್ಗಕ್ಕೆ ಹೋಗುತ್ತಾನೆ.

ಯಚ್ಚ ಪೈತಾಮಹಂ ಸ್ಥಾನಂ ಬ್ರಹ್ಮರಾಶಿಸಮುದ್ಭವಮ್ ।
ಗುಹಾಯಾಂ ಪಿಹಿತಂ ನಿತ್ಯಂ ತದ್ದಮೇನಾಭಿಪದ್ಯತೇ ॥೩೨॥

ದಮದಿಂದ ಚತುರ್ಮುಖ ಬ್ರಹ್ಮದೇವನ ಸ್ಥಾನವನ್ನು ಹೊಂದುತ್ತಾನೆ. ವೇದ ರಾಶಿಗಳ ಅಧ್ಯಯನದಿಂದ ಅಭಿವ್ಯಕ್ತನಾಗುವ ಹೃದಯಗುಹೆಯಲ್ಲಿರುವ ಪರಬ್ರಹ್ಮನ ಪ್ರಾಪ್ತಿಯೂ ದಮದಿಂದ ಆಗುತ್ತದೆ.

ಜ್ಞಾನಾರಾಮಸ್ಯ ಬುದ್ಧಸ್ಯ ಸರ್ವಭೂತಾವಿರೋಧಿನಃ ।
ನಾವೃತ್ತಿಭಯಮಸ್ತೀಹ ಪರಲೋಕೇ ಭಯಂ ಕುತಃ ॥೩೩॥

ತತ್ವಜ್ಞಾನದಲ್ಲಿ ವಿಹರಿಸುವ, ಪ್ರಬುದ್ಧನಾದ, ಸರ್ವಭೂತಗಳ ಮೇಲೆ ದಯೆ ಇರುವ ಚೇತನಕ್ಕೆ ಪುನರ್ಜನ್ಮದ ಭಯವಿಲ್ಲ. ಪರಲೋಕದಲ್ಲಿ ಯಾವ ಭಯಕ್ಕೂ ಯಾವ ಆಸ್ಪದವೂ ಇಲ್ಲ.

ಏಕ ಏವ ದಮೇ ದೋಷೋ ದ್ವಿತೀಯೋ ನೋಪಪದ್ಯತೇ ।
ಯದೇನಂ ಕ್ಷಮಯಾ ಯುಕ್ತಮಶಕ್ತಂ ಮನ್ಯತೇ ಜನಃ ॥೩೪॥

'ದಮ' ದಲ್ಲಿ ಒಂದೇ ದೋಷ. ಎರಡನೆಯ ದೋಷಕ್ಕೆ ಅವಕಾಶವಿಲ್ಲ. ಆ ದೋಷ: ಕ್ಷಮಾಗುಣಸಂಪನ್ನನಾದ ಇವನನ್ನು ಜನರು ಅಶಕ್ತ ಎಂದು ತಿಳಿಯುತ್ತಾರೆ.

ಏತಸ್ಯ ತು ಮಹಾಪ್ರಾಜ್ಞ ದೋಷಸ್ಯ ಸುಮಹಾನ್ ಗುಣಃ ।
ಕ್ಷಮಾಯಾಂ ವಿಪುಲಾ ಲೋಕಾಃ ಸುಲಭಾ ಹಿ ಸಹಿಷ್ಣುನಾ ॥೩೫॥

ಮಹಾಪ್ರಾಜ್ಞ! ಈ ದೋಷಕ್ಕೆ ಒಂದು ಬಹಳ ದೊಡ್ಡ ಗುಣವಿದೆ. ಕ್ಷಮಾಗುಣವಿದ್ದರೆ ಬಹುಲೋಕಗಳು ಸುಲಭವಾಗಿ ಲಭಿಸುತ್ತವೆ.

ದಾಂತಸ್ಯ ಕಿಮರಣ್ಯೇನ ತಥಾದಾಂತಸ್ಯ ಭಾರತ ।
ಯತ್ರೈವ ಹಿ ವಸೇದ್ ದಾಂತಸ್ತದರಣ್ಯಂ ಸ ಆಶ್ರಮಃ ॥೩೬॥

ಭರತಕುಲಸಂಜಾತ! ದಮ ಇರುವವನು ಊರಿನಲ್ಲೇ ಇದ್ದರೂ ಉತ್ಕೃಷ್ಟ ಗುರಿಗಳನ್ನು ಮುಟ್ಟಬಹುದು. ಅವನಿಗೆ ಅರಣ್ಯಕ್ಕೆ ಹೋಗುವ ಅವಶ್ಯಕತೆ ಇಲ್ಲ. ದಮ ಇಲ್ಲದವನು ಅರಣ್ಯಕ್ಕೆ ಹೋದರೂ ಗುರಿಯನ್ನು ಮುಟ್ಟಲಾರ. ಆದ್ದರಿಂದ ದಮ ಇಲ್ಲದವನಿಗೆ ಅರಣ್ಯಗಮನದಿಂದ ಏನೂ ಪ್ರಯೋಜನವಿಲ್ಲ. ದಮ ಇರುವವನು ಎಲ್ಲಿ ವಾಸಿಸುವನೋ ಅದೇ ಅರಣ್ಯ . ಅದೇ ಆಶ್ರಮ.

ವೈಶಂಪಾಯನಃ

ಏತದ್ಭೀಷ್ಮಸ್ಯ ವಚನಂ ಶ್ರುತ್ವಾ ರಾಜಾ ಯುಧಿಷ್ಠಿರಃ ।
ಅಮೃತೇನೇವ ಸಂತೃಪ್ತಃ ಪ್ರಹೃಷ್ಟಃ ಸಮಪದ್ಯತ ॥೩೭॥

ಭೀಷ್ಮರ ಈ ಮಾತುಗಳನ್ನು ಕೇಳಿ ರಾಜಾ ಯುಧಿಷ್ಠಿರನು ಅಮೃತಪಾನದಿಂದ ಸಂತೃಪ್ತನಾದವನಂತೆ ಉತ್ಕೃಷ್ಟ ಹರ್ಷವನ್ನು ಹೊಂದಿದನು.

ಪುನಶ್ಚ ಪರಿಪಪ್ರಚ್ಛ ಭೀಷ್ಮಂ ಧರ್ಮಭೃತಾಂ ವರಮ್ ।
ತಪಃ ಪ್ರತಿ ಸ ಚೋವಾಚ ತಸ್ಮೈ ಸರ್ವಂ ಕುರೂದ್ವಹ ॥೩೮॥

ಕುರುಕುಲಶ್ರೇಷ್ಠ! ಧರ್ಮನಿಷ್ಠರಲ್ಲಿ ಶ್ರೇಷ್ಠರಾದ ಭೀಷ್ಮಾಚಾರ್ಯರನ್ನು 'ತಪಸ್' ನ ಬಗ್ಗೆ ತಿಳಿಸಬೇಕೆಂದು ಪುನಃ ಯುಧಿಷ್ಠಿರನು ಕೇಳಿದನು. ಅವರು ಅವನಿಗೆ ಎಲ್ಲವನ್ನೂ ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಷಡ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಇಪ್ಪತ್ತಾರನೆಯ
ಅಧ್ಯಾಯವು ಮುಗಿಯಿತು.

★ ★ ★ ★

ಇಪ್ಪತ್ತೇಳನೆಯ ಅಧ್ಯಾಯ

ದೊಡ್ಡ ಗುರಿಯನ್ನು ತಲುಪಲು ಮಹಾಪ್ರಯತ್ನವನ್ನು ಮಾಡಬೇಕು. ತಪಸ್ಸಿನಿಂದ ಮಹಾಪಾಪಗಳನ್ನು ಪರಿಹರಿಸಿಕೊಳ್ಳಬಹುದು. ಉಪವಾಸವು ಶ್ರೇಷ್ಠ ತಪಸ್ಸು.

ಭೀಷ್ಮಃ

ಸರ್ವಮೇತತ್ ತಪೋಮೂಲಂ ಕವಯಃ ಪರಿಚಕ್ಷತೇ ।
ನ ಹ್ಯತಪ್ತತಪಾ ಮೂಢಃ ಕ್ರಿಯಾಫಲಮವಾಪ್ನುತೇ ॥೧॥

ಇವೆಲ್ಲವುಗಳಿಗೆ (ಮುಂದಿನ ಶ್ಲೋಕಗಳಲ್ಲಿ ಹೇಳಲ್ಪಡುವ ನಾನಾ ಮಹತ್ಕಾರ್ಯಗಳಿಗೆ) ತಪಸ್ಸು ಮೂಲ ಎಂದು ತಿಳಿದವರು ಹೇಳುತ್ತಾರೆ. ತಪಸ್ಸನ್ನು (ದೊಡ್ಡ ಗುರಿಯನ್ನು ತಲುಪಲು ಸರಿಯಾದ ದಿಕ್ಕಿನಲ್ಲಿ ಮಹಾಪ್ರಯತ್ನವನ್ನು) ಮಾಡದ ಮೂಢನು ಕ್ರಿಯೆಯ ಫಲವನ್ನು ಹೊಂದುವುದಿಲ್ಲ.

ಪ್ರಜಾಪತಿರಿದಂ ಸರ್ವಂ ತಪಸೈವಾಸೃಜತ್ ಪ್ರಭುಃ ।
ತಥೈವ ವೇದಾನೃಷಯಸ್ತಪಸಾ ಪ್ರತಿಪೇದಿರೇ ॥೨॥

ಸಮರ್ಥನಾದ ಪ್ರಜಾಪತಿಯು (ಚತುರ್ಮುಖ ಬ್ರಹ್ಮನು) ತಪಸ್ಸಿನಿಂದಲೇ ಈ ಸಮಗ್ರ ಜಗತ್ತನ್ನು ಸೃಷ್ಟಿಸಿದನು. ಹಾಗೆಯೇ ಋಷಿಗಳು ತಪಸ್ಸಿನಿಂದಲೇ ವೇದಗಳನ್ನು ಪಡೆದರು.

ತಪಸೋ ಹ್ಯಾನುಪೂರ್ವ್ಯೇಣ ಫಲಮೂಲಾನಿಲಾಶನಾಃ ।
ತ್ರೀನ್ ಲೋಕಾಂಸ್ತಪಸಾ ಸಿದ್ಧಾಃ ಪಶ್ಯಂತಿ ಸುಸಮಾಹಿತಾಃ ॥೩॥

ಋಷಿಗಳು ತಪಸ್ಸಿನಿಂದಲೇ ಕ್ರಮವಾಗಿ ಫಲಾಶನರೂ, ಮೂಲಾಶನರೂ ಮತ್ತು ಅನಿಲಾಶನರೂ ಆದರು (ಕೇವಲ ಫಲಗಳನ್ನು ತಿನ್ನುವವರು ಫಲಾಶನರು. ಕೇವಲ ಮೂಲಗಳನ್ನು ತಿನ್ನುವವರು ಮೂಲಾಶನರು. ಕೇವಲ ವಾಯುಸೇವನೆಯಿಂದ ಬದುಕುವವರು ಅನಿಲಾಶನರು) ತಪಸ್ಸಿನ ಬಲದಿಂದ ಉತ್ಕೃಷ್ಟ ಏಕಾಗ್ರತೆಯನ್ನು ಸಾಧಿಸಿದ ಸಿದ್ಧರು ಮೂರು ಲೋಕಗಳನ್ನು ನೋಡುತ್ತಾರೆ.

ಔಷಧಾನ್ಯಗದಾದೀನಿ ತಿಸ್ರೋ ವಿದ್ಯಾಶ್ಚ ಸಂಸ್ಕೃತಾಃ ।
ತಪಸ್ಯೇವ ಹಿ ಸಿಧ್ಯಂತಿ ತಪೋಮೂಲಂ ಹಿ ಸಾಧನಮ್ ॥೪॥

ಆರೋಗ್ಯಕ್ಕೆ ಕಾರಣವಾಗುವ ಔಷಧಗಳು, ಸಂಸ್ಕಾರ ಸಂಪನ್ನವಾದ ವೇದವಿದ್ಯೆಗಳು ತಪಸ್ಸಿನಿಂದಲೇ ಸಿದ್ಧವಾಗುತ್ತವೆ. ತಪಸ್ಸು ಸಾಧನೆಗಳ ಮೂಲ.

ಯದ್ದುರಾಪಂ ದುರಾಮ್ನಾಯಂ ದುರಾಧರ್ಷಂ ದುರುತ್ಸಹಮ್ ।
ಸರ್ವಂ ತತ್ತಪಸಾ ಶಕ್ಯಂ ತಪೋ ಹಿ ದುರತಿಕ್ರಮಮ್ ॥೫॥

ಯಾವುದನ್ನು ಪಡೆಯಲು ಸಾಧ್ಯವಿಲ್ಲವೋ, ಯಾವ ವಿದ್ಯೆಯನ್ನು ಸಾಧಿಸುವುದು ಕಷ್ಟವೋ. ಯಾವುದರ ಅತಿಕ್ರಮಣವು ಕಷ್ಟವೋ, ಯಾವುದರ ಬಗ್ಗೆ ಉತ್ಸಾಹವನ್ನು ಹೊಂದುವುದು ಕಷ್ಟವೋ - ಇವೆಲ್ಲವನ್ನೂ ತಪಸ್ಸಿನಿಂದ ಸಾಧಿಸಬಹುದು. ತಪಸ್ಸು ಅಜೇಯ (ತಪಸ್ಸು ಎಂದೂ ವಿಫಲವಾಗುವುದಿಲ್ಲ).

ಸುರಾಪೋಽಸಮ್ಮತಾದಾಯೀ ಭ್ರೂಣಹಾ ಗುರುತಲ್ಪಗಃ ।
ತಪಸ್ಯೇವ ಸುತಪ್ತೇನ ನರಃ ಪಾಪಾದ್ ವಿಮುಚ್ಯತೇ ॥೬॥

ಸುರಾಪಾನ ಮಾಡಿದವನು, ಸಮ್ಮತಿಯಿಲ್ಲದೆ ವಸ್ತುಗಳನ್ನು ತೆಗೆದುಕೊಂಡವನು (ಕಳ್ಳ), ಭ್ರೂಣಹತ್ಯೆಯನ್ನು ಮಾಡಿದವನು ಗುರುಗಳ ಹಾಸಿಗೆಯ ಮೇಲೆ ಕುಳಿತವನು,

ಮಲಗಿದವನು- ತೀವ್ರ ತಪಸ್ಸನ್ನು ಆಚರಿಸಿದರೆ ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ತಪಸೋ ಬಹುರೂಪಸ್ಯ ತೈಸ್ತೈರ್ದ್ವಾರೈಃ ಪ್ರವರ್ತತಃ ।
ನಿವೃತ್ತ್ಯಾ ವರ್ತಮಾನಸ್ಯ ತಪೋ ನಾನಶನಾತ್ ಪರಮ್ ॥೭॥

ತಪಸ್ಸುಗಳು ನಾನಾ ವಿಧ. ಅವುಗಳಲ್ಲಿ ತೊಡಗುವುದಕ್ಕೆ ನಾನಾ ಬಾಗಿಲುಗಳು. ನಿವೃತ್ತಿ ಮಾರ್ಗದಲ್ಲಿ ಸಾಗಲು ಬಯಸುವವನಿಗೆ ಉಪವಾಸಕ್ಕಿಂತ ಹೆಚ್ಚು ಉತ್ಕೃಷ್ಟವಾದ ಬೇರೆ ತಪಸ್ಸು ಇಲ್ಲ. (ನಿವೃತ್ತಿ ಮಾರ್ಗ : ಹುಟ್ಟು-ಸಾವುಗಳಿಂದ ಶಾಶ್ವತ ಬಿಡುಗಡೆಯನ್ನು ಸಾಧಿಸುವ ಮಾರ್ಗ. ಭಗವದ್ಗೀತೆಯು ಹೇಳುವ ನಿಷ್ಕಾಮ ಕರ್ಮಯೋಗ).

ಅಹಿಂಸಾ ಸತ್ಯವಚನಂ ದಾನಮಿಂದ್ರಿಯನಿಗ್ರಹಃ ।
ಏತೇಭ್ಯೋ ಹಿ ಮಹಾರಾಜ ತಪೋ ನಾನಶನಾತ್ ಪರಮ್ ॥೮॥

ಮಹಾರಾಜ! ಅಹಿಂಸೆ, ಸತ್ಯವಚನ, ದಾನ, ಇಂದ್ರಿಯನಿಗ್ರಹ ಇವುಗಳಿಗಾಗಿ (ಇವುಗಳನ್ನು ಸಾಧಿಸಲು) ಉಪವಾಸಕ್ಕಿಂತ ಹೆಚ್ಚು ಉತ್ಕೃಷ್ಟವಾದ ಬೇರೆ ತಪಸ್ಸು ಇಲ್ಲ.

ನ ದುಷ್ಕರತರಂ ದಾನಾನ್ನಾತಿಮಾತರಮಾಶ್ರಮಃ ।
ತ್ರೈವಿದ್ಯೇಭ್ಯಃ ಪರಂ ನಾಸ್ತಿ ಸಂನ್ಯಾಸಃ ಪರಮಂ ತಪಃ ॥೯॥

ದಾನದ ಆಚರಣೆ ಬಹಳ ಕಷ್ಟ. ಬೇರೆ ಯಾವ ಆಚರಣೆಯೂ ಇದಕ್ಕಿಂತ ಹೆಚ್ಚು ಕಷ್ಟವಲ್ಲ. ತಾಯಿಯನ್ನು ಮೀರುವ ಯಾವ ಆಶ್ರಮವೂ ಇಲ್ಲ. ಮೂರು ವೇದಗಳ ಅಧ್ಯಯನವನ್ನು ಮಾಡಿದವರಿಗಿಂತ ಹೆಚ್ಚು ಉತ್ಕೃಷ್ಟನಾದ ಪಂಡಿತನಿಲ್ಲ. ಸಂನ್ಯಾಸವೇ= ಫಲಕಾಮನಾ ತ್ಯಾಗವೇ ಶ್ರೇಷ್ಠ ತಪಸ್ಸು.

ಇಂದ್ರಿಯಾಣೀಹ ರಕ್ಷಂತಿ ವಿಪ್ರರ್ಷಿಪಿತೃದೇವತಾಃ ।
ತಸ್ಮಾದರ್ಥೇ ಚ ಧರ್ಮೇ ಚ ತಪೋ ನಾನಶನಾತ್ ಪರಮ್ ॥೧೦॥

(ಉಪವಾಸದಿಂದ ಇಂದ್ರಿಯಗಳು ದುರ್ಬಲವಾಗುತ್ತವೆ? ಈ ಪ್ರಶ್ನೆಗೆ ಉತ್ತರ)

ಉಪವಾಸ ಕಾಲದಲ್ಲಿ, ಈ ವ್ರತವನ್ನು ಆಚರಿಸುವವರಲ್ಲಿ ವಿಪ್ರರು, ಋಷಿಗಳು, ಪಿತೃಗಳು, ದೇವತೆಗಳು (ಅನುಗ್ರಹ ಮಾಡಿ) ಇಂದ್ರಿಯಗಳನ್ನು ರಕ್ಷಿಸುತ್ತಾರೆ. ಆದ್ದರಿಂದ ಅರ್ಥ ಮತ್ತು ಧರ್ಮಗಳ ಸಾಧನೆಗಾಗಿ ಉಪವಾಸಕ್ಕಿಂತ ಹೆಚ್ಚು ಉತ್ಕೃಷ್ಟವಾದ ಬೇರೆ ತಪಸ್ಸು ಇಲ್ಲ.

ಋಷಯಃ ಪಿತರೋ ದೇವಾ ಮನುಷ್ಯಾ ಮೃಗಸತ್ತಮಾಃ ।
ಯಾನಿ ಚಾನ್ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ॥೧೧॥

ತಪಃಪರಾಯಣಾಃ ಸರ್ವೇ ಸಿಧ್ಯಂತಿ ತಪಸಾ ಚ ತೇ ।
ಇತ್ಯೇವಂ ತಪಸಾ ದೇವಾ ಮಹತ್ತ್ವಂ ಚಾಪ್ಯವಾಪ್ನುವನ್ ॥೧೨॥

ತಪಸ್ಸನ್ನು ಗಾಢವಾಗಿ ಅವಲಂಬಿಸಿದ ಎಲ್ಲರೂ - ಋಷಿಗಳು, ಪಿತೃಗಳು, ದೇವತೆಗಳು, ಮನುಷ್ಯರು, ಉತ್ತಮ ಮೃಗಗಳು, ಬೇರೆ ಸ್ಥಾವರ-ಜಂಗಮ ಚೇತನಗಳು - ತಪಸ್ಸಿನಿಂದ ಸಿದ್ಧಿಯನ್ನು ಪಡೆಯುತ್ತಾರೆ. ದೇವತೆಗಳು ತಪಸ್ಸಿನಿಂದ ಮಹತ್ವವನ್ನು ಪಡೆದುಕೊಂಡರು.

ಇಮಾನೀಷ್ಟವಿಭಾಗಾನಿ ಫಲಾನಿ ತಪಸಃ ಸದಾ ।
ತಪಸಾ ಶಕ್ಯತೇ ಪ್ರಾಪ್ತುಂ ದೇವತ್ವಮಪಿ ನಿಶ್ಚಯಾತ್ ॥೧೩॥

ಇವುಗಳು (ಮೇಲಿನ ಶ್ಲೋಕಗಳಲ್ಲಿ ಹೇಳಲ್ಪಟ್ಟ ಫಲಗಳು) ತಪಸ್ಸಿನ ಫಲವಾಗಿ ಲಭಿಸುವ ನಾನಾ ಅಭೀಷ್ಟಗಳು. ತಪಸ್ಸಿನಿಂದ ದೇವ ಪದವಿಯನ್ನೂ ಪಡೆಯಬಹುದು. ಇದು ನಿಶ್ಚಯ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಇಪ್ಪತ್ತೇಳನೆಯ
ಅಧ್ಯಾಯವು ಮುಗಿಯಿತು.

★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

ಸತ್ಯದ ಲಕ್ಷಣ. ಸತ್ಯದ ನಾನಾ ಪ್ರಕಾರಗಳು.

ಯುಧಿಷ್ಠಿರಃ

ಸತ್ಯಂ ಧರ್ಮೇ ಪ್ರಶಂಸಂತಿ ವಿಪ್ರರ್ಷಿಪಿತೃದೇವತಾಃ ।
ಸತ್ಯಮಿಚ್ಛಾಮ್ಯಹಂ ಶ್ರೋತುಂ ತನ್ಮೇ ಬ್ರೂಹಿ ಪಿತಾಮಹ ॥೧॥

ಪಿತಾಮಹ! ವಿಪ್ರರು, ಋಷಿಗಳು, ಪಿತೃಗಳು, ದೇವತೆಗಳು ನಾನಾ ಧರ್ಮಗಳ ನಡುವೆ ಸತ್ಯವನ್ನು ಪ್ರಶಂಸಿಸುತ್ತಾರೆ. ಸತ್ಯದ ಬಗ್ಗೆ ಕೇಳಲು ಬಯಸುತ್ತಿದ್ದೆನೆ. ದಯವಿಟ್ಟು ಹೇಳಿರಿ.

ಸತ್ಯಂ ಕಿಂಲಕ್ಷಣಂ ರಾಜನ್ ಕಥಂ ವಾ ತದವಾಪ್ಯತೇ ।
ಸತ್ಯಂ ಪ್ರಾಪ್ಯ ಭವೇತ್ ಕಿಂ ಚ ಕಥಂ ಚೈವ ತದುಚ್ಯತಾಮ್ ॥೨॥

ರಾಜನೆ! ಸತ್ಯದ ಲಕ್ಷಣ ಏನು? ಅದನ್ನು ಸಾಧಿಸುವುದು ಹೇಗೆ? ಸತ್ಯನಿಷ್ಠನಿಗೆ ಏನು ಸಿದ್ಧಿಸುತ್ತದೆ? ಆ ಸಿದ್ಧಿಯು ಹೇಗೆ ಆಗುತ್ತದೆ? ದಯವಿಟ್ಟು ಹೇಳಿರಿ.

ಭೀಷ್ಮಃ

ಚಾತುರ್ವರ್ಣ್ಯಸ್ಯ ಧರ್ಮಾಣಾಂ ಸಂಕರೋ ನ ಪ್ರಶಸ್ಯತೇ ।
ಅವಿಕಾರಿತಮಂ ಸತ್ಯಂ ಸರ್ವವರ್ಣೇಷು ಭಾರತ ॥೩॥

ಭರತಕುಲಸಂಜಾತ! ನಾಲ್ಕು ವರ್ಣಗಳ (ಶಾಸ್ತ್ರೋಕ್ತ) ಧರ್ಮಗಳ ಕಲಬೆರಕೆಯನ್ನು ಪ್ರಾಜ್ಞರು ಒಪ್ಪುವುದಿಲ್ಲ. ಆದರೆ ನಾಲ್ಕು ವರ್ಣಗಳಲ್ಲೂ ಸತ್ಯವು ಒಂದೇ. ಅದರಲ್ಲಿ ಯಾವ ಬದಲಾವಣೆಯೂ ಇಲ್ಲ.

ಸತ್ಯಂ ಸತ್ಸು ಸದಾ ಧರ್ಮಃ ಸತ್ಯಂ ಧರ್ಮಃ ಸನಾತನಃ ।
ಸತ್ಯಮೇವ ನಮಸ್ಯೇತ ಸತ್ಯಂ ಹಿ ಪರಮಾ ಗತಿಃ ॥೪॥

ಸಜ್ಜನ ಸಮುದಾಯದಲ್ಲಿ ಯಾವಾಗಲೂ ಸತ್ಯವೇ ಧರ್ಮ. ಸತ್ಯವು ಸನಾತನ ಧರ್ಮ. ಸತ್ಯಕ್ಕೆ ತಲೆಬಾಗಲೇಬೇಕು. ಸತ್ಯವು ಅತ್ಯಂತಶ್ರೇಷ್ಠ ನೆಲೆ.

ಸತ್ಯಂ ಧರ್ಮಸ್ತಪೋ ಯೋಗಃ ಸತ್ಯಂ ಬ್ರಹ್ಮ ಸನಾತನಮ್ ।
ಸತ್ಯಂ ಯಜ್ಞಃ ಪರಃ ಪ್ರೋಕ್ತಃ ಸತ್ಯೇ ಸರ್ವಂ ಪ್ರತಿಷ್ಠಿತಮ್ ॥೫॥

ಸತ್ಯವು ಧರ್ಮ. ಅದೇ ತಪಸ್ಸು. ಅದೇ ಯೋಗ. ಅದೇ ಸನಾತನ ಬ್ರಹ್ಮ. ಅದೇ ಶ್ರೇಷ್ಠಯಜ್ಞ. ಹೀಗೆ ಶಾಸ್ತ್ರಗಳು ಹೇಳುತ್ತವೆ. ಸತ್ಯದಲ್ಲಿ ಎಲ್ಲ ಶ್ರೇಯಸ್ಸುಗಳೂ ಅಡಗಿವೆ.

ಆಚಾರಾನಿಹ ಸತ್ಯಸ್ಯ ಯಥಾವದನುಪೂರ್ವಶಃ ।
ಲಕ್ಷಣಂ ಚ ಪ್ರವಕ್ಷ್ಯಾಮಿ ಸತ್ಯಸ್ಯೇಹ ಯಥಾಕ್ರಮಮ್ ॥೬॥

ಪ್ರಾಪ್ಯತೇ ಹಿ ಯಥಾ ಸತ್ಯಂ ತಚ್ಚ ಶ್ರೋತುಂ ತ್ವಮರ್ಹಸಿ ।
ಸತ್ಯಂ ತ್ರಯೋದಶವಿಧಂ ಸರ್ವಲೋಕೇಷು ಭಾರತ ॥೭॥

ಭರತಕುಲಸಂಜಾತ! ಸತ್ಯದ ಆಚರಣೆಗಳನ್ನು ಮತ್ತು ಸತ್ಯದ ಲಕ್ಷಣವನ್ನು ಕ್ರಮವಾಗಿ ಹೇಳುತ್ತೇನೆ. ಸತ್ಯನಿಷ್ಠೆ ಹೇಗೆ ಸಿದ್ಧಿಸುತ್ತದೆ ಎಂದೂ ಹೇಳುತ್ತೇನೆ. ನೀನು ಇವೆಲ್ಲವನ್ನೂ ಕೇಳಬೇಕು. ಸತ್ಯವು ಹದಿಮೂರು ವಿಧ.

ಸತ್ಯಂ ಚ ಸಮತಾ ಚೈವ ದಮಶ್ಚೈವ ನ ಸಂಶಯಃ ।
ಅಮಾತ್ಸರ್ಯಂ ಕ್ಷಮಾ ಚೈವ ಹ್ರೀಸ್ತಿತಿಕ್ಷಾನಸೂಯತಾ ॥೮॥

ತ್ಯಾಗೋ ಧ್ಯಾನಮಥಾರ್ಯತ್ವಂ ಧೃತಿಶ್ಚ ಸತತಂ ಸ್ಥಿರಾ ।
ಅಹಿಂಸಾ ಚೈವ ಸತ್ಯಂ ಚ ಸಸತ್ಕಾರಾಸ್ತ್ರಯೋದಶ ॥೯॥

ಸಮತ್ವವು ಸತ್ಯ. ದಮವು ಸತ್ಯ. ಸಂಶಯವಿಲ್ಲ. ಅಮಾತ್ಸರ್ಯವು ಸತ್ಯ. ಕ್ಷಮಾ ಸತ್ಯ. ನಾಚಿಕೆಯು ಸತ್ಯ. ತಿತಿಕ್ಷಾ ಸತ್ಯ. ಅನಸೂಯತಾ ಸತ್ಯ. ತ್ಯಾಗವೂ ಸತ್ಯ. ಧ್ಯಾನವು ಸತ್ಯ. ಆರ್ಯತ್ವವು ಸತ್ಯ. ನಿರಂತರ ಸ್ಥಿರವಾಗಿರುವ ಧೃತಿ (ಧಾರಣ ಸಾಮರ್ಥ್ಯ, ಉತ್ಸಾಹ) ಯು ಸತ್ಯ. ಅಹಿಂಸೆಯು ಸತ್ಯ. ಕೆಲಸಗಳನ್ನು ಸಮರ್ಪಕವಾಗಿ ಮಾಡುವುದು ಅಥವಾ ಎಲ್ಲರನ್ನೂ ಸತ್ಕರಿಸುವುದು ಸತ್ಯ.

ಸತ್ಯಂ ನಾಮಾವ್ಯಯಂ ನಿತ್ಯಮವಿಕಾರಿ ತಥೈವ ಚ ।
ಸರ್ವಧರ್ಮಾವಿರುದ್ಧಂ ಚ ಯೋಗೇನೈತದವಾಪ್ಯತೇ ॥೧೦॥

ಯಾವುದು ಯಾವಾಗಲೂ ಒಂದೇ ರೂಪದಲ್ಲಿರುತ್ತದೋ, ಎಂದೂ ವಿಕಾರಕ್ಕೆ ಒಳಗಾಗುವುದಿಲ್ಲವೋ ಅದು ಸತ್ಯ. ಸರ್ವಧರ್ಮಗಳಿಗೆ ಅವಿರುದ್ಧವಾದುದು ಸತ್ಯ. (ಇಲ್ಲಿ ಧರ್ಮ ಎಂದರೆ ನಿಷ್ಕಾಮಕರ್ಮ- ತತ್ವಜ್ಞಾನ-ಭಗವದ್ಭಕ್ತಿ-ಧ್ಯಾನ ಇತ್ಯಾದಿ) ಯೋಗದಿಂದ ಸತ್ಯನಿಷ್ಠೆಯು ಸಿದ್ಧಿಸುತ್ತದೆ.

ಆತ್ಮನೀಷ್ಟೇ ತಥಾನಿಷ್ಟೇ ರಿಪೌ ಚ ಸಮತಾ ತಥಾ ।
ಇಚ್ಛಾದ್ವೇಷಕ್ಷಯಂ ಪ್ರಾಪ್ಯ ಕಾಮಕ್ರೋಧಕ್ಷಯಂ ತಥಾ ॥೧೧॥

ತನ್ನ ಬಗ್ಗೆ, ತನಗೆ ಇಷ್ಟವಾದವರ ಬಗ್ಗೆ ಇಚ್ಛೆ-ಪ್ರೀತಿ, ತನಗೆ ಇಷ್ಟವಾಗದವರ ಬಗ್ಗೆ ಮತ್ತು ಶತ್ರುವಿನ ಬಗ್ಗೆ ದ್ವೇಷ - ಇವುಗಳ ನಿಗ್ರಹವನ್ನು ಸಾಧಿಸಿದಾಗ ಮತ್ತು ಕಾಮ-ಕ್ರೋಧಗಳ ನಿಗ್ರಹವನ್ನು ಸಾಧಿಸಿದಾಗ ಸಿದ್ಧಿಸುವ ಮನೋಭಾವವೇ ಸಮತಾ.

ದಮೋ ನಾನ್ಯಸ್ಪೃಹಾ ನಿತ್ಯಂ ಧೈರ್ಯಂ ಗಾಂಭೀರ್ಯಮೇವ ಚ ।
ಅಭಯಂ ಕ್ರೋಧಶಮನಂ ಜ್ಞಾನೇನೈತದವಾಪ್ಯತೇ ॥೧೨॥

ಅನ್ಯರ ವಸ್ತುಗಳ ಮೇಲೆ ಆಸೆಯಿಲ್ಲದಿರುವಿಕೆ, ಆತಂಕಕ್ಕೆ ಒಳಗಾಗದಿರುವಿಕೆ, ಗಾಂಭೀರ್ಯ, ಅಭಯ, ಕ್ರೋಧಶಮನ- ಇವುಗಳು ದಮ. ಲೋಕಪ್ರಜ್ಞೆ-ಸ್ವಯಂ ಪ್ರಜ್ಞೆಗಳಿಂದ ಇದರ ಸಿದ್ಧಿಯಾಗುತ್ತದೆ.

ಅಮಾತ್ಸರ್ಯಂ ಬುಧಾಃ ಪ್ರಾಹುರ್ದಾನೇ ಧರ್ಮೇ ಚ ಸಂಯಮಮ್।
ಅವಸ್ಥಿತೇನ ನಿತ್ಯಂ ಚ ಸತ್ಯೇನಾಮತ್ಸರೀ ಭವೇತ್ ॥೧೩॥

ದಾನದ ಬಗ್ಗೆ ಮತ್ತು ಧರ್ಮಾನುಷ್ಠಾನದ ಬಗ್ಗೆ ಸಂಯಮ= ಸ್ಪರ್ಧೆಯ ಅಭಾವ-ವನ್ನು ಅಮಾತ್ಸರ್ಯ ಎಂದು ಪ್ರಾಜ್ಞರು ಹೇಳುತ್ತಾರೆ. ನಿರಂತರ ಸತ್ಯನಿಷ್ಠೆಯಿಂದ ಅಮಾತ್ಸರ್ಯದ ಸಿದ್ಧಿಯಾಗುತ್ತದೆ.

ಅಕ್ಷಮಾಯಾಃ ಕ್ಷಮಾಯಾಶ್ಚ ಪ್ರಿಯಾಣೀಹಾಪ್ರಿಯಾಣಿ ಚ ।
ಕ್ಷಮತೇ ಸರ್ವತಃ ಸಾಧುಃ ಸಾಧ್ವಾಪ್ನೋತಿ ಚ ಸತ್ಯವಾನ್ ॥೧೪॥

ಕ್ಷಮಾ ಗುಣದಿಂದಾಗಿ (ಈ ಗುಣವಿದ್ದವನಿಗೆ) ಪ್ರಿಯಗಳು ಸಂಭವಿಸುತ್ತವೆ, ಅಪ್ರಿಯಗಳೂ ಸಂಭವಿಸುತ್ತವೆ. ಅಕ್ಷಮಾ-ಈ ದೋಷದಿಂದಾಗಿ (ಈ

ದೋಷವಿದ್ದವನಿಗೆ) ಪ್ರಿಯಗಳು ಸಂಭವಿಸುತ್ತವೆ, ಅಪ್ರಿಯಗಳೂ ಸಂಭವಿಸುತ್ತವೆ. ಸಾಧುಪುರುಷನು ಎಲ್ಲವನ್ನೂ ಸಹಿಸುತ್ತಾನೆ. ಸತ್ಯನಿಷ್ಠನು ಕ್ಷಮಾಗುಣವನ್ನು, ಅದರ ಫಲವನ್ನು ಚೆನ್ನಾಗಿ ಪಡೆಯುತ್ತಾನೆ.

ಕಲ್ಯಾಣಂ ಕುರುತೇ ಗಾಢಂ ಹ್ರೀಮಾನ್ನ ಗ್ಲಾಯತೇ ಕ್ವಚಿತ್ ।
ಪ್ರಶಾಂತವಾಙ್ಮನಾ ನಿತ್ಯಂ ಹ್ರೀಸ್ತು ಧರ್ಮಾದವಾಪ್ಯತೇ ॥೧೫॥

ಹ್ರೀ= ನಾಚಿಕೆ ಇರುವವನು ಒಳ್ಳೆಯ ಕೆಲಸಗಳನ್ನೇ ಮಾಡುತ್ತಾನೆ. ಯಾವುದೇ ವಿಷಯದಲ್ಲಿ/ ಕಾಲದಲ್ಲಿ ಗ್ಲಾನಿಯನ್ನು ಹೊಂದುವುದಿಲ್ಲ. ಹ್ರೀ ಇರುವವನ ಮನಸ್ಸು ಮತ್ತು ಮಾತುಗಳು ಯಾವಾಗಲೂ ಶಾಂತವಾಗಿರುತ್ತವೆ. ಧರ್ಮನಿಷ್ಠೆ ಇರುವವನಿಗೆ 'ಹ್ರೀ' ಯು ಸಿದ್ಧಿಸುತ್ತದೆ.

ಧರ್ಮಾರ್ಥಹೇತೋಃ ಕ್ಷಮತೇ ತಿತಿಕ್ಷಾ ಕ್ಷಾಂತಿರುಚ್ಯತೇ ।
ಲೋಕಸಂಗ್ರಹಣಾರ್ಥಾ ತು ಸಾ ತು ಧೈರ್ಯೇಣ ಲಭ್ಯತೇ ।
ಅನಸೂಯಾ ತು ಗಾಂಭೀರ್ಯಂ ದಾನೇನೈತದವಾಪ್ಯತೇ ॥೧೬॥

ಧರ್ಮ ಮತ್ತು ಅರ್ಥಗಳ ಸಾಧನೆಗಾಗಿ ಸಾಧಕನು ಕ್ಲೇಶಗಳನ್ನು ಸಹಿಸುತ್ತಾನೆ. ಈ ಕ್ಲೇಶ ಸಹನೆಯೇ ತಿತಿಕ್ಷಾ. ಇದನ್ನು ಕ್ಷಾಂತಿ ಎಂದೂ ಹೇಳುತ್ತಾರೆ. ಧರ್ಮ ಮತ್ತು ಅರ್ಥಗಳ ಸಾಧನೆಯಲ್ಲಿ ಲೋಕಕ್ಕೆ ಮಾರ್ಗದರ್ಶನ ಮಾಡಲು ಇದು ಉಪಯುಕ್ತ. ಧೀರಭಾವದಿಂದ ತಿತಿಕ್ಷಾವನ್ನು ಸಾಧಿಸಬೇಕು. ಅನಸೂಯಾ ಎಂದರೆ ಗಾಂಭೀರ್ಯ. (ಒಳ್ಳೆಯ ಚಿಂತನೆಗಳಿಗೆ ಆಳವಿದ್ದರೆ, ಅವುಗಳನ್ನು ತನ್ನ ವ್ಯಕ್ತಿತ್ವದಲ್ಲಿ ಅಳವಡಿಸುವ ಸಾಮರ್ಥ್ಯದಲ್ಲಿ ಆಳವಿದ್ದರೆ ಈ ಆಳವು ಗಾಂಭೀರ್ಯ. ಇದಿಲ್ಲದಿದ್ದವರು ಪರರ ಗುಣಗಳಲ್ಲಿ ದೋಷವನ್ನು ತೋರಿಸುತ್ತಾರೆ. ಈ ದೋಷಪ್ರದರ್ಶನವು ಅಸೂಯಾ. ಗಾಂಭೀರ್ಯವಿದ್ದವರು ಪರರ ಗುಣಗಳಲ್ಲಿ ದೋಷವನ್ನು ತೋರಿಸುವುದಿಲ್ಲ. ಆದ್ದರಿಂದ ಅನಸೂಯಾ ಎಂದರೆ ಗಾಂಭೀರ್ಯ). ದಾನದಿಂದ ಇದನ್ನು (ಗಾಂಭೀರ್ಯವನ್ನು) ಸಾಧಿಸಬೇಕು.

ತ್ಯಾಗಃ ಸ್ನೇಹಸ್ಯ ಯಸ್ತ್ಯಾಗೋ ವಿಷಯಾಣಾಂ ತಥೈವ ಚ ।
ರಾಗದ್ವೇಷಪ್ರಹೀಣಸ್ಯ ತ್ಯಾಗೋ ಭವತಿ ನಾನ್ಯಥಾ ।
ಧ್ಯಾನಂ ಚಾಶಾಠ್ಯಮಿತ್ಯುಕ್ತಂ ಮೌನೇನೈತದವಾಪ್ಯತೇ ॥೧೭॥

ವಿಷಯಗಳ (ಭೋಗ ವಸ್ತುಗಳ) ಪ್ರೀತಿಯ ತ್ಯಾಗವೇ ತ್ಯಾಗ. ರಾಗ-ದ್ವೇಷಗಳಿಲ್ಲದವನಿಗೆ ತ್ಯಾಗವು ಸಿದ್ಧಿಸುತ್ತದೆ. ಧ್ಯಾನವು ಮೌನದಿಂದ ಸಿದ್ಧಿಸುತ್ತದೆ. ಆಶಾಠ್ಯವೇ= ಪ್ರಾಮಾಣಿಕತೆಯೇ ಧ್ಯಾನ. ಮೌನದಿಂದ ಇದು ಸಿದ್ಧಿಸುತ್ತದೆ.

ಆರ್ಯತಾ ನಾಮ ಭೂತಾನಾಂ ಯಃ ಕರೋತಿ ಪ್ರಯತ್ನತಃ ।
ಶುಭಕರ್ಮಾನಿರಾಕಾರೋ ವೀತರಾಗತ್ವಮೇವ ಚ ॥೧೮॥

'ಆರ್ಯತಾ' ಎಂದರೆ ಪ್ರಯತ್ನಪೂರ್ವಕವಾಗಿ ಸಕಲ ಪ್ರಾಣಿಗಳಿಗೆ ಒಳ್ಳೆಯದನ್ನು ಮಾಡುವುದು ಮತ್ತು ಹಾನಿಕರವಾದ ರಾಗಗಳಿಲ್ಲದಿರುವುದು.

ಧೃತಿರ್ನಾಮ ಸುಖೇ ದುಃಖೇ ಯಥಾ ನಾಪ್ನೋತಿ ವಿಕ್ರಿಯಾಮ್ ।
ತಾಂ ಭಜೇತ ಸದಾ ಪ್ರಾಜ್ಞೋ ಯ ಇಚ್ಛೇದ್ಭೂತಿಮಾತ್ಮನಃ ॥೧೯॥

ಧೃತಿ ಎಂದರೆ ಸುಖ-ದುಃಖಗಳು ಉಂಟಾದಾಗ ವಿಕಾರವನ್ನು ಹೊಂದದ ಮನಃಸ್ಥಿತಿ. ಶ್ರೇಯಸ್ಸನ್ನು ಬಯಸುವ ಪ್ರಾಜ್ಞನು ಅದನ್ನು ಹೊಂದಿರಬೇಕು.

ಸರ್ವಥಾ ಕ್ಷಮಿಣಾ ಭಾವ್ಯಂ ತಥಾ ಸತ್ಯಪರೇಣ ಚ ।
ವೀತಹರ್ಷಭಯಕ್ರೋಧೋ ಧೃತಿಮಾಪ್ನೋತಿ ಪಂಡಿತಃ ॥೨೦॥

ಎಲ್ಲ ರೀತಿಯಿಂದ ತಾಳ್ಮೆವುಳ್ಳವನಾಗಿರಬೇಕು. ಎಲ್ಲ ರೀತಿಯಿಂದ ಸತ್ಯನಿಷ್ಠನಾಗಿರಬೇಕು. ಹರ್ಷ-ಭಯ-ಕ್ರೋಧಗಳಿಲ್ಲದ ಪಂಡಿತನು ಧೃತಿಯನ್ನು ಹೊಂದುತ್ತಾನೆ.

ಅದ್ರೋಹಃ ಸರ್ವಭೂತೇಷು ಕರ್ಮಣಾ ಮನಸಾ ಗಿರಾ ।
ಅನುಗ್ರಹಶ್ಚ ದಾನಂ ಚ ಸತಾಂ ಧರ್ಮಃ ಸನಾತನಃ ॥೨೧॥

ಕೃತಿ-ಆಲೋಚನೆ-ಮಾತುಗಳಿಂದ ಯಾವ ಪ್ರಾಣಿಗಳಿಗೂ ದ್ರೋಹ ಮಾಡಬಾರದು. ಉಪಕಾರ ಮಾಡಬೇಕು. ದಾನ ಮಾಡಬೇಕು. ಇದು ಸಜ್ಜನರು ಪಾಲಿಸುವ ಸನಾತನ ಧರ್ಮ.

ಏತೇ ತ್ರಯೋದಶಾಕಾರಾಃ ಪೃಥಕ್ತ್ವೈಕಲಕ್ಷಣಾಃ ।
ಭಜಂತೇ ಸತ್ಯಮೇವೇಹ ಬೃಂಹಯಂತಿ ಚ ಭಾರತ ॥೨೨॥

ಈ ಹದಿಮೂರರಲ್ಲಿ ಪ್ರತಿಯೊಂದರಲ್ಲೂ ಸತ್ಯವೇ ಸಾರ. ಈ ಮೌಲ್ಯಗಳಿಗೆ ನಿಷ್ಠರಾದವರು ಸತ್ಯವನ್ನೇ ಆರಾಧಿಸುತ್ತಾರೆ. ಅದನ್ನೇ ಹೆಚ್ಚಿಸುತ್ತಾರೆ.

ನಾಂತಃ ಶಕ್ಯೋ ಗುಣಾನಾಂ ಹಿ ವಕ್ತುಂ ಸತ್ಯಸ್ಯ ಭಾರತ ।
ಅತಃ ಸತ್ಯಂ ಪ್ರಶಂಸಂತಿ ವಿಪ್ರಾಃ ಸಪಿತೃದೇವತಾಃ ॥೨೩॥

ಭರತಕುಲಸಂಜಾತ! ಸತ್ಯದ ಗುಣಗಳನ್ನು ಹೇಳಿ ಮುಗಿಸಲು ಸಾಧ್ಯವಿಲ್ಲ. ಆದ್ದರಿಂದ ವಿಪ್ರರು, ಪಿತೃಗಳು, ದೇವತೆಗಳು ಸತ್ಯವನ್ನು ಪ್ರಶಂಸಿಸುತ್ತಾರೆ.

ನಾಸ್ತಿ ಸತ್ಯಾತ್ ಪರೋ ಧರ್ಮೋ ನಾನೃತಾತ್ ಪಾತಕಂ ಪರಮ್ ।
ಸ್ಥಿತಿರ್ಹಿ ಸತ್ಯಂ ಧರ್ಮಸ್ಯ ತಸ್ಮಾತ್ ಸತ್ಯಂ ನ ಲೋಪಯೇತ್ ॥೨೪॥

ಸತ್ಯಕ್ಕಿಂತ ದೊಡ್ಡ ಧರ್ಮವಿಲ್ಲ. ಸುಳ್ಳಿಗಿಂತ ದೊಡ್ಡ ಪಾಪವಿಲ್ಲ. ಸತ್ಯವು ಧರ್ಮಕ್ಕೆ ಆಧಾರ. ಆದ್ದರಿಂದ ಸತ್ಯದ ಲೋಪವನ್ನು ಮಾಡಬಾರದು.

ಉಪೈತಿ ಸತ್ಯಾದ್ ದಾನಂ ಹಿ ತಥಾ ಯಜ್ಞಾಃ ಸದಕ್ಷಿಣಾಃ ।
ವ್ರತಾಗ್ನಿಹೋತ್ರಂ ವೇದಾಶ್ಚ ಯೇ ಚಾನ್ಯೇ ಧರ್ಮನಿಶ್ಚಯಾಃ ॥೨೫॥

ಸತ್ಯದಿಂದ ದಾನದ ಫಲವನ್ನು ಹೊಂದುತ್ತಾನೆ. ಯಜ್ಞ ಮತ್ತು ದಕ್ಷಿಣೆಗಳ ಫಲವನ್ನು ಹೊಂದುತ್ತಾನೆ. ವ್ರತ-ಅಗ್ನಿಹೋತ್ರ-ವೇದಾಧ್ಯಯನ-ಅಧ್ಯಾಪನ ಇವುಗಳ ಫಲವನ್ನು ಹೊಂದುತ್ತಾನೆ. ಧರ್ಮ ಎಂದು ನಿಶ್ಚಯಿಸಲ್ಪಡುವ ಎಲ್ಲ ಆಚರಣೆಗಳ ಫಲವನ್ನು ಹೊಂದುತ್ತಾನೆ.

ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್ ।
ಅಶ್ವಮೇಧಸಹಸ್ರಾದ್ಧಿ ಸತ್ಯಮೇವಾತಿರಿಚ್ಯತೇ ॥೨೬॥

ಸಾವಿರ ಅಶ್ವಮೇಧ ಮತ್ತು ಸತ್ಯ . ಇವುಗಳನ್ನು ತೂಗಿದರೆ ಸಾವಿರ ಅಶ್ವಮೇಧಕ್ಕಿಂತ ಸತ್ಯವೇ ಹೆಚ್ಚಾಗುತ್ತದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಅಷ್ಟಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು.

★ ★ ★ ★

ಇಪ್ಪತ್ತೊಂಬತ್ತನೆಯ ಅಧ್ಯಾಯ

ಕ್ರೋಧ ಮೊದಲಾದ ದೋಷಗಳು

ಯುಧಿಷ್ಠಿರಃ

ಯತಃ ಪ್ರಭವತಿ ಕ್ರೋಧಃ ಕಾಮಶ್ಚ ಭರತರ್ಷಭ ।
ಶೋಕಮೋಹೌ ವಿವಿತ್ಸಾ ಚ ಪರಾಭೂತಿಸ್ತಥಾ ಮದಃ ॥೧॥

ಲೋಭೋ ಮಾತ್ಸರ್ಯಮೀರ್ಷ್ಯಾ ಚ ಕುತ್ಸಾಸೂಯಾ ಕೃಪಾ ತಥಾ ।
ಏತತ್ಸರ್ವಂ ಮಹಾಪ್ರಾಜ್ಞ ಯಾಥಾತಥ್ಯೇನ ಮೇ ವದ ॥೨॥

ಭರತಕುಲಶ್ರೇಷ್ಠ! ಕ್ರೋಧ, ಕಾಮ, ಶೋಕ, ಮೋಹ, ವಿಮರ್ಶೆ, ಪರಾಭವ, ಮದ, ಲೋಭ, ಮಾತ್ಸರ್ಯ, ಈರ್ಷ್ಯಾ, ನಿಂದೆ, ಅಸೂಯಾ, ಅನುಚಿತ ಕೃಪಾ- ಇವುಗಳು ಏಕೆ ಹುಟ್ಟುತ್ತವೆ. ಮಹಾಪ್ರಾಜ್ಞ! ಇದೆಲ್ಲವನ್ನೂ ಯಥಾರ್ಥವಾಗಿ ಹೇಳಿ.

ಭೀಷ್ಮಃ

ತ್ರಯೋದಶೈತೇऽತಿಬಲಾಃ ಶತ್ರವಃ ಪ್ರಾಣಿನಾಂ ಸ್ಮೃತಾಃ ।
ಉಪಾಸತೇ ಮಹಾರಾಜ ಸಮಸ್ತಾಃ ಪುರುಷಾನಿಹ ॥೩॥

ಮಹಾರಾಜ! ಈ ಹದಿಮೂರು ಪ್ರಾಣಧಾರಿಗಳ-ಮಾನವರ= ಅತಿಬಲಶಾಲಿ ಶತ್ರುಗಳು. ಹೀಗೆ ಜ್ಞಾನಿಗಳ ಚಿಂತನೆಯಿದೆ. ಇವು ಎಲ್ಲ ಪುರುಷರಲ್ಲೂ ಇರುತ್ತವೆ.

ಏತೇ ಪ್ರಮತ್ತಂ ಪುರುಷಮಪ್ರಮತ್ತಾಸ್ತುದಂತಿ ಹಿ ।
ವೃಕಾ ಇವ ವಿಲುಂಪಂತಿ ದೃಷ್ಟ್ವೈವ ಪುರುಷೇತರಾನ್ ॥೪॥

ಇವುಗಳು ಅಜಾಗರೂಕನನ್ನು ಜಾಗರೂಕರಾಗಿ ಹಿಂಸಿಸುತ್ತವೆ. ತೋಳಗಳು ಅಥವಾ ದರೋಡೆಗಾರರು ಅಜಾಗರೂಕರನ್ನು ಅಥವಾ ದುರ್ಬಲರನ್ನು ನೋಡಿದ ಕೂಡಲೇ ಆಕ್ರಮಿಸುತ್ತವೆ/ತ್ತಾರೆ. ಕ್ರೋಧಾದಿಗಳು ಹಾಗೆಯೇ ಆಕ್ರಮಿಸುತ್ತವೆ.

ಏಭ್ಯಃ ಪ್ರವರ್ತತೇ ದುಃಖಮೇಭ್ಯಃ ಪಾಪಂ ಪ್ರವರ್ತತೇ ।
ಇತಿ ಮತ್ಯೋ೯ ವಿಜಾನೀಯಾತ್ ಸತತಂ ಭರತರ್ಷಭ ॥೫॥

ಭರತಕುಲಶ್ರೇಷ್ಠ! ಇವುಗಳಿಂದ ದುಃಖವುಂಟಾಗುತ್ತದೆ. ಇವುಗಳಿಂದ ಪಾಪಗಳು ಸಂಭವಿಸುತ್ತವೆ. ಮಾನವನು ಇದನ್ನು ಯಾವಾಗಲೂ ತಿಳಿದಿರಬೇಕು.

ಏತೇಷಾಮುದಯಂ ಸ್ಥಾನಂ ಕ್ಷಯಂ ಚ ಪುರುಷೋತ್ತಮ ।
ಹಂತ ತೇ ವರ್ಣಯಿಷ್ಯಾಮಿ ತನ್ಮೇ ನಿಗದತಃ ಶೃಣು ॥೬॥

ಪುರುಷಶ್ರೇಷ್ಠ! ಇವುಗಳ ಉತ್ಪತ್ತಿ, ಸ್ಥಿತಿ ಮತ್ತು ನಾಶಗಳನ್ನು ಕುರಿತು ನಿನಗೆ ವಿವರಿಸುವೆ. ಕೇಳು.

ಲೋಭಾತ್ ಕ್ರೋಧಃ ಪ್ರಭವತಿ ಪರದೋಷೈರುದೀರ್ಯತೇ ।
ಕ್ಷಮಯಾ ತಿಷ್ಠತೇ ರಾಜನ್ ಕ್ಷಮಯಾ ವಿನಿವರ್ತತೇ ॥೭॥

ಲೋಭದಿಂದ (ಅದು ಭಗ್ನವಾದಾಗ) ಕ್ರೋಧವು ಹುಟ್ಟುತ್ತದೆ. ಅದು ಪರರ ದೋಷದಿಂದ (ತನ್ನ ಲೋಭಕ್ಕೆ ಅಡ್ಡಿ ಮಾಡುವ ಪ್ರವೃತ್ತಿಗಳಿಂದ - ಲೋಭಿಯು ಈ ಪ್ರವೃತ್ತಿಗಳನ್ನು ನೋಡಿದಾಗ) ಉದ್ದೀಪನಗೊಳ್ಳುತ್ತದೆ. ತಾಳ್ಮೆಯಿಂದ ಉದ್ದೀಪನವು ನಿಲ್ಲುತ್ತದೆ. ತಾಳ್ಮೆಯಿಂದ ಅದರ (ಕ್ರೋಧದ) ನಿವೃತ್ತಿಯಾಗುತ್ತದೆ.

ಸಂಕಲ್ಪಾಜ್ಜಾಯತೇ ಕಾಮಃ ಸೇವ್ಯಮಾನೋ ವಿವರ್ಧತೇ ।
ಅವದ್ಯದರ್ಶನಾದ್ವೇತಿ ತತ್ತ್ವಜ್ಞಾನಾಚ್ಚ ಧೀಮತಾಮ್ ॥೮॥

'ಸಂಕಲ್ಪ' ಒಂದು ಮನೋವೃತ್ತಿ. ಕಾಮದ ಪೂರ್ವಸ್ಥಿತಿ. ಸಂಕಲ್ಪದಿಂದ ಕಾಮವು ಹುಟ್ಟುತ್ತದೆ. ಕಾಮನೆಗಳನ್ನು ಪೂರೈಸಿದರೆ ಅದು ಹೆಚ್ಚುತ್ತದೆ. ಧೀಮಂತರಿಗೆ ತತ್ತ್ವಜ್ಞಾನದ ಬಲದಿಂದ ಕಾಮವು ಹಾನಿಕರ ಎಂದು ತಿಳಿದರೆ ಅದು ನಾಶವಾಗುತ್ತದೆ.

ವಿರುದ್ಧಾನಿ ಹಿ ಶಾಸ್ತ್ರಾಣಿ ಪಶ್ಯಂತೀಹಾಲ್ಪಬುದ್ಧಯಃ ।
ವಿವಿತ್ಸಾ ಜಾಯತೇ ಯಸ್ಯ ತಸ್ಯೈವ ವಿನಿವರ್ತತೇ ॥೯॥

ಅಲ್ಪಬುದ್ಧಿಯ ಜನಗಳು ಶಾಸ್ತ್ರಗಳನ್ನು ವಿರುದ್ಧವಾಗಿ= ಅವುಗಳ ಕರ್ತೃಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಕಾಣುತ್ತಾರೆ. ಯಾರಿಗೆ ವಿಮರ್ಶೆಯು ಹುಟ್ಟುತ್ತದೋ ಅವರಿಗೆ ತತ್ತ್ವಜ್ಞಾನವು ಉದಯಿಸಿ ವಿರುದ್ಧ ಅಭಿಪ್ರಾಯದ ಪರಿಹಾರವಾಗುತ್ತದೆ.

ಪ್ರೀತೇಃ ಶೋಕಃ ಪ್ರಭವತಿ ವಿಯೋಗಾತ್ತಸ್ಯ ದೇಹಿನಃ ।
ಯದಾ ನಿರರ್ಥಕಂ ವೇತ್ತಿ ತದಾ ಸದ್ಯಃ ಪ್ರಣಶ್ಯತಿ ॥೧೦॥

ತನಗೆ ಯಾರ ಮೇಲೆ ಪ್ರೀತಿಯು ಇದೆಯೋ ಅವರಿಗೆ ತೊಂದರೆಯಾದಾಗ ಶೋಕವು ಉಂಟಾಗುತ್ತದೆ. ಈ ಶೋಕ ನಿರರ್ಥಕ ಎಂದು ಮನವರಿಕೆಯಾದಾಗ ಶೋಕದ ಪರಿಹಾರವಾಗುತ್ತದೆ.

ಪರಾಭೂತೇ ಕ್ರೋಧಲೋಭ ಅಭ್ಯಾಸಾಚ್ಚ ಪ್ರವರ್ಧತೇ ।
ದಯಯಾ ಸರ್ವಭೂತಾನಾಂ ನಿರ್ವೇದಾತ್ ಸ ನಿವರ್ತತೇ ॥೧೧॥

ಪರಾಭವ ಹೊಂದಿದ ವ್ಯಕ್ತಿಯಲ್ಲಿ ಕ್ರೋಧ ಮತ್ತು ಲೋಭಗಳು ಮತ್ತೆ ಮತ್ತೆ ಹೆಚ್ಚುತ್ತವೆ. ಸರ್ವಭೂತದಯೆಯಿಂದ ಮತ್ತು ಈ ಗುಣದಿಂದ ಹುಟ್ಟುವ ನಿರ್ವೇದ (ಅಧಿಕಾರ-ಆಡಂಬರಗಳಲ್ಲಿ ಮಾಲಿನ್ಯದರ್ಶನ) ದಿಂದ ಪರಾಭವವು (ಪರಾಭವ ಪ್ರಜ್ಞೆಯ ದುಷ್ಪರಿಣಾಮಗಳು) ದೂರವಾಗುತ್ತವೆ.

ಸತ್ತ್ವತ್ಯಾಗಾತ್ ತು ಮಾತ್ಸರ್ಯಮಹಿತಾನಾಂ ಚ ಸೇವಯಾ ।
ಏತತ್ ತು ಕ್ಷೀಯತೇ ತಾತ ಸಾಧೂನಾಮುಪಸೇವನಾತ್ ॥೧೨॥

ಸತ್ವ (ಶುದ್ಧ, ದೃಢ ಮನೋಬಲ ಮತ್ತು ಯುಕ್ತಾಯುಕ್ತ ವಿವೇಕ) ದ ತ್ಯಾಗದಿಂದ ಮತ್ತು ಅಹಿತಕರ ವಿಚಾರಗಳಲ್ಲಿ ಆಸಕ್ತಿಯಿಂದ ಮಾತ್ಸರ್ಯವು ಉಂಟಾಗುತ್ತದೆ. ಸಾಧುಜನಗಳ ಸಂಗದಿಂದ ಇದರ ಪರಿಹಾರವಾಗುತ್ತದೆ.

ಕುಲಾಜ್ಞಾನಾತ್ ತಥೈಶ್ವರ್ಯಾನ್ಮದೋ ಭವತಿ ದೇಹಿನಾಮ್ ।
ಏಭಿರೇವ ಯಥಾ ಜ್ಞಾತೈರ್ಮದಃ ಸದ್ಯಃ ಪ್ರಣಶ್ಯತಿ ॥೧೩॥

ಪ್ರತಿಷ್ಠಿತ ಕುಲ, ಉನ್ನತ ಜ್ಞಾನ, ಐಶ್ವರ್ಯ- ಇವುಗಳು ಮದಕ್ಕೆ ಕಾರಣ. ಈ ಮೂರು ತನಗೆ ಒದಗಿ ಬಂದಿರುವುದಕ್ಕೆ ಸರಿಯಾದ ಕಾರಣ- ಭಗವತ್ಕೃಪೆ ಎಂಬ ಜ್ಞಾನದಿಂದ ಮದವು ನಾಶವಾಗುತ್ತದೆ.

ಈರ್ಷ್ಯಾ ಕಾಮಾತ್ ಪ್ರಭವತಿ ಸಂಘರ್ಷಾಚ್ಚೈವ ಭಾರತ ।
ಇತರೇಷಾಂ ತು ಮರ್ತ್ಯಾನಾಂ ಪ್ರಜ್ಞಯಾ ಸಾ ಪ್ರಣಶ್ಯತಿ ॥೧೪॥

ಭರತಕುಲಸಂಜಾತ! ಈರ್ಷ್ಯೆಯು ಕಾಮದಿಂದ ಹುಟ್ಟುತ್ತದೆ. ಸಂಘರ್ಷದಿಂದಲೂ ಹುಟ್ಟುತ್ತದೆ. ಬೇರೆ ಜನಗಳ ಅಂದರೆ ಈರ್ಷ್ಯಾರಹಿತ ಜನಗಳ ಬಗ್ಗೆ ತಿಳಿದುಕೊಳ್ಳುವುದರಿಂದ ಈರ್ಷ್ಯೆಯ ಪರಿಹಾರವಾಗುತ್ತದೆ.

ವಿಭ್ರಮಾಲ್ಲೋಕಬಾಹ್ಯಾನಾಂ ದ್ವೇಷ್ಯೈರ್ವಾಕ್ಯೈರಸಂಗತೈಃ ।
ಕುತ್ಸಾ ಸಂಜಯತೇ ರಾಜನ್ ನಿಷೇವಾಭಿಃ ಪ್ರಶಾಮ್ಯತಿ ॥೧೫॥

ಲೋಕಜೀವನದ ಮೌಲ್ಯಗಳನ್ನು ಮೀರಿ ನಡೆಯುವವರು ಲೋಕಬಾಹ್ಯರು. ಅವರ ಅಸಂಗತ ಮಾತುಗಳಿಂದ ಉಂಟಾಗುವ ವಿಭ್ರಮೆಯಿಂದ ಕುತ್ಸಾ= ಪರನಿಂದಾ ಪ್ರವೃತ್ತಿಯು ಉಂಟಾಗುತ್ತದೆ. ವಿಪುಲ ಸಜ್ಜನರ ಸೇವೆಯಿಂದ ಇದರ ಪರಿಹಾರವಾಗುತ್ತದೆ.

ಪ್ರತಿಕರ್ತುಮಶಕ್ಯಾಯ ಬಲಸ್ಥಾಯಾಪಕಾರಿಣೇ ।
ಅಸೂಯಾ ಜಾಯತೇ ತೀವ್ರಾ ಕಾರುಣ್ಯಾದ್ ವಿನಿವರ್ತತೇ ॥೧೬॥

ತನಗೆ ಅಪಕಾರ ಮಾಡಿದ, ಪ್ರತಿಕಾರ ಮಾಡಲಾಗದಷ್ಟು ಬಲಶಾಲಿಯಾದ ಶತ್ರುವಿನ ಬಗ್ಗೆ ತೀವ್ರ ಅಸೂಯೆಯು ಹುಟ್ಟುತ್ತದೆ. ಆ ಬಲಶಾಲಿ ಶತ್ರುವು ಕಾರುಣ್ಯವನ್ನು ತೋರಿದರೆ ಅಸೂಯೆಯ ಪರಿಹಾರವಾಗುತ್ತದೆ.

ಕೃಪಣಾನ್ ಸತತಂ ದೃಷ್ಟ್ವಾ ತತಃ ಸಂಜಯತೇ ಕೃಪಾ ।
ಧರ್ಮನಿಷ್ಠಾಂ ಯದಾ ವೇತ್ತಿ ತದಾ ಶಾಮ್ಯತಿ ಸಾ ಕೃಪಾ ॥೧೭॥

ಸತತವಾಗಿ ಕೃಪಣರಾಗಿರುವವನನ್ನು (ಕೃಪಣ= ಸಣ್ಣ ಮನಸ್ಸಿನವನು, ಏಳ್ಗೆ ಇಲ್ಲದವನು) ನೋಡಿದರೆ ಮರುಕ ಹುಟ್ಟುತ್ತದೆ. ಅಂತಹ ವ್ಯಕ್ತಿಯಲ್ಲಿ ಧರ್ಮದ ಅವನತಿ (ನಿಷ್ಠಾ= ಅವನತಿ, ನಾಶ) ಯನ್ನು ಗಮನಿಸಿದಾಗ ಮರುಕವು ನಿವೃತ್ತವಾಗುತ್ತದೆ.

ಏತಾನ್ಯೇವ ಜಿತಾನ್ಯಾಹುಃ ಪ್ರಶಮೇಚ್ಚ ತ್ರಯೋದಶ ।
ಏತೇ ಹಿ ಧಾರ್ತರಾಷ್ಟ್ರಾಣಾಂ ಸರ್ವೇ ದೋಷಾಸ್ತ್ರಯೋದಶ ।
ತ್ವಯಾ ಸತ್ಯಾರ್ಥಿನಾ ನಿತ್ಯಂ ವಿಜಿತಾ ಜೇಷ್ಯಸೇ ಚ ತಾನ್ ॥೧೮॥

ಈ ಹದಿಮೂರನ್ನು ಪೂರ್ಣವಾಗಿ ಶಮನಗೊಳಿಸಬೇಕು. ಶಮನವೇ ಜಯ ಎಂದು ಪ್ರಾಜ್ಞರು ಹೇಳುತ್ತಾರೆ. ಈ ಹದಿಮೂರು ದೋಷಗಳೂ ಧೃತರಾಷ್ಟ್ರನ ಮಕ್ಕಳಿಗೆ ಇವೆ. ನೀನು ಸತ್ಯನಿಷ್ಠ. ಆದ್ದರಿಂದ ಇವುಗಳನ್ನು ನಿರಂತರ ಜಯಿಸಿರುವಿ. ಇನ್ನು ಮುಂದೆಯೂ ಜಯಿಸುವಿ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಏಕೋನತ್ರಿಶೋಂಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯವು ಮುಗಿಯಿತು.

★ ★ ★ ★

ಮೂವತ್ತನೆಯ ಅಧ್ಯಾಯ

ವಕ್ರ-ಕಠೋರ ಸ್ವಭಾವದ ಜನರು

ಯುಧಿಷ್ಠಿರಃ

ಆನೃಶಂಸ್ಯಂ ವಿಜಾನಾಮಿ ದರ್ಶನೇನ ಸತಾಂ ಸದಾ ।
ನೃಶಂಸಾನ್ನ ವಿಜಾನಾಮಿ ತೇಷಾಂ ಕರ್ಮ ಚ ಭಾರತ ॥೧॥

ಭರತಕುಲಸಂಜಾತ! ಸದಾ ಸಜ್ಜನರ ದರ್ಶನದಿಂದ ನನಗೆ ಸರಳ-ಮೃದು ಸ್ವಭಾವದ ಪರಿಚಯವಿದೆ. ವಕ್ರ-ಕಠೋರ ಸ್ವಭಾವದವರ (ನೃಶಂಸರ) ಮತ್ತು ಅವರ ಕಾರ್ಯಗಳ ಪರಿಚಯವಿಲ್ಲ.

ಕಂಟಕಾನ್ ಕೂಪಮಗ್ನಿಂ ಚ ವರ್ಜಯಂತಿ ಯಥಾ ನರಾಃ ।
ತಥಾ ನೃಶಂಸಕರ್ಮಾಣಂ ವರ್ಜಯಂತಿ ನರಾ ನರಮ್ ॥೨॥

ಮುಳ್ಳುಗಳಿಂದ, ಭಾವಿಯಿಂದ ಮತ್ತು ಅಗ್ನಿಯಿಂದ ಜನರು ದೂರವಿರುತ್ತಾರೆ. ಅಂದರೆ ಅವುಗಳಿಂದ ಅಪಾಯವಾಗದಂತೆ ಎಚ್ಚರವಹಿಸುತ್ತಾರೆ. ಹೀಗೆಯೇ ಜನರು ವಕ್ರ-ಕಠೋರ ಕೃತ್ಯಗಳನ್ನೆಸಗುವ ಜನರಿಂದ ದೂರವಿರುತ್ತಾರೆ.

ನೃಶಂಸೋ ಹ್ಯಧಮೋ ನಿತ್ಯಂ ಪ್ರೇತ್ಯ ಚೇಹ ಚ ಭಾರತ ।
ತಸ್ಮಾದ್ಬ್ರವೀಹಿ ಕೌರವ್ಯ ತಸ್ಯ ಧರ್ಮವಿನಿಶ್ಚಯಮ್ ॥೩॥

ಭಾರತ! ನೃಶಂಸನು ಈ ಜೀವನದಲ್ಲಿ ಅಧಮ. ಮರಣಾನಂತರದಲ್ಲಿ ಅಧಮ. ಯಾವಾಗಲೂ ಅಧಮ. ಆದ್ದರಿಂದ, ಕುರುಕುಲಸಂಜಾತ! ಅವನ ಧರ್ಮ=ವರ್ತನೆ, ಪ್ರವೃತ್ತಿ, ಸ್ವಭಾವ-ವನ್ನು ಕುರಿತು ಹೇಳಿರಿ.

ಭೀಷ್ಮಃ

ಸ್ಪೃಹಾಸ್ಯಾಂತರ್ಹಿತಾ ಚೈವ ವಿದಿತಾರ್ಥಾ ಚ ಕರ್ಮಣಾ ।
ಆಕ್ರೋಷ್ಟಾ ಕ್ರುಶ್ಯತೇ ಚೈವ ಬಂಧಿತಾ ಬಧ್ಯತೇ ಚ ಯಃ ॥೪॥

ಇವರ ಆಸೆಗಳು ಒಳಗೇ ಅಡಗಿರುತ್ತವೆ. ಬೇರೆಯವರಿಗೆ ತಿಳಿಯುವುದಿಲ್ಲ. ಅವನ ಕೃತ್ಯಗಳಿಂದ ಕ್ರಮೇಣ ತಿಳಿಯುತ್ತದೆ. ಇವನು ಸುಮ್ಮನೆ ಆಕ್ರೋಶ ಮಾಡುತ್ತಾನೆ. ಬೇರೆಯವರಿಂದ ಆಕ್ರೋಶಕ್ಕೆ ಒಳಗಾಗುತ್ತಾನೆ. ಬೇರೆಯವರನ್ನು ಇಕ್ಕಟ್ಟಿಗೆ ಗುರಿಯಾಗಿಸುತ್ತಾನೆ. ತಾನೂ ಇಕ್ಕಟ್ಟಿಗೆ ಗುರಿಯಾಗುತ್ತಾನೆ.

ದತ್ತಾನುಕೀರ್ತಿರ್ವಿಷಮಃ ಕ್ಷುದ್ರೋ ನೈಕೃತಿಕಃ ಶಠಃ ।
ಅಸಂಭೋಗೀ ಚ ಮಾನೀ ಚ ತಥಾ ಸಂಗೀ ವಿಕತ್ಥನಃ ॥೫॥

ದಾನ ಮಾಡಿದರೆ ಅದನ್ನು ಹೇಳಿಕೊಳ್ಳುತ್ತಾನೆ. ಸಮಬುದ್ಧಿಯವನಲ್ಲ. ಕ್ಷುದ್ರ, ವಂಚಕ, ಶಠ. ಭೋಗ್ಯವಸ್ತುಗಳನ್ನು ಅರ್ಹರಿಗೆ ಕೊಡದೆ ತಾನೊಬ್ಬನೇ ಅನುಭವಿಸುತ್ತಾನೆ. ದುರಭಿಮಾನಿ, ಅನುಚಿತ ಆಸಕ್ತಿವುಳ್ಳವನು. ಆತ್ಮಶ್ಲಾಘನೆ ಮಾಡಿಕೊಳ್ಳುವವನು.

ಸರ್ವಾತಿಶಂಕೀ ಪರುಷೋ ಬಾಲಿಶಃ ಕೃಪಣಸ್ತಥಾ ।
ವರ್ಗಪ್ರಶಂಸೀ ಸತತಮಾಶ್ರಮದ್ವೇಷಸಂಕರೀ ॥೬॥

ಎಲ್ಲರ ಬಗ್ಗೆಯೂ ಅತಿ ಸಂಶಯವುಳ್ಳವನು. ಕಠೋರ, ಎಳಸು, ಜಿಪುಣ, ಗುಂಪುಗಾರಿಕೆ ಯವನು. ವರ್ಣಾಶ್ರಮಗಳ ವ್ಯವಸ್ಥೆಯನ್ನು ದ್ವೇಷಿಸುತ್ತಾನೆ. ಅವುಗಳಲ್ಲಿ ಸಾಂಕರ್ಯವನ್ನುಂಟು ಮಾಡುತ್ತಾನೆ.

ಹಿಂಸಾವಿಹಾರೀ ಸತತಮವಿಶೇಷಗುಣಾಗುಣಃ ।
ಬಹ್ವಲೀಕೋ ಮನಸ್ವೀ ಚ ಲುಬ್ಧೋಽತ್ಯರ್ಥಂ ನೃಶಂಸಕೃತ್ ॥೭॥

ಪರರನ್ನು ಹಿಂಸಿಸಿ ಸಂತೋಷಪಡುತ್ತಾನೆ. ಗುಣ-ದೋಷಗಳನ್ನು ಸಮವಾಗಿ ಕಾಣುತ್ತಾನೆ. ಬಹಳ ಸುಳ್ಳು ಹೇಳುತ್ತಾನೆ. ಸ್ವಚ್ಛಂದ ಪ್ರವೃತ್ತಿಯವನು. ಲೋಭಿ, ಬಹಳ ಕ್ರೂರ ಕೆಲಸಗಳನ್ನು ಮಾಡುತ್ತಾನೆ.

ಧರ್ಮಶೀಲಂ ಗುಣೋಪೇತಂ ಪಾಪ ಇತ್ಯವಗಚ್ಛತಿ ।
ಆತ್ಮಶೀಲಾನುಮಾನೇನ ನ ವಿಶ್ವಸಿತಿ ಕಸ್ಯಚಿತ್ ॥೮॥

ಧರ್ಮನಿಷ್ಠನನ್ನು, ಗುಣಸಂಪನ್ನನನ್ನು ಪಾಪಿ ಎಂದು ತಿಳಿಯುತ್ತಾನೆ. ತನ್ನ ಸ್ವಭಾವಕ್ಕೆ ಅನುಗುಣವಾಗಿ ಬೇರೆಯವರ ವ್ಯಕ್ತಿತ್ವವನ್ನು ಕಲ್ಪಿಸುತ್ತಾನೆ. ಯಾರ ಮೇಲೂ ವಿಶ್ವಾಸವಿಲ್ಲದವನು.

ಪರೇಷಾಂ ಯತ್ರ ದೋಷಃ ಸ್ಯಾತ್ತದ್ ಗುಹ್ಯಂ ಸಂಪ್ರಕಾಶಯೇತ್ ।
ಸಮಾನೇಷ್ವೇವ ದೋಷೇಷು ವೃತ್ತ್ಯರ್ಥಮುಪಘಾತಯೇತ್ ॥೯॥

ಯಾವ ರಹಸ್ಯಗಳನ್ನು ಬಹಿರಂಗ ಮಾಡಿದರೆ ಪರರಿಗೆ ತೊಂದರೆಯಾಗುವುದೋ ಆ ರಹಸ್ಯಗಳನ್ನು ಬಹಿರಂಗಗೊಳಿಸುತ್ತಾನೆ. ಇತರರಲ್ಲಿ ಇರುವ ದೋಷಗಳು ತನ್ನಲ್ಲಿ ಇದ್ದರೂ ತನ್ನ ವೃತ್ತಿಯ ರಕ್ಷಣೆಗಾಗಿ, ವೃದ್ಧಿಗಾಗಿ ಪರರಿಗೆ ಹಾನಿ ಮಾಡುತ್ತಾನೆ.

ತಥೋಪಕಾರಿಣಂ ಚೈವ ಮನ್ಯತೇ ವಂಚಿತಂ ಪರಮ್ ।
ದತ್ತ್ವಾಪಿ ಚ ನಯಂ ಕಾಲೇ ಸಂತರತ್ಯುಪಕಾರಿಣೇ ॥೧೦॥

ತನಗೆ ಉಪಕಾರ ಮಾಡಿದವನ ಬಗ್ಗೆ, ''ಉಪಕಾರ ಮಾಡುವಂತೆ ನಾನು ಅವನನ್ನು ವಂಚಿಸಿದ್ದೇನೆ'' ಎಂದು ಭಾವಿಸುತ್ತಾನೆ. ಉಪಕಾರ ಮಾಡಿದವನಿಗೆ ತಾನು ಪ್ರತ್ಯುಪಕಾರ ಮಾಡುವ ಕಾಲ ಬಂದಾಗ ಬರಿ ನಯವಾದ ಮಾತುಗಳನ್ನಾಡಿ ಕಾಲಕಳೆಯುತ್ತಾನೆ.

ಭಕ್ಷ್ಯಂ ಭೋಜ್ಯಮಥೋ ಲೇಹ್ಯಂ ಯಚ್ಚಾನ್ಯತ್ ಸಾಧು ಭೋಜನಮ್।
ಪ್ರೇಕ್ಷಮಾಣೇಷು ಯೋಽಶ್ನೀಯಾನ್ನೃಶಂಸ ಇತಿ ತಂ ವಿದುಃ ॥೧೧॥

ಭಕ್ಷ್ಯ, ಭೋಜ್ಯ, ಲೇಹ್ಯ ಮೊದಲಾದ ಒಳ್ಳೆಯ ಭೋಜ್ಯ ಪದಾರ್ಥಗಳನ್ನು ಬೇರೆಯವರು ನೋಡುತ್ತಿರುವಾಗ ತಾನೊಬ್ಬನೇ ತಿನ್ನುತ್ತಾನೆ. ಇವನು ಅತಿನೃಶಂಸ ಎಂದು ಜನರು ತಿಳಿಯುತ್ತಾರೆ.

ಬ್ರಾಹ್ಮಣೇಭ್ಯಃ ಪ್ರದಾಯಾಗ್ರಂ ಯಃ ಸುಹೃದ್ಭಿಃ ಸಹಾಶ್ನುತೇ ।
ಸ ಪ್ರೇತ್ಯ ಲಭತೇ ಸ್ವರ್ಗಮಿಹ ಚಾನಂತ್ಯಮಶ್ನುತೇ ॥೧೨॥

ಬ್ರಹ್ಮನಿಷ್ಠರಿಗೆ ಅಗ್ರಭೋಜನವನ್ನು ಕೊಟ್ಟು ಅನಂತರ ತನ್ನ ಸುಹೃದ್‌ಗಳ ಜೊತೆ ಯಾರು ಭೋಜನವನ್ನು ಮಾಡುತ್ತಾನೋ ಅವನು ಮರಣಾನಂತರ ಸ್ವರ್ಗವನ್ನು ಹೊಂದುತ್ತಾನೆ. ಈ ಜೀವನದಲ್ಲೂ ಅಕ್ಷಯ ಸಂಪತ್ತನ್ನು ಹೊಂದುತ್ತಾನೆ.

ಏಷ ತೇ ಭರತಶ್ರೇಷ್ಠ ನೃಶಂಸಃ ಪರಿಕೀರ್ತಿತಃ ।
ಸದಾ ವಿವರ್ಜನೀಯೋ ವೈ ಪುರುಷೇಣ ಬುಭೂಷತಾ ॥೧೩॥

ಭರತಶ್ರೇಷ್ಠ! ನೃಶಂಸನ ಬಗ್ಗೆ ನಿನಗೆ ವಿವರಿಸಿದ್ದೇನೆ. ಸುಸ್ಥಿತಿಯಲ್ಲಿ ಇರಲು ಬಯಸುವವನು ನೃಶಂಸನನ್ನು ಸದಾ ದೂರವಿರಿಸಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ತ್ರಿಶೋಂಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ತನೆಯ ಅಧ್ಯಾಯವು ಮುಗಿಯಿತು.

★ ★ ★ ★

ಮೂವತ್ತೊಂದನೆಯ ಅಧ್ಯಾಯ

ಯಜ್ಞವಿಧಿ. ಯಜ್ಞ ಮಾಡುವವರಿಗಾಗಿ ರಾಜನ ಕರ್ತವ್ಯ. ದಕ್ಷಿಣೆ-ದಾನ. ಪಾಪಗಳಿಂದ ಉಂಟಾಗುವ ದುಸ್ಥಿತಿಗಳು. ನಾನಾ ಪ್ರಾಯಶ್ಚಿತ್ತಗಳು.

ಭೀಷ್ಮಃ

ಏತೇ ವೈ ಸಾಧವೋ ದೃಷ್ಟಾ ಬ್ರಾಹ್ಮಣಾ ಧರ್ಮಭಿಕ್ಷವಃ ।
ಅಸ್ವೇಭ್ಯೋ ದೇಯಮೇತೇಭ್ಯೋ ದಾನಂ ವಿದ್ಯಾವಿಶೇಷತಃ ॥೧॥

ಸಾಧು ಬ್ರಾಹ್ಮಣರು ಧರ್ಮಭಿಕ್ಷುಗಳಾಗಿ (ಧರ್ಮಾಚರಣೆಗಾಗಿ ಧನ ಮೊದಲಾದವುಗಳನ್ನು ಬೇಡುವವರಾಗಿ) ಕಂಡು ಬಂದಿದ್ದಾರೆ. ಧನರಹಿತರಾದ ಇವರಿಗೆ ಇವರ ವಿದ್ಯೆಯ ಉತ್ಕರ್ಷಕ್ಕೆ ಅನುಗುಣವಾಗಿ ಧನ ಮೊದಲಾದವುಗಳನ್ನು ಕೊಡಬೇಕು.

ಕೃತಾಥೋ ಯಕ್ಷ್ಯಮಾಣಶ್ಚ ಸರ್ವವೇದಾಂತಗಶ್ಚ ಯಃ ।
ಆಚಾರ್ಯಪಿತೃಭಾರ್ಯಾರ್ಥಂ ಸ್ವಾಧ್ಯಾಯಾರ್ಥಮಥಾಪಿ ವಾ ॥೨॥

ಯಾರು ಸರ್ವವೇದಾಂತ ಪಾರಂಗತನೋ, ಯಜ್ಞಗಳನ್ನು ಮಾಡುತ್ತಾನೋ, ಆದರೆ ಅವನ ಧನ ಮೊದಲಾದವುಗಳು ಮುಗಿದು ಹೋಗಿವೆಯೋ, ಅವನಿಗೆ ಗುರು-ಸತ್ಕಾರ-ಮಾತಾಪಿತೃ ಪರಿಪಾಲನೆ- ಭಾರ್ಯಾ ಪೋಷಣೆಗಳಿಗಾಗಿ ಮತ್ತು ವೇದ ಶಾಸ್ತ್ರಗಳ ಅಧ್ಯಯನ-ಅಧ್ಯಾಪನಕ್ಕಾಗಿ ಧನ ಮೊದಲಾದವುಗಳನ್ನು ಕೊಡಬೇಕು.

ಅನ್ಯತ್ರ ದಕ್ಷಿಣಾದಾನಂ ದೇಯಂ ಭರತಸತ್ತಮ ।
ಅನ್ಯೇಭ್ಯೋಽಪಿ ಬಹಿರ್ವೇದಿ ಪ್ರಾಕೃತಾಂತಂ ವಿಧೀಯತೇ ॥೩॥

ಭರತಕುಲಶ್ರೇಷ್ಠ! ಯಜ್ಞವೇದಿಕೆಯ ಹೊರಗೆ ಸಾಮಾನ್ಯರವರೆಗೆ (ವೇದಾಂತ ಪಾರಂಗತರಲ್ಲದವರು ಸಾಮಾನ್ಯರು) ಎಲ್ಲರಿಗೆ ದಾನ ಮಾಡಬೇಕೆಂದು ವಿಧಿ ಇದೆ. ಇವರಿಗೆ ದಕ್ಷಿಣೆಯನ್ನು ಕೊಡಬಾರದು.

ಸರ್ವರತ್ನಾನಿ ರಾಜಾ ಚ ಯಥಾರ್ಹಂ ಪ್ರತಿಪಾದಯೇತ್ ।
ಬ್ರಾಹ್ಮಣಾಯೈವ ಯಜ್ಞಾಶ್ಚ ಸಹಾನ್ನಾಃ ಸಹದಕ್ಷಿಣಾಃ ॥೪॥

ರಾಜನು ಬ್ರಾಹ್ಮಣರಿಗೆ ಸಕಲ ಅಮೂಲ್ಯ ಪದಾರ್ಥಗಳನ್ನು ಅವರ ಅರ್ಹತೆಗೆ ಅನುಗುಣವಾಗಿ ಕೊಡಬೇಕು. ಅನ್ನದಾನ ಮತ್ತು ದಕ್ಷಿಣೆಗಳು ಯಜ್ಞಗಳ ಅಂಗ. ಇವೆರಡು ಇಲ್ಲದೆ ಯಜ್ಞಗಳು ಅಪೂರ್ಣ.

ಯಸ್ಯ ತ್ರೈವಾರ್ಷಿಕಂ ಭಕ್ತಂ ಪರ್ಯಾಪ್ತಂ ಭೃತ್ಯವೃತ್ತಯೇ ।
ಅಧಿಕಂ ವಾಪಿ ವಿದ್ಯೇತ ಸ ಸೋಮಂ ಪಾತುಮರ್ಹತಿ ॥೫॥

ಯಾವ ಬ್ರಾಹ್ಮಣರ ಬಳಿ ತನ್ನ ಕುಟುಂಬವರ್ಗದವರ ಪಾಲನೆಗೆ ಮೂರು ವರ್ಷಗಳಿಗೆ ಸಾಕಾಗುವಷ್ಟು ಅಥವಾ ಇನ್ನೂ ಹೆಚ್ಚು ಆಹಾರ ಪದಾರ್ಥಗಳು ಇವೆಯೋ ಆ ಬ್ರಾಹ್ಮಣನು ಸೋಮಯಾಗವನ್ನು ಮಾಡಲು ಅರ್ಹ.

ಯಜ್ಞಶ್ಚೇತ್ ಪ್ರತಿವಿದ್ಧಃ ಸ್ಯಾದಂಗೇನೈಕೇನ ಯಜ್ವನಃ ।
ಬ್ರಾಹ್ಮಣಸ್ಯ ವಿಶೇಷೇಣ ಧಾರ್ಮಿಕೇ ಸತಿ ರಾಜನಿ ॥೬॥

ಯೋ ವೈಶ್ಯಃ ಸ್ಯಾದ್ ಬಹುಪಶುರ್ಹೀನಕ್ರತುರಸೋಮಪಃ ।
ಕುಟುಂಬಾತ್ತಸ್ಯ ತದ್ ದ್ರವ್ಯಂ ಯಜ್ಞಾರ್ಥಂ ಪಾರ್ಥಿವೋ ಹರೇತ್ ॥೭॥

ರಾಜನು ಧಾರ್ಮಿಕನಾಗಿರುವಾಗ ಯಾಗನಿರತನ, ವಿಶೇಷವಾಗಿ ಬ್ರಾಹ್ಮಣನ (ಧನದಿಂದ ನಿರ್ವಾಹವಾಗುವ) ಯಜ್ಞವು ಯಾವುದಾದರೂ ಒಂದು ಅಂಗದಿಂದ ತಡೆಗೆ ಒಳಗಾದರೆ, ಆಗ ವಿಪುಲ ಪಶುಸಂಪತ್ತನ್ನು ಹೊಂದಿರುವ, ಕ್ರತುಗಳನ್ನು ಮಾಡದ, ಸೋಮಯಾಗವನ್ನು ಆಚರಿಸದ ವೈಶ್ಯನ ಕುಟುಂಬದಿಂದ ಆ ಬ್ರಾಹ್ಮಣನ ಯಜ್ಞವು ಪೂರ್ಣವಾಗಲು ಬೇಕಾದ ಧನವನ್ನು ರಾಜನು ತೆಗೆದುಕೊಳ್ಳಬೇಕು.

ಆಹರೇದ್ ವೇಶ್ಮತಃ ಕಿಂಚಿತ್ ಕಾಮಂ ಶೂದ್ರಸ್ಯ ದ್ರವ್ಯತಃ ।
ನ ಹಿ ವೇಶ್ಮನಿ ಶೂದ್ರಸ್ಯ ಕಶ್ಚಿದಸ್ತಿ ಪರಿಗ್ರಹಃ ॥೮॥

ಶೂದ್ರನ ಮನೆಯ ದ್ರವ್ಯದಿಂದ ಸ್ವಲ್ಪ ದ್ರವ್ಯವನ್ನು ಸಂಕೋಚವಿಲ್ಲದೆ ತೆಗೆದುಕೊಳ್ಳಬೇಕು. ಶೂದ್ರನ ಮನೆಯಲ್ಲಿ ಯಾವುದೇ ವ್ರತ, ಅನುಷ್ಠಾನಗಳು ಇಲ್ಲ. (ಆದ್ದರಿಂದ ಅವನ ದ್ರವ್ಯವನ್ನು ರಾಜನು ತೆಗೆದುಕೊಳ್ಳಬಹುದು).

ಯೋಽನಾಹಿತಾಗ್ನಿಃ ಶತಗುರಯಜ್ವಾ ಚ ಸಹಸ್ರಗುಃ ।
ತಯೋರಪಿ ಕುಟುಂಬಾಭ್ಯಾಮಾಹರೇದವಿಚಾರಯನ್ ॥೯॥

ಯಾವ ವೈಶ್ಯನು ನೂರು ಹಸುಗಳ ಒಡೆಯನೋ, ಅಗ್ನಿಹೋತ್ರವನ್ನು ಆಚರಿಸುವುದಿಲ್ಲವೋ ಮತ್ತು ಯಾವ ವೈಶ್ಯನು ಸಾವಿರ ಹಸುಗಳ ಒಡೆಯನೋ, ಯಜ್ಞಗಳನ್ನು ಮಾಡುವುದಿಲ್ಲವೋ, ಅವರಿಬ್ಬರ ಕುಟುಂಬಗಳಿಂದ ಸಂಶಯವಿಲ್ಲದೆ ಯಜ್ಞಕ್ಕಾಗಿ ಧನವನ್ನು ತೆಗೆದುಕೊಳ್ಳಬೇಕು.

ಅದಾತೃಭ್ಯೋ ಹರೇನ್ನಿತ್ಯಂ ವ್ಯಾಖ್ಯಾಪ್ಯ ನೃಪತಿಃ ಪ್ರಭೋ ।
ತಥಾ ಹ್ಯಾಚರತೋ ಧರ್ಮೋ ನೃಪತೇಃ ಸ್ಯಾದಥಾಖಿಲಃ ॥೧೦॥

ದಾನಶೀಲರಲ್ಲದವರಿಂದ ರಾಜನು ಅವರ ಆ ದೋಷವನ್ನು ಜನರಿಗೆ ತಿಳಿಸಿ ಧನವನ್ನು ತೆಗೆದುಕೊಳ್ಳಬೇಕು. ಹಾಗೆ ಮಾಡುವ ರಾಜನಿಗೆ ಸಕಲ ಧರ್ಮಾಚರಣೆಗಳ ಫಲವು ಲಭಿಸುತ್ತದೆ.

ಯಥೈವ ಸಪ್ತಮೇ ಭಕ್ತೇ ಭಕ್ತಾನಿ ಷಡನಿಃಸ್ವತಾ ।
ಅಶಸ್ತನವಿಧಾನೇನ ಹರ್ತವ್ಯಂ ಹೀನಕರ್ಮಣಃ ॥೧೧॥

ಅಲ್ಪಹೀನ ಕರ್ಮವನ್ನು ಮಾಡಿದ ಮನುಷ್ಯನಿಂದ ಏಳು ದಿವಸಗಳ ಆಹಾರಕ್ಕೆ ಸಾಕಾಗುವಷ್ಟು ಪದಾರ್ಥಗಳನ್ನು ಉಳಿಸಿ ಎಲ್ಲವನ್ನೂ ತೆಗೆದುಕೊಳ್ಳಬೇಕು. ಮಧ್ಯಮ ಹೀನ ಕರ್ಮವನ್ನು ಮಾಡಿದ ಪುರುಷನಿಂದ ಆರು ದಿವಸಗಳ ಆಹಾರಕ್ಕೆ ಸಾಕಾಗುವಷ್ಟು ಪದಾರ್ಥಗಳನ್ನು ಉಳಿಸಿ ಎಲ್ಲವನ್ನೂ ತೆಗೆದುಕೊಳ್ಳಬೇಕು. ಅತಿಹೀನ ಕರ್ಮವನ್ನು ಮಾಡಿದವನಿಂದ ಮರುದಿವಸದ ಆಹಾರಕ್ಕೆ ಉಳಿಯದಂತೆ ಎಲ್ಲವನ್ನೂ ತೆಗೆದುಕೊಳ್ಳಬೇಕು. (ಈ ಅಭಿಪ್ರಾಯವು ಶ್ರೀವಾದಿರಾಜರ ಲಕ್ಷಾಲಂಕಾರ-ವ್ಯಾಖ್ಯಾನದಲ್ಲಿದೆ).

ಸ್ಥಲಾತ್ ಕ್ಷೇತ್ರಾತ್ ತಥಾಗಾರಾದ್ ಯೋ ಹೃತೋ ವೋಪಪದ್ಯತೇ ।
ಆಖ್ಯಾ ನಾಸ್ಯ ಚ ತತ್ಕೈತತ್ ಪೃಚ್ಛತೋಽಪೃಚ್ಛತೋಽಪಿ ವಾ ।
ನ ತಸ್ಮೈ ಧಾರಯೇದ್ ದಂಡಂ ರಾಜಾ ಧರ್ಮೇಣ ಧರ್ಮವಿತ್ ॥

ಗ್ರಾಮದಿಂದ, ಹೊಲದಿಂದ, ಮನೆಗಳಿಂದ ಆಹಾರ ಪದಾರ್ಥಗಳನ್ನು ತೆಗೆದುಕೊಂಡರೂ ತಪ್ಪಿಲ್ಲ. ಈ ಬಗ್ಗೆ ರಾಜನಿಗೆ, ಅವನು ಪ್ರಶ್ನಿಸಲಿ, ಪ್ರಶ್ನಿಸದಿರಲಿ, ತಿಳಿಸಬೇಕು. ಹೀಗೆ ಮಾಡುವ ಪುರುಷನಿಗೆ ಧರ್ಮಜ್ಞನಾದ ರಾಜನು ಶಿಕ್ಷೆಯನ್ನು ಕೊಡಬಾರದು. ಶಿಕ್ಷೆಯನ್ನು ಕೊಡದಿರುವುದು ಧರ್ಮ.

ಕ್ಷತ್ರಿಯಸ್ಯ ಹಿ ಬಾಲಿಶ್ಯಾದ್ಬ್ರಾಹ್ಮಣಃ ಕ್ಲಿಶ್ಯತೇ ಕ್ಷುಧಾ ।
ಶ್ರುತಶೀಲೇ ಸಮಾಜ್ಞಾಯ ವೃತ್ತಿಮಸ್ಯ ಪ್ರಕಲ್ಪಯೇತ್ ॥
ಅಥೈನಂ ಪರಿರಕ್ಷೇತ ಪಿತಾ ಪುತ್ರಮಿವೌರಸಮ್ ॥೧೩॥

ಬ್ರಾಹ್ಮಣನು ಹಸಿವೆಯ ಕ್ಲೇಶಕ್ಕೆ ಒಳಗಾದರೆ, ಇದಕ್ಕೆ ಕ್ಷತ್ರಿಯನ, ಅಂದರೆ, ರಾಜನ ಬಾಲಿಶತನವೇ ಕಾರಣ. ಬ್ರಾಹ್ಮಣನ ವಿದ್ಯೆ-ಶೀಲಗಳನ್ನು ತಿಳಿದು ರಾಜನು ಬ್ರಾಹ್ಮಣನಿಗೆ ಜೀವನೋಪಾಯವನ್ನು ಕಲ್ಪಿಸಬೇಕು. ತಂದೆಯು ತನ್ನ ಔರಸಪುತ್ರನನ್ನು (ತನ್ನಿಂದಲೇ ಜನಿಸಿದ ಪುತ್ರನನ್ನು) ರಕ್ಷಿಸುವಂತೆ ರಾಜನು ಅರ್ಹಬ್ರಾಹ್ಮಣನನ್ನು ರಕ್ಷಿಸಬೇಕು.

ಇಷ್ಟಂ ವೈಶ್ವಾನರೇ ನಿತ್ಯಂ ದತ್ತಂ ವೇದ ನ ವಿಪರ್ಯಯೇ ।
ಅವಿಕಲ್ಪಃ ಪುರಾ ಧರ್ಮೋ ಧರ್ಮವಾದೈಸ್ತು ಕೇವಲಮ್ ॥೧೪॥

ಬ್ರಾಹ್ಮಣರಿಗೆ ದಾನ ಮಾಡಿದರೆ, ಅದು ಅಗ್ನಿಯಲ್ಲಿ ಅರ್ಪಿಸಿದ ಆಹುತಿ ಎಂದು ತಿಳಿ. ಬ್ರಾಹ್ಮಣನಿಗೆ ದಾನ ಮಾಡದಿದ್ದರೆ ಯಾಗವನ್ನು ಮಾಡಿದರೂ ಮಾಡದಂತೆ

ಎಂದು ತಿಳಿ. ಪೂರ್ವಕಾಲದಲ್ಲಿ ಧರ್ಮಾಚರಣೆಯಲ್ಲಿ ವಿಕಲ್ಪವಿರಲಿಲ್ಲ. ಅಂದರೆ, ಇದನ್ನು ಮಾಡಬೇಕು, ಇದನ್ನು ಮಾಡದಿರಬಹುದು ಎಂಬ ವಿಚಾರಗಳಿರಲಿಲ್ಲ.

ವಿಶ್ವೈಸ್ತು ದೇವೈಃ ಸಾಧ್ಯೈಶ್ಚ ಬ್ರಾಹ್ಮಣೈಶ್ಚ ಮಹರ್ಷಿಭಿಃ ।
ಆಪತ್ಸು ಮರಣಾದ್ ಭೀತೈರ್ಲಿಂಗಪ್ರತಿನಿಧಿಃ ಕೃತಃ ॥೧೫॥

ವಿಶ್ವೇದೇವತೆಗಳು, ಸಾಧ್ಯರು, ಬ್ರಾಹ್ಮಣರು, ಮಹರ್ಷಿಗಳು ಮರ್ತ್ಯರಿಗಾಗಿ, ಅವರ ಆಪತ್ಕಾಲದಲ್ಲಿ ಲಿಂಗವನ್ನು= ಸಾಂಕೇತಿಕ ಕರ್ಮಗಳನ್ನು ಪ್ರಧಾನ ಕರ್ಮಗಳಿಗೆ ಪ್ರತಿನಿಧಿಯಾಗಿ ಕಲ್ಪಿಸಿದ್ದಾರೆ.

ಪ್ರಭುಃ ಪ್ರಥಮಕಲ್ಪೇ ಚ ಯೋಽನುಕಲ್ಪೇನ ವರ್ತತೇ ।
ನ ಸಾಂಪರಾಯಿಕಂ ತಸ್ಯ ದುರ್ಮತೇರ್ವಿದ್ಯತೇ ಫಲಮ್ ॥೧೬॥

(ಶಾಸ್ತ್ರಗಳು ಹೇಳಿರುವ ಸರ್ವಾಂಗಸಂಪನ್ನವಾದ ಆಚರಣೆಗಳು ಪ್ರಥಮಕಲ್ಪ. ಸಂಕ್ಷಿಪ್ತ ಆಚರಣೆಗಳು ಅನುಕಲ್ಪ). ಪ್ರಥಮಕಲ್ಪವನ್ನು ಅನುಸರಿಸಲು ಸಮರ್ಥನಾಗಿದ್ದರೂ ಅನುಕಲ್ಪವನ್ನು ಆಶ್ರಯಿಸಿರುವವನು ದುರ್ಮತಿ. ಇವನಿಗೆ ಮರಣಾನಂತರ ಸದ್ಗತಿಯಾಗುವುದಿಲ್ಲ.

ನ ಬ್ರಾಹ್ಮಣಾನ್ ವೇದಯೀತ ಕಶ್ಚಿದ್ ರಾಜಾ ನ ಧರ್ಮವಿತ್ ।
ಅವಿದ್ಯಾವೇದನಾದ್ ವಿದ್ಯಾತ್ ಸ್ವವೀರ್ಯಂ ವೀರ್ಯವತ್ತರಮ್ ।
ತಸ್ಮಾದ್ ರಾಜ್ಞಃ ಸದಾ ತೇಜೋ ದುಃಸಹಂ ಬ್ರಹ್ಮವಾದಿನಾಮ್ ॥೧೭॥

ಯಾವ ರಾಜನು ತನ್ನ ರಾಜ್ಯದ ಬ್ರಾಹ್ಮಣರ ಬಗ್ಗೆ ತಿಳಿದಿರುವುದಿಲ್ಲವೋ ಅವನು ಧರ್ಮವನ್ನು ಬಲ್ಲವನಲ್ಲ. ತನ್ನ (ಬ್ರಾಹ್ಮಣನ) ತೇಜಸ್ಸು ರಾಜನ ತೇಜಸ್ಸಿಗಿಂತ ಹೆಚ್ಚು ಬಲಶಾಲಿ ಎಂದು ತಿಳಿದಿರಬೇಕು. ಬ್ರಹ್ಮವಾದಿಗಳು ತೇಜಸ್ಸನ್ನು ರಾಜರು ಎಂದೂ ಸಹಿಸಲಾರರು.

ಗಂತಾ ಶಾಸ್ತಾ ವಿಧಾತಾ ಚ ಬ್ರಾಹ್ಮಣೋ ದೇವ ಉಚ್ಯತೇ ।
ತಸ್ಮಿನ್ನಾಕುಶಲಂ ಬ್ರೂಯಾನ್ನ ಶುಷ್ಕಾಮೀರಯೇದ್ ಗಿರಮ್ ॥೧೮॥

ಬ್ರಾಹ್ಮಣನು ಜ್ಞಾನಿ. (ಕಾರ್ಯ-ಅಕಾರ್ಯಗಳ ಬಗ್ಗೆ) ಅನುಶಾಸನ ಮಾಡಬಲ್ಲವನು. (ತನ್ನ ತೇಜಸ್ಸಿನಿಂದ) ಧಾರಣ-ಪೋಷಣಗಳನ್ನು ಮಾಡಬಲ್ಲವನು.

ಆದ್ದರಿಂದ ಇವನನ್ನು ದೇವ ಎನ್ನುತ್ತಾರೆ. ಅವನ ಬಗ್ಗೆ ಕೆಟ್ಟ ಮಾತುಗಳನ್ನು ಆಡಬಾರದು. ಅರ್ಥಹೀನ ಮಾತುಗಳನ್ನು ಆಡಬಾರದು.

ಕ್ಷತ್ರಿಯೋ ಬಾಹುವೀರ್ಯೇಣ ತರತ್ಯಾಪದಮಾತ್ಮನಃ ।
ಧನೇನಾವೈಶ್ಯಶೂದ್ರೇಣ ಮಂತ್ರೈರ್ಹೋಮೈಶ್ಚ ವೈ ದ್ವಿಜಃ ॥೧೯॥

ಕ್ಷತ್ರಿಯನು ಬಾಹುಬಲದಿಂದ ತನ್ನ ಆಪತ್ತನ್ನು ದಾಟುತ್ತಾನೆ. ಬ್ರಾಹ್ಮಣನು-ವೈಶ್ಯರದಲ್ಲದ, ಶೂದ್ರರದಲ್ಲದ ಧನದಿಂದ, ಮಂತ್ರಗಳಿಂದ ಮತ್ತು ಹೋಮಗಳಿಂದ ಆಪತ್ತನ್ನು ದಾಟುತ್ತಾನೆ.

ನ ವೈ ಕನ್ಯಾ ನ ಯುವತಿರ್ನಾಮಂತ್ರಜ್ಞೋ ನ ಬಾಲಿಶಃ ।
ಪರಿವೇಷ್ಟಾಗ್ನಿಹೋತ್ರಸ್ಯ ತತ್ತ್ವೇನಾಸಂಸ್ಕೃತಸ್ತಥಾ ।
ನರಕೇ ನಿಪತನ್ತ್ಯೇತೇ ಜುಹ್ವಾನಾಃ ಸ ಚ ಯಸ್ಯ ತತ್ ॥೨೦॥

ಮದುವೆಯಾಗದ ಹುಡುಗಿ ಅಗ್ನಿಯಲ್ಲಿ ಆಹುತಿಯನ್ನು ಹಾಕಬಾರದು. ತರುಣಿಯು ಹಾಕಬಾರದು. ಮಂತ್ರವನ್ನು ತಿಳಿಯದವನು ಹಾಕಬಾರದು. ಬಾಲಕನು ಹಾಕಬಾರದು. ಆಹುತಿ ಹಾಕಲು ಅರ್ಹತೆ ಪಡೆಯಲು ಬೇಕಾದ ಸಂಸ್ಕಾರವಿಲ್ಲದವನು ಹಾಕಬಾರದು. ಆಹುತಿ ಹಾಕುವ ಇವರು ನರಕದಲ್ಲಿ ಬೀಳುತ್ತಾರೆ. ಯಜ್ಞದ ಯಜಮಾನನೂ ಬೀಳುತ್ತಾನೆ.

ಪ್ರಾಜಾಪತ್ಯಮದತ್ತ್ವಾಶ್ವಮಗ್ನ್ಯಾಧೇಯಸ್ಯ ದಕ್ಷಿಣಾಮ್ ।
ಅನಾಹಿತಾಗ್ನಿರಿತಿ ಸ ಪ್ರೋಚ್ಯತೇ ಧರ್ಮದರ್ಶಿಭಿಃ ॥೨೧॥

ಅಗ್ನಿಯ ಆಧಾನಕ್ಕಾಗಿ ಆಚರಿಸುವ ಕರ್ಮ ಅಗ್ನ್ಯಾಧೇಯ. ಈ ಕರ್ಮವನ್ನು ಮಾಡುವವರು ಪ್ರಾಜಾಪತ್ಯ ಅಶ್ವವನ್ನು ದಕ್ಷಿಣೆಯಾಗಿ ಕೊಡಬೇಕು (ಪ್ರಜಾಪತಿಯ ಪ್ರೀತಿಗಾಗಿ ಅಶ್ವವನ್ನು ದಕ್ಷಿಣೆಯಾಗಿ ಕೊಡಬೇಕು. ಹೀಗೆ ಕೊಡಲ್ಪಡುವ ಅಶ್ವವು 'ಪ್ರಾಜಾಪತ್ಯ ಅಶ್ವ'). ಈ ದಕ್ಷಿಣೆಯನ್ನು ಕೊಡದಿದ್ದರೆ ಅಗ್ನ್ಯಾಧಾನ ಕರ್ಮವು ದೇವತೆಗಳಿಂದ ಮಾನ್ಯತೆಯನ್ನು ಪಡೆಯುವುದಿಲ್ಲ. ಆದ್ದರಿಂದ ಈ ಕರ್ಮವನ್ನು ಮಾಡಿದವನು. 'ಆಹಿತಾಗ್ನಿ' ಅಲ್ಲ ಎಂದು ಧರ್ಮದರ್ಶಿಗಳು ಹೇಳುತ್ತಾರೆ.

ಪುಣ್ಯಾನ್ಯನ್ಯಾನಿ ಕುರ್ವೀತ ಶ್ರದ್ದಧಾನೋ ಜಿತೇಂದ್ರಿಯಃ ।
ಅನಾಪ್ತದಕ್ಷಿಣೈರ್ಯಜ್ಞೈರ್ನ ಯಜೇತ ಕಥಂಚನ ॥೨೨॥

ಬೇರೆ ಪುಣ್ಯಕರ್ಮಗಳನ್ನು ಶ್ರದ್ಧಾವಂತನಾಗಿ, ಜಿತೇಂದ್ರಿಯನಾಗಿ ಮಾಡಬೇಕು. ದಕ್ಷಿಣೆಯನ್ನು ಕೊಡದೆ ಯಜ್ಞಗಳನ್ನು ಮಾಡಲೇಬಾರದು.

ಪ್ರಜಾಃ ಪಶೂಂಶ್ಚ ಸ್ವರ್ಗಂ ಚ ಹಂತಿ ಯಜ್ಞೋ ಹ್ಯದಕ್ಷಿಣಃ ।
ಇಂದ್ರಿಯಾಣಿ ಯಶಃ ಕೀರ್ತಿಮಾಯುಶ್ಚಾಸ್ಯೋಪಕೃಂತತಿ ॥೨೩॥

ದಕ್ಷಿಣೆಯಿಲ್ಲದ (ದಕ್ಷಿಣೆಯನ್ನು ಕೊಡದೆ ಮಾಡಲ್ಪಟ್ಟ) ಯಜ್ಞವು ಮಕ್ಕಳಿಗೆ ಹಾನಿಯನ್ನು ಮಾಡುತ್ತದೆ. ಪಶುಗಳಿಗೂ ಹಾನಿಯನ್ನು ಮಾಡುತ್ತದೆ. ಇಂತಹ ಯಜ್ಞದಿಂದ ಸ್ವರ್ಗದ ಪ್ರಾಪ್ತಿಯಾಗುವುದಿಲ್ಲ. ಹೀಗೆ ಯಜ್ಞವನ್ನು ಮಾಡಿದವನ ಇಂದ್ರಿಯಗಳು ಕುಂಠಿತವಾಗುತ್ತವೆ. ಕೀರ್ತಿಯ ನಾಶವಾಗುತ್ತದೆ. ಆಯುಷ್ಯದ ಛೇದವಾಗುತ್ತದೆ.

ಉದಕ್ಯಾ ಹ್ಯಾಸತೇ ಯೇ ಚ ಯೇ ಚ ಕೇಚಿದನಗ್ನಯಃ ।
ಕುಲಂ ಚಾಶ್ರೋತ್ರಿಯಂ ಯೇಷಾಂ ಸರ್ವೇ ತೇ ಶೂದ್ರಧರ್ಮಿಣಃ ॥

ಯಾವ ಪುರುಷರು ರಜಸ್ವಲೆಯ ಸಮಾಗಮವನ್ನು ಮಾಡುವರೋ, ಯಾರು ಅಗ್ನಿಯಲ್ಲಿ ಉಪಾಸನೆಯನ್ನು ಮಾಡುವುದಿಲ್ಲವೋ, ಯಾವ ಕುಲದಲ್ಲಿ ವೇದಾಧ್ಯಯನ ಮಾಡಿದವರು ಇಲ್ಲವೋ ಅವರೆಲ್ಲರೂ ಶೂದ್ರಸಮಾನರು.

ಉದಪಾನೋದಕೇ ಗ್ರಾಮೇ ಬ್ರಾಹ್ಮಣೋ ವೃಷಲೀಪತಿಃ ।
ಉಷಿತ್ವಾ ದ್ವಾದಶ ಸಮಾಃ ಶೂದ್ರಕರ್ಮೇಹ ಗಚ್ಛತಿ ॥೨೫॥

ನೀರಿಗಾಗಿ ಒಂದೇ ಭಾವಿಯನ್ನು ಅವಲಂಬಿಸಿರುವ ಗ್ರಾಮದಲ್ಲಿ ಶೂದ್ರಸ್ತ್ರೀ ಪತಿಯಾಗಿ ಹನ್ನೆರಡು ವರ್ಷ ವಾಸ ಮಾಡುವವನು ಶೂದ್ರನೇ ಆಗುತ್ತಾನೆ.

ಅನಾರ್ಯಾಂ ಶಯನೇ ಬಿಭ್ರದುಚ್ಛ್ವಸ್ ಬಿಭ್ರಚ್ಚ ಯೋ ದ್ವಿಜಾಮ್ ।
ಅಬ್ರಾಹ್ಮಣೋ ಮನ್ಯಮಾನಸ್ತೃಣೇಷ್ವಾಸೀತ ಪೃಷ್ಠತಃ ।
ತಥಾ ಸ ಶುಧ್ಯತೇ ರಾಜನ್ ಶೃಣು ಚಾತ್ರ ವಚೋ ಮಮ ॥೨೬॥

ಬ್ರಾಹ್ಮಣ ಕನ್ಯೆಯನ್ನು ಮದುವೆಯಾಗಿ, ಅವಳನ್ನು ತ್ಯಜಿಸಿ, ಅಬ್ರಾಹ್ಮಣ ಸ್ತ್ರೀ ಸಮಾಗಮವನ್ನು ಮಾಡಿದವನು ಬ್ರಾಹ್ಮಣತ್ವವನ್ನು ಕಳೆದುಕೊಳ್ಳುತ್ತಾನೆ. ತಾನು ಬ್ರಾಹ್ಮಣತ್ವವನ್ನು ಕಳೆದುಕೊಂಡಿದ್ದೇನೆ ಎಂದು ತಿಳಿದವನು ಹುಲ್ಲಿನ ಮೇಲೆ (ಸೂರ್ಯನ ಕಡೆ) ಬೆನ್ನು ಮಾಡಿ ಕುಳಿತುಕೊಳ್ಳಬೇಕು. ಹೀಗೆ ಮಾಡುವುದರಿಂದ ಶುದ್ಧನಾಗುತ್ತಾನೆ. ಈ ವಿಷಯದಲ್ಲಿ ನನ್ನ ಮುಂದಿನ ಮಾತುಗಳನ್ನು ಕೇಳು.

ಯದೇಕರಾತ್ರೇಣ ಕರೋತಿ ಪಾಪಂ
ಕಷ್ಟಂ ವರ್ಣಂ ಬ್ರಾಹ್ಮಣಃ ಸೇವಮಾನಃ ।
ಸ್ಥಾನಾಸನಾಭ್ಯಾಂ ವಿಚರನ್ ವ್ರತೀ ಸನ್
ತ್ರಿಭಿರ್ವರ್ಷೈಃ ಶಮಯೇದಾತ್ಮಪಾಪಮ್ ॥೨೭॥

ಬ್ರಾಹ್ಮಣನು ಒಂದು ರಾತ್ರಿ ಕೆಳಗಿನ ವರ್ಣದವರ ಸೇವೆಯನ್ನು ಮಾಡಿದರೆ, ಅವರ ಜೊತೆ ಇದ್ದರೆ, ಕುಳಿತರೆ ಅವನು ಮೂರು ವರ್ಷಗಳು ನಾನಾ ವ್ರತಗಳನ್ನು ಮಾಡಿದರೆ ಪಾಪದ ಪರಿಹಾರವಾಗುತ್ತದೆ.

ನ ನರ್ಮಯುಕ್ತಂ ವಚನಂ ಹಿನಸ್ತಿ ನ ಸ್ತ್ರೀಷು ರಾಜನ್ನ ವಿವಾಹಕಾಲೇ ।
ನ ಗುರ್ವರ್ಥೇ ನಾತ್ಮನೋ ಜೀವಿತಾರ್ಥೇ ಪಂಚಾನೃತಾನ್ಯಾಹುರಪಾತಕಾನಿ ॥

ವಿನೋದಕ್ಕಾಗಿ ಹೇಳುವ ಸುಳ್ಳು, ಸ್ತ್ರೀಯರ ಜೊತೆ ವ್ಯವಹರಿಸುವಾಗ ಹೇಳುವ ಸುಳ್ಳು, ವಿವಾಹ ಕಾಲದಲ್ಲಿ ಹೇಳುವ ಸುಳ್ಳು, ಗುರುಗಳಿಗೋಸ್ಕರ ಹೇಳುವ ಸುಳ್ಳು, ತನ್ನ ಬದುಕಿಗಾಗಿ ಹೇಳುವ ಸುಳ್ಳು- ಈ ಐದು ಸುಳ್ಳುಗಳು ಪಾಪವಲ್ಲ ಎಂದು ಹೇಳುತ್ತಾರೆ.

ಶ್ರದ್ದಧಾನಃ ಶುಭಾಂ ವಿದ್ಯಾಂ ಹೀನಾದಪಿ ಸಮಾಚರೇತ್ ।
ಸುವರ್ಣಮಪಿ ಚಾಮೇಧ್ಯಾದಾದದೀತೇತಿ ಧಾರಣಾ ॥೨೯॥

ಶ್ರದ್ಧೆ ಇದ್ದವನು ಹೀನರಿಂದಲೂ ಒಳ್ಳೆಯ ವಿದ್ಯೆಯನ್ನು ಪಡೆಯಬೇಕು. ಬಂಗಾರವನ್ನು ಅದು ಅಮೇಧ್ಯದಲ್ಲಿದ್ದರೂ ಅಲ್ಲಿಂದ ಪಡೆಯಬೇಕು. ಇದು ದೃಢ ಅಭಿಪ್ರಾಯ.

ಸ್ತ್ರೀರತ್ನಂ ದುಷ್ಕುಲಾಚ್ಚಾಪಿ ವಿಷಾದಪ್ಯಮೃತಂ ಪಿಬೇತ್ ।
ಅದುಷ್ಟಾ ಹಿ ಸ್ತ್ರಿಯೋ ರತ್ನಮಾಪ ಇತ್ಯೇವ ಧರ್ಮತಃ ॥೩೦॥

ದುಷ್ಕುಲದಲ್ಲಿ ಹುಟ್ಟಿದ ಶ್ರೇಷ್ಠ ಸ್ತ್ರೀಯನ್ನು ಪರಿಗ್ರಹಿಸಬೇಕು. ಕಹಿ ಔಷಧದಿಂದ ಅದರಲ್ಲಿರುವ ಅಮೃತವನ್ನು=ರೋಗವನ್ನು ಪರಿಹರಿಸುವ ರಸವನ್ನು ಸ್ವೀಕರಿಸಬೇಕು. ಶ್ರೇಷ್ಠ ಸ್ತ್ರೀ (ಲಕ್ಷಣ ಸಂಪನ್ನಳಾದ ಸ್ತ್ರೀ) ರತ್ನ ಮತ್ತು ನೀರು- ಈ ಮೂರು ಅವುಗಳಲ್ಲಿರುವ ಧರ್ಮದ (ಸ್ವಾಭಾವಿಕ ಲಕ್ಷಣ ಸಂಪನ್ನತೆ ಮತ್ತು ಪಾವಿತ್ರ್ಯ) ಕಾರಣದಿಂದ ದೋಷರಹಿತಗಳು.

ಗೋಬ್ರಾಹ್ಮಣಹಿತಾರ್ಥಂ ಚ ವರ್ಣಾನಾಂ ಸಂಕರೇಷು ಚ ।
ಗೃಹ್ಣೀಯಾತ್ ತು ಧನುರ್ವೈಶ್ಯಃ ಪರಿತ್ರಾಣಾಯ ಚಾತ್ಮನಃ ॥೩೧॥

ಗೋವುಗಳ ಮತ್ತು ಬ್ರಾಹ್ಮಣರ ಹಿತಕ್ಕಾಗಿ, ವರ್ಣಗಳ ಸಾಂಕರ್ಯವನ್ನು ತಡೆಯುವುದಕ್ಕಾಗಿ, ಆತ್ಮರಕ್ಷಣೆಗಾಗಿ ವೈಶ್ಯನು ಬಿಲ್ಲನ್ನು ಕೈಗೆ ತೆಗೆದುಕೊಳ್ಳಬೇಕು.

ಸುವರ್ಣಹರಣಂ ಸೈನ್ಯಂ ವಿಪ್ರಾಸಂಗಾಚ್ಚ ಪಾತಕಮ್ ।
ವಿಹಾರೋ ಮದ್ಯಪಾನಂ ಚಾಪ್ಯಗಮ್ಯಾಗಮನಂ ತಥಾ ॥೩೨॥

ಬಂಗಾರದ ಅಪಹಾರ, ಇತರ ಅಮೂಲ್ಯ ವಸ್ತುಗಳ ಕಳ್ಳತನ, ಬ್ರಾಹ್ಮಣ ಸ್ತ್ರೀ ಸಮಾಗಮ, ಮದ್ಯಪಾನ, ಸಮಾಗಮಕ್ಕೆ ಅನರ್ಹಳಾದ ಸ್ತ್ರೀಯೊಡನೆ ಸಮಾಗಮ,

ಸುರಾಪಾನಂ ಬ್ರಹ್ಮಹತ್ಯಾ ಗುರುತಲ್ಪಮಥಾಪಿ ವಾ ।
ಆಚಾರೇಣ ಮಹಾರಾಜ ಪತಿತೋ ವೈ ಭವತ್ಯುತ ।
ಅನಿರ್ದೇಶ್ಯಾನಿ ಮನ್ಯಂತೇ ಪ್ರಾಣಾಂತಾನೀತಿ ಧಾರಣಾ ॥೩೩॥

ಸುರಾಪಾನ, ಬ್ರಹ್ಮಹತ್ಯೆ, ಗುರುಪತ್ನೀ ಸಮಾಗಮ- ಇವು ಮಹಾಪಾತಕಗಳು. ಇವುಗಳನ್ನು ಮಾಡುವವರು ಪತಿತರಾಗುತ್ತಾರೆ. ಈ ಪಾತಕಗಳಿಗೆ ಪ್ರಾಯಶ್ಚಿತ್ತವನ್ನು ನಿರ್ದೇಶಿಸಲಾಗುವುದಿಲ್ಲ ಎಂದು ಹೇಳುತ್ತಾರೆ. ಪ್ರಾಣತ್ಯಾಗವೇ ಪ್ರಾಯಶ್ಚಿತ್ತ ಎಂದೂ ಹೇಳುತ್ತಾರೆ.

ಪತಿತೈಃ ಸಂಪ್ರಯೋಗಾಚ್ಚ ಬ್ರಾಹ್ಮಣ್ಯೈರ್ಯೋನಿತಸ್ತಥಾ ।
ಅನಿರ್ದೇಶ್ಯಾನಿ ಮನ್ಯಂತೇ ಪ್ರಾಣಾಂತಾನೀತಿಧಾರಣಾ ॥ ೩೪॥

(ಸ್ವನಿರ್ದೇಶ್ಯಾನಿ ಮನ್ಯಂತೇ ಪ್ರಾಣಾ ಇತಿ ಹಿ ಧಾರಣಾ)
ಇದು ಶ್ರೀವಾದಿರಾಜರಿಗೆ ಸಮ್ಮತವಾದ ಪಾಠ. ಅಭಿಪ್ರಾಯವು ಅಸ್ಪಷ್ಟ.

ಪತಿತರ ಸಂಗ, ಬ್ರಾಹ್ಮಣ ಸ್ತ್ರೀ ಸಮಾಗಮ- ಇವುಗಳು ಮಹಾಪಾತಕಗಳು. ಇವುಗಳಿಗೆ ಪ್ರಾಯಶ್ಚಿತ್ತವನ್ನು ಹೇಳಲಾಗುವುದಿಲ್ಲ ಎಂದು ಪ್ರಾಜ್ಞರ ಅಭಿಪ್ರಾಯ. ಮರಣದಲ್ಲಿ ಪರ್ಯವಸಾನವಾಗುವ ವ್ರತಗಳ ಅನುಷ್ಠಾನವೇ ಈ ಪಾತಕಗಳಿಗೆ ಪ್ರಾಯಶ್ಚಿತ್ತ.

ಸಂವತ್ಸರೇಣ ಪತತಿ ಪತಿತೇನ ಸಹಾಚರನ್ ।
ಯಾಜನಾಧ್ಯಾಪನಾನಾಂ ಚ ಚತುರ್ಥಾನಾಂ ಸಮೀಹನಾತ್ ॥೩೫॥

ಏತಾನಿ ದದತೋನ್ಯಾನಿ ನಿರ್ದೇಶ್ಯಾನೀತಿ ಧಾರಣಾ ।
ನಿರ್ದೇಶ್ಯಾನೀತಿ ನಿಧನಕಾಲೇ ಚ ವ್ಯಸನೀ ಭವೇತ್ ॥೩೬॥

ಪತಿತನ ಜೊತೆ ಆಚರಣೆಗಳನ್ನು ಮಾಡುವವನು ಒಂದು ವರ್ಷದಲ್ಲಿ ಪತಿತನಾಗುತ್ತಾನೆ. ಯಾಜನ, ಅಧ್ಯಾಪನ- ಪರಿಗ್ರಹ ಇವುಗಳನ್ನು ಶೂದ್ರನಿಗೋಸ್ಕರ ಮಾಡುವುದರಿಂದ ಮಾಡುವವನು ಪತಿತನಾಗುತ್ತಾನೆ. ಈ ಮೂರು ಮತ್ತು ಬೇರೆ ಮೂರು- ಯಜನ-ಅಧ್ಯಯನ-ದಾನಗಳನ್ನು ಶೂದ್ರನಿಗೋಸ್ಕರ ಮಾಡಿ ಪತಿತನಾದವನಿಗೆ ಪಾಪಪರಿಹಾರಕ್ಕೆ ಪ್ರಾಯಶ್ಚಿತ್ತವಿದೆ. ಪಶ್ಚಾತ್ತಾಪವು ದೊಡ್ಡ ಪ್ರಾಯಶ್ಚಿತ್ತ. ಬೇರೆ ಪ್ರಾಯಶ್ಚಿತ್ತ ವಿಧಿಗಳೂ ಇವೆ. ಪ್ರಾಯಶ್ಚಿತ್ತದಿಂದ ಪರಿಹಾರವಾಗುವ ಪಾಪಗಳನ್ನು ಮಾಡಿದವನು ಮರಣಪರ್ಯಂತ ಪಶ್ಚಾತ್ತಾಪ ಮೊದಲಾದ ಪ್ರಾಯಶ್ಚಿತ್ತಗಳಿಗೆ ತೀವ್ರವಾಗಿ ಅಂಟಿಕೊಂಡಿರಬೇಕು.

ಅನುತ್ತೀರ್ಯ ನ ಹೋತವ್ಯಂ ಪ್ರೇತಕರ್ಮಣ್ಯಪಾತಿತೇ (ಣ್ಯುಪಶ್ರಿತೇ) ।
ತ್ರಿಷು ತ್ವೇತೇಷು ಪೂರ್ವೇಷು ನ ಕುರ್ವೀತ ವಿಚಾರಣಾಮ್ ॥೩೭॥

ಬಂಧುಗಳ ಮರಣದಿಂದ ಅಶೌಚವು ಉಂಟಾದಾಗ, ಅಶೌಚದ ಅವಧಿ ಮುಗಿಯುವವರೆಗೆ ಹೋಮಗಳನ್ನು ಮಾಡಬಾರದು. ಅಧ್ಯಯನ, ಯಜನ, ದಾನಗಳನ್ನು ಮಾಡಲೇಬಾರದು. ಈ ಬಗ್ಗೆ ಏನೂ ವಿಮರ್ಶೆಯನ್ನು ಮಾಡಬಾರದು.

ಅಮಾತ್ಯಾನ್ ವಾ ಗುರೂನ್ ವಾಪಿ ಜಹ್ಯಾದ್ಧರ್ಮೇಣ ಧಾರ್ಮಿಕಃ ।
ಪ್ರಾಯಶ್ಚಿತ್ತಮಕುರ್ವಾಣೈರ್ನೈತೈರರ್ಹತಿ ಸಂವಿದಮ್ ॥೩೮॥

ಧರ್ಮನಿಷ್ಠನು ಪಾತಕಗಳನ್ನು ಮಾಡಿದ ಮಂತ್ರಿಗಳನ್ನು ಅಥವಾ ಗುರುಗಳನ್ನು ಧರ್ಮದ ವಿಧಿಗೆ ಅನುಗುಣವಾಗಿ ಪರಿತ್ಯಾಗ ಮಾಡಬೇಕು. ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದ ಇವರ ಜೊತೆ ಯಾವುದೇ ವ್ಯವಹಾರವನ್ನು ಮಾಡಬಾರದು.

ವ್ರತಸ್ಥವ್ರತವಿಘ್ನೇ ಚ ತಾವತ್ ಪ್ರಾಪ್ನೋತಿ ಕಿಲ್ಬಿಷಮ್ ।
ಅಧರ್ಮಕಾರೀ ಧರ್ಮೇಣ ತಪಸಾ ಹಂತಿ ಕಿಲ್ಬಿಷಮ್ ॥೩೯॥

ವ್ರತವನ್ನು ಮಾಡುತ್ತಿರುವವನ ವ್ರತಕ್ಕೆ ವಿಘ್ನವುಂಟು ಮಾಡಿದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಅಲ್ಲಿಯವರಿಗೆ ಪಾಪವು ಅಂಟಿಕೊಳ್ಳುತ್ತದೆ. ಅಧರ್ಮವನ್ನು ಮಾಡಿದವನು ಧರ್ಮರೂಪದ ತಪಸ್ಸನ್ನು ಆಚರಿಸುವುದರಿಂದ ಪಾಪವನ್ನು ಪರಿಹರಿಸಿಕೊಳ್ಳಬಹುದು.

ಅಸ್ತೇನಂ ಸ್ತೇನ ಇತ್ಯುಕ್ತ್ವಾ ದ್ವಿಗುಣಂ ಪಾಪಮಾಪ್ನುಯಾತ್ ।
ಸ್ತೇನಮಸ್ತೇನ ಇತ್ಯುಕ್ತ್ವಾ ತಾವದಾಪ್ನೋತಿ ಕಿಲ್ಬಿಷಮ್ ॥೪೦॥

ಕಳ್ಳನಲ್ಲದವನನ್ನು ಕಳ್ಳ ಎಂದರೆ ಕಳ್ಳತನಕ್ಕೆ ಎಷ್ಟು ಪಾಪವೋ ಅದರ ಎರಡರಷ್ಟು ಪಾಪವು ಉಂಟಾಗುತ್ತದೆ. ಕಳ್ಳನನ್ನು ಕಳ್ಳ ಅಲ್ಲ ಎಂದರೆ ಕಳ್ಳತನಕ್ಕೆ ಎಷ್ಟು ಪಾಪವೋ ಅಷ್ಟು ಪಾಪವು ಉಂಟಾಗುತ್ತದೆ.

ತ್ರಿಭಾಗಂ ಬ್ರಹ್ಮಹತ್ಯಾಯಾಃ ಕನ್ಯಾಪ್ರಾಪ್ತೌ ಚ ಕಿಲ್ಬಿಷಮ್ ।
ಯಸ್ತು ದೂಷಯಿತಾ ತಸ್ಯಾಃ ಶೇಷಂ ಪ್ರಾಪ್ನೋತಿ ಕಿಲ್ಬಿಷಮ್ ॥೪೧॥

ಪುರುಷನು ಕನ್ಯಾ (ರಜೋದರ್ಶನವಾಗದ ಹುಡುಗಿ) ಸಮಾಗಮವನ್ನು ಮಾಡಿದರೆ ಬ್ರಹ್ಮಹತ್ಯಾಪಾಪದ ಮುಕ್ಕಾಲುಭಾಗ (೩/೪) ಪಾಪಕ್ಕೆ ಇಬ್ಬರೂ ಗುರಿಯಾಗುತ್ತಾರೆ. ಕನ್ಯೆಯನ್ನು ಕೆಡಿಸಿದ ಪುರುಷನು ಇಷ್ಟು ಪಾಪವನ್ನು ಹೆಚ್ಚು ತೀವ್ರವಾಗಿ ಹೊಂದುತ್ತಾನೆ.

ಬ್ರಾಹ್ಮಣಾಯಾವಗುರ್ಯ್ಯಯೇ ಸ್ಪೃಷ್ಟ್ವಾ ಗುರುತರಂ ಭವೇತ್ ।
ವರ್ಷಾಣಾಂ ಹಿ ಶತಂ ಪಾಪಃ ಪ್ರತಿಷ್ಠಾಂ ನಾಧಿಗಚ್ಛತಿ ॥೪೨॥

ಯಾರು ಬ್ರಾಹ್ಮಣನ ನಿಂದನೆಯನ್ನು ಮಾಡುವರೋ ಅವರು ಪಾಪಕ್ಕೆ ಭಾಗಿಗಳಾಗುತ್ತಾರೆ. ಮುಟ್ಟಿದರೆ, ಹೊಡೆದರೆ ಇನ್ನೂ ಹೆಚ್ಚು ಪಾಪವು ಸಂಭವಿಸುತ್ತದೆ. ಈ ಪಾಪವನ್ನು ಮಾಡಿದವನು ಒಂದು ನೂರು ವರ್ಷ ಸುಸ್ಥಿತಿಯನ್ನು ಹೊಂದುವುದಿಲ್ಲ.

ಸಹಸ್ರಂ ತ್ವೇವ ವರ್ಷಾಣಾಂ ನಿಪಾತ್ಯ ನರಕೇ ವಸೇತ್ ।
ತಸ್ಮಾನ್ನೈವಾವಗೂರ್ಯಾದ್ಧಿ ನೈವ ಜಾತು ನಿಪಾತಯೇತ್ ॥೪೩॥

ಬ್ರಾಹ್ಮಣನನ್ನು ಬೀಳಿಸಿದವನು ಒಂದು ಸಾವಿರ ವರ್ಷ ನರಕದಲ್ಲಿ ವಾಸಿಸುತ್ತಾನೆ. ಆದ್ದರಿಂದ ಬ್ರಾಹ್ಮಣನನ್ನು ನಿಂದಿಸಬಾರದು, ಬೀಳಿಸಬಾರದು.

ಶೋಣಿತಂ ಯಾವತಃ ಪಾಂಸೂನ್ ಸಂಗೃಹ್ಣೀಯಾದ್ ದ್ವಿಜಕ್ಷತಾತ್ ।
ತಾವತೀಃ ಸ ಸಮಾ ರಾಜನ್ನರಕೇ ಪರಿವರ್ತತೇ ॥೪೪॥

(ಬ್ರಾಹ್ಮಣನಿಗೆ ಗಾಯ ಮಾಡಿದರೆ) ಬ್ರಾಹ್ಮಣನ ಗಾಯದಿಂದ ಹರಿಯುವ ರಕ್ತವು ಎಷ್ಟು ಮಣ್ಣಿನ ಕಣಗಳನ್ನು ವ್ಯಾಪಿಸುವುದೋ ಅಷ್ಟು ವರ್ಷ ನರಕದಲ್ಲಿ ಅಲೆಯುತ್ತಾನೆ.

ಭ್ರೂಣಹಾಹವಮಧ್ಯೇ ತು ಶುಧ್ಯತೇ ಶಸ್ತ್ರಪಾತಿತಃ ।
ಆತ್ಮಾನಂ ಜುಹುಯಾದ್ ವಹ್ನೌ ಸಮಿದ್ಧೇ ತೇನ ಶುಧ್ಯತಿ ॥೪೫॥

ಭ್ರೂಣಹತ್ಯೆಯನ್ನು ಮಾಡಿದವನು ಯುದ್ಧದಲ್ಲಿ ಶಸ್ತ್ರಪ್ರಹಾರದಿಂದ ಬೀಳಿಸಲ್ಪಟ್ಟರೆ ಶುದ್ಧನಾಗುತ್ತಾನೆ. ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ತನ್ನನ್ನು ಹೋಮಿಸಿಕೊಳ್ಳಬೇಕು. ಈ ಆಹುತಿಪ್ರದಾನದಿಂದ ಶುದ್ಧಿಯಾಗುತ್ತಾನೆ.

ಸುರಾಪೋ ವಾರುಣೀಮುಷ್ಣಾಂ ಪೀತ್ವಾ ಪಾಪಾದ್ ವಿಮುಚ್ಯತೇ ।
ತಯಾ ಸ ಕಾಯೇ ನಿರ್ದಗ್ಧೇ ಮೃತ್ಯುನಾ ಪ್ರೇತ್ಯ ಶುಧ್ಯತಿ ।
ಲೋಕಾಂಶ್ಚ ಲಭತೇ ವಿಪ್ರೋ ನಾನ್ಯಥಾ ಲಭತೇ ಹಿ ಸಃ ॥೪೬॥

ಸುರಾಪಾನ ಮಾಡಿದ ಬ್ರಾಹ್ಮಣನು ಕುದಿಯುತ್ತಿರುವ ಸುರೆಯನ್ನು ಪಾನ ಮಾಡಿದರೆ ಪಾಪದಿಂದ ಬಿಡುಗಡೆಯಾಗುತ್ತದೆ. ಆ ಕುದಿಯುವ ಸುರೆಯಿಂದ ದೇಹವು ಬೆಂದು ಮರಣ ಉಂಟಾದರೆ ಮರಣದಿಂದ ಶುದ್ಧನಾಗುತ್ತಾನೆ. ಉತ್ತಮ ಲೋಕಗಳನ್ನು ಪಡೆಯುತ್ತಾನೆ. ಹೀಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ ಉತ್ತಮ ಲೋಕಗಳನ್ನು ಪಡೆಯುವುದಿಲ್ಲ.

ಗುರುತಲ್ಪಮಧಿಷ್ಠಾಯ ದುರಾತ್ಮಾ ಪಾಪಚೇತನಃ ।
ಸೂರ್ಮೀಂ ಜ್ವಲಂತೀಮಾಶ್ಲಿಷ್ಯ ಮೃತ್ಯುನಾ ಸ ವಿಶುಧ್ಯತಿ ॥೪೭॥

ಗುರುಪತ್ನಿ ಸಮಾಗಮವನ್ನು ಮಾಡಿದ ದುಷ್ಟಮನಸ್ಸಿನ ಪಾಪಿಯು ಜ್ವಲಿಸುತ್ತಿರುವ ಲೋಹಪ್ರತಿಮೆಯನ್ನು ತಬ್ಬಿಕೊಂಡು ಮೃತ್ಯುವಶನಾಗಬೇಕು. ಇದರಿಂದ ಶುದ್ಧನಾಗುತ್ತಾನೆ.

ಅಥ ವಾ ಶಿಶ್ನವೃಷಣಾವಾದಾಯಾಂಜಲಿನಾ ಸ್ವಯಮ್ ।
ನೈರ್ಋತೀಂ ದಿಶಮಾಸ್ಥಾಯ ನಿಪತೇತ್ಸ ತ್ವಜಿಹ್ಮಗಃ ।
ಬ್ರಾಹ್ಮಣಾರ್ಥೇ೨ಪಿ ವಾ ಪ್ರಾಣಾನ್ ಸಂತ್ಯಜೇತ್ ತೇನ ಶುಧ್ಯತಿ ॥೪೮॥

ಅಥವಾ ಋಜು ಮನಸ್ಸಿನಿಂದ ತನ್ನ ಶಿಶ್ನ ಮತ್ತು ವೃಷಣಗಳನ್ನು (ಕತ್ತರಿಸಿ) ತನ್ನ ಬೊಗಸೆಯಲ್ಲಿ ಹಿಡಿದುಕೊಂಡು ನೈಋತ್ಯ ದಿಕ್ಕಿನಲ್ಲಿ ಹೋಗುತ್ತಾ ಹೋಗುತ್ತಾ ಬಿದ್ದು ಸಾಯಬೇಕು. ಹೀಗೆ ಮಾಡಿದರೆ ಶುದ್ಧನಾಗುತ್ತಾನೆ. ಅಥವಾ ಬ್ರಾಹ್ಮಣನ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡಬೇಕು. ಈ ತ್ಯಾಗದಿಂದ ಶುದ್ಧನಾಗುತ್ತಾನೆ.

ಅಶ್ವಮೇಧೇನ ವಾಪೀಷ್ಟ್ವಾ ಗೋಮೇಧೇನಾಪಿ ವಾ ಪುನಃ ।
ಅಗ್ನಿಷ್ಟೋಮೇನ ವಾ ಸಮ್ಯಗಿಹ ಪ್ರೇತ್ಯ ಚ ಪೂಜ್ಯತೇ ॥೪೯॥

ಅಥವಾ ಅಶ್ವಮೇಧವನ್ನು ಅಥವಾ ಗೋಮೇಧವನ್ನು ಅಥವಾ ಅಗ್ನಿಷ್ಟೋಮವನ್ನು ವಿಧಿಪ್ರಕಾರವಾಗಿ ಮಾಡಿದರೆ ಶುದ್ಧನಾಗುತ್ತಾನೆ. ಈ ಜನ್ಮ ಮತ್ತು ಮುಂದಿನ ಜನ್ಮಗಳಲ್ಲಿ ಪೂಜಾರ್ಹನಾಗುತ್ತಾನೆ.

ತಥೈವ ದ್ವಾದಶ ಸಮಾಃ ಕಪಾಲೀ ಬ್ರಹ್ಮಹಾ ಭವೇತ್ ।
ಬ್ರಹ್ಮಚಾರೀ ಚರೇದ್ಭೈಕ್ಷಂ ಸ್ವಕರ್ಮೋದಾಹರನ್ ಮುನಿಃ ।
ಏವಂ ವಾ ತಪಸಾ ಯುಕ್ತೋ ಬ್ರಹ್ಮಹಾ ಸವನೀ ಭವೇತ್ ॥೫೦॥

ಬ್ರಹ್ಮಹತ್ಯೆಯನ್ನು ಮಾಡಿದವನು ಕಪಾಲವನ್ನು ಹಿಡಿದುಕೊಂಡು, ತನ್ನ ಕೃತ್ಯವನ್ನು ಎಲ್ಲಕಡೆ ಹೇಳುತ್ತಾ, ಬ್ರಹ್ಮಚರ್ಯ ವ್ರತದಿಂದ, ಮನನಶೀಲನಾಗಿ ಹನ್ನೆರಡು ವರ್ಷ ಕಳೆಯಬೇಕು. ನಿತ್ಯ ಮೂರು ಕಾಲಗಳಲ್ಲಿ ಸ್ನಾನ ಮಾಡಬೇಕು. ಹೀಗೆ ತಪಸ್ಸನ್ನು ಮಾಡುವುದರಿಂದ ಬ್ರಹ್ಮಹತ್ಯೆಯ ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾನೆ. ತ್ರಿಕಾಲಗಳಲ್ಲಿ ಮಾಡಬೇಕಾದ ಅನುಷ್ಠಾನಕ್ಕೆ ಅರ್ಹನಾಗುತ್ತಾನೆ.

ಏವಂ ಗರ್ಭಸಮವಿಜ್ಞಾತಮಾತ್ರೇಯೀಂ ವಾ ವಿಘಾತಯೇತ್ ।
ದ್ವಿಗುಣಾ ಬ್ರಹ್ಮಹತ್ಯಾ ವೈ ಆತ್ರೇಯೀವ್ಯಸನೇ ಭವೇತ್ ॥೫೧॥

ಹೀಗೆಯೇ ಗರ್ಭಿಣೀ ಸೋದರಿಯನ್ನು ಕೊಂದವನು ಬ್ರಹ್ಮಹತ್ಯಾ ಪಾಪದ ಎರಡರಷ್ಟು ಪಾಪವನ್ನು ಹೊಂದುವನು. ಯಾವುದೇ ಗರ್ಭಿಣಿಯನ್ನು ಕೊಂದವನು ಇಷ್ಟು ಪಾಪವನ್ನು ಹೊಂದುವನು.

ಸುರಾಪೋ ನಿಯತಾಹಾರೋ ಬ್ರಹ್ಮಚಾರೀ ಕ್ಷಪಾಚರಃ ।
ಊರ್ಧ್ವಂ ತ್ರಿಭ್ಯೋಽಥ ವರ್ಷೇಭ್ಯೋ ಯಜೇತಾಗ್ನಿಷ್ಟುತಾ ಪರಮ್ ।
ಋಷಭೈಕಸಹಸ್ರಂ ಗಾ ದತ್ತ್ವಾ ಶುಭಮವಾಪ್ನುಯಾತ್ ॥೫೨॥

ಸುರಾಪಾನವನ್ನು ಮಾಡಿದವನು ಮೂರು ವರ್ಷ ಮಿತಾಹಾರ-ಬ್ರಹ್ಮಚರ್ಯ ಮತ್ತು ರಾತ್ರಿಸಂಚಾರ ವ್ರತವನ್ನು ಮಾಡಬೇಕು. ಅನಂತರ ಅಗ್ನಿಷ್ಟುತ್ ಯಾಗವನ್ನು ಮಾಡಬೇಕು. ಒಂದು ಸಾವಿರ ಎತ್ತುಗಳನ್ನು ಅಥವಾ ಒಂದು ಸಾವಿರ ಗೋವುಗಳನ್ನು ದಾನ ಮಾಡಬೇಕು. ಇದರಿಂದ ಶುದ್ಧನಾಗುತ್ತಾನೆ.

ವೈಶ್ಯಂ ಹತ್ವಾ ತು ವರ್ಷೇ ದ್ವೇ ಋಷಭೈಕಶತಂ ಚ ಗಾಃ ।
ಶೂದ್ರಂ ಹತ್ವಾಬ್ದಮೇವೈಕಮೃಷಭಂ ಚ ಶತಂ ಚ ಗಾಃ ॥೫೩॥

ವೈಶ್ಯಹತ್ಯೆಯನ್ನು ಮಾಡಿದವನು ಎರಡು ವರ್ಷ ಈ ವ್ರತವನ್ನು ಮಾಡಬೇಕು. ಒಂದು ನೂರು ಎತ್ತುಗಳನ್ನು ಅಥವಾ ಗೋವುಗಳನ್ನು ದಾನ ಮಾಡಬೇಕು. ಶೂದ್ರಹತ್ಯೆಯನ್ನು ಮಾಡಿದವನು ಒಂದು ವರ್ಷ ಈ ವ್ರತವನ್ನು ಮಾಡಿ ಒಂದು ಎತ್ತು ಮತ್ತು ನೂರು ಗೋವುಗಳನ್ನು ದಾನ ಮಾಡಬೇಕು.

ಶ್ವವರಾಹಖರಾನ್ ಹತ್ವಾ ಶೌದ್ರಮೇವ ವ್ರತಂ ಚರೇತ್ ।
ಮಾರ್ಜಾರಚಾಷಮಂಡೂಕಾನ್ ಕಾಕಂ ಭಾಸಂ ಚ ಮೂಷಕಮ್ ॥

ನಾಯಿ, ಹಂದಿ, ಕತ್ತೆಗಳನ್ನು ಕೊಂದವನು ಶೂದ್ರಹತ್ಯೆಗೆ ಮಾಡಿಕೊಳ್ಳಬೇಕಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಬೆಕ್ಕು, ನವಿಲು, ಕಪ್ಪೆ, ಕಾಗೆ, ಗಿಡುಗ, ಹುಂಜ, ಇಲಿ- ಇವುಗಳನ್ನು ಕೊಂದವನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

ಉಕ್ತಃ ಪಶುಸಮೋ ಧರ್ಮೋ ರಾಜನ್ ಪ್ರಾಣನಿಪಾತನಾತ್ ।
ಪ್ರಾಯಶ್ಚಿತ್ತಾನ್ಯಥಾನ್ಯಾನಿ ಪ್ರವಕ್ಷ್ಯಾಮ್ಯನುಪೂರ್ವಶಃ ॥೫೫॥

ರಾಜನೇ! ಯಾವುದೇ ಪ್ರಾಣಿಯನ್ನು ಹತ್ಯೆ ಮಾಡಿದರೂ ಹೀಗೆಯೇ ಪ್ರಾಯಶ್ಚಿತ್ತ ಎಂದು ಪ್ರಾಜ್ಞರು ಹೇಳಿದ್ದಾರೆ. ಬೇರೆ ಪ್ರಾಯಶ್ಚಿತ್ತಗಳನ್ನು ಕ್ರಮವಾಗಿ ಹೇಳುವೆ.

ಕಲ್ಪೇ ಚಾನ್ನಸ್ಯ ಚೌರ್ಯೇ ಚ ಪೃಥಕ್ಸಂವತ್ಸರಂ ಚರೇತ್ ।
ತ್ರೀಣಿ ಶ್ರೋತ್ರಿಯಭಾರ್ಯಾಯಾಂ ಪರದಾರೇ ತು ದ್ವೇ ಸ್ಮೃತೇ ॥೫೬॥

ಇಲ್ಲದ ದೋಷವನ್ನು ಕಲ್ಪಿಸಿದರೆ, ಆಹಾರವನ್ನು ಅಪಹರಿಸಿದರೆ ಒಂದು ವರ್ಷ (ಮುಂದೆ ಹೇಳುವ) ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಶ್ರೋತ್ರಿಯನ ಪತ್ನಿಯ ಸಮಾಗಮವನ್ನು ಮಾಡಿದರೆ ಮೂರು ವರ್ಷ, ಪರಪತ್ನಿಯರ ಸಮಾಗಮವನ್ನು ಮಾಡಿದರೆ ಎರಡು ವರ್ಷ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು.

ಕಾಲೇ ಚತುರ್ಥೇ ಭುಂಜಾನೋ ಬ್ರಹ್ಮಚಾರೀ ವ್ರತೀ ಭವೇತ್ ।
ಸ್ಥಾನಾಸನಾಭ್ಯಾಂ ವಿಹರೇತ್ ತ್ರಿರಹ್ನೋಽಭ್ಯುದಿತಾದಪಃ ।
ಏವಮೇವ ನಿರಾಚಾಂತೋ ಯಶ್ಚಾಗ್ನೀನಪವಿಧ್ಯತಿ ॥೫೭॥

ಒಂದು ಹೊತ್ತು ಭೋಜನ, ಅನಂತರ ಮೂರು ಹೊತ್ತು ಉಪವಾಸ, ಅನಂತರ ಭೋಜನ, ಬ್ರಹ್ಮಚರ್ಯ ವ್ರತ, ತನಗೇ ಪ್ರತ್ಯೇಕವಾದ ಜಾಗ, ಆಸನಗಳನ್ನು ಏರ್ಪಡಿಸಿಕೊಳ್ಳಬೇಕು. ಪ್ರತಿದಿನ ಮೂರು ಬಾರಿ ಸ್ನಾನ ಮಾಡಬೇಕು. ಆಚಮನವನ್ನು ಮಾಡದೆ ಅಗ್ನಿಯನ್ನು ಅಪವಿತ್ರಗೊಳಿಸುವವನು (ಅಗ್ನಿಯನ್ನು ಅನುಷ್ಠಾನ ಮಾಡುವವನು) ಹೀಗೆಯೇ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

ತ್ಯಜತ್ಯಕಾರಣೇ ಯಶ್ಚ ಪಿತರಂ ಮಾತರಂ ತಥಾ ।
ಪತಿತಃ ಸ್ಯಾತ್ಸ ಕೌರವ್ಯ ತಥಾ ಧರ್ಮೇಷು ನಿಶ್ಚಯಃ ।
ಗ್ರಾಸಾಚ್ಛಾದನಮತ್ಯರ್ಥಂ ದದ್ಯಾದಿತಿ ನಿದರ್ಶನಮ್ ॥೫೮॥

ಯಾರು ಕಾರಣವಿಲ್ಲದೆ ತಂದೆಯನ್ನು, ತಾಯಿಯನ್ನು (ಗುರುಗಳನ್ನು) ತ್ಯಾಗ ಮಾಡುವನೋ ಅವನು ಪತಿತನಾಗುತ್ತಾನೆ. ಇದು ಧರ್ಮಶಾಸ್ತ್ರಗಳ ನಿರ್ಣಯ.

ಇವನು ಬ್ರಹ್ಮಚರ್ಯ ವ್ರತವನ್ನು ಮಾಡುತ್ತಾ, ಬ್ರಾಹ್ಮಣನಿಗೆ ಆಹಾರ, ವಸ್ತ್ರ, ಯಾನ, ಹಾಸಿಗೆಯನ್ನು ದಾನ ಮಾಡಿ ಶುದ್ಧನಾಗುತ್ತಾನೆ.

ಭಾರ್ಯಾಯಾಂ ವ್ಯಭಿಚಾರಿಣ್ಯಾಂ ನಿರುದ್ಧಾಯಾಂ ವಿಶೇಷತಃ ।
ಯತ್ ಪುಂಸಾಂ ಪರದಾರೇಷು ತಚ್ಚೈನಾಂ ಚಾರಯೇದ್ ವ್ರತಮ್ ॥

ಪತ್ನಿಯು ವ್ಯಭಿಚಾರಿಣಿಯಾದರೆ, ಅವಳನ್ನು ಆ ಕೃತ್ಯವನ್ನು ಮಾಡದಂತೆ ತಡೆದರೆ, ಪರಸ್ತ್ರೀ ಸಂಗವನ್ನು ಮಾಡಿದ ಪುರುಷನಿಗೆ ಯಾವ ಪ್ರಾಯಶ್ಚಿತ್ತವೋ ಅದನ್ನು ಅವಳಿಂದ ಮಾಡಿಸಬೇಕು.

ಶ್ರೇಯಾಂಸಂ ಶಯನೇ ಹಿತ್ವಾ ಯಾ ಪಾಪೀಯಾಂಸಮೃಚ್ಛತಿ ।
ಶ್ವಭಿಸ್ತಾಂ ಖಾದಯೇದ್ರಾಜಾ ಸಂಸ್ಥಾನೇ ಬಹುಸಂವೃತೇ ॥೬೦॥

ಪತಿಯನ್ನು ಬಿಟ್ಟು ಪರಪುರುಷನ ಸಂಗ ಮಾಡುವವಳನ್ನು ರಾಜನು ರಹಸ್ಯ ಸ್ಥಳದಲ್ಲಿ ನಾಯಿಗಳು ತಿನ್ನುವಂತೆ ಮಾಡಬೇಕು.

ಪುಮಾಂಸಂ ಬಂಧಯೇತ್ ಪ್ರಾಜ್ಞಃ ಶಯನೇ ತಪ್ತ ಆಯಸೇ ।
ಅಪ್ಯಾದಧೀತ ದಾರೂಣಿ ತತ್ರ ದಹ್ಯೇತ ಪಾಪಕೃತ್ ॥೬೧॥

ಹೀಗೆಯೇ ಪರಸ್ತ್ರೀ ಸಂಗವನ್ನು ಮಾಡುವ ಪುರುಷನನ್ನು ಪ್ರಾಜ್ಞ ರಾಜನು ಕಾಯಿಸಿದ ಕಬ್ಬಿಣದ ಮಂಚಕ್ಕೆ ಕಟ್ಟಿ ಕಟ್ಟಿಗೆಗಳನ್ನು ಒಟ್ಟಬೇಕು. ಅದರಿಂದ ಅವನು ಸುಟ್ಟು ಹೋಗಬೇಕು.

ಏಷ ದಂಡೋ ಮಹಾರಾಜ ಸ್ತ್ರೀಣಾಂ ಭರ್ತೃವ್ಯತಿಕ್ರಮೇ ।
ಸಂವತ್ಸರಾಭಿಶಸ್ತಸ್ಯ ದುಷ್ಟಸ್ಯ ದ್ವಿಗುಣೋ ಭವೇತ್ ॥೬೨॥

ಮಹಾರಾಜ! ಸ್ತ್ರೀಯರು ಪತಿಯನ್ನು ಮೀರಿದರೆ, ಅವರಿಗೂ ಇದೇ ಪ್ರಾಯಶ್ಚಿತ್ತ. ಅಪರಾಧ ಮಾಡಿದವರು ಒಂದು ವರ್ಷ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ಅನಂತರ ಎರಡರಷ್ಟು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

ದ್ವೇ ತಸ್ಯ ತ್ರೀಣಿ ವರ್ಷಾಣಿ ಚತ್ವಾರಿ ಸಹ ಸೇವನಾತ್ ।
ಕೌಮಾರಂ ಪಂಚ ವರ್ಷಾಣಿ ಚರೇದ್ ಭೈಕ್ಷಂ ಮುನಿವ್ರತಃ ॥೬೩॥

ಪರಸ್ತ್ರೀ ಸಂಗವನ್ನು ಮಾಡಿದ ಕಾರಣದಿಂದ ಪುರುಷನು ಅಲ್ಪಕಾಲ ಈ ಅಪರಾಧವನ್ನು ಮಾಡಿದ್ದರೆ ಎರಡು ವರ್ಷ, ಅದಕ್ಕಿಂತ ಹೆಚ್ಚು ಕಾಲ ಮಾಡಿದ್ದರೆ ಮೂರು ವರ್ಷ, ಬಹುಕಾಲ ಮಾಡಿದ್ದರೆ ನಾಲ್ಕು ವರ್ಷ ಅಥವಾ ಐದು ವರ್ಷ ಬ್ರಹ್ಮಚಾರಿಯು ಆಚರಿಸಬೇಕಾದ ಭಿಕ್ಷಾವ್ರತವನ್ನು, ಮೌನವ್ರತವನ್ನು ಆಚರಿಸಬೇಕು.

('ಕುಚರ'– ಈ ಪಾಠವನ್ನು ಆದರಿಸಿ ಸ್ವಲ್ಪ ಭಿನ್ನ ಅಭಿಪ್ರಾಯಗಳೂ ಪೂರ್ವ ಅನುವಾದಗಳಲ್ಲಿ ಇವೆ. ಎರಡು, ಮೂರು, ನಾಲ್ಕು, ಐದು ವರ್ಷಗಳ ಕಾಲ ಪತಿತನ ಸಹವಾಸದಲ್ಲಿದ್ದವನು ಅಷ್ಟೇ ವರ್ಷಗಳ ಕಾಲ ಮೌನದಿಂದ, ಭೂಪರ್ಯಟನೆ ಮಾಡುತ್ತಾ ಭಿಕ್ಷಾವೃತ್ತಿಯನ್ನು ಮಾಡಬೇಕು).

ಪರಿವಿತ್ತಿಃ ಪರಿವೇತ್ತಾ ಯಥಾ ಚ ಪರಿವಿದ್ಯತೇ ।
ಪಾಣಿಗ್ರಹಮಧರ್ಮೇಣ ಸರ್ವೇ ತೇ ಪತಿತಾಃ ಸ್ಮೃತಾಃ ॥೬೪॥

ಅಣ್ಣನ ಮದುವೆಗಿಂತ ಮೊದಲು ತಮ್ಮನು ಮದುವೆಯಾದರೆ, ತಮ್ಮನು ಪರಿವೇತ್ತಾ. ಅವನ ಪತ್ನಿಯು ಪರಿವಿತ್ತಿ. ಯಾರ ಸಹಾಯದಿಂದ, ಪ್ರೇರಣೆಯಿಂದ ಈ ಮದುವೆ ಆಗುವುದೋ ಅವರೆಲ್ಲರೂ ಮತ್ತು ಈ ದಂಪತಿಗಳು ಪತಿತರು ಎಂದು ಪ್ರಾಜ್ಞರ ಅಭಿಪ್ರಾಯ.

ಚರೇಯುಃ ಸರ್ವ ಏವೈತೇ ವೀರಹಾ ಯದ್ವ್ರತಂ ಚರೇತ್ ।
ಚಾಂದ್ರಾಯಣಂ ಚರೇನ್ಮಾಸಂ ಕೃಚ್ಛ್ರಂ ವಾ ಪಾಪಶುದ್ಧಯೇ ॥೬೫॥

ತನ್ನ ಅಗ್ನಿಯನ್ನು ತ್ಯಾಗ ಮಾಡಿದ ಗೃಹಸ್ಥಾಶ್ರಮಿಯು ವೀರಹಾ. ಈ ಅಪರಾಧಿಯು ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು ಎಂದು ಶಾಸ್ತ್ರವಿಧಿಯು ಇದೆಯೋ ಅದೇ ಪ್ರಾಯಶ್ಚಿತ್ತವನ್ನು ಇವರೆಲ್ಲರೂ (ಪರಿವೇತ್ತಾ, ಪರಿವಿತ್ತಿ ಮತ್ತು ಸಹಾಯಕರು) ಮಾಡಿಕೊಳ್ಳಬೇಕು ಅಥವಾ ಒಂದು ತಿಂಗಳು ಚಾಂದ್ರಾಯಣ ವ್ರತವನ್ನು ಅಥವಾ ಕೃಚ್ಛ್ರವ್ರತವನ್ನು ಆಚರಿಸಬೇಕು.

ಪರಿವೇತ್ತಾ ಪ್ರಯಚ್ಛೇತ ಪರಿವಿತ್ತಾಯ ತಾಂ ಸ್ನುಷಾಮ್ ।
ಜ್ಯೇಷ್ಠೇನ ತ್ವಭ್ಯನುಜ್ಞಾತೋ ಯವೀಯಾನ್ ಪ್ರತ್ಯನಂತರಮ್ ।
ಏನಸೋ ಮೋಕ್ಷಮಾಪ್ನೋತಿ ತೌ ಚ ವಾಚ್ಯೌ ಚ ಧರ್ಮತಃ ॥೬೬॥

ಪರಿವೇತ್ತಾ ಪುರುಷನು ಪರಿವಿತ್ತನಿಗೆ (ತನಗಿಂತ ಮೊದಲು ಮದುವೆಯಾಗದ ಅಣ್ಣನಿಗೆ) ತನ್ನ ಪತ್ನಿಯನ್ನು ಸೊಸೆ ಎಂದು ಪರಿಗಣಿಸಿ, ಹಾಗೆ ವ್ಯವಹರಿಸಬೇಕೆಂದು ವಿನಂತಿಸಿ ಒಪ್ಪಿಸಬೇಕು. ಅನಂತರ ತಮ್ಮನು ಅಣ್ಣನ ಅನುಮತಿಯಿಂದ ತನ್ನ ಪತ್ನಿಯ ಜೊತೆ ದಾಂಪತ್ಯವನ್ನು ನಡೆಸಬೇಕು. ಈ ಆಚರಣೆಯು ಧರ್ಮ. ಈ ಧರ್ಮದಿಂದ ಆ ಮಹಿಳೆ ಮತ್ತು ಸೋದರರು ಅಪರಾಧದ ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾರೆ.

ಸ ಮಾನುಷೇಷು ಗೋವರ್ಜಂ ದೋಷೇಣ ನ ಚ ದೂಷ್ಯತೇ ।
ಅಧಿಷ್ಠಾತಾರಮತ್ತಾರಂ ಪಶೂನಾಂ ಪುರುಷಂ ವಿದುಃ ॥೬೭॥

ಪಾಪ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನು ಗೋದಾನವನ್ನು ಮಾಡಲೇಬೇಕು. ಬೇರೆ ದಾನಗಳನ್ನು ಮಾಡಿದ್ದರೂ ಅವನಿಗೆ ದೋಷಲೇಪವಿಲ್ಲ. ಪಶುಗಳ ಮೇಲೆ ಏರಿ ಕುಳಿತ ಪುರುಷನನ್ನು ಪಶುಭಕ್ಷಕ ಎಂದು ಪ್ರಾಜ್ಞರು ತಿಳಿದಿದ್ದಾರೆ.

ಪರಿದಾಯೋರ್ದ್ಧಬಹುಲಂ ಪಾತ್ರಮಾದಾಯ ಮೃನ್ಮಯಮ್ ।
ಚರೇತ್ ಸಪ್ತ ಗೃಹಾನ್ ಭೈಕ್ಷಂ ಸ್ವಕರ್ಮ ಪರಿಕೀರ್ತಯನ್ ॥೬೮॥

ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನು ಶ್ರೇಷ್ಠವಾದ ಬಹು ದ್ರವ್ಯಗಳನ್ನು ದಾನ ಮಾಡಿ, ಮಣ್ಣಿನ ಪಾತ್ರೆಯನ್ನು ಹಿಡಿದುಕೊಂಡು ತನ್ನ ಅಪರಾಧಗಳನ್ನು ಹೇಳುತ್ತಾ ಏಳು ಮನೆಗಳಿಗೆ ಹೋಗಿ ಭಿಕ್ಷೆಯನ್ನು ಬೇಡಬೇಕು.

ತಥೈವ ಮಲಭೋಜೀ ಸ್ಯಾದ್ ದ್ವಾದಶಾಹಾತ್ ಸ ಶುದ್ಧ್ಯತಿ ।
ಚರೇತ್ ಸಂವತ್ಸರಂ ಚಾಪಿ ತದ್ ವ್ರತಂ ಯನ್ನಿಕೃಂತತಿ ॥೬೯॥

ಮತ್ತು ಗೋಮಯವನ್ನು ತಿನ್ನಬೇಕು. ಹನ್ನೆರಡು ದಿವಸ ಹೀಗೆ ಮಾಡುವುದರಿಂದ ಶುದ್ಧನಾಗುತ್ತಾನೆ. ಒಂದು ವರ್ಷ ಈ ವ್ರತವನ್ನು ಮಾಡಬೇಕು. ಇದು ಪಾಪಗಳನ್ನು ಕತ್ತರಿಸುತ್ತದೆ.

ಮಾನುಷೇಷು ಚ ಭವೇತ್ ಪ್ರಾಯಶ್ಚಿತ್ತಮನುತ್ತಮಮ್ ।
ಧನಂ ವಾ ದಾನಶಕ್ತೇಷು ಏತತ್ಸರ್ವಂ ಪ್ರಕಲ್ಪಯೇತ್ ।
ಅನಾಸ್ತಿಕೇಷು ಗೋಮಾತ್ರಂ ಪ್ರಾಣಮೇಕಂ ಪ್ರಚಕ್ಷತೇ ॥೭೦॥

ಮೇಲೆ ಹೇಳಿದ ಅತ್ಯುತ್ತಮ ಪ್ರಾಯಶ್ಚಿತ್ತಗಳನ್ನು ಮಾಡಿಕೊಂಡವನು ಮತ್ತೆ ಮನುಷ್ಯರ ಮಧ್ಯೆ ಮನ್ನಣೆಯನ್ನು ಪಡೆಯುತ್ತಾನೆ. ದಾನ ಮಾಡುವ ಶಕ್ತಿ ಇದ್ದವರಿಗೆ, ಅವರು ಮಾಡುವ ದಾನವು ಎಲ್ಲ ಪ್ರಾಯಶ್ಚಿತ್ತಗಳನ್ನು ಕಲ್ಪಿಸುತ್ತದೆ. ಆಸ್ತಿಕರು ಕೇವಲ ಗೋದಾನವನ್ನು ಮಾಡಿದರೂ, ಅದು ಅವರಿಗೆ ಪ್ರಾಣ (ಧಾರಕ ಶಕ್ತಿ) ಎಂದು ಹೇಳುತ್ತಾರೆ.

ಶ್ವವರಾಹಮೃಗಾಣಾಂ ಚ ಕುಕ್ಕುಟಸ್ಯ ಖರಸ್ಯ ಚ ।
ಮಾಂಸಂ ಮೂತ್ರಪುರೀಷಂ ಚ ಪ್ರಾಶ್ಯ ಸಂಸ್ಕಾರಮರ್ಹತಿ ॥೭೧॥

ನಾಯಿ, ಹಂದಿ, ಮೃಗಗಳು, ಕೋಳಿ, ಕತ್ತೆ - ಇವುಗಳ ಮಾಂಸ, ಮಲಗಳನ್ನು ತಿಂದ, ಮೂತ್ರವನ್ನು ಕುಡಿದ ಬ್ರಾಹ್ಮಣನು ಪುನಃ ಉಪನಯನ ಸಂಸ್ಕಾರವನ್ನು ಮಾಡಿಕೊಳ್ಳಬೇಕು.

ಬ್ರಾಹ್ಮಣಸ್ತು ಸುರಾಪಸ್ಯ ಗಂಧಮಾಘ್ರಾಯ ಸೋಮಪಃ ।
ಅಪಸ್ತ್ರ್ಯಹಂ ಪಿಬೇದುಷ್ಣಾಸ್ತ್ರ್ಯಹಮುಷ್ಣಂ ಪಯಃ ಪಿಬೇತ್ ।
ತ್ರ್ಯಹಮುಷ್ಣಂ ಘೃತಂ ಪೀತ್ವಾ ವಾಯುಭಕ್ಷೋ ಭವೇತ್ ತ್ರ್ಯಹಮ್ ॥

ಸೋಮರಸ ಪಾನಾರ್ಹನಾದ ಬ್ರಾಹ್ಮಣನು ಸುರಾಪಾನ ಮಾಡಿದವನ ದುರ್ಗಂಧವನ್ನು ಆಘ್ರಾಣಿಸಿದರೆ ಮೂರು ದಿನ ಬಿಸಿ ನೀರನ್ನು ಕುಡಿಯಬೇಕು. ಮೂರು ದಿನ ಬಿಸಿ ಹಾಲನ್ನು ಕುಡಿಯಬೇಕು. ಮೂರು ದಿನ ಬಿಸಿ ತುಪ್ಪವನ್ನು ಕುಡಿಯಬೇಕು. ಮೂರು ದಿನ ಕೇವಲ ವಾಯುಸೇವನೆಯನ್ನು ಮಾಡಬೇಕು.

ಏವಮೇತತ್ ಸಮುದ್ದಿಷ್ಟಂ ಪ್ರಾಯಶ್ಚಿತ್ತಂ ಸನಾತನಮ್ ।
ಬ್ರಾಹ್ಮಣಸ್ಯ ವಿಶೇಷೇಣ ತತ್ತ್ವಜ್ಞಾನೇನ ಜಾಯತೇ ॥೭೩॥

ಮೇಲೆ ಹೇಳಲ್ಪಟ್ಟ ಪ್ರಾಯಶ್ಚಿತ್ತಗಳು ಸನಾತನ (ವೇದೋಕ್ತ ಮತ್ತು ಪರಂಪರಾಪ್ರಾಪ್ತ) ಪ್ರಾಯಶ್ಚಿತ್ತಗಳು. ವಿಶೇಷವಾಗಿ ಬ್ರಾಹ್ಮಣನಿಗೆ ಅನ್ವಯಿಸುತ್ತವೆ. ಪ್ರಾಯಶ್ಚಿತ್ತದ ತತ್ವವನ್ನು ತಿಳಿದುಕೊಂಡರೆ ಪ್ರಾಯಶ್ಚಿತ್ತವು ಸಫಲವಾಗುತ್ತದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಏಕತ್ರಿಶೋಂಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯವು ಮುಗಿಯಿತು.

ಮೂವತ್ತೆರಡನೆಯ ಅಧ್ಯಾಯ

ಖಡ್ಗದ ಉತ್ಪತ್ತಿ, ಅದರ ಉಪಯೋಗ ಮೊದಲಾದ ವಿಷಯಗಳನ್ನು ತಿಳಿಸಬೇಕೆಂದು ನಕುಲನ ಪ್ರಾರ್ಥನೆ. ಭೀಷ್ಮರಿಂದ ಪ್ರಾಸ್ತಾವಿಕವಾಗಿ ಪ್ರಪಂಚ ಸೃಷ್ಟಿಯ ಕಥನ. ಹಿಮಾಲಯದ ಒಂದು ರಮಣೀಯ ಸ್ಥಳದಲ್ಲಿ ಬ್ರಹ್ಮದೇವರು ನಡೆಸಿದ ಯಜ್ಞ. ಆ ಸಂದರ್ಭದಲ್ಲಿ ಉದ್ಭವಿಸಿದ ಮಹಾಭೂತ. ಖಡ್ಗವಾಗಿ ಅದರ ಪರಿವರ್ತನೆ. ಬ್ರಹ್ಮದೇವರಿಂದ ರುದ್ರದೇವರಿಗೆ ಆ ಖಡ್ಗದ ಪ್ರದಾನ. ಅವರಿಂದ ಅದರಿಂದ ಅಧರ್ಮನಿಗ್ರಹ. ಖಡ್ಗದ ಪರಂಪರೆ.

ವೈಶಂಪಾಯನಃ

ಕಥಾಂತರಮಥಾಸಾದ್ಯ ಖಡ್ಗಯುದ್ಧವಿಶಾರದಃ ।
ನಕುಲಃ ಶರತಲ್ಪಸ್ಥಮಿದಮಾಹ ಪಿತಾಮಹಮ್ ॥೧॥

ಕಥಾ ಸಮಾಪ್ತಿಯನ್ನು ತಲುಪಿ (ಆಪದ್ಧರ್ಮಗಳ ವಿವರಣೆಯು ಮುಗಿಯುವವರೆಗೆ ಅದನ್ನು ಕೇಳುತ್ತಿದ್ದ ನಕುಲನು, ಆ ವಿವರಣೆಯು ಮುಗಿದನಂತರ, ಬೇರೆ ವಿಷಯವನ್ನು ಕುರಿತು ಪ್ರಶ್ನಿಸಲು ಅವಕಾಶವನ್ನು ಪಡೆದು) ಖಡ್ಗಯುದ್ಧ ವಿಶಾರದನಾದ ನಕುಲನು ಶರತಲ್ಪದಲ್ಲಿದ್ದ ಪಿತಾಮಹರನ್ನು ಕುರಿತು ಇದನ್ನು (ಮುಂದೆ ಹೇಳುವುದನ್ನು) ಹೇಳಿದನು.

ನಕುಲಃ

ಧನುಃ ಪ್ರಹರಣಂ ಶ್ರೇಷ್ಠಮಿತಿ ವಾದಃ ಪಿತಾಮಹ ।
ಮತಸ್ತು ಮಮ ಧರ್ಮಜ್ಞ ಖಡ್ಗ ಏವ ಸುಸಂಶಿತಃ ॥೨॥

ಧರ್ಮಜ್ಞ! ಪಿತಾಮಹ! ಬಿಲ್ಲು ಶ್ರೇಷ್ಠ ಪ್ರಹರಣ (ಹೊಡೆಯುವ ಸಾಧನ) ಎಂಬ ವಾದವಿದೆ. ಬಹಳ ಹರಿತವಾದ ಖಡ್ಗವೇ ಶ್ರೇಷ್ಠ ಪ್ರಹರಣ ಎಂದು ನನ್ನ ಅಭಿಪ್ರಾಯ.

ವಿಶೀರ್ಣೇ ಕಾರ್ಮುಕೇ ರಾಜನ್ ಪ್ರಕ್ಷೀಣೇಷು ಚ ವಾಜಿಷು ।
ಖಡ್ಗೇನ ಶಕ್ಯತೇ ಯುದ್ಧೇ ಸಾಧ್ವಾತ್ಮಾ ಪರಿರಕ್ಷಿತುಮ್ ॥೩॥

ಯುದ್ಧದಲ್ಲಿ ಬಿಲ್ಲು ನಾಶವಾದರೂ, ಕುದುರೆಗಳು ದುರ್ಬಲವಾದರೂ ಖಡ್ಗದಿಂದ ತನ್ನ ಪಕ್ಷವನ್ನು ಚೆನ್ನಾಗಿ ರಕ್ಷಿಸಬಹುದು.

ಶರಾಸನಧರಾಂಶ್ಚೈವ ಗದಾಶಕ್ತಿಧರಾಂಸ್ತಥಾ ।
ಏಕಃ ಖಡ್ಗಧರೋ ವೀರಃ ಸಮರ್ಥಃ ಪ್ರತಿಬಾಧಿತುಮ್ ॥೪॥

ಧನುರ್ಧಾರಿಗಳನ್ನು, ಗದಾಧಾರಿಗಳನ್ನು, ಶಕ್ತ್ಯಾಯುಧಧಾರಿಗಳನ್ನು ಖಡ್ಗಧರನಾದ ವೀರನೊಬ್ಬನೇ ಎದುರಿಸಲು, ಬಾಧಿಸಲು ಸಮರ್ಥ.

ಅತ್ರ ಮೇ ಸಂಶಯಶ್ಚೈವ ಕೌತೂಹಲಮತೀವ ಚ ।
ಕಿಂಸ್ವಿತ್ ಪ್ರಹರಣಂ ಶ್ರೇಷ್ಠಂ ಸರ್ವಯುದ್ಧೇಷು ಪಾರ್ಥಿವ ॥೫॥

ಪೃಥಿವೀಪತಿಯೇ! ಈ ವಿಷಯದಲ್ಲಿ ನನಗೆ ಬಹಳ ಸಂಶಯ ಮತ್ತು ಬಹಳ ಕುತೂಹಲವಿದೆ. ಎಲ್ಲ ಯುದ್ಧಗಳಲ್ಲಿ ಯಾವ ಆಯುಧವು ಶ್ರೇಷ್ಠ?

ಕಥಂ ಚೋತ್ಪಾದಿತಃ ಖಡ್ಗಃ ಕಸ್ಯಾರ್ಥಾಯ ಚ ಕೇನ ವಾ ।
ಪೂರ್ವಾಚಾರ್ಯಂ ಚ ಖಡ್ಗಸ್ಯ ಪ್ರಬ್ರೂಹಿ ಪ್ರಪಿತಾಮಹ ॥೬॥

ಪ್ರಪಿತಾಮಹ! ಖಡ್ಗವು ಹೇಗೆ ತಯಾರಿಸಲ್ಪಟ್ಟಿತು? ಯಾರಿಗಾಗಿ? ಯಾರಿಂದ? ಖಡ್ಗದ ಮೊದಲನೆಯ ಆಚಾರ್ಯ ಯಾರು? ದಯವಿಟ್ಟು ಹೇಳಿ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಮಾದ್ರೀಪುತ್ರಸ್ಯ ಧೀಮತಃ ।
ಸರ್ವಕೌಶಲಸಂಯುಕ್ತಂ ಸೂಕ್ಷ್ಮಚಿತ್ರಾರ್ಥವಚ್ಛುಭಮ್ ॥೭॥

ತತಸ್ತಸ್ಯೋತ್ತರಂ ವಾಕ್ಯಂ ಸ್ವರವರ್ಣೋಪಪಾದಿತಮ್ ।
ಶಿಕ್ಷಾನ್ಯಾಯೋಪಸಂಪನ್ನಂ ದ್ರೋಣಶಿಷ್ಯಾಯ ಪೃಚ್ಛತೇ ॥೮॥

ಉವಾಚ ಸರ್ವಧರ್ಮಜ್ಞೋ ಧನುರ್ವೇದಸ್ಯ ಪಾರಗಃ ।
ಶರತಲ್ಪಗತೋ ಭೀಷ್ಮೋ ನಕುಲಾಯ ಮಹಾತ್ಮನೇ ॥೯॥

ಧೀಮಂತನಾದ ಆ ಮಾದ್ರೀಪುತ್ರನ ಆ ಮಾತುಗಳನ್ನು ಕೇಳಿ ಸರ್ವಧರ್ಮಗಳನ್ನೂ ತಿಳಿದ, ಧನುರ್ವಿದ್ಯಾಪಾರಂಗತರಾದ, ಶರಶಯ್ಯೆಯಲ್ಲಿದ್ದ ಭೀಷ್ಮರು ದ್ರೋಣಶಿಷ್ಯನಾದ, ತಿಳಿಸಲು ಪ್ರಾರ್ಥಿಸಿರುವ, ಮಹಾತ್ಮ ನಕುಲನಿಗೆ ಸಕಲ ಕೌಶಲ ಸಂಪನ್ನವಾದ, ಸೂಕ್ಷ್ಮ ಮತ್ತು ವಿಚಿತ್ರ ಅರ್ಥಸಂಪನ್ನವಾದ, ಶುಭವಾದ,

ರೋಚಕಸ್ವರ-ವರ್ಣ ಸಂಪನ್ನವಾದ, ಬೋಧಕ ಯುಕ್ತಿಗಳಿಂದ ತುಂಬಿದ ಉತ್ತರವನ್ನು ಹೇಳಿದರು.

ಭೀಷ್ಮಃ

ತತ್ತ್ವಂ ಶೃಣುಷ್ವ ಮಾದ್ರೇಯ ಯದೇತತ್ ಪರಿಪೃಚ್ಛಸಿ ।
ಪ್ರಬೋಧಿತೋಽಸ್ಮಿ ಭವತಾ ಧಾತುಮಾನಿವ ಪರ್ವತಃ ॥೧೦॥

ಮಾದ್ರೀಸುತ! ನೀನು ಯಾವ ವಿಷಯವನ್ನು ಕೇಳಿರುವಿಯೋ ಅದನ್ನು ಕುರಿತು ಕೇಳು. ಕೆಂಪು ಧಾತುಮಯವಾದ ಪರ್ವತದಂತೆ ಇರುವ (ಶರೀರವೆಲ್ಲ ರಕ್ತಮಯವಾಗಿರುವ ಎಂದು ಹೇಳಲು ಈ ಉಪಮಾ) ನಾನು ನಿನ್ನಿಂದ ಉತ್ತಮ ವಿಷಯದ ಕಡೆ ಎಚ್ಚರಿಸಲ್ಪಟ್ಟಿದ್ದೇನೆ.

ಸಲಿಲೈಕಾರ್ಣವಂ ತಾತ ಪುರಾ ಸರ್ವಮಭೂದಿದಮ್ ।
ನಿಷ್ಕಂಪಮನಾಕಾಶಮನಿರ್ದೇಶ್ಯಮಹೀತಲಮ್ ॥೧೧॥

ಪ್ರಿಯ ನಕುಲ! ಹಿಂದೆ ಇದೆಲ್ಲವೂ (ಸಕಲ ಭೂಭಾಗವೂ) ಕೇವಲ ಜಲ ಸಾಗರವಾಗಿತ್ತು. ಯಾವ ಕಂಪನವೂ ಇರಲಿಲ್ಲ. ಜಾಗವಿರಲಿಲ್ಲ. ತೋರಿಸಬಹುದಾದ, ಗುರುತಿಸಬಹುದಾದ ಭೂಮಿಯು ಇರಲಿಲ್ಲ.

ತಮಃಸಂವೃತಮಸ್ಪರ್ಶಮತಿಗಂಭೀರದರ್ಶನಮ್ ।
ನಿಃಶಬ್ದಂ ಚಾಪ್ರಮೇಯಂ ಚ ತತ್ರ ಜಜ್ಞೇ ಪಿತಾಮಹಃ ॥೧೨॥

ಎಲ್ಲ ಕಡೆ ಕತ್ತಲು ಆವರಿಸಿತ್ತು. ಸ್ಪರ್ಶವಿಲ್ಲ. ಶಬ್ದವಿಲ್ಲ. ಅತಿಗಂಭೀರವಾಗಿ ಕಾಣುತ್ತಿತ್ತು. ತಿಳಿವಿಗೆ ನಿಲುಕದ ಸನ್ನಿವೇಶ. ಆಗ ಪಿತಾಮಹನು (ಚತುರ್ಮುಖ ಬ್ರಹ್ಮನು ಹುಟ್ಟಿದನು).

ಸೋಽಸೃಜದ್ ವಾಯುಮಗ್ನಿಂ ಚ ಭಾಸ್ಕರಂ ಚಾಪಿ ವೀರ್ಯವಾನ್ ।
ಆಕಾಶಮಸೃಜಚ್ಚೋರ್ಧ್ವಮಧೋ ಭೂಮಿಂ ಚ ನೈರ್ಋತಿಮ್ ॥೧೩॥

ವೀರ್ಯಶಾಲಿಯಾದ ಅವನು ವಾಯು, ಅಗ್ನಿ, ಸೂರ್ಯರನ್ನು ಸೃಷ್ಟಿಸಿದನು. ಮೇಲೆ ಆಕಾಶವನ್ನು, ಕೆಳಗೆ ಭೂಮಿಯನ್ನು ಮತ್ತು ನೈರ್ಋತಿಯನ್ನು (ರಾಕ್ಷಸ ಸಮೂಹವನ್ನು) ಸೃಷ್ಟಿಸಿದನು.

ನಭಃ ಸಚಂದ್ರತಾರಂ ಚ ನಕ್ಷತ್ರಾಣಿ ಗ್ರಹಾಂಸ್ತಥಾ ।
ಸಂವತ್ಸರಾನಹೋರಾತ್ರಾನೃತೂನಥ ಲವಾನ್ ಕ್ಷಣಾನ್ ॥೧೪॥

ಆಕಾಶದಲ್ಲಿ ಚಂದ್ರರನ್ನು, ತಾರೆಗಳನ್ನು, ನಕ್ಷತ್ರಗಳನ್ನು, ಗ್ರಹಗಳನ್ನು ಸೃಷ್ಟಿಸಿದನು. ಸಂವತ್ಸರ, ಹಗಲು, ರಾತ್ರಿ, ಋತು, ಲವ, ಕ್ಷಣ- ಈ ಕಾಲ ಘಟಕಗಳನ್ನು ಸೃಷ್ಟಿಸಿದನು.

ತತಃ ಶರೀರಂ ಲೋಕಸ್ಥಂ ಸ್ಥಾಪಯಿತ್ವಾ ಪಿತಾಮಹಃ ।
ಜನಯಾಮಾಸ ಭಗವಾನ್ ಪುತ್ರಾನುತ್ತಮತೇಜಸಃ ॥೧೫॥

ಅನಂತರ ಭಗವಾನ್ ಪಿತಾಮಹನು ಲೌಕಿಕ ಶರೀರವನ್ನು= ಲೋಕದಲ್ಲಿ ಮಾನವ ಮತ್ತು ಮಾನವೇತರ ದೇಹಗಳು ಹೇಗೆ ಇವೆಯೋ ಅವುಗಳ ಮಾದರಿಯನ್ನು, ಸೃಷ್ಟಿಸಿ ಅಂತಹ ದೇಹಗಳನ್ನು ಹೊಂದಿರುವ ಉತ್ತಮ ತೇಜಸ್ಸಿನ ಪುತ್ರರನ್ನು ಸೃಷ್ಟಿಸಿದನು.

ಮರೀಚಿಮೃಷಿಮತ್ರಿಂ ಚ ಪುಲಸ್ತ್ಯಂ ಪುಲಹಂ ಕ್ರತುಮ್ ।
ವಸಿಷ್ಠಾಂಗಿರಸೌ ಚೋಭೌ ರುದ್ರಂ ಚ ಪ್ರಭುಮೀಶ್ವರಮ್ ॥೧೬॥

ಆ ಪುತ್ರರು- ಋಷಿಗಳಾದ ಮರೀಚಿ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ ಮತ್ತು ಅಂಗಿರಸರು. ಇವರಲ್ಲದೆ ಆಳುವ ಸಾಮರ್ಥ್ಯವಿರುವ ಇಂದ್ರಾದಿಗಳಿಗಿಂತ ಮೇಲ್ಮಟ್ಟದ ಪ್ರಭು ರುದ್ರದೇವರನ್ನು ಸೃಷ್ಟಿಸಿದರು.

ಪ್ರಾಚೇತಸಸ್ತಥಾ ದಕ್ಷಃ ಕನ್ಯಾಃ ಷಷ್ಠಿಮಜೀಜನತ್ ।
ತಾ ವೈ ಬ್ರಹ್ಮರ್ಷಯಃ ಸರ್ವಾಃ ಪ್ರಜಾರ್ಥಂ ಪ್ರತಿಪೇದಿರೇ ॥೧೭॥

ಪ್ರಚೇತಸ್ ಮಹರ್ಷಿಯ ಮಗ ದಕ್ಷ ಪ್ರಜಾಪತಿ. ಇವನು ಅರವತ್ತು ಹೆಣ್ಣು ಮಕ್ಕಳನ್ನು ಪಡೆದನು. ಈ ಕನ್ಯೆಯರನ್ನು ಅತ್ರಿ ಮೊದಲಾದ ಬ್ರಹ್ಮರ್ಷಿಗಳು ಪ್ರಜಾ ವೃದ್ಧಿಗಾಗಿ ಮದುವೆಯಾದರು.

ತಾಭ್ಯೋ ವಿಶ್ವಾನಿ ಭೂತಾನಿ ದೇವಾಃ ಪಿತೃಗಣಾಸ್ತಥಾ ।
ಗಂಧರ್ವಾಪ್ಸರಸಶ್ಚೈವ ರಕ್ಷಾಂಸಿ ವಿವಿಧಾನಿ ಚ ॥೧೮॥

ಪತತ್ರಿಮೃಗಮೀನಾಶ್ಚ ಪ್ಲವಂಗಾಶ್ಚ ಮಹೋರಗಾಃ ।
ನಾನಾಕೃತಿಬಲಾಶ್ಚಾನ್ಯೇ ಜಲಕ್ಷಿತಿವಿಚಾರಿಣಃ ॥೧೯॥

ಔದ್ಭಿದಾಃ ಸ್ವೇದಜಾಶ್ಚೈವ ಅಂಡಜಾಶ್ಚ ಜರಾಯುಜಾಃ ।
ಜಜ್ಞೇ ತಾತ ತಥಾ ಸರ್ವಂ ಜಗತ್ ಸ್ಥಾವರಜಂಗಮಮ್ ॥೨೦॥

ಈ ದಕ್ಷಪುತ್ರಿಯರಿಂದ ಸಕಲ ಪ್ರಾಣಿಗಳು, ದೇವತೆಗಳು, ಪಿತೃಗಣಗಳು, ಗಂಧರ್ವರು, ಅಪ್ಸರೆಯರು, ವಿವಿಧ ರಾಕ್ಷಸರು, ಹಕ್ಕಿಗಳು, ಪಶುಗಳು, ಮೀನುಗಳು, ಕಪಿಗಳು, ಮಹಾಸರ್ಪಗಳು ಹುಟ್ಟಿದವು. ಇವೆಲ್ಲವೂ ವಿವಿಧ ಆಕೃತಿ ಮತ್ತು ಬಲವುಳ್ಳವುಗಳು. ನೀರಿನಲ್ಲಿ, ನೆಲದಲ್ಲಿ ಸಂಚರಿಸುವವುಗಳು. ಈ ವಿಧವಾದ ಬೇರೆ ಬೇರೆ ಪ್ರಾಣಿಗಳು ಹುಟ್ಟಿದವು. ಭೂಮಿಯನ್ನು ಭೇದಿಸಿ ಹುಟ್ಟುವ, ಬೆವರಿನಿಂದ ಹುಟ್ಟುವ, ಮೊಟ್ಟೆಗಳಿಂದ ಹುಟ್ಟುವ, ಗರ್ಭದಿಂದ ಹುಟ್ಟುವ ಜೀವ ಸಂಕುಲವು ಹುಟ್ಟಿತು. ಇಡೀ ಸ್ಥಾವರ-ಜಂಗಮ ಪ್ರಪಂಚವು ಹುಟ್ಟಿತು.

ಭೂತಸರ್ಗಮಿಮಂ ಕೃತ್ವಾ ಸರ್ವಲೋಕಪಿತಾಮಹಃ ।
ಶಾಶ್ವತಂ ವೇದಪಠಿತಂ ಧರ್ಮಂ ಚ ಯುಯುಜೇ ಪುನಃ ॥೨೧॥

ಸರ್ವಲೋಕ ಪಿತಾಮಹನಾದ ಬ್ರಹ್ಮದೇವನು ಈ ಜೀವಸಂಕುಲವನ್ನು ಸೃಷ್ಟಿಸಿ ವೇದೋಕ್ತವಾದ ಸನಾತನ ಧರ್ಮವನ್ನು ಎಲ್ಲರೂ ಅನುಸರಿಸುವ ವ್ಯವಸ್ಥೆಯನ್ನು ಮಾಡಿದನು.

ತಸ್ಮಿನ್ ಧರ್ಮೇ ಸ್ಥಿತಾ ದೇವಾಃ ಸಹಾಚಾರ್ಯಪುರೋಹಿತಾಃ ।
ಆದಿತ್ಯಾ ವಸವೋ ರುದ್ರಾಃ ಸಸಾಧ್ಯಾ ಮರುದಶ್ವಿನಃ ॥೨೨॥

ದೇವತೆಗಳು, ಆಚಾರ್ಯರು, ಪುರೋಹಿತರು, ಆದಿತ್ಯರು, ವಸುಗಳು, ರುದ್ರರು, ಸಾಧ್ಯರು, ಮರುತ್‌ಗಳು, ಅಶ್ವಿನೀದೇವತೆಗಳು ಈ ಸನಾತನ ಧರ್ಮದ ಅನುಷ್ಠಾನ ನಿರತರಾಗಿ ಅದರ ಪಾಲಕರಾದರು.

ಭೃಗ್ವತ್ರ್ಯಂಗಿರಸಃ ಸಿದ್ಧಾಃ ಕಾಶ್ಯಪಶ್ಚ ತಪೋಧನಃ ।
ವಸಿಷ್ಠಗೌತಮಾಗಸ್ತ್ಯಾಸ್ತಥಾ ನಾರದಪರ್ವತೌ ॥೨೩॥

ಋಷಯೋ ವಾಲಖಿಲ್ಯಾಶ್ಚ ಪ್ರಭಾಸಾಃ ಸಿಕತಾಸ್ತಥಾ ।
ಘೃತಾಶ್ಚ ಸೌಮ್ಯಾ ವಾಯವ್ಯಾ ವೈಖಾನಸಮರೀಚಿಪಾಃ ॥೨೪॥

ಅಕೃಷ್ಟಾಶ್ಚೈವ ಹಂಸಾಶ್ಚ ಋಷಯೋಽಗ್ನಿಯೋನಿಜಾಃ ।
ವಾನಪ್ರಸ್ಥಾಃ ಪೃಶ್ನಯಶ್ಚ ಸ್ಥಿತಾ ಬ್ರಹ್ಮಾನುಶಾಸನೇ ॥೨೫॥

ಭೃಗು-ಅತ್ರಿ-ಅಂಗಿರಸರು, ಸಿದ್ಧರು, ತಪೋಧನರಾದ ಕಾಶ್ಯಪ, ವಸಿಷ್ಠ, ಗೌತಮ, ಅಗಸ್ತ್ಯರು, ನಾರದರು, ಪರ್ವತ, ವಾಲಖಿಲ್ಯರು, ಪ್ರಭಾಸನಾಮಕ ಋಷಿಗಳು, ಸಿಕತನಾಮಕ ಋಷಿಗಳು, ಘೃತನಾಮಕ ಋಷಿಗಳು, ಸೋಮರಸಪಾನವನ್ನು ಮಾಡುವ ವಾಯವ್ಯರು, ವೈಖಾನಸರು, ಮರಿಚಿಪರು, ಅಕೃಷ್ಟಪಚ್ಯರು, ಹಂಸರು, ಅಗ್ನಿಜನ್ಯರಾದ ಋಷಿಗಳು, ವಾನಪ್ರಸ್ಥರು, ಪೃಶ್ನಿಗಳು- ಬ್ರಹ್ಮದೇವರ ಧರ್ಮಾನುಶಾಸನಕ್ಕೆ ನಿಷ್ಠರಾಗಿದ್ದರು.

ದಾನವೇಂದ್ರಾಸ್ತ ತ್ವತಿಕ್ರಮ್ಯ ತತ್ ಪಿತಾಮಹಶಾಸನಮ್ ।
ಧರ್ಮಸ್ಯಾಪಚಯಂ ಚಕ್ರುಃ ಕ್ರೋಧಲೋಭಸಮನ್ವಿತಾಃ ॥೨೬॥

ಕ್ರೋಧ-ಲೋಭಗಳಿಗೆ ವಶರಾದ ದಾನವ ನಾಯಕರು ಆ ಪಿತಾಮಹ ಶಾಸನವನ್ನು ಉಲ್ಲಂಘಿಸಿ ಧರ್ಮವ್ಯವಸ್ಥೆಗೆ ಅಪಚಯವನ್ನು (ಕ್ಷೀಣದೆಶೆಯನ್ನು) ಉಂಟು ಮಾಡಿದರು.

ಹಿರಣ್ಯಕಶಿಪುಶ್ಚೈವ ಹಿರಣ್ಯಾಕ್ಷೋ ವಿರೋಚನಃ ।
ಶಂಬರೋ ವಿಪ್ರಚಿತ್ತಿಶ್ಚ ಪ್ರಹ್ಲಾದೋ ನಮುಚಿರ್ಬಲಿಃ ॥೨೭॥

ಏತೇ ಚಾನ್ಯೇ ಚ ಬಹವಃ ಸಗಣಾ ದೈತ್ಯದಾನವಾಃ ।
ಧರ್ಮಸೇತುಮತಿಕ್ರಮ್ಯ ರೇಮಿರೇಧರ್ಮನಿಶ್ಚಯಾಃ ॥೨೮॥

ಅಧರ್ಮದಲ್ಲೇ ದೃಢ ಮನಸ್ಸು ಇದ್ದ ಹಿರಣ್ಯಕಶಿಪು, ಹಿರಣ್ಯಾಕ್ಷ, ವಿರೋಚನ, ಶಂಬರ, ವಿಪ್ರಚಿತ್ತಿ, ಪ್ರಹ್ಲಾದ, ನಮುಚಿ, ಬಲಿ- ಇವರು ಮತ್ತು ಇನ್ನೂ ಬಹಳ ದೈತ್ಯ-ದಾನವ ಗಣಗಳು ಧರ್ಮ ಸೇತುವೆಯನ್ನು ಅತಿಕ್ರಮಿಸಿ ವಿಹರಿಸಿದರು.

ಸರ್ವೇ ಸ್ಮ ತುಲ್ಯಜಾತೀಯಾ ಯಥಾ ದೇವಾಸ್ತಥಾ ವಯಮ್ ।
ಇತ್ಯೇವಂ ಹೇತುಮಾಸ್ಥಾಯ ಸ್ಪರ್ಧಮಾನಾಃ ಸುರರ್ಷಿಭಿಃ ॥೨೯॥

'ಎಲ್ಲರೂ ಒಂದೇ ಮೂಲದಿಂದ ಹುಟ್ಟಿದವರು. ಇಂದ್ರಾದಿ ದೇವವರ್ಗದವರು ಹೇಗೋ ನಾವೂ ಹಾಗೆಯೇ'. ಈ ತರ್ಕವನ್ನು ಅವಲಂಬಿಸಿ ದೇವತೆಗಳೊಂದಿಗೆ, ಋಷಿಗಳೊಂದಿಗೆ ಸ್ಪರ್ಧಿಸಿದರು.

ನ ಪ್ರಿಯಂ ನಾಪ್ಯನುಕ್ರೋಶಂ ಚಕ್ರುರ್ಭೂತೇಷು ಭಾರತ ।
ತ್ರೀನುಪಾಯಾನತಿಕ್ರಮ್ಯ ದಣ್ಡೇನ ರುರುಧುಃ ಪ್ರಜಾಃ ।
ನ ಜಗ್ಮುಃ ಸಂವಿದಂ ತೈಶ್ಚ ದರ್ಪಾದಸುರಸತ್ತಮಾಃ ॥೩೦॥

ಭಾರತ! ಇವರು ಭೂತ (ದೇಹಧಾರಿ ಚೇತನಗಳು) ಗಳಿಗೆ ಪ್ರಿಯವನ್ನು ಮಾಡಲಿಲ್ಲ. ಅವುಗಳ ಮೇಲೆ ದಯೆ ತೋರಲಿಲ್ಲ. ಮೂರು ಉಪಾಯಗಳನ್ನು (ಸಾಮ, ದಾನ, ಭೇದ) ಮೀರಿ ದಂಡೋಪಾಯದಿಂದಲೇ ಜನಗಳ ಮೇಲೆ ಮುತ್ತಿಗೆ ಹಾಕಿದರು. ಈ ಮಹಾ ಅಸುರರು ದರ್ಪದಿಂದ ಜನಗಳ ಜೊತೆ ವಿಶ್ವಾಸದ ವ್ಯವಹಾರವನ್ನೇ ಮಾಡಲಿಲ್ಲ.

ಖಡ್ಗದ ಉತ್ಪತ್ತಿ

ಅಥ ವೈ ಭಗವಾನ್ ಬ್ರಹ್ಮಾ ಬ್ರಹ್ಮರ್ಷಿಭಿರುಪಸ್ಥಿತಃ ।
ತದಾ ಹಿಮವತಃ ಪೃಷ್ಠೇ ಸುರಮ್ಯೇ ಪದ್ಮತಾರಕೇ ॥೩೧॥

ಶತಯೋಜನವಿಸ್ತಾರೇ ಮಣಿಮುಕ್ತಾಚಯಾಚಿತೇ ।
ತಸ್ಮಿನ್ ಗಿರಿವರೇ ಪುತ್ರ ಪುಷ್ಪಿತದ್ರುಮಕಾನನೇ ।
ತಸ್ಥೌ ಸ ವಿಬುಧಶ್ರೇಷ್ಠೋ ಬ್ರಹ್ಮಾ ಲೋಕಾರ್ಥಸಿದ್ಧಯೇ ॥೩೨॥

ಈ ಸ್ಥಿತಿಯು ಇದ್ದಾಗ ಒಮ್ಮೆ ಭಗವಾನ್ ಬ್ರಹ್ಮದೇವರು ಬ್ರಹ್ಮರ್ಷಿಗಳೊಂದಿಗೆ ಹಿಮಾಲಯದ ಒಂದು ಎತ್ತರ ಸ್ಥಳಕ್ಕೆ ಬಂದರು. ಆ ಸ್ಥಳ ಅತ್ಯಂತ ರಮಣೀಯವಾಗಿತ್ತು. ಅಲ್ಲಿ ನಕ್ಷತ್ರದಂತೆ ಹೊಳೆಯುತ್ತಿದ್ದ ಪದ್ಮಗಳು ವಿಪುಲವಾಗಿದ್ದವು. ಆ ಸ್ಥಳದ ವಿಸ್ತಾರ ನೂರು ಯೋಜನ. ಮಣಿಗಳ, ಮುತ್ತುಗಳ ರಾಶಿಗಳು ಅಲ್ಲಿ ವ್ಯಾಪಿಸಿದ್ದವು. ಪ್ರಿಯ ನಕುಲ! ಹೂ ಅರಳಿದ ಮರಗಳ ಕಾಡುಗಳಿದ್ದ ಆ ಶ್ರೇಷ್ಠ ಪರ್ವತದಲ್ಲಿ ದೇವಶ್ರೇಷ್ಠನಾದ ಬ್ರಹ್ಮನು ಲೋಕದ ಪ್ರಯೋಜನಕ್ಕಾಗಿ ನೆಲೆನಿಂತನು.

ತತೋ ವರ್ಷಸಹಸ್ರಾಂತೇ ವಿತಾನಮಕರೋತ್ ಕ್ರತುಮ್ ।
ವಿಧಿನಾ ಕಲ್ಪದೃಷ್ಟೇನ ಯಥೋಕ್ತೇನೋಪಪಾದಿತಮ್ ॥೩೩॥

ಒಂದು ಸಾವಿರ ವರ್ಷಗಳನಂತರ ಕಲ್ಪ (ಒಂದು ವೇದಾಂಗ) ದಲ್ಲಿ ಹೇಳಿದ ಕ್ರಮದಿಂದ ಬಹಳ ವಿಸ್ತಾರವಾದ ಯಾಗವನ್ನು ಮಾಡಿದನು.

ಋಷಿಭಿರ್ಯಜ್ಞಪಟುಭಿರ್ಯಥಾವತ್ ಕರ್ಮಕರ್ತೃಭಿಃ ।
ಮರುದ್ಭಿಃ ಪರಿಸಂಸ್ತೀರ್ಣಂ ದೀಪ್ಯಮಾನೈಶ್ಚ ಪಾವಕೈಃ ॥೩೪॥

ಕಾಂಚನೈರ್ಯಜ್ಞಭಾಂಡೈಶ್ಚ ಭ್ರಾಜಿಷ್ಣುಭಿರಲಂಕೃತಮ್ ।
ವೃತಂ ದೇವಗಣೈಶ್ಚೈವ ಪ್ರಬಭೌ ಯಜ್ಞಮಂಡಲಮ್ ॥೩೫॥

ಆ ಯಜ್ಞ ಪ್ರದೇಶದಲ್ಲಿ ಯಜ್ಞಕುಶಲರಾದ ಋಷಿಗಳು, ಅವರ ಮಾರ್ಗದರ್ಶನದಲ್ಲಿ ಯಜ್ಞದ ಕೆಲಸಗಳನ್ನು ಸರಿಯಾಗಿ ಮಾಡುವವರು ನೆರೆದಿದ್ದರು. ಅಗ್ನಿಗಳು ಪ್ರಜ್ವಲಿಸುತ್ತಿದ್ದವು. ಹೊಳೆಯುತ್ತಿದ್ದ ಬಂಗಾರದ ಯಜ್ಞ ಪಾತ್ರೆಗಳು ಆ ಸ್ಥಳವನ್ನು ಅಲಂಕರಿಸಿದ್ದವು. ದೇವಸಮೂಹವು ಅಲ್ಲಿ ಉಪಸ್ಥಿತವಾಗಿತ್ತು. ಇವೆಲ್ಲವುಗಳ ಸಮಾವೇಶದಿಂದ ಆ ಯಜ್ಞ ಸ್ಥಳವು ಪ್ರಕೃಷ್ಟ ಶೋಭೆಯನ್ನು ಹೊಂದಿತ್ತು.

ತಥಾ ಬ್ರಹ್ಮರ್ಷಿಭಿಶ್ಚೈವ ಸದಸ್ಯೈರುಪಶೋಭಿತಮ್ ।
ತತ್ರ ಘೋರತಮಂ ವೃತ್ತಮೃಷೀಣಾಂ ಮೇ ಪರಿಶ್ರುತಮ್ ॥೩೬॥

ಹಾಗೆಯೇ ಬ್ರಹ್ಮರ್ಷಿಗಳ, ಸಭಾಜನರ ಉಪಸ್ಥಿತಿಯಿಂದ ಆ ಸ್ಥಳವು ಕಂಗೊಳಿಸುತ್ತಿತ್ತು. ಆಗ ಅಲ್ಲಿ ಮಹಾಘೋರವಾದ ಘಟನೆಯೊಂದು ನಡೆಯಿತು ಎಂದು ಋಷಿಗಳಿಂದ ಕೇಳಿದ್ದೇನೆ.

ಚಂದ್ರಮಾ ವಿಮಲಂ ವ್ಯೋಮ ಯಥಾಭ್ಯುದಿತತಾರಕಮ್ ।
ವಿದಾರ್ಯಾಗ್ನಿಂ ತಥಾ ಭೂತಮುತ್ಥಿತಂ ಶ್ರೂಯತೇ ತತಃ ॥೩೭॥

ನಕ್ಷತ್ರಗಳ ಉದಯವಾಗಿರುವ ನಿರ್ಮಲ ಆಕಾಶದಲ್ಲಿ ಚಂದ್ರನು ಉದಯಿಸುವಂತೆ ಹೋಮಾಗ್ನಿಯನ್ನು ಭೇದಿಸಿ ಒಂದು ಪ್ರಾಣಿಯು ಉದಯಿಸಿತು.

ನೀಲೋತ್ಪಲಸವರ್ಣಾಭಂ ತೀಕ್ಷ್ಣದಂಷ್ಟ್ರಂ ಕೃಶೋದರಮ್ ।
ಪ್ರಾಂಶು ದುರ್ದರ್ಶನಂ ಚೈವಾಪ್ಯತಿತೇಜಸ್ತಥೈವ ಚ ॥೩೮॥

ನೀಲನೈದಿಲೆಯ ಬಣ್ಣ, ತೀಕ್ಷ್ಣಕೋರೆಹಲ್ಲುಗಳು, ತೆಳು ಉದರ, ಎತ್ತರ, ಕಣ್ಣು ಕೋರೈಸುವ ತೇಜಸ್ಸು- ಇವು ಆ ಪ್ರಾಣಿಯಲ್ಲಿದ್ದ ಲಕ್ಷಣಗಳು.

ತಸ್ಮಿನ್ನುತ್ಪತಮಾನೇ ಚ ಪ್ರಚಚಾಲ ವಸುಂಧರಾ ।
ತತ್ರೋರ್ಮಿಕಲಿಲಾವರ್ತಶ್ಚುಕ್ಷುಭೇ ಚ ಮಹಾರ್ಣವಃ ॥೩೯॥

ಆ ಪ್ರಾಣಿಯು ಮೇಲೆ ಬಂದಾಗ ಭೂಮಿಯು ನಡುಗಿತು. ಮಹಾಸಮುದ್ರವು, ಅಲ್ಲಿ ದೊಡ್ಡ ದೊಡ್ಡ ಅಲೆಗಳು ಮತ್ತು ಸುಳಿಗಳು ಹುಟ್ಟಿ, ಅಲ್ಲೋಲಕಲ್ಲೋಲವಾಯಿತು.

ಪೇತುರುಲ್ಕಾ ಮಹೋತ್ಪಾತಾಃ ಶಾಖಾಶ್ಚ ಮುಮುಚುರ್ದ್ರುಮಾಃ ।
ಅಪ್ರಸನ್ನಾ ದಿಶಃ ಸರ್ವಾಃ ಪವನಶ್ಚಾಶಿವೋ ವವೌ ।
ಮುಹುರ್ಮುಹುಶ್ಚ ಭೂತಾನಿ ಪ್ರಾವ್ಯಥಂತ ಭಯಾತ್ ತಥಾ ॥೪೦॥

ಉಲ್ಕೆಗಳು ಬಿದ್ದು ಮಹಾ ಉತ್ಪಾತಗಳ ಸೂಚನೆಯಾಯಿತು. ಮರಗಳಿಂದ ಕೊಂಬೆಗಳು ಮುರಿದುಬಿದ್ದವು. ಎಲ್ಲ ದಿಕ್ಕುಗಳಲ್ಲೂ ಅಶಾಂತ ಸ್ಥಿತಿಯು ಉಂಟಾಗಿತ್ತು. ಗಾಳಿಯು ಹಾನಿಕರವಾಗಿ ಬೀಸಿತು. ಪ್ರಾಣಿಗಳು ಭಯದಿಂದ ಮತ್ತೆ ಮತ್ತೆ ಸಂಕಟಕ್ಕೆ ಒಳಗಾದವು.

ತತಃ ಸುತುಮುಲಂ ದೃಷ್ಟ್ವಾ ತದದ್ಭುತಮುಪಸ್ಥಿತಮ್ ।
ಮಹರ್ಷಿಸುರಗಂಧರ್ವಾನುವಾಚೇದಂ ಪಿತಾಮಹಃ ॥೪೧॥

ಅಲ್ಲಿ ಪ್ರಾದುರ್ಭವಿಸಿದ್ದ ಭಾರಿ ತುಮುಲವನ್ನು ಹುಟ್ಟಿಸಿದ್ದ ಆ ಅದ್ಭುತ ಭೂತವನ್ನು ನೋಡಿ ಬ್ರಹ್ಮದೇವರು ಮಹರ್ಷಿಗಳಿಗೆ ಸುರರಿಗೆ ಮತ್ತು ಗಂಧರ್ವರಿಗೆ ಹೇಳಿದರು.

ಮಯ್ಯೈತಚ್ಚಿಂತಿತಂ ಭೂತಮಸಿರ್ನಾಮೈಷ ವೀರ್ಯವಾನ್ ।
ರಕ್ಷಣಾರ್ಥಾಯ ಲೋಕಸ್ಯ ವಧಾಯ ಚ ಸುರದ್ವಿಷಾಮ್ ॥೪೨॥

ಈ ಭೂತವು ಆವಿರ್ಭವಿಸಬೇಕೆಂದು ನನ್ನ ಚಿಂತನೆಯಿತ್ತು. ವೀರ್ಯಶಾಲಿಯಾದ ಇದಕ್ಕೆ ಅಸಿ ಎಂದು ಹೆಸರು. ಲೋಕದ ರಕ್ಷಣೆಗಾಗಿ, ಸಜ್ಜನರ ದ್ವೇಷಿಗಳ ವಧೆಗಾಗಿ ಇದರ ಆವಿರ್ಭಾವ.

ತತಸ್ತದ್ರೂಪಮುತ್ಸೃಜ್ಯ ಬಭೌ ನಿಸ್ತ್ರಿಂಶ ಏವ ಸಃ ।
ವಿಮಲಸ್ತೀಕ್ಷ್ಣಧಾರಶ್ಚ ಕಾಲಾಂತಕ ಇವೋದ್ಯತಃ ॥೪೩॥

ಅನಂತರ ಆ ಭೂತವು ಆ ರೂಪವನ್ನು ವಿಸರ್ಜಿಸಿ ಖಡ್ಗವೇ ಆಗಿ ಶೋಭಿಸಿತು. ತೀಕ್ಷ್ಣವಾದ ಅಲಗನ್ನು ಹೊಂದಿದ್ದ ಅದು ವಿಶುದ್ಧವಾಗಿತ್ತು. ನಾಶಕಾರ್ಯಕ್ಕೆ ಉದ್ಯುಕ್ತನಾದ ಯಮನಂತಿತ್ತು.

ತತಸ್ತಂ ಶಿತಿಕಂಠಾಯ ರುದ್ರಾಯರ್ಷಭಕೇತವೇ ।
ಬ್ರಹ್ಮಾ ದದಾವಸಿಂ ದೀಪ್ತಮಧರ್ಮಪ್ರತಿವಾರಣಮ್ ॥೪೪॥

ಆನಂತರ ಬ್ರಹ್ಮದೇವರು ಅಧರ್ಮ ನಾಶಕರವಾದ, ಉಜ್ವಲವಾದ ಆ ಖಡ್ಗವನ್ನು ಋಷಭವಾಹನನಾದ, ನೀಲಕಂಠನಾದ ರುದ್ರದೇವರಿಗೆ ಕೊಟ್ಟರು.

ತತಃ ಸ ಭಗವಾನ್ ರುದ್ರೋ ಬ್ರಹ್ಮರ್ಷಿಗಣಸಂಸ್ತುತಃ ।
ಪ್ರಗೃಹ್ಯಾಸಿಮಮೇಯಾತ್ಮಾ ರೂಪಮನ್ಯಚ್ಚಕಾರ ಹ ॥೪೫॥

ಆನಂತರ ಬ್ರಹ್ಮರ್ಷಿಗಳು ರುದ್ರದೇವರನ್ನು ಸ್ತುತಿಸಿದರು. ಯಾರಿಗೂ ಪೂರ್ಣವಾಗಿ ತಿಳಿಯದ ಮಹಿಮೆಯುಳ್ಳ ಭಗವಾನ್ ರುದ್ರದೇವರು ಖಡ್ಗವನ್ನು ಹಿಡಿದುಕೊಂಡು ಬೇರೆ ಆಕೃತಿಯನ್ನು ಪಡೆದರು.

ಚತುರ್ಬಾಹುಃ ಸ್ಪೃಶನ್ ಮೂರ್ಧ್ನಾ ಭೂಸ್ಥಿತೋಽಪಿ ನಭಸ್ತಲಮ್ ।
ಊರ್ಧ್ವದೃಷ್ಟಿರ್ಮಹಾಲಿಂಗೋ ಮುಖಾಜ್ಜ್ವಾಲಾಃ ಸಮುತ್ಸೃಜನ್ ।
ವಿಕುರ್ವನ್ ಬಹುಧಾ ವರ್ಣಾನ್ನೀಲಪಾಂಡುರಲೋಹಿತಾನ್ ॥೪೬॥

ಬಿಭ್ರತ್ಕೃಷ್ಣಾಜಿನಂ ವಾಸೋ ಹೇಮಪ್ರವರತಾರಕಮ್ ।
ನೇತ್ರಂ ಚೈಕಂ ಲಲಾಟೇನ ಭಾಸ್ಕರಪ್ರತಿಮಂ ಮಹತ್ ।
ಶುಶುಭಾತೇ ಚ ವಿಮಲೇ ದ್ವೇ ನೇತ್ರೇ ಕೃಷ್ಣಪಿಂಗಲೇ ॥೪೭॥

ನೆಲದ ಮೇಲೆ ನಿಂತಿರುವ ಆ ಆಕೃತಿಯ ತಲೆಯು ಆಕಾಶವನ್ನು ಮುಟ್ಟಿದೆ. ಊರ್ಧ್ವಮುಖವಾದ ಕಣ್ಣುಗಳು, ದೊಡ್ಡ ಲಿಂಗದ ಆಕೃತಿ. ಅದು ಬಾಯಿಂದ ಜ್ವಾಲೆಗಳನ್ನು ಸೃಷ್ಟಿಸುತ್ತಿದೆ. ನೀಲಿ, ಬಿಳಿ, ಕೆಂಪು ಮೊದಲಾದ ನಾನಾ ವರ್ಣಗಳನ್ನು ಸೃಷ್ಟಿಸುತ್ತಿದೆ. ಕೃಷ್ಣಾಜಿನವು ವಸ್ತ್ರ, ಅದರಲ್ಲಿ ಸುವರ್ಣಮಯ ನಕ್ಷತ್ರಾಕಾರಗಳು, ಹಣೆಯಲ್ಲಿ ಸೂರ್ಯನಷ್ಟು ತೇಜೋಮಯವಾದ ಒಂದು ಕಣ್ಣು. ಕಪ್ಪು-ಪಿಂಗಲ (ಕಂದು) ವರ್ಣಗಳ ಶುಭ್ರವಾದ ಎರಡು ಕಣ್ಣುಗಳು.

ತತೋ ದೇವೋ ಮಹಾದೇವಃ ಶೂಲಪಾಣಿರ್ಭಗಾಕ್ಷಿಹಾ ।
ಸಂಪ್ರಗೃಹ್ಯ ತು ನಿಸ್ತ್ರಿಂಶಂ ಕಾಲಾರ್ಕಾನಲಸನ್ನಿಭಮ್ ॥೪೮॥

ತ್ರಿಕೂಟಂ ಚರ್ಮ ಚೋದ್ಯಮ್ಯ ಸವಿದ್ಯುತಮಿವಾಂಬುದಮ್ ।
ಚಚಾರ ವಿವಿಧಾನ್ ಮಾರ್ಗಾನ್ ಮಹಾಬಲಪರಾಕ್ರಮಃ ।
ವಿಧುನ್ವನ್ನಸಿಮಾಕಾಶೇ ದಾನವಾಂತಚಿಕೀರ್ಷಯಾ ॥೪೯॥

ಅನಂತರ ಭಗಾಕ್ಷನನ್ನು (ದೇವೇಂದ್ರನನ್ನು?) ನಿಗ್ರಹಿಸಿದ ಶೂಲಪಾಣಿಯಾದ ಮಹಾಬಲ ಮತ್ತು ಮಹಾಪರಾಕ್ರಮಶಾಲಿಯಾದ ರುದ್ರದೇವನು ಪ್ರಲಯ ಕಾಲದ ಸೂರ್ಯ ಮತ್ತು ಅಗ್ನಿಯಂತಿದ್ದ ಖಡ್ಗವನ್ನು ಹಿಡಿದು, ಮೂರು ಕೂಟ (ಮುಂದಕ್ಕೆ ಚಾಚಿರುವ ಭಾಗ)ಗಳನ್ನು ಹೊಂದಿರುವ, ಮಿಂಚಿನಿಂದ ಕೂಡಿರುವ ಮೋಡದಂತಿರುವ ಗುರಾಣಿಯನ್ನು ಎತ್ತಿಹಿಡಿದು, ದಾನವರ ಸಂಹಾರವನ್ನು ಮಾಡುವ ಇಚ್ಛೆಯಿಂದ ಆಕಾಶದಲ್ಲಿ ಖಡ್ಗವನ್ನು ಝಳಪಿಸುತ್ತಾ ವಿವಿಧ ವರಸಗಳಲ್ಲಿ ಮತ್ತು ಭಂಗಿಗಳಲ್ಲಿ ಸುತ್ತು ಹಾಕಿದನು.

ತಸ್ಯ ಹಾಸಾದ್ ವಿನಾದ್ಯೋಭೌ ಪ್ರಚಚಾರ ಚಮೂಂ ಚ ಹಾ ।
ಬಭೌ ಪ್ರತಿಭಯಂ ರೂಪಂ ತದಾ ರುದ್ರಸ್ಯ ಭಾರತ ॥೫೦॥

ಅಟ್ಟಹಾಸದಿಂದ ಅಂತರಿಕ್ಷ-ಭೂಮಿಗಳಲ್ಲಿ ಪ್ರತಿನಾದವನ್ನೆಬ್ಬಿಸಿ, ಮಹಾಹಾಸವನ್ನು ಮಾಡುತ್ತಿದ್ದ ಆ ರುದ್ರದೇವರ ರೂಪವು ಬಹಳ ಭಯಂಕರವಾಗಿ ಕಾಣಿಸಿತು.

ತದ್ರೂಪಧಾರಿಣಂ ರುದ್ರಂ ರೌದ್ರಕರ್ಮ ಚಿಕೀರ್ಷವಃ ।
ನಿಶಮ್ಯ ದಾನವಾಃ ಸರ್ವೇ ಹೃಷ್ಟಾಃ ಸಮಭಿದುದ್ರುವುಃ ॥೫೧॥

ಎಲ್ಲ ದಾನವರೂ ಆ ಭಯಂಕರ ರೂಪದ ರುದ್ರದೇವರನ್ನು ನೋಡಿ ತಾವೂ ಉಗ್ರ ಕರ್ಮವನ್ನೇ ಮಾಡಲು ಬಯಸಿ ಹರ್ಷ-ಉತ್ಸಾಹಭರಿತರಾಗಿ ರುದ್ರದೇವರ ಮೇಲೆ ಎರಗಿದರು.

ಅಶ್ಮಭಿಶ್ಚಾಪ್ಯವರ್ಷಂತ ಪ್ರದೀಪ್ತೈಶ್ಚ ತಥೋಲ್ಮುಕೈಃ ।
ಘೋರೈಃ ಪ್ರಹರಣೈಶ್ಚಾನ್ಯೈಃ ಶಿತಧಾರೈರಯೋಮುಖೈಃ ॥೫೨॥

ಕಲ್ಲುಗಳ ಮಳೆಯನ್ನು ಸುರಿಸಿದರು. ಉಜ್ವಲ ಕೊಳ್ಳಿಗಳ ಮಳೆಯನ್ನು ಸುರಿಸಿದರು. ಹರಿತ ಅಲಗುಗಳಿರುವ ಕಬ್ಬಿಣದ ತುದಿಗಳಿರುವ ಅನೇಕ ಘೋರ ಆಯುಧಗಳಿಂದ ಆಕ್ರಮಿಸಿದರು.

ತತಸ್ತದ್ದಾನವಾನೀಕಂ ಸಂಪ್ರಣೇತಾರಮಚ್ಯುತಮ್ ।
ರುದ್ರಖಡ್ಗಬಲೋದ್ಧೂತಂ ಪ್ರಚಚಾಲ ಮುಮೋಹ ಚ ॥೫೩॥

ದೇವತೆಗಳ ನಾಯಕರಾದ, ಯಾವುದೇ ಚ್ಯುತಿಗೆ ಒಳಗಾಗದ ರುದ್ರದೇವರನ್ನು (ನೋಡಿ), ಅವರ ಖಡ್ಗದ ಬಲದಿಂದ ಪುಡಿಯಾದ ಆ ದಾನವ ಸೈನ್ಯವು ಕಂಪಿಸಿತು. ಮೋಹಕ್ಕೆ ಒಳಗಾಯಿತು.

ಚಿತ್ರಂ ಶೀಘ್ರತರತ್ವಾಚ್ಚ ಚರಂತಮಸಿಧಾರಿಣಮ್ ।
ತಮೇಕಮಸುರಾಃ ಸರ್ವೇ ಸಹಸ್ರಮಿತಿ ಮೇನಿರೇ ॥೫೪॥

ಖಡ್ಗಧಾರಿಯಾದ, ವಿಚಿತ್ರವಾಗಿ ಚಲಿಸುತ್ತಿರುವ ಒಬ್ಬರೇ ರುದ್ರದೇವರನ್ನು ಅವರ ಅತಿವೇಗದಿಂದಾಗಿ ಅಸುರರೆಲ್ಲರೂ ಸಾವಿರ ರುದ್ರರು ಎಂದು ತಿಳಿದರು.

ಛಿಂದನ್ ಭಿಂದನ್ ರುಜನ್ ಕೃಂತನ್ ದಾರಯನ್ ಪ್ರಮಥನ್ನಪಿ ।
ಅಚರದ್ ದೈತ್ಯಸಂಘೇಷು ರುದ್ರೋಽಗ್ನಿರಿವ ಕಕ್ಷಗಃ ॥೫೫॥

ರುದ್ರದೇವರು ಕಾಡ್ಗಿಚ್ಚಿನಂತೆ ಛೇದಿಸುತ್ತಾ, ಒಡೆಯುತ್ತಾ, ಗಾಯಗೊಳಿಸುತ್ತಾ, ಕತ್ತರಿಸುತ್ತಾ, ಸೀಳುತ್ತಾ, ಮಥಿಸುತ್ತಾ ದೈತ್ಯ ಸಮೂಹದಲ್ಲಿ ಸಂಚರಿಸಿದರು.

ಅಸಿವೇಗಪ್ರರುಗ್ಣಾಸ್ತೇ ಛಿನ್ನಬಾಹೂರುವಕ್ಷಸಃ ।
ಸಂಪ್ರಕೃತ್ತೋತ್ತಮಾಂಗಾಶ್ಚ ಪೇತುರುರ್ವ್ಯಾಂ ಮಹಾಸುರಾಃ ॥೫೬॥

ಖಡ್ಗದ ವೇಗದಿಂದ ಘಾಸಿಗೊಳಗಾದ ಆ ಮಹಾಸುರರ ಬಾಹು, ತೊಡೆ, ಎದೆಗಳು ಕತ್ತರಿಸಲ್ಪಟ್ಟವು. ತಲೆಗಳೂ ಕತ್ತರಿಸಲ್ಪಟ್ಟವು. ಈ ಸ್ಥಿತಿಯಲ್ಲಿ ಎಲ್ಲರೂ ನೆಲಕ್ಕೆ ಉರುಳಿದರು.

ಅಪರೇ ದಾನವಾ ಭಗ್ನಾ ರುದ್ರಘಾತಾವಪೀಡಿತಾಃ ।
ಅನ್ಯೋನ್ಯಮಭಿನರ್ದಂತೋ ದಿಶಃ ಸಂಪ್ರತಿಪೇದಿರೇ ॥೫೭॥

ಇನ್ನಷ್ಟು ದಾನವರು ರುದ್ರದೇವರ ಹೊಡೆತದಿಂದ ಪೀಡಿತರಾಗಿ ಒಬ್ಬರ ಕಡೆಗೆ ಇನ್ನೊಬ್ಬರು ಗರ್ಜಿಸುತ್ತಾ ದಿಕ್ಕು ದಿಕ್ಕುಗಳಿಗೆ ಪಲಾಯನಗೈದರು.

ಭೂಮಿಂ ಕೇಚಿತ್ ಪ್ರವಿವಿಶುಃ ಪರ್ವತಾನಪರೇ ತಥಾ ।
ಅಪರೇ ಜಗ್ಮುರಾಕಾಶಮಪರೇऽಂಭಃ ಸಮಾವಿಶನ್ ॥೫೮॥

ಕೆಲವರು ಭೂಮಿಯ ಒಳಗೆ ಪ್ರವೇಶಿಸಿದರು. ಕೆಲವರು ಪರ್ವತಗಳಿಗೆ ಏರಿ ಹೋದರು. ಮತ್ತೆ ಕೆಲವರು ಆಕಾಶಕ್ಕೆ ಹಾರಿ ಹೋದರು. ಕೆಲವರು ಜಲಪ್ರವೇಶ ಮಾಡಿದರು.

ತಸ್ಮಿನ್ ಮಹತಿ ಸಂವೃತ್ತೇ ಸಮರೇ ಭೃಶದಾರುಣೇ ।
ಬಭೌ ಭೂಮಿಃ ಪ್ರತಿಭಯಾ ತದಾ ರುಧಿರಕರ್ದಮಾ ॥೫೯॥

ಅತ್ಯಂತ ದಾರುಣವಾದ ಆ ದೊಡ್ಡ ಯುದ್ಧವು ನಡೆದಾಗ ಭೂಮಿಯು ರಕ್ತದ ಕೆಸರು ಆಗಿ ಭಯಂಕರವಾಗಿ ಕಾಣಿಸಿತು.

ದಾನವಾನಾಂ ಶರೀರೈಶ್ಚ ಮಹದ್ಭಿಃ ಶೋಣಿತೋಕ್ಷಿತೈಃ ।
ಸಮಾಕೀರ್ಣಾ ಮಹಾಬಾಹೋ ಶೈಲೈರಿವ ಸಕಿಂಶುಕೈಃ ॥೬೦॥

ಮಹಾಬಾಹುವೇ! ರಕ್ತವನ್ನು ಎರಚಿಕೊಂಡಿದ್ದ ದೊಡ್ಡ ದೊಡ್ಡ ಶರೀರಗಳಿಂದ ಭೂಮಿಯು ತುಂಬಿಹೋಗಿತ್ತು. ಭೂಮಿಯು ಕಿಂಶುಕಪುಷ್ಪಗಳಿರುವ ಬೆಟ್ಟಗಳಿಂದ ತುಂಬಿದಂತೆ ಇತ್ತು.

ರುಧಿರೇಣ ಪರಿಕ್ಲಿನ್ನಾ ಪ್ರಬಭೌ ವಸುಧಾ ತದಾ ।
ರಕ್ತಾರ್ದ್ರವಸನಾ ಶ್ಯಾಮಾ ನಾರೀವ ಮದವಿಹ್ವಲಾ ॥೬೧॥

ಆಗ ರಕ್ತದಿಂದ ತೊಯ್ದ ಭೂಮಿಯು ಕೆಂಪು ಒದ್ದೆಸೀರೆಯನ್ನುಟ್ಟ, ಮದವೇರಿದ, ಆತಂಕಗೊಂಡ ಕಪ್ಪು ಮಹಿಳೆಯಂತೆ ಕಾಣಿಸಿತು.

ಸ ರುದ್ರೋ ದಾನವಾನ್ ಹತ್ವಾ ಕೃತ್ವಾ ಧರ್ಮೋತ್ತರಂ ಜಗತ್ ।
ರೌದ್ರಂ ರೂಪಂ ವಿಹಾಯಾಶು ಚಕ್ರೇ ರೂಪಂ ಶಿವಂ ಶಿವಃ ॥೬೨॥

ಆ ಮಂಗಳಕರ ರುದ್ರದೇವರು ದಾನವರನ್ನು ಕೊಂದು, ಜಗತ್ತನ್ನು ಧರ್ಮಮಯವನ್ನಾಗಿ (ಧರ್ಮನಿಷ್ಠೆಯಿಂದ ಉತ್ಕೃಷ್ಟವಾಗಿರುವಂತೆ) ಮಾಡಿ, ಉಗ್ರರೂಪವನ್ನು ಬಿಟ್ಟು ಸೌಮ್ಯರೂಪವನ್ನು ಪಡೆದರು.

ತತೋ ಮಹರ್ಷಯಃ ಸರ್ವೇ ಸರ್ವೇ ದೇವಗಣಾಸ್ತಥಾ ।
ಜಯೇನಾದ್ಭುತಕಲ್ಪೇನ ದೇವದೇವಮಥಾರ್ಚಯನ್ ॥೬೩॥

ಅನಂತರ ಎಲ್ಲ ಮಹರ್ಷಿಗಳು ಮತ್ತು ಸಕಲ ದೇವವೃಂದವು ದೇವದೇವನಾದ ಶಿವನನ್ನು ಅದ್ಭುತ ದರ್ಜೆಯ ವಿಜಯವನ್ನು ಸಾಧಿಸಿದ ಕಾರಣದಿಂದ ಸತ್ಕರಿಸಿದರು.

ತತಃ ಸ ಭಗವಾನ್ ರುದ್ರೋ ದಾನವಕ್ಷತಜೋಕ್ಷಿತಮ್ ।
ಅಸಿಂ ಧರ್ಮಸ್ಯ ಗೋಪ್ತಾರಂ ದದೌ ಸತ್ಕೃತ್ಯ ವಿಷ್ಣವೇ ॥೬೪॥

ಅನಂತರ ಭಗವಾನ್ ರುದ್ರದೇವರು ದಾನವರ ರಕ್ತದಿಂದ ತೊಯ್ದಿದ್ದ, ಧರ್ಮ ರಕ್ಷಣೆಯ ಸಾಧನವಾದ ಆ ಖಡ್ಗವನ್ನು ಶುದ್ಧಿ ಮಾಡಿ, ಸತ್ಕಾರ ಪೂರ್ವಕವಾಗಿ ವಿಷ್ಣುವಿಗೆ ಸಮರ್ಪಿಸಿದರು.

ವಿಷ್ಣುರ್ಮರೀಚಯೇ ಪ್ರಾದಾನ್ಮರೀಚಿರ್ಭಗವಾಂಶ್ಚ ತಮ್ ।
ಮಹರ್ಷಿಭ್ಯೋ ದದೌ ಖಡ್ಗಮೃಷಯೋ ವಾಸವಾಯ ತು ॥೬೫॥

ವಿಷ್ಣುವು ಮರೀಚಿ ಮಹರ್ಷಿಗೆ ಕೊಟ್ಟನು. ಭಗವಾನ್ ಮರೀಚಿಗಳು ಖಡ್ಗವನ್ನು ಮಹರ್ಷಿಗಳಿಗೆ ಕೊಟ್ಟರು. ಅವರು ದೇವೇಂದ್ರನಿಗೆ ಕೊಟ್ಟನು.

ಮಹೇಂದ್ರೋ ಲೋಕಪಾಲೇಭ್ಯೋ ಲೋಕಪಾಲಾಸ್ತು ಪುತ್ರಕ ।
ಮನವೇ ಸೂರ್ಯಪುತ್ರಾಯ ದದುಃ ಖಡ್ಗಂ ಸುವಿಸ್ತರಮ್ ॥೬೬॥

ಮಹೇಂದ್ರನು ಲೋಕಪಾಲಕರಿಗೆ ಕೊಟ್ಟನು. ಲೋಕಪಾಲಕರು ಸೂರ್ಯಪುತ್ರ ಮನುವಿಗೆ ಕೊಟ್ಟರು.

ಊಚುಶ್ಚೈನಂ ತಥೈವಾದ್ಯಂ ಮಾನುಷಾಣಾಂ ತ್ವಮೀಶ್ವರಃ ।
ಅಸಿನಾ ಧರ್ಮಗರ್ಭೇಣ ಪಾಲಯಸ್ವ ಪ್ರಜಾ ಇತಿ ॥೬೭॥

ಅವರು ಮನುವಿಗೆ ಹೇಳಿದರು. 'ನೀನು ಸಕಲ ಮಾನವರ ಈಶ್ವರ. ತನ್ನೊಳಗೆ ಧರ್ಮವನ್ನು ಅಡಗಿಸಿಕೊಂಡಿರುವ ಈ ಖಡ್ಗದಿಂದ ಪ್ರಜೆಗಳನ್ನು ಪಾಲಿಸು.

ಧರ್ಮಸೇತುಮತಿಕ್ರಾಂತಾಃ ಸೂಕ್ಷ್ಮಸ್ಥೂಲಾರ್ಥಕಾರಣಾತ್ ।
ವಿಭಜ್ಯ ದಂಡಂ ರಕ್ಷ್ಯಾಃ ಸ್ಯುರ್ಧರ್ಮತೋ ನ ಯದೃಚ್ಛಯಾ ॥೬೮॥

ಭೂಮಿಂ ಕೇಚಿತ್ ಪ್ರವಿವಿಶುಃ ಪರ್ವತಾನಪರೇ ತಥಾ ।
ಅಪರೇ ಜಗ್ಮುರಾಕಾಶಮಪರೇಽಂಭಃ ಸಮಾವಿಶನ್ ॥೫೮॥

ಕೆಲವರು ಭೂಮಿಯ ಒಳಗೆ ಪ್ರವೇಶಿಸಿದರು. ಕೆಲವರು ಪರ್ವತಗಳಿಗೆ ಏರಿ ಹೋದರು. ಮತ್ತೆ ಕೆಲವರು ಆಕಾಶಕ್ಕೆ ಹಾರಿ ಹೋದರು. ಕೆಲವರು ಜಲಪ್ರವೇಶ ಮಾಡಿದರು.

ತಸ್ಮಿನ್ ಮಹತಿ ಸಂವೃತ್ತೇ ಸಮರೇ ಭೃಶದಾರುಣೇ ।
ಬಭೌ ಭೂಮಿಃ ಪ್ರತಿಭಯಾ ತದಾ ರುಧಿರಕರ್ದಮಾ ॥೫೯॥

ಅತ್ಯಂತ ದಾರುಣವಾದ ಆ ದೊಡ್ಡ ಯುದ್ಧವು ನಡೆದಾಗ ಭೂಮಿಯು ರಕ್ತದ ಕೆಸರು ಆಗಿ ಭಯಂಕರವಾಗಿ ಕಾಣಿಸಿತು.

ದಾನವಾನಾಂ ಶರೀರೈಶ್ಚ ಮಹದ್ಭಿಃ ಶೋಣಿತೋಕ್ಷಿತೈಃ ।
ಸಮಾಕೀರ್ಣಾ ಮಹಾಬಾಹೋ ಶೈಲೈರಿವ ಸಕಿಂಶುಕೈಃ ॥೬೦॥

ಮಹಾಬಾಹುವೇ! ರಕ್ತವನ್ನು ಎರಚಿಕೊಂಡಿದ್ದ ದೊಡ್ಡ ದೊಡ್ಡ ಶರೀರಗಳಿಂದ ಭೂಮಿಯು ತುಂಬಿಹೋಗಿತ್ತು. ಭೂಮಿಯು ಕಿಂಶುಕಪುಷ್ಪಗಳಿರುವ ಬೆಟ್ಟಗಳಿಂದ ತುಂಬಿದಂತೆ ಇತ್ತು.

ರುಧಿರೇಣ ಪರಿಕ್ಲಿನ್ನಾ ಪ್ರಬಭೌ ವಸುಧಾ ತದಾ ।
ರಕ್ತಾರ್ದ್ರವಸನಾ ಶ್ಯಾಮಾ ನಾರೀವ ಮದವಿಹ್ವಲಾ ॥೬೧॥

ಆಗ ರಕ್ತದಿಂದ ತೊಯ್ದ ಭೂಮಿಯು ಕೆಂಪು ಒದ್ದೆಸೀರೆಯನ್ನುಟ್ಟ, ಮದವೇರಿದ, ಆತಂಕಗೊಂಡ ಕಪ್ಪು ಮಹಿಳೆಯಂತೆ ಕಾಣಿಸಿತು.

ಸ ರುದ್ರೋ ದಾನವಾನ್ ಹತ್ವಾ ಕೃತ್ವಾ ಧರ್ಮೋತ್ತರಂ ಜಗತ್ ।
ರೌದ್ರಂ ರೂಪಂ ವಿಹಾಯಾಶು ಚಕ್ರೇ ರೂಪಂ ಶಿವಂ ಶಿವಃ ॥೬೨॥

ಆ ಮಂಗಳಕರ ರುದ್ರದೇವರು ದಾನವರನ್ನು ಕೊಂದು, ಜಗತ್ತನ್ನು ಧರ್ಮಮಯವನ್ನಾಗಿ (ಧರ್ಮನಿಷ್ಠೆಯಿಂದ ಉತ್ಕೃಷ್ಟವಾಗಿರುವಂತೆ) ಮಾಡಿ, ಉಗ್ರರೂಪವನ್ನು ಬಿಟ್ಟು ಸೌಮ್ಯರೂಪವನ್ನು ಪಡೆದರು.

ತತೋ ಮಹರ್ಷಯಃ ಸರ್ವೇ ಸರ್ವೇ ದೇವಗಣಾಸ್ತಥಾ ।
ಜಯೇನಾದ್ಭುತಕಲ್ಪೇನ ದೇವದೇವಮಥಾರ್ಚಯನ್ ॥೬೩॥

ಅನಂತರ ಎಲ್ಲ ಮಹರ್ಷಿಗಳು ಮತ್ತು ಸಕಲ ದೇವವೃಂದವು ದೇವದೇವನಾದ ಶಿವನನ್ನು ಅದ್ಭುತ ದರ್ಜೆಯ ವಿಜಯವನ್ನು ಸಾಧಿಸಿದ ಕಾರಣದಿಂದ ಸತ್ಕರಿಸಿದರು.

ತತಃ ಸ ಭಗವಾನ್ ರುದ್ರೋ ದಾನವಕ್ಷತಜೋಕ್ಷಿತಮ್ ।
ಅಸಿಂ ಧರ್ಮಸ್ಯ ಗೋಪ್ತಾರಂ ದದೌ ಸತ್ಕೃತ್ಯ ವಿಷ್ಣವೇ ॥೬೪॥

ಅನಂತರ ಭಗವಾನ್ ರುದ್ರದೇವರು ದಾನವರ ರಕ್ತದಿಂದ ತೊಯ್ದಿದ್ದ, ಧರ್ಮ ರಕ್ಷಣೆಯ ಸಾಧನವಾದ ಆ ಖಡ್ಗವನ್ನು ಶುದ್ಧಿ ಮಾಡಿ, ಸತ್ಕಾರ ಪೂರ್ವಕವಾಗಿ ವಿಷ್ಣುವಿಗೆ ಸಮರ್ಪಿಸಿದರು.

ವಿಷ್ಣುರ್ಮರೀಚಯೇ ಪ್ರಾದಾನ್ಮರೀಚಿರ್ಭಗವಾಂಶ್ಚ ತಮ್ ।
ಮಹರ್ಷಿಭ್ಯೋ ದದೌ ಖಡ್ಗಮೃಷಯೋ ವಾಸವಾಯ ತು ॥೬೫॥

ವಿಷ್ಣುವು ಮರೀಚಿ ಮಹರ್ಷಿಗೆ ಕೊಟ್ಟನು. ಭಗವಾನ್ ಮರೀಚಿಗಳು ಖಡ್ಗವನ್ನು ಮಹರ್ಷಿಗಳಿಗೆ ಕೊಟ್ಟರು. ಅವರು ದೇವೇಂದ್ರನಿಗೆ ಕೊಟ್ಟನು.

ಮಹೇಂದ್ರೋ ಲೋಕಪಾಲೇಭ್ಯೋ ಲೋಕಪಾಲಾಸ್ತು ಪುತ್ರಕ ।
ಮನವೇ ಸೂರ್ಯಪುತ್ರಾಯ ದದುಃ ಖಡ್ಗಂ ಸುವಿಸ್ತರಮ್ ॥೬೬॥

ಮಹೇಂದ್ರನು ಲೋಕಪಾಲಕರಿಗೆ ಕೊಟ್ಟನು. ಲೋಕಪಾಲಕರು ಸೂರ್ಯಪುತ್ರ ಮನುವಿಗೆ ಕೊಟ್ಟರು.

ಊಚುಶ್ಚೈನಂ ತಥೈವಾದ್ಯಂ ಮಾನುಷಾಣಾಂ ತ್ವಮೀಶ್ವರಃ ।
ಅಸಿನಾ ಧರ್ಮಗರ್ಭೇಣ ಪಾಲಯಸ್ವ ಪ್ರಜಾ ಇತಿ ॥೬೭॥

ಅವರು ಮನುವಿಗೆ ಹೇಳಿದರು. 'ನೀನು ಸಕಲ ಮಾನವರ ಈಶ್ವರ. ತನ್ನೊಳಗೆ ಧರ್ಮವನ್ನು ಅಡಗಿಸಿಕೊಂಡಿರುವ ಈ ಖಡ್ಗದಿಂದ ಪ್ರಜೆಗಳನ್ನು ಪಾಲಿಸು.

ಧರ್ಮಸೇತುಮತಿಕ್ರಾಂತಾಃ ಸೂಕ್ಷ್ಮಸ್ಥೂಲಾರ್ಥಕಾರಣಾತ್ ।
ವಿಭಜ್ಯ ದಂಡಂ ರಕ್ಷ್ಯಾಃ ಸ್ಯುರ್ಧರ್ಮತೋ ನ ಯದೃಚ್ಛಯಾ ॥೬೮॥

ಯಾವ ಪ್ರಜೆಗಳು ಸೂಕ್ಷ್ಮ ಮನಸ್ಸಿನ, ಸ್ಥೂಲ ಶರೀರದ ಸುಖಕ್ಕಾಗಿ ಧರ್ಮ ವ್ಯವಸ್ಥೆಯನ್ನು ಮೀರುವರೋ ಅವರನ್ನು ಅಪರಾಧಕ್ಕೆ ತಕ್ಕ ಪ್ರಮಾಣದ ಶಿಕ್ಷೆಯನ್ನು ವಿಧಿಸಿ ರಕ್ಷಿಸಬೇಕು. ಧರ್ಮದ ಮಾನದಂಡದಿಂದಲೇ ಎಲ್ಲರನ್ನೂ ಪಾಲಿಸಬೇಕು. ಸ್ವಚ್ಛಂದವಾಗಿ ಅಲ್ಲ.

ದುರ್ವಾಚಾ ನಿಗ್ರಹೋ ದಂಡೋ ಹಿರಣ್ಯಬಹುಲಸ್ತಥಾ ।
ವ್ಯಂಗನಂ ಚ ಶರೀರಸ್ಯ ವಧೋ ವಾನಲ್ಪಕಾರಣಾತ್ ॥೬೯॥

ಕಠೋರ ಮಾತುಗಳಿಂದ ನಿಗ್ರಹ ಒಂದು ವಿಧವಾದ ದಂಡ. ಅಪರಾಧಿಯಿಂದ ಬಂಗಾರವನ್ನು ಪಡೆಯುವುದು ಇನ್ನೊಂದು ವಿಧವಾದ ದಂಡ. ಅಂಗವೈಕಲ್ಯವನ್ನು ಉಂಟು ಮಾಡುವುದು ಮತ್ತೊಂದು ವಿಧ. ಉಗ್ರ ಅಪರಾಧವನ್ನು ಮಾಡಿದ್ದರೆ ಮರಣದಂಡನೆ.

ಅಸೇರೇತಾನಿ ರೂಪಾಣಿ ದುರ್ವಾಚಾದೀನಿ ನಿರ್ದಿಶೇತ್ ।
ಅಸೇರೇವ ಪ್ರಮಾಣಾನಿ ಪರಿಮಾಣವ್ಯತಿಕ್ರಮಾತ್ ॥೭೦॥

ಕಠೋರ ಮಾತು ಮೊದಲಾದವುಗಳು ಧರ್ಮಖಡ್ಗದ ಬೇರೆ ಬೇರೆ ರೂಪಗಳೆಂದು ಪ್ರಜೆಗಳಿಗೆ ತಿಳಿಸಬೇಕು.

ಅಧಿಸೃಜ್ಯಾಥ ಪುತ್ರಂ ಸ್ವಂ ಪ್ರಜಾನಾಮಧಿಪಂ ತತಃ ।
ಮನುಃ ಪ್ರಜಾನಾಂ ರಕ್ಷಾರ್ಥಂ ಕ್ಷುಪಾಯ ಪ್ರದದಾವಸಿಮ್ ॥೭೧॥

ಅನಂತರ ಮನುವು ತನ್ನ ಪುತ್ರ ಕ್ಷುಪನನ್ನು ಪ್ರಜಾಧಿಪ ಪದವಿಯಲ್ಲಿ ಅಭಿಷೇಕ ಮಾಡಿ ಪ್ರಜಾಪಾಲನೆಗಾಗಿ ಅವನಿಗೆ ಈ ಖಡ್ಗವನ್ನು ಕೊಟ್ಟನು.

ಕ್ಷುಪಾಜ್ಜಗ್ರಾಹ ಚೇಕ್ಷ್ವಾಕುರಿಕ್ಷ್ವಾಕೋಶ್ಚ ಪುರೂರವಾಃ ।
ಆಯುಶ್ಚ ತಸ್ಮಾಲ್ಲೇಭೇ ತಂ ನಹುಷಶ್ಚ ತತೋ ಭುವಿ ॥೭೨॥

ಅನಂತರ ಕ್ಷುಪನಿಂದ ಇಕ್ಷ್ವಾಕುವು ಈ ಖಡ್ಗವನ್ನು ಪಡೆದನು. ಇಕ್ಷ್ವಾಕುವಿನಿಂದ ಪುರೂರವಸ್, ಅವನಿಂದ ಆಯು, ಅವನಿಂದ ನಹುಷ ಈ ಖಡ್ಗವನ್ನು ಪಡೆದರು.

ಯಯಾತಿರ್ನಹುಷಾಚ್ಚಾಪಿ ಪೂರುಸ್ತಸ್ಮಾಚ್ಚ ಲಬ್ಧವಾನ್ ।
ಆಮೂರ್ತರಯಸಸ್ತಸ್ಮಾತ್ತತೋ ಭೂಮಿಶಯೋ ನೃಪಃ ॥೭೩॥

ನಹುಷನಿಂದ ಯಯಾತಿ, ಅವನಿಂದ ಪೂರು- ಈ ಖಡ್ಗವನ್ನು ಪಡೆದರು. ಅವನಿಂದ ರಾಜ ಅಮೂರ್ತರಸ ಮತ್ತು ಅವನಿಂದ ರಾಜ ಭೂಮಿಶಯನು ಪಡೆದರು.

ಭರತಶ್ಚಾಪಿ ದೌಃಷಂತಿರ್ಲೇಭೇ ಭೂಮಿಶಯಾದಸಿಮ್ ।
ತಸ್ಮಾಚ್ಚ ಲೇಭೇ ಧರ್ಮಜ್ಞೋ ರಾಜನ್ನೈಡಬಿಡಸ್ತಥಾ ॥೭೪॥

ಭೂಮಿಶಯನಿಂದ ದುಷ್ಮಂತನ ಮಗನಾದ ಭರತನು ಈ ಖಡ್ಗವನ್ನು ಪಡೆದನು. ಭರತನಿಂದ ಧರ್ಮಜ್ಞನಾದ ಐಡಬಿಡನು ಇದನ್ನು ಪಡೆದನು.

ತತಶ್ಚೈಡಬಿಡಾಲ್ಲೇಭೇ ಧುಂಧುಮಾರೋ ಜನೇಶ್ವರಃ ।
ಧುಂಧುಮಾರಾಚ್ಚ ಕಾಂಬೋಜೋ ಮುಚುಕುಂದಸ್ತತೋಲಭತ್ ॥೭೫॥

ಆ ಐಡಬಿಡನಿಂದ ಜನಾಧಿಪತಿ ಧುಂಧುಮಾರನು ಪಡೆದನು. ಧುಂಧುಮಾರನಿಂದ ಕಾಂಬೋಜನು ಪಡೆದನು. ಕಾಂಬೋಜನಿಂದ ಮುಚುಕುಂದನು ಪಡೆದನು.

ಮುಚುಕುಂದಾನ್ಮರುತ್ತಶ್ಚ ಮರುತ್ತಾದಪಿ ರೈವತಃ ।
ರೈವತಾದ್ ಯುವನಾಶ್ವಶ್ಚ ಯುವನಾಶ್ವಾತ್ ತತೋ ರಘುಃ ॥೭೬॥

ಮುಚುಕುಂದನಿಂದ ಮರುತ್ತ, ಮರುತ್ತನಿಂದ ರೈವತ, ರೈವತನಿಂದ ಯುವನಾಶ್ವ, ಯುವನಾಶ್ವನಿಂದ ರಘು ಖಡ್ಗವನ್ನು ಪಡೆದರು.

ಇಕ್ಷ್ವಾಕುವಂಶಜಸ್ತಸ್ಮಾದ್ಧರಿಣಾಶ್ವಃ ಪ್ರತಾಪವಾನ್ ।
ಹರಿಣಾಶ್ವಾದಸಿಂ ಲೇಭೇ ಶುನಕಃ ಶುನಕಾದಪಿ ॥೭೭॥

ಅವನಿಂದ ಇಕ್ಷ್ವಾಕುವಂಶಜನಾದ ಪ್ರತಾಪಶಾಲಿ ಹರಿಣಾಶ್ವನು ಖಡ್ಗವನ್ನು ಪಡೆದನು. ಹರಿಣಾಶ್ವನಿಂದ ಶುನಕನು ಪಡೆದನು.

ಉಶೀನರೋ ವೈ ಧರ್ಮಾತ್ಮಾ ತಸ್ಮಾದ್ ಭೋಜಾಃ ಸಯಾದವಾಃ ।
ಯದುಭ್ಯಶ್ಚ ಶಿಬಿರ್ಲೇಭೇ ಶಿಬೇಶ್ಚಾಪಿ ಪ್ರತರ್ದನಃ ॥೭೮॥

ಶುನಕನಿಂದ ಧರ್ಮಾತ್ಮಾ ಉಶೀನರನು, ಅವನಿಂದ ಭೋಜ ಮತ್ತು ಯಾದವರು, ಯದುವಿನಿಂದ ಶಿಬಿ ಮತ್ತು ಶಿಬಿಯಿಂದ ಪ್ರತರ್ದನನು ಖಡ್ಗವನ್ನು ಪಡೆದರು.

ಪ್ರತರ್ದನಾದಷ್ಟಕಶ್ಚ ರುಶದಶ್ಚೋಷ್ಟಕಾದಪಿ ।
ರುಶದಶ್ವಾದ್ ಭರದ್ವಾಜೋ ದ್ರೋಣಸ್ತಸ್ಮಾತ್ ಕೃಪಸ್ತತಃ ।
ತತಸ್ತ್ವಂ ಭ್ರಾತೃಭಿಃ ಸಾರ್ಧಂ ಪರಮಾಸಿಮವಾಪ್ತವಾನ್ ॥೭೯॥

ಪ್ರತರ್ದನನಿಂದ ಅಷ್ಟಕ, ಅಷ್ಟಕನಿಂದ ರುಶದಶ್ವ, ರುಶದಶ್ವನಿಂದ ಭರದ್ವಾಜ ಗೋತ್ರದ ದ್ರೋಣರು, ಅವರಿಂದ ಕೃಪಾಚಾರ್ಯರು ಪಡೆದರು. ಅವರಿಂದ ನೀನು ಮತ್ತು ನಿನ್ನ ಸೋದರರು ಈ ಶ್ರೇಷ್ಠ ಖಡ್ಗವನ್ನು ಪಡೆದಿರುವಿರಿ.

ಕೃತ್ತಿಕಾಶ್ಚಾಸ್ಯ ನಕ್ಷತ್ರಮಸೇರಗ್ನಿಶ್ಚ ದೈವತಮ್ ।
ರೌಹಿಣ್ಯಾಮುದ್ಭ್ರಮೋಽಸ್ಯಾಥ ರುದ್ರಶ್ಚ ಗುರುರುತ್ತಮಃ ॥೮೦॥

ಈ ಖಡ್ಗದ ಜನ್ಮನಕ್ಷತ್ರ ಕೃತ್ತಿಕಾ. ಅಗ್ನಿಯು ದೇವತೆ. ಈ ಖಡ್ಗದ ಉದ್‌ಭ್ರಮಣವು ರೋಹಿಣೀ ನಕ್ಷತ್ರದಲ್ಲಿ ಹುಟ್ಟಿತು. ಶ್ರೇಷ್ಠರಾದ ರುದ್ರದೇವರು ಇದರ ಗುರು.

ಅಸೇರಷ್ಟೌ ಚ ನಾಮಾನಿ ರಹಸ್ಯಾನಿ ನಿಬೋಧ ಮೇ ।
ಪಾಂಡವೇಯ ಸದಾ ಯಾನಿ ಕೀರ್ತಯನ್ ಲಭತೇ ಜಯಮ್ ॥೮೧॥

ಪಾಂಡುಪುತ್ರ ! ಈ ಖಡ್ಗಕ್ಕೆ ಎಂಟು ರಹಸ್ಯನಾಮಗಳಿವೆ. ನಾನು ನಿನಗೆ ಇವುಗಳನ್ನು ತಿಳಿಸುತ್ತೇನೆ. ಈ ನಾಮಗಳನ್ನು ಸದಾ ಪಠಿಸುವವನು ಜಯಶಾಲಿಯಾಗುತ್ತಾನೆ.

ಅಸಿರ್ವಿಶಸನಃ ಖಡ್ಗಸ್ತೀಕ್ಷ್ಣವರ್ತ್ಮಾ ದುರಾಸದಃ ।
ಶ್ರೀಗರ್ಭೋ ವಿಜಯಶ್ಚೈವ ಧರ್ಮಪಾಲಸ್ತಥೈವ ಚ ॥೮೨॥

ಅಸಿ, ವಿಶಸನ, ಖಡ್ಗ, ತೀಕ್ಷ್ಣವರ್ತ್ಮಾ, ದುರಾಸದ, ಶ್ರೀಗರ್ಭ, ವಿಜಯ, ಧರ್ಮಪಾಲ- ಇವು ಎಂಟು ನಾಮಗಳು.

ಅಗ್ರ್ಯಃ ಪ್ರಹರಣಾನಾಂ ಚ ಖಡ್ಗೋ ಮಾದ್ರವತೀಸುತ ।
ಮಹೇಶ್ವರಪ್ರಣೀತಶ್ಚ ಪುರಾಣೇ ನಿಶ್ಚಯಂ ಗತಃ ॥೮೩॥

ಮಾದ್ರೀಸುತ! ಈ ಖಡ್ಗವು ಆಯುಧಗಳಲ್ಲಿ ಶ್ರೇಷ್ಠ ಆಯುಧ. ರುದ್ರದೇವರು ಇದನ್ನು ಬಳಕೆಗೆ ತಂದವರು. ಪುರಾಣಗಳಲ್ಲಿ ಇದರ ಶ್ರೇಷ್ಠತೆಯು ನಿಶ್ಚಯವಾಗುವಂತಹ ವಿವರಣೆಗಳಿವೆ.

ಪೃಥುಸ್ತೂತ್ಪಾದಯಾಮಾಸ ಧನುರಾದ್ಯಮರಿಂದಮ ।
ತೇನೇಯಂ ಪೃಥಿವೀ ಪೂರ್ವಂ ವೈನ್ಯೇನ ಪರಿರಕ್ಷಿತಾ ॥೮೪॥

ಅರಿಂದಮನಾದ ಪೃಥುಚಕ್ರವರ್ತಿಯು ಮೊದಲನೆಯ ಧನುಸ್ ಅನ್ನು ಉತ್ಪಾದಿಸಿದನು. ಆ ಧನುಸ್ಸಿನಿಂದ ಪೃಥುಚಕ್ರವರ್ತಿಯು ಈ ಭೂಮಿಯನ್ನು ರಕ್ಷಿಸಿದನು (ಸುವ್ಯವಸ್ಥಿತಗೊಳಿಸಿದನು).

ತದೇತದಾರ್ಷಂ ಮಾದ್ರೇಯ ಪ್ರಮಾಣಂ ಕರ್ತುಮರ್ಹಸಿ ।
ಅಸೇಶ್ಚ ಪೂಜಾ ಕರ್ತವ್ಯಾ ಸದಾ ಯುದ್ಧವಿಶಾರದೈಃ ॥೮೫॥

ಮಾದ್ರೀಸುತ! ಖಡ್ಗದ ಬಗ್ಗೆ ಈ ವಿವರಣೆಯು ಋಷಿ ಪರಂಪರೆಯಿಂದ ಬಂದಿದೆ. ಆದ್ದರಿಂದ ಇದನ್ನು ನೀನು ಪ್ರಮಾಣವೆಂದು ಸ್ವೀಕರಿಸು. ಯುದ್ಧವಿಶಾರದರು ಯಾವಾಗಲೂ ಖಡ್ಗದ ಪೂಜೆಯನ್ನು ಮಾಡಬೇಕು.

ಇತ್ಯೇಷ ಪ್ರಥಮಃ ಕಲ್ಪೋ ವ್ಯಾಖ್ಯಾತಸ್ತೇ ಸುವಿಸ್ತರಃ ।
ಅಸೇರುತ್ಪತ್ತಿಸಂಸರ್ಗೋ ಯಥಾವದ್ ಭರತರ್ಷಭ ॥೮೬॥

ಭರತಕುಲಶ್ರೇಷ್ಠ! ಖಡ್ಗದ ಉತ್ಪತ್ತಿ ಮತ್ತು ಅದರ ಪ್ರಾಪ್ತಿ ಪ್ರಕಾರವನ್ನು ನಾನು ನಿನಗೆ ಯಥಾರ್ಥವಾಗಿ ಹೇಳಿದ್ದೇನೆ. ಇದೇ ಸರಿಯಾದ ವಿವರಣೆ. ಮೊದಲನೆಯ ವಿವರಣೆ.

ಸರ್ವೋದಂತಮಿಹ ಶ್ರುತ್ವಾ ಖಡ್ಗಸಾಧನಮುತ್ತಮಮ್ ।
ಲಭತೇ ಪುರುಷಃ ಕೀರ್ತಿಂ ಪ್ರೇತ್ಯ ಚಾನಂತ್ಯಮಶ್ನುತೇ ॥೮೭॥

ಖಡ್ಗದ ಬಗ್ಗೆ ಉತ್ತಮವಾದ ಸರ್ವವೃತ್ತಾಂತವನ್ನು ಕೇಳಿದ ಪುರುಷನು ಕೀರ್ತಿಯನ್ನು ಹೊಂದುತ್ತಾನೆ. ಮರಣಾನಂತರ ಅಕ್ಷಯ ಫಲಗಳನ್ನು ಪಡೆಯುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ದ್ವಾತ್ರಿಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯವು ಮುಗಿಯಿತು.

★ ★ ★ ★

ಮೂವತ್ಮೂರನೆಯ ಅಧ್ಯಾಯ

ಧರ್ಮ-ಅರ್ಥ-ಕಾಮ-ಮೋಕ್ಷಗಳ ಬಗ್ಗೆ ಅಭಿಪ್ರಾಯ ಕಥನ.

ವೈಶಂಪಾಯನಃ

ಇತ್ಯುಕ್ತವತಿ ಭೀಷ್ಮೇ ತು ತೂಷ್ಣೀಂಭೂತೇ ಯುಧಿಷ್ಠಿರಃ ।
ಪಪ್ರಚ್ಛಾವಸಥಂ ಗತ್ವಾ ಭ್ರಾತೄನ್ ವಿದುರಪಂಚಮಾನ್ ॥೧॥

ಇಷ್ಟು ಹೇಳಿದ ಭೀಷ್ಮರು ಮೌನವಹಿಸಿದರು. ಆಗ ಯುಧಿಷ್ಠಿರನು ಮನೆಗೆ ಹೋಗಿ ತನ್ನ ಸೋದರರನ್ನು ಮತ್ತು ವಿದುರನನ್ನು ಕೇಳಿದರು.

ಧರ್ಮೇ ಚಾರ್ಥೇ ಚ ಕಾಮೇ ಚ ಲೋಕವೃತ್ತಿಃ ಸಮಾಹಿತಾ ।
ತೇಷಾಂ ಗರೀಯಾನ್ ಕತಮೋ ಮಧ್ಯಮಃ ಕೋ ಲಘುಶ್ಚ ಕಃ ॥೨॥

ಧರ್ಮ, ಅರ್ಥ, ಕಾಮಗಳಲ್ಲಿ ಜನರ ಪ್ರವೃತ್ತಿಯು ಇದೆ. ಈ ಮೂರರಲ್ಲಿ ಶ್ರೇಷ್ಠ ಯಾವುದು? ಮಧ್ಯಮ ಯಾವುದು? ಕನಿಷ್ಠ ಯಾವುದು?

ಕಸ್ಮಿಂಶ್ಚಾತ್ಮಾ ನಿಯಂತವ್ಯಸ್ತ್ರಿವರ್ಗವಿಜಯಾಯ ವೈ ।
ಸಂತುಷ್ಟಾ ನೈಷ್ಠಿಕಂ ವಾಕ್ಯಂ ಯಥಾವದ್ ವಕ್ತುಮರ್ಹಥ ॥೩॥

ತ್ರಿವರ್ಗ= ಕಾಮ-ಕ್ರೋಧ-ಲೋಭವನ್ನು ಜಯಿಸಲು ಯಾವ ವಿಷಯದಲ್ಲಿ ಮನಸ್ಸನ್ನು ದೃಢವಾಗಿ ನಿಲ್ಲಿಸಬೇಕು? ಸಂತುಷ್ಟರಾದ ನೀವು ನಿರ್ಣಾಯಕ ವಾಕ್ಯವನ್ನು ದಯವಿಟ್ಟು ಹೇಳಿ.

ತತೋಽರ್ಥಗತಿತತ್ತ್ವಜ್ಞಃ ಪ್ರಥಮಂ ಪ್ರತಿಭಾನವಾನ್ ।
ಜಗಾದ ವಿದುರೋ ವಾಕ್ಯಂ ಧರ್ಮಶಾಸ್ತ್ರಮನುಸ್ಮರನ್ ॥೪॥

ಅನಂತರ ಮೊದಲು ಅರ್ಥಪ್ರಾಪ್ತಿಯ ತತ್ವವನ್ನು ತಿಳಿದಿದ್ದ, ಸ್ಫೂರ್ತಿಶಾಲಿಯಾದ ವಿದುರನು ಧರ್ಮಶಾಸ್ತ್ರಗಳನ್ನು ಸ್ಮರಿಸುತ್ತಾ ಹೇಳಿದನು.

ವಿದುರ

ಬಾಹುಶ್ರುತ್ಯಂ ತಪಸ್ತ್ಯಾಗಃ ಶ್ರದ್ಧಾ ಯಜ್ಞಕ್ರಿಯಾ ಕ್ಷಮಾ ।
ಭಾವಶುದ್ಧಿರ್ದಯಾ ಸತ್ಯಂ ಸಂಯಮಶ್ಚಾತ್ಮಸಂಪದಃ ॥೫॥

ಬಹುಶಾಸ್ತ್ರಗಳ ಅಧ್ಯಯನ, ತಪಸ್, ತ್ಯಾಗ, ಶ್ರದ್ಧೆ, ಯಜ್ಞಾನುಷ್ಠಾನ, ತಾಳ್ಮೆ, ಭಾವಶುದ್ಧಿ, ದಮಾ, ಸತ್ಯ , ಸಂಯಮ- ಇವು ಆತ್ಮಸಂಪತ್ತುಗಳು.

ಏತದೇವಾಭಿಪದ್ಯಸ್ವ ಮಾ ತೇ ಭೂಚ್ಚಲಿತಂ ಮನಃ ।
ಏತನ್ಮೂಲೌ ಹಿ ಧರ್ಮಾರ್ಥಾವೇತದೇಕಪದಂ ಹಿತಮ್ ॥೬॥

ಈ ಸಂಪತ್ತನ್ನೇ ಸಾಧಿಸು. ನಿನ್ನ ಮನಸ್ಸು ವಿಚಲಿತವಾಗಬಾರದು. ಈ ಸಂಪತ್ತೇ ಧರ್ಮ-ಅರ್ಥಗಳ ಮೂಲ. ಇದೊಂದೇ ಹಿತಕರ ಮಾರ್ಗ.

ಧರ್ಮೇಣೈವರ್ಷಯಸ್ತೀರ್ಣಾ ಧರ್ಮೇ ಲೋಕಾಃ ಪ್ರತಿಷ್ಠಿತಾಃ ।
ಧರ್ಮೇಣ ದೇವಾ ದಿವಿಗಾ ಧರ್ಮೇ ಚಾರ್ಥಃ ಸಮಾಹಿತಃ ॥೭॥

ಧರ್ಮದಿಂದಲೇ ಋಷಿಗಳು ಉನ್ನತಿಯನ್ನು ಸಾಧಿಸಿದ್ದಾರೆ. ನಾನಾ ಲೋಕಗಳು ಧರ್ಮನಿಷ್ಠೆಯಿಂದಲೇ ಸುವ್ಯವಸ್ಥಿತವಾಗಿವೆ. ದೇವತೆಗಳು ಧರ್ಮನಿಷ್ಠೆಯಿಂದಲೇ ಸ್ವರ್ಗವನ್ನು ಪಡೆದಿದ್ದಾರೆ. ಅರ್ಥವೂ ಧರ್ಮದಲ್ಲೇ ಸ್ಥಿರವಾಗಿದೆ.

ಧರ್ಮೋ ರಾಜನ್ ಗುಣಶ್ರೇಷ್ಠೋ ಮಧ್ಯಮೋ ಹ್ಯರ್ಥ ಉಚ್ಯತೇ ।
ಕಾಮೋ ಯವೀಯಾನಿತಿ ಚ ಪ್ರವದಂತಿ ಮನೀಷಿಣಃ ।
ತಸ್ಮಾದ್ಧರ್ಮಪ್ರಧಾನೇನ ಭವಿತವ್ಯಂ ಯತಾತ್ಮನಾ ॥೮॥

ರಾಜನೇ! ಧರ್ಮವು ಶ್ರೇಷ್ಠ ಗುಣ, ಅರ್ಥವು ಮಧ್ಯಮ, ಕಾಮವು ಹೀನ ಎಂದು ಪ್ರಾಜ್ಞರು ಹೇಳುತ್ತಾರೆ. ಆದ್ದರಿಂದ ಮನೋನಿಯಂತ್ರಣವುಳ್ಳವನೂ, ಧರ್ಮಕ್ಕೆ ಪ್ರಥಮ ನಿಷ್ಠೆವುಳ್ಳವನೂ ಆಗಿರಬೇಕು.

ಸಮಾಪ್ತವಚನೇ ತಸ್ಮಿನ್ನರ್ಥಶಾಸ್ತ್ರವಿಶಾರದಃ ।
ಪಾರ್ಥೋ ವಾಕ್ಯಾರ್ಥತತ್ತ್ವಜ್ಞೋ ಜಗೌ ವಾಕ್ಯಮತಂದ್ರಿತಃ ॥೯॥

ವಿದುರನು ಮಾತನ್ನು ಮುಗಿಸಿದ ಮೇಲೆ, ಅರ್ಥಶಾಸ್ತ್ರವಿಶಾರದನಾದ, ಆಡುವ ಮಾತಿನ ಅರ್ಥ ಮತ್ತು ತತ್ವವನ್ನು ತಿಳಿದ, ಉತ್ಸುಕನಾದ ಅರ್ಜುನನು ಮಾತನಾಡಿದನು.

ಕರ್ಮಭೂಮಿರಿಯಂ ರಾಜನ್ನಿಹ ವಾರ್ತಾ ಪ್ರಶಸ್ಯತೇ ।
ಕೃಷಿವಾಣಿಜ್ಯಗೋರಕ್ಷ್ಯಂ ಶಿಲ್ಪಾನಿ ವಿವಿಧಾನಿ ಚ ॥೧೦॥

ಅರ್ಥ ಇತ್ಯೇವ ಸರ್ವೇಷಾಂ ಕರ್ಮಣಾಮವ್ಯತಿಕ್ರಮಃ ।
ನ ಋತೇಽರ್ಥೇನ ವರ್ತೇತೇ ಧರ್ಮಕಾಮಾವಿತಿ ಶ್ರುತಿಃ ॥೧೧॥

ರಾಜನೆ! ಇದು ಕರ್ಮಭೂಮಿ, ಇಲ್ಲಿ ಅರ್ಥಕ್ಕೇ ಮನ್ನಣೆ. ಕೃಷಿ, ಗೋರಕ್ಷಣೆ, ವ್ಯಾಪಾರ, ನಾನಾ ಕಲೆಗಳು- ಇವೆಲ್ಲವೂ ಅರ್ಥ. ಆದ್ದರಿಂದಲೇ ಎಲ್ಲರ ಕೆಲಸಗಳೂ ಹೆಚ್ಚು ಅತಿಕ್ರಮಣವಿಲ್ಲದೆ ನಡೆಯುತ್ತಿವೆ. ಅರ್ಥವಿಲ್ಲದೆ ಧರ್ಮಸಾಧನೆಯಾಗುವುದಿಲ್ಲ. ಕಾಮಗಳು ಪೂರೈಸುವುದಿಲ್ಲ (ಬಯಕೆಗಳು ಈಡೇರುವುದಿಲ್ಲ) ಎಂದು ಶ್ರುತಿಯು ಹೇಳುತ್ತದೆ.

ವಿಜಯೀ ಹ್ಯರ್ಥವಾನ್ ಧರ್ಮಮಾರಾಧಯಿತುಮುತ್ತಮಮ್ ।
ಕಾಮಂ ಚ ಚರಿತುಂ ಶಕ್ತೋ ದುಷ್ಪ್ರಾಪಮಕೃತಾತ್ಮಭಿಃ ॥೧೨॥

ಅರ್ಥವುಳ್ಳವನೇ ವಿಜಯಶಾಲಿ. ಚೆನ್ನಾಗಿ ಧರ್ಮವನ್ನು ಆಚರಿಸಲು ಮತ್ತು ಕಾಮಗಳನ್ನು ಅನುಭವಿಸಲು ಸಮರ್ಥ. ಅರ್ಥಕ್ಕಾಗಿ ಪ್ರಯತ್ನಶೀಲರಲ್ಲದವರಿಂದ ಇವುಗಳನ್ನು ಪಡೆಯಲು ಆಗದು.

ಅರ್ಥಸ್ಯಾವಯವಾವೇತೌ ಧರ್ಮಕಾಮಾವಿತಿ ಶ್ರುತಿಃ ।
ಅರ್ಥಸಿದ್ಧ್ಯಾ ಹಿ ನಿರ್ವೃತ್ತಾವುಭಾವೇತೌ ಭವಿಷ್ಯತಃ ॥೧೩॥

ಧರ್ಮ-ಕಾಮಗಳು ಅರ್ಥದ ಅವಯವ ಎಂದು ಶ್ರುತಿಯು ಹೇಳುತ್ತದೆ. ಅರ್ಥವು ಸಿದ್ಧವಾದರೆ ಇವೆರಡರ ಸಿದ್ಧಿಯು ಆಗುತ್ತದೆ.

ಉದ್ಭೂತಾರ್ಥಂ ಹಿ ಪುರುಷಂ ವಿಶಿಷ್ಟತರಯೋನಯಃ ।
ಬ್ರಹ್ಮಾಣಮಿವ ಭೂತಾನಿ ಸತತಂ ಪರ್ಯುಪಾಸತೇ ॥೧೪॥

ಧನವಂತನನ್ನು ಸತ್ಕುಲಪ್ರಸೂತರು ಆರಾಧಿಸುತ್ತಾರೆ. ಸೇವಕರು ದಣಿಯನ್ನು ಆರಾಧಿಸುವಂತೆ.

ಜಟಾಜಿನಧರಾ ದಾಂತಾಃ ಪಂಕದಿಗ್ಧಾ ಜಿತೇಂದ್ರಿಯಾಃ ।
ಮುಂಡಾ ವಿತಂತವಶ್ಚಾಪಿ ವಸಂತ್ಯರ್ಥಾರ್ಥಿನಃ ಪೃಥಕ್ ॥೧೫॥

ಜಟಾ-ಅಜಿನಗಳನ್ನು ಧರಿಸಿದ, ಸಂಯಮಶಾಲಿಗಳಾದ, ಮಲಧಾರಣೆಯನ್ನು ಮಾಡಿರುವ, ಜಿತೇಂದ್ರಿಯರಾದ ಮುಂಡರೂ (ಸನ್ನ್ಯಾಸಿಗಳೂ), ವಿಶೇಷವಾಗಿ ಯಜ್ಞಗಳನ್ನು ಮಾಡಿದವರೂ ಧನಕಾಂಕ್ಷಿಗಳಾಗಿ ಧನವಂತರ ಬಳಿ ವಾಸಿಸುತ್ತಾರೆ.

ಕಾಷಾಯವಸನಾಶ್ಚಾನ್ಯೇ ಶ್ಮಶ್ರುಲಾ ಹ್ರೀಸುಸಂವೃತಾಃ ।
ವಿದ್ವಾಂಸಶ್ಚೈವ ಶಾಂತಾಶ್ಚ ಮುಕ್ತಾಃ ಸರ್ವಪರಿಗ್ರಹೈಃ ॥೧೬॥

ಅರ್ಥಾರ್ಥಿನಃ ಸಂತಿ ಕೇಚಿದಪರೇ ಸ್ವರ್ಗಕಾಂಕ್ಷಿಣಃ ।
ಕುಲಪ್ರತ್ಯಾಗಮಾಶ್ಚೈಕೇ ಸ್ವಂ ಸ್ವಂ ಮಾರ್ಗಮನುಷ್ಠಿತಾಃ ॥೧೭॥

ಕಾಷಾಯವಸ್ತ್ರವನ್ನು ಧರಿಸಿದವರು, ಗಡ್ಡಮೀಸೆಗಳನ್ನು ಬೆಳೆಸಿದವರು, ಸಂಕೋಚ ಸ್ವಭಾವದವರು, ವಿದ್ವಾಂಸರು, ಭಗವದ್ಭಕ್ತರು, ಎಲ್ಲ ಪರಿಗ್ರಹಗಳನ್ನು ತ್ಯಾಗ ಮಾಡಿದವರು ಕೆಲವರು ಧನಾಕಾಂಕ್ಷಿಗಳಾಗಿದ್ದಾರೆ. ಸ್ವರ್ಗಕ್ಕೆ ಹೋಗುವ ಅಪೇಕ್ಷೆಯಿಂದ ಸಾಧನೆಯಲ್ಲಿ ನಿರತರೂ ಧನಾಕಾಂಕ್ಷಿಗಳಾಗಿದ್ದಾರೆ. ಕುಲಕ್ರಮಾಗತವಾದ ನಿಯಮಗಳನ್ನು ಪಾಲಿಸುತ್ತಿರುವವರು ಕೆಲವರು, ತಮ್ಮ ತಮ್ಮ ವರ್ಣಾಶ್ರಮಧರ್ಮಗಳನ್ನು ಪಾಲಿಸುತ್ತಿರುವವರು ಕೆಲವರು ಕೂಡ ಧನಾಕಾಂಕ್ಷಿಗಳಾಗಿದ್ದಾರೆ.

ಆಸ್ತಿಕಾ ನಾಸ್ತಿಕಾಶ್ಚೈವ ನಿಯತಾಃ ಸಂಯಮೇ ಪರೇ ।
ಅಪ್ರಜ್ಞಾನಂ ತಮೋಭೂತಂ ಪ್ರಜ್ಞಾನಂ ತು ಪ್ರಕಾಶತಾ ॥೧೮॥

ಆಸ್ತಿಕರು, ನಾಸ್ತಿಕರು, ಸಂಯಮಶೀಲರು ಆದ ಕೆಲವರು ಧನಾಕಾಂಕ್ಷಿಗಳಾಗಿದ್ದಾರೆ. ಅರ್ಥದ ಬಗ್ಗೆ ಸರಿಯಾದ ಜ್ಞಾನದ ಕೊರತೆಯು ತಮೋಗುಣದ ಪರಿಣಾಮ. ಅರ್ಥದ ಬಗ್ಗೆ ಸರಿಯಾದ ಜ್ಞಾನವು ಸತ್ವಗುಣದ ಪರಿಣಾಮ-ಪ್ರಕಾಶ.

ಭೃತ್ಯಾನ್ ಭೋಗೈರ್ದ್ವಿಷೋ ದಂಡ್ಯೈರ್ಯೋ ಯೋಜಯತಿ ಸೋಽರ್ಥವಾನ್।
ಏತನ್ಮತಿಮತಾಂ ಶ್ರೇಷ್ಠ ಮತಂ ಮಮ ಯಥಾತಥಮ್ ॥೧೯॥

ಭೃತ್ಯರಿಗೆ ಭೋಗಗಳನ್ನು ಕಲ್ಪಿಸುವವನು, ಶತ್ರುಗಳನ್ನು ದಂಡಪ್ರಯೋಗದಿಂದ ನಿಗ್ರಹಿಸುವವನು ನಿಜವಾದ ಧನವಂತ. ಪ್ರಾಜ್ಞಶ್ರೇಷ್ಠ! ಇದು ಯಥಾರ್ಥವಾದ ಅಭಿಪ್ರಾಯ.

ಅಶ್ರಾಂತವಚನೇ ತಸ್ಮಿನ್ ಭೀಮಕರ್ಮಾ ಧನಂಜಯಃ ।
ಅನಯೋಽಸ್ತು ನಿಬೋಧ ತ್ವಂ ವಚನಂ ವಾಕ್ಯಕಂಠಯೋಃ ॥೨೦॥

ಮತ್ತಷ್ಟು ವಿವರಿಸು ಎಂದು ಯುಧಿಷ್ಠಿರನು ಶ್ರಮವಿಲ್ಲದೆ ಕೇಳಿದಾಗ ಧನಂಜಯನು ಹೇಳಿದನು. ನಕುಲ-ಸಹದೇವರು ತಮ್ಮ ಅಭಿಪ್ರಾಯವನ್ನು ಹೇಳಲು ಬಹಳ ಉತ್ಸುಕರಾಗಿದ್ದಾರೆ. ಅವರ ವಾಕ್ಯಗಳು ಅವರ ಕಂಠದಲ್ಲಿ ನಿಂತಿವೆ. ಅವರ ಅಭಿಪ್ರಾಯವನ್ನು ದಯವಿಟ್ಟು ತಿಳಿ.

ತತೋ ಧರ್ಮಾರ್ಥಕುಶಲೌ ಮಾದ್ರೀಪುತ್ರಾವನಂತರಮ್ ।
ನಕುಲಃ ಸಹದೇವಶ್ಚ ವಾಕ್ಯಂ ಜಗದತುಃ ಪರಮ್ ॥೨೧॥

ಧರ್ಮ-ಅರ್ಥಗಳ ವಿಷಯದಲ್ಲಿ ಕುಶಲರಾದ ಮಾದ್ರೀಪುತ್ರರಾದ ನಕುಲ-ಸಹದೇವರು ಹೇಳಿದರು.

ಆಸೀನಶ್ಚ ಶಯಾನಶ್ಚ ವಿಚರನ್ನಪಿ ಚ ಸ್ಥಿತಃ ।
ಅರ್ಥಯೋಗಂ ದೃಢಂ ಕುರ್ಯಾದ್ಯೋಗೈರುಚ್ಚಾವಚೈರಪಿ ॥೨೨॥

ಕುಳಿತಿರುವಾಗ, ಮಲಗಿರುವಾಗ, ಸಂಚರಿಸುತ್ತಿರುವಾಗ ದೊಡ್ಡ-ಸಣ್ಣ ಮಾರ್ಗಗಳಿಂದ ಅರ್ಥಪ್ರಾಪ್ತಿಯನ್ನು ದೃಢವಾಗಿಸಬೇಕು.

ಅಸ್ಮಿಂಸ್ತು ವೈ ಸುಸಂವೃತ್ತೇ ದುರ್ಲಭೇ ಪರಮಪ್ರಿಯೇ ।
ಇಹ ಕಾಮಾನವಾಪ್ನೋತಿ ಪ್ರತ್ಯಕ್ಷಂ ನಾತ್ರ ಸಂಶಯಃ ॥೨೩॥

ಪರಮಪ್ರಿಯವಾದ, ಆದರೆ ದುರ್ಲಭವಾದ ಈ ಅರ್ಥವು ಚೆನ್ನಾಗಿ ಒದಗಿದಾಗ ಎಲ್ಲ ಅಪೇಕ್ಷೆಗಳು ಈಡೇರುತ್ತವೆ. ಇದು ಪ್ರತ್ಯಕ್ಷಸಿದ್ಧ. ಆದ್ದರಿಂದ ಈ ಬಗ್ಗೆ ಏನೂ ಸಂಶಯವಿಲ್ಲ.

ಯೋಽರ್ಥೋ ಧರ್ಮೇಣ ಸಂಯುಕ್ತೋ ಧರ್ಮೋ ಯಶ್ಚಾರ್ಥಸಂಯುತಃ।
ಮಧ್ಯಮೇವಾಮೃತಂ ಸೃಷ್ಟಂ ತಸ್ಮಾದೇತೌ ಗತಾವಿಹ ॥೨೪॥

ಯಾವ ಅರ್ಥವು ಧರ್ಮಸಹಿತವಾಗಿದೆಯೋ (ಧರ್ಮದಿಂದ ಸಂಪಾದಿಸಲ್ಪಟ್ಟಿದೆಯೋ) ಯಾವ ಧರ್ಮಾನುಷ್ಠಾನವು ಅರ್ಥಸಹಿತವಾಗಿದೆಯೋ

(ಧರ್ಮಾನುಷ್ಠಾನಕ್ಕಾಗಿ ಅರ್ಥದ ಬಳಕೆಯಾಗುವುದೋ) ಈ ಅರ್ಥವು ಧರ್ಮ-ಕಾಮಗಳ ಮಧ್ಯೆ ಇದೆ. ಆದ್ದರಿಂದ ಇದು ಅಮೃತ. ಆದ್ದರಿಂದ ಧರ್ಮ-ಕಾಮಗಳು ಅರ್ಥಾವಲಂಬಿಯಾಗಿವೆ.

ಅನರ್ಥಸ್ಯ ನ ಕಾಮೋऽಸ್ತಿ ತಥಾರ್ಥೋ ಧರ್ಮಿಣಃ ಕೃತಃ ।
ತಸ್ಮಾದುದ್ವಿಜತೇ ಲೋಕೋऽರ್ಥಾದ್ ಧರ್ಮಬಹಿಷ್ಕೃತಾತ್ ॥೨೫॥

ಅರ್ಥರಹಿತನ ಆಸೆಗಳು ಈಡೇರುವುದಿಲ್ಲ. ಅಂತೆಯೇ ಧರ್ಮನಿಷ್ಠನಿಗೆ ಅರ್ಥದ ಅಪೇಕ್ಷೆಯು ಜೋಡಿಸಲ್ಪಟ್ಟಿದೆ. ಲೋಕವು ಧರ್ಮಬಾಹಿರವಾದ ಸಂಪತ್ತಿನಿಂದ ಉದ್ವೇಗಕ್ಕೆ ಒಳಗಾಗುತ್ತದೆ.

ತಸ್ಮಾದ್ ಧರ್ಮಪ್ರಧಾನೇನ ಸಾಧ್ಯೋऽರ್ಥಃ ಸಂಯತಾತ್ಮನಾ ।
ವಿಶಸ್ತೇಷು ಚ ಭೂತೇಷು ಕಲ್ಪ್ಯತೇ ಸರ್ವ ಏವ ಸಃ ॥೨೬॥

ಆದ್ದರಿಂದ ಧರ್ಮಕ್ಕೆ ಆದ್ಯತೆಯನ್ನು ಕೊಟ್ಟು, ಸಂಯಮಶೀಲವಾದ ಮನಸ್ಸಿನಿಂದ ಅರ್ಥವನ್ನು ಸಂಪಾದಿಸಬೇಕು. ಎಲ್ಲ ಜನರೂ ವಿಶ್ವಾಸಿಗಳಾಗಿದ್ದಾಗ ಅರ್ಥವು ಪೂರ್ಣವಾಗಿ ಸಿದ್ಧಿಸುತ್ತದೆ.

ಸರ್ವಂ ಸಮಾಚರೇತ್ ಪೂರ್ವಂ ತಥೋರ್ಧ್ವಂ ಧರ್ಮಸಂಯುತಮ್ ।
ತತಃ ಕಾಮಂ ಚರೇತ್ ಪಶ್ಚಾತ್ ಸಿದ್ಧಾರ್ಥಸ್ಯ ಹಿ ತತ್ಫಲಮ್ ॥೨೭॥

ಮೊದಲು (ಯಜ್ಞ-ದಾನ ಮೊದಲಾದ ಧರ್ಮಾನುಷ್ಠಾನಕ್ಕಿಂತ ಮೊದಲು) ಅರ್ಥ ಸಂಪಾದನೆಯ ದಾರಿಯನ್ನು ಅನುಸರಿಸಬೇಕು. ಅನಂತರವೂ ಧರ್ಮದಿಂದಲೇ ಅರ್ಥವನ್ನು ಸಂಪಾದಿಸಬೇಕು. ಅನಂತರ ಅಭೀಷ್ಟಗಳನ್ನು ಪೂರೈಸಬೇಕು. ಧರ್ಮ ಮತ್ತು ಕಾಮಗಳು ಅರ್ಥಸಿದ್ಧಿಯ ಫಲ.

ವಿರೇಮತುಸ್ತು ತದ್ವಾಕ್ಯಮುಕ್ತ್ವಾ ತಾವಶ್ವಿನೋಃ ಸುತೌ ।
ಭೀಮಸೇನಸ್ತದಾ ವಾಕ್ಯಮಿದಂ ವಕ್ತುಂ ಪ್ರಚಕ್ರಮೇ ॥೨೮॥

ಆ ಅಶ್ವಿನಿಸುತರು ಅಷ್ಟು ಮಾತನ್ನು ಹೇಳಿ ವಿರಮಿಸಿದರು. ಅನಂತರ ಭೀಮಸೇನನು ಮಾತನಾಡಿದನು.

ನಾಕಾಮಃ ಕಾಮಯತ್ಯರ್ಥಂ ನಾಕಾಮೋ ಧರ್ಮಮಿಚ್ಛತಿ ।
ನಾಕಾಮಃ ಕಾಮಯಾನೋಽಸ್ತಿ ತಸ್ಮಾತ್ ಕಾಮೋ ವಿಶಿಷ್ಯತೇ ॥೨೯॥

ಕಾಮರಹಿತನಿಗೆ ಅರ್ಥಕಾಮನೆಯೂ ಇರುವುದಿಲ್ಲ. ಧರ್ಮಾನುಷ್ಠಾನ ಇಚ್ಛೆಯೂ ಇರುವುದಿಲ್ಲ. ಮೋಕ್ಷಕಾಮನೆಯೂ ಇರುವುದಿಲ್ಲ. ಭೋಗಕಾಮನೆಯೂ ಇರುವುದಿಲ್ಲ.

ಕಾಮೇನ ಯುಕ್ತಾ ಋಷಯಸ್ತಪಸ್ಯೇವ ಸಮಾಹಿತಾಃ ।
ಪಲಾಶಫಲಮೂಲಾಶಾ ವಾಯುಭಕ್ಷಾಃ ಸುಸಂಯತಾಃ ॥೩೦॥

ತಪಸ್ಸಿನ ಫಲವನ್ನು ಪಡೆಯುವ ಕಾಮನೆಯಿದ್ದ ಋಷಿಗಳೇ ತಪಸ್ಸಿನಲ್ಲಿ ತೊಡಗಿದರು. ಎಲೆಗಳನ್ನೇ ತಿನ್ನುವವರು ಮತ್ತು ಫಲ-ಮೂಲಗಳನ್ನೇ ತಿನ್ನುವವರು ಫಲದ ಆಸೆಯಿದ್ದವರೇ, ಕೇವಲ ವಾಯುಸೇವನೆಯನ್ನು ಮಾಡುವವರು ಅಂತಹ ಆಹಾರನಿಯಮವನ್ನು ಆಚರಿಸುವ ಕಾಮನೆ ಇದ್ದವರೇ.

ವೇದೋಪವೇದೇಷ್ವಪರೇ ಯುಕ್ತಾಃ ಸ್ವಾಧ್ಯಾಯಪಾರಗಾಃ ।
ಶ್ರಾದ್ಧಯಜ್ಞಕ್ರಿಯಾಯಾಂ ಚ ತಥಾ ದಾನಪ್ರತಿಗ್ರಹೇ ॥೩೧॥

ವೇದ-ಉಪವೇದಗಳಲ್ಲಿ ತೊಡಗಿದವರು, ಸ್ವಾಧ್ಯಾಯ ಪಾರಂಗತರು, ಶ್ರಾದ್ಧದಲ್ಲಿ ಮತ್ತು ಯಜ್ಞಪ್ರಕ್ರಿಯೆಗಳಲ್ಲಿ, ದಾನ-ಪ್ರತಿಗ್ರಹಗಳಲ್ಲಿ ಆಸಕ್ತರು ಆಯಾಯಾ ಕಾಮನೆಗಳಿದ್ದವರೇ.

ವಣಿಜಃ ಕರ್ಷಕಾ ಗೋಪಾಃ ಕಾರವಃ ಶಿಲ್ಪಿನಸ್ತಥಾ ।
ದೈವಕರ್ಮಕೃತಶ್ಚೈವ ಯುಕ್ತಾಃ ಕಾಮೇನ ಕರ್ಮಸು ॥೩೨॥

ವರ್ತಕರು, ಕೃಷಿಕರು, ಗೋಪಾಲಕರು, ಬಡಗಿಗಳು, ಶಿಲ್ಪಿಗಳು, ಜ್ಯೋತಿಷಿಗಳು ಆಯಾಯಾ ಕೆಲಸಗಳಲ್ಲಿ ಕಾಮನೆ ಇದ್ದವರೇ.

ಸಮುದ್ರಂ ಚಾವಿಶಂತ್ಯನ್ಯೇ ನರಾಃ ಕಾಮೇನ ಸಂಯುತಾಃ ।
ಕಾಮೋ ಹಿ ವಿವಿಧಾಕಾರಃ ಸರ್ವಂ ಕಾಮೇನ ಸಂತತಮ್ ॥೩೩॥

(ಮುತ್ತು-ರತ್ನಗಳ) ಕಾಮನೆಯಿದ್ದ ನರರೇ ಸಮುದ್ರವನ್ನು ಪ್ರವೇಶಿಸುತ್ತಾರೆ. ಕಾಮಕ್ಕೆ ವಿವಿಧ ರೂಪಗಳು. ಎಲ್ಲ ಪ್ರವೃತ್ತಿಗಳಲ್ಲೂ ಕಾಮವು ವ್ಯಾಪಿಸಿದೆ.

ನಾಸ್ತಿ ನಾಸೀನ್ನಾಭವಿಷ್ಯದ್ಭೂತಂ ಕಾಮಾತ್ಮಕಾತ್ ಪರಮ್ ।
ಏತತ್ ಸಾರಂ ಮಹಾರಾಜ ಧರ್ಮಾರ್ಥಾವತ್ರ ಸಂಶ್ರಿತೌ ॥೩೪॥

ಕಾಮನೆಯಿಲ್ಲದ ಯಾವ ಪ್ರಾಣಿಯೂ ಇಲ್ಲ. ಹಿಂದೆ ಇರಲಿಲ್ಲ. ಮುಂದೆಯೂ ಇರುವುದಿಲ್ಲ. ಧರ್ಮ-ಅರ್ಥಗಳು ಕಾಮವನ್ನು ಅವಲಂಬಿಸಿವೆ. ಮಹಾರಾಜ ಇದು ಸಾರ.

ನವನೀತಂ ಯಥಾ ದಧ್ನಸ್ತಥಾ ಕಾಮೋಽರ್ಥಧರ್ಮತಃ ।
ಶ್ರೇಯಸ್ತೈಲಂ ಚ ಪಿಣ್ಯಾಕಾದ್ತಂ ಶ್ರೇಯ ಉದಶ್ವಿತಃ ॥೩೫॥

ಮೊಸರಿಗಿಂತ ಬೆಣ್ಣೆ ಶ್ರೇಷ್ಠ. ಹಿಂಡಿಗಿಂತ ತೈಲವು ಶ್ರೇಷ್ಠ. ಮಜ್ಜಿಗೆಗಿಂತ ತುಪ್ಪ ಶ್ರೇಷ್ಠ. ಹಾಗೆಯೇ ಕಾಮವು ಅರ್ಥ ಮತ್ತು ಧರ್ಮಗಳಿಗಿಂತ ಶ್ರೇಷ್ಠ.

ಶ್ರೇಯಃ ಪುಷ್ಪಫಲಂ ಕಾಷ್ಠಾತ್ ಕಾಮೋ ಧರ್ಮಾರ್ಥಯೋರ್ವರಃ ।
ಪುಷ್ಪತೋ ಮಧ್ವಿವ ರಸಃ ಕಾಮಾತ್ ಸಂಜಯತೇ ಸುಖಮ್ ॥೩೬॥

ಕಟ್ಟಿಗೆಗಿಂತ ಪುಷ್ಪ ಮತ್ತು ಫಲಗಳು ಶ್ರೇಷ್ಠ. ಕಾಮವು ಧರ್ಮ- ಅರ್ಥಗಳಿಗಿಂತ ಶ್ರೇಷ್ಠ. ಪುಷ್ಪಕ್ಕಿಂತ ಮಧು ಶ್ರೇಷ್ಠ. ಕಾಮದಿಂದ ಸುಖವು ಹುಟ್ಟುತ್ತದೆ.

ಸುಚಾರುವೇಷಾಭಿರಲಂಕೃತಾಭಿ-
ರ್ಮದೋತ್ಕಟಾಭಿಃ ಪ್ರಿಯವಾದಿನೀಭಿಃ ।
ರಮಸ್ವ ಯೋಷಾಭಿರುಪೇತ್ಯ ಕಾಮಂ
ಕಾಮೋ ಹಿ ರಾಜಂಸ್ತರಸಾಭಿಪಾತೀ ॥೩೭॥

ಬಹಳ ರಮಣೀಯ ವಸ್ತ್ರಗಳನ್ನು ಧರಿಸಿರುವ, ಅಲಂಕರಿಸಿಕೊಂಡಿರುವ, ಉತ್ಕಟ ಮದವನ್ನು ಹೊಂದಿರುವ, ಪ್ರಿಯವಾಗಿ ಮಾತನಾಡುವ ಸ್ತ್ರೀಯರೊಂದಿಗೆ ಯಥೇಷ್ಟವಾಗಿ ವಿಹರಿಸು. ಕಾಮವು ವೇಗದಿಂದ ಆಕ್ರಮಿಸುತ್ತದೆ.

ಬುದ್ಧಿರ್ಮಮೈಷಾ ಪರಿಷತ್ ಸ್ಥಿತಸ್ಯ
ಮಾ ಭೂದ್ ವಿಚಾರಸ್ತವ ಧರ್ಮಪುತ್ರ ।
ಶಾಂತಂ ಹಿ ತತ್ ಸದ್ಭಿರಫಲ್ಗುಸಾರಮ್
ಅಸಸ್ತವಾಕ್ಯಂ ಪರಮಾನೃಶಂಸ್ಯಮ್ ॥೩೮॥

ಧರ್ಮಪುತ್ರ ಇದು ಸಭಾಸದನಾದ (ತಿಳಿದವರ ಮಧ್ಯೆ ಇರುವ) ನನ್ನ ನಿರ್ಣಯ. ನೀನು ಏನೂ ಸಂದೇಹಪಡಬೇಡ. ಕೆಟ್ಟ ಮತ್ತು ಹಾನಿಕರ ವಸ್ತುಗಳಿಂದ ದೂರವಿರುವ ಕಾಮವು ಉತ್ತಮೋತ್ತಮ ಕಾಮ ಎಂದು ಸಜ್ಜನರ ಅಭಿಪ್ರಾಯ. ನನ್ನ ಮಾತು ವಿಮರ್ಶಪೂರ್ವಕ ಮತ್ತು ಪ್ರಜ್ಞಾಪೂರ್ವಕ (ಅಜ್ಞಾನದ ಸ್ಥಿತಿಯಲ್ಲಿ ನಾನು ಇದನ್ನು ಹೇಳಿಲ್ಲ). ಇದು ನಿಷ್ಠುರತೆಯಿಲ್ಲದ ಉತ್ತಮವಾದ ಮಾತು.

ಧರ್ಮಾರ್ಥಕಾಮಾಃ ಸಮಮೇವ ಸೇವ್ಯಾ
ಯೋ ಹ್ಯೇಕಭಕ್ತಃ ಸ ನರೋ ಜಘನ್ಯಃ ।
ದ್ವಯೋಸ್ತು ಸಾಹ್ಯಂ ಪ್ರವದಂತಿ ಮಧ್ಯಂ
ಸ ಉತ್ತಮೋ ಯೋ ನಿರತಸ್ತ್ರಿವರ್ಗೇ ॥೩೯॥

ಧರ್ಮ-ಅರ್ಥ-ಕಾಮಗಳನ್ನು ಸಮವಾಗಿ ಸೇವಿಸಬೇಕು. ಯಾರು ಒಂದನ್ನೇ ಸೇವಿಸುತ್ತಾನೋ ಅವನು ಬಹಳ ಕೆಳಮಟ್ಟದ ನರ. ಎರಡನ್ನು ಸೇವಿಸುವ ನರನನ್ನು ಮಧ್ಯ ಎಂದು ಹೇಳುತ್ತಾರೆ. ಮೂರನ್ನೂ ಸಮವಾಗಿ ಸೇವಿಸುವವನು ಉತ್ತಮ.

ಪ್ರಾಜ್ಞಃ ಸುಹೃಚ್ಚಂದನಸಾರಲಿಪ್ತೋ
ವಿಚಿತ್ರಮಾಲ್ಯಾಭರಣೈರುಪೇತಃ ।
ತತೋ ವಚಃ ಸಂಗ್ರಹವಿಗ್ರಹೇಣ
ಪ್ರೋಕ್ತ್ವಾ ಯವೀಯಾನ್ ವಿರರಾಮ ಭೀಮಃ ॥೪೦॥

ಯುಧಿಷ್ಠಿರನಿಗಿಂತ ಕಿರಿಯನಾದ ಭೀಮ ಪ್ರಾಜ್ಞ. ಒಳ್ಳೆಯ ಹೃದಯದವನು, ಶ್ರೇಷ್ಠಚಂದನವನ್ನು ಲೇಪಿಸಿಕೊಳ್ಳುವವನು. ಸುಂದರವಾದ ಮಾಲೆ ಮತ್ತು ಆಭರಣಗಳನ್ನು ಧರಿಸುವವನು. ಈ ಭೀಮನು ಸಂಕ್ಷೇಪವಾಗಿ ಮತ್ತು ವಿಸ್ತರವಾಗಿ ಪ್ರತಿಪಾದಿಸಿ ವಿರಮಿಸಿದನು.

ತತೋ ಮುಹೂರ್ತಾದಥ ಧರ್ಮರಾಜೋ
ವಾಕ್ಯಾನಿ ತೇಷಾಮನುಚಿಂತ್ಯ ಸಮ್ಯಕ್ ।
ಉವಾಚ ರಾಜಾವಿತಥಂ ಸ್ಮಯನ್ ವೈ
ಬಹುಶ್ರುತಾಂ ಧರ್ಮಭೃತಾಂ ವರಿಷ್ಠಃ ॥೪೧॥

ಅನಂತರ ಧರ್ಮರಾಜನು ಸ್ವಲ್ಪಹೊತ್ತು ಅವರೆಲ್ಲರ ಮಾತುಗಳನ್ನು ಚೆನ್ನಾಗಿ ತನ್ನೊಳಗೇ ವಿಮರ್ಶಿಸಿದನು. ಅನಂತರ ಬಹುಶಾಸ್ತ್ರಗಳ ಅಧ್ಯಯನ ಮಾಡಿರುವ, ಧರ್ಮಪಾಲಕರಲ್ಲಿ ಶ್ರೇಷ್ಠನಾದ ರಾಜನು ಪ್ರಸನ್ನಮುಖಭಾವದಿಂದ ಯಥಾರ್ಥವಾಗಿ ಹೇಳಿದನು.

ನಿಃಸಂಶಯಂ ನಿಶ್ಚಿತಧರ್ಮಶಾಸ್ತ್ರಾಃ
ಸರ್ವೇ ಭವಂತೋ ವಿದಿತಪ್ರಮಾಣಾಃ ।
ವಿಜ್ಞಾತುಕಾಮಸ್ಯ ಮಮೇಹ ವಾಕ್ಯ-
ಮುಕ್ತಂ ಯದ್ವೈ ನೈಷ್ಠಿಕಂ ತಚ್ಛ್ರುತಂ ಮೇ ।
ಇಹಾನುವಂಶಂ ಗದತೋ ಮಮಾಪಿ
ವಾಕ್ಯಂ ನಿಬೋಧಧ್ವಮನನ್ಯಭಾವಾಃ ॥೪೨॥

ನೀವೆಲ್ಲರೂ ಧರ್ಮಶಾಸ್ತ್ರವನ್ನು ಚೆನ್ನಾಗಿ ತಿಳಿದಿರುವಿರಿ. ಪ್ರಮಾಣಗಳನ್ನು ತಿಳಿದಿರುವಿರಿ. ಸಂಶಯವಿಲ್ಲ. ನಿಮ್ಮ ಅಭಿಪ್ರಾಯವನ್ನು ತಿಳಿಯಬಯಸಿದ ನನಗೆ ನೀವೆಲ್ಲರೂ ಗೊಂದವಿಲ್ಲದಂತೆ ಸುಸ್ಪಷ್ಟ ವಚನಗಳನ್ನು ಹೇಳಿದ್ದೀರಿ. ಅದೆಲ್ಲವನ್ನು ಕೇಳಿದ್ದೇನೆ. ಈಗ ನಾನು ಕುಲಕ್ರಮಾಗತ ಚಿಂತನೆಗೆ ಅನುಗುಣವಾಗಿ ಹೇಳುವೆ. ನೀವು ಏಕಾಗ್ರತೆಯಿಂದ ಕೇಳಿರಿ.

ಯೋ ವೈ ನ ಪಾಪೇ ನಿರತೋ ನ ಪುಣ್ಯೇ
ನಾರ್ಥೇ ನ ಧರ್ಮೇ ಮನುಜೋ ನ ಕಾಮೇ ।
ವಿಮುಕ್ತದೋಷಃ ಸಮಫಲ್ಗುಸಾರಃ
ವಿಮುಚ್ಯತೇ ಸುಖದುಃಖಾತ್ ಸ ಸಿದ್ಧಃ ॥೪೩॥

ಯಾವ ಮನುಜನು ಪಾಪಕಾರ್ಯದಲ್ಲಿ ನಿರತನಾಗುವುದಿಲ್ಲವೋ, ಪುಣ್ಯ ಕಾರ್ಯದಲ್ಲಿ ನಿರತನಾಗುವುದಿಲ್ಲವೋ, ಅರ್ಥದಲ್ಲಿ ನಿರತನಾಗುವುದಿಲ್ಲವೋ, ಧರ್ಮದಲ್ಲಿ ನಿರತನಾಗುವುದಿಲ್ಲವೋ, ಕಾಮದಲ್ಲಿ ನಿರತನಾಗುವುದಿಲ್ಲವೋ, ತುಚ್ಛವಾದ ಮಣ್ಣು ಇತ್ಯಾದಿಗಳನ್ನು, ಶ್ರೇಷ್ಠವಾದ ಬಂಗಾರ ಇತ್ಯಾದಿಗಳನ್ನು ಸಮವಾಗಿ ಕಾಣುತ್ತಾನೋ ಅವನಿಗೆ ಯಾವ ದೋಷಗಳ ಲೇಪವಾಗುವುದಿಲ್ಲ. ಆ ಸಿದ್ಧನು ಸುಖ-ದುಃಖಮಯವಾದ ಹುಟ್ಟು-ಸಾವುಗಳಿಂದ ಬಿಡುಗಡೆಯನ್ನು ಪಡೆಯುತ್ತಾನೆ.

(ಆದ್ದರಿಂದ ಮೋಕ್ಷವೇ ಶ್ರೇಷ್ಠ). (ಪುಣ್ಯ, ಅರ್ಥ, ಧರ್ಮ, ಕಾಮಗಳಲ್ಲಿ ನಿರತನಾಗದವನು ಎಂದರೆ ಫಲಾಪೇಕ್ಷೆಯಿಂದ ಇವುಗಳಲ್ಲಿ ನಿರತನಾಗದವನು ಎಂದು ಅಭಿಪ್ರಾಯ. ಫಲಾಪೇಕ್ಷೆಯಿಂದ ಇವುಗಳನ್ನು ಮಾಡಿದರೆ ಪ್ರಾಪ್ತವಾಗುವ ಫಲಗಳು ಸಂಸಾರ ಬಂಧನಕ್ಕೆ ಕಾರಣವಾಗುತ್ತವೆ. ಫಲಾಪೇಕ್ಷೆಯಿಲ್ಲದೆ, ಶ್ರೀಹರಿ ಪ್ರೀತಿಯಾಗಲಿ ಎಂಬ ಭಾವದಿಂದ ಮಾಡಿದರೆ ಸಂಸಾರಬಂಧನದಿಂದ ಬಿಡುಗಡೆಯಾಗುತ್ತದೆ).

ಭೂತಾನಿ ಜಾತೀಮರಣಾನ್ವಿತಾನಿ
ಜರಾವಿಕಾರೈಶ್ಚ ಸಮನ್ವಿತಾನಿ ।
ಭೂಯಶ್ಚ ತೈಸ್ತೈಃ ಪ್ರತಿಬೋಧಿತಾನಿ
ಮೋಕ್ಷಂ ಪ್ರಶಂಸಂತಿ ನ ತಂ ಚ ವಿದ್ಮಃ ॥೪೪॥

ಜೀವ ಸಂಕುಲವು ಪುನಃ ಪುನಃ ಹುಟ್ಟು-ಸಾವುಗಳಿಗೆ ಒಳಗಾಗುತ್ತದೆ. ಮುಪ್ಪು ಮತ್ತು ಇತರ ವಿಕಾರಗಳಿಗೆ ಒಳಗಾಗುತ್ತದೆ. ಆ ಹುಟ್ಟು-ಸಾವು ಮತ್ತು ವಿಕಾರಗಳ ಅನುಭವದಿಂದ ಜೀವಸಂಕುಲಕ್ಕೆ ಇವುಗಳಿಂದ ಬಿಡುಗಡೆಯನ್ನು ಪಡೆಯಬೇಕು ಎಂದು ಜ್ಞಾನವು ಹುಟ್ಟುತ್ತದೆ. ಹುಟ್ಟು-ಸಾವು-ವಿಕಾರಗಳಿಂದ ಪಾಠ ಕಲಿತವರು ಮೋಕ್ಷವನ್ನು ಪ್ರಶಂಸಿಸುತ್ತಾರೆ. ನಮಗೆ ಆ ಮೋಕ್ಷದ ಬಗ್ಗೆ ತಿಳಿದಿಲ್ಲ.

ಸ್ನೇಹೇನ ಬದ್ಧಸ್ಯ ಹಿ ಸಂತಿ ತಾನೀ-
ತ್ಯೇವಂ ಸ್ವಯಂಭೂರ್ಭಗವಾನುವಾಚ ।
ಬುಧಾಶ್ಚ ನಿರ್ವಾಣಪರಾ ವದಂತಿ
ತಸ್ಮಾನ್ನ ಕುರ್ಯಾತ್ ಪ್ರಿಯಮಪ್ರಿಯಂ ಚ ॥೪೫॥

'ಪ್ರಕೃತಿಯಿಂದ ಅಭಿವ್ಯಕ್ತವಾಗಿರುವ ರೂಪ-ರಸ-ಗಂಧ-ಸ್ಪರ್ಶ-ಶಬ್ದ ಇವುಗಳ ಬಗ್ಗೆ ಗಾಢ ಒಲವು ಇದ್ದವನಿಗೆ ಹುಟ್ಟು-ಸಾವು-ಮುಪ್ಪು ಮೊದಲಾದವುಗಳು ಇವೆ' ಎಂದು ಚತುರ್ಮುಖ ಬ್ರಹ್ಮದೇವರು ಹೇಳಿದ್ದಾರೆ. ಪ್ರಕೃತಿಯಿಂದ ಬಿಡುಗಡೆಯನ್ನು ಪಡೆಯುವ ಅಭಿರುಚಿ ಇರುವ ಪ್ರಾಜ್ಞರೂ ಹೇಳುತ್ತಾರೆ. ಆದ್ದರಿಂದ ಪ್ರಿಯವನ್ನು ಮತ್ತು ಅಪ್ರಿಯವನ್ನು ಮಾಡಬಾರದು.

ಏತತ್ ಪ್ರಧಾನಂ ನ ತು ಕಾಮಕಾರೋ
ಯಥಾ ನಿಯುಕ್ತೋಽಸ್ಮಿ ತಥಾ ಚರಾಮಿ ।

ಭೂತಾನಿ ಸರ್ವಾಣಿ ವಿಧಿರ್ನಿಯುಂಕ್ತೇ
ವಿಧಿರ್ಬಲೀಯಾನಿತಿ ವಿತ್ತ ಸರ್ವೇ ॥೪೬॥

ಮೋಕ್ಷಕ್ಕಾಗಿ ಪ್ರಯತ್ನವೇ ಮುಖ್ಯ. ಸ್ವಚ್ಛಂದ ವರ್ತನೆಯು ಅಲ್ಲ. ವಿಧಿಯಿಂದ ಹೇಗೆ ನಿಯೋಜಿಸಲ್ಪಟ್ಟಿರುವೆನೋ ಹಾಗೆ ಮಾಡುತ್ತೇನೆ. ಸಕಲ ಜೀವಸಂಕುಲವನ್ನು ವಿಧಿಯು ನಿಯೋಜಿಸುತ್ತದೆ. ವಿಧಿಯು ನಮ್ಮ ಇಚ್ಛೆ-ಪ್ರಯತ್ನಗಳಿಗಿಂತ ಹೆಚ್ಚು ಬಲಶಾಲಿ ಎಂದು ಎಲ್ಲರೂ ತಿಳಿಯಿರಿ.

ಯತ್ ಕರ್ಮಣಾಪ್ನೋತಿ ನ ಚಾಪ್ಯನರ್ಥಂ
ಯದ್ಭಾವಿ ಸರ್ವಂ ಭವತೀತಿ ವಿತ್ತ ।
ತ್ರಿವರ್ಗಹೀನೋಽಪಿ ಹಿ ವಿಂದತೇಽರ್ಥಂ
ತಸ್ಮಾದಿದಂ ಲೋಕಹಿತಾಯ ಗುಹ್ಯಮ್ ॥೪೭॥

ಕರ್ಮದಿಂದ= ಪ್ರಯತ್ನದಿಂದ ಅರ್ಥವನ್ನು ಪಡೆಯುತ್ತಾನೆ, ಅನರ್ಥವನ್ನು ಹೊಂದುವುದಿಲ್ಲ. ನಿಜ. ಆದರೆ ಇದೂ ಕೂಡ ವಿಧಿಯ ಇಚ್ಛೆಯಂತೆ ಎಂದು ತಿಳಿಯಿರಿ. ತ್ರಿವರ್ಗಹೀನನೂ ಕೂಡ ಮೋಕ್ಷಪ್ರಾಪ್ತಿಗೆ ಅನುಕೂಲವಾದ ರಹಸ್ಯ ಜ್ಞಾನವನ್ನು ವಿಧಿಯ ವ್ಯವಸ್ಥೆಯಂತೆ ಪಡೆಯುತ್ತಾನೆ.

ವೈಶಂಪಾಯನಃ

ತತಸ್ತದಗ್ರ್ಯಂ ವಚನಂ ಮನೋನುಗಂ
ಸಮಸ್ತಮಾಜ್ಞಾಯ ತತೋಽತಿಹೇತುಮತ್ ।
ತದಾ ಪ್ರಣೇದುಶ್ಚ ಜಹರ್ಷಿರೇ ಚ ತೇ
ಕುರುಪ್ರವೀರಾಯ ಚ ಚಕ್ರುರಂಜಲೀನ್ ॥೪೮॥

ಅನಂತರ ಬಹಳ ಯುಕ್ತಿಯುಕ್ತವಾದ, ತಮ್ಮ ಮನಸ್ಸಿಗೆ ಒಪ್ಪಿಗೆಯಾದ ಆ ಎಲ್ಲ ಉತ್ತಮ ವಚನಗಳನ್ನು ತಿಳಿದು ಅವರೆಲ್ಲರೂ ಹರ್ಷೋದ್ಗಾರಗಳನ್ನು ಮಾಡಿದರು. ಕುರುಪ್ರವೀರ ಯುಧಿಷ್ಠಿರನಿಗೆ ನಮಸ್ಕರಿಸಿದರು.

ಸುಚಾರುವರ್ಣಾಕ್ಷರಶಬ್ದಭೂಷಿತಾಂ
ಮನೋನುಗಾಂ ನಿರ್ಧೂತವಾಕ್ಯಕಂಟಕಾಮ್ ।

ನಿಶಮ್ಯ ತಾಂ ಪಾರ್ಥಿವ ಪಾರ್ಥಭಾಷಿತಾಂ
ಗಿರಂ ನರೇಂದ್ರಾಃ ಪ್ರಶಶಂಸುರೇವ ತೇ ।
ಪುನಶ್ಚ ಪಪ್ರಚ್ಛ ಸರಿದ್ವರಾಸುತಂ
ತತಃ ಪರಂ ಧರ್ಮಮಹೀನಸತ್ತ್ವಃ ॥೪೯॥

ಬಹಳ ರಮಣೀಯವಾದ ವರ್ಣ ಮತ್ತು ಶಬ್ದಗಳಿಂದ ಭೂಷಿತವಾದ ಮನಸ್ಸಿಗೆ ಒಪ್ಪಿಗೆಯಾಗುವ, ವಾಕ್ಯದೋಷಗಳಿಲ್ಲದ ಯುಧಿಷ್ಠಿರ ವಚನಗಳನ್ನು ಕೇಳಿ ಭೀಮಸೇನ ಮೊದಲಾದ ನರೋತ್ತಮರು ಆ ಮಾತುಗಳನ್ನು ಪ್ರಶಂಸಿಸಿದರು. ಪ್ರಗಲ್ಭ ಅಂತಃಸತ್ವವಿರುವ ಯುಧಿಷ್ಠಿರನು ಗಂಗಾಸುತನನ್ನು ಧರ್ಮದ ಬಗ್ಗೆ ಮತ್ತಷ್ಟು ವಿವರಿಸಬೇಕೆಂದು ಕೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ತ್ರಯಸ್ತ್ರಿಂಶೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ತಮೂರನೆಯ
ಅಧ್ಯಾಯವು ಮುಗಿಯಿತು.

★ ★ ★ ★

ಮೂವತ್ತನಾಲ್ಕನೆಯ ಅಧ್ಯಾಯ

ಸಂಧಾನಕ್ಕೆ ಅರ್ಹರ ಮತ್ತು ಅನರ್ಹರ ವಿವರಣೆ. ಧನದ ಆಸೆಯಿಂದ ಬಂಧನವನ್ನು ವಿವರಿಸುವ ಬ್ರಾಹ್ಮಣನ ಕಥೆ.

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಕುರೂಣಾಂ ಕೀರ್ತಿವರ್ಧನ ।
ಪ್ರಶ್ನಂ ಕಂಚಿತ್ ಪ್ರವಕ್ಷ್ಯಾಮಿ ತನ್ಮೇ ವ್ಯಾಖ್ಯಾತುಮರ್ಹಸಿ ॥೧॥

ಕುರುಗಳ ಕೀರ್ತಿಯನ್ನು ಹೆಚ್ಚಿಸಿದ ಮಹಾಪ್ರಾಜ್ಞ! ಪಿತಾಮಹ! ಪ್ರಶ್ನೆಯೊಂದನ್ನು ಕೇಳುತ್ತೇನೆ. ದಯವಿಟ್ಟು ಉತ್ತರವನ್ನು ವಿವರವಾಗಿ ಹೇಳಿ.

ಕೀದೃಶಾ ಮಾನವಾಃ ಸೌಮ್ಯಾಃ ಕೈಃ ಪ್ರೀತಿಃ ಪರಮಾ ಭವೇತ್ ।
ಆಯತ್ಯಾಂ ಚ ತದಾತ್ವೇ ಚ ಕೇ ಕ್ಷಮಾಸ್ತಾನ್ ವದಸ್ವ ಮೇ ॥೨॥

ಸೌಮ್ಯ ಸ್ವಭಾವದ ಮಾನವರು ಹೇಗಿರುತ್ತಾರೆ? ಯಾರೊಡನೆ ಪ್ರೀತಿಯು ಶ್ರೇಷ್ಠ? ಭವಿಷ್ಯತ್‌ಕಾಲದಲ್ಲೂ ಮತ್ತು ವರ್ತಮಾನ ಕಾಲದಲ್ಲೂ ಹಿತವಾಗುವಂತೆ ನಡೆದುಕೊಳ್ಳಲು ಯಾರು ಸಮರ್ಥರು? ಅವರನ್ನು ಕುರಿತು ದಯವಿಟ್ಟು ತಿಳಿಸಿರಿ.

ನ ಹಿ ತತ್ರ ಧನಂ ಸ್ಫೀತಂ ನ ಚ ಸಂಬಂಧಿಬಾಂಧವಾಃ ।
ತಿಷ್ಠಂತಿ ಯತ್ರ ಸುಹೃದಸ್ತಿಷ್ಠಂತೀತಿ ಮತಿರ್ಮಮ ॥೩॥

ಸಮೃದ್ಧ ಧನದಿಂದ ಯಾವ ಕೆಲಸವು ಆಗುವುದಿಲ್ಲವೋ, ಸಂಬಂಧಿಗಳು, ಬಾಂಧವರು ಯಾವ ಸಂದರ್ಭದಲ್ಲಿ ಉಪಯೋಗಕ್ಕೆ ಬರುವುದಿಲ್ಲವೋ ಅಂತಹ ಕೆಲಸವನ್ನು ಸೌಹಾರ್ದವಿರುವವರು ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಅವರು ಉಪಯೋಗಕ್ಕೆ ಬರುತ್ತಾರೆ. ಇದು ನನ್ನ ಅಭಿಪ್ರಾಯ.

ದುರ್ಲಭೋ ಹಿ ಸುಹೃಚ್ಛ್ರೋತಾ ದುರ್ಲಭಶ್ಚ ಹಿತಃ ಸುಹೃತ್ ।
ಏತದ್ ಧರ್ಮಭೃತಾಂ ಶ್ರೇಷ್ಠ ಸರ್ವಂ ವ್ಯಾಖ್ಯಾತುಮರ್ಹಸಿ ॥೪॥

ನಮ್ಮ ಮಾತುಗಳನ್ನು ಸಮಾಧಾನದಿಂದ ಕೇಳುವ ಸುಹೃದ್ ದುರ್ಲಭ. ಹಿತಕರನಾದ ಸುಹೃತ್ ದುರ್ಲಭ. ಧರ್ಮನಿಷ್ಠರಲ್ಲಿ ಶ್ರೇಷ್ಠನೇ! ದಯವಿಟ್ಟು ಇವೆಲ್ಲವನ್ನು ವಿವರಿಸಿರಿ.

ಭೀಷ್ಮಃ

ಸಂದೇಹಾಃ ಪುರುಷಾ ರಾಜನ್ನಸಂದೇಹಾಶ್ಚ ತತ್ತ್ವತಃ ।
(ಸಂಧೇಯಾನ್ ಪುರುಷಾನ್ ರಾಜನ್ನಸಂಧೇಯಾಂಶ್ಚ ತತ್ತ್ವತಃ)
ವದತೋ ಮೇ ನಿಬೋಧ ತ್ವಂ ನಿಖಿಲೇನ ಯುಧಿಷ್ಠಿರ ॥೫॥

ರಾಜನೆ! ಧರ್ಮಸಮ್ಮತವಲ್ಲದ ಕೆಲಸವನ್ನು ಮಾಡಲು ಅಳಕುವವರು, ಅಳಕು ಇಲ್ಲದವರು- ಇವರ ಬಗ್ಗೆ ಹೇಳುವೆನು, ತಿಳಿದುಕೊ. (ಸಂಧಿಗೆ ಅರ್ಹರನ್ನು ಮತ್ತು ಅನರ್ಹರನ್ನು ಕುರಿತು ಹೇಳುವೆ).

ಲುಬ್ಧಃ ಕ್ರೂರಸ್ಯಕೃಧರ್ಮಾ ನಿಕೃತಃ ಶಠ ಏವ ಚ ।
ಕ್ಷುದ್ರಃ ಪಾಪಸಮಾಚಾರಃ ಸರ್ವಶಂಕೀ ತಥಾಲಸಃ ॥೬॥

ದೀರ್ಘಸೂತ್ರೋಽನೃಜುಃ ಕಷ್ಟೋ ಗುರುದಾರಪ್ರಧರ್ಷಕಃ ।
ವ್ಯಸನೇ ಯಃ ಪರಿತ್ಯಾಗೀ ದುರಾತ್ಮಾ ನಿರಪತ್ರಪಃ ॥೭॥

ಲೋಭಿ, ಕ್ರೂರಿ, ಧರ್ಮವನ್ನು ತ್ಯಜಿಸಿದವನು, ವಂಚಕ, ಕಪಟಿ, ಕ್ಷುದ್ರ, ಪಾಪಕೃತ್ಯಗಳನ್ನು ಮಾಡುವವನು, ಎಲ್ಲರ ಬಗ್ಗೆ ಸಂದೇಹಿಸುವವನು, ಅಲಸ, ವಿಳಂಬದಿಂದ ಕೆಲಸ ಮಾಡುವವನು, ಕೆಟ್ಟವನು, ಗುರುಪತ್ನಿಯನ್ನು ಬಲಾತ್ಕರಿಸಿದವನು, ಕಷ್ಟಕಾಲದಲ್ಲಿ ಬಿಟ್ಟುಹೋಗುವವನು, ನಾಚಿಕೆ ಇಲ್ಲದವನು,

ಸರ್ವತಃ ಪಾಪದರ್ಶೀ ಚ ನಾಸ್ತಿಕೋ ವೇದನಿಂದಕಃ ।
ಸಂಪ್ರಕೀರ್ಣೇಂದ್ರಿಯೋ ಲೋಕೇ ಯಃ ಕಾಮನಿರತಶ್ಚರೇತ್ ॥೮॥

ಅಸತ್ಯೋ ಲೋಕವಿದ್ದಿಷ್ಟಃ ಸಮಯೇ ಚಾನವಸ್ಥಿತಃ ।
ಪಿಶುನೋಽಥಾಕೃತಪ್ರಜ್ಞೋ ಮತ್ಸರೀ ಪಾಪನಿಶ್ಚಯಃ ॥೯॥

ಎಲ್ಲಕಡೆಯೂ ಕೆಡುಕನ್ನೇ ಕಾಣುವವನು, ನಾಸ್ತಿಕ, ವೇದನಿಂದಕ, ಇಂದ್ರಿಯಗಳನ್ನು ಬಹಿರ್ಮುಖವಾಗಿ ಹರಿಯಬಿಟ್ಟವನು, ಭೋಗನಿರತ, ಸತ್ಯವಂತನಲ್ಲದವನು, ಜನರ ದ್ವೇಷಕ್ಕೆ ಗುರಿಯಾದವನು, ಮಾತಿಗೆ ತಕ್ಕಂತೆ ನಡೆದುಕೊಳ್ಳದವನು, ಚಾಡಿಕೋರ, ಸಂಸ್ಕಾರ ಸಂಪನ್ನವಾದ ಪ್ರಜ್ಞೆಯಿಲ್ಲದವನು, ಮತ್ಸರವುಳ್ಳವನು, ಕೆಟ್ಟ ನಿಶ್ಚಯವುಳ್ಳವನು,

ದುಃಶೀಲೋಽಥಾಕೃತಾತ್ಮಾ ಚ ನೃಶಂಸಃ ಕಿತವಸ್ತಥಾ ।
ಮಿತ್ರೈರರ್ಥಕೃತೀ ನಿತ್ಯಮಿಚ್ಛತ್ಯರ್ಥಪರಶ್ಚ ಯಃ ॥೧೦॥

ದುಷ್ಪಚಾರಿತ್ರ್ಯದವನು, ಮನಸ್ಸಿನ ಮೇಲೆ ಹತೋಟಿ ಇಲ್ಲದವನು, ಕ್ರೂರಿ, ವಂಚಕ, ಮಿತ್ರರಿಂದ ಸಂಪತ್ತನ್ನು ಮಾಡಿಕೊಳ್ಳುವವನು, ಯಾವಾಗಲೂ ಹಣದಲ್ಲಿಯೇ ಆಸಕ್ತನು,

ದದತಶ್ಚ ಯಥಾಶಕ್ತಿ ಯೋ ನ ತುಷ್ಯತಿ ಮಂದಧೀಃ ।
ಅಮಿತ್ರಮಿವ ಯೋ ಭುಂಕ್ತೇ ಸದಾ ಮಿತ್ರಂ ನರರ್ಷಭ ॥೧೧॥

ಯಥಾಶಕ್ತಿ ದಾನ ಮಾಡುವವನ ಬಗ್ಗೆ ಸಂತುಷ್ಟನಾಗದವನು, ಸದಾ ಮಿತ್ರರನ್ನು ಶತ್ರುವನ್ನು ಹಿಂಸಿಸುವಂತೆ ಹಿಂಸಿಸುವವನು,

ಅಸ್ಥಾನಕ್ರೋಧನೋ ಯಶ್ಚ ಅಕಸ್ಮಾಚ್ಚ ವಿರಜ್ಯತೇ ।
ಸುಹೃದಶ್ಚೈವ ಕಲ್ಯಾಣಾನನು ತ್ಯಜತಿ ಕಿಲ್ಬಿಷೀ ॥೧೨॥

ಅನುಚಿತವಾಗಿ ಕೋಪ ಮಾಡಿಕೊಳ್ಳುವವನು, ಕಾರಣವಿಲ್ಲದೆ ದೂರವಾಗುವವನು, ತನ್ನ ಕೆಲಸವಾದ ನಂತರ ಸುಹೃಜ್ಜನರನ್ನು ತ್ಯಜಿಸುವವನು,

ಅಲ್ಪೇಽಪ್ಯಪಕೃತೇ ಮೂಢಸ್ತಥಾಜ್ಞಾನಾತ್ಕೃತೇಪಿ ಚ ।
ಕಾರ್ಯೋಪಸೇವೀ ಮಿತ್ರೇಷು ಮಿತ್ರದ್ವೇಷೀ ನರಾಧಿಪ ॥೧೩॥

ಸಣ್ಣ ಅಪಕಾರವನ್ನು ಮಾಡಿದ, ಅಜ್ಞಾನದಿಂದ ಅಪಕಾರ ಮಾಡಿದ ಮಿತ್ರರನ್ನು ದ್ವೇಷಿಸುವವನು, ತನಗೆ ಅನುಕೂಲವಾಗುವಂತೆ ಮಿತ್ರರನ್ನು ಉಪಯೋಗಿಸಿಕೊಳ್ಳುವವನು,

ಶತ್ರುರ್ಮಿತ್ರಮುಖೋ ಯಶ್ಚ ಜಿಹ್ಮಪ್ರೇಕ್ಷೀ ವಿಲೋಭನಃ ।
ನ ರಜ್ಯತಿ ಚ ಕಲ್ಯಾಣೇ ಯಸ್ಯಜೇತ್ತಾದೃಶಂ ನರಮ್ ॥೧೪॥

ಮಿತ್ರನ ಮುಖವಾಡವನ್ನು ಧರಿಸಿದ ಶತ್ರು, ಕುಟಿಲ ದೃಷ್ಟಿಯವನು, ಒಳ್ಳೆಯ ಕೆಲಸಗಳಲ್ಲಿ, ವಿಚಾರಗಳಲ್ಲಿ ಪ್ರೀತಿಯಿಲ್ಲದವನು - ಇಂತಹ ಜನರನ್ನು ತ್ಯಜಿಸಬೇಕು.

ಪಾನಪೋ ದ್ವೇಷಣಃ ಕ್ರೂರೋ ನಿರ್ಘೃಣಃ ಪರುಷಸ್ತಥಾ ।
ಪರೋಪತಾಪೀ ಮಿತ್ರಧ್ರುಕ್ ತಥಾ ಪ್ರಾಣಿವಧೇ ರತಃ ॥೧೫॥

ಮದ್ಯಪಾನ ಮಾಡುವವನು, ದ್ವೇಷದ ಸ್ವಭಾವದವನು, ದಯಾರಹಿತ, ಕ್ರೂರ, ಪರರಿಗೆ ತಾಪವುಂಟು ಮಾಡುವವನು, ಮಿತ್ರದ್ರೋಹಿ ಪ್ರಾಣಿಹಿಂಸೆಯನ್ನು ಮಾಡುವವನು,

ಕೃತಘ್ನಶ್ಚಾಧಮೋ ಲೋಕೇ ನ ಸಂಧೇಯಃ ಕಥಂಚನ ।
ಛಿದ್ರಾನ್ವೇಷೀ ನ ಸಂಧೇಯಃ ಸಂಧೇಯಾನಪಿ ಮೇ ಶೃಣು ॥೧೬॥

ಕೃತಘ್ನ, ಅಧಮ, ದೋಷಗಳನ್ನೇ ಹುಡುಕುವವನು- ಇವರ ಜೊತೆ ಸ್ನೇಹವನ್ನು ಮಾಡಬಾರದು. ಸಂಧೇಯರ (ಸ್ನೇಹಕ್ಕೆ ಅರ್ಹರ) ಬಗ್ಗೆ ಹೇಳುವೆನು, ಕೇಳು.

ಕುಲೀನಾ ವಾಕ್ಯಸಂಪನ್ನಾ ಜ್ಞಾನವಿಜ್ಞಾನಕೋವಿದಾಃ ।
ಮಿತ್ರಜ್ಞಾಶ್ಚ ಕೃತಜ್ಞಾಶ್ಚ ಸರ್ವಜ್ಞಾಃ ಶೋಕವರ್ಜಿತಾಃ ॥೧೭॥

ಸತ್ಕುಲಪ್ರಸೂತರು, ವಾಕ್‌ಪಟುಗಳು, ಸಾಮಾನ್ಯವಾಗಿ ತಿಳಿಯಬೇಕಾದ ವಿಷಯಗಳಲ್ಲಿ ಮತ್ತು ವಿಶೇಷವಾಗಿ ತಿಳಿಯಬೇಕಾದ ವಿಷಯಗಳಲ್ಲಿ ಕೋವಿದರು, ಮಿತ್ರ ಲಕ್ಷಣವನ್ನು ತಿಳಿದವರು, ಕೃತಜ್ಞರು, ಸರ್ವಜ್ಞರು, ಶೋಕರಹಿತರು,

ಮಾಧುರ್ಯಗುಣಸಂಪನ್ನಾಃ ಸತ್ಯಸಂಧಾ ಜಿತೇಂದ್ರಿಯಾಃ ।
ವ್ಯಾಯಾಮಶೀಲಾಃ ಸತತಂ ಭೃತ್ಯಪುತ್ರಾಃ ಕುಲೋದ್ಭವಾಃ ॥೧೮॥

ಮಧುರಸ್ವಭಾವದವರು, ಸತ್ಯಸಂಧರು, ಜಿತೇಂದ್ರಿಯರು, ಪ್ರಯತ್ನಶೀಲರು, ಭೃತ್ಯರನ್ನು ಪುತ್ರರಂತೆ ಕಾಣುವವರು, ಕುಲಕ್ಕೆ ಉತ್ಕರ್ಷವನ್ನು ಉಂಟು ಮಾಡುವವರು,

ರೂಪವಂತೋ ಗುಣೋಪೇತಾಸ್ತಥಾಲುಬ್ಧಾ ಜಿತಶ್ರಮಾಃ ।
ದೋಷೈರ್ವಿಯುಕ್ತಾಃ ಪ್ರಥಿತಾಸ್ತೇ ಗ್ರಾಹ್ಯಾಃ ಪಾರ್ಥಿವೇನ ಹ ॥೧೯॥

ರೂಪವಂತರು, ಗುಣಸಂಪನ್ನರು, ಲೋಭರಹಿತರು, ಆಯಾಸವಾಗದವರು, ದೋಷರಹಿತರು, ಸುಪ್ರಸಿದ್ಧರು- ಇವರನ್ನು ರಾಜನು ತನ್ನ ವಲಯದಲ್ಲಿ ಇಟ್ಟುಕೊಳ್ಳಬೇಕು.

ಯಥಾಶಕ್ತಿಸಮಾಚಾರಾಃ ಸಂತಸ್ತುಷ್ಯಂತಿ ಹಿ ಪ್ರಭೋ ।
ನಾಸ್ಥಾನೇ ಕ್ರೋಧವಂತಶ್ಚ ನ ಚಾಕಸ್ಮಾದ್ ವಿರಾಗಿಣಃ ॥೨೦॥

ಶಕ್ತಿ ಇದ್ದಷ್ಟು ಒಳ್ಳೆಯ ನಡವಳಿಕೆಯನ್ನು ಹೊಂದಿದ ಸಜ್ಜನರು, ಸಂತೋಷವುಳ್ಳವರು, ಅನುಚಿತವಾಗಿ ಕೋಪಮಾಡಿಕೊಳ್ಳದವರು, ಅಸಮಂಜಸ ಕಾರಣಗಳಿಂದ ವಿರಕ್ತರಾಗದವರು,

ವಿರಕ್ತಾಶ್ಚ ನ ರುಷ್ಯಂತಿ ಮನಸಾಪ್ಯರ್ಥಕೋವಿದಾಃ ।
ಆತ್ಮಾನಂ ಪೀಡಯಿತ್ವಾಪಿ ಸುಹೃತ್ಕಾರ್ಯಪರಾಯಣಾಃ ।
ನ ವಿರಜ್ಯಂತಿ ಮಿತ್ರೇಭ್ಯೋ ವಾಸೋ ರಕ್ತಮಿವಾವಿಕಮ್ ॥೨೧॥

ಗಾಢವಾದ ಆಸೆಯಿಲ್ಲದವರು, ಮನಸ್ಸಿನಲ್ಲೂ ರೋಷರಹಿತರು, ಆಗಬೇಕಾದ ಕೆಲಸಗಳ ಬಗ್ಗೆ ಸರಿಯಾದ ಜ್ಞಾನವಿರುವವರು, ತನಗೆ ತೊಂದರೆ ಮಾಡಿಕೊಂಡು ಮಿತ್ರರ ಕೆಲಸವನ್ನು ಮಾಡುವವರು, ಕೆಂಪು ಉಣ್ಣೆಬಟ್ಟೆಯಂತೆ (ಇದು ತನ್ನ ರಾಗವನ್ನು

= ಕೆಂಪು ಬಣ್ಣವನ್ನು ಬಿಡುವುದಿಲ್ಲ) ಸ್ನೇಹಿತರ ಮೇಲಿನ ಪ್ರೀತಿಯನ್ನು ಬಿಡದವರು, (ಅಥವಾ ಉಣ್ಣೆ ಬಟ್ಟೆಯ ಕೆಂಪು ಗಾಢವಲ್ಲ, ಅಂತೆಯೇ ಮಿತ್ರರ ಬಗ್ಗೆ ಗಾಢವಾದ ಅಂಟನ್ನು ಹೊಂದದವರು),

ದೋಷಾಂಶ್ಚ ಲೋಭಮೋಹಾದೀನರ್ಥೇಷು ಯುವತಿಷ್ವಥ ।
ನ ದರ್ಶಯಂತಿ ಸುಹೃದಾಂ ವಿಶ್ವಸ್ತಾ ಬಂಧುವತ್ಸಲಾಃ ॥೨೨॥

ಧನದ ಮೇಲೆ, ತರುಣಿಯರ ಮೇಲೆ ಲೋಭ-ಮೋಹ ಮೊದಲಾದ ದೋಷಗಳನ್ನು ಹೊಂದಿಲ್ಲದವರು, ಮಿತ್ರರ ವಿಶ್ವಾಸಕ್ಕೆ ಪಾತ್ರರು, ಬಂಧುಗಳ ಮೇಲೆ ಪ್ರೀತಿಯುಳ್ಳವರು,

ಲೋಷ್ಟಕಾಂಚನತುಲ್ಯಾರ್ಥಾಃ ಸುಹೃತ್ಸ್ವಶಬುದ್ಧಯಃ ।
ಯೇ ಚರಂತ್ಯನಭೀಮಾನಾ ನಿಸೃಷ್ಟಾರ್ಥವಿಭೂಷಣಾಃ ।
ಸಂಗಹ್ಣಂತಃ ಪರಿಜನಂ ಸ್ವಾಮ್ಯರ್ಥಪರಮಾಃ ಸದಾ ॥೨೩॥

ಮಣ್ಣು ಮತ್ತು ಬಂಗಾರವನ್ನು ಸಮವಾಗಿ ಕಾಣುವವರು, ಮಿತ್ರರ ಬಗ್ಗೆ ವಂಚನೆಯ ಬುದ್ಧಿ ಇಲ್ಲದವರು, ಅಭಿಮಾನರಹಿತರಾಗಿ ಆಚರಣೆಗಳನ್ನು ಮಾಡುವವರು, ದಾನದಿಂದ ಶೋಭೆಯನ್ನು ಗಳಿಸಿದವರು, ಪರಿಜನರನ್ನು ಸಲಹುವವರು, ಸದಾ ತಮ್ಮ ಪ್ರಭುವಿನ ಕೆಲಸವನ್ನು ಸಾಧಿಸುವ ನಿಷ್ಠೆವುಳ್ಳವರು,

ಈದೃಶೈಃ ಪುರುಷಶ್ರೇಷ್ಠೈಃ ಸಂಧಿಂ ಯಃ ಕುರುತೇ ನೃಪಃ ।
ತಸ್ಯ ವಿಸ್ತೀರ್ಯತೇ ರಾಷ್ಟ್ರಂ ಜ್ಯೋತ್ಸ್ನಾ ಗ್ರಹಪತೇರಿವ ॥೨೪॥

ಇಂತಹ ಶ್ರೇಷ್ಠ ಪುರುಷರೊಂದಿಗೆ ಸಂಧಿಯನ್ನು ಮಾಡಿಕೊಳ್ಳುವ ರಾಜನ ರಾಷ್ಟ್ರಕ್ಕೆ ವೃದ್ಧಿಯಾಗುತ್ತದೆ. ಚಂದ್ರನ ಪ್ರಭೆಯು ವೃದ್ಧಿಯಾಗುವಂತೆ.

ಶಾಸ್ತ್ರನಿತ್ಯಾ ಜಿತಕ್ರೋಧಾ ಬಲವಂತೋ ರಣಪ್ರಿಯಾಃ ।
ಕ್ಷಾಂತಾಃ ಶೀಲಗುಣೋಪೇತಾಃ ಸಂಧೇಯಾಃ ಪುರುಷೋತ್ತಮಾಃ ॥೨೫॥

ಸರಿಯಾದ ಅನುಶಾಸನವನ್ನು ಮಾಡುವ ಶಾಸ್ತ್ರಗಳಲ್ಲಿ ನಿರಂತರ ಆಸಕ್ತರಾದವರು, ಕ್ರೋಧವನ್ನು ಗೆದ್ದವರು, ಬಲಶಾಲಿಗಳು, ಯುದ್ಧವನ್ನು ಎದುರಿಸುವ ಪ್ರೀತಿ

ಇರುವವರು, ಕ್ಷಮಾವಂತರು, ಶೀಲವಂತರು- ಇವರು ಸಂಧೇಯರು (ಸಂಧಿಗೆ ಅರ್ಹರು).

ಯೇ ಚ ದೋಷಸಮಾಯುಕ್ತಾ ನರಾಃ ಪ್ರೋಕ್ತಾ ಮಯಾನಘ ।
ತೇಷಾಮಪ್ಯಧಮೋ ರಾಜನ್ ಕೃತಘ್ನೋ ಮಿತ್ರಘಾತಕಃ ।
ತ್ಯಕ್ತವ್ಯಃ ಸ ದುರಾಚಾರಃ ಸರ್ವೇಷಾಮಿತಿ ನಿಶ್ಚಯಃ ॥೨೬॥

ಪಾಪರಹಿತ! ನಾನು ದುಷ್ಟಮನುಷ್ಯರ ದೋಷಗಳ ಪಟ್ಟಿಯನ್ನೇ ಕೊಟ್ಟಿದ್ದೆನೆ. ಆ ದೋಷಗಳಲ್ಲಿ ಕೃತಘ್ನತೆ ಮತ್ತು ಮಿತ್ರದ್ರೋಹ ಬಹಳ ಹೀನ ದೋಷಗಳು. ಕೃತಘ್ನ ಮತ್ತು ಮಿತ್ರಘಾತಕನು ಅಧಮ. ಈ ಅಧಮನನ್ನು ಎಲ್ಲರೂ ತ್ಯಜಿಸಲೇಬೇಕು. ಸಂದೇಹವೇ ಇಲ್ಲ.

ಯುಧಿಷ್ಠಿರಃ

ವಿಸ್ತರೇಣಾರ್ಥಸಂಬಂಧಂ ಶ್ರೋತುಮಿಚ್ಛಾಮಿ ಪಾರ್ಥಿವ ।
ಮಿತ್ರದ್ರೋಹೀ ಕೃತಘ್ನಶ್ಚ ಯಃ ಪ್ರೋಕ್ತಸ್ತಂ ಚ ಮೇ ವದ ॥೨೭॥

ರಾಜನೆ! ಧನದಿಂದ ಆಗುವ ಬಂಧನವನ್ನು ವಿಸ್ತಾರವಾಗಿ ತಿಳಿಸಿರಿ. ಮಿತ್ರದ್ರೋಹಿ ಮತ್ತು ಕೃತಘ್ನರ ಬಗ್ಗೆಯೂ ತಿಳಿಸಿರಿ.

ಭೀಷ್ಮಃ

ಹಂತ ತೇ ವರ್ತಯಿಷ್ಯೇಽಹಮಿತಿಹಾಸಂ ಪುರಾತನಮ್ ।
ಉದೀಚ್ಯಾಂ ದಿಶಿ ಯದ್ ವೃತ್ತಂ ಮ್ಲೇಚ್ಛೇಷು ಮನುಜಾಧಿಪ ॥೨೮॥

ಸಂತೋಷ! ರಾಜನೆ! ಉತ್ತರದಿಕ್ಕಿನಲ್ಲಿ ಮ್ಲೇಚ್ಛರ ಪ್ರದೇಶದಲ್ಲಿ ಹಿಂದೆ ನಡೆದ ಘಟನೆಯೊಂದನ್ನು ಹೇಳುವೆ.

ಬ್ರಾಹ್ಮಣೋ ಮಧ್ಯದೇಶೀಯಃ ಕೃಷ್ಣಾಂಗೋ ವಿತ್ತವರ್ಜಿತಃ ।
ಗ್ರಾಮಂ ಪ್ರೇಕ್ಷ್ಯ ಜನಾಕೀರ್ಣಂ ಪ್ರಾವಿಶದ್ ಭೈಕ್ಷಕಾಂಕ್ಷಯಾ ॥೨೯॥

ಮಧ್ಯಪ್ರದೇಶದ ಕೃಷ್ಣಾಂಗ ಎಂಬ ಬ್ರಾಹ್ಮಣ. ಬಡವ. ಬಹಳ ಜನಗಳಿರುವ ಗ್ರಾಮವೊಂದನ್ನು ನೋಡಿ ಅಲ್ಲಿ ಭಿಕ್ಷೆಯನ್ನು ಪಡೆಯುವ ಆಸೆಯಿಂದ ಅಲ್ಲಿಗೆ ಹೋದನು.

ತತ್ರ ದಸ್ಯುರ್ಧನಯುತಃ ಸರ್ವವರ್ಣವಿಶೇಷವಿತ್ ।
ಬ್ರಹ್ಮಣ್ಯಃ ಸತ್ಯಸಂಧಶ್ಚ ದಾನೇ ಚ ನಿರತೋಭವತ್ ॥೩೦॥

ಆ ಗ್ರಾಮದಲ್ಲಿ ಒಬ್ಬ ದಸ್ಯು (ದರೋಡೆಕೋರ) ಇದ್ದನು. ಅವನು ಧನವಂತ. ಎಲ್ಲ ವರ್ಣಗಳ ವ್ಯವಸ್ಥೆಯನ್ನು ಸರಿಯಾಗಿ ತಿಳಿದವನು. ಬ್ರಹ್ಮನಿಷ್ಠರಲ್ಲಿ= ವೇದನಿಷ್ಠರಲ್ಲಿ ಆದರವುಳ್ಳವನು. ಸತ್ಯಸಂಧ. ದಾನಶೀಲ.

ತಸ್ಯ ಕ್ಷಯಮುಪಾಗಮ್ಯ ತತೋ ಭಿಕ್ಷಾಮಯಾಚತ ।
ಪ್ರತಿಶ್ರಯಂ ಚ ವಾಸಾರ್ಥಂ ಭಿಕ್ಷಾ ಚೈವಾಥ ವಾರ್ಷಿಕೀ ॥೩೧॥

ಕೃಷ್ಣಾಂಗನು ಅವನ ಮನೆಗೆ ಹೋಗಿ ಭಿಕ್ಷೆಯನ್ನು ಬೇಡಿದನು. ವಾಸಕ್ಕೆ ಮನೆಯನ್ನು ಬೇಡಿದನು. ವಾರ್ಷಿಕ ಭಿಕ್ಷೆಯನ್ನು (ಒಂದು ವರ್ಷಕ್ಕೆ ಆಗುವಷ್ಟು ಆಹಾರ ಪದಾರ್ಥಗಳ ಭಿಕ್ಷೆಯನ್ನು) ಬೇಡಿದನು.

ಪ್ರಾದಾತ್ ತಸ್ಮೈ ಸ ವಿಪ್ರಾಯ ವಸ್ತ್ರಂ ಚ ಸದೃಶಂ ನವಮ್ ।
ನಾರ್ಯಶ್ಚಾಪಿ ಯಥೋಪೇತಾ ಭರ್ತ್ರಾ ವಿರಹಿತಾಸ್ತದಾ ॥೩೨॥

ಅವನು (ದಸ್ಯುವು) ಅವನಿಗೆ ಎಲ್ಲವನ್ನೂ ಕೊಟ್ಟನು. ಅವನು ಧರಿಸಲು ಯೋಗ್ಯವಾದ ಹೊಸ ವಸ್ತ್ರಗಳನ್ನೂ ಕೊಟ್ಟನು. ಪತಿರಹಿತರಾದ ಶಬರಸ್ತ್ರೀಯರು ಅವನ ಸೇವೆಗಾಗಿ ಸರಿಯಾದ ರೀತಿಯಲ್ಲಿ ಬಂದರು.

(ಪಾಠಾಂತರ : 'ನಾರೀಂ ಚಾಪಿ ವಯೋಪೇತಾಂ ಭರ್ತ್ರಾ ವಿರಹಿತಾಂ ತಥಾ' ಪತಿ ಇಲ್ಲದ ತಾರುಣ್ಯದ ಸ್ತ್ರೀಯನ್ನೂ ಕೊಟ್ಟನು).

ಏತತ್ ಸಂಪ್ರಾಪ್ಯ ಹೃಷ್ಟಾತ್ಮಾ ದಸ್ಯೋಃ ಸರ್ವಂ ದ್ವಿಜಸ್ತದಾ ।
ತಸ್ಮಿನ್ ಗೃಹವರೇ ರಾಜಂಸ್ತಯಾ ರೇಮೇ ಸ ಗೌತಮಃ ॥೩೩॥

ಆ ಗೌತಮ ಗೋತ್ರದ ಬ್ರಾಹ್ಮಣನು ದಸ್ಯುವಿನಿಂದ ಇದೆಲ್ಲವನ್ನೂ ಪಡೆದು ಸಂತುಷ್ಟನಾಗಿ ಆ ಮನೆಯಲ್ಲಿ ಅವಳೊಡನೆ ವಿಹರಿಸಿದನು.

ಕುಟುಂಬಾರ್ಥೇಷು ದಸ್ಯೋಃ ಸ ಸಾಹಾಯ್ಯಂ ಚಾಪ್ಯಥಾಕರೋತ್ ।
ತತ್ರಾವಸತ್ ಸೋಽಥ ವರ್ಷಾಃ ಸಮೃದ್ಧೇ ಶಬರಾಲಯೇ ।
ಬಾಣವೇಧ್ಯೇ ಪರಂ ಯತ್ನಮಕರೋಚ್ಚೈವ ಗೌತಮಃ ॥೩೪॥

ಆ ಬ್ರಾಹ್ಮಣನು ದಸ್ಯುವಿಗೆ ಕುಟುಂಬದ ಕೆಲಸಗಳಲ್ಲಿ ಸಹಾಯವನ್ನು ಮಾಡಿದನು. ಸಮೃದ್ಧವಾದ ಆ ಶಬರವಸತಿಯಲ್ಲಿ ಬಹುವರ್ಷ ವಾಸ ಮಾಡಿದನು. ಬಾಣವನ್ನು ಗುರಿಗೆ ಸರಿಯಾಗಿ ಹೊಡೆಯಲು ಬಹಳ ಅಭ್ಯಾಸ ಮಾಡಿದನು.

ಚಕ್ರಾಂಗಾಂಸ್ತು ಸ ನಿತ್ಯಂ ವೈ ಸರ್ವತೋ ಬಾಣಗೋಚರಾನ್ ।
ಜಘಾನ ಗೌತಮೋ ರಾಜನ್ಯಥಾ ದಸ್ಯುಗಣಸ್ತಥಾ ॥೩೫॥

ರಾಜನೆ! ಆ ಗೌತಮನು ಪ್ರತಿದಿನ ಬಾಣಕ್ಕೆ ನಿಲುಕುತ್ತಿದ್ದ ಚಕ್ರವಾಕಗಳನ್ನು, ದಸ್ಯುಗಳು ಕೊಲ್ಲುವಂತೆ, ಕೊಲ್ಲುತ್ತಿದ್ದನು.

ಹಿಂಸಾಪರೋ ಘೃಣಾಹೀನಃ ಸದಾ ಪ್ರಾಣಿವಧೇ ರತಃ ।
ಗೌತಮಃ ಸನ್ನಿಕರ್ಷೇಣ ದಸ್ಯುಭಿಃ ಸಮತಾಮಿಯಾತ್ ॥೩೬॥

ಗೌತಮನು ದಸ್ಯುಗಳ ಸಾಮೀಪ್ಯದಿಂದ ಹಿಂಸಾಸಕ್ತನೂ, ದಯಾರಹಿತನೂ ಸದಾ ಪ್ರಾಣಿವಧೆಯಲ್ಲಿ ನಿರತನೂ ಆಗಿ ದಸ್ಯುಗಳಂತೆಯೇ ಆದನು.

ತಥಾ ತು ವಸತಸ್ತಸ್ಯ ದಸ್ಯುಗ್ರಾಮೇ ಸುಖಂ ತದಾ ।
ಅಗಚ್ಛನ್ ಬಹವೋ ಮಾಸಾ ನಿಘ್ನತಃ ಪಕ್ಷಿಣೋ ಬಹೂನ್ ॥೩೭॥

ದಸ್ಯುವಿನ ಗ್ರಾಮದಲ್ಲಿ ಹೀಗೆ ಸುಖವಾಗಿ ಮಾಡುತ್ತಾ, ಬಹಳ ಪಕ್ಷಿಗಳನ್ನು ಕೊಲ್ಲುತ್ತಾ ಅವನ ಬಹುಮಾಸಗಳು ಕಳೆದವು.

ತತಃ ಕದಾಚಿದಪರೋ ದ್ವಿಜಸ್ತಂ ದೇಶಮಾಗಮತ್ ।
ಜಟೀ ಚೀರಾಜಿನಧರಃ ಸ್ವಾಧ್ಯಾಯಪರಮಃ ಶುಚಿಃ ॥೩೮॥

ಒಮ್ಮೆ ಜಟಾಧಾರಿಯಾದ, ನಾರುವಸ್ತ್ರ ಮತ್ತು ಅಜಿನಗಳನ್ನು ಧರಿಸಿದ್ದ ವೇದಾಧ್ಯಯನ ನಿಷ್ಠನಾದ, ಶುಚಿಯಾದ ಮತ್ತೊಬ್ಬ ಬ್ರಾಹ್ಮಣನು ಆ ಊರಿಗೆ ಬಂದನು.

ವಿನೀತೋ ನಿಯತಾಹಾರೋ ಬ್ರಹ್ಮಣ್ಯೋ ವೇದಪಾರಗಃ ।
ಸಬ್ರಹ್ಮಚಾರೀ ತದ್ದೇಶ್ಯಃ ಸಖಾ ತಸ್ಯೈವ ಸುಪ್ರಿಯಮ್ (ಸುಪ್ರಿಯಃ) ॥

ಆ ಬ್ರಾಹ್ಮಣನು ವಿನೀತ. ಆಹಾರನಿಯಮವುಳ್ಳವನು, ಬ್ರಹ್ಮನಿಷ್ಠ. ವೇದಪಾರಂಗತ. ಕೃಷ್ಣಾಂಗನ ಸಹಪಾಠಿ. ಅವನ ಊರಿನವನು. ಅವನ ಪ್ರಿಯಮಿತ್ರ.

ತಂ ದಸ್ಯವೋಽವಸನ್ ಗ್ರಾಮಂ ಪುಮಾಂಸೋ ಗೌತಮೋಽಭವತ್ ।
ಸ ತು ವಿಪ್ರಗೃಹಾನ್ವೇಷೀ ಶೂದ್ರಾನ್ನಪರಿವರ್ಜಕಃ ।
ಗ್ರಾಮೇ ದಸ್ಯುಜನಾಕೀರ್ಣೇ ವ್ಯಚರತ್ ಸರ್ವತೋದಿಶಮ್ ॥೪೦॥

ಆ ಗ್ರಾಮದಲ್ಲಿ ದಸ್ಯುಗಳದ್ದೇ ವಾಸ. ಗೌತಮ ಮಾತ್ರ ಬ್ರಾಹ್ಮಣ. ಹೊಸದಾಗಿ ಬಂದ ಬ್ರಾಹ್ಮಣನು ಬ್ರಾಹ್ಮಣನ ಮನೆಯನ್ನು ಹುಡುಕುತ್ತಿದ್ದನು. ಶೂದ್ರಾನ್ನವನ್ನು ಸ್ವೀಕರಿಸದವನು, ಬರೀ ದಸ್ಯುಗಳಿಂದ ತುಂಬಿದ್ದ ಆ ಊರಿನಲ್ಲಿ ಈ ಬ್ರಾಹ್ಮಣನು ಎಲ್ಲ ಕಡೆ ಓಡಾಡಿದನು.

ತತಃ ಸ ಗೌತಮಗೃಹಂ ಪ್ರವಿವೇಶ ದ್ವಿಜೋತ್ತಮಃ ।
ಗೌತಮಶ್ಚಾಪಿ ಸಂಪ್ರಾಪ್ತಸ್ತಾವನ್ಯೋನ್ಯೇನ ಸಂಗತೌ ॥೪೧॥

ಆ ಬ್ರಾಹ್ಮಣೋತ್ತಮನು ಗೌತಮನ ಮನೆಯನ್ನು ಪ್ರವೇಶಿಸಿದನು. ಆ ಹೊತ್ತಿಗೇ ಗೌತಮನೂ ಬಂದನು. ಅವರಿಬ್ಬರ ಪರಸ್ಪರ ಸಮಾಗಮವಾಯಿತು.

ಚಕ್ರಾಂಗಭಾರಸ್ಕಂಧಂ ತಂ ಧನುಷ್ಪಾಣಿಂ ಕೃತಾಗಸಮ್ ।
ರುಧಿರೇಣಾವಸಿಕ್ತಾಂಗಂ ಗೃಹದ್ವಾರಮುಪಾಗತಮ್ ॥೪೨॥

ಹೆಗಲಿನ ಮೇಲೆ ಚಕ್ರವಾಕಗಳ ಭಾರ, ಕೈಯಲ್ಲಿ ಬಿಲ್ಲು, ರಕ್ತದಿಂದ ತೊಯ್ದ ಶರೀರ. ನಾನಾ ಪಾಪಕಾರ್ಯಗಳನ್ನು ಮಾಡಿದವನು.

ತಂ ದೃಷ್ಟ್ವಾ ಪುರುಷಾದಾಭಮಪಧ್ವಸ್ತಂ ಕ್ಷಯಾಗತಮ್ ।
ಅಭಿಜ್ಞಾಯ ದ್ವಿಜೋ ವ್ರೀಡಾಮಗಮದ್ವಾಕ್ಯಮಾಹ ಚ ॥೪೩॥

ಮನೆಯ ಬಾಗಿಲಿಗೆ ಬಂದ ಅವನನ್ನು ನೋಡಿ, ನರಭಕ್ಷಕನಂತೆ ಇದ್ದ ಸಂಪೂರ್ಣ ಭ್ರಷ್ಟನಾಗಿದ್ದ ಅವನನ್ನು ಗುರುತಿಸಿದ ಬ್ರಾಹ್ಮಣನು ಅವನೊಡನೆ ಮಾತನಾಡಲು ಹಿಂಜರಿದನು. ಅನಂತರ ಹೇಳಿದನು.

ಕಿಮಿದಂ ಕುರುಷೇ ಮೌಢ್ಯಾದ್ ವಿಪ್ರ ಸದ್ಭಿಃ ಕುಲೋದ್ಗತಃ ।
ಮಧ್ಯದೇಶಪರಿಜ್ಞಾತೋ ದಸ್ಯುಭಾವಂ ಗತಃ ಕಥಮ್ ॥೪೪॥

ಬ್ರಾಹ್ಮಣ! ಮೌಢ್ಯಕ್ಕೆ ವಶನಾಗಿ ಇದೇನು ಮಾಡುತ್ತಿರುವೆ! ನೀನು ಸತ್ಕುಲಪ್ರಸೂತ. ಮಧ್ಯ ಪ್ರದೇಶದಲ್ಲಿ ನೀನು ಪ್ರಸಿದ್ಧ ಬ್ರಾಹ್ಮಣ. ಈ ದಸ್ಯು ಸ್ಥಿತಿ ಹೇಗೆ ಉಂಟಾಯಿತು?

ಪೂರ್ವಾನ್ ಸ್ಮರ ದ್ವಿಜಾಗ್ರ್ಯಾಂಸ್ತಾನ್ ಪ್ರಖ್ಯಾತಾನ್ ವೇದಪಾರಗಾನ್ ।
ಯೇಷಾಂ ವಂಶೇಽಭಿಜಾತಸ್ತ್ವಮೀದೃಶಃ ಕುಲಪಾಂಸನಃ ॥೪೫॥

ಯಾರ ವಂಶದಲ್ಲಿ ನೀನು ಹುಟ್ಟಿದೆಯೋ ಆ ನಿನ್ನ ಪೂರ್ವಜರು ಶ್ರೇಷ್ಠ ಬ್ರಾಹ್ಮಣರು. ವೇದಪಾರಂಗತರು. ಪ್ರಖ್ಯಾತರು. ಅವರನ್ನು ಸ್ಮರಿಸು. ಈ ಹಿನ್ನೆಲೆಯ ನೀನು ಹೇಗೆ ಕುಲಕ್ಕೆ ಕಳಂಕ ಹಚ್ಚಿರುವಿ?

ಅವಬುಧ್ಯಾತ್ಮನಾತ್ಮಾನಂ ಸತ್ಯಂ ಶೀಲಂ ಶ್ರುತಂ ದಮಮ್ ।
ಅನುಕ್ರೋಶಂ ಚ ಸಂಸ್ಮೃತ್ಯ ತ್ಯಜ ವಾಸಮಿಮಂ ದ್ವಿಜ ॥೪೬॥

ನೀನು ಆತ್ಮ ಪರೀಕ್ಷಣದಿಂದ ನಿನ್ನನ್ನು ತಿಳಿದುಕೋ. ಸತ್ಯ, ಶೀಲ, ವಿದ್ಯೆ , ದಮ, ದಯೆ- ಈ ಗುಣಗಳನ್ನು ಅನುಸಂಧಾನ ಮಾಡು. ಈ ವಸತಿಯನ್ನು ಬಿಡು.

ಏವಮುಕ್ತಃ ಸ ಸುಹೃದಾ ತದಾ ತೇನ ಹಿತೈಷಿಣಾ ।
ಪ್ರತ್ಯುವಾಚ ತತೋ ರಾಜನ್ ವಿನಿಶ್ಚಿತ್ಯ ತದಾರ್ತವತ್ ॥೪೭॥

ಹಿತೈಷಿಯಾದ ಮಿತ್ರನಿಂದ ಹೀಗೆ ಹೇಳಲ್ಪಟ್ಟ ಆ ಕೃಷ್ಣಾಂಗನು ಬಹಳ ಆರ್ತನಾಗಿ, ಮುಂದೆ ಮಾಡಬೇಕಾದದ್ದನ್ನು ಸರಿಯಾಗಿ ನಿರ್ಧರಿಸಿ ಉತ್ತರವನ್ನು ಹೇಳಿದನು.

ಅಧನೋಽಸ್ಮಿ ದ್ವಿಜಶ್ರೇಷ್ಠ ನ ಚ ವೇದವಿದಪ್ಯಹಮ್ ।
ವೃತ್ಯರ್ಥಮಿಹ ಸಂಪ್ರಾಪ್ತಂ ವಿದ್ಧಿ ಮಾಂ ದ್ವಿಜಸತ್ತಮ ॥೪೮॥

ದ್ವಿಜಶ್ರೇಷ್ಠ! ನನ್ನಲ್ಲಿ ಏನೂ ಹಣವಿಲ್ಲ. ನಾನು ವೇದಾಧ್ಯಯನವನ್ನೂ ಮಾಡಿಲ್ಲ. ದ್ವಿಜಶ್ರೇಷ್ಠ! ನಾನು ಜೀವನೋಪಾಯವನ್ನು ಹುಡುಕುತ್ತಾ ಇಲ್ಲಿಗೆ ಬಂದಿದ್ದೇನೆ.

ಸ ದದರ್ಶ ಹಿ ವಿಪ್ರರ್ಷೇ ಕೃತಾರ್ಥಂ ವೇದ್ಮ್ಯಹಂ ದ್ವಿಜ ।
ಆತ್ಮಾನಂ ಸಹ ಯಾಸ್ಯಾವಃ ಶ್ವೋ ವಸಾದ್ಯೇಹ ಶರ್ವರೀಮ್ ॥೪೯॥

ವಿಪ್ರಋಷಿಯೇ! ಬ್ರಾಹ್ಮಣ! ನೀನು ಏನನ್ನು ಇಲ್ಲಿಗಮನಿಸಿರಿವಿಯೋ, ಅದೆಲ್ಲವೂ ನನಗೆ ಗೊತ್ತಿದೆ. ಈ ರಾತ್ರಿ ಇಲ್ಲೇ ಇರು. ನಾಳೆ ನಾವಿಬ್ಬರೂ ಇಲ್ಲಿಂದ ಹೋಗೋಣ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಚತುಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ನಾಲ್ಕನೆಯ ಅಧ್ಯಾಯವು ಮುಗಿಯಿತು.

ಮೂವತ್ತೈದನೆಯ ಅಧ್ಯಾಯ

ಗ್ರಾಮದಿಂದ ಗೌತಮನ ನಿರ್ಗಮನ. ವರ್ತಕರ ಗುಂಪಿನೊಂದಿಗೆ ಗಮನ. ಆಪಘಾತ. ಏಕಾಕಿಯಾಗಿ ಅಲೆದಾಟ. ಯಾವುದೋ ರಮಣೀಯ ಕಾಡಿಗೆ ಪ್ರವೇಶ. ಅಲ್ಲಿ ನಡೆದ ಅದ್ಭುತ.

ಭೀಷ್ಮಃ

ತಸ್ಯಾಂ ನಿಶಾಯಾಂ ವ್ಯುಷ್ಟಾಯಾಂ ಗತೇ ತಸ್ಮಿನ್ ದ್ವಿಜೋತ್ತಮೇ ।
ನಿಷ್ಕ್ರಮ್ಯ ಗೌತಮೋಽಗಚ್ಛತ್ ಸಮುದ್ರಂ ಪ್ರತಿ ಭಾರತ ॥೧॥

ಭರತಕುಲಸಂಜಾತ! ಆ ರಾತ್ರಿಯು ಕಳೆಯಿತು. ಆ ಬ್ರಾಹ್ಮಣಶ್ರೇಷ್ಠನು ಹೊರಟುಹೋದನು. ಗೌತಮನು ಅಲ್ಲಿಂದ ನಿರ್ಗಮಿಸಿ ಸಮುದ್ರದ ಕಡೆ ಹೋದನು.

ಸಾಮುದ್ರಕಾನ್ ಸ ವಣಿಜಸ್ತತೋಽಪಶ್ಯತ್ ಸ್ಥಿತಾನ್ ಪಥಿ ।
ಸ ತೇನ ಸಾರ್ಥೇನ ಸಹ ಪ್ರಯಯೌ ಸಾಗರಂ ಪ್ರತಿ ॥೨॥

ದಾರಿಯಲ್ಲಿ ಸಮುದ್ರತೀರದಲ್ಲಿ ವ್ಯಾಪಾರ ಮಾಡುವ ವರ್ತಕರನ್ನು ನೋಡಿದನು. ಆ ಗುಂಪಿನೊಂದಿಗೆ ಸಮುದ್ರದ ಕಡೆ ಹೋದನು.

ಸ ತು ಸಾರ್ಥೋ ಮಹಾರಾಜ ಕಸ್ಮಿಂಶ್ಚಿದ್ ಗಿರಿಗಹ್ವರೇ ।
ಮತ್ತೇನ ದ್ವಿರದೇನಾಥ ನಿಹತಃ ಪ್ರಾಯಶೋಭವತ್ ॥೩॥

ಮಹಾರಾಜ! ಆ ಗುಂಪು ಬೆಟ್ಟದ ಗುಹೆಯೊಂದರಲ್ಲಿ ತಂಗಿದ್ದಾಗ ಮದಿಸಿದ ಆನೆಯೊಂದು ಆ ಗುಂಪಿನಲ್ಲಿದ್ದ ಬಹಳ ಜನರನ್ನು ಕೊಂದುಹಾಕಿತು.

ಸ ಕಥಂಚಿದ್ ಭಯಾತ್ ತಸ್ಮಾದ್ ವಿಮುಕ್ತೋ ಬ್ರಾಹ್ಮಣಸ್ತದಾ ।
ಕಾದಿಗ್ಭ್ರಾಂತೋ ಜೀವಿತಾರ್ಥೀ ಪ್ರದುದ್ರಾವೋತ್ತರಾಂ ದಿಶಮ್ ॥೪॥

ಆಗ ಆ ಬ್ರಾಹ್ಮಣನು, ಹೇಗೋ ಆ ಭಯದಿಂದ ಬಿಡುಗಡೆಯನ್ನು ಹೊಂದಿ, ದಿಗ್ಭ್ರಾಂತನಾಗಿ, ಪ್ರಾಣ ಉಳಿದರೆ ಸಾಕು ಎಂಬ ಸ್ಥಿತಿಯಲ್ಲಿ ಉತ್ತರ ದಿಕ್ಕಿನ ಕಡೆಗೆ ಓಡಿದನು.

ಸ ಸರ್ವತಃ ಪರಿಭ್ರಷ್ಟಃ ಸಾರ್ಥಾದ್ದೇಶಾತ್ತಥಾರ್ಥತಃ ।
ಏಕಾಕೀ ವ್ಯದ್ರವತ್ ತತ್ರ ವನೇ ಕಿಂಪುರುಷೋ ಯಥಾ ॥೫॥

ಅವನು ಆ ಗುಂಪಿನಿಂದ ಮತ್ತು ಆ ಸ್ಥಳದಿಂದ ತಪ್ಪಿಸಿಕೊಂಡು, ಹಣವೂ ಇಲ್ಲದೆ. ಏಕಾಕಿಯಾಗಿ ಆ ವನದಲ್ಲಿ, ಕಿಂಪುರುಷನು ಅಲೆಯುವಂತೆ ಅಲೆದನು.

ಸ ಪಂಥಾನಮಥಾಸಾದ್ಯ ಸಮುದ್ರಾಭಿಸರಂ ತದಾ ।
ಆಸಸಾದ ವನಂ ರಮ್ಯಂ ಮಹತ್ ಪುಷ್ಪಿತಪಾದಪಮ್ ॥೬॥

ಅಲೆಯುತ್ತಾ ಸಮುದ್ರದ ಕಡೆಗೆ ಹೋಗುವ ದಾರಿಯನ್ನು ತಲುಪಿದನು. ಆ ದಾರಿಯಲ್ಲಿ ಹೋಗುತ್ತಾ ಹೂಬಿಟ್ಟ ಮರಗಳಿರುವ, ರಮಣೀಯವಾದ ದೊಡ್ಡ ಕಾಡನ್ನು ತಲುಪಿದನು.

ಸರ್ವರ್ತುಕೈರಾಮ್ರವನೈಃ ಪುಷ್ಪಿತೈರುಪಶೋಭಿತಮ್ ।
ನಂದನೋದ್ದೇಶಸದೃಶಂ ಯಕ್ಷಕಿನ್ನರಸೇವಿತಮ್ ॥೭॥

ಎಲ್ಲ ಋತುಗಳಲ್ಲು ಫಲಕೊಡುವ, ಹೂಬಿಟ್ಟ ಮಾವಿನ ಅರಣ್ಯದಿಂದ ಆ ವನವು ಶೋಭಿಸುತ್ತಿತ್ತು. ಅಲ್ಲಿ ಯಕ್ಷರೂ, ಕಿನ್ನರರೂ ಇದ್ದರು. ಆ ವನವು ನಂದನವನದಂತೆ ಇತ್ತು.

ಶಾಲತಾಲಧವಾಶ್ವತ್ಥಚಿಂಚಾಗರುವನೈಸ್ತಥಾ ।
ಚಂದನಸ್ಯ ಚ ಮುಖ್ಯಸ್ಯ ಪಾದಪೈರುಪಶೋಭಿತಮ್ ॥೮॥

ಶಾಲ-ತಾಲ-ಧವ-ಅಶ್ವತ್ಥ-ಹುಣಸೆ, ಅಗರುಗಳ ವನಗಳು ಆ ವನದಲ್ಲಿದ್ದವು. ಬಹಳ ಚಂದನ ವೃಕ್ಷಗಳಿಂದ ಅರಣ್ಯವು ಶೋಭಿಸುತ್ತಿತ್ತು.

ಗಿರಿಪ್ರಸ್ಥೇಷು ರಮ್ಯೇಷು ಶುಭೇಷು ಸುಸುಗಂಧಿಷು ।
ಸಮಂತತೋ ದ್ವಿಜಶ್ರೇಷ್ಠಾ ವಲ್ಗು ಕೂಜಂತಿ ತತ್ರ ವೈ ॥೯॥

ಬಹಳ ಸುಗಂಧ ಮಯವಾದ, ಶುಭವಾದ, ರಮ್ಯವಾದ ಗಿರಿಪ್ರಸ್ಥಗಳಲ್ಲಿ ಸುತ್ತಲೂ ಶ್ರೇಷ್ಠ ಹಕ್ಕಿಗಳು ರಮಣೀಯವಾಗಿ ಕೂಗುತ್ತಿದ್ದವು.

ಮನುಷ್ಯವದನಾಸ್ತ್ವನ್ಯೇ ಭಾರುಂಡಾ ಇತಿ ವಿಶ್ರುತಾಃ ।
ಭೂಲಿಂಗಶಕುನಾಶ್ಚಾನ್ಯೇ ಸಾಮುದ್ರಾಃ ಸರ್ವತೋಭವನ್ ॥೧೦॥

ಮನುಷ್ಯ ಮುಖವಿದ್ದ 'ಭಾರುಂಡ' ಎಂದು ಪ್ರಸಿದ್ಧವಾಗ ಹಕ್ಕಿಗಳು, 'ಭೂಲಿಂಗ' ಎಂಬ ಹಕ್ಕಿಗಳೂ, 'ಸಾಮುದ್ರ' ಎಂಬ ಹಕ್ಕಿಗಳು ಎಲ್ಲ ಕಡೆ ಇದ್ದವು.

ಸ ತಾನ್ಯತಿಮನೋಜ್ಞಾನಿ ವಿಹಂಗಾಭಿರುತಾನಿ ವೈ ।
ಶೃಣ್ವನ್ ಸುರಮಣೀಯಾನಿ ವಿಪ್ರೋಽಗಚ್ಛತ ಗೌತಮಃ ॥೧೧॥

ವಿಪ್ರ ಗೌತಮನು ಬಹಳ ಮನೋಜ್ಞವಾದ, ಬಹಳ ರಮಣೀಯವಾದ ಆ ಹಕ್ಕಿಗಳ ಧ್ವನಿಯನ್ನು ಕೇಳುತ್ತಾ ಸಾಗಿದನು.

ತತೋಽಪಶ್ಯತ್ ಸುರಮ್ಯೇ ಸ ಸುವರ್ಣಸಿಕತಾಚಿತೇ ।
ದೇಶಭಾಗೇ ಸಮೇ ಚಿತ್ರೇ ಸ್ವರ್ಗೋದ್ದೇಶಸಮಪ್ರಭೇ ॥೧೨॥

ಶ್ರಿಯಾ ಜುಷ್ಟಂ ಮಹಾವೃಕ್ಷಂ ನ್ಯಗ್ರೋಧಂ ಪರಿಮಂಡಲಮ್ ।
ಶಾಖಾಭಿರನುರೂಪಾಭಿರ್ಭೂಷಿತಂ ಛತ್ರಸನ್ನಿಭಮ್ ॥೧೩॥

ಆಗ ಬಹಳ ರಮಣೀಯವಾದ, ಬಂಗಾರದ ಕಣಗಳು ಹರಡಿರುವ ಸಮತಟ್ಟಾದ, ಸುಂದರವಾದ ಸ್ವರ್ಗದ ಪ್ರದೇಶದ ಕಾಂತಿಯಂತಹ ಕಾಂತಿಯನ್ನು ಹೊಂದಿದ್ದ ಒಂದು ಸ್ಥಳದಲ್ಲಿ ಬಹಳ ರಮಣೀಯವಾಗಿದ್ದ, ದೊಡ್ಡ ಸುತ್ತಳತೆಯಿದ್ದ ನ್ಯಗ್ರೋಧ (ಆಲದ) ಮರವನ್ನು ನೋಡಿದನು.

ತಸ್ಯ ಮೂಲಂ ಸುಸಂಸಿಕ್ತಂ ವರಚಂದನವಾರಿಣಾ ।
ದಿವ್ಯಪುಷ್ಪಾನ್ವಿತಂ ಶ್ರೀಮತ್ಪಿತಾಮಹಸದೋಪಮಮ್ ॥೧೪॥

ಆ ಮರದ ಮೂಲವು ಒಳ್ಳೆಯ ಗಂಧದ ನೀರಿನಿಂದ ಎರೆಯಲ್ಪಟ್ಟಿತ್ತು. ದಿವ್ಯ ಪುಷ್ಪಗಳು ಆ ಮರದಲ್ಲಿದ್ದವು. ಆ ಪ್ರದೇಶವು ಚತುರ್ಮುಖ ಬ್ರಹ್ಮದೇವರ ಸದನದಂತಿತ್ತು.

ತಂ ದೃಷ್ಟ್ವಾ ಗೌತಮಃ ಪ್ರೀತೋ ಮುನಿಕಾಂತಮನುತ್ತಮಮ್ ।
ಮಧ್ಯೇಪುರಗೃಹಪ್ರಖ್ಯಂ ಪುಷ್ಪಿತೈಃ ಪಾದಪೈರ್ವೃತಮ್ ।
ತಮಾಗಮ್ಯ ಮುದಾ ಯುಕ್ತಸ್ತಸ್ಯಾಧಸ್ತಾದುಪಾವಿಶತ್ ॥೧೫॥

ಗೌತಮನು ಮುನಿಗಳಿಗೆ ಪ್ರಿಯವಾದ, ಉತ್ತಮವಾದ, ಊರಿನ ಮಧ್ಯ ಇರುವ ಮನೆಯಂತಿದ್ದ, ಸುತ್ತಲೂ ಹೂಬಿಟ್ಟ ಮರಗಳಿದ್ದ ಆ ಮರವನ್ನು ನೋಡಿ ಪ್ರೀತನಾದನು. ಆ ಮರದ ಬಳಿ ಬಂದು ಸಂತೋಷದಿಂದ ಅದರ ಕೆಳಗೆ ಕುಳಿತನು.

ತತ್ರಾಸೀನಸ್ಯ ಕೌರವ್ಯ ಗೌತಮಸ್ಯ ಸುಖಃ ಶಿವಃ ।
ಪುಷ್ಪಾಣಿ ಸಮುಪಸ್ಪೃಶ್ಯ ಪ್ರವವಾವನಿಲಃ ಶುಚಿಃ ।
ಹ್ಲಾದಯನ್ ಸರ್ವಗಾತ್ರಾಣಿ ಗೌತಮಸ್ಯ ತದಾ ನೃಪ ॥೧೬॥

ಕೌರವ್ಯ ! ಅಲ್ಲಿ ಪುಷ್ಪಗಳನ್ನು ಮುಟ್ಟಿ ಬೀಸುತ್ತಿದ್ದ ಗಾಳಿಯು ಶುಚಿಯೂ, ಸುಖಕರವೂ, ಮಂಗಳಕರವೂ ಆಗಿತ್ತು. ಈ ಗಾಳಿಯು ಆಗ ಅಲ್ಲಿ ಕುಳಿತಿದ್ದ ಗೌತಮನ ಇಡೀ ದೇಹಕ್ಕೆ ಆಹ್ಲಾದವನ್ನುಂಟು ಮಾಡಿತು.

ಸ ತು ವಿಪ್ರಃ ಪರಿಶ್ರಾಂತಃ ಸ್ಪೃಷ್ಟಃ ಪುಣ್ಯೇನ ವಾಯುನಾ ।
ಸುಖಮಾಸಾದ್ಯ ಸುಷ್ವಾಪ ಭಾಸ್ಕರಶ್ಚಾಸ್ತಮಭ್ಯಗಾತ್ ॥೧೭॥

ಬಳಲಿದ್ದ ಆ ವಿಪ್ರನು ಪವಿತ್ರವಾದ ಗಾಳಿಯ ಸ್ಪರ್ಶದಿಂದ ಸುಖವನ್ನು ಹೊಂದಿ ನಿದ್ರಿಸಿದನು. ಸೂರ್ಯನು ಅಸ್ತನಾದನು.

ತತೋಽಸ್ತಂ ಭಾಸ್ಕರೇ ಯಾತೇ ಸಂಧ್ಯಾಕಾಲ ಉಪಸ್ಥಿತೇ ।
ಆಜಗಾಮ ಸ್ವಭವನಂ ಬ್ರಹ್ಮಲೋಕಾತ್ ಖಗೋತ್ತಮಃ ॥೧೮॥

ನಾಡೀಜಂಘ ಇತಿ ಖ್ಯಾತೋ ದಯಿತೋ ಬ್ರಹ್ಮಣಃ ಸಖಾ ।
ಬಕರಾಜೋ ಮಹಾಪ್ರಾಜ್ಞಃ ಕಶ್ಯಪಸ್ಯಾತ್ಮಸಂಭವಃ ॥೧೯॥

ಸೂರ್ಯನು ಅಸ್ತನಾಗಿ ಸಂಧ್ಯಾಕಾಲವು ಉಪಸ್ಥಿತವಾದಾಗ ಬ್ರಹ್ಮಲೋಕದಿಂದ 'ನಾಡೀಜಂಘ' ಎಂದು ಪ್ರಸಿದ್ಧವಾದ ಶ್ರೇಷ್ಠಹಕ್ಕಿಯು ತನ್ನ ಮನೆಗೆ ಬಂದಿತು. ಈ ಹಕ್ಕಿಯು ಬ್ರಹ್ಮದೇವನ ಪ್ರಿಯಮಿತ್ರ. ಶ್ರೇಷ್ಠ ಬಕಪಕ್ಷಿ. ಬಕಗಳ ರಾಜ. ಮಹಾಪ್ರಾಜ್ಞ. ಕಶ್ಯಪರ ಮಗ.

ರಾಜಧರ್ಮೇತಿ ವಿಖ್ಯಾತೋ ಬಭೂವಾಪ್ರತಿಮೋ ಭುವಿ ।
ದೇವಕನ್ಯಾಸುತಃ ಶ್ರೀಮಾನ್ ವಿದ್ವಾನ್ ದೇವಪತಿಪ್ರಭಃ ॥೨೦॥

ಈ ಹಕ್ಕಿ 'ರಾಜಧರ್ಮ' ಎಂದು ಪ್ರಖ್ಯಾತವಾಗಿತ್ತು. ಭೂಮಿಯಲ್ಲಿ ಇದಕ್ಕೆ ಸದೃಶವಾದ ಯಾವ ಚೇತನವೂ ಇರಲಿಲ್ಲ. ದೇವಕನ್ಯೆಯ ಮಗ. ಕಾಂತಿಸಂಪನ್ನ. ಪಂಡಿತ. ಇಂದ್ರನ ತೇಜಸ್ಸಿನಂತಹ ತೇಜಸ್ಸನ್ನು ಹೊಂದಿದವನು.

ಮೃಷ್ಟಹಾಟಕಸಂಛನ್ನೋ ಭೂಷಣೈರರ್ಕಸನ್ನಿಭೈಃ ।
ಭೂಷಿತಃ ಸರ್ವಗಾತ್ರೇಷು ದೇವಗರ್ಭಃ ಶ್ರಿಯಾ ಜ್ವಲನ್ ॥೨೧॥

ಪರಿಶುದ್ಧ ಬಂಗಾರವು ಅವನ ದೇಹವನ್ನು ಮುಚ್ಚಿತ್ತು. ಸೂರ್ಯನಂತೆ ಉಜ್ವಲವಾದ ಆಭರಣಗಳಿಂದ ಅದರ ದೇಹವು ಅಲಂಕೃತವಾಗಿತ್ತು. ದೇವಸಂತತಿಯಾದ ಆ ಹಕ್ಕಿಯು ಕಾಂತಿಯಿಂದ ಬೆಳಗುತ್ತಿತ್ತು.

ತಮಾಗತಂ ದ್ವಿಜಂ ದೃಷ್ಟ್ವಾ ವಿಸ್ಮಿತೋ ಗೌತಮೋऽಭವತ್ ।
ಕ್ಷುತ್ತಿಪಾಸಾಪರೀತಾತ್ಮಾ ಹಿಂಸಾರ್ಥೀ ಚಾಪ್ಯವೈಕ್ಷತ ॥೨೨॥

ಗೌತಮನು ಬಂದ ಆ ಹಕ್ಕಿಯನ್ನು ನೋಡಿ ವಿಸ್ಮಿತನಾದನು. ಹಸಿವು-ಬಾಯಾರಿಕೆಗಳಿಂದ ಪೀಡಿತನಾಗಿದ್ದ ಅವನು ಅದನ್ನು ಕೊಲ್ಲುವ ಇಚ್ಛೆಯಿಂದ ನೋಡಿದನು.

ರಾಜಧರ್ಮಾ

ಸ್ವಾಗತಂ ಭವತೇ ವಿಪ್ರ ದಿಷ್ಟ್ಯಾ ಪ್ರಾಪ್ತೋऽಸಿ ಮೇ ಗೃಹಮ್ ।
ಅಸ್ತಂ ಚ ಸವಿತಾ ಯಾತಃ ಸಂಧ್ಯೇಯಂ ಸಮುಪಸ್ಥಿತಾ ॥೨೩॥

ಮಮ ತ್ವಂ ನಿಲಯಂ ಪ್ರಾಪ್ತಃ ಪ್ರಿಯಾತಿಥಿರನಿಂದಿತಃ ।
ಪೂಜಿತೋ ಯಾಸ್ಯಸಿ ಪ್ರಾತರ್ವಿಧಿದೃಷ್ಟೇನ ಕರ್ಮಣಾ ॥೨೪॥

ವಿಪ್ರ! ನಿನಗೆ ಸ್ವಾಗತ. ನನ್ನ ಭಾಗ್ಯದಿಂದ ನನ್ನ ಮನೆಗೆ ಬಂದಿರುವಿ. ಸೂರ್ಯನು ಅಸ್ತನಾಗಿದ್ದಾನೆ. ಈಗ ಸಂಧ್ಯಾಕಾಲ, ನೀನು ನನ್ನ ಮನೆಗೆ ಬಂದಿರುವ ಪ್ರಿಯ, ಶುದ್ಧ ಅತಿಥಿ. ವಿಧಿಗೆ ಅನುಗುಣವಾದ ಆಚರಣೆಗಳಿಂದ ನಾನು ನಿನ್ನನ್ನು ಸತ್ಕರಿಸುವೆ. ಬೆಳಗಾದ ನಂತರ ನೀವು ಹೋಗಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಪಂಚತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯವು ಮುಗಿಯಿತು.

ಮೂವತ್ತಾರನೆಯ ಅಧ್ಯಾಯ

'ರಾಜಧರ್ಮ'ನಿಂದ ಗೌತಮನಿಗೆ ಸತ್ಕಾರ. 'ವಿರೂಪಾಕ್ಷ' ಎಂಬ ರಾಜನ ಬಳಿ ಹೋಗಲು ಸಲಹೆ. ಗೌತಮನ ಗಮನ.

ಭೀಷ್ಮಃ

ಗಿರಂ ತಾಂ ಮಧುರಾಂ ಶ್ರುತ್ವಾ ಗೌತಮೋ ವಿಸ್ಮಿತಸ್ತದಾ ।
ಕೌತೂಹಲಾನ್ವಿತೋ ರಾಜನ್ ರಾಜಧರ್ಮಾಣಮೈಕ್ಷತ ॥೧॥

ರಾಜನೆ! ಆ ಮಧುರವಾದ ಮಾತನ್ನು ಕೇಳಿ ಗೌತಮನು ವಿಸ್ಮಿತನಾದನು. ಕುತೂಹಲದಿಂದ ರಾಜಧರ್ಮನನ್ನು ನೋಡಿದನು.

ರಾಜಧರ್ಮಾ

ಭೋಃ ಕಶ್ಯಪಸ್ಯ ಪುತ್ರೋಽಹಂ ಮಾತಾ ದಾಕ್ಷಾಯಣೀ ಚ ಮೇ ।
ಅತಿಥಿಸ್ತ್ವಂ ಗುಣೋಪೇತಃ ಸ್ವಾಗತಂ ತೇ ದ್ವಿಜರ್ಷಭ ॥೨॥

ದ್ವಿಜಶ್ರೇಷ್ಠ! ನಾನು ಕಶ್ಯಪರ ಮಗ. ನನ್ನ ತಾಯಿ ದಾಕ್ಷಾಯಿಣಿ. ಗುಣಸಂಪನ್ನನಾದ ನೀನು ನನ್ನ ಅತಿಥಿ. ನಿನಗೆ ಸ್ವಾಗತ.

ಭೀಷ್ಮಃ

ತಸ್ಮೈ ದತ್ತ್ವಾ ಸ ಸತ್ಕಾರಂ ವಿಧಿದೃಷ್ಟೇನ ಕರ್ಮಣಾ ।
ಶಾಲಪುಷ್ಪಮಯೀಂ ದಿವ್ಯಾಂ ಬೃಸೀಂ ಸಮುಪಕಲ್ಪಯತ್ ॥೩॥

ಆ ಹಕ್ಕಿಯು ಶಾಸ್ತ್ರೋಕ್ತ ವಿಧಿಯಿಂದ ಆ ಬ್ರಾಹ್ಮಣನಿಗೆ ಸತ್ಕಾರವನ್ನು ಮಾಡಿ ಶಾಲಪುಷ್ಪಗಳ ಆಸನವನ್ನು ಕಲ್ಪಿಸಿತು.

ಭಗೀರಥರಥಾಕ್ರಾಂತಾನ್ ದೇಶಾನ್ ಗಂಗಾನಿಷೇವಿತಾನ್ ।
ಯೇ ಚರಂತಿ ಮಹಾಮೀನಾಸ್ತಾಂಶ್ಚ ತಸ್ಯಾನ್ವಕಲ್ಪಯತ್ ॥೪॥

ಭಗೀರಥನ ರಥವು ಚಲಿಸಿದ ಮತ್ತು ಗಂಗೆಯು ಹರಿಯುವ ಪ್ರದೇಶಗಳಲ್ಲಿ ಸಂಚರಿಸುವ ಶ್ರೇಷ್ಠ ಮೀನುಗಳನ್ನು ಅವನ ಆಹಾರಕ್ಕಾಗಿ ಏರ್ಪಡಿಸಿತು.

ವಹ್ನಿಂ ಚಾಪಿ ಸುಸಂದೀಪ್ತಂ ಮೀನಾಂಶ್ಚೈವ ಸುಪೀವರಾನ್ ।
ಸ ಗೌತಮಾಯಾತಿಥಯೇ ನ್ಯವೇದಯತ ಕಾಶ್ಯಪಃ ॥೫॥

ಕಶ್ಯಪ ಸುತನು ಅತಿಥಿ ಗೌತಮನಿಗಾಗಿ ಪ್ರಜ್ವಲಿಸುವ ಅಗ್ನಿಯನ್ನು ಏರ್ಪಡಿಸಿತು. ಪುಷ್ಟವಾದ ಮೀನುಗಳನ್ನು ಅರ್ಪಿಸಿತು.

ಭುಕ್ತವಂತಂ ಚ ತಂ ವಿಪ್ರಂ ಪ್ರೀತಾತ್ಮಾನಂ ಮಹಾಮನಾಃ ।
ಕ್ಲಮಾಪನಯನಾರ್ಥಂ ಸ ಪಕ್ಷಾಭ್ಯಾಮಭ್ಯವೀಜಯತ್ ॥೬॥

ಊಟಮಾಡಿ, ಪ್ರಸನ್ನನಾದ ಆ ಬ್ರಾಹ್ಮಣನ ಶ್ರಮ ಪರಿಹಾರಕ್ಕಾಗಿ ಉದಾರ ಮನಸ್ಸಿನ 'ರಾಜಧರ್ಮ'ನು ರೆಕ್ಕೆಗಳಿಂದ ಬೀಸಿದನು.

ತತೋ ವಿಶ್ರಾಂತಮಾಸೀನಂ ಗೋತ್ರಪ್ರಶ್ನಮಪೃಚ್ಛತ ।
ಸೋಽಬ್ರವೀದ್ ಗೌತಮೋಽಸ್ಮೀತಿ ಬ್ರಾಹ್ಮ ನಾನ್ಯದುದಾಹರತ್ ॥೭॥

ಅನಂತರ ಆಯಾಸವನ್ನು ಪರಿಹರಿಸಿಕೊಂಡು ಕುಳಿತಿದ್ದ ಬ್ರಾಹ್ಮಣನನ್ನು 'ನಿಮ್ಮ ಗೋತ್ರ ಯಾವುದು?' ಎಂದು ಕೇಳಿದನು. 'ನಾನು ಗೌತಮ' ಎಂದು ಹೇಳಿದನು. ತನ್ನ ಬ್ರಾಹ್ಮಣ ಕರ್ಮ ಮತ್ತು ವೇದಾಧ್ಯಯನಗಳ ಬಗ್ಗೆ ಬೇರೆ ಏನನ್ನೂ ಹೇಳಲಿಲ್ಲ.

ತಸ್ಮೈ ಪರ್ಣಮಯಂ ದಿವ್ಯಂ ದಿವ್ಯಪುಷ್ಪಾಧಿವಾಸಿತಮ್ ।
ಗಂಧಾಢ್ಯಂ ಶಯನಂ ಪ್ರಾದಾತ್ ಸ ಶಿಶ್ಯೇ ತತ್ರ ವೈ ಸುಖಮ್ ॥೮॥

ಹಕ್ಕಿಯು ಅವನಿಗೆ ಎಲೆಗಳಿಂದ ರಚಿಸಲ್ಪಟ್ಟ, ದಿವ್ಯ ಪುಷ್ಪಗಳಿಂದ ರಮಣೀಯವಾಗಿಸಲ್ಪಟ್ಟ, ಸುಗಂಧಯುಕ್ತವಾದ ದಿವ್ಯವಾದ ಹಾಸಿಗೆಯನ್ನು ಕಲ್ಪಿಸಿದನು. ಗೌತಮನು ಅಲ್ಲಿ ಸುಖವಾಗಿ ಮಲಗಿದನು.

ಅಥೋಪವಿಷ್ಟಂ ಶಯನೇ ಗೌತಮಂ ಬಕರಾಟ್ ತದಾ ।
ಪಪ್ರಚ್ಛ ಕಾಶ್ಯಪೋ ವಾಗ್ಮೀ ಕಿಮಾಗಮನಕಾರಣಮ್ ॥೯॥

ಅನಂತರ ಹಾಸಿಗೆಯ ಮೇಲೆ ಕುಳಿತಿದ್ದ ಗೌತಮನನ್ನು ಕಶ್ಯಪಸುತನಾದ ವಾಗ್ಮಿ ಬಕರಾಜನು 'ಇಲ್ಲಿಗೆ ಬರಲು ಏನು ಕಾರಣ?' ಎಂದು ಕೇಳಿದನು.

ತತೋಽಬ್ರವೀದ್ಗೌತಮಸ್ತಂ ದರಿದ್ರೋಽಹಂ ಮಹಾಮತೇ ।
ಸಮುದ್ರಗಮನಾಕಾಂಕ್ಷೀ ದ್ರವ್ಯಾರ್ಥಮಿತಿ ಭಾರತ ॥೧೦॥

ಭಾರತ! ಗೌತಮನು 'ಮಹಾಮತಿಯೇ! ನಾನು ಬಡವ. ಧನಕ್ಕಾಗಿ ಸಮುದ್ರಕ್ಕೆ ಹೋಗಲು ಬಯಸಿದ್ದೇನೆ' ಎಂದು ಹೇಳಿದನು.

ತಂ ಕಾಶ್ಯಪೋಽಬ್ರವೀತ್ ಪ್ರೀತೋ ನೋತ್ಕಂಠಾಂ ಕರ್ತುಮರ್ಹಸಿ ।
ಕೃತಕಾರ್ಯೋ ದ್ವಿಜಶ್ರೇಷ್ಠ ಸದೃಶೋ ಯಾಸ್ಯಸೇ ಗೃಹಾನ್ (ಸುಖಾನ್)॥

ಕಶ್ಯಪ ಸುತನಾದ ಆ ಹಕ್ಕಿಯು ಪ್ರೀತನಾಗಿ ಹೇಳಿದನು. ಕಳವಳ ಪಡಬೇಡ. ದ್ವಿಜಶ್ರೇಷ್ಠ! ನಿನ್ನ ಕೆಲಸವು ಆಗುತ್ತದೆ. ಧನವಂತರಿಗೆ ಸದೃಶನಾಗಿ ನೀನು ಮನೆಗೆ ಹೋಗುವಿ (ಆದರ-ಸಮ್ಮಾನಗಳಿರುವ ಮನೆಗೆ ಹೋಗುವಿ).

ಚತುರ್ವಿಧಾ ಹ್ಯರ್ಥಗತಿರ್ಬೃಹಸ್ಪತಿಮತಂ ಯಥಾ ।
ಪಾರಂಪರ್ಯಂ ತಥಾ ದೈವಂ ಕರ್ಮ ಮಿತ್ರಮಿತಿ ಪ್ರಭೋ ॥೧೨॥

ಪ್ರಭುವೇ! ಅರ್ಥಪ್ರಾಪ್ತಿಯು ನಾಲ್ಕು ರೀತಿ ಎಂದು ಬೃಹಸ್ಪತ್ಯಾಚಾರ್ಯರ ಅಭಿಪ್ರಾಯ. (೧) ಪರಂಪರೆಯಿಂದ ಬಂದ ಧನಸಂಪತ್ತು, (೨) ದೈವ ಬಲದಿಂದ ಬಂದ ಸಂಪತ್ತು, (೩) ಶ್ರಮಪೂರ್ವಕವಾದ ಕ್ರಿಯಾಶೀಲತೆಯಿಂದ ಬಂದ ಸಂಪತ್ತು, (೪) ಮಿತ್ರನಿಂದ ಬಂದ ಸಂಪತ್ತು.

ಪ್ರಾದುರ್ಭೂತೋಽಸ್ಮಿ ತೇ ಮಿತ್ರಂ ಸುಹೃತ್ತ್ವಂ ಚ ಮಮ ತ್ವಯಿ ।
ಸೋಽಹಂ ತಥಾ ಯತಿಷ್ಯಾಮಿ ಭವಿಷ್ಯಸಿ ಯಥಾರ್ಥವಾನ್ ॥೧೩॥

ನಾನು ನಿನ್ನ ಮಿತ್ರನಾಗಿ ನಿನ್ನ ಎದುರು ಕಾಣಿಸಿಕೊಂದಿದ್ದೇನೆ. ನನಗೆ ನಿನ್ನ ಮೇಲೆ ಸೌಹಾರ್ದವಿದೆ. ನೀನು ಧನವಂತನಾಗುವಂತೆ ನಾನು ಪ್ರಯತ್ನಿಸುತ್ತೆನೆ.

ತತಃ ಪ್ರಭಾತಸಮಯೇ ಸುಖಂ ಪೃಷ್ಟ್ವಾಬ್ರವೀದಿದಮ್ ।
ಗಚ್ಛ ಸೌಮ್ಯ ಪಥಾನೇನ ಕೃತಕೃತ್ಯೋ ಭವಿಷ್ಯಸಿ ॥೧೪॥

ಅನಂತರ ಪ್ರಾತಃಕಾಲದಲ್ಲಿ ಸುಖನಿದ್ರೆಯನ್ನು ವಿಚಾರಿಸಿ ಹೀಗೆ ಹೇಳಿದನು. ಸೌಮ್ಯ! ಈ ಮಾರ್ಗದಿಂದ ಹೋಗು. ನಿನ್ನ ಕೆಲಸವಾಗುತ್ತದೆ.

ಇತಸ್ತ್ರಿಯೋಜನಂ ಗತ್ವಾ ರಾಕ್ಷಸಾಧಿಪತಿರ್ಮಹಾನ್ ।
ವಿರೂಪಾಕ್ಷ ಇತಿ ಖ್ಯಾತಃ ಸಖಾ ಮಮ ಮಹಾಬಲಃ ॥೧೫॥

ಇಲ್ಲಿಂದ ಮೂರು ಯೋಜನ ದೂರದಲ್ಲಿ ವಿರೂಪಾಕ್ಷ ಎಂದು ಪ್ರಸಿದ್ಧನಾದ ರಾಕ್ಷಸಾಧಿಪತಿಯು ಇದ್ದಾನೆ. ಅವನು ನನ್ನ ಗೆಳೆಯ. ಮಹಾಬಲಶಾಲಿ.

ತಂ ಗಚ್ಛ ದ್ವಿಜಮುಖ್ಯ ತ್ವಂ ಮಮ ವಾಕ್ಯಪ್ರಚೋದಿತಃ ।
ಕಾಮಾನಭೀಪ್ಸಿತಾಂಸ್ತುಭ್ಯಂ ದಾತಾ ನಾಸ್ಯತ್ರ ಸಂಶಯಃ ॥೧೬॥

ದ್ವಿಜಶ್ರೇಷ್ಠ! ನೀನು ಅವನ ಬಳಿ ಹೋಗು. ನಾನು ಕಳಿಸಿದೆ ಎಂದು ಹೇಳು, ನನ್ನ ಮಾತಿನಿಂದ ಪ್ರಚೋದನೆಯನ್ನು ಪಡೆದು ಅವನು ನಿನಗೆ ಇಷ್ಟವಾದ ಎಲ್ಲವನ್ನೂ ಕೊಡುತ್ತಾನೆ. ಸಂಶಯವೇ ಇಲ್ಲ.

ಇತ್ಯುಕ್ತಃ ಪ್ರಯಯೌ ರಾಜನ್ ಗೌತಮೋ ವಿಗತಕ್ಲಮಃ ।
ಫಲಾನ್ಯಮೃತಕಲ್ಪಾನಿ ಭಕ್ಷಯನ್ ಸ್ಮ ಯಥೇಷ್ಟತಃ ॥೧೭॥

ರಾಜನೇ! ಹೀಗೆ ಹೇಳಲ್ಪಟ್ಟ ಆಯಾಸ ಪರಿಹಾರವಾಗಿರುವ ಗೌತಮನು ಅಲ್ಲಿಂದ ಹೊರಟನು. ದಾರಿಯಲ್ಲಿ ವನಪ್ರದೇಶದಲ್ಲಿ ಅಮೃತಸದೃಶವಾದ ಫಲಗಳನ್ನು ಯಥೇಷ್ಟವಾಗಿ ತಿನ್ನುತ್ತಾ ಸಾಗಿದನು.

ಚಂದನಾಗುರುಮುಖ್ಯಾನಿ ತಕ್ಷತ್ರಾಣಾಂ ವನಾನಿ ಚ ।
ತಸ್ಮಿನ್ ಪಥಿ ಮಹಾರಾಜ ಸೇವಮಾನೋ ದ್ರುತಂ ಯಯೌ ॥೧೮॥

ಮಹಾರಾಜ! ದಾರಿಯಲ್ಲಿ ಚಂದನ-ಅಗರುಗಳು ದಟ್ಟವಾಗಿರುವ ವನವನ್ನು ಮತ್ತು ಲವಂಗದ ವನವನ್ನು ಆಸ್ವಾದಿಸುತ್ತಾ ವೇಗದಿಂದ ಸಾಗಿದನು.

ತತೋ ಮೇರುವ್ರಜಂ ನಾಮ ನಗರಂ ಶೈಲತೋರಣಮ್ ।
ಶೈಲಪ್ರಾಕಾರವಪ್ರಂ ಚ ಶೈಲಯಂತ್ರಾರ್ಗಲಂ ತಥಾ ॥೧೯॥

ಮೇರು ವ್ರಜ ಎಂಬ ನಗರವನ್ನು ತಲುಪಿದನು. ಬೆಟ್ಟಗಳು ಆ ನಗರದ ತೋರಣವಾಗಿದ್ದವು. ಬೆಟ್ಟಗಳು ಸುತ್ತು ಗೋಡೆ (ಬೇಲಿ)ಗಳಾಗಿದ್ದವು. ಕಲ್ಲಿನ ಯಂತ್ರಗಳು, ಅಗಳಿಗಳು ಆ ನಗರದಲ್ಲಿದ್ದವು.

ವಿದಿತಶ್ಚಾಭವತ್ತಸ್ಯ ರಾಕ್ಷಸೇಂದ್ರಸ್ಯ ಧೀಮತಃ ।
ಪ್ರಹಿತಃ ಸುಹೃದಾ ರಾಜನ್ ಪ್ರೀಯತಾ ವೈ ಪ್ರಿಯಾತಿಥಿಃ ॥೨೦॥

ರಾಜನೆ! ಧೀಮಂತನಾದ ರಾಕ್ಷಸೇಂದ್ರನಿಗೆ 'ಈ ಬ್ರಾಹ್ಮಣನು ಪ್ರಿಯಮಿತ್ರನಿಂದ ಕಳಿಸಲ್ಪಟ್ಟ ಪ್ರಿಯ ಅತಿಥಿ' ಎಂದು ತಿಳಿಯಿತು.

ತತಃ ಸ ರಾಕ್ಷಸೇಂದ್ರಃ ಸ್ವಾನ್ ಪ್ರೇಷ್ಯಾನಾಹ ಯುಧಿಷ್ಠಿರ ।
ಗೌತಮೋ ನಗರದ್ವಾರಾಚ್ಚೀಘ್ರಮಾನೀಯತಾಮಿತಿ ॥೨೧॥

ಯುಧಿಷ್ಠಿರ! ಅನಂತರ ಆ ರಾಕ್ಷಸೇಂದ್ರನು ತನ್ನ ಸೇವಕರಿಗೆ 'ನಗರದ್ವಾರದಿಂದ ಗೌತಮನನ್ನು ಶೀಘ್ರ ಕರೆತನ್ನಿರಿ' ಎಂದು ಹೇಳಿದನು.

ತತಃ ಪುರವರಾತ್ತಸ್ಮಾತ್ ಪುರುಷಾಃ ಶ್ವೇತವೇಷ್ಟನಾಃ ।
ಗೌತಮೇತ್ಯಭಿಭಾಷಂತಃ ಪುರದ್ವಾರಮುಪಾಗಮನ್ ॥೨೨॥

ಅನಂತರ ಬಿಳಿ ಪೇಟಗಳನ್ನು ಧರಿಸಿದ್ದ ರಾಜಸೇವಕರು 'ಗೌತಮ' ಎಂದು ಹೇಳುತ್ತಾ ನಗರದ್ವಾರಕ್ಕೆ ಬಂದರು.

ತೇ ತಮೂಚುರ್ಮಹಾರಾಜ ಪ್ರೇಷ್ಯಾ ರಕ್ಷಃಪತೇರ್ದ್ವಿಜಮ್ ।
ತ್ವರಸ್ವ ತೂರ್ಣಮಾಗಚ್ಛ ರಾಜಾ ತ್ವಾಂ ದ್ರಷ್ಟುಮಿಚ್ಛತಿ ॥೨೩॥

ಮಹಾರಾಜ! ರಾಕ್ಷಸರಾಜನ ಆ ಸೇವಕರು ಆ ಬ್ರಾಹ್ಮಣನಿಗೆ ಹೇಳಿದರು. 'ತ್ವರೆ ಮಾಡು, ಬೇಗ ಬಾ, ರಾಜನು ನಿನ್ನನ್ನು ನೋಡಲು ಬಯಸಿದ್ದಾನೆ'.

ರಾಕ್ಷಸಾಧಿಪತಿರ್ವೀರೋ ವಿರೂಪಾಕ್ಷ ಇತಿ ಶ್ರುತಃ ।
ಸ ತ್ವಾಂ ತ್ವರತಿ ವೈ ದ್ರಷ್ಟುಂ ತತ್ ಕ್ಷಿಪ್ರಂ ಸಂವಿಧೀಯತಾಮ್ ॥೨೪॥

ರಾಕ್ಷಸಾಧಿಪತಿಯು ವೀರ. ವಿರೂಪಾಕ್ಷ ಎಂದು ಪ್ರಸಿದ್ಧ. ಅವನು ನಿಮ್ಮನ್ನು ನೋಡಲು ಕಾತರಿಸುತ್ತಿದ್ದಾನೆ. ಆದ್ದರಿಂದ ಬೇಗನೆ ಬನ್ನಿ.

ತತಃ ಸ ಪ್ರಾದ್ರವದ್ ವಿಪ್ರೋ ವಿಸ್ಮಯಾದ್ ವಿಗತಕ್ಲಮಃ ।
ಗೌತಮೋ ನಗರರ್ದ್ಧಿಂ ತಾಂ ಪಶ್ಯನ್ ಪರಮವಿಸ್ಮಿತಃ ॥೨೫॥

ಅನಂತರ ಆ ವಿಪ್ರನಿಗೆ ವಿಸ್ಮಯದಿಂದ ಶ್ರಮವೆಲ್ಲವೂ ಪರಿಹಾರವಾಯಿತು. ಅವನು ವೇಗದಿಂದ ಸಾಗಿದನು. ನಗರದ ಸಮೃದ್ಧಿಯನ್ನು ನೋಡುತ್ತಾ ಗೌತಮನು ಪರಮಾಶ್ಚರ್ಯಕ್ಕೆ ಒಳಗಾದನು.

ತೈರೇವ ಸಹಿತೋ ರಾಜ್ಞೋ ವೇಶ್ಮ ತೂರ್ಣಮುಪಾದ್ರವತ್ ।
ದರ್ಶನಂ ರಾಕ್ಷಸೇಂದ್ರಸ್ಯ ಕಾಂಕ್ಷಮಾಣೋ ದ್ವಿಜಸ್ತದಾ ॥೨೬॥

ವಿಪ್ರನು ರಾಕ್ಷಸೇಂದ್ರನ ದರ್ಶನವನ್ನು ಬಯಸಿ ಆ ಸೇವಕರೊಡನೆ ಬೇಗನೆ ರಾಜನ ಮನೆಗೆ ಧಾವಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಷಟ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯವು ಮುಗಿಯಿತು.

★ ★ ★ ★

ಮೂವತ್ತೇಳನೆಯ ಅಧ್ಯಾಯ

ವಿರೂಪಾಕ್ಷನು ಮಾಡಿದ ಬ್ರಾಹ್ಮಣ ಸತ್ಕಾರ. ಗೌತಮನಿಗೆ ವಿಪುಲ ಧನಕನಕಗಳ ದಾನ, ಅವುಗಳ ಜೊತೆ ಹೊರಟ ಗೌತಮನಿಂದ ಅದೇ ಮರದ ಬಳಿ ಆಗಮನ. ಬಕ ಪಕ್ಷಿಯಿಂದ ಉಪಚಾರ. ಗೌತಮನಿಗೆ ಆ ಹಕ್ಕಿಯನ್ನು ಕೊಲ್ಲುವ ಆಲೋಚನೆ.

ಭೀಷ್ಮಃ

ತತಃ ಸ ವಿದಿತೋ ರಾಜ್ಞಃ ಪ್ರವಿಶ್ಯ ಗೃಹಮುತ್ತಮಮ್ ।
ಪೂಜಿತೋ ರಾಕ್ಷಸೇಂದ್ರೇಣ ನಿಷಸಾದಾಸನೋತ್ತಮೇ ॥೧॥

ಆ ವಿಪ್ರನು ಬಂದಿದ್ದಾನೆ ಎಂದು ರಾಜನಿಗೆ ತಿಳಿಯಿತು. ರಾಜನ ಭವ್ಯವಾದ ಮನೆಗೆ ಪ್ರವೇಶಿಸಿದ ಅವನು ರಾಕ್ಷಸೇಂದ್ರನಿಂದ ಸತ್ಕೃತನಾಗಿ ಉತ್ತಮವಾದ ಆಸನದಲ್ಲಿ ಕುಳಿತನು.

ಪೃಷ್ಟಶ್ಚ ಗೋತ್ರಚರಣಂ ಸ್ವಾಧ್ಯಾಯಂ ಬ್ರಹ್ಮಚಾರಿಕಮ್ ।
ನ ತತ್ರ ವ್ಯಾಜಹಾರಾನ್ಯದ್ಗೋತ್ರಮಾತ್ರಾದೃತೇ ದ್ವಿಜಃ ॥೨॥

ರಾಜನು ಅವನ ಗೋತ್ರ, ಶಾಖೆ, ವೇದಾಧ್ಯಯನ, ಅನುಷ್ಠಾನಗಳ ಬಗ್ಗೆ ಕೇಳಿದನು. ವಿಪ್ರನು ಗೋತ್ರವನ್ನು ಮಾತ್ರ ಹೇಳಿದನು. ಬೇರೆ ಏನನ್ನೂ ಹೇಳಲಿಲ್ಲ.

ಬ್ರಹ್ಮವರ್ಚಸಹೀನಸ್ಯ ಸ್ವಾಧ್ಯಾಯವಿರತಸ್ಯ ಚ ।
ಗೋತ್ರಮಾತ್ರವಿದೋ ರಾಜಾ ನಿವಾಸಂ ಸಮಪೃಚ್ಛತ ॥೩॥

ರಾಜನು ಬ್ರಹ್ಮವರ್ಚಸ್ಸಿಲ್ಲದ, ವೇದಾಧ್ಯಯನವನ್ನು ತ್ಯಜಿಸಿರುವ, ಕೇವಲ ಗೋತ್ರವನ್ನು ತಿಳಿದ ಅವನ ವಾಸ ಎಲ್ಲಿ ಎಂದು ಕೇಳಿದನು.

ಕ್ವ ತೇ ನಿವಾಸಃ ಕಲ್ಯಾಣ ಕಿಂಗೋತ್ರಾ ಬ್ರಾಹ್ಮಣೀ ಚ ತೇ ।
ತತ್ತ್ವಂ ಬ್ರೂಹಿ ನ ಭೀಃ ಕಾರ್ಯಾ ವಿಶ್ರಮಸ್ವ ಯಥಾಸುಖಮ್ ॥೪॥

'ಕಲ್ಯಾಣ! ನಿನ್ನ ಮನೆ ಎಲ್ಲಿದೆ? ನಿನ್ನ ಬ್ರಾಹ್ಮಣಿಯ (ಪತ್ನಿಯ) ಗೋತ್ರ ಯಾವುದು? ಸತ್ಯ ಹೇಳು. ಹೆದರಬೇಡ. ಸುಖವಾಗಿ ವಿಶ್ರಮಿಸು'.

ಗೌತಮಃ

ಮಧ್ಯದೇಶಪ್ರಸೂತೋಽಹಂ ವಾಸೋ ಮೇ ಶಬರಾಲಯೇ ।
ಶೂದ್ರೀ ಪುನರ್ಭೂರ್ಭಾರ್ಯಾ ಮೇ ಸತ್ಯಮೇತದ್ ಬ್ರವೀಮಿ ತೇ॥೫॥

ನಾನು ಮಧ್ಯಪ್ರದೇಶದಲ್ಲಿ ಹುಟ್ಟಿದವನು. ಬೇಡರ ಗ್ರಾಮದಲ್ಲಿ ಬೇಡರ ಮನೆಯಲ್ಲಿ ವಾಸ. ಎರಡು ಸಲ ಮದುವೆಯಾದ ಶೂದ್ರಸ್ತ್ರೀ ನನ್ನ ಪತ್ನಿ. ನಾನು ಸತ್ಯವನ್ನು ಹೇಳುತ್ತಿದ್ದೇನೆ.

ಭೀಷ್ಮಃ

ತತೋ ರಾಜಾ ವಿಮಮೃಶೇ ಕಥಂ ಕಾರ್ಯಮಿದಂ ಭವೇತ್ ।
ಕಥಂ ವಾ ಸುಕೃತಂ ಮೇ ಸ್ಯಾದಿತಿ ಬುದ್ಧ್ಯಾನ್ವಚಿಂತಯತ್ ॥೬॥

ಅನಂತರ ರಾಜನು ವಿಮರ್ಶಿಸಿದನು. ಈಗ ಈ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು? ಹೇಗೆ ಮಾಡಿದರೆ ಸರಿ? ಎಂದು ತನ್ನ ಬುದ್ಧಿಬಲದಿಂದ ಆಲೋಚಿಸಿದನು.

ಅಯಂ ವೈ ಜನನಾದ್ ವಿಪ್ರಃ ಸುಹೃತ್ತಸ್ಯ ಮಹಾತ್ಮನಃ ।
ಸಂಪ್ರೇಷಿತಶ್ಚ ತೇನಾಯಂ ಕಾಶ್ಯಪೇನ ಮಮಾಂತಿಕಮ್ ॥೭॥

ಇವನು ಹುಟ್ಟಿನಿಂದ ಬ್ರಾಹ್ಮಣ. ಆ ಮಹಾತ್ಮನ ಮಿತ್ರ. ಆ ಕಶ್ಯಪಸುತನಿಂದ (ರಾಜಧರ್ಮನಿಂದ) ನನ್ನ ಬಳಿ ಕಳುಹಿಸಲ್ಪಟ್ಟಿದ್ದಾನೆ.

ತಸ್ಯ ಪ್ರಿಯಂ ಕರಿಷ್ಯಾಮಿ ಸ ಹಿ ಮಾಮಾಶ್ರಿತಃ ಸದಾ ।
ಭ್ರಾತಾ ಮೇ ಬಾಂಧವಶ್ಚಾಸೌ ಸಖಾ ಚ ಹೃದಯಂಗಮಃ ॥೮॥

ಅವನಿಗೆ ಏನು ಪ್ರಿಯವೋ ಅದನ್ನು ಮಾಡುತ್ತೇನೆ. ಅವನು ಯಾವಾಗಲೂ ನನ್ನನ್ನು ಆಶ್ರಯಿಸಿದ್ದಾನೆ. ಅವನು ನನ್ನ ಸೋದರ. ಬಾಂಧವ. ಅವನು ನನ್ನ ಹೃದಯಂಗಮ ಗೆಳೆಯ.

ಕಾರ್ತಿಕ್ಯಾಮದ್ಯ ಭೋಕ್ತಾರಃ ಸಹಸ್ರಂ ಮೇ ದ್ವಿಜೋತ್ತಮಾಃ ।
ತತ್ರಾಯಮಪಿ ಭೋಕ್ತಾ ವೈ ದೇಯಮಸ್ಮೈ ಚ ಮೇ ಧನಮ್ ॥೯॥

ಈ ದಿನ ಕಾರ್ತಿಕಮಾಸದ ಹುಣ್ಣಿಮೆ. ನನ್ನ ಮನೆಯಲ್ಲಿ ಒಂದು ಸಾವಿರ ಬ್ರಾಹ್ಮಣೋತ್ತಮರು ಊಟ ಮಾಡುತ್ತಾರೆ. ಅವರ ಮಧ್ಯೆ ಇವನೂ ಊಟ ಮಾಡಲಿ. ನಾನು ಇವನಿಗೂ ಧನವನ್ನು ಕೊಡುತ್ತೇನೆ.

ತತಃ ಸಹಸ್ರಂ ವಿಪ್ರಾಣಾಂ ವಿದುಷಾಂ ಸಮಲಂಕೃತಮ್ ।
ಸ್ನಾತಾನಾಮನುಸಂಪ್ರಾಪ್ತಮಹತಕ್ಷೌಮವಾಸಸಾಮ್ ॥೧೦॥

ಅನಂತರ ವಿದ್ವಾಂಸರಾದ, ಸ್ನಾನ-ಅನುಷ್ಠಾನಗಳನ್ನು ಮುಗಿಸಿರುವ, ಚೆನ್ನಾಗಿ ಅಲಂಕೃತರಾದ, ಹೊಸ ರೇಷ್ಮೆ ವಸ್ತ್ರಗಳನ್ನು ಧರಿಸಿದ ಒಂದು ಸಾವಿರ ಬ್ರಾಹ್ಮಣರು ಆಗಮಿಸಿದರು.

ತಾನಾಗತಾನ್ ದ್ವಿಜಶ್ರೇಷ್ಠಾನ್ ವಿರೂಪಾಕ್ಷೋ ವಿಶಾಂಪತೇ ।
ಯಥಾರ್ಹಂ ಪ್ರತಿಜಗ್ರಾಹ ವಿಧಿದೃಷ್ಟೇನ ಕರ್ಮಣಾ ॥೧೧॥

ರಾಜನೆ! ವಿರೂಪಾಕ್ಷನು ಬಂದ ಆ ದ್ವಿಜಶ್ರೇಷ್ಠರನ್ನು ಶಾಸ್ತ್ರೋಕ್ತ ಆಚರಣೆಗಳಿಂದ ಅವರವರ ಅರ್ಹತೆಗೆ ಅನುಗುಣವಾಗಿ ಸ್ವಾಗತಿಸಿದನು.

ನೀವ್ಯಸ್ತೇಷಾಂ ತು ಸನ್ನ್ಯಸ್ತಾ ರಾಕ್ಷಸೇಂದ್ರಸ್ಯ ಶಾಸನಾತ್ ।
ಭೂಮೌ ವರಕುಶಾಸ್ತೀರ್ಣಾಃ ಪ್ರೇಷ್ಯೈರ್ಭರತಸತ್ತಮ ॥೧೨॥

ಭರತಸತ್ತಮ! ರಾಕ್ಷಸೇಂದ್ರನ ಶಾಸನದಂತೆ ಸೇವಕರು ಆ ಬ್ರಾಹ್ಮಣರಿಗೆ ನೀವಿಗಳನ್ನು (ರಾಜವಧುಗಳು ಧರಿಸುವ ಸೂಕ್ಷ್ಮ ವಸ್ತ್ರಗಳನ್ನು) ಕೊಟ್ಟರು. ನೆಲದ ಮೇಲೆ ದರ್ಭಾಸನಗಳನ್ನು ಹಾಸಿದರು.

ತಾಸು ತೇ ಪೂಜಿತಾ ರಾಜ್ಞಾ ನಿಷಣ್ಣಾ ದ್ವಿಜಸತ್ತಮಾಃ ।
ವ್ಯರಾಜಂತ ಮಹಾರಾಜ ನಕ್ಷತ್ರಪತಯೋ ಯಥಾ ॥೧೩॥

ಮಹಾರಾಜ! ರಾಜನಿಂದ ಪೂಜಿಸಲ್ಪಟ್ಟ ಆ ಬ್ರಾಹ್ಮಣಶ್ರೇಷ್ಠರು ಆ ಆಸನಗಳ ಮೇಲೆ ಕುಳಿತು ಚಂದ್ರರಂತೆ ಶೋಭಿಸಿದರು.

ತತೋ ಜಾಂಬೂನದಾಃ ಪಾತ್ರೀರ್ವಜ್ರಾಂಕಾ ವಿಮಲಾಃ ಶುಭಾಃ ।
ವರಾನ್ನಪೂರ್ಣಾ ವಿಪ್ರೇಭ್ಯಃ ಪ್ರಾದಾನ್ಮಧುಘೃತಾಪ್ಲುತಾಃ ॥೧೪॥

ಅನಂತರ ರಾಕ್ಷಸೇಂದ್ರನು ವಿಪ್ರರಿಗೆ ಮಧು-ತುಪ್ಪಗಳಿಂದ ನೆನೆಸಲ್ಪಟ್ಟ ಶ್ರೇಷ್ಠ ಅನ್ನದಿಂದ ಮತ್ತು ಸೂಪದಿಂದ ಪೂರ್ಣವಾಗಿದ್ದ, ವಜ್ರಖಚಿತವಾದ, ವಿಮಲವೂ ಶುಭಕರವೂ ಆದ ಬಂಗಾರದ ಪಾತ್ರೆಗಳನ್ನು ಕೊಟ್ಟನು.

ತಸ್ಯ ನಿತ್ಯಂ ತಥಾಷಾಢ್ಯಾಂ ಮಾಘ್ಯಾಂ ಚ ಬಹವೋ ದ್ವಿಜಾಃ ।
ಈಪ್ಸಿತಂ ಭೋಜನವರಂ ಲಭಂತೇ ಸತ್ಕೃತಂ ಸದಾ ॥೧೫॥

ಆ ರಾಜನಿಂದ ಪ್ರತಿದಿನ ಮತ್ತು ಆಷಾಢ-ಮಾಘಮಾಸಗಳ ಹುಣ್ಣಿಮೆಗಳಲ್ಲಿ ಬಹಳ ಬ್ರಾಹ್ಮಣರು ತಮಗೆ ಇಷ್ಟವಾದ ಭೋಜನವನ್ನು ಮತ್ತು ಸತ್ಕಾರವನ್ನು ಪಡೆಯುತ್ತಿದ್ದರು. ಹೀಗೆ ನಿರಂತರವಾಗಿ ನಡೆಯುತ್ತಿತ್ತು.

ವಿಶೇಷತಸ್ತು ಕಾರ್ತಿಕ್ಯಾಂ ದ್ವಿಜೇಭ್ಯಃ ಸಂಪ್ರಯಚ್ಛತಿ ।
ಶರದ್ವ್ಯಪಾಯೇ ರತ್ನಾನಿ ಪೌರ್ಣಮಾಸ್ಯಾಮಿತಿ ಶ್ರುತಿಃ ॥೧೬॥

ವಿಶೇಷವಾಗಿ ಶರದೃತುವಿನ ಕೊನೆಯಲ್ಲಿ ಕಾರ್ತಿಕಮಾಸದ ಹುಣ್ಣಿಮೆಯ ದಿನ ಬ್ರಾಹ್ಮಣರಿಗೆ ರತ್ನಗಳನ್ನು ಕೊಡುತ್ತಿದ್ದನು ಎಂದು ನಾವು ಕೇಳಿದ್ದೇವೆ.

ಸುವರ್ಣಂ ರಜತಂ ಚೈವ ಮಣೀನಥ ಚ ಮೌಕ್ತಿಕಮ್ ।
ವಜ್ರಾನ್ ಮಹಾಧನಾಂಶ್ಚೈವ ವೈಡೂರ್ಯಾಜಿನರಾಂಕವಾನ್ ॥೧೭॥

ರತ್ನರಾಶೀನ್ ವಿನಿಕ್ಷಿಪ್ಯ ದಕ್ಷಿಣಾರ್ಥೇ ಸ ಭಾರತ ।
ತತಃ ಪ್ರಾಹ ದ್ವಿಜಶ್ರೇಷ್ಠಾನ್ ವಿರೂಪಾಕ್ಷೋ ಮಹಾಯಶಾಃ ॥೧೮॥

ಭರತಕುಲಸಂಜಾತ! ದಕ್ಷಿಣೆಗಾಗಿ ಬಂಗಾರ-ಬೆಳ್ಳಿ-ಮಣಿಗಳು-ಮುತ್ತುಗಳು, ವಜ್ರಗಳು-ವೈಡೂರ್ಯ, ಅಜಿನ-ರಂಕುಮೃಗದ ಚರ್ಮ, ಭಾರಿ ಹಣದ ರಾಶಿ-ರತ್ನ ರಾಶಿ- ಇವುಗಳನ್ನು ಇಟ್ಟು ಮಹಾಕೀರ್ತಿವಂತನಾದ ವಿರೂಪಾಕ್ಷನು ದ್ವಿಜಶ್ರೇಷ್ಠರಿಗೆ ಹೇಳಿದನು.

ಗೃಹ್ಣೀತ ರತ್ನಾನ್ಯೇತಾನಿ ಯಥೋತ್ಸಾಹಂ ಯಥೇಷ್ಟತಃ ।
ಯೇಷು ಯೇಷು ಚ ಭಾಂಡೇಷು ಭುಕ್ತಂ ವೋ ದ್ವಿಜಸತ್ತಮಾಃ ।
ತಾನ್ಯೇವಾದಾಯ ಗಚ್ಛಧ್ವಂ ಸ್ವವೇಶ್ಮಾನೀತಿ ಭಾರತ ॥೧೯॥

ಭರತಕುಲಸಂಜಾತ! 'ಈ ಎಲ್ಲ ಅಮೂಲ್ಯ ವಸ್ತುಗಳನ್ನು ಉತ್ಸಾಹದಿಂದ ಯಥೇಷ್ಟವಾಗಿ ತೆಗೆದುಕೊಳ್ಳಿರಿ. ಯಾವ ಯಾವ ಪಾತ್ರೆಗಳಲ್ಲಿ ಊಟ ಮಾಡಿದಿರೋ ಆ ಪಾತ್ರೆಗಳನ್ನು ತೆಗೆದುಕೊಂಡು ನಿಮ್ಮ ಮನೆಗಳಿಗೆ ಹೋಗಿರಿ'.

ಇತ್ಯುಕ್ತವಚನೇ ತಸ್ಮಿನ್ರಾಕ್ಷಸೇಂದ್ರೇ ಮಹಾತ್ಮನಿ ।
ಯಥೇಷ್ಟಂ ತಾನಿ ರತ್ನಾನಿ ಜಗೃಹುರ್ಬ್ರಾಹ್ಮಣರ್ಷಭಾಃ ॥೨೦॥

ಮಹಾತ್ಮನಾದ ಆ ರಾಕ್ಷಸೇಂದ್ರನು ಹೀಗೆ ಹೇಳಿದಾಗ ಆ ಬ್ರಾಹ್ಮಣಶ್ರೇಷ್ಠರು ಆ ಅಮೂಲ್ಯ ವಸ್ತುಗಳನ್ನು ಯಥೇಷ್ಟವಾಗಿ ತೆಗೆದುಕೊಂಡರು.

ತತೋ ಮಹಾರ್ಹೈಸ್ತೇ ಸರ್ವೇ ರತ್ನೈರಭ್ಯರ್ಚಿತಾಃ ಶುಭೈಃ ।
ಬ್ರಾಹ್ಮಣಾ ಮೃಷ್ಟವಸನಾಃ ಸುಪ್ರೀತಾಃ ಸ್ಮ ತದಾಭವನ್ ॥೨೧॥

ಬಾರಿ ಬೆಲೆಬಾಳುವ ಶುಭಕರವಾದ ರತ್ನಗಳಿಂದ ಅರ್ಚಿತರಾದ, ಶುಭ್ರ ವಸ್ತ್ರಗಳನ್ನು ಧರಿಸಿದ ವಿಪ್ರರು ಬಹಳ ಪ್ರೀತರಾದರು.

ತತಸ್ತಾನ್ ರಾಕ್ಷಸೇಂದ್ರಶ್ಚ ದ್ವಿಜಾನಾಹ ಪುನರ್ವಚಃ ।
ನಾನಾದಿಗಾಗತಾನ್ ರಾಜನ್ ರಾಕ್ಷಸಾನ್ ಪ್ರತಿಷಿಧ್ಯ ವೈ ॥೨೨॥

ಅದ್ಯೈಕದಿವಸಂ ವಿಪ್ರಾ ನ ವೋಽಸ್ತೀಹ ಭಯಂ ಕ್ವಚಿತ್ ।
ರಾಕ್ಷಸೇಭ್ಯಃ ಪ್ರಮೋದಧ್ವಮಿಷ್ಟತೋ ಯಾತ ಮಾಚಿರಮ್ ॥೨೩॥

ಅನಂತರ ರಾಕ್ಷಸೇಂದ್ರನು ನಾನಾ ದಿಕ್ಕುಗಳಿಂದ ಬಂದಿದ್ದ ಆ ಬ್ರಾಹ್ಮಣರಿಗೆ ಹೇಳಿದನು. 'ಇದೊಂದು ದಿನ ನಿಮಗೆ ಇಲ್ಲಿ ರಾಕ್ಷಸರಿಂದ ಯಾವ ಭಯವೂ ಇಲ್ಲ. ನಿಮ್ಮ ಇಚ್ಛೆಯಂತೆ ಇಲ್ಲಿ ಸಂತೋಷಿಸಿರಿ. ಬೇಗ ಹೊರಡಿ'. ಹೀಗೆ ಹೇಳಿ ಕರ್ತವ್ಯ ಭಾರವಿರುವ ರಾಕ್ಷಸರಿಗೆ 'ವಿಪ್ರರಿಗೆ ಅಡ್ಡಿ ಮಾಡಬೇಡಿ' ಎಂದು ಆದೇಶಿಸಿದನು.

ತತಃ ಪ್ರದುದ್ರುವುಃ ಸರ್ವೇ ವಿಪ್ರಸಂಘಾಃ ಸಮಂತತಃ ।
ಗೌತಮೋಽಪಿ ಸುವರ್ಣಸ್ಯ ಭಾರಮಾದಾಯ ಸತ್ವರಃ ॥೨೪॥

ಅನಂತರ ಎಲ್ಲ ವಿಪ್ರರೂ ಎಲ್ಲ ಕಡೆ ಧಾವಿಸಿದರು. ಗೌತಮನೂ ಬಂಗಾರದ ಭಾರವನ್ನು ತೆಗೆದುಕೊಂಡು ತ್ವರೆಯಿಂದ ಹೊರಟನು.

ಕೃಚ್ಛ್ರಾತ್ ಸಮುದ್ವಹನ್ ವೀರ ನ್ಯಗ್ರೋಧಂ ಸಮುಪಾಗಮತ್ ।
ನ್ಯಷೀದಚ್ಚ ಪರಿಶ್ರಾಂತಃ ಕ್ಲಾಂತಶ್ಚ ಕ್ಷುಧಿತಶ್ಚ ಹ ॥೨೫॥

ಬಹಳ ಕಷ್ಟದಿಂದ ಹೊತ್ತುಕೊಂಡು ಆಲದ ಮರದ ಬಳಿ ಬಂದನು. ಆಯಾಸಗೊಂಡಿದ್ದ, ಬಾಡಿದ್ದ, ಹಸಿದಿದ್ದ ಅವನು ಮರದ ಕೆಳಗೆ ಕುಳಿತನು.

ತತಸ್ತಮಭ್ಯಗಾದ್ರಾಜನ್ರಾಜಧರ್ಮಾ ಖಗೋತ್ತಮಃ ।
ಸ್ವಾಗತೇನಾಭ್ಯನಂದಚ್ಚ ಗೌತಮಂ ಮಿತ್ರವತ್ಸಲಃ ॥೨೬॥

ಆಗ ಪಕ್ಷಿಶ್ರೇಷ್ಠನಾದ ರಾಜಧರ್ಮನು ಅಲ್ಲಿಗೆ ಬಂದನು. ಮಿತ್ರವತ್ಸಲನಾದ ಅವನು ಗೌತಮನನ್ನು ಸ್ವಾಗತಿಸಿ ಅಭಿನಂದಿಸಿದನು.

ತಸ್ಯ ಪಕ್ಷಾಗ್ರವಿಕ್ಷೇಪೈಃ ಕ್ಲಮಂ ವ್ಯಪನಯತ್ ಖಗಃ ।
ಪೂಜಾಂ ಚಾಪ್ಯಕರೋದ್ಧೀಮಾನ್ ಭೋಜನಂ ಚಾಪ್ಯಕಲ್ಪಯತ್ ॥೨೭॥

ಹಕ್ಕಿಯು ರೆಕ್ಕೆಯ ತುದಿಗಳನ್ನು ಬೀಸಿ ಅವನ ಶ್ರಮವನ್ನು ಪರಿಹರಿಸಿತು. ಧೀಮಂತನಾದ ಹಕ್ಕಿಯು ಅವನನ್ನು ಪೂಜಿಸಿ ಭೋಜನವನ್ನೂ ಕಲ್ಪಿಸಿತು.

ತತಸ್ತೌ ಸಂವಿದಂ ಕೃತ್ವಾ ಖಗೇಂದ್ರದ್ವಿಜಸತ್ತಮೌ ।
ನ್ಯಷೀದತಾಂ ಮಹಾರಾಜ ನ್ಯಗ್ರೋಧೇ ವಿಪುಲೇ ತಥಾ ।
ಗೌತಮಶ್ಚಿಂತಯಾಮಾಸ ರಾತ್ರೌ ತಸ್ಯ ಸಮೀಪತಃ ॥೨೮॥

ಅನಂತರ ಆ ಹಕ್ಕಿ ಮತ್ತು ಬ್ರಾಹ್ಮಣನು ಮಾತುಗಳನ್ನು ಆಡುತ್ತಾ ಆ ವಿಪುಲ ಆಲದ ಮರದಲ್ಲಿ ಆಶ್ರಯವನ್ನು ಪಡೆದರು. ಆ ರಾತ್ರಿ ಗೌತಮನು ಆಲೋಚಿಸಿದನು.

ಹಾಟಕಸ್ಯ ಸುವರ್ಣಸ್ಯ ಭಾರೋಯಂ ಸುಮಹಾನ್ ಮಯಾ ।
ಗೃಹೀತೋ ಲೋಭಮೋಹಾದ್ವೈ ದೂರಂ ಚ ಗಮನಂ ಮಮ ॥೨೯॥

'ನಾನು ಲೋಭ ಮತ್ತು ಮೋಹಗಳಿಂದ ಒಳ್ಳೆಯ ಬಣ್ಣದ ಬಂಗಾರವನ್ನು ತೆಗೆದುಕೊಂಡಿದ್ದೆನೆ. ದೂರ ಹೋಗಬೇಕಾಗಿದೆ.

ನ ಚಾಸ್ತಿ ಪಥಿ ಭೋಕ್ತವ್ಯಂ ಪ್ರಾಣಸಂಧಾರಣಂ ಮಮ ।
ಕಿಂ ಕೃತ್ವಾ ಧಾರಯೇಯಂ ವೈ ಪ್ರಾಣಾನಿತ್ಯಭ್ಯಚಿಂತಯತ್ ॥೩೦॥

'ದಾರಿಯಲ್ಲಿ ಪ್ರಾಣಧಾರಣೆಗೆ ಬೇಕಾದ ಆಹಾರವೇನೂ ಇಲ್ಲ. ಏನು ಮಾಡಿ ಪ್ರಾಣಧಾರಣೆಯನ್ನು ಮಾಡಿಕೊಳ್ಳಲಿ' ಎಂದು ಚಿಂತಿಸಿದನು.

ತತಃ ಸ ಪಥಿ ಭೋಕ್ತವ್ಯಂ ಪ್ರೇಕ್ಷಮಾಣೋ ನ ಕಿಂಚನ ।
ಕೃತಘ್ನಃ ಪುರುಷವ್ಯಾಘ್ರ ಮನಸೇದಮಚಿಂತಯತ್ ॥೩೧॥

ತನ್ನ ಪ್ರಯಾಣದ ದಾರಿಯಲ್ಲಿ ತಿನ್ನಲು ಬೇಕಾದ ಯಾವ ಆಹಾರವೂ ಅವನಿಗೆ ಹೊಳೆಯಲಿಲ್ಲ. ಕೃತಘ್ನನಾದ ಆ ಪುರುಷಮುಖದ ವ್ಯಾಘ್ರನು ಆಲೋಚಿಸಿದನು.

ಅಯಂ ಬಕಪತಿಃ ಪಾರ್ಶ್ವೇ ಮಾಂಸರಾಶಿಃ ಸ್ಥಿತೋ ಮಮ ।
ಇಮಂ ಹತ್ವಾ ಗೃಹೀತ್ವಾ ಚ ಯಾಸ್ಯೇಹಂ ಸಮಭಿದ್ರುತಮ್ ॥೩೨॥

ಮಾಂಸರಾಶಿಯಾದ ಈ ಬಕಪಕ್ಷಿಯು ನನ್ನ ಪಕ್ಕದಲ್ಲಿದೆ. ಈ ಹಕ್ಕಿಯನ್ನು ಕೊಂದು ತೆಗೆದುಕೊಂಡು ಶೀಘ್ರವಾಗಿ ಇಲ್ಲಿಂದ ಹೊರಟುಹೋಗುತ್ತೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಸಪ್ತತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯವು ಮುಗಿಯಿತು.

★ ★ ★ ★

ಅನಂತರ ರಾಕ್ಷಸೇಂದ್ರನು ನಾನಾ ದಿಕ್ಕುಗಳಿಂದ ಬಂದಿದ್ದ ಆ ಬ್ರಾಹ್ಮಣರಿಗೆ ಹೇಳಿದನು. 'ಇದೊಂದು ದಿನ ನಿಮಗೆ ಇಲ್ಲಿ ರಾಕ್ಷಸರಿಂದ ಯಾವ ಭಯವೂ ಇಲ್ಲ. ನಿಮ್ಮ ಇಚ್ಛೆಯಂತೆ ಇಲ್ಲಿ ಸಂತೋಷಿಸಿರಿ. ಬೇಗ ಹೊರಡಿ'. ಹೀಗೆ ಹೇಳಿ ಕರ್ತವ್ಯ ಭಾರವಿರುವ ರಾಕ್ಷಸರಿಗೆ 'ವಿಪ್ರರಿಗೆ ಅಡ್ಡಿ ಮಾಡಬೇಡಿ' ಎಂದು ಆದೇಶಿಸಿದನು.

ತತಃ ಪ್ರದುದ್ರುವುಃ ಸರ್ವೇ ವಿಪ್ರಸಂಘಾಃ ಸಮಂತತಃ ।
ಗೌತಮೋಽಪಿ ಸುವರ್ಣಸ್ಯ ಭಾರಮಾದಾಯ ಸತ್ವರಃ ॥೨೪॥

ಅನಂತರ ಎಲ್ಲ ವಿಪ್ರರೂ ಎಲ್ಲ ಕಡೆ ಧಾವಿಸಿದರು. ಗೌತಮನೂ ಬಂಗಾರದ ಭಾರವನ್ನು ತೆಗೆದುಕೊಂಡು ತ್ವರೆಯಿಂದ ಹೊರಟನು.

ಕೃಚ್ಛ್ರಾತ್ ಸಮುದ್ವಹನ್ ವೀರ ನ್ಯಗ್ರೋಧಂ ಸಮುಪಾಗಮತ್ ।
ನ್ಯಷೀದಚ್ಚ ಪರಿಶ್ರಾಂತಃ ಕ್ಲಾಂತಶ್ಚ ಕ್ಷುಧಿತಶ್ಚ ಹ ॥೨೫॥

ಬಹಳ ಕಷ್ಟದಿಂದ ಹೊತ್ತುಕೊಂಡು ಆಲದ ಮರದ ಬಳಿ ಬಂದನು. ಆಯಾಸಗೊಂಡಿದ್ದ, ಬಾಡಿದ್ದ, ಹಸಿದಿದ್ದ ಅವನು ಮರದ ಕೆಳಗೆ ಕುಳಿತನು.

ತತಸ್ತಮಭ್ಯಗಾದ್ರಾಜನ್ರಾಜಧರ್ಮಾ ಖಗೋತ್ತಮಃ ।
ಸ್ವಾಗತೇನಾಭ್ಯನಂದಚ್ಚ ಗೌತಮಂ ಮಿತ್ರವತ್ಸಲಃ ॥೨೬॥

ಆಗ ಪಕ್ಷಿಶ್ರೇಷ್ಠನಾದ ರಾಜಧರ್ಮನು ಅಲ್ಲಿಗೆ ಬಂದನು. ಮಿತ್ರವತ್ಸಲನಾದ ಅವನು ಗೌತಮನನ್ನು ಸ್ವಾಗತಿಸಿ ಅಭಿನಂದಿಸಿದನು.

ತಸ್ಯ ಪಕ್ಷಾಗ್ರವಿಕ್ಷೇಪೈಃ ಕ್ಲಮಂ ವ್ಯಪನಯತ್ ಖಗಃ ।
ಪೂಜಾಂ ಚಾಪ್ಯಕರೋದ್ಧೀಮಾನ್ ಭೋಜನಂ ಚಾಪ್ಯಕಲ್ಪಯತ್ ॥೨೭॥

ಹಕ್ಕಿಯು ರೆಕ್ಕೆಯ ತುದಿಗಳನ್ನು ಬೀಸಿ ಅವನ ಶ್ರಮವನ್ನು ಪರಿಹರಿಸಿತು. ಧೀಮಂತನಾದ ಹಕ್ಕಿಯು ಅವನನ್ನು ಪೂಜಿಸಿ ಭೋಜನವನ್ನೂ ಕಲ್ಪಿಸಿತು.

ತತಸ್ತೌ ಸಂವಿದಂ ಕೃತ್ವಾ ಖಗೇಂದ್ರದ್ವಿಜಸತ್ತಮೌ ।
ನ್ಯಷೀದತಾಂ ಮಹಾರಾಜ ನ್ಯಗ್ರೋಧೇ ವಿಪುಲೇ ತಥಾ ।
ಗೌತಮಶ್ಚಿಂತಯಾಮಾಸ ರಾತ್ರೌ ತಸ್ಯ ಸಮೀಪತಃ ॥೨೮॥

ಅನಂತರ ಆ ಹಕ್ಕಿ ಮತ್ತು ಬ್ರಾಹ್ಮಣನು ಮಾತುಗಳನ್ನು ಆಡುತ್ತಾ ಆ ವಿಪುಲ ಆಲದ ಮರದಲ್ಲಿ ಆಶ್ರಯವನ್ನು ಪಡೆದರು. ಆ ರಾತ್ರಿ ಗೌತಮನು ಆಲೋಚಿಸಿದನು.

ಹಾಟಕಸ್ಯ ಸುವರ್ಣಸ್ಯ ಭಾರೋಯಂ ಸುಮಹಾನ್ ಮಯಾ ।
ಗೃಹೀತೋ ಲೋಭಮೋಹಾದ್ವೈ ದೂರಂ ಚ ಗಮನಂ ಮಮ ॥೨೯॥

'ನಾನು ಲೋಭ ಮತ್ತು ಮೋಹಗಳಿಂದ ಒಳ್ಳೆಯ ಬಣ್ಣದ ಬಂಗಾರವನ್ನು ತೆಗೆದುಕೊಂಡಿದ್ದೆನೆ. ದೂರ ಹೋಗಬೇಕಾಗಿದೆ.

ನ ಚಾಸ್ತಿ ಪಥಿ ಭೋಕ್ತವ್ಯಂ ಪ್ರಾಣಸಂಧಾರಣಂ ಮಮ ।
ಕಿಂ ಕೃತ್ವಾ ಧಾರಯೇಯಂ ವೈ ಪ್ರಾಣಾನಿತ್ಯಭ್ಯಚಿಂತಯತ್ ॥೩೦॥

'ದಾರಿಯಲ್ಲಿ ಪ್ರಾಣಧಾರಣೆಗೆ ಬೇಕಾದ ಆಹಾರವೇನೂ ಇಲ್ಲ. ಏನು ಮಾಡಿ ಪ್ರಾಣಧಾರಣೆಯನ್ನು ಮಾಡಿಕೊಳ್ಳಲಿ' ಎಂದು ಚಿಂತಿಸಿದನು.

ತತಃ ಸ ಪಥಿ ಭೋಕ್ತವ್ಯಂ ಪ್ರೇಕ್ಷಮಾಣೋ ನ ಕಿಂಚನ ।
ಕೃತಘ್ನಃ ಪುರುಷವ್ಯಾಘ್ರ ಮನಸೇದಮಚಿಂತಯತ್ ॥೩೧॥

ತನ್ನ ಪ್ರಯಾಣದ ದಾರಿಯಲ್ಲಿ ತಿನ್ನಲು ಬೇಕಾದ ಯಾವ ಆಹಾರವೂ ಅವನಿಗೆ ಹೊಳೆಯಲಿಲ್ಲ. ಕೃತಘ್ನನಾದ ಆ ಪುರುಷಮುಖದ ವ್ಯಾಘ್ರನು ಆಲೋಚಿಸಿದನು.

ಅಯಂ ಬಕಪತಿಃ ಪಾರ್ಶ್ವೇ ಮಾಂಸರಾಶಿಃ ಸ್ಥಿತೋ ಮಮ ।
ಇಮಂ ಹತ್ವಾ ಗೃಹೀತ್ವಾ ಚ ಯಾಸ್ಯೇಹಂ ಸಮಭಿದ್ರುತಮ್ ॥೩೨॥

ಮಾಂಸರಾಶಿಯಾದ ಈ ಬಕಪಕ್ಷಿಯು ನನ್ನ ಪಕ್ಕದಲ್ಲಿದೆ. ಈ ಹಕ್ಕಿಯನ್ನು ಕೊಂದು ತೆಗೆದುಕೊಂಡು ಶೀಘ್ರವಾಗಿ ಇಲ್ಲಿಂದ ಹೊರಟುಹೋಗುತ್ತೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಸಪ್ತತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯವು ಮುಗಿಯಿತು.

★ ★ ★ ★

ಮೂವತ್ತೆಂಟನೆಯ ಅಧ್ಯಾಯ

ಗೌತಮನಿಂದ 'ರಾಜಧರ್ಮ' (ಬಕಪಕ್ಷಿ)ನ ಹತ್ಯೆ. ವಿರೂಪಾಕ್ಷನ ಮಗ ಮತ್ತು ಸೇವಕರಿಂದ ಗೌತಮನ ಬಂಧನ, ಹತ್ಯೆ.

ಭೀಷ್ಮಃ

ಅಥ ತತ್ರ ಮಹಾರ್ಚಿಷ್ಮಾನನಲೋ ವಾತಸಾರಥಿಃ ।
ತಸ್ಯಾವಿದೂರೇ ರಕ್ಷಾರ್ಥಂ ಖಗೇಂದ್ರೇಣ ಕೃತೋಽಭವತ್ ॥೧॥

ಅನಂತರ ಪಕ್ಷಿಶ್ರೇಷ್ಠನಾದ ರಾಜಧರ್ಮನು ಅವನ (ಗೌತಮನ) ರಕ್ಷಣೆಗಾಗಿ ಹತ್ತಿರದಲ್ಲೇ ಗಾಳಿಯ ಸಹಾಯದಿಂದ ಜ್ವಾಲೆಗಳಿರುವ ಅಗ್ನಿಯನ್ನು ಏರ್ಪಡಿಸಿದನು.

ಸ ಚಾಪಿ ಪಾರ್ಶ್ವೇ ಸುಷ್ಠಾಪ ವಿಶ್ವಸ್ತೋ ಬಕರಾಟ್ ತದಾ ।
ಕೃತಘ್ನಸ್ತು ಸ ದುಷ್ಟಾತ್ಮಾ ತಂ ಜಿಘಾಂಸುರಜಾಗರತ್ ॥೨॥

ಆ ಶ್ರೇಷ್ಠ ಬಕಪಕ್ಷಿಯೂ ನಂಬಿಕೆಯಿಂದ ಅವನ ಪಕ್ಕದಲ್ಲೇ ನಿದ್ರಿಸಿದನು. ಕೃತಘ್ನನಾದ ಆ ದುಷ್ಟ ಗೌತಮನು ಹಕ್ಕಿಯನ್ನು ಕೊಲ್ಲುವ ಇಚ್ಛೆಯಿಂದ ಎಚ್ಚರದಿಂದ ಇದ್ದನು.

ತತೋಽಲಾತೇನ ದೀಪ್ತೇನ ವಿಶ್ವಸ್ತಂ ನಿಜಘಾನ ತಮ್ ।
ನಿಹತ್ಯ ಚ ಮುದಾ ಯುಕ್ತಃ ಸೋಽನುಬಂಧಂ ನ ದೃಷ್ಟವಾನ್ ॥೩॥

ಅನಂತರ ಉರಿಯುತ್ತಿರುವ ಕೊಳ್ಳಿಯಿಂದ ನಂಬಿಕೆಯಿಟ್ಟಿದ್ದ ಆ ಹಕ್ಕಿಯನ್ನು ಕೊಂದನು. ಕೊಂದು ಸಂತೋಷಿಸಿದ ಗೌತಮನು ಈ ಕೃತ್ಯದ ಪರಿಣಾಮವನ್ನು (ಘೋರ ಪಾಪದ ಪ್ರಾಪ್ತಿಯನ್ನು ಮನಗಾಣಲೇ ಇಲ್ಲ).

ಸ ತಂ ವಿಪಕ್ಷರೋಮಾಣಂ ಕೃತ್ವಾ ಜೀವಪರಸ್ತದಾ ।
ತಂ ಗೃಹೀತ್ವಾ ಸುವರ್ಣಂ ಚ ಯಯೌ ದ್ರುತತರಂ ದ್ವಿಜಃ ॥೪॥

ಕೇವಲ ತನ್ನ ಪ್ರಾಣರಕ್ಷಣೆಯಲ್ಲಿ ಆಸಕ್ತನಾಗಿದ್ದ ಆ ಬ್ರಾಹ್ಮಣನು ಆ ಸತ್ತ ಹಕ್ಕಿಯ ರೆಕ್ಕೆಗಳನ್ನು ಮತ್ತು ರೋಮಗಳನ್ನು ಕಿತ್ತುಹಾಕಿ ದೇಹವನ್ನು ಮತ್ತು ಬಂಗಾರವನ್ನು ತೆಗೆದುಕೊಂಡು ವೇಗದಿಂದ ಹೊರಟುಹೋದನು.

ತತೋಽನ್ಯಸ್ಮಿನ್ ಗತೇ ಚಾಹ್ನಿ ವಿರೂಪಾಕ್ಷೋಽಬ್ರವೀತ್ ಸುತಮ್ ।
ನ ಪ್ರೇಕ್ಷೇ ರಾಜಧರ್ಮಾಣಮದ್ಯ ಪುತ್ರ ಖಗೋತ್ತಮಮ್ ॥೫॥

ಇನ್ನೊಂದು ದಿವಸ ಕಳೆದ ನಂತರ ವಿರೂಪಾಕ್ಷನು ಮಗನಿಗೆ ಹೇಳಿದನು. 'ಪುತ್ರ! ಪಕ್ಷಿಶ್ರೇಷ್ಠ ರಾಜಧರ್ಮನನ್ನು ಇಂದು ನೋಡಲೇ ಇಲ್ಲ'.

ಸ ಪೂರ್ವಸಂಧ್ಯಾಂ ಬ್ರಹ್ಮಾಣಂ ವಂದಿತುಂ ಯಾತಿ ಸರ್ವದಾ ।
ಮಾಂ ಚಾದೃಷ್ಟ್ವಾ ಕದಾಚಿತ್ಸ ನ ಗಚ್ಛತಿ ಗೃಹಾನ್ ಖಗಃ ॥೬॥

'ಆ ಹಕ್ಕಿಯು ಪ್ರತಿದಿನ ಪ್ರಾತಃಸಂಧ್ಯಾಕಾಲದಲ್ಲಿ ಬ್ರಹ್ಮದೇವನಿಗೆ ವಂದಿಸಲು ಹೋಗುತ್ತದೆ. ಹಿಂದಿರುಗುವಾಗ ಎಂದೂ ನನ್ನನ್ನು ಕಾಣದೆ ಮನೆಗೆ ಹೋಗುವುದಿಲ್ಲ'.

ಉಭೇ ದ್ವಿರಾತ್ರಂ ಸಂಧ್ಯೇ ವೈ ನಾಭ್ಯಗಾತ್ ಸ ಮಮಾಲಯಮ್ ।
ತಸ್ಮಾನ್ನ ಶುದ್ಧ್ಯತೇ ಭಾವೋ ಮಮ ಸ ಜ್ಞಾಯತಾಂ ಸುಹೃತ್ ॥೭॥

'ಎರಡು ರಾತ್ರಿ, ಎರಡು ಸಂಧ್ಯಾಕಾಲಗಳು ಕಳೆಯಿತು. ಆ ಹಕ್ಕಿಯು ನಮ್ಮ ಮನೆಗೆ ಬಂದಿಲ್ಲ. ಆದ್ದರಿಂದ ನನ್ನ ಮನಸ್ಸಿಗೆ ಆತಂಕವಾಗಿದೆ. ಅವನ ಬಗ್ಗೆ ವಿಚಾರಿಸು'.

ಸ್ವಾಧ್ಯಾಯೇನ ವಿಯುಕ್ತೋ ಹಿ ಬ್ರಹ್ಮವರ್ಚಸವರ್ಜಿತಃ ।
ತಂ ಗತಸ್ತತ್ರ ಮೇ ಶಂಕಾ ಹನ್ಯಾತ್ತಂ ಸ ದ್ವಿಜಾಧಮಃ ॥೮॥

'ವೇದಾಧ್ಯಯನ ರಹಿತನಾದ, ಬ್ರಹ್ಮವರ್ಚಸ್ ಇಲ್ಲದ ಆ ಬ್ರಾಹ್ಮಣಾಧಮನು ಆ ಹಕ್ಕಿಯು ವಸತಿಗೆ ಹೋಗಿದ್ದಾನೆ. ಅವನು ಹಕ್ಕಿಯನ್ನು ಕೊಂದಿರಬಹುದು ಎಂದು ನನಗೆ ಸಂಶಯ'.

ದುರಾಚಾರಸ್ತು ದುರ್ಬುದ್ಧಿರಿಂಗಿತೈರ್ಲಕ್ಷಿತೋ ಮಯಾ ।
ನಿಷ್ಠ್ಯೂತೋ ದಾರುಣಾಕಾರಃ ಕೃಷ್ಣೋ ದಸ್ಯುರಿವಾಧಮಃ ॥೯॥

'ಅವನು ದುರಾಚಾರ, ದುರ್ಬುದ್ಧಿ, ಸೋಮಾರಿ, ಕ್ರೂರ ಆಕೃತಿಯವನು, ಕಪ್ಪು, ದಸ್ಯುವಿನಂತೆ ಅಧಮ'.

ಗೌತಮಃ ಸ ಗತಸ್ತತ್ರ ತೇನೋದ್ವಿಗ್ನಂ ಮನೋ ಮಮ ।
ಪುತ್ರ ಶೀಘ್ರಮಿತೋ ಗತ್ವಾ ರಾಜಧರ್ಮನಿವೇಶನಮ್ ।
ಜ್ಞಾಯತಾಂ ಸ ವಿಶುದ್ಧಾತ್ಮಾ ಯದಿ ಜೀವತಿ ಮಾಚಿರಮ್ ॥೧೦॥

'ಆ ಗೌತಮನು ಅಲ್ಲಿಗೆ (ಹಕ್ಕಿಯ ವಸತಿಗೆ) ಹೋಗಿದ್ದಾನೆ. ಆದ್ದರಿಂದ ನನ್ನ ಮನಸ್ಸು ಉದ್ವಿಗ್ನವಾಗಿದೆ. ಪುತ್ರ! ಕೂಡಲೇ ಇಲ್ಲಿಂದ 'ರಾಜಧರ್ಮ'ದ ವಸತಿಗೆ ಹೋಗಿ ಆ ವಿಶುದ್ಧಾತ್ಮನು ಬದುಕಿದ್ದಾನೋ, ಇಲ್ಲವೋ ಎಂದು ತಿಳಿದು ಬಾ. ಬೇಗ ಹೋಗು'.

ಸ ಏವಮುಕ್ತಸ್ತ್ವರಿತೋ ರಕ್ಷೋಭಿಃ ಸಹಿತೋ ಯಯೌ ।
ನ್ಯಗ್ರೋಧಂ ತತ್ರ ಚಾಪಶ್ಯತ್ ಕಂಕಾಲಂ ರಾಜಧರ್ಮಣಃ ॥೧೧॥

ಹಿಂದೆ ಹೇಳಲ್ಪಟ್ಟ ಪುತ್ರನು ರಾಕ್ಷಸರೊಡನೆ ಕೂಡಲೇ ಆ ವಟವೃಕ್ಷವಿದ್ದಲ್ಲಿಗೆ ಹೋದನು. ಅಲ್ಲಿ 'ರಾಜಧರ್ಮ'ನ ರೆಕ್ಕೆ, ಮೂಳೆಗಳನ್ನು ನೋಡಿದನು.

ನ್ಯಗ್ರೋಧೇ ರಾಜಧರ್ಮಾಣಮಪಶ್ಯನ್ನಿಹತಂ ತತಃ ।
ರುದಿತ್ವಾ ಬಹು ತತ್ತದ್ವೈ ವಿಲಪ್ಯ ಚ ಸ ರಾಕ್ಷಸಃ ॥೧೨॥

ವಟವೃಕ್ಷದ ಕೆಳಗೆ 'ರಾಜಧರ್ಮ'ನು ಹತನಾಗಿರುವುದನ್ನು ಕಂಡು ಆ ರಾಕ್ಷಸ ಪುತ್ರನು ಬಹಳ ಅತ್ತನು. ಬಹುವಿಧವಾಗಿ ವಿಲಾಪ ಮಾಡಿದನು.

ಗತೋ ರೋಷಸಮಾವಿಷ್ಟೋ ಗೌತಮಗ್ರಹಣಾಯ ವೈ ।
ಗೃಹೀತೋ ಗೌತಮಃ ಪಾಪೋ ರಕ್ಷೋಭಿಃ ಕ್ರೋಧಮೂರ್ಚ್ಛಿತೈಃ ॥೧೩॥

ರೋಷದ ಆವೇಶಕ್ಕೊಳಗಾಗಿ ಆ ಗೌತಮನನ್ನು ಹಿಡಿಯಲು ಹೊರಟನು. ಕ್ರೋಧಾವಿಷ್ಟರಾದ ರಾಕ್ಷಸರು ಗೌತಮನನ್ನು ಹಿಡಿದರು.

ರಾಜಧರ್ಮಶರೀರಸ್ಯ ಕಂಕಾಲಂ ಚಾಪ್ಯಥೋ ಧೃತಮ್ ।
ಮೇರುಪೃಷ್ಠೇ ಚ ನಗರಂ ಯಾತುಧಾನಾಸ್ತತೋ ಗತಾಃ ॥೧೪॥

'ರಾಜಧರ್ಮ'ನ ಶರೀರದ ಅಸ್ಥಿಗಳನ್ನು ವಶಕ್ಕೆ ತೆಗೆದುಕೊಂಡರು. ಅಲ್ಲಿಂದ ರಾಕ್ಷಸರು ಮೇರುಪರ್ವತದಲ್ಲಿದ್ದ ವಿರೂಪಾಕ್ಷನ ನಗರಕ್ಕೆ ಹೋದರು.

ಕ್ರೋಧರಕ್ತೇಕ್ಷಣಾ ಘೋರಾ ಗೌತಮಸ್ಯ ವಧೇ ಧೃತಾಃ ।
ಪಾರ್ಥಿವಸ್ಯಾಗ್ರತೋಧ್ವಸ್ತೇ ಕಂಕಾಲಂ ರಾಜಧರ್ಮಣಃ ॥೧೫॥

ಕ್ರೋಧದಿಂದ ಕೆಂಪಾದ ಕಣ್ಣುಗಳಿದ್ದ, ಗೌತಮನನ್ನು ಕೊಲ್ಲಲು ನಿರ್ಧರಿಸಿದ್ದ ಆ ಘೋರ ಅಸುರರು ರಾಜನ ಮುಂದೆ 'ರಾಜಧರ್ಮ'ನ ಶರೀರದ ಅವಶೇಷಗಳನ್ನು ಇಟ್ಟರು.

ತಂ ದೃಷ್ಟ್ವಾ ವಿಮನಾ ರಾಜಾ ಸಾಮಾತ್ಯಃ ಸಗಣೋಭವತ್ ।
ಆರ್ತನಾದೋ ಮಹಾನಾಸೀದ್ ಗೃಹೇ ತಸ್ಯ ಮಹಾತ್ಮನಃ ॥೧೬॥

ಸ್ತ್ರೀಸಂಘಸ್ಯ ತದಾ ರಾಜನ್ ನಿಹತೇ ಕಾಶ್ಯಪಾತ್ಮಜೇ ।
ರಾಜಾ ಚೈವಾಬ್ರವೀತ್ಪುತ್ರಂ ಪಾಪೋಽಯಂ ವಧ್ಯತಾಮಿತಿ ॥೧೭॥

ಆ ಅವಶೇಷಗಳನ್ನು ನೋಡಿ ರಾಜನ ಮತ್ತು ಮಂತ್ರಿಗಳ ಮತ್ತು ಇತರ ಪರಿವಾರದ ಜನರ ಮನಸ್ಸು ದುಃಖದಿಂದ ಕುಸಿಯಿತು. ರಾಜನೇ! ಕಶ್ಯಪರ ಸಂತತಿಯವನಾದ ಆ 'ರಾಜಧರ್ಮ'ನು ಹೀಗೆ ಹತನಾದಾಗ, ಆ ಮಹಾತ್ಮನ= ವಿರೂಪಾಕ್ಷನ ಮನೆಯಲ್ಲಿದ್ದ ಮಹಿಳೆಯರು ಬಹಳ ಆರ್ತನಾದವನ್ನು ಮಾಡಿದರು. 'ಈ ಪಾಪಿಯನ್ನು ಕೊಂದು ಬಿಡಿ' ಎಂದು ರಾಜನು ಹೇಳಿದನು.

ರಾಕ್ಷಸಾಃ

ಅಸ್ಯ ಮಾಂಸಂ ವಯಂ ಸರ್ವೇ ಖಾದಿಷ್ಯಾಮಃ ಸಮಾಗತಾಃ ।
ಪಾಪಕೃತ್ ಪಾಪಕರ್ಮಾ ಚ ಪಾಪಾತ್ಮಾ ಪಾಪಮಾಸ್ಥಿತಃ ।
ಹಂತವ್ಯ ಏವ ಪಾಪಾತ್ಮಾ ಕೃತಘ್ನೋ ನಾತ್ರ ಸಂಶಯಃ ॥೧೮॥

ಇಲ್ಲಿ ಸೇರಿರುವ ನಾವೆಲ್ಲರೂ ಇವನ ಮಾಂಸವನ್ನು ತಿನ್ನೋಣ. ಪಾಪಕರ್ಮಗಳನ್ನು ಹೊತ್ತಿರುವ ಈ ಪಾಪಕಾರಿಯು ಪಾಪವನ್ನೇ ಆಶ್ರಯಿಸಿದ್ದಾನೆ. ಇವನು ಪಾಪಾತ್ಮ. ಇವನು ಕೃತಘ್ನ. ಇವನು ವಧೆಗೇ ಅರ್ಹ. ಈ ವಿಷಯದಲ್ಲಿ ಏನೂ ಸಂಶಯವಿಲ್ಲ.

ವಿರೂಪಾಕ್ಷಃ

ಕೃತಘ್ನಂ ಪಾಪಕರ್ಮಾಣಂ ನ ಭಕ್ಷಯಿತುಮುತ್ಸಹೇ ।
ದಾಸೇಭ್ಯೋ ದೀಯತಾಮೇಷ ಮಿತ್ರಧ್ರುಕ್ ಪುರುಷಾಧಮಃ ॥೧೯॥

ಕೃತಘ್ನನಾದ, ಪಾಪಕರ್ಮವನ್ನು ಮಾಡಿದ ಇವನನ್ನು ನಾನು ತಿನ್ನಲು ಬಯಸುವುದಿಲ್ಲ. ಮಿತ್ರದ್ರೋಹಿಯಾದ, ಪುರುಷಾಧಮನಾದ ಇವನನ್ನು ಆಳುಗಳಿಗೆ ಕೊಟ್ಟು ಬಿಡಿ.

ಭೀಷ್ಮಃ

ದಾಸಾಃ ಸರ್ವೇ ಸಮಾಹೂತಾ ಯಾತುಧಾನಾಸ್ತಥಾ ಪರೇ ।
ನೇಚ್ಛಂತಿ ಸ್ಮ ಕೃತಘ್ನಂ ತಂ ಖಾದಿತುಂ ಪುರುಷೋತ್ತಮ ॥೨೦॥

ಪುರುಷಶ್ರೇಷ್ಠ! ಎಲ್ಲ ಆಳುಗಳನ್ನು, ರಾಕ್ಷಸರನ್ನು ಕರೆದರು. ಆ ಕೃತಘ್ನನನ್ನು ತಿನ್ನಲು ಅವರು ಇಚ್ಛಿಸಲಿಲ್ಲ.

ಶಿರೋಭಿಶ್ಚ ಗತಾ ಭೂಮಿಂ ಮಹಾರಾಜ ತತೋ ಬಲಾತ್ ।
ಮಾ ನಾರ್ಥಂ ಜಾತನಿರ್ಬಂಧಂ ಕಿಲ್ಬಿಷಂ ದಾತುಮರ್ಹಸಿ ॥೨೧॥

ಅವರೆಲ್ಲರೂ ಶಿರಸಾ ನಮಸ್ಕರಿಸಿ 'ಮಹಾರಾಜರೇ! ದಯವಿಟ್ಟು ಈ ಪಾಪಿಯನ್ನು, ಅನಾರ್ಯನನ್ನು ನಮಗೆ ಕೊಡಬೇಡಿ' ಎಂದು ಹೇಳಿದರು.

ಯಾತುಧಾನಾ ನೃಪೇಣೋಕ್ತಾಃ ಪಾಪಕರ್ಮಾ ವಿಶಸ್ಯತಾಮ್ ।
ಭಕ್ಷ್ಯತಾಂ ತ್ಯಜ್ಯತಾಂ ವಾಯಂ ದರ್ಶನಾನ್ऽಪನೀಯತಾಮ್ ॥೨೨॥

ರಾಕ್ಷಸರಿಂದ ಹೀಗೆ ಹೇಳಲ್ಪಟ್ಟ ರಾಜನು 'ಈ ಪಾಪಕಾರ್ಯವೆಸಗಿದವನನ್ನು ಕೊಂದು ಬಿಡಿ. ಅನಂತರ ತಿನ್ನಿ ಅಥವಾ ಬಿಡಿ. ಇವನನ್ನು ನನಗೆ ಕಾಣದಂತೆ ದೂರ ಒಯ್ಯಿರಿ' ಎಂದು ಹೇಳಿದನು.

ತತಸ್ತೇ ರುಷಿತಾ ದಾಸಾಃ ಶೂಲಪಟ್ಟಸಪಾಣಯಃ ।
ಖಂಡಶೋ ವಿಕೃತಂ ಹತ್ವಾ ಕ್ರವ್ಯಾದ್ಭ್ಯೋ ಹ್ಯದದುಸ್ತದಾ ॥೨೩॥

ಅನಂತರ ರೋಷಾವಿಷ್ಟರಾದ, ಶೂಲ-ಪಟ್ಟಸಗಳನ್ನು ಕೈಯಲ್ಲಿ ಹಿಡಿದಿದ್ದ ಸೇವಕರು ಗೌತಮನನ್ನು ಚೂರು ಚೂರು ಆಗುವಂತೆ ಹೊಡೆದು ಮಾಂಸಭಕ್ಷಕರಿಗೆ ಕೊಟ್ಟರು.

ಕ್ರವ್ಯಾದಾಸ್ತ್ವಪಿ ರಾಜೇಂದ್ರ ನೇಚ್ಛಂತಿ ಪಿಶಿತಾಶನಾಃ ।
ಮೃತಾನಪಿ ಹಿ ಕ್ರವ್ಯಾದಾಃ ಕೃತಘ್ನಾನ್ನೋಪಭುಂಜತೇ ॥೨೪॥

ರಾಜೇಂದ್ರ! ಮಾಂಸಭಕ್ಷಕರೂ ಕೂಡ ಕೃತಘ್ನರನ್ನು, ಅವರು ಸತ್ತು ಹೋಗಿದ್ದರೂ ತಿನ್ನುವುದಿಲ್ಲ.

ಬ್ರಹ್ಮಸ್ವಹರಣೇ ಚೋರೇ ಬ್ರಹ್ಮಘ್ನೇ ಗುರುತಲ್ಪಗೇ ।
ನಿಷ್ಕೃತಿರ್ವಿಹಿತಾ ಸದ್ಭಿಃ ಕೃತಘ್ನೇ ನಾಸ್ತಿ ನಿಷ್ಕೃತಿಃ ॥೨೫॥

ಬ್ರಹ್ಮಸ್ವವನ್ನು ಅಪಹಾರ ಮಾಡಿದವರಿಗೆ, ಕಳ್ಳನಿಗೆ, ಬಾಹ್ಮಣಹತ್ಯೆಯನ್ನು ಮಾಡಿದವರಿಗೆ, ಗುರುಪತ್ನಿಯ ಭೋಗವನ್ನು ಮಾಡಿದವರಿಗೆ ಪ್ರಾಜ್ಞರು ಪ್ರಾಯಶ್ಚಿತ್ತವನ್ನು ವಿಧಿಸಿದ್ದಾರೆ. ಕೃತಘ್ನನಿಗೆ ಪ್ರಾಯಶ್ಚಿತ್ತವಿಲ್ಲ.

ಮಿತ್ರದ್ರುಹಂ ಕೃತಘ್ನಂ ಚ ನೃಶಂಸಂ ಚ ನರಾಧಮಮ್ ।
ಕ್ರವ್ಯಾದಾಃ ಕೃಮಯಶ್ಚೈವ ನೋಪಭುಂಜಂತಿ ವೈ ಸದಾ ॥೨೬॥

ಮಿತ್ರದ್ರೋಹಿಯನ್ನು, ಕೃತಘ್ನನನ್ನು, ಕ್ರೂರಿಯನ್ನು, ನರಾಧಮನನ್ನು ಮಾಂಸಭಕ್ಷಕ ಪ್ರಾಣಿಗಳು, ಕ್ರಿಮಿಗಳು ಕೂಡ ಎಂದೂ ತಿನ್ನುವುದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಆಪದ್ಧರ್ಮೇ ಅಷ್ಟತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ತೆಂಟನೆಯ
ಅಧ್ಯಾಯವು ಮುಗಿಯಿತು.

★ ★ ★ ★

ಮೂವತ್ತೊಂಬತ್ತನೆಯ ಅಧ್ಯಾಯ

'ರಾಜಧರ್ಮ'ನ ದೇಹಕ್ಕೆ ಸಂಸ್ಕಾರ. ದೇಹದ ಮೇಲೆ ಸುರಭಿಯ ಬಾಯಿಯ ನೊರೆಯ ಪತನ. ದೇವೇಂದ್ರನ ಆಗಮನ. ರಾಜಧರ್ಮನ ಪುನರುಜ್ಜೀವನ. ಅವನ ಶಾಪ ವೃತ್ತಾಂತ. ಗೌತಮನ ಪುನರುಜ್ಜೀವನ. ಅವನ ನರಕಗಮನ. ಕೃತಘ್ನನಿಗೆ ಪ್ರಾಯಶ್ಚಿತ್ತವಿಲ್ಲ.

ಭೀಷ್ಮಃ

ವಿದ್ವಾನ್ ಸಂಸ್ಕಾರಯಾಮಾಸ ಪಾರ್ಥಿವೋ ರಾಜಧರ್ಮಣಃ ।
ಗಂಧೈರ್ಬಹುಭಿರವ್ಯಗ್ರೋ ದಾಹಯಾಮಾಸ ತಂ ದ್ವಿಜಮ್ ॥೧॥

ತಸ್ಯ ದೇವಸ್ಯ ವಚನಾದಿಂದ್ರಸ್ಯ ಬಕರಾಡಿಹ ।
ತೇನೈವಾಮೃತಸಿಕ್ತಶ್ಚ ಪುನಃ ಸಂಜೀವಿತೋ ಬಕಃ ॥೨॥

ಇಂದ್ರದೇವನ ಮಾತಿನಂತೆ ಪ್ರಾಜ್ಞನಾದ ರಾಜ ವಿರೂಪಾಕ್ಷನು 'ರಾಜಧರ್ಮ'ನ ಸಂಸ್ಕಾರವನ್ನು ಮಾಡಿಸಿದನು. ಏಕಾಗ್ರಚಿತ್ತನಾಗಿ ಬಹಳ ಸುಗಂಧ ದ್ರವ್ಯಗಳಿಂದ ಆ

ಹಕ್ಕಿಯ ದಹನವನ್ನು ಮಾಡಿಸಿದನು. ಆ ಇಂದ್ರದೇವನ ಆದೇಶಕ್ಕನುಗುಣವಾಗಿ ಆ ಬಕರಾಜ ರಾಜಧರ್ಮನ ಶರೀರದ ಮೇಲೆ ಅಮೃತವೃಷ್ಟಿಯಾಯಿತು. ಬಕನು ಪುನಃ ಬದುಕಿದನು.

ದಗ್ಧೋ ರಾಕ್ಷಸರಾಜೇನ ಖಗರಾಜಃ ಪ್ರತಾಪವಾನ್ ।
ಚಿತಾಯಾಃ ಪಾರ್ಶ್ವತೋ ದೋಗ್ಧ್ರೀ ಸುರಭಿಃ ಪ್ರೀಣಯಚ್ಚ ತಾನ್ ॥೩॥

ರಾಕ್ಷಸರಾಜ (ವಿರೂಪಾಕ್ಷ)ನಿಂದ ಪಕ್ಷಿಶ್ರೇಷ್ಠನು ಸಂಸ್ಕಾರಕ್ಕೆ ಒಳಗಾಗುತ್ತಿದ್ದಾಗ, ಚಿತೆಯ ಸಮೀಪದಲ್ಲಿ ಸುರಭಿದೇವಿಯು ಹೆರಡಿದ ಸೌರಭವು ಅಲ್ಲಿದ್ದವರಿಗೆ ಹಿತ ಉಂಟುಮಾಡಿತು.

ತಸ್ಯಾ ವಕ್ತ್ರಚ್ಚ್ಯುತಃ ಫೇನೋ ದುಗ್ಧಮಾತ್ರಸ್ತದಾನಘ ।
ಸಮೀರಣಾಹೃತೋ ಯಾತಃ ಕೃತಾಂತೇ ರಾಜಧರ್ಮಣಿ ।
ದೇವರಾಜಸ್ತತಃ ಪ್ರಾಪ್ತೋ ವಿರೂಪಾಕ್ಷಪುರಂ ತದಾ ॥೪॥

ಆ ಸುರಭಿದೇವಿಯ ಬಾಯಿಂದ ಹೊರಗೆ ಬಿದ್ದ ನೊರೆಯು ಗಾಳಿಯ ವೇಗದಿಂದ ಮೃತ 'ರಾಜಧರ್ಮ'ನ ಮೇಲೆ ಬಿತ್ತು. ಅನಂತರ ದೇವೇಂದ್ರನು ವಿರೂಪಾಕ್ಷನ ಪುರಕ್ಕೆ ಬಂದನು.

ವಿರೂಪಾಕ್ಷೋಽಪಿ ತಂ ಪ್ರಾಪ್ತಂ ದೇವರಾಜಂ ಸಮಾಗಮತ್ ।
ಕಾಶ್ಯಪಸ್ಯ ಸುತೋ ದೇವ ಭ್ರಾತಾ ಮೇ ಜೀವತಾಮಿತಿ ॥೫॥

ವಿರೂಪಾಕ್ಷನು ಆ ದೇವರಾಜನನ್ನು ಸಮೀಪಿಸಿ ಪ್ರಾರ್ಥಿಸಿದನು. 'ದೇವ! ಕಾಶ್ಯಪ ಸುತನಾದ, ಈ ನನ್ನ ಸೋದರನನ್ನು ಬದುಕಿಸಿ' (ದೇವೇಂದ್ರನ ಆದೇಶದಂತೆ ಸುರಭಿಯ ನೊರೆಯ ಸ್ಪರ್ಶವನ್ನು ಪಡೆದಿದ್ದ ಬಕರಾಜನು ದೇವೇಂದ್ರನ ಅನುಗ್ರಹದಿಂದ ಬದುಕಿದನು).

ಕೌಶಿಕಸ್ತ ಬ್ರುವೀತ್ ಸರ್ವಂ ಪ್ರೀಯಮಾಣಂ ಪುನಃ ಪುನಃ ।
ಬ್ರಹ್ಮಣಾ ವ್ಯಾಹೃತೋ ರೋಷಾದ್ ರಾಜಧರ್ಮಾ ಕದಾಚನ ॥೬॥

ದೇವೇಂದ್ರನು ಬಹಳ ಪ್ರೀತನಾದ ವಿರೂಪಾಕ್ಷನಿಗೆ 'ರಾಜಧರ್ಮ'ನ ಪೂರ್ವವೃತ್ತಾಂತವನ್ನು ಹೇಳಿದನು.

ಯಸ್ಮಾತ್ ತ್ವಂ ನಾಗತೋ ದ್ರಷ್ಟುಂ ಮಮ ನಿತ್ಯಮಿಮಾಂ ಸಭಾಮ್ ।
ತಸ್ಮಾದ್ ಬಕೋ ಭವಾನ್ ಭಾವೀ ಧರ್ಮಶೀಲಃ ಪುರಾಣವಿತ್ ॥೭॥

ಒಮ್ಮೆ ಬ್ರಹ್ಮದೇವನು ಕೋಪದಿಂದ 'ರಾಜಧರ್ಮ'ನಿಗೆ ಹೇಳಿದನು. ''ನೀನು ನನ್ನ ದರ್ಶನಕ್ಕಾಗಿ ಪ್ರತಿದಿನವೂ ಈ ಮಂದಿರಕ್ಕೆ ಬರುತ್ತಿಲ್ಲ. ಆದ್ದರಿಂದ ನೀನು ಬಕಪಕ್ಷಿ ಆಗುವಿ. ಆ ಸ್ಥಿತಿಯಲ್ಲೂ ನೀನು ಧರ್ಮನಿಷ್ಠನಾಗಿರುವಿ ಪ್ರಾಚೀನ ವೃತ್ತಾಂತಗಳನ್ನು ತಿಳಿದಿರುವಿ''.

ಆಗಮಿಷ್ಯತಿ ತೇ ವಾಸಂ ಕದಾಚಿತ್ ಪಾಪಕರ್ಮಕೃತ್ ।
ಶಬರಾವಾಸಗೋ ವಿಪ್ರಃ ಕೃತಘ್ನೋ ವೃಷಲೀಪತಿಃ ॥೮॥

ಯದಾ ನಿಹಂತಾ ಮೋಕ್ಷ್ಯತೇ ತದಾ ಭಾವೀತ್ಯುವಾಚ ತಮ್ ।
ತಸ್ಮಾದೇವ ಗತೋ ಲೋಕಂ ಬ್ರಹ್ಮಣಃ ಪರಮೇಷ್ಠಿನಃ ॥೯॥

''ಒಮ್ಮೆ ನಿನ್ನ ವಸತಿಗೆ ಬೇಡರ ಮಧ್ಯೆ ವಾಸ ಮಾಡುವ, ಪಾಪಕೃತ್ಯಗಳನ್ನು ಮಾಡುವ, ಶೂದ್ರಸ್ತ್ರೀಗೆ ಪತಿಯಾದ, ಕೃತಘ್ನ ವಿಪ್ರನು ಬರುತ್ತಾನೆ. ಅವನು ನಿನ್ನನ್ನು ಕೊಲ್ಲುತ್ತಾನೆ. ಆಗ ನಿನಗೆ ಶಾಪದಿಂದ ಬಿಡುಗಡೆಯಾಗುತ್ತದೆ''.

ಭೀಷ್ಮಃ

ರಾಜಧರ್ಮಾಪಿ ತಂ ಪ್ರಾಹ ಸಹಸ್ರಾಕ್ಷಮರಿಂದಮಮ್ ।
ಗೌತಮೋ ಬ್ರಾಹ್ಮಣಃ ಕ್ವಾಸೌ ಮುಚ್ಯತಾಂ ಮತ್ಪ್ರಿಯಃ ಸಖಾ ॥೧೦॥

ರಾಜಧರ್ಮನು ಶತ್ರು ದಮನಕಾರಿಯಾದ ದೇವೇಂದ್ರನಿಗೆ ಹೇಳಿದನು. 'ನನ್ನ ಪ್ರಿಯಮಿತ್ರ ಗೌತಮ ಎಲ್ಲಿ? ಅವನನ್ನು ಬಿಡುಗಡೆ ಮಾಡಿ'.

ತಸ್ಯ ವಾಕ್ಯಂ ಸಮಾಜ್ಞಾಯ ಕೌಶಿಕಃ ಸುರಸತ್ತಮಃ ।
ಸಂಜೀವಯಿತ್ವಾ ಸಖ್ಯೇ ವೈ ಪ್ರಾದಾತ್ ತಂ ಗೌತಮಂ ತದಾ ।
ಪ್ರತೀತಃ ಸ ಗತಃ ಸೌಮ್ಯೇ ರಾಜಧರ್ಮ ಸ್ವಯಾಲಯಮ್ ॥೧೧॥

''ಅವನ ಮಾತನ್ನು ಕೇಳಿ ದೇವಶ್ರೇಷ್ಠನಾದ ಇಂದ್ರನು ಗೌತಮನನ್ನು ಬದುಕಿಸಿ, 'ರಾಜಧರ್ಮ'ನಿಗೆ ಒಪ್ಪಿಸಿದನು''. ಸಂತುಷ್ಟನಾದ 'ರಾಜಧರ್ಮ'ನು ತನ್ನ ವಸತಿಗೆ ಹೊರಟು ಹೋದನು.

''ಸಂತುಷ್ಟನಾದ 'ರಾಜಧರ್ಮ'ನು ಗೌತಮನಿಗೆ ಅವನ ವಸ್ತುಗಳೆಲ್ಲವನ್ನು ಒಪ್ಪಿಸಿ ತೃಪ್ತನಾದನು. ಅನಂತರ ತನ್ನ ವಸತಿಗೆ ಹೊರಟುಹೋದನು. (ಗೌತಮನು ಬೇಡರ ವಸತಿಗೆ ಹೋಗಿ ಅಲ್ಲಿ ತನ್ನ ಶೂದ್ರಪತ್ನಿಯ ಜೊತೆ ಜೀವನ ಮಾಡಿದನು)'.

ನೃಶಂಸೋ ಗೌತಮೋ ಮುಗಕ್ತೋ ಮಿತ್ರಧ್ರುಕ್ ಪುರುಷಾಧಮಃ ।
ಸ ಚಾಪಿ ನಿರಯಂ ಪ್ರಾಪ್ತೋ ದುಷ್ಕೃತಿಃ ಕುಲಪಾಂಸನಃ ।
ಏತಚ್ಛ್ರುತ್ವಾ ಮಹದಾಖ್ಯಂ ಸನ್ಮಧ್ಯೇ ನಾರದೇರಿತಮ್ ॥೧೨॥

ಮಯಾಪಿ ತವ ರಾಜೇಂದ್ರ ಯಥಾವದನುವರ್ಣಿತಮ್ ।
ಬ್ರಹ್ಮಘ್ನೇ ಚ ಸುರಾಪೇ ಚ ಚೋರೇ ಭ್ರಷ್ಟವ್ರತೇ ತಥಾ ॥೧೩॥

ನಿಷ್ಕೃತಿರ್ವಿಹಿತಾ ರಾಜನ್ ಕೃತಘ್ನೇ ನಾಸ್ತಿ ನಿಷ್ಕೃತಿಃ ।
ಕುತಃ ಕೃತಘ್ನಸ್ಯ ಯಶಃ ಕುತಃ ಸ್ಥಾನಂ ಕುತಃ ಸುಖಮ್ ॥೧೪॥

'ವಿರೂಪಾಕ್ಷನಿಂದ ಬಿಡುಗಡೆಯನ್ನು ಪಡೆದ ಮಿತ್ರದ್ರೋಹಿ, ಪುರುಷಾಧಮ, ಕ್ರೂರಿ, ಕುಲಕಳಂಕ ಗೌತಮನು ಅನಂತರ ನರಕಕ್ಕೆ ಹೋದನು''. ನಾರದರು ಸಜ್ಜನರ ಸಭೆಯಲ್ಲಿ ಹೇಳಿದ ಈ ಘಟನೆಯನ್ನು ನಾನು ಕೇಳಿದ್ದೆ. ಅದನ್ನು ನಿನಗೆ ಹೇಳಿದ್ದೇನೆ. ಬ್ರಾಹ್ಮಣಹತ್ಯೆಯನ್ನು ಮಾಡಿದವನಿಗೆ, ಸುರಾಪಾನವನ್ನು ಮಾಡಿದವನಿಗೆ, ಕಳ್ಳನಿಗೆ, ವ್ರತಭ್ರಷ್ಟನಿಗೆ ಪ್ರಾಯಶ್ಚಿತ್ತದ ವಿಧಿಯು ಇದೆ. ಕೃತಘ್ನನಿಗೆ ಪ್ರಾಯಶ್ಚಿತ್ತವೇ ಇಲ್ಲ''. ಕೃತಘ್ನನಿಗೆ ಸುಖ, ಸ್ಥಾನ, ಮಾನಗಳು ಇಲ್ಲವೇ ಇಲ್ಲ.

ಅಶ್ರದ್ಧೇಯಃ ಕೃತಘ್ನೋ ಹಿ ಕೃತಘ್ನೇ ನಾಸ್ತಿ ನಿಷ್ಕೃತಿಃ ।
ಮಿತ್ರದ್ರೋಹೋ ನ ಕರ್ತವ್ಯಃ ಪುರುಷೇಣ ವಿಶೇಷತಃ ॥೧೬॥

ಕೃತಘ್ನನು ನಂಬಿಕೆಗೆ ಅರ್ಹನಲ್ಲ. ಕೃತಘ್ನನಿಗೆ ಪ್ರಾಯಶ್ಚಿತ್ತವಿಲ್ಲ. ಮಿತ್ರದ್ರೋಹವನ್ನು ಸರ್ವಥಾ ಮಾಡಬಾರದು.

ಮಿತ್ರಧ್ರುಜ್ ನಿರಯಂ ಘೋರಂ ನರಕಂ ಪ್ರತಿಪದ್ಯತೇ ।
ಕೃತಜ್ಞೇನ ಸದಾ ಭಾವ್ಯಂ ಮಿತ್ರಭಾವೇನ ಚಾನಘ ॥೧೭॥

ಮಿತ್ರದ್ರೋಹಿಯು ಘೋರನರಕವನ್ನು ಹೊಂದುತ್ತಾನೆ. ಯಾವಾಗಲೂ ಕೃತಜ್ಞನಾಗಿರಬೇಕು. ಸ್ನೇಹದಿಂದ ಇರಬೇಕು.

ಮಿತ್ರಾತ್ ಪ್ರಭವತೇ ಸರ್ವಂ ಮಿತ್ರಂ ಧನ್ಯಮಿತಿ ಸ್ಮೃತಮ್ ।
ಅರ್ಥಾದ್ವಾ ಮಿತ್ರಲಾಭಾದ್ವಾ ಮಿತ್ರಲಾಭೋ ವಿಶಿಷ್ಯತೇ ॥೧೮॥

ಮಿತ್ರನಿಂದ ಎಲ್ಲವೂ ಸಂಭವಿಸುತ್ತದೆ. ಮಿತ್ರನು ಸಂಪತ್ಕರ ಎಂದು ಪ್ರಾಜ್ಞರ ಅಭಿಪ್ರಾಯ. ಧನಲಾಭಕ್ಕಿಂತ ಮಿತ್ರಲಾಭಕ್ಕೆ ಹೆಚ್ಚು ಮಹತ್ವವಿದೆ.

ಸುಲಭಾ ಮಿತ್ರತೋಽರ್ಥಾಸ್ತು ಮಿತ್ರೇಣ ಯತಿತುಂ ಕ್ಷಮಮ್ ।
ಮಿತ್ರಂ ಚಾಭಿಮತಂ ಸ್ನಿಗ್ಧಂ ಫಲಂ ಚಾಪಿ ಸತಾಂ ಫಲಮ್ ।
ಸತ್ಕಾರೈಃ ಸ್ವಜನೋಪೇತೈಃ ಪೂಜಯೇತ ವಿಚಕ್ಷಣಃ ॥೧೯॥

ಮಿತ್ರನಿಂದ ಅರ್ಥಪ್ರಾಪ್ತಿಯು ಸುಲಭವಾಗಿ ಆಗುತ್ತದೆ. ಮಿತ್ರನ ಜೊತೆ ಪ್ರಯತ್ನಿಸಬೇಕು. ಮಿತ್ರನಿಂದ ಅಭಿಮತ ಫಲಗಳು ಉಂಟಾಗುತ್ತವೆ. ಸಜ್ಜನರಿಗೆ ಮಿತ್ರನೇ ಫಲ.

ಪರಿತ್ಯಾಜ್ಯೋ ಬುಧೈಃ ಪಾಪಃ ಕೃತಘ್ನೋ ನಿರಪತ್ರಪಃ ।
ಮಿತ್ರದ್ರೋಹೀ ಕುಲಾಂಗಾರಃ ಪಾಪಕರ್ಮಾ ನರಾಧಮಃ ॥೨೦॥

ತಿಳಿದವರು ಪಾಪಿಗಳನ್ನು, ಕೃತಘ್ನರನ್ನು, ನಾಚಿಕೆಯಿಲ್ಲದವರನ್ನು, ಮಿತ್ರದ್ರೋಹಿಗಳನ್ನು, ಕುಲಕಳಂಕರನ್ನು, ಪಾಪಕೃತ್ಯಗಳನ್ನು ಎಸಗುವವರನ್ನು ಪರಿತ್ಯಜಿಸಬೇಕು. ಇವರೆಲ್ಲರೂ ನರಾಧಮರು.

ಏಷ ಧರ್ಮಭೃತಾಂ ಶ್ರೇಷ್ಠ ಪ್ರೋಕ್ತಃ ಪಾಪೋ ಮಯಾ ತವ ।
ಮಿತ್ರದ್ರೋಹೀ ಕೃತಘ್ನೋ ವೈ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೧॥

ಧರ್ಮನಿಷ್ಠರಲ್ಲಿ ಶ್ರೇಷ್ಠನೇ! ಪಾಪಿಯೂ, ಮಿತ್ರದ್ರೋಹಿಯೂ ಆದ ಕೃತಘ್ನನ ಬಗ್ಗೆ ಇಷ್ಟು ಹೇಳಿದ್ದೇನೆ. ಇನ್ನೇನನ್ನು ಕೇಳಲು ಬಯಸುವಿ?

ವೈಶಂಪಾಯನಃ

ಏತಚ್ಛ್ರುತ್ವಾ ತದಾ ವಾಕ್ಯಂ ಭೀಷ್ಮೇಣೋಕ್ತಂ ಮಹಾತ್ಮನಾ ।
ಯುಧಿಷ್ಠಿರಃ ಪ್ರೀತಮನಾ ಬಭೂವ ಜನಮೇಜಯ ॥೨೨॥

ಜನಮೇಜಯ! ಮಹಾತ್ಮರಾದ ಭೀಷ್ಮರಿಂದ ಹೇಳಲ್ಪಟ್ಟ ಈ ವಿಚಾರವನ್ನು ಕೇಳಿ ಯುಧಿಷ್ಠಿರನು ಪ್ರಸನ್ನಚಿತ್ತನಾದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಆಪದ್ಧರ್ಮೇ ಏಕೋನಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಪದ್ಧರ್ಮಪರ್ವದಲ್ಲಿ ಮೂವತ್ತೊಂಬತ್ತನೆಯ ಅಧ್ಯಾಯವು ಮುಗಿಯಿತು.

॥ ಸಮಾಪ್ತಮ್ ಆಪದ್ಧರ್ಮಪರ್ವ ॥

॥ ಶ್ರೀಮದ್ವೇಶಾರ್ಪಣಮಸ್ತು ॥

★ ★ ★ ★ ★

ಲಾಭಾಲಾಭೌ ಸುಖದುಃಖೇ ಚ ತಾತ
ಪ್ರಿಯಾಪ್ರಿಯೇ ಮರಣಂಜೀವಿತಂ ಚ ।
ಸಮಾನಿ ಯೇಷಾಂ ಸ್ಥಿರವಿಕ್ರಮಾಣಾಂ
ಬುದ್ಧಾತ್ಮನಾಂ ಸತ್ತ್ವಮವಸ್ಥಿತಾನಾಮ್ ॥

ಸ್ಥಿರವಾದ ವಿಶಿಷ್ಟ ಹೆಜ್ಜೆಗಳನ್ನು ಇಟ್ಟಿರುವ, ಪ್ರಬುದ್ಧ
ಮನಸ್ಸಿನವರಾದ, ಸತ್ವಗುಣವನ್ನು ವಿಪುಲವಾಗಿ
ಹೊಂದಿರುವ ಈ ಸಾಧಕರಿಗೆ ಲಾಭ–ಅಲಾಭ,
ಸುಖ–ದುಃಖ, ಪ್ರಿಯ–ಅಪ್ರಿಯ, ಹುಟ್ಟು–ಸಾವು
–ಇವುಗಳು ಸಮ. ಒಂದು ಹೆಚ್ಚಲ್ಲ
ಒಂದು ಕಡಿಮೆ ಅಲ್ಲ.

ISBN: 978-93-88813-31-0